# ಅಧ್ಯಾಪಕ ಪಠ್ಯ

# TEACHER TEXT

## ಕನ್ನಡ

## KANNADA

### ತರಗತಿ

### VI

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2015

*Prepared by* :
**State Council of Educational Research and Training (SCERT)**
Poojappura, Thiruvananthapuram 695 012, Kerala

*Website* : www.scertkerala.gov.in
*E-mail* : scertkerala@gmail.com
Phone : 0471-2341883, Fax : 0471-2341869
Typesetting and Layout : SCERT
Printed at : SCERT, Kerala
© Department of Education, Government of Kerala

# ಮುನ್ನುಡಿ

ಆತ್ಮೀಯ ಅಧ್ಯಾಪಕರೇ,

ಭಾಷಾ ತರಗತಿಯಲ್ಲಿ ಮಕ್ಕಳು ಬಹಳಷ್ಟು ಸಾಮರ್ಥ್ಯಗಳನ್ನು ಗಳಿಸಬೇಕಲ್ಲವೇ? ಈ ಉದ್ದೇಶಕ್ಕಾಗಿಯೇ ಪಠ್ಯಪುಸ್ತಕ, ಅಧ್ಯಾಪಕರ ಪಠ್ಯ ಹಾಗೂ ಧ್ವನಿ ಮುದ್ರಿಕೆಗಳನ್ನು ತಯಾರಿಸಲಾಗಿದೆ. ಪಠ್ಯಪುಸ್ತಕದಲ್ಲಿ ಸೂಚಿಸಿದಂತೆ ಭಾಷಾ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಕನ್ನಡ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಪಠ್ಯಪುಸ್ತಕದಲ್ಲಿ ಹೇಳಿದ ಕಲಿಕಾ ಸಾಧನೆಗಳನ್ನು ಪೂರೈಸಲು ಸಾಧ್ಯವಾಗುವಂತೆ ಮಕ್ಕಳಿಗೆ ನೆರವಾಗುವುದು ಅಧ್ಯಾಪಕರ ಜವಾಬ್ದಾರಿಯಲ್ಲವೇ? ಈ ನಿಟ್ಟಿನಲ್ಲಿ ಭಾಷಾ ಕಲಿಕೆಗೆ ಸಹಾಯವಾಗುವಂತೆ ಪ್ರಕೃತ ಕೈಪಿಡಿಯನ್ನು ರೂಪಿಸಲಾಗಿದೆ. ಇದರಲ್ಲಿ ನೀಡಿರುವ ನಿರ್ದೇಶಗಳು, ಸೂಚನೆಗಳು, ಚಟುವಟಿಕೆಗಳು, ಉದಾಹರಣೆಗಳು, ಮಾದರಿ ಎಲ್ಲವೂ ಅಧ್ಯಾಪಕರ ಸಹಾಯಕ್ಕಾಗಿ ರೂಪುಗೊಂಡವು ಎಂಬುದನ್ನು ಪರಿಗಣಿಸಿ ಬೋಧನ ಪ್ರಕ್ರಿಯೆಯನ್ನು ಫಲಪ್ರದವಾಗಿಸಲು ನೀವೆಲ್ಲರೂ ಶ್ರಮಿಸುವಿರೆಂದು ಭಾವಿಸುತ್ತೇನೆ. ನಿಮ್ಮ ಅಧ್ಯಾಪನ ಪ್ರಕ್ರಿಯೆಯಲ್ಲಿ ಮಕ್ಕಳು ಪರಿಪೂರ್ಣ ಜ್ಞಾನ ಸಂಪನ್ನರಾಗಲು ಈ ಕೈಪಿಡಿಯು ಸಹಕಾರಿಯಾಗಲಿ.

ಶುಭಾಶಯಗಳೊಂದಿಗೆ,

**ಡಾ। ಎಸ್. ರವೀಂದ್ರನ್ ನಾಯರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEACHER TEXT DEVELOPMENT TEAM

## KANNADA
## STANDARD VIII

### Participants

Asha Kumari K., SGKHS Kudlu

Kunhirama, AKMMAUPS Paika

Sathyanarayana Sharma, GSBS Kumbla

Shrinivasa K.H., Dharmathadka AUPS

Subramanya Bhat K., GSBS Soorambail

Udaya Kumar M., GHS Adoor

Veena K., GHSS Kundamkuzhi

### Experts

Dr. Shrikrishna Bhat P. professor(Rtd) Govt College Kasaragod

Shivashankar, Asst professor,Govt College ,Manjeshwar, Aaccademic Co-ordinator

### Academic Co-ordinator

Dr. Faisal Mavulladathil, Reserch Officer, SCERT Thiruvanthapuram

---


ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ 695012

# ಕೇರಳ ಶಾಲಾ ಪಠ್ಯಕ್ರಮ 2013
# ಸಾಮಾನ್ಯ ಸಮೀಪನಗಳು

## 1.1 ಪೀಠಿಕೆ

ಸಾಮಾಜಿಕ ಬದುಕಿನ ಗುಣಮಟ್ಟದ ಹಿನ್ನೆಲೆಯಲ್ಲಿ ಹೇಳುವುದಾದರೆ ಕೇರಳವು ದೇಶಕ್ಕೆ ಮಾದರಿಯಾಗಿದೆ. ಸಾರ್ವಜನಿಕ ಶಿಕ್ಷಣದ ವ್ಯಾಪಕತೆ, ಸಾರ್ವಜನಿಕ ಆರೋಗ್ಯದ ಗುಣಮಟ್ಟ ಎಂಬಿವುಗಳೇ ಕೇರಳದ ಈ ಸಾಧನೆಗೆ ಪ್ರಧಾನ ಕಾರಣಗಳಾಗಿವೆ. ಸಮಾಜದ ಎಲ್ಲ ವರ್ಗಗಳ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗಿದ್ದರೂ, ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಎಂಬುದು ಕೇರಳದ ಶಿಕ್ಷಣ ಕ್ಷೇತ್ರವು ಇದಿರಿಸುವ ಅತಿ ದೊಡ್ಡ ಸವಾಲಾಗಿದೆ. 1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಅಂಗವಾಗಿ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಅಧ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದರೊಂದಿಗೆ ಪಠ್ಯಕ್ರಮವನ್ನು ಶಿಶುಕೇಂದ್ರಿತ, ಚಟುವಟಿಕೆ ಆಧಾರಿತ, ಪ್ರಕ್ರಿಯಾತ್ಮಕ ಹಾಗೂ ಕಾಲೋಚಿತವಾಗಿ ಪರಿಷ್ಕರಿಸುವ ಪ್ರಯತ್ನಗಳಾಗಿವೆ. ಇದರ ಪರಿಣಾಮವಾಗಿ ತರಗತಿಗಳಲ್ಲಿ ಜ್ಞಾನ ನಿರ್ಮಾಣ ಪ್ರಕ್ರಿಯೆಗಳು ನಡೆಯಬೇಕು ಎಂಬ ತಿಳುವಳಿಕೆ ಮೂಡಿತು. ಇದರಂತೆ ಮಗುವನ್ನು ಶೈಕ್ಷಣಿಕ ಪ್ರಕ್ರಿಯೆಗಳ ಕೇಂದ್ರಸ್ಥಾನದಲ್ಲಿ ಇರಿಸುವ ಚಟುವಟಿಕೆಗಳಿಗೆ ನಾಂದಿ ಹಾಡಲು ನಮಗೆ ಸಾಧ್ಯವಾಗಬೇಕು.

ಬದುಕಿನ ಎಲ್ಲಾ ಕ್ಷೇತ್ರಗಳೂ ಪ್ರತಿ ಕ್ಷಣ ಬದಲಾಗುತ್ತಿವೆ. ಅಧ್ಯಾಪನ ಶಾಸ್ತ್ರ, ಅಧ್ಯಯನ ಮನಶ್ಶಾಸ್ತ್ರ ಮೊದಲಾದ ವಿಷಯಗಳ ಹೊಸ ಸಂಶೋಧನೆಗಳು ಮತ್ತು ಪ್ರಾಯೋಗಿಕವಾದ ಅನುಭವಗಳು ಉತ್ತಮ ರೀತಿಯ ಕಲಿಕೋಪಕರಣಗಳ ನಿರ್ಮಾಣ ಹಾಗೂ ಕಲಿಕಾನುಭವಗಳ ವಿನಿಮಯ ಮತ್ತು ಮೌಲ್ಯಮಾಪನವನ್ನು ನಡೆಸಲು ನಮ್ಮನ್ನು ಪ್ರೇರೇಪಿಸಿವೆ. ಎಲ್ಲಾ ವರ್ಗಗಳ ಮಕ್ಕಳ ಕಲಿಕೆಯ ಪ್ರಗತಿಯನ್ನು ನಾವು ಗುರಿಯಾಗಿರಿಸಿಕೊಂಡಿದ್ದೇವೆ.

"ವಿಭಿನ್ನವಾದ ಸಾಮಾಜಿಕ, ಆರ್ಥಿಕ ಹಿನ್ನೆಲೆಯುಳ್ಳ, ವಿಭಿನ್ನ ದೈಹಿಕ, ಮಾನಸಿಕ, ಬೌದ್ಧಿಕ ಸಾಮರ್ಥ್ಯಗಳಿರುವ ಎಲ್ಲ ಮಕ್ಕಳಿಗೆ ಕಲಿಯಲು ಹಾಗೂ ಶಾಲಾ ಕಲಿಕೆಯಲ್ಲಿ ಉತ್ತೀರ್ಣರಾಗಲು ಸಾಧ್ಯವೆಂದು ದೃಢಪಡಿಸಬೇಕು. ಲಿಂಗ, ಜಾತಿ, ಭಾಷೆ, ಸಂಸ್ಕೃತಿ, ಧರ್ಮ, ವಿಭಿನ್ನ ಸಾಮರ್ಥ್ಯಗಳೇ ಮೊದಲಾದ ಕಾರಣಗಳಿಂದ ಉಂಟಾಗುವ ಸಮಸ್ಯೆಗಳನ್ನು ಮೀರಲು ಕೇವಲ ಯೋಜನೆಗಳು ಮತ್ತು ಶಿಕ್ಷಣ ನೀತಿಗಳು ಮಾತ್ರ ಸಾಲವು. ಎಳೆಯ ಪ್ರಾಯದಿಂದಲೇ ಯೋಗ್ಯವಾದ ಕಲಿಕಾ ಗುರಿಗಳನ್ನೂ, ಅಧ್ಯಾಪನ ರೀತಿಗಳನ್ನೂ ಆರಿಸಿ ರೂಪಿಸಬೇಕಾಗಿದೆ." (**NCF** 2005, ಪು.27)

- ವಿಭಿನ್ನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯುಳ್ಳವರು.
- ವಿಭಿನ್ನ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯವುಳ್ಳವರು.

ಹೀಗೆ ಎಲ್ಲಾ ವರ್ಗಗಳಿಗೆ ಸೇರಿದವರಿಗೆ ಕಲಿಕಾ ಸಾಧನೆಯನ್ನು ಗಳಿಸಲು ಶಿಕ್ಷಣ ಪ್ರಕ್ರಿಯೆಯ

ಎಲ್ಲಾ ವಲಯಗಳಲ್ಲಿ ಸೂಕ್ಷ್ಮವೂ ಶಾಸ್ತ್ರೀಯವೂ ಆಗಿರುವ ಧೋರಣೆಗಳನ್ನು ಸ್ವೀಕರಿಸಬೇಕಾದುದು ನಮ್ಮ ದೃಷ್ಟಿಕೋನವಾಗಬೇಕು ಎಂದು ಎನ್.ಸಿ.ಎಫ್. ನಿರ್ದೇಶಿಸುತ್ತದೆ. ಕಾಲೋಚಿತವಾಗಿ ಪಠ್ಯಕ್ರಮವನ್ನು ನವೀಕರಿಸುವುದು ಮತ್ತು ಈ ವ್ಯವಸ್ಥೆಯನ್ನು ಕ್ರಿಯಾತ್ಮಕವಾಗಿಸುವುದರಿಂದ ಮಾತ್ರ ಈ ಗುರಿಯನ್ನು ಸಾಧಿಸಬಹುದು. ಈ ದೃಷ್ಟಿಕೋನದ

ಹಿನ್ನೆಲೆಯಲ್ಲಿ ಈಗ ಪಠ್ಯಕ್ರಮವನ್ನು ಪರಿಷ್ಕರಿಸಲಾಗುತ್ತಿದೆ. ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಎಲ್ಲರ ಅನುಭವ, ಸಂಶೋಧನೆ ಹಾಗೂ ಅಧ್ಯಯನ ಶೋಧಗಳನ್ನು ಬಳಸಿಕೊಂಡು ಇದನ್ನು ಮಾಡಲಾಗುವುದು. ಸಮರ್ಪಕತೆಯಿಂದ ಮತ್ತಷ್ಟು ಸಮರ್ಪಕತೆಗೆ ಎಂಬ ವೈಜ್ಞಾನಿಕ ಸಮೀಪನವನ್ನು ಇಲ್ಲಿ ಸ್ವೀಕರಿಸಲಾಗುವುದು.

## 1.2 ಪಠ್ಯಕ್ರಮ ಪರಿಷ್ಕರಣೆಯ ಅಗತ್ಯ

ಕಳೆದ ಐದು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಹೊಸ ಆಶಯಗಳು ಮೂಡಿಬಂದಿವೆ. ಭಾರತದಲ್ಲಿ 2009 ರಲ್ಲಿ ಜ್ಯಾರಿಗೆ ಬಂದ ವಿದ್ಯಾಭ್ಯಾಸ ಹಕ್ಕು ಕಾಯಿದೆಯಿಂದ ಶಿಕ್ಷಣವು ಮಕ್ಕಳ ಹಕ್ಕಾಗಿ ಬದಲಾಗಿದೆ. ಹಕ್ಕು ಆಧಾರಿತ ವಿದ್ಯಾಲಯ (Right based Educational Institution) ಎಂಬ ಗುರಿಯನ್ನು ಸಾಧಿಸಲು ನಮ್ಮ ಪಠ್ಯಕ್ರಮವನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸಬೇಕಾಗಿದೆ. ಅಂತಾರಾಷ್ಟ್ರೀಯ ಗುಣಮಟ್ಟ ಎಂಬುದು ಯಾವುದೇ ಒಂದು ದೇಶದ ಗುಣಮಟ್ಟವಲ್ಲ. ಇದು ಒಂದು ಪ್ರತ್ಯೇಕ ಹಂತವನ್ನು ದಾಟುವ ಮಗು ಜಗತ್ತಿನ ಯಾವುದೇ ಪ್ರದೇಶದಲ್ಲಿದ್ದರೂ ಆರ್ಜಿಸಬೇಕಾದ ಜ್ಞಾನ ಮತ್ತು ಅನುಭವಗಳ ಒಟ್ಟು ಮೊತ್ತವಾಗಿದೆ. ಜಾಗತಿಕ ಮಟ್ಟದಲ್ಲಿ ಜ್ಯಾರಿಗೊಂಡಿರುವ ಉತ್ತಮ ಅಧ್ಯಯನ, ಅಧ್ಯಾಪನ ಮಾದರಿಗಳು ಕೇರಳದ ಮಕ್ಕಳಿಗೂ ಸಿಗಬೇಕಾದುದು ಅಗತ್ಯ.

## ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ 2009

### ಸೆಕ್ಷನ್ –29 (ಅಧ್ಯಾಯ 5)

### ಪಠ್ಯಕ್ರಮ ಹಾಗೂ ಮೌಲ್ಯನಿರ್ಣಯ ಸೂಚಕಗಳು

1) ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನಗಳನ್ನು ಆಯಾ ಸರಕಾರದ ಅಧಿಸೂಚನೆಯ ಮೂಲಕ ಸೂಚಿಸಲಾಗುವ ಒಂದು ಶೈಕ್ಷಣಿಕ ಅಧಿಕಾರ ಸ್ಥಾನದ ಮೂಲಕ ಪ್ರತಿಪಾದಿಸಬೇಕು.

2) ಶೈಕ್ಷಣಿಕ ಅಧಿಕಾರ ಸ್ಥಾನ 1 ನೇ ಉಪವಿಭಾಗದ ಪ್ರಕಾರ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನವನ್ನು ಪ್ರತಿಪಾದಿಸುವಾಗ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗಿದೆ.

   a) ಸಂವಿಧಾನದಲ್ಲಿ ಹೇಳಲಾದ ಮೌಲ್ಯಗಳ ಹೊಂದಿಕೆ.

   b) ಮಗುವಿನ ಸರ್ವತೋಮುಖವಾದ ಬೆಳವಣಿಗೆ.

   c) ಮಗುವಿನ ಜ್ಞಾನ, ಸಾಮರ್ಥ್ಯ, ಕೌಶಲ್ಯಗಳನ್ನು ಕ್ರಮೇಣ ಹೆಚ್ಚಿಸುವುದು.

   d) ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳ ಸಂಪೂರ್ಣ ಬೆಳವಣಿಗೆ.

   e) ಮಗುವಿಗೆ ಇಷ್ಟವಾದ, ಶಿಶು ಕೇಂದ್ರಿತವಾದ ಚಟುವಟಿಕೆಗಳಿರುವ ಕಲಿಕೆ.

   f) ಕಲಿಕೆಯ ಮಾಧ್ಯಮವನ್ನು ಮಗುವಿನ ಮಾತೃಭಾಷೆಯಲ್ಲಿಯೇ ನೀಡುವುದನ್ನು ಆದಷ್ಟು ಪ್ರಾಯೋಗಿಕಗೊಳಿಸಬೇಕು.

   g) ಭಯ, ಮಾನಸಿಕ ಒತ್ತಡ ಉಂಟಾಗುವ ಸ್ಥಿತಿ, ಆತಂಕ ಇವುಗಳಿಂದ ಮಗುವನ್ನು ಮುಕ್ತಗೊಳಿಸಿ, ಸ್ವತಂತ್ರವಾಗಿ ಅಭಿಪ್ರಾಯ ಪ್ರಕಟಿಸಲು ಮಗುವಿಗೆ ಸಹಾಯ ನೀಡುವುದು.

   h) ಮಗುವಿನ ಜ್ಞಾನಗ್ರಹಣ ಮತ್ತು ಅದನ್ನು ಪ್ರಯೋಗಿಸುವ ಸಾಮರ್ಥ್ಯದ ಸಮಗ್ರ ಮತ್ತು ನಿರಂತರ ಮೌಲ್ಯಮಾಪನ.

ಶಿಕ್ಷಣ ಹಕ್ಕು ಕಾಯ್ದೆಯ ಹಿನ್ನೆಲೆಯಲ್ಲಿ ನಿರಂತರ ಹಾಗೂ ಸಮಗ್ರವಾದ ಮೌಲ್ಯಮಾಪನವು ಸಾಂವಿಧಾನಿಕ ಬಾಧ್ಯತೆಯಾಗಿದೆ. ಇದನ್ನು ಗಮನದಲ್ಲಿರಿಸಿಕೊಂಡು ಪಠ್ಯಕ್ರಮವನ್ನು ಪರಿಷ್ಕರಿಸಬೇಕು. ಈ ಹಿನ್ನೆಲೆಯಲ್ಲಿ ಪಾಠಪುಸ್ತಕ ಪರಿಷ್ಕರಣೆಯನ್ನು ನಾವು ಕಾಣಬೇಕು.

**ಕೇರಳ ಶಾಲಾ ಪಠ್ಯಕ್ರಮದ (2013) ವೈಶಿಷ್ಟ್ಯಗಳನ್ನು ನೋಡೋಣ.**

1) ವಿದ್ಯಾರ್ಥಿ ಕೇಂದ್ರಿತ, ಪ್ರಕ್ರಿಯಾತ್ಮಕ, ಚಟುವಟಿಕೆ ಪ್ರಧಾನ, ಮೌಲ್ಯಾಧಾರಿತ ಪಠ್ಯಕ್ರಮ.

2) ಬೌದ್ಧಿಕ ಹಂತದಲ್ಲಿ, ಪ್ರಕ್ರಿಯೆಗಳ ಹಂತದಲ್ಲಿ, ಮನೋಭಾವ ಹಂತದಲ್ಲಿ ಹಾಗೂ ಮೌಲ್ಯಗಳ ಹಂತದಲ್ಲಿ ಮಗುವಿನ ಕಲಿಕಾ ಸಾಧನೆಗಳಿಗೆ ಒತ್ತು ನೀಡಲಾಗಿದೆ.

3) ಜ್ಞಾನ ನಿರ್ಮಾಣ ಎಂಬ ತಾತ್ವಿಕ ನೆಲೆಗಟ್ಟಿನಲ್ಲಿರುವ ಪಠ್ಯಕ್ರಮ.

4) ವಿನಿಮಯ ಪ್ರಕ್ರಿಯೆಯಲ್ಲಿ ವೈವಿಧ್ಯಪೂರ್ಣವೂ ಯೋಗ್ಯವೂ ಆದ ಅಧ್ಯಾಪನ ತಂತ್ರಗಳನ್ನು ಸ್ವೀಕರಿಸಿ ಉಪಯೋಗಿಸಲು ಅಧ್ಯಾಪಕರಿಗೆ ಸ್ವಾತಂತ್ರ್ಯವಿದೆ.

5) ಕಲಿಕಾಸಾಧನೆ, ಮಕ್ಕಳ ವಿಭಿನ್ನ ಗುಣಮಟ್ಟ ಇವುಗಳನ್ನು ತಿಳಿದು ವಿವಿಧ ಕಲಿಕಾ ವಿಧಾನಗಳನ್ನು ಅನುಷ್ಠಾನಗೊಳಿಸುವುದು. ಕಂಡು ಹಿಡಿಯುವ ಕಲಿಕೆ, ಆಶಯಗ್ರಹಣ ರೀತಿ, ಹೊಸ ಚಿಂತನೆಗಳು, ಯೋಚಿಸುವ ಸಾಮರ್ಥ್ಯವನ್ನು ಬೆಳೆಸುವುದು. ಸಹಕಾರ ಕಲಿಕೆ, ಸಹವರ್ತಿ ಕಲಿಕೆ, ಚಿಂತನೆಗಳ ಪ್ರತಿಫಲನ, ವೈಯಕ್ತಿಕ ಮತ್ತು ಗುಂಪಿನ ಅವಕಾಶಗಳನ್ನು ಒದಗಿಸುವುದು ಮೊದಲಾದ ವಿಧಾನಗಳನ್ನು ಪರಿಗಣಿಸುವುದು.

6) ಉಚಿತ ಸಾರ್ವಜನಿಕ ಶಿಕ್ಷಣ ಎಂಬ ಹಾಗೆ ಎಲ್ಲ ಮಕ್ಕಳ ಕಲಿಕಾ ಸಾಧನೆಗೆ ಪ್ರಾಧಾನ್ಯ ನೀಡಬೇಕು.

7) ಪ್ರಿ–ಪ್ರೈಮರಿಯಿಂದ ಹೈಯರ್ ಸೆಕಂಡರಿ ವರೆಗೆ ಸಮಗ್ರವಾದ ಪಠ್ಯಕ್ರಮ.

8) ಪ್ರತಿಯೊಂದು ತರಗತಿಗೂ ವಿವಿಧ ವಿಷಯಗಳ ಹೂರಣವನ್ನು ರಾಷ್ಟ್ರೀಯ ಮಟ್ಟದ ವಿಷಯಗಳ ಹೂರಣದೊಂದಿಗೆ ಏಕೀಕರಿಸಿ, ಕೇರಳದ ಪಾಠಪುಸ್ತಕಗಳನ್ನು ತಯಾರಿಸಲಾಗುವುದು.

9) ರಾಷ್ಟ್ರೀಯ ಮಟ್ಟದಲ್ಲಿರುವಂತೆ ಒಂದು ಮತ್ತು ಎರಡನೇ ತರಗತಿಗಳಿಗೆ ಮಾತೃಭಾಷೆ(ಪರಿಸರ ಅಧ್ಯಯನದೊಂದಿಗೆ) ಗಣಿತ ಮತ್ತು ಇಂಗ್ಲಿಷ್ ಎಂಬ ಮೂರು ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

10) ಒಂದರಿಂದ ನಾಲ್ಕನೇ ತರಗತಿಯವರೆಗಿನ ಇಂಗ್ಲಿಷ್ ಮಾಧ್ಯಮ ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

11) ಶಾಸ್ತ್ರೀಯ ಭಾಷೆ ಹಾಗೂ ಮಾತೃಭಾಷೆ ಎಂಬ ನೆಲೆಯಲ್ಲಿ ಕನ್ನಡ ಭಾಷಾ ಕಲಿಕೆಗೆ ವಿಶೇಷವಾದ ಪ್ರಾಧಾನ್ಯ ನೀಡಲಾಗುವುದು.

12) ಪ್ರಿ–ಪ್ರೈಮರಿ ಶಿಕ್ಷಣಕ್ಕಾಗಿ ಏಕೀಕೃತ ಪಠ್ಯಕ್ರಮವನ್ನು ರೂಪಿಸಿ, ಔಪಚಾರಿಕ ಶಿಕ್ಷಣದ ಅಂಗವಾಗಿ ಬದಲಾಯಿಸಲು ನಿರ್ದೇಶಿಸಲಾಗುವುದು.

13) ಮಾಹಿತಿ ತಂತ್ರಜ್ಞಾನವನ್ನು (ICT) ಒಂದು ಪಠ್ಯವಿಷಯ ಎನ್ನುವುದಕ್ಕಿಂತ ಪಠ್ಯವಿಷಯಗಳನ್ನು ಸಂವಹನಮಾಡುವ ಮಾಧ್ಯಮವಾಗಿ ಬಳಸಬೇಕು.

14) ವಿಶೇಷವಾದ ಪರಿಗಣನೆಗೆ ಅರ್ಹರಾದ ಮಕ್ಕಳಿಗೆ ವಿಭಿನ್ನ ಹಾಗೂ ನೂತನವಾದ ಕಲಿಕಾ ತಂತ್ರಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು ಮತ್ತು ವಿಭಿನ್ನವಾದ ಮೌಲ್ಯಮಾಪನ ಚಟುವಟಿಕೆಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು.

15) ಕಲಿಕಾ ಸಾಧನೆಗಳನ್ನು ಅವಲಂಬಿಸಿದ ಸಮಗ್ರ ಮತ್ತು ನಿರಂತರವಾದ ಮೌಲ್ಯ ಮಾಪನ (CCE) ನಡೆಸಬೇಕು.

16) ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ, ಕಲೆಯ ಶಿಕ್ಷಣ, ವೃತ್ತಿ ಪರಿಚಯ ಇವುಗಳನ್ನು ಕಡ್ಡಾಯ ಪಠ್ಯವಿಷಯಗಳಾಗಿ ಪರಿಗಣಿಸಲಾಗಿದೆ.

17) ಹೈಯರ್ ಸೆಕಂಡರಿ ವಿಭಾಗದಲ್ಲಿ ಕಾಲಾನುಸಾರಿಯಾಗಿ ಪಾಠ ಪುಸ್ತಕಗಳನ್ನು ಸಿದ್ಧಪಡಿಸಬೇಕು.

18) ರಾಷ್ಟ್ರೀಯ ಶಿಕ್ಷಣ ನಿಯಮದ ಬೆಳಕಿನಲ್ಲಿ ಹಕ್ಕು ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕು.

19) ಪ್ರತಿಯೊಬ್ಬ ಅಧ್ಯಾಪಕನೂ ಓರ್ವ ಸಹರಕ್ಷಕ (Mentor)ನ ಸ್ಥಾನಕ್ಕೇರಿ, ಬೇಕಾದ ಕಾಳಜಿಯನ್ನು, ರಕ್ಷಣೆಯನ್ನು ಶಾಲೆಯಲ್ಲಿ ಮತ್ತು ತರಗತಿಯಲ್ಲಿ ಮಗುವಿಗೆ ಒದಗಿಸಬೇಕು.

20) ಅಧ್ಯಾಪಕರು ಪಾಲಿಸಬೇಕಾದ ವೃತ್ತಿ ನೀತಿ ಸಂಹಿತೆಗೆ (Code of Professional Ethics for School Teacher) ಒತ್ತು ನೀಡಲಾಗುವುದು.

21) 21ನೇ ಶತಮಾನದ ಕಲಿಕಾ ನೈಪುಣ್ಯಗಳು (21st Century Learning skills) ಕಾಲೋಚಿತವಾಗಿ ಗಳಿಸಿಕೊಳ್ಳುವುದಕ್ಕೆ ಯೋಗ್ಯವಾಗಿವೆ.

22. ಮಾನವೀಯ ಮೌಲ್ಯಗಳನ್ನು ಒಳಗೊಂಡ ತಲೆಮಾರನ್ನು ಸೃಷ್ಟಿಸಲು ಸಮರ್ಥವಾಗಿದೆ.

23. ಸಮಾನ ಅವಕಾಶ ಮತ್ತು ಸಮಾನತೆ (Equity and Equality) ಲಭಿಸುವ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಂಡಿದೆ.

ಸಹಜವಾದ ಕಲಿಕೆ, ಕಲಿಯುವ ಮಕ್ಕಳ ಬೌದ್ಧಿಕ, ಮಾನಸಿಕ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು ತಲೆ, ಹೃದಯ, ಹಸ್ತ ಸಮನ್ವಯಗೊಂಡ ಪಠ್ಯಕ್ರಮ (Curriculum for the harmony of head, Heart and Hand) ಎಂಬ ಕಾಣ್ಕೆಯೊಂದಿಗೆ ಪಠ್ಯಕ್ರಮವನ್ನು ನಾವು ಮಾಡಬೇಕು.

ಹಾಗಾದರೆ ಪಠ್ಯಕ್ರಮ ಸಮೀಪನ ಹೇಗಿರಬೇಕು? ಅದರ ಸೈದ್ಧಾಂತಿಕ ಮತ್ತು ಪ್ರಾಯೋಗಿಕವಾದ ಅಡಿಪಾಯ ಹೇಗಿರಬೇಕು?

## 1.3 ಪಠ್ಯಕ್ರಮ ಸಮೀಪನ

ಪಂಚೇಂದ್ರಿಯಗಳನ್ನು ಬಳಸಿ ಸುತ್ತುಮುತ್ತಲಿನ ಪರಿಸರದಿಂದ ಕಲಿಯಲಿರುವ ಸಹಜ ಸಾಮರ್ಥ್ಯಗಳೊಂದಿಗೆ ಮಗು ಹುಟ್ಟುತ್ತದೆ. ಜಗತ್ತನ್ನು ಹೊಸ ರೀತಿಯಲ್ಲಿ ನೋಡಲು, ಅರ್ಥಮಾಡಲು, ವ್ಯವಹರಿಸಲು, ಮೌಲ್ಯಮಾಪನ ಮಾಡಲು ಶಾಲೆಯ ಶಿಕ್ಷಣದ ಮೂಲಕ ಮಗುವಿಗೆ ಸಾಧ್ಯವಾಗಬೇಕು. ತನ್ನ ಮುಂದಿರುವ ಸಮಸ್ಯೆಗಳನ್ನು ಎದುರಿಸಿ, ಆ ಸಮಸ್ಯೆಗಳನ್ನು ಪರಿಹರಿಸಿಕೊಂಡು ಕಲಿಕೆ ನಡೆಯುತ್ತದೆ. ಪಠ್ಯಕ್ರಮ ವಿನಿಮಯ ಸಮೀಪನದ ಲಕ್ಷಣಗಳು ಯಾವುವು?

- ಚಟುವಟಿಕೆ ಆಧಾರಿತವಾದುದು.
- ಪ್ರಕ್ರಿಯೆಗಳಿಂದ ಕೂಡಿದ್ದು.
- ಕಲಿಕೆಯನ್ನು ಗಟ್ಟಿಗೊಳಿಸುವುದು.
- ಕಲಿಕಾ ಸಾಧನೆಗಳನ್ನು ಸಫಲಗೊಳಿಸಲು ಸಮರ್ಥವಾದುದು.
- ಪರಿಸರ ಆಧಾರಿತವಾದುದು.
- ವಿಕಾಸದ ವಲಯಗಳನ್ನು ಪರಿಗಣಿಸುವುದು.
- ವಿದ್ಯಾರ್ಥಿಯ ಸ್ವಭಾವಕ್ಕೆ ಅನುಗುಣವಾದುದು.
- ಕಲಿಕೆಯೊಂದಿಗೆ ಮೌಲ್ಯ ನಿರ್ಣಯವೂ ಜತೆಯಾಗಿರುವುದು.

ಜ್ಞಾನನಿರ್ಮಾಣ ಆಧಾರಿತವಾದ ಕಲಿಕಾ ರೀತಿಯು ಪಠ್ಯಕ್ರಮಕ್ಕೆ ಆಧಾರವಾಗಿದೆ. ವಿದ್ಯಾರ್ಥಿಯ ಆರ್ಜಿತ ಜ್ಞಾನ ಮತ್ತು ಆಶಯ ಪರಿಸರವನ್ನು ಪರಿಗಣಿಸಿಕೊಂಡು ಪ್ರಯೋಜನಕಾರಿಯಾದ ಕಲಿಕಾ ಚಟುವಟಿಕೆಗಳನ್ನು ಏರ್ಪಡಿಸುವುದರಿಂದ ಸಹಜ ಜ್ಞಾನವನ್ನು ರೂಪಿಸಲು ಸಾಧ್ಯ ಎಂಬುದು ಈ ದೃಷ್ಟಿಕೋನದ ವೈಶಿಷ್ಟ್ಯ.

## ಕಲಿಕಾನುಭವಗಳು

ಬದುಕಿನ ವಿಭಿನ್ನ ಹಿನ್ನೆಲೆಗಳಿಂದ ಬರುವ ವಿದ್ಯಾರ್ಥಿಗಳ ಆರ್ಜಿತ ಜ್ಞಾನ, ಸಾಮರ್ಥ್ಯ, ಆಸಕ್ತಿ ಇವುಗಳು ವಿಭಿನ್ನವಾಗಿರುವವಲ್ಲವೇ. ಈ ವೈಶಿಷ್ಟ್ಯವನ್ನು ಪರಿಗಣಿಸಿಕೊಂಡು ವ್ಯಕ್ತಿ ಭಿನ್ನತೆಯನ್ನೂ ಬಹುಮುಖ ವಾದ ಬುದ್ಧಿಮತ್ತೆಯನ್ನೂ ಗಮನದಲ್ಲಿರಿಸಿಕೊಂಡು ಕಲಿಕೆಯ ಅನುಭವಗಳನ್ನು ರೂಪಿಸಬೇಕಾದುದು ಮುಖ್ಯವಾಗಿದೆ.

## ಕಲಿಕಾ ಪರಿಸರ

ವಿದ್ಯಾರ್ಥಿಯ ಆಸಕ್ತಿ ಹಾಗೂ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು, ವೈವಿಧ್ಯಪೂರ್ಣ ಕಲಿಕಾ ಚಟುವಟಿಕೆಗಳಲ್ಲಿ ಭಾಗಿಯಾಗಲು ಅನುಕೂಲವಾಗುವಂತೆ ತರಗತಿಗಳನ್ನು ಸಿದ್ಧಪಡಿಸಬೇಕು. ವಿದ್ಯಾರ್ಥಿ ಕೇಂದ್ರಿತ ಕಲಿಕಾ ಚಟುವಟಿಕೆಗಳಿಗೆ ಸಹಾಯಕವಾಗುವಂತೆ ಚಟುವಟಿಕೆ ಆಧಾರಿತ ಕಲಿಕೆಯನ್ನು ಹೇಗೆ ಮಾಡಬೇಕೆಂದು ನಾವು ತಿಳಿದುಕೊಂಡೆವಲ್ಲವೇ?

## ಕಲಿಕಾ ಪ್ರಕ್ರಿಯೆ

- ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಅನುಭವಗಳ ಆಧಾರದಲ್ಲಿ ಜ್ಞಾನ ನಿರ್ಮಾಣ (Knowledge Construction) ಮಾಡುವನು.
- ಜ್ಞಾನ ನಿರ್ಮಾಣವನ್ನು ವೈಯುಕ್ತಿಕ ಮತ್ತು ಸಾಮಾಜಿಕ ಹಂತಗಳಲ್ಲಿ ಮಾಡಬೇಕು.
- ವಿವಿಧ ಕಲಿಕಾ ಶೈಲಿಗಳನ್ನು (Learning Style) ಪರಿಗಣಿಸಿಕೊಂಡು ವಿವಿಧ ಇಂದ್ರಿಯಾನುಭವಗಳನ್ನು (Multisensory Experiences) ನೀಡುವ ಮೂಲಕ ಕಲಿಕೆಯನ್ನು ಯಶಸ್ವಿಗೊಳಿಸಬಹುದು.
- ಕಲಿಕಾನುಭವಗಳನ್ನು ಸಕ್ರೀಯವಾಗಿ (spiralling) ಮಂಡಿಸುವ ಮೂಲಕ ಕಲಿಕೆಯು ಸಾಕಷ್ಟು ಫಲಕಾರಿಯಾಗುತ್ತದೆ.
- ಕಲಿಕಾ ಚಟುವಟಿಕೆಗಳಿಗೆ ಯೋಗ್ಯವಾದ ನಮನೀಯತೆ (Flexibility), ಹೊಂದಾಣಿಕೆ (Adaptations), ಕಲಿಕಾ ಚಟುವಟಿಕೆಗಳ ಆಯ್ಕೆ (Selection) ಇವುಗಳನ್ನು ನಡೆಸುವ ಮೂಲಕ ವಿಭಿನ್ನ ಅಭಿರುಚಿಯು ಕಲಿಕೆಯು ಆಸಕ್ತರನ್ನು ಪರಿಗಣಿಸಬಹುದು.

ಮಕ್ಕಳು ತೊಡಗಿಕೊಂಡಿರುವ ಜ್ಞಾನ ನಿರ್ಮಾಣ ಪ್ರಕ್ರಿಯೆಯಲ್ಲಿ ಅಧ್ಯಾಪಕರು ಸಕ್ರಿಯವಾಗಿ ಭಾಗವಹಿಸಿದರೆ, ಅದು ಮಕ್ಕಳ ತಿಳುವಳಿಕೆಯನ್ನು ಗಟ್ಟಿಗೊಳಿಸಲು ಸಹಾಯಕವಾಗುವುದು. ಕಲಿಕೆಯಲ್ಲಿ ತೊಡಗಿಸಿಕೊಂಡಿರುವ ಮಕ್ಕಳು ತಮ್ಮ ಜ್ಞಾನವನ್ನು ತಾವೇ ನಿರ್ಮಿಸಿಕೊಳ್ಳುತ್ತಾರೆ. ತಾವು ಶಾಲೆಯಲ್ಲಿ ಕಲಿತಿರುವುದನ್ನು ಹೊರಗಿನ ವಿಷಯಗಳೊಂದಿಗೆ ಅನ್ವಯಿಸಿ ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸಬೇಕು. ಬಾಯಿಪಾಠ ಹೊಡೆದು ಒಂದೇ ಒಂದು ಸರಿಯಾದ ಉತ್ತರವನ್ನು ಕಂಡುಕೊಳ್ಳುವುದಕ್ಕಿಂತ, ತಮ್ಮದೇ ವಾಕ್ಯಗಳಲ್ಲಿ ಸ್ವತಂತ್ರವಾಗಿ ಉತ್ತರವನ್ನು ಹೇಳುವಂತೆ ಪ್ರೋತ್ಸಾಹಿಸಬೇಕು. ಇವುಗಳೆಲ್ಲಾ ತಮ್ಮ ಜ್ಞಾನವನ್ನು ವಿಸ್ತರಿಸುವ ಮಕ್ಕಳಿಗೆ ಸಹಾಯ ಮಾಡುವ ಪ್ರಧಾನ ಹೆಜ್ಜೆಗಳಾಗಿವೆ. ಬೌದ್ಧಿಕವಾದ ಊಹೆ ಅರ್ಥವತ್ತಾದ ಒಂದು ಬೋಧನ ಕ್ರಮವಾಗಿದೆ. ಇದನ್ನು ಪ್ರೋತ್ಸಾಹಿಸಬೇಕು. ಹಲವಾರು ಬಾರಿ ತಮ್ಮ ದೈನಂದಿನ ಅನುಭವಗಳಿಂದ ಅಥವಾ ಮಾಧ್ಯಮ ಸಂಪರ್ಕದಿಂದ ಮಕ್ಕಳ ಮನಸ್ಸಿನಲ್ಲಿ ಕೆಲವು ಆಶಯಗಳು ರೂಪುಗೊಂಡಿರಬಹುದು. ಆದರೆ ಅಧ್ಯಾಪಕರು ನಿರೀಕ್ಷಿಸುವ ಮಾತುಗಳಲ್ಲಿ ಅವುಗಳನ್ನು ಅವರಿಗೆ ಪ್ರಕಟಿಸಲು ಸಾಧ್ಯವಾಗದು. ತಿಳಿದಿರುವುದು ಮತ್ತು ತಿಳಿಯದಿರುವುದರ ಮಧ್ಯೆ ಹೊಸ ಜ್ಞಾನದ ಸೃಷ್ಟಿಯಾಗುತ್ತದೆ. ಶಾಲೆಯ ಹೊರಗೆ ಮನೆ ಅಥವಾ ಸಮಾಜದಲ್ಲಿ ಬೆಳೆಸುವ ಕರಕೌಶಲ್ಯದ ರೂಪದಲ್ಲಿ ಇಂತಹ ಜ್ಞಾನ ಸೃಷ್ಟಿಯಾಗುವುದು. ಇಂತಹ ಎಲ್ಲ ತಿಳುವಳಿಕೆಗಳನ್ನು ಗೌರವಿಸಬೇಕು. ತಿಳುವಳಿಕೆ ಮತ್ತು ಸಂವೇದನಶೀಲತೆಯಿರುವ ಅಧ್ಯಾಪಕರು ಈ ಕುರಿತು ಪ್ರಜ್ಞಾವಂತರಾಗಿರುತ್ತಾರೆ. ಮಕ್ಕಳ ವಿಕಾಸ ಸಾಧ್ಯತೆಯನ್ನು ಮನಗಂಡು, ಚಟುವಟಿಕೆಗಳನ್ನು ಒದಗಿಸಿ ಹಾಗೂ ಪ್ರಶ್ನೆಗಳನ್ನು ಕೇಳಿ ಅವರನ್ನು ಮುನ್ನಡೆಸಲು ಅಧ್ಯಾಪಕರಿಗೆ ಸಾಧ್ಯ.

ಅನ್ವೇಷಣೆ, ನಿರೀಕ್ಷಣೆ, ಪ್ರಶ್ನೆಗಳನ್ನು ಕೇಳುವುದು, ಚರ್ಚಾಕೂಟಗಳು ಇವುಗಳ ಮೂಲಕ ಸಿದ್ಧಾಂತ ರೂಪೀಕರಣ ಮತ್ತು ಆಶಯ ಸೃಷ್ಟಿಗಳಾಗುತ್ತವೆ. ಇವುಗಳು ಸಕ್ರಿಯ ಭಾಗವಹಿಸುವಿಕೆಯ ಭಾಗವಾಗಿವೆ. ಶಾಲೆಗಳು ಪ್ರಶ್ನೆಗಳನ್ನು ಕೇಳುವುದಕ್ಕೂ ಚರ್ಚಿಸುವುದಕ್ಕೂ ಶೋಧಿಸುವುದಕ್ಕೂ ವಿಶ್ಲೇಷಿಸುವುದಕ್ಕೂ ನಿಗಮನವನ್ನು ಕಂಡುಕೊಳ್ಳಲೂ ಅವಕಾಶವನ್ನು ಒದಗಿಸಬೇಕು.

ಎನ್.ಸಿ.ಎಫ್. 2005 ಪುಟ. 41,42

- ಸಾಕಷ್ಟು ಕಲಿಕಾನುಭವಗಳು ಪ್ರತಿಯೊಬ್ಬ ವಿದ್ಯಾರ್ಥಿಗೆ ದೊರಕಿದಾಗಲೇ ಕಲಿಕಾ ಸಾಧನೆ (Learning outcome) ದೃಢವಾಗುವುದು.
- ಕಲಿಕೆ ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳು ನಿರಂತರವಾಗಿ ನಡೆಯಬೇಕಾಗಿರುವುದು.
- ವಿಷಯಾಧಾರಿತ ವಸ್ತು, ವಿದ್ಯಾರ್ಥಿಯ ಕಲಿಕೆಯ ಅಗತ್ಯ ಇವುಗಳನ್ನು ಹೊಂದಿಕೊಂಡು ವಿವಿಧ ಕಲಿಕಾ ಬೋಧನ ತಂತ್ರಗಳನ್ನು ಬಳಸಿಕೊಂಡರೆ ಎಲ್ಲರಿಗೂ ಕಲಿಕಾ ಸಾಧನೆ (Learning Outcome) ಯನ್ನು ಗಳಿಸಿಕೊಳ್ಳಲು ಸಾಧ್ಯ.
- ಪ್ರತಿಯೊಂದು ಮಗುವಿನ ಸಮಗ್ರ ಪ್ರಗತಿಯನ್ನು (Allround development) ಉದ್ದೇಶ ವಾಗಿರಿಸಿಕೊಂಡು ಕಲಿಕಾ ಪ್ರಕ್ರಿಯೆಗಳನ್ನು ನಿರ್ಧರಿಸಬೇಕು.

## 1.4 ಕಲಿಕಾ ಸಾಧನೆಗಳು (Learning Outcomes)

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಕಲಿಕಾ ಚಟುವಟಿಕೆಗಳ ಫಲವಾಗಿ ಜ್ಞಾನ, ಕೌಶಲ್ಯ, ಮನೋಭಾವ, ಮೌಲ್ಯಗಳು ಮಗುವಿನಲ್ಲಿ ರೂಪುಗೊಳ್ಳುತ್ತವೆ. ಇವುಗಳಲ್ಲಿ ಕೆಲವನ್ನು ಸ್ವಲ್ಪ ಕಾಲದಲ್ಲಿ ಸಂಪಾದಿಸಬಹುದು ಮತ್ತು ಕೆಲವಕ್ಕೆ ದೀರ್ಘಕಾಲ ಬೇಕಾಗುವುದು. ಹೀಗೆ ಮಗುವಿನಲ್ಲಿ ಉಂಟಾಗುವ ಬದಲಾವಣೆಗಳನ್ನು ನಮಗೆ ಮುಂಚಿತವಾಗಿ ನಿರ್ಧರಿಸಲು ಸಾಧ್ಯವಿದೆ. ಪಠ್ಯಕ್ರಮವನ್ನು ಸಿದ್ಧಪಡಿಸುವಾಗ ಶಾಲಾ ಶಿಕ್ಷಣದ ವಿವಿಧ ಹಂತಗಳಲ್ಲಿ ಮಗು ಸಾಧಿಸಬೇಕಾದ ಗುರಿಗಳನ್ನು ನಾವು ಕಲಿಕಾ ಸಾಧನೆಗಳೆಂದು ಹೇಳುತ್ತೇವೆ. ಕೆಲವು ಕಲಿಕಾ ಚಟುವಟಿಕೆಗಳ ಸರಣಿಯ ಮೂಲಕ ಪ್ರತಿಯೊಂದು ಘಟಕದಲ್ಲಿಯೂ ವಿದ್ಯಾರ್ಥಿ ಸಾಧಿಸುವ ಕಲಿಕಾ ಸಾಧನೆಗಳು ವಿಕಾಸಗೊಂಡು ತರಗತಿಯ ಕೊನೆಯಲ್ಲಿ ಗಳಿಸುವ ಕಲಿಕಾ ಸಾಧನೆಗಳಾಗುತ್ತವೆ. ಅನಂತರ ನಿಗದಿತ ಶಿಕ್ಷಣ ಕಾಲಾವಧಿಯ ಕಲಿಕಾ ಸಾಧನೆಗಳಾಗಿ ಅವು ಬೆಳೆಯುತ್ತವೆ. ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ (observable) ಅಳೆಯಲೂ (measurable) ಸಾಧ್ಯವಿರುವುದು ಅದರ ವೈಶಿಷ್ಟ್ಯವಾಗಿದೆ. ಪ್ರತಿಯೊಂದು ಘಟಕದ, ತರಗತಿಯ, ಅವಧಿಯ ಕೊನೆಯಲ್ಲಿ ಮಗು ಗಳಿಸಬೇಕಾದ ಜ್ಞಾನ ಕೌಶಲ್ಯ, ಮೌಲ್ಯ, ಮನೋಭಾವಗಳನ್ನು ಗಳಿಸಲಾಗಿದೆಯೇ ಎಂದು ಮೌಲ್ಯಮಾಪನ ಮಾಡಲು ಕಲಿಕಾಸಾಧನೆಗಳ ವಿಶ್ಲೇಷಣೆಯಿಂದ ಸಾಧ್ಯ. ಪಠ್ಯಕ್ರಮದ ಸರಿಯಾದ ವಿನಿಮಯದ ಮೂಲಕ ಎಲ್ಲ ಮಕ್ಕಳ ಕಲಿಕಾ ಸಾಧನೆಗಳನ್ನು ದೃಢಪಡಿಸಲು ನಮಗೆ ಸಾಧ್ಯವಾಗಬೇಕು.

ಕಲಿಕಾ ಸಾಧನೆಗಳ ವೈಶಿಷ್ಟ್ಯಗಳನ್ನು ಹೀಗೆ ಸಂಗ್ರಹಿಸಬಹುದು.

- ವಿಷಯನಿಷ್ಠವಾದ ಕಲಿಕೆಯ ಮೂಲಕ ವಿದ್ಯಾರ್ಥಿ ಗಳಿಸಿಕೊಳ್ಳಬೇಕಾದ ಜ್ಞಾನ (knowledge), ಕೌಶಲ್ಯ (skills), ಮನೋಭಾವ ಮತ್ತು ಮೌಲ್ಯ (attitude and value)ಗಳನ್ನು ಕಲಿಕಾ ಸಾಧನೆ ಒಳಗೊಂಡಿರುತ್ತದೆ.
- ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ, ಅಳೆಯಲೂ ಸಾಧ್ಯವಿದೆ.
- ಹ್ರಸ್ವ ಮತ್ತು ದೀರ್ಘಕಾಲದಲ್ಲಿ ಗಳಿಸುವ ವಿಭಿನ್ನ ಕಲಿಕಾ ಸಾಧನೆಗಳಿವೆ.

## 1.5 ಕಲಿಕಾ ಸಂಪನ್ಮೂಲಗಳು ಮತ್ತು ಕಲಿಕಾ ವ್ಯವಸ್ಥೆಗಳು

ಪಠ್ಯಕ್ರಮವನ್ನು ವಿನಿಮಯ ಮಾಡಲು ಬಳಸುವ ವಿವಿಧ ಘಟಕಗಳೇ ಕಲಿಕಾ ಸಂಪನ್ಮೂಲಗಳು. ಕಲಿಕಾ ಪ್ರಕ್ರಿಯೆಯ ಪೂರ್ಣತೆಗೆ ಕಲಿಕಾ ಸಂಪನ್ಮೂಲಗಳನ್ನು ಉಪಯೋಗಿಸಿಯೇ ತೀರಬೇಕು.

- ಗ್ರಂಥಾಲಯ
- ಪ್ರಯೋಗಾಲಯ (ಭಾಷೆ, ಗಣಿತ, ವಿಜ್ಞಾನ)
- ಕಲಿಕೋಪಕರಣಗಳು
- ಡಿಸ್‌ಪ್ಲೇ ಫಲಕಗಳು
- ಕಂಪ್ಯೂಟರ್ ಲ್ಯಾಬ್
- ಬಹುಮಾಧ್ಯಮ ಉಪಕರಣಗಳು

ಇದರ ಹೊರತಾಗಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಪ್ರಕಟಿಸುವ ಅನೇಕ ವೇದಿಕೆಗಳು ಶಾಲೆಗಳಲ್ಲಿವೆಯಲ್ಲವೇ? ಇವುಗಳನ್ನು ಕಲಿಕಾ ಸಾಧನೆಗಳನ್ನು ಗಳಿಸಿಕೊಳ್ಳಲು ಬಳಸಿಕೊಳ್ಳಬಹುದು.

- ಬಾಲಸಭೆ
- ಅಸೆಂಬ್ಲಿ
- ಕ್ಲಬ್‌ಗಳು
- ಚರ್ಚಾ ಕೂಟಗಳು
- ಶೈಕ್ಷಣಿಕ ಪ್ರವಾಸಗಳು
- ಸ್ವಯಂ ಸೇವಾ ಸಂಸ್ಥೆಗಳು (SPC, NSS, Scout, NCC)
- ಮಕ್ಕಳ ಪರಿಪೂರ್ಣವಾದ ಬೆಳವಣಿಗೆಗೆ ಇಂತಹ ಘಟಕಗಳು ಅತಿ ಅಗತ್ಯವಾಗಿವೆ.

## 1.6 ಕಲೆ ಮತ್ತು ವೃತ್ತಿಪರಿಚಯ ಕಲಿಕೆ

### ಕಲೆಯ ಕಲಿಕೆ

ಸೃಜನಶೀಲತೆ, ನಿರೀಕ್ಷಣ ಸಾಮರ್ಥ್ಯ ಮತ್ತು ಬುದ್ಧಿಮತ್ತೆಯನ್ನು ಮಕ್ಕಳಲ್ಲಿ ಬೆಳೆಸಲು ಕಲೆಯ ಕಲಿಕೆ ಅತಿ ಅಗತ್ಯವಾಗಿದೆ. ಹೊಸ ಪಠ್ಯಕ್ರಮದಲ್ಲಿ ಸಾಮಾನ್ಯ ವಿಷಯಗಳೊಂದಿಗೆ ಕಲೆಯ ಕಲಿಕೆಗೂ ಮಹತ್ವವನ್ನು ನೀಡಲಾಗಿದೆ. ಶಾಲಾ ಪಠ್ಯಕ್ರಮದಲ್ಲಿ ಕಲೆಯ ಕಲಿಕೆಯ ವ್ಯಾಪ್ತಿಯಲ್ಲಿ ಸಂಗೀತ, ನೃತ್ಯ, ಚಿತ್ರರಚನೆ, ಶಿಲ್ಪರಚನೆ, ನಾಟಕ, ಸಿನಿಮಾ ಮೊದಲಾದ ಪ್ರಕಾರಗಳನ್ನು ಸೇರಿಸಿಕೊಳ್ಳಲಾಗಿದೆ. ಮಕ್ಕಳ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹವನ್ನು ನೀಡುವುದು ಅಗತ್ಯವಾಗಿದೆ. ಕಲೆಯ ಕಲಿಕೆಯ ಸಾಮಾನ್ಯ ಉದ್ದೇಶಗಳು.

- ವಿದ್ಯಾರ್ಥಿಯ ಸಹಜವಾದ ಕಲೆಯ ಅಭಿರುಚಿಗಳನ್ನು ಪ್ರೋತ್ಸಾಹಿಸುವುದು.
- ವಿವಿಧ ಕಲೆಗಳನ್ನು ತಿಳಿದುಕೊಂಡು, ಮಕ್ಕಳ ಅಭಿರುಚಿಗೆ ಹೊಂದಿಕೊಂಡು ಕಲೆಗಳನ್ನು ಅಭ್ಯಾಸ ಮಾಡಲು ಅವಕಾಶಗಳನ್ನು ಒದಗಿಸುವುದು.
- ವಿವಿಧ ಕಲೆಗಳನ್ನು ಆಸ್ವಾದಿಸಿ, ಕಲೆಯ ಸೌಂದರ್ಯವನ್ನು ತಿಳಿದುಕೊಳ್ಳುವುದು.
- ಕಲೆಯ ಆಸ್ವಾದನೆ ಮಾಡಿ ಸಮಾಜ ಜೀವನದಲ್ಲಿ ಮಾನವೀಯ ದೃಷ್ಟಿಕೋನಗಳನ್ನು ಮೂಡಿಸುವುದು.
- ಸಾಂಸ್ಕೃತಿಕ ವೈವಿಧ್ಯವನ್ನು ಅರಿತುಕೊಂಡು ಸಂಸ್ಕೃತಿ ಪ್ರೇಮವನ್ನು ಬೆಳಸುವುದು.
- ಕಲೆಯ ಸತ್ವವನ್ನು ಅರಿತುಕೊಂಡು ಹೊಸ ಚಿಂತನೆಗಳನ್ನು ಮಾಡುವುದು ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸುವುದು.
- ಕಲೆಯನ್ನು ಬಳಸಿ ಇತರ ವಿಷಯಗಳ ಕಲಿಕೆಯನ್ನು ಫಲಪ್ರದಗೊಳಿಸುವುದು (Art applied learning)
- ಬಹುಮುಖವಾದ ಬೌದ್ಧಿಕ ವಿಕಾಸದ ಸಾಧ್ಯತೆಗಳನ್ನು ಉತ್ತಮ ಪಡಿಸುವುದು.
- ವಿಭಿನ್ನ ಕೌಶಲ್ಯಗಳಿರುವ ವಿದ್ಯಾರ್ಥಿಗಳನ್ನು ಕಲಿಕಾ ಚಟುವಟಿಕೆಗಳಿಗೆ ಆಕರ್ಷಿಸುವುದು.
- ಮಕ್ಕಳ ಆಸ್ವಾದನೆಯ ಮಟ್ಟವನ್ನು ಉತ್ತಮಪಡಿಸುವುದು.

### ವೃತ್ತಿ ಪರಿಚಯ

ಭಾವನಾತ್ಮಕ ಮತ್ತು ವಿಜ್ಞಾನ ಕ್ಷೇತ್ರಗಳ ಸಮನ್ವಯ ಹಾಗೂ ಪ್ರಗತಿಗಾಗಿ ವೃತ್ತಿ ಪರಿಚಯ ಶಿಕ್ಷಣ ಅನಿವಾರ್ಯವಾಗಿದೆ. ಪ್ರತಿಯೊಂದು ವೃತ್ತಿ ಪರಿಚಯ ತರಗತಿಯ ಅಡಿಪಾಯವು ಮಾನವ ಸಂಪನ್ಮೂಲದ ಪ್ರಗತಿಯಾಗಬೇಕು. ಎಲ್ಲ ಪ್ರಜೆಗಳ ಸಾಮರ್ಥ್ಯಗಳನ್ನೂ, ಕೌಶಲ್ಯಗಳನ್ನೂ ರಾಷ್ಟ್ರ ನಿರ್ಮಾಣಕ್ಕಾಗಿ ಬಳಸುವಂತೆ ಬೆಳೆಸುವುದೇ ಮಾನವ ಸಂಪನ್ಮೂಲ ಪ್ರಗತಿಯ ಉದ್ದೇಶವಾಗಿದೆ. ವೃತ್ತಿಯಲ್ಲಿ ಆಸಕ್ತಿ ಮೂಡಿಸುವುದು, ವ್ಯಕ್ತಿಗಳನ್ನು ಹೊಸ ವೃತ್ತಿ ಸಂಸ್ಕೃತಿಯ ವಕ್ತಾರರನ್ನಾಗಿ ಮಾಡುವುದು ವೃತ್ತಿ ಕಲಿಕೆಯ ಪ್ರಮುಖ ಉದ್ದೇಶಗಳಾಗಿವೆ.

- ಮಾನವ ಸಂಪನ್ಮೂಲದ ಅಭಿವೃದ್ಧಿ
- ರಾಷ್ಟ್ರೀಯ ಅಭಿವೃದ್ಧಿ
- ವೃತ್ತಿ ಸನ್ನದ್ಧತೆ
- ಉತ್ಪಾದನ ವಲಯದಲ್ಲಿ ಸ್ವಾಯತ್ತತೆ
- ಸಂತುಲಿತ ವ್ಯಕ್ತಿತ್ವ ವಿಕಾಸ
- ಮೌಲ್ಯ ಹಾಗೂ ಮನೋಭಾವಗಳ ಬೆಳವಣಿಗೆ

ಕಲೆ ಮತ್ತು ವೃತ್ತಿ ಕಲಿಕೆಗೆ ಪ್ರಾಧಾನ್ಯವನ್ನು ನೀಡಿ ಪಠ್ಯಕ್ರಮವನ್ನು ರೂಪಿಸಬೇಕು. ಇವುಗಳ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳೊಂದಿಗೆ ವಿನಿಮಯ ಮಾಡುವುದು ಅಗತ್ಯವಾಗಿದೆ.

## 1.7 ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ

ಪ್ರಾಥಮಿಕ ಶಾಲಾ ಹಂತವು ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಯ ಮುಖ್ಯ ಹಂತವಾಗಿದೆ. ಆದುದರಿಂದ ಈ ಹಂತದಲ್ಲಿ ಎಲ್ಲ ಮಕ್ಕಳಿಗೆ ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಅನುಭವಗಳು ಲಭಿಸುತ್ತವೆ ಎಂಬುದನ್ನು ದೃಢಗೊಳಿಸಬೇಕು. ಮಗುವಿನ ಆರೋಗ್ಯ ಮತ್ತು ಕ್ರೀಡಾ ಮನೋಭಾವವನ್ನು ಪೋಷಿಸುವುದು, ಆರೋಗ್ಯಕರ ಜೀವನ ಶೈಲಿಯನ್ನು ರೂಪಿಸುವುದು ಈ ಕಲಿಕೆಯ ಪ್ರಧಾನ ಉದ್ದೇಶವಾಗಿದೆ. ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳನ್ನು ವಿನಿಮಯ ಮಾಡುವುದು ಅಗತ್ಯವಾಗಿದೆ.

### ಆರೋಗ್ಯ ಮತ್ತು ಕ್ರೀಡಾ ಕಲಿಕೆಯ ಪ್ರಧಾನ ಉದ್ದೇಶಗಳು

- ವಿವಿಧ ಸಂದರ್ಭಗಳಲ್ಲಿ ಯೋಗ್ಯವಾದ ರೀತಿಯಲ್ಲಿ ದೇಹವನ್ನು ಚಲಿಸುವಂತೆ ಮಾಡುವ ಕೌಶಲ್ಯವನ್ನು ಸಂಪಾದಿಸುವುದು.
- ದೇಹದ ಚಲನೆಯನ್ನು ನಿಯಂತ್ರಿಸುವ ವಿವಿಧ ಹಂತಗಳನ್ನು ತಿಳಿದುಕೊಂಡು, ಅವುಗಳನ್ನು ಸೃಜನಾತ್ಮಕ ಚಲನೆಗಳ ಮಾಧ್ಯಮವಾಗಿ ಅಭಿವೃದ್ಧಿಪಡಿಸುವುದು.
- ಸಾಮಾಜಿಕವಾದ ಜವಾಬ್ದಾರಿಗಳನ್ನು ಅರಿತುಕೊಂಡು, ಪ್ರಜಾಪ್ರಭುತ್ವ ರೀತಿಯ ಜೀವನ ಶೈಲಿಯನ್ನು ರೂಢಿಸಿಕೊಳ್ಳುವುದು ಮತ್ತು ಆಸ್ವಾದಿಸುವುದು.
- ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ದೃಢಪಡಿಸುವುದು.

## 1.8 ಒಳಗೊಂಡಿರುವ ಶಿಕ್ಷಣ (Inclusive Education)

ಶಾಲೆಯಲ್ಲಿ ಉತ್ತಮ ಪ್ರದರ್ಶನವನ್ನು ನೀಡುವ ತಮ್ಮ ಸಹಪಾಠಿಗೆ ವಾಸವಾಗಲು ಮನೆಯಿಲ್ಲವೆಂದೂ, ರಸ್ತೆ ಬದಿಯ ಪೈಪಿನಡಿಯಲ್ಲಿ ಕಟ್ಟಿದ ಡೇರೆಯೇ ಅವನ ಮನೆಯೆಂದೂ ತಿಳಿದಾಗ ಅದು ಚರ್ಚೆಗೆ ಗ್ರಾಸವಾಯಿತು. ಕಷ್ಟಗಳನ್ನು ಪರಸ್ಪರ

ಹಂಚಿಕೊಳ್ಳುವುದರಿಂದ ಮಾತ್ರ ಪರಿಹಾರ ಉಂಟಾಗುವುದಿಲ್ಲ ಎಂದು ಅರಿತುಕೊಂಡ ವಿದ್ಯಾರ್ಥಿಗಳು ಅಧ್ಯಾಪಕರ ಸಹಾಯದೊಂದಿಗೆ ಹಣವನ್ನು ಸಂಗ್ರಹಿಸಿ ಗೆಳೆಯನಿಗೆ ಮನೆ ನಿರ್ಮಿಸಿಕೊಟ್ಟು ಮಾದರಿಯಾದರು.

*(ಒಂದು ಶಾಲೆಯ ಅನುಭವ)*

ತರಗತಿ ಕೋಣೆಯಲ್ಲಿ ಎಲ್ಲರನ್ನೂ ಒಂದುಗೂಡಿಸುವ, ಯಾರನ್ನೂ ಹೊರ ಹಾಕದ ಕಲಿಕೆಯ ಒಂದು ವಾತಾವರಣವನ್ನು ಸೃಷ್ಟಿಸಬೇಕಾಗಿದೆ. ನಮ್ಮ ಶಾಲೆಗಳಲ್ಲಿ ಮುಖ್ಯವಾಗಿ ಎರಡು ವಿಭಾಗಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನೂ, ಸಹಾಯವನ್ನೂ ನೀಡಿ ನ್ಯಾಯಯುತವಾದ ಗುಣಮಟ್ಟದ ಶಿಕ್ಷಣವನ್ನು (Equitable Quality Education) ದೃಢಗೊಳಿಸಬೇಕಾಗಿದೆ.

**ವಿಶೇಷ ಗಮನ, ಕಲಿಕಾ ಸಹಾಯ ಮತ್ತು ರಕ್ಷಣೆ ಅಗತ್ಯವಿರುವುದು ಯಾರಿಗೆ?**

**(ಎ) ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಹೊರಹಾಕಲ್ಪಟ್ಟವರ ಮಕ್ಕಳು**

- ವಿಭಿನ್ನ ಮತ್ತು ವೈವಿಧ್ಯಪೂರ್ಣವಾದ ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಹಿನ್ನೆಲೆಯಲ್ಲಿ ತಾರತಮ್ಯವನ್ನು ಅನುಭವಿಸುವ ಮಕ್ಕಳು, ತೀವ್ರ ಬಡತನವನ್ನು ಎದುರಿಸುವವರು, ಬುಡಕಟ್ಟು ಆದಿವಾಸಿಗಳು, ಹೆಣ್ಮಕ್ಕಳು, ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರಿದವರು, ಬೇರೆ ರಾಜ್ಯಗಳಿಂದ ವಲಸೆ ಬಂದವರು, ಖಾಯಂ ಮನೆಗಳಿಲ್ಲದವರು–ಹೀಗೆ ಅನೇಕ ಸಂಕಷ್ಟಗಳನ್ನು ಎದುರಿಸುವವರು ಈ ವಿಭಾಗದಲ್ಲಿ ಸೇರುತ್ತಾರೆ.

ವಿಭಿನ್ನತೆಗಳನ್ನು, ಪರಿಮಿತಿಗಳನ್ನು ಅರಿತುಕೊಂಡು, ಅವರನ್ನು ಗುರುತಿಸಿ ಗೌರವಿಸಬೇಕಾದುದು ನಮ್ಮ ಸಮೀಪನವಾಗಿರಬೇಕು. ಶಾಲೆಯ ಒಗ್ಗಟ್ಟಿನ ಕಾರ್ಯ ಚಟುವಟಿಕೆಗಳ ಮೂಲಕ ಇಂಥವರ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು.

**(ಬಿ) ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರು**

ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರಿಗೂ, ಕಲಿಕೆಯಲ್ಲಿ ಕಷ್ಟವನ್ನು ಅನುಭವಿಸುವ ಮಕ್ಕಳಿಗೂ ಪ್ರತ್ಯೇಕವಾದ ಕಲಿಕಾ ವಿಧಾನದ ಅಗತ್ಯಗಳಿವೆ (special educational needs). ಕಿವುಡುತನ, ದೃಷ್ಟಿದೋಷ, ಬೌದ್ಧಿಕ ಮತ್ತು ಚಲನೆಯ ಪರಿಮಿತಿಗಳು, ಓಟಿಸಂ, ಸೆರೆಬ್ರಲ್ ಪಾಲ್ಸಿ, ಬಹುಮುಖವಾದ ವೈಕಲ್ಯಗಳು, ಭಾವನಾತ್ಮಕವಾದ ಅಸಮತೋಲನವಿರುವ ಮಕ್ಕಳು, ಗಮನಹರಿಸುವಲ್ಲಿ ಪರಿಮಿತಿಗಳಿರುವ ಮಕ್ಕಳು ಮುಂತಾದವರು ವಿಭಾಗದಲ್ಲಿ ಸೇರುತ್ತಾರೆ.

**ಪಠ್ಯಕ್ರಮದ ವಿನಿಮಯ ಹಾದಿಯಲ್ಲಿ ನಾವು ಏನನ್ನು ಅನುಸರಿಸಬೇಕು?**

- ಕಲಿಕೆಯ ಅಗತ್ಯಗಳು, ಅಭಿರುಚಿ ಇವುಗಳನ್ನು ಪರಿಗಣಿಸಿ ಕಲಿಕಾ ಚಟುವಟಿಕೆಗಳ ಯೋಜನೆಗಳು.
- ಕಲಿಕಾ ಚಟುವಟಿಕೆಗಳಲ್ಲಿ ಎಲ್ಲರ ಭಾಗವಹಿಸುವಿಕೆ ಇರುವಂತೆ ಪಾಠಯೋಜನೆಯಲ್ಲಿ ಹೊಂದಾಣಿಕೆ.
- ವಿಭಿನ್ನವಾದ ಕಲಿಕಾ ವೇಗ, ಕಲಿಕಾ ಶೈಲಿ ಇವುಗಳನ್ನು ಪರಿಗಣಿಸಿಕೊಂಡು ವಿವಿಧ ಇಂದ್ರಿಯಾಧಾರಿತ ಸಮೀಪನ (multisensory approach) ಅನುಷ್ಠಾನ.
- ಪರಿಹಾರ ಚಟುವಟಿಕೆಗಳು (Remedial Practices), ಪೋಷಕ ಚಟುವಟಿಕೆಗಳು (Enrichment Practice) ಇವುಗಳನ್ನು ಪ್ರತಿಯೊಬ್ಬ ಮಗುವಿನ ಅಗತ್ಯವನ್ನು ಅನುಸರಿಸಿ ಅನುಷ್ಠಾನಗೊಳಿಸುವುದು.
- ವಿವಿಧ ಮೌಲ್ಯಮಾಪನ ಸಾಧ್ಯತೆಗಳನ್ನು ಜಾರಿಗೊಳಿಸುವುದು.

- ಸಂಪನ್ಮೂಲ ಅಧ್ಯಾಪಕರ ಹಾಗೂ ಇತರ ತಜ್ಞರ ಸಹಾಯವನ್ನು ದೃಢಪಡಿಸುವುದು.
- ಮಗುವಿನ ಕಲಿಕೆ, ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಹೆತ್ತವರ ನಿರಂತರ ಬೆಂಬಲವನ್ನು ದೃಢಪಡಿಸುವುದು.

ಈ ಎರಡು ವಿಭಾಗದ ಮಕ್ಕಳಲ್ಲದೆ, ವಿಶೇಷ ಗಮನ ಹಾಗೂ ಪರಿಗಣನೆ ನೀಡಬೇಕಾದ ಪ್ರತ್ಯೇಕ ಅಭಿರುಚಿ ಮತ್ತು ಸಾಮರ್ಥ್ಯಗಳಿರುವ ಮಕ್ಕಳೂ (Gifted Childrens) ಇದ್ದಾರೆ. ಹೀಗೆ ಎಲ್ಲ ವಿಭಾಗದ ಮಕ್ಕಳನ್ನು ಒಳಗೊಳ್ಳುವ ರೀತಿಯಲ್ಲಿ ಶಾಲೆಯ ಚಟುವಟಿಕೆಗಳನ್ನೂ ಭೌತಿಕ ಹಿನ್ನೆಲೆಗಳನ್ನೂ ಶಾಸ್ತ್ರೀಯವಾಗಿ ರೂಪಿಸಬೇಕಾಗಿದೆ.

## 1.9 ಮಾಹಿತಿ ತಂತ್ರಜ್ಞಾನ – ಸಾಧ್ಯತೆ

ಮಾಹಿತಿ ವಿನಿಮಯಕ್ಕೆ ಅನೇಕ ವ್ಯವಸ್ಥೆಗಳು ಇಂದು ಬಳಕೆಯಲ್ಲಿವೆ ಅಲ್ಲವೇ? **ICT** ಬಳಕೆಯು ಇವುಗಳಲ್ಲಿ ತುಂಬ ಪ್ರಯೋಜನಕರವಾದುದು. ಮಕ್ಕಳು ಇದರ ತಂತ್ರಜ್ಞಾನವನ್ನು ಹೆಚ್ಚು ಕಡಿಮೆ ತಿಳಿದವರೇ ಆಗಿದ್ದಾರೆ. ಈ ತಿಳುವಳಿಕೆಯನ್ನು ತರಗತಿಯ ಕಲಿಕೆಗೆ ಬಳಸಿಕೊಳ್ಳಬೇಕಾಗಿದೆ. ಕಲಿಕೆಯನ್ನು ಅನಾಯಾಸಕರ ಹಾಗೂ ಸಂತೋಷದಾಯಕವನ್ನಾಗಿಸಲು ಇದರಿಂದ ಸಾಧ್ಯ.

### ಅಗತ್ಯ

ಪಠ್ಯಕ್ರಮ ವಿನಿಮಯದ ನಿರ್ದಿಷ್ಟ ಹಂತದಲ್ಲಿ ಯೋಗ್ಯವಾದ **ICT** ಸಾಮಗ್ರಿಗಳನ್ನು ಅಗತ್ಯವಾದರೆ ಮಾತ್ರ ಬಳಸಿದರೆ ಸಾಕು. ಮುದ್ರಣ ಮಾಧ್ಯಮದಲ್ಲಿರುವ ಪಾಠಪುಸ್ತಕಗಳ ಮಿತಿಗಳಾದ ಚಲನಶೀಲತೆ, ಶಬ್ದಗಳನ್ನು ಕೇಳಿಸಲು ಆಗದಿರುವುದು ಮೊದಲಾದ ಕೊರತೆಗಳನ್ನು **ICT** ಸಾಧ್ಯತೆಗಳ ಮೂಲಕ ಪರಿಹರಿಸಬಹುದು. **ICT** ಬಳಕೆಯ ಅಗತ್ಯ ಯಾವ ಯಾವ ಸಂದರ್ಭಗಳಲ್ಲಿ ಬೇಕಾಗಿದೆ ಎಂದೂ ಅದರ ಪ್ರಯೋಜನವನ್ನು ಹೇಗೆ ಪಡೆಯಬಹುದೆಂದೂ ನಿರ್ಧರಿಸಲು ಅಧ್ಯಾಪಕರಿಗೆ ಸಾಧ್ಯವಾಗಬೇಕು.

### ಹೊಂದಾಣಿಕೆ

ಮಗುವಿನ ಬುದ್ಧಿಯನ್ನೂ ಪ್ರತಿಭೆಯನ್ನೂ ಪ್ರಚೋದಿಸುವ **ICT** ಸಾಧ್ಯತೆಗಳು ಬೇಕಾಗಿವೆ. ಜಿಜ್ಞಾಸೆ ಮತ್ತು ಆಕಾಂಕ್ಷೆಯೊಂದಿಗೆ ಪಠ್ಯ ವಿಷಯದ ಬಗ್ಗೆ ಆಸಕ್ತಿ ಮೂಡುವಂತೆ **ICT** ಯನ್ನು ಬಳಸಬೇಕು. ಇಂದ್ರಿಯ ವೈಕಲ್ಯವುಳ್ಳವರಿಗೆ ಇದರ ಪ್ರಯೋಜನ ಹೆಚ್ಚು. ಶಬ್ದ ಹಾಗೂ ದೃಶ್ಯಗಳಿಂದ ವಿಷಯಗಳನ್ನು ಅನುಭವಕ್ಕೆ ತರಲು **ICT** ಪ್ರಯೋಜನಕಾರಿಯಾಗಿದೆ. ವಿಭಿನ್ನವಾದ ಕಲಿಕೆಯ ಶೈಲಿಗಳನ್ನು ಅಳವಡಿಸಿಕೊಂಡಿರುವ ಕಲಿಕೆಯ ಅನುಭವಗಳನ್ನು ಒದಗಿಸಲು ಇದು ಸಹಾಯಕವಾಗಿದೆ.

### ವಿಶ್ವಸನೀಯತೆ

ಕಲಿಕಾ ಸಾಮಗ್ರಿಗಳ ಬಗೆಗಿನ ವಿಶ್ವಸನೀಯತೆಯನ್ನು ದೃಢಪಡಿಸಬೇಕು. ಸರಕಾರಿ ಇಲಾಖೆಗಳ ಸೈಟುಗಳು, ಶೈಕ್ಷಣಿಕ ವೆಬ್‌ಸೈಟುಗಳು, ಪೋರ್ಟಲುಗಳು, ಬ್ಲಾಗುಗಳು, ಸಾಮಾಜಿಕ ಜಾಲ ತಾಣಗಳು ಮೊದಲಾದವುಗಳಿಂದ ಮಾಹಿತಿಗಳನ್ನು ಸಂಗ್ರಹಿಸುವಾಗ ಅದು ಅಧಿಕೃತವೇ ಎಂದು ದೃಢಪಡಿಸಬೇಕು. ತರಗತಿ ಕೋಣೆಯಲ್ಲಿ ಬಳಸುವ ಸಾಮಗ್ರಿಗಳ ಪ್ರಾಯೋಗಿಕ ನೆಲೆಯನ್ನು ದೃಢಪಡಿಸಬೇಕು. ಇಂತಹ ಸಾಮಗ್ರಿಗಳು ಕಾರ್ಯ ನಿರ್ವಹಿಸುವುದಕ್ಕೆ ಯೋಗ್ಯವಾದ ಸೋಫ್ಟ್‌ವೇರ್‌ಗಳು ಸುಲಭದಲ್ಲಿ ದೊರಕುವರಥದ್ದೂ, ಉಪಯೋಗಕ್ಕೆ ಸಿಗುವಂಥದ್ದೂ ಆಗಿರಬೇಕು. **ICT** ಸಾಧ್ಯತೆಗಳು ಮಗುವಿನ ವಯಸ್ಸು, ಮಾನಸಿಕ ಸ್ಥಿತಿ ಇವುಗಳಿಗೆ ಹೊಂದಿಕೆಯಾಗುವಂತಿರಬೇಕು.

## 1.10 ಮೌಲ್ಯಗಳು, ಮನೋಧರ್ಮಗಳು, ಕಾಳಜಿ ಇವುಗಳನ್ನು ಬೆಳೆಸುವ ವಲಯಗಳು

ವಿದ್ಯಾರ್ಥಿಯಲ್ಲಿ ಮಾನವೀಯ ಮೌಲ್ಯ ಹಾಗೂ ಸಾಂವಿಧಾನಿಕ ಮೌಲ್ಯಗಳ ಕುರಿತು ಅರಿವು ಮೂಡಿಸುವುದು, ಸಾಮಾಜಿಕ ಜೀವನವನ್ನು ಬಲಗೊಳಿಸುವ ಮನೋಧರ್ಮವನ್ನು ಮೂಡಿಸುವುದು, ಸಾಮಾಜಿಕ ಕಾಳಜಿಯನ್ನು ಬೆಳೆಸುವುದು ಮೊದಲಾದವು ಪಠ್ಯ ಕ್ರಮದ ಪ್ರಥಮ ಪರಿಗಣನೆಯ ವಿಷಯಗಳಾಗಿವೆ. ಇವುಗಳನ್ನು ಬೆಳೆಸಲು ಸೂಚಿಸಲಾದ ಆಶಯ ವಲಯಗಳನ್ನು ಕೆಳಗೆ ನೀಡಲಾಗಿದೆ.

### ಪ್ರಜಾಪ್ರಭುತ್ವ ಪ್ರಜ್ಞೆ

ವಿವಿಧ ವಿಷಯಗಳನ್ನು ಆಯ್ಕೆ ಮಾಡುವಾಗ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂಬಂಧಿಸಿದ ದೃಷ್ಟಿಕೋನಗಳನ್ನು ಪರಿಗಣಿಸಬೇಕು. ಕಲಿಕಾ ಚಟುವಟಿಕೆಗಳ ಯೋಜನೆಯಲ್ಲಿಯೂ ವಿನಿಮಯ ಪ್ರಕ್ರಿಯೆಯಲ್ಲಿಯೂ ಪ್ರಜಾಪ್ರಭುತ್ವದ ಸಮೀಪನ ಇರಬೇಕಾಗಿದೆ. ಪ್ರಜಾಪ್ರಭುತ್ವ ರೀತಿಯ ತರಗತಿ, ಶಾಲಾ ಪ್ರದೇಶಗಳು (ಪ್ರಜಾಪ್ರಭುತ್ವ ರೀತಿಯ ವೇದಿಕೆಗಳು), ಪ್ರಜಾಪ್ರಭುತ್ವ ಜೀವನ ಸಮೀಪನ ಮೊದಲಾದವುಗಳಿಂದ ಈ ಪ್ರಜ್ಞೆಯನ್ನು ಬೆಳೆಸುವುದು ಪಠ್ಯಕ್ರಮದ ಉದ್ದೇಶವಾಗಿದೆ.

### ಸಾಂವಿಧಾನಿಕ ಮೌಲ್ಯಗಳು

ನಮ್ಮ ಸಂವಿಧಾನವು ಎತ್ತಿ ಹಿಡಿದಿರುವ ಮೌಲ್ಯಗಳನ್ನೂ ಗುರಿಗಳನ್ನೂ ಪಠ್ಯಕ್ರಮವು ಪ್ರತಿಫಲಿಸುವಂತಿರಬೇಕು. ಸಾಂವಿಧಾನಿಕ ಮೌಲ್ಯಗಳನ್ನು ಸಾಧಿಸುವುದಕ್ಕಾಗಿ ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿಸುವ ಪಾಠಗಳನ್ನೂ ವಿನಿಮಯ ಪ್ರಕ್ರಿಯೆಗಳನ್ನೂ ಆಯ್ಕೆ ಮಾಡುವತ್ತ ಗಮನಿಸಬೇಕು.

### ಜಾತ್ಯತೀತ ಮನೋಭಾವ

ಜಾತ್ಯತೀತ ಮನೋಧರ್ಮವನ್ನು ಬೆಳೆಸುವಂಥ ವಿಷಯಗಳನ್ನು ಪಾಠಪುಸ್ತಕದಲ್ಲಿ ಅಳವಡಿಸಿಕೊಂಡು, ಯೋಗ್ಯವಾದ ಕಲಿಕಾ ರೀತಿಯನ್ನು ಸ್ವೀಕರಿಸಬೇಕು.

### ಸಹಿಷ್ಣುತೆ

ಭಿನ್ನಾಭಿಪ್ರಾಯವುಳ್ಳವರನ್ನೂ ಸಹನೆಯಿಂದ ಕಾಣುವುದು ಎಂಬ ಮೂಲ ತತ್ವವನ್ನು ಪಠ್ಯಕ್ರಮವು ಗುರಿಯಾಗಿಸಬೇಕು.

### ಕ್ರಿಯಾಶೀಲ – ಸೃಜನಶೀಲ ಚಿಂತನೆ

ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲವೂ ಸೃಜನಶೀಲವೂ ಆಗಿರುವ ಚಿಂತನೆಗಳನ್ನೂ, ಸಂಶೋಧನ ಬುದ್ಧಿಯನ್ನೂ ಬೆಳೆಸಬೇಕಾಗಿದೆ. ಪಠ್ಯಕ್ರಮದ ಪಠ್ಯ ವಿಷಯಗಳಲ್ಲಿ ಹಾಗೂ ಕಲಿಕಾ ತಂತ್ರಗಳಲ್ಲಿ ಸೃಜನಶೀಲ ಹುಡುಕಾಟಕ್ಕೆ ಅವಕಾಶವಿರಬೇಕು. ಬಹುಮುಖ ಬೌದ್ಧಿಕತೆ (multiple intelligence) ಯ ಹಂತಗಳನ್ನು ಇದಕ್ಕಾಗಿ ಪರಿಗಣಿಸಬೇಕು.

### ಸಂಸ್ಕೃತಿ ಹಾಗೂ ಪರಂಪರೆಯನ್ನು ಗೌರವಿಸುವುದು

ನಮ್ಮ ಸಾಂಸ್ಕೃತಿಕ ಪರಂಪರೆ ಹಾಗೂ ಇತಿಹಾಸವನ್ನು ಗೌರವಿಸುವ ಮನೋಧರ್ಮದ ನಿರ್ಮಾಣ ಎಂಬುದು ಪಠ್ಯಕ್ರಮವು ಪೂರೈಸಬೇಕಾದ ಮುಖ್ಯ ಗುರಿಗಳಲ್ಲಿ ಒಂದಾಗಿದೆ.

### ಸಮತ್ವ ಎಂಬ ಆಶಯ

ಬೇರೆ ಬೇರೆ ಸಂದರ್ಭಗಳಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಸಮಾನತೆ, ಸಮತ್ವ ಮೊದಲಾದವುಗಳನ್ನು ದೃಢಪಡಿಸಬೇಕಾದುದು ಅನಿವಾರ್ಯವಾಗಿದೆ.

### ನಾಯಕತ್ವಗುಣ

ಹೊಸ ಸಹಸ್ರಮಾನದ ಸವಾಲುಗಳನ್ನು ಎದುರಿಸಲೂ, ಸಾಧ್ಯತೆಗಳನ್ನು ವಿನಿಯೋಗಿಸಲೂ ಸಮರ್ಥರಾದ ನಾಯಕರನ್ನು ಸೃಷ್ಟಿಸಲು ಯೋಗ್ಯವಾದ ಕಲಿಕಾ ತಂತ್ರಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ತರಗತಿಯ ಚಟುವಟಿಕೆಗಳಲ್ಲಿ ಎಲ್ಲ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ದೃಢಗೊಳಿಸಿ, ನಾಯಕತ್ವ ಗುಣಗಳನ್ನು ಅಭಿವೃದ್ಧಿ ಪಡಿಸುವ ಪರಿಸರವನ್ನು ಸೃಷ್ಟಿಸಬೇಕಾದ ಅಗತ್ಯವಿದೆ.

**ಜೀವನ ಕೌಶಲ್ಯ ಶಿಕ್ಷಣ**

ದೈನಂದಿನ ಬದುಕಿನಲ್ಲಿ ವ್ಯಕ್ತಿಗಳು ಅನುಭವಿಸುವ ಸಮಸ್ಯೆ ಹಾಗೂ ಸವಾಲುಗಳನ್ನು ಫಲಪ್ರದವಾಗಿ ಎದುರಿಸಲು ಸಹಾಯಕವಾದ ಸ್ವಭಾವಗಳನ್ನು ಗಳಿಸಿಕೊಳ್ಳುವ ಸಾಮರ್ಥ್ಯವೇ ಜೀವನ ಕೌಶಲ್ಯಗಳು. ತನ್ನನ್ನು ತಾನು ಅರಿತುಕೊಳ್ಳುವುದು, ಇತರರನ್ನು ಅರಿತುಕೊಳ್ಳುವುದು, ವಿಚಾರ ವಿನಿಮಯ ಸಾಮರ್ಥ್ಯ, ವ್ಯಕ್ತಿಗಳ ನಡುವಿನ ಸಂಬಂಧ, ಸೃಜನಶೀಲ ಚಿಂತನೆ, ವಿಮರ್ಶಾತ್ಮಕ ಚಿಂತನೆ, ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯ, ಸಮಸ್ಯೆಗಳ ಪರಿಹಾರ, ಭಾವನಾತ್ಮಕ ಸಮತೋಲನ, ಒತ್ತಡದ ನಿಭಾಯಿಸುವಿಕೆ ಮೊದಲಾದವು ಜೀವನಕೌಶಲ್ಯಗಳಾಗಿವೆ. ಮಕ್ಕಳ ಪರಿಸರವನ್ನು ಹೊಂದಿಕೊಂಡು ಈ ವಲಯಗಳ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕಾಗಿದೆ. ಬದುಕಿನಲ್ಲಿ ಆತ್ಮವಿಶ್ವಾಸದೊಂದಿಗೆ ಮುಂದುವರಿಯಲು ಇಂತಹ ಕೌಶಲ್ಯಗಳು ವಿದ್ಯಾರ್ಥಿಗೆ ಸಹಾಯಕವಾಗುತ್ತವೆ.

**ಪೌರಧರ್ಮ**

ರಾಷ್ಟ್ರಗಳು ಪ್ರಜೆಗಳಿಗೆ ಹೇಗೋ ಹಾಗೆಯೇ ಪ್ರಜೆಗಳು ರಾಷ್ಟ್ರಕ್ಕೆ ಸಲ್ಲಿಸಬೇಕಾದ ಕೆಲವು ಧರ್ಮಗಳೂ, ಕರ್ತವ್ಯಗಳೂ ಇವೆ. ಒಂದು ರಾಷ್ಟ್ರದ ಅಭಿವೃದ್ಧಿ ಎಂದರೆ ಮಾನವ ಸಂಪನ್ಮೂಲದ ಅಭಿವೃದ್ಧಿ ಎಂದು ತಿಳಿಯುವ ಈ ಕಾಲದಲ್ಲಿ ಪೌರಪ್ರಜ್ಞೆಯಿರುವ ಜನರನ್ನು ಸೃಷ್ಟಿಸುವುದು ಶಿಕ್ಷಣದ ಪ್ರಧಾನ ಕರ್ತವ್ಯವಾಗಿದೆ. ಸ್ವತಂತ್ರವಾದ ಸಮಾಜ ಸೃಷ್ಟಿಯೊಂದಿಗೆ ಜವಾಬ್ದಾರಿ ಮತ್ತು ಶಿಸ್ತಿನಿಂದ ಕೂಡಿದ ಪ್ರಜೆಗಳನ್ನು ಸೃಷ್ಟಿಸುವುದು ಶಿಕ್ಷಣ ವ್ಯವಸ್ಥೆಯ ಗುರಿಯಾಗಿದೆ.

**ಮಾನವ ಹಕ್ಕುಗಳು**

ಮಾನವ ಎಂಬ ನೆಲೆಯಲ್ಲಿ ಈ ಭೂಮಿಯಲ್ಲಿ ಗೌರವದಿಂದ ಬದುಕುವ ವ್ಯಕ್ತಿಯ ಹಕ್ಕುಗಳೇ ಮಾನವ ಹಕ್ಕುಗಳು. ಸಂಯುಕ್ತರಾಷ್ಟ್ರ ಸಂಘದ ಮಾನವ ಹಕ್ಕುಗಳ ಘೋಷಣೆಯಲ್ಲಿ ಸಾರ್ವತ್ರಿಕವಾಗಿ ಅಂಗೀಕಾರ ಲಭಿಸಿದ ಮಾನವ ಹಕ್ಕು ಗಳಿಗೆ ಪಠ್ಯಕ್ರಮದಲ್ಲಿಯೂ ಪಾಠವಿನಿಮಯ ಪ್ರಕ್ರಿಯೆಯಲ್ಲಿಯೂ ಸೂಕ್ತ ಪ್ರಾಧಾನ್ಯವನ್ನು ನೀಡಬೇಕಾಗಿದೆ.

**ಮಕ್ಕಳ ಹಕ್ಕುಗಳು**

ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸಬೇಕಾದ ಜವಾಬ್ದಾರಿ ನಮ್ಮ ಕರ್ತವ್ಯವಾಗಿದೆ.

**ಪ್ರಕೃತಿ – ಪ್ರಕೃತಿ ಸಂಪನ್ಮೂಲ ಸಂರಕ್ಷಣೆ, ಪರಿಸರ ಶುಚಿತ್ವ**

ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆ, ಪರಿಸರ ಶುಚಿತ್ವ, ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಕುರಿತು ಪ್ರಾಥಮಿಕ ದೃಷ್ಟಿಕೋನಗಳನ್ನು ಪ್ರಾಥಮಿಕ ತರಗತಿಗಳಿಂದಲೇ ಅಳವಡಿಸಿಕೊಳ್ಳಬೇಕು. ವ್ಯಕ್ತಿ ಶುಚಿತ್ವದಂತೆಯೇ ಪರಿಸರ ಶುಚಿತ್ವವೂ ಅಗತ್ಯ ಎಂಬ ಶುಚಿತ್ವದ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾಗಿದೆ. ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳು ಕೇವಲ ಮಾನವನಿಗೆ ಮಾತ್ರ ಸೇರಿದ್ದಲ್ಲ ಮತ್ತು ಪ್ರಕೃತಿಯ ಸಮತೋಲನವನ್ನು ಕಾಪಾಡದಿದ್ದರೆ ವ್ಯಾಪಕವಾದ ದುರಂತಗಳಿಗೆ ಕಾರಣವಾಗುವುದು ಎಂಬ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಪ್ರಾಕೃತಿಕ ಸಂಪನ್ಮೂಲ ಸಂರಕ್ಷಣೆ ಹಾಗೂ ಪರಿಸರ ಶುಚಿತ್ವವನ್ನು ಒಂದು ಜೀವನ ಮೌಲ್ಯವಾಗಿ ಮತ್ತು ಮನೋಧರ್ಮವಾಗಿ ಬದಲಾಯಿಸುವ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕು.

**ಶಾಂತಿಯ ಶಿಕ್ಷಣ**

ವೈಯುಕ್ತಿಕವಾಗಿಯೂ ಸಾಮಾಜಿಕವಾಗಿಯೂ ಶಾಂತಿ ಮತ್ತು ಸಮಾಧಾನವನ್ನು ಕಾಪಾಡುವ ಸಾಮರ್ಥ್ಯ ಮತ್ತು ಮನೋಭಾವಗಳನ್ನು ಬೆಳೆಸುವುದು ಶಾಂತಿ ಶಿಕ್ಷಣದ ಮುಖ್ಯ ಗುರಿ. ಸಂಘರ್ಷಗಳು ಹಾಗೂ ಅವುಗಳಿಗೆ ಕಾರಣವಾಗುವ ಹಿನ್ನೆಲೆಗಳನ್ನು ಬಿಟ್ಟು ಶಾಂತಿ, ಸೌಹಾರ್ದ ಹಾಗೂ ಸಮಾಧಾನದ ಸಾಧ್ಯತೆಗಳನ್ನು ಪಠ್ಯಕ್ರಮದ ವಿವಿಧ ವಿಷಯಗಳಲ್ಲಿ ಅಳವಡಿಸಬೇಕಾದುದು ಈ ಶಿಕ್ಷಣ ನೀತಿಯ ಅಗತ್ಯವಾಗಿದೆ.

## ಕಾನೂನು ಸಾಕ್ಷರತೆ

ಕಾನೂನು ಸಂಬಂಧವಾದ ತಿಳುವಳಿಕೆಯು ಪ್ರಜಾಪ್ರಭುತ್ವ ದೇಶದ ಪ್ರಜೆಗಳಿಗೆ ಅತಿ ಅಗತ್ಯವಾಗಿದೆ. ಕಾನೂನು ಸಾಕ್ಷರತೆಯನ್ನು ದೃಢಪಡಿಸುವ ಪಾಠಭಾಗಗಳನ್ನು ವಿಷಯಕ್ಕೆ ಹೊಂದಿಕೊಂಡು ಅಳವಡಿಸಬೇಕಾದುದು ಕಾಲದ ಅಗತ್ಯವಾಗಿದೆ. ಕಾನೂನು ಸಹಾಯ ವೇದಿಕೆ, ಕಾನೂನು ಕ್ಲಬ್‌ಗಳು, ಕಾನೂನು ಕ್ಲಿನಿಕ್‌ಗಳು, ಕಾನೂನು ತಿಳುವಳಿಕಾ ಶಿಬಿರಗಳು ಮೊದಲಾದ ವಿಭಿನ್ನ ಚಟುವಟಿಕೆಗಳನ್ನು ಆಯೋಜಿಸಬಹುದು.

## ಸೈಬರ್ ಅಪರಾಧಗಳ ಕುರಿತಾಗಿರುವ ತಿಳುವಳಿಕೆ

ಮಾಹಿತಿ ತಂತ್ರಜ್ಞಾನದ ಬಳಕೆಯಿರುವ ಸಮಕಾಲೀನ ಜಗತ್ತಿನಲ್ಲಿ ಪ್ರತಿದಿನವೆಂಬಂತೆ ಸೈಬರ್ ದುರುಪಯೋಗ ಮತ್ತು ಅಪರಾಧ ಚಟುವಟಿಕೆಗಳು ಹೆಚ್ಚುತ್ತಿವೆ. ಮಕ್ಕಳನ್ನು ಇಂತಹ ಚಟುವಟಿಕೆಗಳಿಂದ ದೂರವಿರಿಸುವ ತಿಳುವಳಿಕೆಯನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕು. ಇ–ಮೈಲ್, ಇಂಟರ್‌ನೆಟ್, ಸಾಮಾಜಿಕ ಜಾಲತಾಣಗಳು ಮೊದಲಾದವುಗಳ ಉಪಯೋಗವನ್ನು ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನೂ ಅವುಗಳ ಬಳಕೆಯ ಗುಣ ದೋಷಗಳನ್ನೂ ಮಕ್ಕಳಿಗೆ ಒದಗಿಸಬೇಕು.

ಸೈಬರ್ ಅಪರಾಧಗಳಿಗಿರುವ ಶಿಕ್ಷೆ ಹಾಗೂ ಇಂಟರ್‌ನೆಟ್ ಬಳಕೆಯ ನೈತಿಕತೆಯನ್ನು ಪಠ್ಯಕ್ರಮದ ಮೂಲಕ ತಿಳಿಸಬೇಕು.

## ಮಾಧ್ಯಮ ತಿಳುವಳಿಕೆ

ಪತ್ರಿಕೆ ಹಾಗೂ ದೃಶ್ಯಮಾಧ್ಯಮಗಳಿಗೆ ನಮ್ಮ ಸಮಾಜದಲ್ಲಿ ಬಹಳ ಪ್ರಾಧಾನ್ಯವಿದೆ. ದೃಶ್ಯಮಾಧ್ಯಮಗಳು ಮಕ್ಕಳ ಮೇಲೆ ಬೀರುವ ಪರಿಣಾಮ ಅಪಾರ. ಹೀಗೆ ಮಾಧ್ಯಮ ಸಂಬಂಧಿ ಮಾಹಿತಿಗಳನ್ನು ನೀಡುವ ಘಟಕಗಳನ್ನು ಪಠ್ಯಕ್ರಮದಲ್ಲಿ ಸೇರ್ಪಡೆಗೊಳಿಸುವುದು ಅಗತ್ಯವಾಗಿದೆ.

## ಶಾಶ್ವತ ಅಭಿವೃದ್ಧಿ ದೃಷ್ಟಿಕೋನ

ಈ ಭೂಮಿಯು ಮಾನವನಿಗೆ ಮಾತ್ರ ಸೇರಿದ್ದಲ್ಲ ಎಂಬ ಪರಿಸರ ಪ್ರಜ್ಞೆಯನ್ನು ಪಠ್ಯಕ್ರಮವು ಒದಗಿಸಬೇಕಾಗಿದೆ. ಪರಿಸರ ಸಂಬಂಧವಾದ ಸವಾಲುಗಳು, ಪರಿಸರ ನಾಶಕ್ಕೆ ಕಾರಣವಾಗುವ ಮಾನವನ ಕೈವಾಡಗಳು ಹಾಗೂ ಪರಿಸರವನ್ನು ದುರಂತಗಳಿಂದ ಪಾರುಮಾಡುವ ದಾರಿಗಳ ಕುರಿತು ಪ್ರಜ್ಞೆಯನ್ನು ಮೂಡಿಸಬೇಕಾದುದು ಇಂದಿನ ಅಗತ್ಯವಾಗಿದೆ. ಪರಿಸರ ಮತ್ತು ಅಭಿವೃದ್ಧಿಯನ್ನು ಸಂಯೋಜಿಸುವುದು ಹೇಗೆ ಎಂಬುದನ್ನೂ ಶಾಶ್ವತವಾದ ಅಭಿವೃದ್ಧಿಯ ದೃಷ್ಟಿಕೋನಗಳನ್ನೂ ಸಂಶೋಧನೆಗಳನ್ನೂ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಸಮಗ್ರವಾದ ಪರಿಸರ ಪ್ರಜ್ಞೆಯನ್ನು ಹುಟ್ಟಿಸುವುದು ಪಠ್ಯಕ್ರಮದ ಮುಖ್ಯ ಉದ್ದೇಶಗಳಲ್ಲಿ ಒಂದು.

## ಬಾಲ್ಯ ಶಿಕ್ಷಣ

ಮಕ್ಕಳ ಮನಶಾಸ್ತ್ರಜ್ಞರು, ಆರೋಗ್ಯ ಕಾರ್ಯಕರ್ತರು, ವೈದ್ಯರು ಹಾಗೂ ಅಧ್ಯಾಪಕರ ಸಂಯುಕ್ತ ಪರಿಶ್ರಮಗಳ ಮೂಲಕ ಬಾಲ್ಯ ಶಿಕ್ಷಣಕ್ಕೆ ಯೋಗ್ಯವಾದ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಪರಿಗಣಿಸಬೇಕು. ವಿದ್ಯಾರ್ಥಿಗಳ ಆರೋಗ್ಯ, ಶುಚಿತ್ವ ಇವುಗಳಿಗೆ ಸಂಬಂಧಿಸಿದ ಸಂಶಯಗಳನ್ನು ಪರಿಹರಿಸಲು ವೈಜ್ಞಾನಿಕವಾದ ಮಾಹಿತಿಗಳನ್ನು ಪರಿಗಣಿಸುವುದು ಅಗತ್ಯವಾಗಿದೆ.

## ಉಪಭೋಗ ಸಂಸ್ಕೃತಿ–ದುಷ್ಪರಿಣಾಮಗಳು

ಉಪಭೋಗ ಸಂಸ್ಕೃತಿಯ ದುಷ್ಪರಿಣಾಮಗಳ ಕುರಿತಾದ ಸತ್ಯಾಂಶಗಳನ್ನು ಪ್ರಾಥಮಿಕ ಶಾಲಾ ಮಟ್ಟದಿಂದಲೇ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಬಳಕೆದಾರ ಎಂಬ ನೆಲೆಯಲ್ಲಿ ನಮ್ಮ ಹಕ್ಕುಗಳನ್ನೂ, ಬಳಕೆದಾರರಿಗೆ ನೆರವಾಗುವ ಕಾನೂನುಗಳನ್ನೂ ಮಕ್ಕಳಿಗೆ ತಿಳಿಸಿಕೊಡಬೇಕು.

## ಮಾದಕ ದ್ರವ್ಯ ವಿರೋಧಿ ನಿಲುವು

ಮದ್ಯ, ಮಾದಕ ವಸ್ತುಗಳು, ಹೊಗೆ ಸೊಪ್ಪು ಹಾಗೂ ಇತರ ಮಾದಕ ದ್ರವ್ಯಗಳ ಬಳಕೆಯು ಹೊಸ ತಲೆಮಾರಿನ ಆರೋಗ್ಯವನ್ನು ಕೆಡಿಸುತ್ತದೆ ಎಂಬ ಅರಿವು ನಮ್ಮದಾಗಬೇಕು. ಮುಂದಿನ ತಲೆಮಾರನ್ನು ಇವುಗಳಿಂದ ಮುಕ್ತಗೊಳಿಸಿ ರಕ್ಷಿಸಬೇಕು. ಅದಕ್ಕಾಗಿ ಮಾದಕದ್ರವ್ಯಗಳ ಉಪಯೋಗದಿಂದ ಉಂಟಾಗುವ ದೈಹಿಕ ಮಾನಸಿಕ ತೊಂದರೆಗಳನ್ನು ತಿಳಿಸುವ ಚಿತ್ರಗಳು, ಲಘು ಬರಹಗಳು, ದೃಶ್ಯಗಳನ್ನು ಪಠ್ಯಕ್ರಮದ ವಿಷಯಗಳಲ್ಲಿ ಅಳವಡಿಸಬೇಕು. ಮಾದಕ ದ್ರವ್ಯ ವಿರೋಧಿ ನಿಲುವನ್ನು ಸೃಷ್ಟಿಸುವುದು ಇವುಗಳ ಮುಖ್ಯ ಗುರಿಯಾಗಿರಬೇಕು.

### ಲಿಂಗ ಸಮಾನತೆ

ಪಠ್ಯಕ್ರಮವು ಲಿಂಗ ಸಮಾನತೆಯನ್ನು ದೃಢಪಡಿಸುವಂತಿರಬೇಕು. ಗಂಡು – ಹೆಣ್ಣು ಎಂಬ ಭೇದಭಾವಗಳು ಪಠ್ಯಕ್ರಮದಲ್ಲಿ ನುಸುಳಬಾರದು. ಪಾಠಪುಸ್ತಕಗಳ ಚಿತ್ರಗಳಲ್ಲಿ ಕೂಡಾ ಲಿಂಗ ಸಮಾನತೆಯ ದೃಷ್ಟಿಕೋನವಿರಬೇಕು. ಕಲಿಕಾ ಚಟುವಟಿಕೆಗಳ ಸಂದರ್ಭಗಳಲ್ಲಿಯೂ ಈ ಲಿಂಗ ಸಮಾನತೆಯನ್ನು ದೃಢಪಡಿಸಬೇಕಾದುದು ಅಧ್ಯಾಪಕರ ಕರ್ತವ್ಯವಾಗಿದೆ.

### ಮಿತವ್ಯಯ ಗುಣ

ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಿತವ್ಯಯ ಗುಣವನ್ನು ಮಕ್ಕಳಿಗೆ ಕಲಿಸಬೇಕು. ಮಿತವ್ಯಯ ಗುಣದ ಅಗತ್ಯ ಮತ್ತು ಮಹತ್ವವನ್ನು ತಿಳಿಸಿಕೊಡಬೇಕು. ಮಿತವ್ಯಯವನ್ನು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ತಿಳಿಸಿಕೊಡಬೇಕು.

### ರಸ್ತೆ ಸುರಕ್ಷೆ

ರಸ್ತೆಯಲ್ಲಿ ಪಾಲಿಸಬೇಕಾದ ನಿಮಯಗಳು, ರಸ್ತೆ ಅಪಘಾತಗಳನ್ನು ತಪ್ಪಿಸಲು ಇರುವ ಪ್ರಾಯೋಗಿಕ ಸೂಚನೆಗಳು, ಚಟುವಟಿಕೆಗಳು ಮೊದಲಾದವು ರಸ್ತೆ ಸುರಕ್ಷೆಯ ಘಟಕಗಳಾಗಿವೆ. ರಸ್ತೆಯು ಸಾರ್ವಜನಿಕ ಸ್ಥಳವೆಂದೂ, ನಮ್ಮ ಹಾಗೆ ಇತರರಿಗೂ ರಸ್ತೆಯನ್ನು ಬಳಸುವ ಸ್ವಾತಂತ್ರ್ಯವಿದೆ ಎಂದೂ ಪೌರಪ್ರಜ್ಞೆಯನ್ನು ಹುಟ್ಟಿಸಬೇಕು. ರಸ್ತೆ ಸುರಕ್ಷತೆಯ ಸಂಬಂಧವಾಗಿ ಚಟುವಟಿಕೆಗಳಿಗೆ ಪ್ರಾಧಾನ್ಯ ನೀಡಬೇಕು.

ಪಠ್ಯಕ್ರಮದ ಸ್ವಾಭಾವಿಕವಾದ ವಿನಿಮಯದಲ್ಲಿ ಈ ಘಟಕಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಕಲಿಕಾ ಸಾಧನೆಗಳನ್ನು ದೃಢಪಡಿಸಬೇಕು. ವಿವಿಧ ವಿಷಯಗಳ ಒಳ ಹೂರಣದ ಆಶಯಗಳ ಆಯ್ಕೆಯಲ್ಲಿಯೂ ಕಲಿಕಾ ಚಟುವಟಿಕೆಗಳನ್ನು ಕ್ರಮೀಕರಿಸುವಾಗಲೂ ಸಾಕಷ್ಟು ಪರಿಗಣನೆಯನ್ನು ನೀಡಬೇಕಾಗಿದೆ. ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಳಲ್ಲಿ ಸಾಗುವಾಗ ಇಂತಹ ಆಶಯಗಳಿಗೆ ಸಂಬಂಧಿಸಿದ ತಿಳುವಳಿಕೆ, ಕೌಶಲ್ಯ, ಮನೋಭಾವ ಇವುಗಳಿಗೆ ಒತ್ತು ನೀಡಬೇಕು. ನಿರಂತರ ಮೌಲ್ಯಮಾಪನ ಪ್ರಕ್ರಿಯೆಗಳ ಮೂಲಕ ಈ ಗುರಿಗಳನ್ನು ಈಡೇರಿಸಲು ಸಾಧ್ಯವಾಗಿದೆಯೇ ಎಂದು ಪರಿಶೋಧಿಸಲು ಸಾಧ್ಯವಾಗಬೇಕು. ವಿವಿಧ ಕ್ಲಬ್‌ಗಳ ಚಟುವಟಿಕೆಗಳು, SPC, NCC, Scouts & Guides, JRC, ವಿದ್ಯಾರಂಗ ಕಲಾ ಸಾಹಿತ್ಯವೇದಿಕೆ, ಗಾಂಧೀದರ್ಶನ ಮೊದಲಾದ ವ್ಯವಸ್ಥೆಗಳು ಮೌಲ್ಯಗಳನ್ನೂ ಮನೋಧರ್ಮಗಳನ್ನೂ ಕಾಳಜಿಯನ್ನೂ ಬೆಳೆಸುವ ವೇದಿಕೆಗಳಾಗಬೇಕು.

## 1.11 ಹಕ್ಕು ಆಧಾರಿತ ಶಿಕ್ಷಣ (Right Based Education)

ಮಕ್ಕಳ ಹಕ್ಕುಗಳನ್ನು ನಿರ್ಣಯಿಸಿ ಜಗತ್ತಿನಾದ್ಯಂತ ಅನುಷ್ಠಾನಗೊಳಿಸಲು ಯುನೆಸ್ಕೋ ನೇತೃತ್ವ ವಹಿಸಿದೆ. ಈ ಹಿನ್ನೆಲೆಯಲ್ಲಿ ವಿವಿಧ ದೇಶಗಳಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಅನೇಕ ಕಾನೂನುಗಳನ್ನು ರಚಿಸಲಾಗಿದೆ. ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣ ಹಕ್ಕು ನಿಯಮ– 2009 ಕಾರ್ಯಗತವಾಗಿರುವುದು ಈ ನಿಟ್ಟಿನಲ್ಲಿ ಒಂದು ಮೈಲಿಗಲ್ಲು. ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸುವ ಜವಾಬ್ದಾರಿಯು ಹಿರಿಯರಾದ ನಮ್ಮ ಕರ್ತವ್ಯವಾಗಿದೆ. ಶಿಕ್ಷಣ ಹಕ್ಕುಗಳ ಕುರಿತು ಹೇಳುವಾಗ

ಅವುಗಳನ್ನು ಮೂರು ಮುಖ್ಯ ಘಟಕಗಳಾಗಿ ವಿಂಗಡಿಸಬಹುದು.

- ಭಾಗವಹಿಸುವಿಕೆ (Participation)
- ಲಭ್ಯತೆ (Provision)
- ಸಂರಕ್ಷಣೆ (Protection)

**ಭಾಗವಹಿಸುವಿಕೆ (Participation)**

- ಮಕ್ಕಳಿಗೆ ಸಂಬಂಧಿಸಿದ ಎಲ್ಲ ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯವನ್ನು ಕೇಳುತ್ತಾರೆ.
- ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯಕ್ಕೆ ಮುಖ್ಯ ಪರಿಗಣನೆ ಇದೆ.
- ನನ್ನ ಸಾಮರ್ಥ್ಯ ಹಾಗೂ ಮಿತಿಗಳಿಗೆ ಹೊಂದಿಕೊಂಡು ನೀಡಲಾಗುವ ಚಟುವಟಿಕೆಗಳಲ್ಲಿ ಭಾಗವಹಿಸಲು ನನಗೆ ಅವಕಾಶ ಲಭಿಸುತ್ತದೆ.
- ನನ್ನ ಸಾಮರ್ಥ್ಯಗಳನ್ನು ಪೋಷಿಸಲೂ ಮಿತಿಗಳನ್ನು ದಾಟಲೂ ಯೋಗ್ಯವಾದ ಕಲಿಕಾ ಪ್ರಕ್ರಿಯೆಗಳ ಮೂಲಕ ಸಾಗಲು ಸಾಧ್ಯವಾಗುತ್ತದೆ.
- ತರಗತಿಯಲ್ಲಿ ನಡೆಯುವ ಚಟುವಟಿಕೆಗಳಲ್ಲಿ ನನಗೂ ಸಹಪಾಠಿಗಳಿಗೂ ಕ್ರಿಯಾಶೀಲವಾದ ಭಾಗವಹಿಸುವಿಕೆ ಲಭಿಸುತ್ತಿದೆ.
- ನನ್ನ ಸಾಮರ್ಥ್ಯಗಳನ್ನು ಪ್ರದರ್ಶಿಸಲು ನನಗೆ ಅವಕಾಶ ಸಿಗುತ್ತದೆ.

**ಲಭ್ಯತೆ (Provision)**

- ಸರಿಯಾದ ಶೈಕ್ಷಣಿಕ ಯೋಗ್ಯತೆಯಿರುವ, ಜ್ಞಾನವನ್ನು ಕಾಲಕ್ಕನುಸರಿಸಿ ನವೀಕರಿಸುವ ಅಧ್ಯಾಪಕರ ಸೇವೆ ನನಗೆ ಲಭಿಸುತ್ತಿದೆ.
- ನಿರ್ದಿಷ್ಟ ಸಮಯದಲ್ಲಿ ಕಲಿಕಾನುಭವಗಳು ಸರಿಯಾದ ಕಾಲಕ್ಕೆ ಸಿಗುತ್ತಿವೆ.
- ದೈಹಿಕ, ಮಾನಸಿಕ ಬೆಳವಣಿಗೆಗೆ ಪೂರಕವಾಗಿರುವ ತರಗತಿ ಪರಿಸರ ನನಗೆ ಲಭಿಸುತ್ತಿದೆ.
- ಕಲಿಕಾ ಚಟುವಟಿಕೆಗಳಿಗೆ ಅಗತ್ಯವಾದ ಕಲಿಕೋಪಕರಣಗಳನ್ನು ಯಥಾಕಾಲಕ್ಕೆ ಒದಗಿಸಿಕೊಡಲು ನನ್ನ ಅಧ್ಯಾಪಕರಿಗೆ ಸಾಧ್ಯವಾಗುತ್ತದೆ.
- ಕಲೆ ಮತ್ತು ಕ್ರೀಡೆಯ ಬೆಳವಣಿಗೆಗೆ ಅಗತ್ಯವಾದ ಉಪಕರಣಗಳೂ ಅವಕಾಶಗಳೂ ನನಗೆ ಸಿಗುತ್ತಿವೆ.

**RTE 2009 ಹೀಗೆ ಹೇಳುತ್ತದೆ**

- 1 ರಿಂದ 5 ರ ವರೆಗಿನ ತರಗತಿಗಳಲ್ಲಿ ಕಲಿಯುವ ಮಕ್ಕಳಿಗೆ 200 ಕಲಿಕೆಯ ದಿವಸಗಳೂ 800 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.
- 6 ರಿಂದ 8 ರ ವರೆಗಿನ ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ 220 ಕಲಿಕೆಯ ದಿವಸಗಳೂ 1000 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.

**ಸಂರಕ್ಷಣೆ (Protection)**

- ಶಾಲೆಯಲ್ಲಿ ಹಾಗೂ ಹೊರಗೆ ಯಾವುದೇ ಭೇದಭಾವವನ್ನು ನಾನು ಅನುಭವಿಸುವುದಿಲ್ಲ.
- ನನ್ನನ್ನು ಯಾರೂ ಕೂಡಾ ಯಾವುದೇ ರೀತಿಯಲ್ಲಿ ಕಡೆಗಣಿಸುವುದಿಲ್ಲ.
- ಯಾರೂ ಕೂಡಾ ದೈಹಿಕ ಅಥವಾ ಮಾನಸಿಕ ದೌರ್ಜನ್ಯವೆಸಗುವುದಿಲ್ಲ.
- ಅಧ್ಯಾಪಕರಲ್ಲಿ ನಿರ್ಭೀತಿಯಿಂದ ವ್ಯವಹರಿಸಲು ನನಗೆ ಸಾಧ್ಯವಾಗುತ್ತದೆ.
- ಮಗುವಾದರೂ ನನಗೆ ಖಾಸಗಿತನವಿದೆ. ನನ್ನನ್ನು ಎಲ್ಲರೂ ಅಂಗೀಕರಿಸುತ್ತಾರೆ.
- ಶಾಲೆಯಲ್ಲಿಯೂ ಮನೆಯಲ್ಲಿಯೂ ನಾನು ಸುರಕ್ಷಿತನಾಗಿದ್ದೇನೆ ಎಂಬ ಭರವಸೆ ನನಗಿದೆ.

### ಕೇರಳ ರಾಜ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ

2002 ಮೇ ತಿಂಗಳಲ್ಲಿ ಸೇರಿದ ಸಂಯುಕ್ತ ರಾಷ್ಟ್ರ ಸಭೆಯ ಮಕ್ಕಳಿಗಾಗಿರುವ ವಿಶೇಷ ಸಮ್ಮೇಳನವು 'ಮಕ್ಕಳಿಗೆ ಯೋಗ್ಯವಾದ ಒಂದು ಜಗತ್ತು' ಎಂಬ ಶೀರ್ಷಿಕೆಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಿತು. ಇದರ ಆಧಾರದಲ್ಲಿ ಕೇಂದ್ರ ಸರಕಾರವು ನಿರ್ಮಿಸಿದ 2005ರ ಬಾಲಕರ ಹಕ್ಕು ಸಂರಕ್ಷಣ ಆಯೋಗ ಕಾಯಿದೆಯ ಹಾಗೂ 2012ರ ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ನಿಯಮಗಳ ಆಧಾರದಲ್ಲಿ 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಆಯೋಗ' ಕಾರ್ಯಾಚರಿಸುತ್ತಿದೆ. ನಮ್ಮ ಸಂವಿಧಾನವು ಹೇಳುವ ಮೂಲಭೂತ ಹಕ್ಕುಗಳನ್ನು ಹಾಗೂ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದು ಆಯೋಗದ ಕೆಲಸವಾಗಿದೆ.

ಈ ಮಕ್ಕಳ ಹಕ್ಕುಗಳನ್ನು ದೃಢಪಡಿಸಲು ತಾನು ಏನು ಮಾಡಿದೆನೆಂದೂ ಇನ್ನು ಏನು ಮಾಡಬಹುದೆಂದೂ ಪ್ರತಿಯೊಬ್ಬ ಅಧ್ಯಾಪಕನೂ ಯೋಚಿಸಬೇಕಾಗಿದೆ.

## 1.12 ಮೆಂಟರಿಂಗ್

ರಾಷ್ಟ್ರೀಯ ಶಿಕ್ಷಣ ಹಕ್ಕು ಕಾಯ್ದೆಯು ಅಧ್ಯಾಪಕ/ಅಧ್ಯಾಪಿಕೆಯನ್ನು ಮೆಂಟರ್ (mentor) ಎಂಬುದಾಗಿ ಪರಿಗಣಿಸುತ್ತದೆ. ಸಮಗ್ರ ಶಾಲಾ ಅಭಿವೃದ್ಧಿ ವಲಯದಲ್ಲಿ ಮೆಂಟರಿಂಗ್‌ಗೆ ಬಹಳಷ್ಟು ಪ್ರಾಧಾನ್ಯವಿದೆ. ಕಲಿಕೆಯ ಸಾಧನೆಗಳನ್ನು ರುಜುವಾತುಪಡಿಸಲು ಸಮಗ್ರವಾದ ಮಾರ್ಗಸೂಚಿಗಳು ಅತಿ ಅವಶ್ಯಕ.

ಶಿಕ್ಷಣ ಪ್ರಕ್ರಿಯೆಯ ಮುಖ್ಯ ಘಟಕವಾದ ಅಧ್ಯಾಪಕ – ವಿದ್ಯಾರ್ಥಿ ಸಂಬಂಧದಲ್ಲಿ ಇಂದು ಬಹಳಷ್ಟು ವ್ಯತ್ಯಾಸಗಳಾಗಿವೆ. ವಿದ್ಯಾರ್ಥಿಗೆ ಜ್ಞಾನವನ್ನು ಹಸ್ತಾಂತರಿಸುವ ವ್ಯಕ್ತಿ ಮಾತ್ರವಲ್ಲದೆ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಗಳಿಸಲಿರುವ ವೈವಿಧ್ಯಪೂರ್ಣ ಅವಕಾಶಗಳನ್ನು ಒದಗಿಸಿಕೊಡುವ ವ್ಯಕ್ತಿಯಾಗಿಯೂ ಅಧ್ಯಾಪಕ/ಅಧ್ಯಾಪಿಕೆ ಕಾರ್ಯನಿರ್ವಹಿಸಬೇಕಾಗಿದೆ.

ಮನೆಯನ್ನು ಹೊರತುಪಡಿಸಿದರೆ ವಿದ್ಯಾರ್ಥಿಗೆ ಶಾಲೆ ಎಂಬುದು ಮತ್ತೊಂದು ಮನೆಯಿದ್ದಂತೆ. ಶಾಲೆ ಮನೆಯೇ ಆದಾಗ ವಿದ್ಯಾರ್ಥಿಗೆ ಅಧ್ಯಾಪಕ ವೃಂದವು ಮನೆಯ ಸದಸ್ಯರೇ ಆಗುತ್ತಾರೆ. ವಿದ್ಯಾರ್ಥಿಗೆ ಮನೆಯಿಂದ ಲಭಿಸುವ ಪ್ರೀತಿ, ಕಾಳಜಿ, ರಕ್ಷಣೆ, ಅಂಗೀಕಾರ ಮುಂತಾದವುಗಳು ಗರಿಷ್ಠ ಅಥವಾ ಕನಿಷ್ಠ ಮಟ್ಟದಲ್ಲಿ ಲಭಿಸುತ್ತಿವೆ ಎಂಬುದನ್ನು ಪ್ರತಿಯೊಬ್ಬ ಅಧ್ಯಾಪಕ ಅಥವಾ ಅಧ್ಯಾಪಿಕೆ ಮನದಟ್ಟು ಮಾಡಿಕೊಳ್ಳಬೇಕು. ಇದನ್ನು ತಿಳಿದಾದ ಬಳಿಕ ಪ್ರತಿಯೊಂದು ಮಗುವಿಗೂ ಅವಶ್ಯಕವಾದ ರೀತಿಯಲ್ಲಿ ಇವುಗಳನ್ನು ನೀಡುವ ಹೊಣೆಗಾರಿಕೆ ಅಧ್ಯಾಪಕರಿಗಿದೆ. ಹೀಗಾದಾಗ ಮಾತ್ರ ಶಾಲೆಯೂ ಮನೆಯೆನಿಸಿಕೊಳ್ಳುವುದು.

ಪ್ರತಿಯೊಂದು ಮಗುವಿನ ವ್ಯಕ್ತಿಗತವಾದ ಮತ್ತು ಕೌಟುಂಬಿಕವಾದ ಹಿನ್ನೆಲೆಗಳನ್ನು ಅರ್ಥಮಾಡಿಕೊಳ್ಳಲು ಅಧ್ಯಾಪಕರು ಈ ಕೆಳಗಿನ ವಿಷಯಗಳನ್ನು ಗಮನಿಸಬೇಕಾಗುತ್ತದೆ.

- ಗೃಹ ಸಂದರ್ಶನ
- ಹೆತ್ತವರೊಂದಿಗಿನ ಆಶಯ ವಿನಿಮಯ
- ಮಗುವಿನ ನಿರಂತರ ನಿರೀಕ್ಷಣೆ

ಹೀಗೆ ಮಗುವಿಗೆ ಪ್ರೀತಿ, ಅಂಗೀಕಾರ ಮತ್ತು ಸಂರಕ್ಷಣೆ ಇತ್ಯಾದಿಗಳನ್ನು ನೀಡಿ, ನಾವು ಅಧ್ಯಾಪಕರು ಮಗುವಿನ ಸಹರಕ್ಷಕರಾಗಿ ಜವಾಬ್ದಾರಿ ವಹಿಸಿಕೊಂಡಾಗ ಮಾತ್ರ ಹೊಸ ಕಾಲಮಾನದ ಅಧ್ಯಾಪಕ/ಅಧ್ಯಾಪಿಕೆಯಾಗಿ ನಾವು ಗುರುತಿಸಿಕೊಳ್ಳಬಹುದು.

ಮೆಂಟರಿಂಗ್ ಮೂಲಕ ಮಾರ್ಗದರ್ಶನ, ಸಲಹೆ, ಬೆಂಬಲ, ಜ್ಞಾನವನ್ನು ಉತ್ತಮಪಡಿಸಲು ಬೇಕಾದ ಅವಕಾಶ ಮುಂತಾದುವುಗಳನ್ನು ಅಧ್ಯಾಪಕರು ಮಗುವಿಗೆ ಒದಗಿಸಿಕೊಡುತ್ತಾರೆ. ಅನುಭವಿಯಾದ ನೇತಾರ ಎಂಬ ನೆಲೆಯಲ್ಲಿಯೂ ಅನುಕರಣೀಯ ಆದರ್ಶ ವ್ಯಕ್ತಿ ಎಂಬ ನೆಲೆಯಲ್ಲಿಯೂ ಮೆಂಟರಿಂಗ್‌ನ ಕಾರ್ಯಚಟುವಟಿಕೆಗಳು ಮುಂದುವರಿಯಬೇಕು. ಬೋಧನೆಗೆ ಬೇಕಾದ ಸೂಚನೆಗಳು, ಕೌನ್ಸಿಲಿಂಗ್ ಇತ್ಯಾದಿಗಳೆಲ್ಲ ಇದರ ಭಾಗಗಳಾಗಿವೆ. ವಿದ್ಯಾರ್ಥಿಯ ಒಳಗೆ ಸುಪ್ತವಾಗಿರುವ ಪ್ರತಿಭೆಯನ್ನು ಹೊರಗೆ ತರಲು ಸಮರ್ಥ ಮೆಂಟರ್‌ನಿಂದ ಮಾತ್ರ ಸಾಧ್ಯ.

**ಮೆಂಟರಿಂಗ್ ಮೂಲಕ**

- ಅಧ್ಯಾಪಕ ಹಾಗೂ ವಿದ್ಯಾರ್ಥಿಗೆ ಉತ್ತಮ ಶಿಕ್ಷಣ ಅನುಭವಗಳು ಲಭಿಸುತ್ತವೆ.
- ಅಧ್ಯಾಪಕ ಹಾಗೂ ವಿದ್ಯಾರ್ಥಿಯ ಜ್ಞಾನ ವಲಯ ವಿಸ್ತಾರಗೊಳ್ಳುತ್ತದೆ.
- ವಿದ್ಯಾರ್ಥಿ ಮತ್ತು ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುತ್ತದೆ.
- ವಿದ್ಯಾರ್ಥಿಯ ಕಲಿಕೆಯಲ್ಲಿ ಪ್ರಗತಿ ಹಾಗೂ ವ್ಯಕ್ತಿತ್ವ ವಿಕಾಸ ಉಂಟಾಗುತ್ತದೆ.
- ಚಟುವಟಿಕೆಗಳ ಮೂಲಕ ಸಾಮಾಜಿಕ ಪ್ರಜ್ಞೆ ಬೆಳೆಸಲು ಮತ್ತು ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುವುದು.
- ಹೆತ್ತವರು ಹಾಗೂ ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುವುದಲ್ಲದೆ ವಿದ್ಯಾರ್ಥಿಯ ಕಲಿಕೆಯ ಗುಣಮಟ್ಟದ ಕುರಿತು ತಿಳಿಯಲು ಸಾಧ್ಯವಾಗುತ್ತದೆ.
- ಕಲೆ, ಕ್ರೀಡೆ, ಆರೋಗ್ಯ, ವೃತ್ತಿ ಪರಿಚಯ ಮೊದಲಾದ ಕಲಿಕಾ ವಲಯಗಳಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಮತ್ತು ಮೌಲ್ಯಮಾಪನವನ್ನು ಗಟ್ಟಿಗೊಳಿಸುತ್ತದೆ.

ಮೆಂಟರಿಂಗ್‌ಗೆ ಸಾಧ್ಯವಿರುವ ರೀತಿಯಲ್ಲಿ ನಕಾಶೆಗಳನ್ನು ರೂಪಿಸಿ, ಇದೊಂದು ಪರಿಹಾರ ಬೋಧನೆ ಪ್ರಕ್ರಿಯೆಯಾಗಿಯೂ ನಿರಂತರ ಮೌಲ್ಯನಿರ್ಣಯ ಮತ್ತು ವಿದ್ಯಾರ್ಥಿಯ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕವಾಗುವ ಪ್ರಕ್ರಿಯೆಯನ್ನಾಗಿಯೂ ರೂಪುಗೊಳಿಸಬೇಕಾಗಿದೆ.

ಶಾಲೆಯ ಎಲ್ಲಾ ಅಧ್ಯಾಪಕರನ್ನು 'ಮೆಂಟರ್ಸ್' ಎಂಬುದಾಗಿಯೂ ವಿದ್ಯಾರ್ಥಿಗಳನ್ನು 'ಮೆಂಟಿ' ಗಳನ್ನಾಗಿಯೂ ಪರಿಗಣಿಸುವ ಮೂಲಕ ಮೆಂಟರಿಂಗ್ ರೂಪುಗೊಳ್ಳಬೇಕು. ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಸಣ್ಣ ಸಣ್ಣ ಗುಂಪುಗಳೆಂದು ಭಾವಿಸಿಕೊಂಡು, ಪ್ರತಿಯೊಂದು ಗುಂಪಿನ ಪ್ರಗತಿಯನ್ನು ಸಮರ್ಪಕ ರೀತಿಯಲ್ಲಿ ತಿಳಿಯಲು ಆಯಾ ತರಗತಿಯಲ್ಲಿ ಕಲಿಸುವ ಅಧ್ಯಾಪಕರಿಗೆ ಗುಂಪಿನ ಜವಾಬ್ದಾರಿಯನ್ನು ನೀಡಬಹುದು.

## 1.13 ಅಧ್ಯಾಪಕರು ಪಾಲಿಸಬೇಕಾದ ಪ್ರಮುಖ ವೃತ್ತಿಪರ ನೀತಿಸಂಹಿತೆ

(Code of Professional Ethics for School Teachers)

### 1. ವಿದ್ಯಾರ್ಥಿಗಳೊಂದಿಗಿರುವ ಜವಾಬ್ದಾರಿಗಳು

1.1 ಎಲ್ಲ ವಿದ್ಯಾರ್ಥಿಗಳೊಂದಿಗೆ ಪ್ರೀತಿ, ವಾತ್ಸಲ್ಯದಿಂದ ವರ್ತಿಸುವುದು.

- ಎಲ್ಲ ವಿದ್ಯಾರ್ಥಿಗಳೊಂದಿಗೆ ಸಮಾನ ರೀತಿಯಿಂದ ವರ್ತಿಸುವುದು.
- ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳಿಗೆ ವಿಶೇಷ ಪರಿಗಣನೆ ನೀಡುವುದು.
- ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಆಸಕ್ತಿ ಮುಂತಾದುವುಗಳನ್ನು ಮೂಡಿಸುವ ರೀತಿಯಲ್ಲಿ ವ್ಯವಹರಿಸುವುದು.

1.2 ಜಾತಿ, ಮತ, ವರ್ಗ, ವರ್ಣ, ಆರ್ಥಿಕ ಸ್ಥಿತಿಗತಿ, ಭಾಷೆ, ಲಿಂಗ, ಜನ್ಮಸ್ಥಳ ಎಂಬೀ ವಿಷಯಗಳಲ್ಲಿ ಭೇದಭಾವವಿಲ್ಲದೆ, ನಿಷ್ಪಕ್ಷಪಾತ ಹಾಗೂ ನ್ಯಾಯಯುತವಾದ ಮೌಲ್ಯಗಳನ್ನು ಗೌರವಿಸುವುದು.

- ಪ್ರಜಾಪ್ರಭುತ್ವ ತತ್ವಸಿದ್ಧಾಂತಗಳಲ್ಲಿ, ಸಹಿಷ್ಣುತೆಯ ವಿಷಯಗಳಲ್ಲಿ, ಸಾಮಾಜಿಕ ವಿಚಾರಗಳಲ್ಲಿ ಅಧ್ಯಾಪಕರಿಗಿರುವ ನಂಬಿಕೆ ಮತ್ತು ವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿಯೂ ಮೂಡಿಸುವುದು.
- ಅಧ್ಯಾಪಕರ ವ್ಯಕ್ತಿಗತವಾದ ನಂಬಿಕೆಗಳು ಸಂವಿಧಾನದ ತತ್ವಗಳಿಗೆ ವಿರುದ್ಧವಾದರೆ ಅದು ಶಾಲೆಯ ಒಟ್ಟು ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಬಹುದು.

1.3 ವಿದ್ಯಾರ್ಥಿಯ ದೈಹಿಕ, ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಸದಾಚಾರಗಳ ಬೆಳವಣಿಗೆಗಳಿಗೆ ಸೂಕ್ತ ವಾತಾವರಣದ ಸೃಷ್ಟಿ.

- ಶಾಲಾ ಶಿಕ್ಷಣವು ವಿದ್ಯಾರ್ಥಿಯ ಶಾರೀರಿಕ ಮತ್ತು ಬೌದ್ಧಿಕವಾದ ಕೌಶಲ್ಯಗಳನ್ನು ಪರಿಪೂರ್ಣತೆಯತ್ತ ಕೊಂಡೊಯ್ಯುವ ಕಾಲಘಟ್ಟವಾಗಿದೆ.
- ಶಿಕ್ಷಣವು ವಿದ್ಯಾರ್ಥಿಯ ಬೌದ್ಧಿಕ ಬೆಳವಣಿಗೆಗೆ ಮಾತ್ರ ಸೀಮಿತವಾಗಿರಬಾರದು.
- ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಯು ಶಿಕ್ಷಣದ ಮುಖ್ಯ ಲಕ್ಷ್ಯವಾಗಿರಬೇಕು.

1.4 ಶಾಲಾ ಶಿಕ್ಷಣದ ಎಲ್ಲಾ ಘಟ್ಟಗಳಲ್ಲಿಯೂ ವಿದ್ಯಾರ್ಥಿಯ ವ್ಯಕ್ತಿತ್ವವು ಗೌರವಿಸಲ್ಪಡಬೇಕು.

- ವ್ಯಕ್ತಿ ಎಂಬ ನೆಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಿರುವ ಪ್ರಜಾಪ್ರಭುತ್ವ ಪರವಾದ ಹಕ್ಕುಗಳು ಹಾಗೂ ಸ್ಥಾನಮಾನಗಳನ್ನು ಗಮನಿಸಬೇಕು.
- ಅಧ್ಯಾಪಿಕೆಯ ಭಾಗದಿಂದ ಬರಬಹುದಾದ ಯಾವುದೇ ಪ್ರತಿಕೂಲ ಅಭಿಪ್ರಾಯಗಳು ವಿದ್ಯಾರ್ಥಿಯ ಸ್ವಾಭಿಮಾನವನ್ನು ಘಾಸಿಗೊಳಿಸುವುದಲ್ಲದೆ ಅವು ಆತನ ಕಲಿಕೆಯ ಮೇಲೆ ದುಷ್ಪರಿಣಾಮವನ್ನುಂಟು ಮಾಡಬಹುದು.
- ಶಾಲೆಯ ಎಲ್ಲಾ ಕಾರ್ಯಚಟುಟಿಕೆಗಳಲ್ಲಿಯೂ ಎಲ್ಲ ವಿದ್ಯಾರ್ಥಿಗಳ ಸಕ್ರಿಯವಾದ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡಬೇಕು.
- ಸಂಯುಕ್ತ ರಾಷ್ಟ್ರ ಸಂಘ ಅಂಗೀಕರಿಸಿದ ಹಾಗೂ ಭಾರತವು ಒಪ್ಪಿರುವ ಮತ್ತು ಪಾಲಿಸಿಕೊಂಡು ಬಂದಿರುವ ಮಕ್ಕಳ ಹಕ್ಕು ಕಾಯ್ದೆಗಳನ್ನು ಹಾಗೂ ಮಕ್ಕಳ ಹಕ್ಕು ಸಂರಕ್ಷಣಾ ಸಮಿತಿಯ ವರದಿಗಳನ್ನು ಅಧ್ಯಾಪಕರು ಗಮನದಲ್ಲಿಟ್ಟು ವ್ಯವಹರಿಸಬೇಕಾಗಿದೆ.
- ಶಾಲೆಯ ಶಿಸ್ತುಕ್ರಮ ಪಾಲನೆಗಾಗಿ ರೂಪಿಸುವ ನಿಯಮಾವಳಿಗಳು ವಿದ್ಯಾರ್ಥಿಯ ಮಾನವೀಯ ಹಕ್ಕುಗಳಿಗೆ ಧಕ್ಕೆಯನ್ನುಂಟುಮಾಡಬಾರದು.

1.5 ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವ ಕೌಶಲ್ಯ ಮತ್ತು ಪ್ರತಿಭೆಯು ಪ್ರಕಟಗೊಳ್ಳಲು ಸೂಕ್ತವಾದ ಹಾಗೂ ಅಚ್ಚುಕಟ್ಟಾದ ಯೋಜನೆಗಳನ್ನು ರೂಪಿಸಬೇಕು.

- ಶೈಕ್ಷಣಿಕ ಸಾಧನೆ ಮಾತ್ರವಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ವಿಶೇಷ ಕೌಶಲ್ಯ ಮತ್ತು ಪ್ರತಿಭೆಯನ್ನು ಗುರುತಿಸುವುದು ಅಧ್ಯಾಪಿಕೆಯ ಬಹುಮುಖ್ಯ ಕರ್ತವ್ಯವಾಗಿದೆ.
- ವಿದ್ಯಾರ್ಥಿಯ ಎಲ್ಲಾ ವಿಧದ ಕೌಶಲ್ಯಗಳನ್ನು ಬೆಳೆಸುವ ಚಟುವಟಿಕೆಗಳು ಇರಬೇಕು.

1.6 ಪಠ್ಯಕ್ರಮವು ಸಂವಿಧಾನವು ತಿಳಿಸುವ ಮೌಲ್ಯಗಳು ಮತ್ತು ವಿಚಾರಧಾರೆಗಳನ್ನು ಒಳಗೊಂಡಿರಬೇಕು.

- ಪ್ರಜಾಪ್ರಭುತ್ವ, ಜಾತ್ಯತೀತತೆ, ಸಮತ್ವ, ನೈತಿಕತೆ, ಸ್ವಾತಂತ್ರ್ಯ ಮುಂತಾದ ಸಂವಿಧಾನದ ಮೌಲ್ಯಗಳು ಪಠ್ಯಕ್ರಮ ಯೋಜನೆಯ ಪ್ರಧಾನ ಅಂಶಗಳಾಗಿರಬೇಕು.
- ಪೌರರ ಕರ್ತವ್ಯಗಳ ಕುರಿತು ಹೇಳಿರುವ ಸಂವಿಧಾನದ ಪರಿಚ್ಛೇದ (ಆರ್ಟಿಕಲ್) 51 ಎ ಯನ್ನು ಅರ್ಥಮಾಡಿಕೊಂಡು, ಅದರಲ್ಲಿನ 'ಎ' ಯಿಂದ 'ಕೆ' ವರೆಗಿನ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ವ್ಯವಹರಿಸಬೇಕು.

1.7 ವಿದ್ಯಾರ್ಥಿಗಳ ಅಗತ್ಯಗಳಿಗನುಸಾರ ಅಧ್ಯಾಪಿಕೆಯ/ಅಧ್ಯಾಪಕನ ಬೋಧನ ರೀತಿಯನ್ನು ಪರಿಷ್ಕರಿಸಬೇಕು.

- ನಿರಂತರ ಮೌಲ್ಯನಿರ್ಣಯದ ಆಧಾರದಲ್ಲಿ ವಿದ್ಯಾರ್ಥಿಯ ಸ್ವಭಾವ, ಗಳಿಸಿದ ಜ್ಞಾನ, ಅಭಿರುಚಿ, ಕಲಿಕೆಯ ರೀತಿ ಮುಂತಾದುವುಗಳನ್ನು ಪರಿಗಣಿಸಿ, ಬೋಧನೆಯ ವಿಧಾನಗಳಲ್ಲಿ ಅಗತ್ಯವಾದ ಪರಿಷ್ಕಾರವನ್ನು ನಿರಂತರ ನಡೆಸುತ್ತಿರಬೇಕು.

1.8 ವಿದ್ಯಾರ್ಥಿಗಳು ನೀಡುವ ಅವರ ವ್ಯಕ್ತಿಗತವಾದ ವಿಚಾರಗಳ ಗೌಪ್ಯತೆಯನ್ನು ಕಾಪಾಡುವುದು ಮತ್ತು ಇಂತಹ ವಿಷಯಗಳನ್ನು ಕಾನೂನುಬದ್ಧವಾಗಿ ಯಾರಿಗೆ ತಿಳಿಸಬಹುದೋ ಅವರಿಗೆ ಮಾತ್ರ ತಿಳಿಸುವುದು.

- ಕೌನ್ಸಿಲರ್ ಕೂಡಾ ಆಗಿರುವ ಅಧ್ಯಾಪಿಕೆಗೆ ವಿದ್ಯಾರ್ಥಿಯ ವ್ಯಕ್ತಿಗತವಾದ ವಿಷಯಗಳನ್ನು ತಿಳಿಯಲು ಸಾಧ್ಯ.
- ಈ ವಿವರಗಳನ್ನು ವಿದ್ಯಾರ್ಥಿಯ ಒಳಿತಿಗಾಗಿ ವಿವೇಕದಿಂದ ಉಪಯೋಗಿಸತಕ್ಕದ್ದು.

1.9 ವಿದ್ಯಾರ್ಥಿಗಳನ್ನು ಗದರಿಸುವುದು, ಆತಂಕಕ್ಕೀಡುಮಾಡುವುದು, ಶಾರೀರಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ದೌರ್ಜನ್ಯವೆಸಗುವುದು ಮುಂತಾದುವುಗಳನ್ನು ಮಾಡಬಾರದು.

- ಲೈಂಗಿಕ ದೌರ್ಜನ್ಯದಿಂದ, ಕಡೆಗಣಿಸುವಿಕೆಯಿಂದ, ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವ ಜವಾಬ್ದಾರಿ ಅಧ್ಯಾಪಕರಿಗಿದೆ.
- ಉತ್ತಮ ಕಲಿಯುವಿಕೆಗೆ ಶಿಕ್ಷೆ ಸಹಕಾರಿ ಎಂಬ ತಪ್ಪು ಕಲ್ಪನೆ ದೂರವಾಗಬೇಕು.
- ಇಂತಹ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗೆ ಲಭಿಸುವ ಕಾನೂನು ರಕ್ಷಣೆಗಳ ಕುರಿತು ಅಧ್ಯಾಪಕರು ತಿಳಿದಿರಬೇಕು.

1.10 ಯಾವುದೇ ರೀತಿಯ ಲೈಂಗಿಕ ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವುದು.

- ಯಾವುದೇ ರೀತಿಯ ಲೈಂಗಿಕ ಶೋಷಣೆ, ದೈಹಿಕ ಗಾಯಗಳು ಮಾತ್ರವಲ್ಲದೆ, ದೀರ್ಘಕಾಲ ಉಳಿದುಕೊಳ್ಳುವ ಮಾನಸಿಕ ಆಘಾತವೂ ವಿದ್ಯಾರ್ಥಿಯನ್ನು ಅಧೀರನನ್ನಾಗಿಸುತ್ತದೆ.

ಉದ್ಯೋಗ ಸ್ಥಳಗಳಲ್ಲೂ, ಶಾಲೆಗಳಲ್ಲೂ ನಡೆಯುವ ಲೈಂಗಿಕ ಶೋಷಣೆಯ ವಿರುದ್ಧ ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟು ಮತ್ತು ಎನ್.ಸಿ.ಪಿ. ನೀಡಿದ ಮಾರ್ಗಸೂಚಿಗಳನ್ನು ಅಧ್ಯಾಪಕರು ಪಾಲಿಸಬೇಕಾಗಿದೆ.

## 2. ರಕ್ಷಕರು ಮತ್ತು ಸಮಾಜದೊಂದಿಗೆ ಇರಬೇಕಾದ ಜವಾಬ್ದಾರಿಗಳು

2.1 ತಂದೆ–ತಾಯಿಯರೊಂದಿಗೆ ಮತ್ತು ರಕ್ಷಕರೊಂದಿಗೆ ವಿನಯಪೂರ್ವಕವಾದ ವರ್ತನೆ ಇರಬೇಕು.

- ವಿದ್ಯಾರ್ಥಿಗಳ ಕುರಿತು ಹೆಚ್ಚು ತಿಳಿಯುವುದಕ್ಕಾಗಿ ಅವರ ಹೆತ್ತವರೊಂದಿಗೂ ಗೆಳೆಯರೊಂದಿಗೂ ಉತ್ತಮ ಸಂಪರ್ಕ ಇಟ್ಟುಕೊಳ್ಳುವುದು ಅಗತ್ಯ.
- ಅಧ್ಯಾಪಿಕೆ ಮತ್ತು ಹೆತ್ತವರ ಬಾಂಧವ್ಯವು ವಿದ್ಯಾರ್ಥಿ ಮತ್ತು ಅಧ್ಯಾಪಿಕೆಯ ಸಂಬಂಧವನ್ನು ಹೆಚ್ಚು ನಿಕಟಗೊಳಿಸುತ್ತದೆ.
- ತಮ್ಮ ಮಕ್ಕಳ ಶಾಲೆಯೊಳಗಿನ ಮತ್ತು ಹೊರಗಿನ ಚಟುವಟಿಕೆಗಳ ಕುರಿತು ಅಧ್ಯಾಪಕರಿಂದ ತಿಳಿಯಲು ಹೆಚ್ಚಿನ ಹೆತ್ತವರು ಬಯಸುತ್ತಾರೆ.
- ಬೆಳವಣಿಗೆಯ ಸಂದರ್ಭದಲ್ಲಿ ವಿದ್ಯಾರ್ಥಿಗೆ ಉಂಟಾಗುವ ಪ್ರಮಾದಗಳನ್ನು ಹೆತ್ತವರೊಂದಿಗೆ ಚರ್ಚಿಸುವುದರಿಂದ ಮುಂದೆ ಸಂಭವಿಸಬಹುದಾದ ಹೊಸ ದುರಂತಗಳನ್ನು ತಪ್ಪಿಸಲು ಸಾಧ್ಯವಾಗಬಹುದು.

2.2 ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ತರುವ ಚಟುವಟಿಕೆಗಳಿಂದ ದೂರವಿರುವುದು.

- ಇತರ ವಿದ್ಯಾರ್ಥಿಗಳ ಮುಂದೆ ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುವ ರೀತಿಯಲ್ಲಿ ಮಾತನಾಡುವುದನ್ನು ಬಿಟ್ಟುಬಿಡಬೇಕು.
- ಅದೇ ರೀತಿಯಲ್ಲಿ ಹೆತ್ತವರ ಸ್ವಾಭಿಮಾನವನ್ನು ಪ್ರಶ್ನಿಸಬಾರದು.
- ಯಾವುದಾದರೂ ಒಂದು ವಿಭಾಗದ ವಿದ್ಯಾರ್ಥಿಗಳನ್ನು ಮಾತ್ರ ಹಿನ್ನೆಲೆಯಾಗಿರಿಸಿ (ಜಾತಿ, ಮತ, ಆರ್ಥಿಕ ಸ್ಥಿತಿ, ...) ಹೊಗಳುವುದರಿಂದ ಉಳಿದ ವಿದ್ಯಾರ್ಥಿಗಳಲ್ಲಿ ದ್ವೇಷ ಮನೋಭಾವ ಉಂಟಾಗುವುದು.

2.3 ಭಾರತದ ಸಾಂಸ್ಕೃತಿಕ ಪರಂಪರೆಯ ಕುರಿತು ವಿದ್ಯಾರ್ಥಿಗಳಿಗೆ ಆದರ ಹಾಗೂ ಗೌರವ ಉಂಟಾಗುವಂತೆ ಮಾಡುವುದು.

- ಭಾರತವು ವಿವಿಧ ಸಂಸ್ಕೃತಿ, ಭಾಷೆ, ಮತ, ನಂಬಿಕೆಗಳ ದೇಶ. ಈ ವೈವಿಧ್ಯವನ್ನು ಪ್ರತಿಯೊಂದು ತರಗತಿಗಳಲ್ಲೂ ಕಾಣಬಹುದು.
- ಭಾರತದಲ್ಲಿ ವಿವಿಧತೆಯಲ್ಲಿ ಏಕತೆಯಿದೆ.
- ಪ್ರತಿಯೊಬ್ಬನಲ್ಲೂ ಪರಸ್ಪರ ಸಹಿಷ್ಣುತೆ ಮತ್ತು ಎಲ್ಲಾ ಸಂಸ್ಕೃತಿಗಳನ್ನು ಗೌರವಿಸುವ ಮನೋಭಾವ ಇರಬೇಕು.
- ಈ ಮನೋಭಾವ ಅಥವಾ ತತ್ವಗಳನ್ನು ಪಠ್ಯಕ್ರಮದ ಮೂಲಕ ಬೆಳೆಸುವ ಪ್ರಜ್ಞಾಪೂರ್ವಕ ಪ್ರಯತ್ನ ಅಗತ್ಯವಾಗಿದೆ.

2.4 ವಿವಿಧ ಜನಸಮುದಾಯಗಳೊಳಗೆ ಪರಸ್ಪರ ದ್ವೇಷ, ಹಗೆತನವನ್ನು ಬೆಳೆಸುವ ರೀತಿಯ ಕಾರ್ಯಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು.

- ಎಲ್ಲ ಮತ, ನಂಬಿಕೆ ಮತ್ತು ಭಾಷೆಗಳಲ್ಲಿ ಸಮಾನ ಗೌರವವನ್ನು ಉಂಟುಮಾಡುವ ರೀತಿಯ ಚಟುವಟಿಕೆಗಳು ತರಗತಿಯಲ್ಲಿ ನಡೆಯಬೇಕು.
- ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದ ಪ್ರತಿಯೊಬ್ಬನೂ ಮೊದಲಿಗೆ ಭಾರತೀಯ. ಬಳಿಕ ಮಾತ್ರವೇ ಒಂದು ಸಮುದಾಯದ ಸದಸ್ಯ ಎಂಬುದು ಮುಖ್ಯ ವಿಷಯವಾಗಬೇಕು.
- ಯಾವುದಾದರೂ ಒಂದು ನಿರ್ದಿಷ್ಟ ಗುಂಪಿನ ಪ್ರಚಾರಕ್ಕಾಗಿ ಶಾಲೆ/ತರಗತಿಯನ್ನು ಬಳಸಬಾರದು.
- ಸಮಕಾಲೀನ ಸಾಮಾಜಿಕ, ರಾಜಕೀಯ ಬೆಳವಣಿಗೆಗಳನ್ನು ಚರ್ಚೆ ಮಾಡುವಾಗ ಅಧ್ಯಾಪಕ/ಅಧ್ಯಾಪಿಕೆ ಯಾವುದಾದರೂ ಒಂದು ಪಕ್ಷದ ಪರವಾಗಿ ಮಾತನಾಡಬಾರದು.

## 3. ಅಧ್ಯಾಪನ ವೃತ್ತಿಯಲ್ಲಿ ಹಾಗೂ ಸಹೋದ್ಯೋಗಿಗಳೊಡನೆ ಇರಬೇಕಾದ ಜವಾಬ್ದಾರಿಗಳು

3.1 ವೃತ್ತಿ ಪರಿಣತಿಯನ್ನು ಬೆಳೆಸಲು ನಿರಂತರ ಪ್ರಯತ್ನಿಸುವುದು.

- ಒಬ್ಬ ವಿದ್ಯಾರ್ಥಿಯನ್ನು ನಿರಂತರ ಕಲಿಕೆಯವನನ್ನಾಗಿ ಮಾಡುವುದರೊಂದಿಗೆ ಅಧ್ಯಾಪಕನು ತಾನೂ ಕಲಿಯುತ್ತಿರಬೇಕು.
- ನಿರಂತರವಾಗಿ ಬೆಳೆಯುತ್ತಿರುವ ಜ್ಞಾನ ವಲಯಗಳ ಕುರಿತು, ಅಧ್ಯಾಪನ ರೀತಿಯ ಕುರಿತು ಜ್ಞಾನವನ್ನು ಸಂಪಾದಿಸಲೂ ಅದನ್ನು ಕಾರ್ಯರೂಪಕ್ಕೆ ತರಲೂ ಸಾಧ್ಯವಾಗಬೇಕು.
- ಯಾವ ಯಾವ ಮೂಲಗಳಿಂದ ತನಗೆ ಹೊಸ ಅರಿವು ಲಭಿಸಬಹುದೆಂಬ ಹುಡುಕಾಟ ಅಧ್ಯಾಪಕನ ಕರ್ತವ್ಯವಾಗಿರಬೇಕು.

3.2 ಸಹೋದ್ಯೋಗಿಗಳೊಂದಿಗೆ ಹಾಗೂ ಇತರರೊಂದಿಗೆ ಪರಸ್ಪರ ಆಶಯ ವಿನಿಮಯ ಮಾಡುವುದರಿಂದ ಹೊಸತಾದ ಜ್ಞಾನ ವಲಯ ಸೃಷ್ಟಿಯಾಗುವುದು.

- ಶಾಲೆಯಲ್ಲಿ ಶೈಕ್ಷಣಿಕ ಜಾಗೃತಿಯನ್ನು ಮೂಡಿಸುವುದು ಮತ್ತು ಎಲ್ಲ ಅಧ್ಯಾಪಕರಿಗೆ ತಮ್ಮದೇ ಆದ ಕೊಡುಗೆ ನೀಡುವ ಅವಕಾಶವನ್ನು ಕಲ್ಪಿಸಿ ಉತ್ತಮ ವಾತಾವರಣವನ್ನು ಉಂಟುಮಾಡುವುದು.
- ಇಂತಹ ಸನ್ನಿವೇಶವುಂಟಾಗಲು ಪೂರ್ವಯೋಜನೆ ಮತ್ತು ಫಲಪ್ರದವಾದ ಸಹಕಾರ ಮನೋಭಾವ ಎಲ್ಲ ಅಧ್ಯಾಪಕರಲ್ಲೂ ನಿರ್ಮಾಣವಾಗಬೇಕು.
- ಶಾಲೆಯ ಯಾವುದೇ ರೀತಿಯ ಸಮಸ್ಯೆಗಳನ್ನು ಪರಿಹಾರ ಮಾಡುವಲ್ಲಿ ಎಲ್ಲ ಅಧ್ಯಾಪಕರ ಒಗ್ಗಟ್ಟು, ಚರ್ಚೆ, ಕ್ರಿಯಾತ್ಮಕ ಮಾರ್ಗದರ್ಶನ ಹಾಗೂ ಫಲಪ್ರದ ಕಾರ್ಯಚಟುವಟಿಕೆ ಇರಬೇಕು.
- ಅಧ್ಯಾಪಕರನ್ನು ಮಾತ್ರವಲ್ಲದೆ ಶಾಲೆಯ ವಿಷಯಗಳಲ್ಲಿ ಮುತುವರ್ಜಿಯಿರುವ ಎಲ್ಲರನ್ನು ಇಂತಹ ಕ್ರಿಯಾಚಟುವಟಿಕಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಅಧ್ಯಾಪಕನಿಗೆ ಸಾಧ್ಯವಾಗಬೇಕು.

3.3 ಸಹೋದ್ಯೋಗಿಗಳೊಡನೆ ಗೌರವಾದರಗಳೊಂದಿಗೆ ವ್ಯವಹರಿಸಬೇಕು.

- ಶಾಲೆಯ ಎಲ್ಲ ಅಧ್ಯಾಪಕರೊಡನೆ ಅವರ ವಿದ್ಯಾಭ್ಯಾಸ ಯೋಗ್ಯತೆ, ಅವರು ಯಾವ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದಾರೆ ಎಂಬುದನ್ನು ನೋಡದೆ ಅವರೊಂದಿಗೆ ಗೌರವಾದರಗಳಿಂದ ವ್ಯವಹರಿಸಬೇಕು.

3.4 ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ತರಗತಿಗಳನ್ನು ನಡೆಸುವುದು ಅಥವಾ ಇತರ ಖಾಸಗಿ ಶಿಕ್ಷಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಸಮರ್ಪಕವಲ್ಲ.

- ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ನಡೆಸುವುದರಿಂದ ಅಧ್ಯಾಪಕನ ಶಾಲಾ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು.
- ಖಾಸಗಿ ಟ್ಯೂಶನ್ ನಡೆಸುವುದರಿಂದ ಶಾಲೆಯ ನೈತಿಕ ತತ್ವ ಸಿದ್ಧಾಂತಗಳಿಗೆ ಧಕ್ಕೆಯುಂಟಾಗುವಂಥ ವ್ಯವಹಾರಗಳಿಗೆ ಕಾರಣವಾಗುವುದು.

3.5 ತನ್ನ ಚಟುವಟಿಕೆಗಳು ಮತ್ತು ತೀರ್ಮಾನಗಳು ಪರರ ಪ್ರಭಾವಕ್ಕೊಳಗಾಗದಂತೆ ನೋಡಿಕೊಳ್ಳಲು ಯಾವುದೇ ವಿಧವಾದ ಉಡುಗೊರೆ ಅಥವಾ ಇತರ ಸಹಾಯಗಳನ್ನು ಸ್ವೀಕರಿಸುವುದಿಲ್ಲ.

- ಯಾವುದೇ ರೀತಿಯ ಸೌಲಭ್ಯಗಳನ್ನು ನಿರೀಕ್ಷಿಸಿಕೊಂಡು ಕೊಡಮಾಡುವ ಬೆಲೆಬಾಳುವ ಉಡುಗೊರೆಗಳನ್ನು ಅಧ್ಯಾಪಕರು ವಿದ್ಯಾರ್ಥಿಯಿಂದ ಅಥವಾ ಹೆತ್ತವರಿಂದ ಸ್ವೀಕರಿಸಬಾರದು.

3.6 ಸಹೋದ್ಯೋಗಿಗಳಿಗೆದುರಾಗಿ ಮತ್ತು ಮೇಲಿನ ಅಧಿಕಾರಿಗಳಿಗೆದುರಾಗಿ ಅನಗತ್ಯವಾದ ಆರೋಪಗಳನ್ನು ಮಾಡುವುದಿಲ್ಲ.

- ಪರಸ್ಪರ ತಪ್ಪು ಹೊರಿಸುವ ಗುಂಪುಗಾರಿಕೆ ಅಧ್ಯಾಪಕರಲ್ಲಿ ಇರಬಾರದು.
- ಸಾಕ್ಷ್ಯಗಳಿಲ್ಲದೆ ಸಹೋದ್ಯೋಗಿಗಳ ಮೇಲೆ ಆರೋಪ ಮಾಡಬಾರದು.
- ಯಾವುದಾದರೂ ಸಹೋದ್ಯೋಗಿ/ಸಹೋದ್ಯೋಗಿಗಳಲ್ಲಿ ಗಂಭೀರವಾದ ಅಪರಾಧ ಕಂಡುಬಂದರೆ ಅದನ್ನು ಹಿರಿಯ ಅಧ್ಯಾಪಕರ ಗಮನಕ್ಕೆ ತರಬೇಕು.

3.7 ಸಹೋದ್ಯೋಗಿಗಳ, ವಿದ್ಯಾರ್ಥಿಗಳ ಅಥವಾ ಹೆತ್ತವರ ಎದುರಲ್ಲಿ ಸಹೋದ್ಯೋಗಿಯೊಬ್ಬನ ಮೇಲೆ ದೋಷಾರೋಪಣೆ ಮಾಡಬಾರದು.

- ಅಧ್ಯಾಪಕರ ಬಗ್ಗೆ ವಿಭಿನ್ನ ರೀತಿಯ ಅಭಿಪ್ರಾಯಗಳಿರಬಹುದು. ಅವುಗಳನ್ನು ಯೋಗ್ಯ ರೀತಿಯಲ್ಲಿ ವ್ಯಕ್ತಪಡಿಸಬೇಕು.
- ಸಹೋದ್ಯೋಗಿಯ ಅಧ್ಯಾಪನ ರೀತಿಯನ್ನು ಅಪಹಾಸ್ಯ ಮಾಡುವ ರೀತಿಯಲ್ಲಿ ಮಾತನಾಡಬಾರದು.

3.8 ಸಹೋದ್ಯೋಗಿಗಳ ಬೋಧನ ಗುಣಮಟ್ಟವನ್ನು ಗೌರವಿಸುವುದು.

- ಅಧ್ಯಾಪನದಲ್ಲಿ ಉತ್ತಮ ಸಾಧನೆ ಮಾಡಿದವರ ಚಟುವಟಿಕೆಗಳನ್ನು ಶ್ಲಾಘಿಸಬೇಕು. ಮಾತ್ರವಲ್ಲದೆ ಅಂತಹ ಸಾಧನೆಯನ್ನು ಮಾಡಲು ಪ್ರಯತ್ನಿಸಬೇಕು. ಆದರೆ ಅದು ಅಂಧಾನುಕರಣೆಯಾಗಲೇಬಾರದು.

3.9 ಸಹೋದ್ಯೋಗಿಗಳ ಕುರಿತು ತಿಳಿದಿರುವ ವೈಯಕ್ತಿಕ ವಿವರಗಳನ್ನು ಗೌಪ್ಯವಾಗಿಡಬೇಕು. ಅಗತ್ಯವಾದಾಗ ಮಾತ್ರ ಕಾನೂನು ಪ್ರಕಾರ ತಿಳಿಯಪಡಿಸುವುದು.

- ಯಾವುದಾದರೂ ಅಗತ್ಯಕ್ಕಾಗಿ ಸಂಗ್ರಹಿಸಲ್ಪಟ್ಟ ಸಹೋದ್ಯೋಗಿಗಳ ವೈಯಕ್ತಿಕ ವಿವರಗಳು ಗೌಪ್ಯವಾಗಿಡುವಂಥವುಗಳಾಗಿದ್ದಲ್ಲಿ ಅವುಗಳನ್ನು ಕಾನೂನುಬದ್ಧವಾದ ಕಾರ್ಯಗಳಿಗೆ ಮಾತ್ರ ತಿಳಿಯಪಡಿಸತಕ್ಕದ್ದು.

## 1.14 ಟೀಚಿಂಗ್ ಮ್ಯಾನುವೆಲ್

ಕಲಿಕಾ ಸಾಧನೆಗಳನ್ನು ಉದ್ದೇಶವಾಗಿಟ್ಟು ತಮ್ಮ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರತಿಯೋರ್ವ ಅಧ್ಯಾಪಕನಿಗೂ ಸಾಧ್ಯವಾಗಬೇಕು. ಪಠ್ಯಪುಸ್ತಕದಲ್ಲಿ ಮತ್ತು ಅಧ್ಯಾಪಕರ ಪಠ್ಯದಲ್ಲಿ ನೀಡಿರುವ ಚಟುವಟಿಕೆಗಳನ್ನು ತರಗತಿಯ ಮಕ್ಕಳಿಗೆ ಅನುಕೂಲವಾದ ರೀತಿಯಲ್ಲಿ ತಿದ್ದಿಕೊಳ್ಳುವ ಅಥವಾ ಸೇರಿಸಿಕೊಳ್ಳುವ ಯೋಜನೆಯಿರಬೇಕು. ಪ್ರತಿಯೊಂದು ಕಲಿಕಾಸಾಧನೆ ಈಡೇರಲು ಬೇಕಾಗುವಷ್ಟು ಕಾರ್ಯಚಟುವಟಿಕೆಗಳು ಯೋಜನೆಯಲ್ಲಿರಬೇಕು.

ಕಲಿಕಾ ಚಟುವಟಿಕೆಗಳ ಜೊತೆಗೆ ಮೌಲ್ಯನಿರ್ಣಯವನ್ನೂ ಒಳಗೊಂಡಿರುವ ಯೋಜನೆಗಳು ಪಾಠಪ್ರಕ್ರಿಯೆಯ ಪುಟದಲ್ಲಿರಬೇಕು. ನಿರಂತರ ಮೌಲ್ಯಮಾಪನದಲ್ಲಿ ಲಭಿಸುವ ವಿವರಗಳ ದಾಖಲಾತಿಯು ಮೌಲ್ಯನಿರ್ಣಯ ಪುಟದಲ್ಲಿರಬೇಕು.

ಮುಂದಿನ ಒಂದು ವಾರಕ್ಕೆ ಬೇಕಾಗಿ ತಯಾರಿಸುವ ಟೀಚಿಂಗ್ ಮ್ಯಾನುವೆಲ್, ಸ್ಕೂಲ್ ರಿಸೋರ್ಸ್ ಗ್ರೂಪ್ (SRG) ನಲ್ಲಿ / ವಿಷಯ ಸಮಿತಿಗಳಲ್ಲಿ (Subject Councils) ಮಂಡಿಸುವುದು ಉತ್ತಮ. ಒಂದು ವಾರದ ಮೌಲ್ಯಮಾಪನ ಪುಟದ ವಿವರಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಾಪಕನು ಸರಳವಾದ ಅವಲೋಕನ ಟಿಪ್ಪಣಿ (Reflection Note) ತಯಾರಿಸಿ, **SRG/SC** ಯಲ್ಲಿ ಚರ್ಚೆ ಮಾಡಬಹುದು. ಈ ಟಿಪ್ಪಣಿಯ ಆಧಾರದಲ್ಲಿ ಅಧ್ಯಾಪಕನ ಮುಂದಿನ ಯೋಜನಾ ಟಿಪ್ಪಣಿಗಳು ತಯಾರಾಗಬೇಕು.

ಟೀಚಿಂಗ್ ಮ್ಯಾನುವೆಲ್‌ನ ನಮೂನೆಯನ್ನು ಕೊಡಲಾಗಿದೆ.

## ಟೀಚಿಂಗ್ ಮ್ಯಾನುವೆಲ್

ಪಾಠದ ಹೆಸರು :

ದಿನಾಂಕ :

ಸಮಯ :

ವಿಷಯ (Theme) :

ಕಲಿಕಾ ಸಾಧನೆಗಳು :

ಆಶಯಗಳು :

ಕೌಶಲ್ಯಗಳು :

ಭಾಷಾ ಸತ್ಯಾಂಶಗಳು (ಭಾಷೆಗೆ ಮಾತ್ರ) :

ವ್ಯವಹಾರ ರೂಪಗಳು (ಭಾಷಾ ವಿಷಯಕ್ಕೆ ಮಾತ್ರ) :

ಮೌಲ್ಯಗಳು – ಮನೋಭಾವಗಳು :

ಕಲಿಕೋಪಕರಣಗಳು :

ಉತ್ಪನ್ನಗಳು :

| **ಪ್ರಕ್ರಿಯೆ** | **ಮೌಲ್ಯನಿರ್ಣಯ** |
|---|---|
| ಚಟುವಟಿಕೆ ಮತ್ತು ಮೌಲ್ಯಮಾಪನಗಳನ್ನೊಳಗೊಂಡ ಪ್ರಕ್ರಿಯೆ | (ಮೌಲ್ಯನಿರ್ಣಯದ ವಿವರಗಳನ್ನು ಇಲ್ಲಿ ದಾಖಲಿಸಬೇಕು) |

ಪ್ರಾಂಶುಪಾಲರ ಸಹಿ                ಅಧ್ಯಾಪಕ/ಅಧ್ಯಾಪಿಕೆಯ ಸಹಿ

## ಅವಲೋಕನ ಟಿಪ್ಪಣಿ (Reflections)

ನನ್ನ ನಿಗಮನಗಳು ಮತ್ತು ಹೊಸ ಅರಿವುಗಳು (ಕಲಿಕಾ ಚಟುವಟಿಕೆಗಳು ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳಿಂದ ಲಭಿಸಿದ ಮಾಹಿತಿಗಳ ಆಧಾರದಲ್ಲಿ)

- 
- 
- 
- 

ಮುಂದುವರಿದ ಚಟುವಟಿಕೆಗಳು ಮತ್ತು ಪರಿಹಾರ ಚಟುವಟಿಕೆಗಳು

- 
- 
- 
- 
- 

**ಅವಲೋಕನ ಟಿಪ್ಪಣಿ (Reflection note) ಯಾಕೆ?**

ನಿರ್ದಿಷ್ಟ ಕಲಿಕಾ ಸಾಧನೆಗಳಿಗನುಸಾರವಾಗಿ ನಡೆಸಲಾದ ಕಲಿಕಾ ಚಟುವಟಿಕೆಗಳು ಪೂರ್ತಿಯಾದ ಬಳಿಕ ಅವಲೋಕನ ಟಿಪ್ಪಣಿ ತಯಾರಿಸಬೇಕು.

- ಈ ಟಿಪ್ಪಣಿಗಳನ್ನು ಪ್ರತಿವಾರದ **SRG** ಸಭೆಯಲ್ಲಿ ಮಂಡಿಸಬೇಕು.
- ಮುಂದಿನ ಯೋಜನೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು.
- ಒಂದು ಅವಧಿಯ **C.E.** ಕ್ರೋಡೀಕರಿಸುವುದಕ್ಕಾಗಿ.

# ಮೌಲ್ಯನಿರ್ಣಯ ಸಮೀಪನ

ಕಲಿಕೆ (Learning) ಎಂಬುದು ಮಕ್ಕಳಲ್ಲಿ ಸ್ವಾಭಾವಿಕವಾಗಿ ಮತ್ತು ನಿರಂತರವಾಗಿ ನಡೆಯುವ ಒಂದು ಮಾನಸಿಕ ಪ್ರಕ್ರಿಯೆ. ಕಲಿಕೆಯು ಪರಿಣಾಮಕಾರಿ ಯಾಗಬೇಕಿದ್ದಲ್ಲಿ ನೀಡುವ ಅನುಭವಗಳು ನಿರ್ದಿಷ್ಟ ಉದ್ದೇಶಗಳನ್ನು ಈಡೇರಿಸುವಂಥದ್ದಾಗಿರಬೇಕು. ಮಗು ಗಳಿಸಬೇಕಾದ ಕೌಶಲ್ಯಗಳ ಕುರಿತು ಅಧ್ಯಾಪಕನಿಗೆ ಸ್ಪಷ್ಟವಾದ ಕಲ್ಪನೆ ಉಂಟಾಗಬೇಕು. ಪ್ರತಿಯೊಂದು ಪಾಠಭಾಗದಿಂದಲೂ ಗಳಿಸಬೇಕಾದ ಕಲಿಕಾ ಸಾಧನೆ (Learning Outcomes) ಗಳನ್ನು ಮೊದಲೇ ರೂಪಿಸಬೇಕು. ಈ ಚಟುವಟಿಕೆಗಳನ್ನು ಬದುಕಿನ ವಿವಿಧ ಸಂದರ್ಭಗಳಿಗೆ ಹೊಂದಿಸಿಕೊಂಡು ಮಂಡಿಸಬೇಕು.

ಈ ಪ್ರಕಾರ ಗಳಿಸಿದ ಕೌಶಲ್ಯಗಳು, ನಿರ್ಣಯಗಳು, ಕಲಿಕೆಯ ಸಾಧನೆಗಳನ್ನು ನಿರ್ಧರಿಸಲು ಎಷ್ಟು ಸಮರ್ಪಕ? ಕಲಿಕಾ ಸಾಧನೆಗಳನ್ನು ಗಳಿಸಲು ಇನ್ನು ಯಾರೆಲ್ಲ ಉಳಿದಿದ್ದಾರೆ? ಅವರಿಗೆ ನೀಡಬೇಕಾದ ಮುಂದುವರಿದ ಪ್ರಕ್ರಿಯೆಗಳೇನಾಗಿರಬೇಕು? ಅವುಗಳನ್ನು ಹೇಗೆ ನೀಡಬೇಕು? ಈ ರೀತಿಯ ಅಧ್ಯಾಪಕನ ಯೋಚನೆಗಳು ಮೌಲ್ಯನಿರ್ಣಯ ಮಾಡಲು ಸಹಾಯವೊದಗಿಸುತ್ತವೆ.

ಒಂದು ಪಾಠಭಾಗದ/ಘಟಕದ ವಿನಿಮಯದ ಬಳಿಕ 'ಏನೆಲ್ಲ ಕಲಿಯಲಾಯಿತು' ಎಂದು ನಿರ್ಣಯಿಸುವ ಪ್ರಕ್ರಿಯೆಯನ್ನು ಕಲಿಕೆಯ ಮೌಲ್ಯನಿರ್ಣಯ (Assessment of Learning) ಎಂದು ಕರೆಯಲಾಗುತ್ತದೆ. ಪಾಠಭಾಗದ ಕಲಿಕೆಯ ಬಳಿಕ ವಿದ್ಯಾರ್ಥಿಯ ಸಾಮರ್ಥ್ಯ, ಕಲಿಕಾ ಗುಣಮಟ್ಟ ಎಂಬಿವುಗಳನ್ನು ನಿರ್ಣಯಿಸಲಾಗುತ್ತದೆ. ಇದು ಮೌಲ್ಯನಿರ್ಣಯದ ಒಂದು ಹಂತ ಮಾತ್ರ.

ಆದರೆ ಕಲಿಕೆಯನ್ನು ಖಾತ್ರಿಪಡಿಸಲು ನಡೆಸಲಾಗುವ ಮೌಲ್ಯನಿರ್ಣಯವು ಹೆಚ್ಚು ಪ್ರಮುಖವೆನಿಸುತ್ತದೆ. ಕಲಿಕೆ ನಡೆಯುವ ವೇಳೆಯಲ್ಲಿ ಅದರ ದಕ್ಷತೆಗಾಗಿ ಅಧ್ಯಾಪಕ ಅಥವಾ ಸಹಪಾಠಿಗಳ ಬೇರೆ ಬೇರೆ ರೀತಿಯ ಪಾಲ್ಗೊಳ್ಳುವಿಕೆ ನಡೆಯಬಹುದು. ಕಲಿಕೆಯೊಂದಿಗಿರುವ ಈ ಮೌಲ್ಯನಿರ್ಣಯವು ಮತ್ತು ಫೀಡ್‌ಬ್ಯಾಕ್ (Feed Back) ಮೌಲ್ಯನಿರ್ಣಯದ ಇನ್ನೊಂದು ಹಂತವಾಗಿದೆ. ಇದನ್ನು ಕಲಿಕೆಗಿರುವ ಮೌಲ್ಯನಿರ್ಣಯ (Assessment for Learning) ಎಂದು ಕರೆಯಬಹುದು. ಕಲಿಕೆಯ ಪ್ರಗತಿಗಾಗಿ ಇದು ನಿರಂತರ ನಡೆಯಬೇಕಾದ ಪ್ರಕ್ರಿಯೆ.

ಇದರೊಂದಿಗೆ ಕಲಿಕೆಯಲ್ಲಿ ಗಳಿಸಿದ ಆಶಯಗಳನ್ನು ಮತ್ತು ನಿರ್ಣಯಗಳನ್ನು ಸ್ವವಿಮರ್ಶೆಗೊಳಪಡಿಸಿ ಬದಲಾವಣೆ ಮಾಡಿಕೊಳ್ಳುವ 'ತಿದ್ದುಪಡಿ ಪ್ರಕ್ರಿಯೆ'ಯೂ ಇದೆ. ಇದನ್ನು ವೈಯಕ್ತಿಕ ಮೌಲ್ಯನಿರ್ಣಯವೆಂದು ಗುರುತಿಸಬಹುದು. ಈ ಪ್ರಕಾರ ವೈಯಕ್ತಿಕ ಮೌಲ್ಯನಿರ್ಣಯದ ಮೂಲಕವೂ ಕಲಿಕೆ ಸಾಧ್ಯವಾಗುತ್ತದೆ. ಇದನ್ನು 'ಮೌಲ್ಯನಿರ್ಣಯವೇ ಕಲಿಕೆ' (Assessment as Learning) ಎಂದು ಕರೆಯಬಹುದು.

ಕಲಿಕೆಯ ದಕ್ಷತೆಯನ್ನು ಹೆಚ್ಚಿಸಲು 'ಕಲಿಕೆಗಾಗಿರುವ ಮೌಲ್ಯನಿರ್ಣಯ' ಮತ್ತು 'ಮೌಲ್ಯನಿರ್ಣಯವೇ ಕಲಿಕೆ' ಎಂಬಿವುಗಳಿಗೆ ಪ್ರಾಧಾನ್ಯ ಕಲ್ಪಿಸಿಕೊಡಬೇಕು. ಕಲಿಕೆಯು ಫಲಪ್ರದವೂ, ಪರಿಣಾಮಕಾರಿಯೂ ಆಗಲು ಸಹಾಯಕವಾಗುವಂತಹ ಮೌಲ್ಯನಿರ್ಣಯ ಸಮೀಪನವನ್ನು ನಾವು ಸ್ವೀಕರಿಸಿಕೊಳ್ಳಬೇಕು.

ಕಲಿಕಾ ಸಾಧನೆಗಳನ್ನು ನಿರ್ಣಯಿಸುವ ರೀತಿಯ ಕಲಿಕಾ ಸಮೀಪನವನ್ನು ಸ್ವೀಕರಿಸುವಾಗ ಅದಕ್ಕನುಗುಣವಾದ ರೀತಿಯಲ್ಲಿ ಮೌಲ್ಯನಿರ್ಣಯ ಸಮೀಪನವನ್ನು ಆಯ್ಕೆ ಮಾಡಿಕೊಳ್ಳಬೇಕು. ಆದುದರಿಂದ ಕಲಿಕಾ ಸಾಧನೆಗೆ ಒತ್ತು ನೀಡುವ ಮೌಲ್ಯನಿರ್ಣಯ ಸಮೀಪನ (Outcome focussed assessment approach) ವನ್ನು ಆಯ್ಕೆ ಮಾಡಿಕೊಳ್ಳಬೇಕು. ಕಲಿಕಾ ಸಾಧನೆಗಳು ಮುಖ್ಯವಾಗಿರುವ ಕಲಿಕಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಯ 'ಸಕ್ರಿಯ ಪಾಲ್ಗೊಳ್ಳುವಿಕೆ' ಯನ್ನು ಖಾತ್ರಿಪಡಿಸಬೇಕು. ವಿಮರ್ಶಾತ್ಮಕ ಆಲೋಚನೆ, ವೈಚಾರಿಕ ಚಿಂತನೆ, ಕಲಿಕೆಯ ಪ್ರತಿಫಲನ, ಅಭಿವ್ಯಕ್ತಿ, ಪರಸ್ಪರ ಪೂರಕವಾದ ಜ್ಞಾನ ಇವೆಲ್ಲ ಕಲಿಕಾ ಸಾಧನೆಗಳ ಮುಖ್ಯವಾಗಿರುವ ಕಲಿಕೆಯ ವೈಶಿಷ್ಟ್ಯಗಳಾಗಿವೆ.

## ನಿರಂತರ ಮತ್ತು ಸಮಗ್ರವಾದ ಮೌಲ್ಯನಿರ್ಣಯ (CCE)

ನಿರಂತರ ಮತ್ತು ಸಮಗ್ರವಾದ ಮೌಲ್ಯನಿರ್ಣಯ ರೀತಿಯನ್ನು ಶಾಲಾಮಟ್ಟದಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಕಲಿಯುವಿಕೆಯು ಮಗುವಿನಲ್ಲಿ ನಿರಂತರವಾಗಿ ನಡೆಯುವ ಒಂದು ಪ್ರಕ್ರಿಯೆ. ಈ ಕಾರಣದಿಂದ ನೈಪುಣ್ಯಗಳನ್ನು ಮತ್ತು ತಿಳುವಳಿಕೆಗಳನ್ನು ಎಷ್ಟರ ಮಟ್ಟಿಗೆ ಗಳಿಸಿದ್ದಾನೆಂಬುದನ್ನು ನಿರ್ಧರಿಸುವ ಮೌಲ್ಯನಿರ್ಣಯ ಪ್ರಕ್ರಿಯೆಯು ನಿರಂತರ ನಡೆಯುತ್ತಿರಬೇಕು. ವಿದ್ಯಾರ್ಥಿಯ ವೈಜ್ಞಾನಿಕ, ಸಾಮಾಜಿಕ, ಭಾವನಾತ್ಮಕವಾದ ಬೆಳವಣಿಗೆಯನ್ನು ಸರ್ವತೋಮುಖ ಪ್ರಗತಿ ಎಂದು ಕರೆಯುತ್ತೇವೆ. ಪ್ರಕ್ರಿಯೆಯ ಸಮಗ್ರತೆ ಮತ್ತು ಮುಂದುವರಿಕೆಯನ್ನು ನಿರ್ಧರಿಸಲು ಈಈಊ ಯಲ್ಲಿ ಎರಡು ಪ್ರಮುಖ ವಲಯಗಳನ್ನು ಪರಿಗಣಿಸಬಹುದು.

## ಗ್ರೇಡಿಂಗ್ ರೀತಿ

ನಿರಂತರವೂ ಸಮಗ್ರವೂ ಆದ ಮೌಲ್ಯನಿರ್ಣಯವನ್ನು ಗ್ರೇಡಿಂಗ್ ರೀತಿಯಲ್ಲಿ ಮಾಡಬೇಕು. ಪ್ರೈಮರಿ ಹಂತದಲ್ಲಿ ಗ್ರೇಡಿಂಗ್‌ಗಾಗಿ ಸಾಮಾನ್ಯವಾಗಿ ಐದು ಪೋಯಿಂಟ್ ಗ್ರೇಡಿಂಗ್ ಉಪಯೋಗಿಸುತ್ತಾರೆ. ಐದು ಪೋಯಿಂಟ್ ಗ್ರೇಡಿಂಗ್‌ನಲ್ಲಿ ಗ್ರೇಡ್ ಪೋಯಿಂಟ್ ಮತ್ತು ಶೇಕಡಾ ಕೊಡಲಾಗಿದೆ.

| ಗ್ರೇಡ್ ಪೋಯಿಂಟ್ ಶೇಕಡಾ | ಗ್ರೇಡ್ |
|---|---|
| 75 – 100 | A |
| 60 – 74 | B |
| 45 – 59 | C |
| 33 – 44 | D |
| 33 ರ ಕೆಳಗೆ | E |

ಮೌಲ್ಯನಿರ್ಣಯ ಪ್ರಕ್ರಿಯೆಯು ನಿರಂತರವೂ ಸಮಗ್ರವೂ ಆಗಿದೆಯೆಂದು ದೃಢಪಡಿಸಬೇಕಾಗಿದೆ.

## CCE ವಲಯಗಳು

1. ವೈಜ್ಞಾನಿಕ ವಲಯಕ್ಕೆ ಸಂಬಂಧಿಸಿದ ಮೌಲ್ಯನಿರ್ಣಯ.
2. ಸಾಮಾಜಿಕ, ಭಾವನಾತ್ಮಕ ವಲಯದ ಪ್ರಗತಿ ಇವುಗಳನ್ನು ವಿವರವಾಗಿ ತಿಳಿಯೋಣ.

## ವೈಜ್ಞಾನಿಕ ವಲಯದ ವಿಕಾಸಕ್ಕೆ ಸಂಬಂಧಿಸಿದ ಮೌಲ್ಯನಿರ್ಣಯ

ಮಗು ಕಲಿಯುತ್ತಿರುವ ಎಲ್ಲ ವಿಷಯಗಳು ವೈಜ್ಞಾನಿಕ ವಲಯದ ಪಟ್ಟಿಯಲ್ಲಿ ಸೇರುತ್ತವೆ. ಭಾಷಾಕಲಿಕೆ, ವಿಜ್ಞಾನ ವಿಷಯಗಳು (ಮೂಲವಿಜ್ಞಾನ, ಗಣಿತ ವಿಜ್ಞಾನ, ಸಮಾಜ ವಿಜ್ಞಾನ), ಕಲೆಯ ಕಲಿಕೆ, ವೃತ್ತಿ ಪರಿಚಯ ಕಲಿಕೆ ಹಾಗೂ ಆರೋಗ್ಯ ಕ್ರಿಡಾ ಶಿಕ್ಷಣ ಮುಂತಾದ ಎಲ್ಲ ವಿಷಯಗಳನ್ನು ಈ ವಲಯಕ್ಕೆ ಸೇರಿಸಬಹುದು. ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದಂತೆ ಕಲಿಕಾ ಸಾಧನೆಗಳನ್ನು ಗುರುತಿಸಿ, ಅದು ಎಷ್ಟರಮಟ್ಟಿಗೆ ಯೋಗ್ಯವೆಂದು ನೋಡಿಕೊಂಡು ಮೌಲ್ಯನಿರ್ಣಯ ನಡೆಸಬೇಕು. ಇಲ್ಲಿ ಎರಡು ವಿಧದ ಮೌಲ್ಯಮಾಪನಗಳನ್ನು ಕೊಡಲಾಗಿದೆ.

1. ನಿರಂತರ ಮೌಲ್ಯಮಾಪನ (C.E.)
2. ಅವಧಿ ಮೌಲ್ಯಮಾಪನ (T.E.)

## ನಿರಂತರ ಮೌಲ್ಯಮಾಪನ (C.E.)

ಪ್ರಾಥಮಿಕ ಹಂತದಲ್ಲಿ ಭಾಷಾ ವಿಷಯಗಳ ಕಲಿಕೆ ಅನೇಕ ಕೌಶಲ್ಯಗಳನ್ನು ಬೆಳೆಸಬೇಕಾಗಿದೆ. ಅಂದರೆ ಇದರಲ್ಲಿ ಆಶಯಗಳು, ಸತ್ಯಾಂಶಗಳು, ವಿವಿಧ ವಿಜ್ಞಾನ ವಲಯಗಳು, ಸೃಜನಶೀಲ ರಚನೆಗಳು ಎಂಬೀ ವಿಷಯಗಳನ್ನೊಳ ಗೊಂಡಿರುತ್ತವೆ. ಇವುಗಳನ್ನುಳಿದು ಭಾಷಾ ಕೌಶಲ್ಯಗಳನ್ನು ನಿರ್ಧರಿಸಲು ಕಷ್ಟಸಾಧ್ಯ. ಕೇಳಿ, ಓದಿ ವಿಷಯಗಳನ್ನು ಗ್ರಹಿಸುವುದು, ಮೌಖಿಕವಾಗಿ ಹೇಳುವ ಮೂಲಕ, ಬರೆಯುವ ಮೂಲಕ ಅಭಿವ್ಯಕ್ತಪಡಿಸುವುದು, ಸೃಜನಾತ್ಮಕ ಬರಹಗಳ ಮೂಲಕ ಪ್ರಕಟಿಸುವುದು ಮೊದಲಾದ ಕೌಶಲ್ಯಗಳನ್ನು ಭಾಷಾಕಲಿಕೆಯ ಮೂಲಕ ವೃದ್ಧಿಸಿಕೊಳ್ಳಬೇಕು. ಆದುದರಿಂದ ಭಾಷಾಕಲಿಕೆಯನ್ನು ಕೇವಲ ಕೌಶಲ್ಯಗಳನ್ನಾಗಿಯೋ, ಜ್ಞಾನವೊದಗಿಸುವ ವಿಷಯವನ್ನಾಗಿಯೋ ಬೇರ್ಪಡಿಸಲು ಸಾಧ್ಯವಿಲ್ಲ.

1 ಮತ್ತು 2ನೇ ತರಗತಿಗಳಲ್ಲಿ ವಿಷಯಾಧಾರಿತ (Theme) ನೆಲೆಯಲ್ಲಿ ಭಾಷೆ, ಗಣಿತ, ಪರಿಸರ ಅಧ್ಯಯನ ಎಂಬ ವಿಷಯಗಳಲ್ಲಿ ಚಟುವಟಿಕೆಗಳನ್ನು ಸಿದ್ಧಪಡಿಸಲಾಗಿದೆ. ಆದುದರಿಂದ ಈ ತರಗತಿಗಳ ಹೂರಣ ವಲಯವಾಗಿ ಪ್ರಸ್ತುತ ವಿಷಯವನ್ನು ನಮಗೆ ನಿರ್ಧರಿಸಬಹುದು. ಪ್ರಾಥಮಿಕ ಹಂತದ ವಿದ್ಯಾರ್ಥಿಯ ವಾಚಿಕ ಮತ್ತು ಬರವಣಿಗೆಯ ಕೌಶಲಗಳ ಬೆಳವಣಿಗೆಗೆ ಆಲಿಸುವಿಕೆ, ಓದುವಿಕೆ, ಲಿಪಿ ವಿನ್ಯಾಸದ ಬಗೆಗೆ ತಿಳಿಯುವುದು, ಉಚ್ಚಾರ ಶುದ್ಧಿಯೊಂದಿಗೆ ಓದುವುದು, ಸರಿಯಾದ ಬರವಣಿಗೆ ಇವೆಲ್ಲವೂ ಆವಶ್ಯಕ.

ವಿಜ್ಞಾನ ವಿಷಯಗಳಲ್ಲಿ ಪ್ರತಿಯೊಂದು ಆಶಯ ರೂಪೀಕರಣದ ಹಂತದಲ್ಲಿ ಮಗು ಆರ್ಜಿಸಿದ ಆಶಯಗಳು, ತಿಳುವಳಿಕೆಗಳು ಮತ್ತು ಸಾಧಿಸಿದ ಕೌಶಲಗಳು ಎಂಬಿವುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇಲ್ಲಿ ಮೂರು ವಿಧದ ನಿರಂತರ ಮೌಲ್ಯಮಾಪನವನ್ನು ಸೂಚಿಸಲಾಗಿದೆ.

- **ಪ್ರಕ್ರಿಯೆಯ ಮೌಲ್ಯಮಾಪನ**
- **ಪೋರ್ಟ್‌ಫೋಲಿಯೋ ಮೌಲ್ಯಮಾಪನ**
- **ಘಟಕ ಮಟ್ಟದ ಮೌಲ್ಯಮಾಪನ (ಪ್ರತಿಯೊಂದು ಘಟಕದ ಒಟ್ಟು ಕಲಿಕಾ ಸಾಧನೆಗಳ ಮೌಲ್ಯಮಾಪನ) ಇವುಗಳನ್ನು ವಿವರವಾಗಿ ಪರಿಶೀಲಿಸೋಣ.**
- **ಪ್ರಕ್ರಿಯೆಯ ಮೌಲ್ಯಮಾಪನ**

ಕಲಿಕೆಯ ನಿರ್ವಹಣೆಯ ವೇಳೆಯಲ್ಲಿ ಪ್ರಕ್ರಿಯೆಯ ಮೌಲ್ಯಮಾಪನವು ತುಂಬಾ ಪ್ರಧಾನವಾಗಿದೆ. ಕಲಿಕಾ ಪ್ರಕ್ರಿಯೆಯ ಪ್ರತಿಯೊಂದು ಘಟ್ಟವನ್ನು ಮೌಲ್ಯಮಾಪನ ಮಾಡಿ ಅಗತ್ಯವಾದ ಬೆಂಬಲವನ್ನು ನೀಡಬೇಕು. ಪ್ರತಿಯೊಂದು ಚಟುವಟಿಕೆಯ ಮೂಲಕ ಗಳಿಸಿದ ಆಶಯ ಮತ್ತು ತಿಳುವಳಿಕೆಗಳು, ಗಳಿಸಿದ ಕೌಶಲಗಳು ಎಂಬಿವುಗಳನ್ನು ಮೌಲ್ಯಮಾಪನ ಮಾಡಬೇಕು. ಸ್ವ–ಮೌಲ್ಯಮಾಪನ, ಪರಸ್ಪರ ಮೌಲ್ಯಮಾಪನ ಮತ್ತು ಅಧ್ಯಾಪಕರ ಮೌಲ್ಯಮಾಪನಗಳಿಗೆ ಯೋಗ್ಯವಾದ ಸೂಚಕಗಳನ್ನು ಘಟಕಗಳ ವಸ್ತುವಿಗೆ ಅನುಸರಿಸಿ ರೂಪಿಸಿ ಬಳಸಬೇಕು. ಪ್ರಕ್ರಿಯೆಗಳ ಮೌಲ್ಯಮಾಪನಕ್ಕೆ ಸಾಮಾನ್ಯವಾಗಿ ಕೆಳಗೆ ಕೊಡಲಾದ ಸೂಚಕಗಳನ್ನು ಬಳಸಬಹುದು.

1. ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ (ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವ ಸನ್ನದ್ಧತೆ, ವೈಯಕ್ತಿಕ ಚಟುವಟಿಕೆಗಳನ್ನು ನಿಭಾಯಿಸುವ ಸಾಮರ್ಥ್ಯ, ಗುಂಪು ಪಾಲ್ಗೊಳ್ಳುವಿಕೆ, ಆಶಯ ವಿನಿಮಯ.)
2. ಆಶಯ ತಿಳುವಳಿಕೆ
3. ಕೌಶಲಗಳ ಸಂಪಾದನೆ
4. ಅಭಿವ್ಯಕ್ತಿ/ಮಂಡನೆ
5. ದಾಖಲಿಸುವುದು/ಸಿದ್ಧಪಡಿಸುವುದು

ಪ್ರಕ್ರಿಯೆಯ ಮೌಲ್ಯನಿರ್ಣಯಕ್ಕೆ ನೀಡಲಾಗಿರುವ ಸೂಚಕಗಳ ಹಿನ್ನೆಲೆಯಲ್ಲಿ ಪ್ರತಿಯೊಂದು ಚಟುವಟಿಕೆಯನ್ನು ಮೌಲ್ಯನಿರ್ಣಯ ಮಾಡಿ ಮೌಲ್ಯಮಾಪನ ಪುಟದಲ್ಲಿ ದಾಖಲಿಸಬೇಕು. ಮಗುವಿನ ನೋಟ್‌ಬುಕ್ಕನ್ನು ಪ್ರಕ್ರಿಯೆಯ ಮೌಲ್ಯಮಾಪನದ ಸಾಕ್ಷ್ಯವಾಗಿ ಉಪಯೋಗಿಸಬೇಕು. ಅವಧಿಯ ಕೊನೆಯಲ್ಲಿ ಮಾತ್ರ ಇವುಗಳನ್ನು ಗ್ರೇಡಿಗೆ ಬದಲಾಯಿಸಿ ನಿರ್ದಿಷ್ಟ ನಮೂನೆಯಲ್ಲಿ ದಾಖಲಿಸಬೇಕು.

ಇದು ಯಾವ ರೀತಿ ಎಂದು ಗಣಿತದ ಒಂದು ಚಟುವಟಿಕೆಯ ಮೂಲಕ ಪರಿಶೀಲಿಸೋಣ.

1 ರಿಂದ ತೊಡಗಿ ಮುಂದುವರಿಯುವ ವಿಷಮ ಸಂಖ್ಯೆಗಳ ಮೊತ್ತವು ವಿಷಮ ಸಂಖ್ಯೆಗಳ ಸಂಖ್ಯೆಯನ್ನು ಅದರಿಂದಲೇ ಗುಣಿಸಿದಾಗ ಸಿಗುತ್ತದೆ ಎಂಬ ಆಶಯ ರೂಪೀಕರಣಕ್ಕೆ ಈ ಚಟುವಟಿಕೆ ಇರುವುದಾಗಿದೆ. (ಉದಾ: 1 + 3 + 5 + 7 = 4 x 4 = 16)

ಈ ಚಟುವಟಿಕೆಯ ಮೂಲಕ ಪಟ್ಟಿ ಮಾಡುವುದು, ಪಟ್ಟಿಯನ್ನು ವಿಶ್ಲೇಷಿಸುವುದು, ಪರಸ್ಪರ ಸಂಬಂಧವನ್ನು ಕಂಡುಹಿಡಿಯುವುದು, ನಿಗಮನವನ್ನು ರೂಪಿಸುವುದು ಮೊದಲಾದ ಸಾಮರ್ಥ್ಯಗಳ ವಿಕಾಸವನ್ನು ಗುರಿಯಾಗಿ ಇರಿಸಲಾಗಿದೆ.

ಇದಕ್ಕಾಗಿ ಅಧ್ಯಾಪಿಕೆ ಒಂದು ಸಮಸ್ಯೆಯನ್ನು ನೀಡುವರು. ಒಂದು ಮಗು ಬೆಂಕಿ ಪೆಟ್ಟಿಗೆಗಳನ್ನು ಪ್ರತ್ಯೇಕವಾದ ರೀತಿಯಲ್ಲಿ ಜೋಡಿಸಿಟ್ಟಿವೆ. ಮೇಲಿನ ಸಾಲಿನಲ್ಲಿ ಒಂದು , ಅದರ ಕೆಳಗಿನ ಸಾಲಿನಲ್ಲಿ 3, ಅದರ ಕೆಳಗೆ 5 ಎಂಬಂತೆ ಬೆಂಕಿ ಪೆಟ್ಟಿಗೆಗಳನ್ನು ಜೋಡಿಸಲಾಗಿದೆ.



ಹೀಗೆ 10 ಸಾಲುಗಳಲ್ಲಿ ಎಷ್ಟು ಬೆಂಕಿ ಪೆಟ್ಟಿಗೆಗಳನ್ನು ಬಳಸಿರಬಹುದು? ಹೀಗೆ 30 ಸಾಲುಗಳಿಗೆ ಎಷ್ಟು ಬೆಂಕಿಪೆಟ್ಟಿಗೆಗಳು ಬೇಕಾಗಬಹುದು ಎಂದು ಹೇಗೆ ಕಂಡುಹಿಡಿಯಬಹುದು?

ಈ ಚಟುವಟಿಕೆಯ ತರಗತಿ ಪ್ರಕ್ರಿಯೆಯನ್ನು ಪರಿಶೀಲಿಸೋಣ.

10 ಸಾಲುಗಳಲ್ಲಿ ಇರಿಸಲು ಎಷ್ಟು ಬೆಂಕಿ ಪೆಟ್ಟಿಗೆಗಳನ್ನು ಬಳಸಿರಬಹುದು ಎಂಬ ಪ್ರಶ್ನೆಯನ್ನು ಮೊದಲು ಪರಿಗಣಿಸುವುದು.

ಮಗು ತನ್ನದೇ ರೀತಿಯಲ್ಲಿ ಉತ್ತರ ಕಂಡುಹಿಡಿಯಲು ಪ್ರಯತ್ನಿಸುತ್ತದೆ.

1 + 3+ 5+ 7+ 9+ 11 + 13 + 15 + 17 + 19 = 100

ಕೆಲವರು ತರಗತಿಯಲ್ಲಿ ಮಂಡಿಸುವರು. ಅನಂತರ ಅಧ್ಯಾಪಿಕೆ ಪ್ರಶ್ನೆಗಳನ್ನು ಕೇಳುವರು.

30 ಸಾಲುಗಳಲ್ಲಿ ಎಷ್ಟೆಂದು ಇದೇ ರೀತಿಯಲ್ಲಿ ಕಂಡುಹಿಡಿಯಲು ಸುಲಭವೇ?

ಸಾಲುಗಳ ಸಂಖ್ಯೆ ಮತ್ತು ಒಟ್ಟು ಪೆಟ್ಟಿಗೆಗಳ ಸಂಖ್ಯೆಗಳ ಸಂಬಂಧವನ್ನು ಪರಿಶೀಲಿಸಲು ಒಂದು ಪಟ್ಟಿಯಲ್ಲಿ ಮಾಹಿತಿಗಳನ್ನು ದಾಖಲಿಸಿ ಕ್ರೋಡೀಕರಿಸುವುದು.

ಹಾಗಾದರೆ ಪಟ್ಟಿ ಹೇಗಿರಬೇಕು?

ಪ್ರತಿಯೊಬ್ಬರೂ ವೈಯಕ್ತಿಕವಾಗಿ ಪಟ್ಟಿ ತಯಾರಿಸಲಿ. ಗುಂಪಿನಲ್ಲಿ ಚರ್ಚಿಸಿ ತರಗತಿಯಲ್ಲಿ ಮಂಡಿಸಲಿ. ತರಗತಿ ಚರ್ಚೆಯ ಬಳಿಕ ಸಾಮಾನ್ಯ ಪಟ್ಟಿಯನ್ನು ರಚಿಸಿ, ಅದರಲ್ಲಿ ದಾಖಲಿಸಬೇಕು.

| ಸಾಲು | ಸಾಲಿನ ಸಂಖ್ಯೆ | ಒಟ್ಟು ಸಂಖ್ಯೆ |
|---|---|---|
| 1 | 1 | 1 |
| 2 | 3 | 4 |
| 3 | 5 | 9 |
| 4 | 7 | 16 |
| 5 | 9 | 25 |
| 6 | 11 | 36 |

ಅಧ್ಯಾಪಿಕೆ ಪ್ರಶ್ನೆ ಕೇಳುವರು.

ಸಾಲಿನ ಸಂಖ್ಯೆ ಹಾಗೂ ಒಟ್ಟು ಸಂಖ್ಯೆಯನ್ನು ಪರಸ್ಪರ ಯಾವುದಾದರೂ ಸಂಬಂಧವನ್ನು ಕಂಡುಹಿಡಿಯಲು ಸಾಧ್ಯವಿದೆಯೇ?

ವೈಯಕ್ತಿಕವಾಗಿ ಕಂಡುಹಿಡಿಯಲಿ.

ಕಂಡುಹಿಡಿಯಲು ಸಾಧ್ಯವಾಗದವರಿಗೆ ಅಧ್ಯಾಪಿಕೆ ಕೆಲವು ಪ್ರಶ್ನೆಗಳನ್ನು ಕೇಳುವುದು.

ಒಂದನೇ ಸಾಲಿನಲ್ಲಿ ಬೆಂಕಿಪೆಟ್ಟಿಗೆ ಎಷ್ಟು?

ಎರಡನೇ ಸಾಲಿನಲ್ಲಿ ಬೆಂಕಿಪೆಟ್ಟಿಗೆ ಎಷ್ಟು?

ಸಾಲು ಹಾಗೂ ಬೆಂಕಿಪೆಟ್ಟಿಗೆಗಳ ಸಂಖ್ಯೆಗೆ ಪರಸ್ಪರ ಸಂಬಂಧ ಇದೆಯೇ?

.........................?

..........................? ಇತ್ಯಾದಿ

ಕಂಡುಹಿಡಿದ ಉತ್ತರವನ್ನು ನೋಟು ಪುಸ್ತಕದಲ್ಲಿ ಬರೆಯಲಿ.

ಗುಂಪಿನಲ್ಲಿ ಚರ್ಚಿಸಿ, ಪರಸ್ಪರ ಮೌಲ್ಯಮಾಪನ ಮಾಡಿ ಉತ್ತಮಪಡಿಸಲಿ. ತರಗತಿಯಲ್ಲಿ ಮಂಡಿಸಲಿ. ಚರ್ಚೆಯ ಬಳಿಕ ಇನ್ನಷ್ಟು ಉತ್ತಮಪಡಿಸಿ ಬರೆಯಲಿ.

**ಸಾಲಿನ ಸಂಖ್ಯೆಯನ್ನು ಆ ಸಂಖ್ಯೆಯಿಂದಲೇ ಗುಣಿಸಿದಾಗ ಒಟ್ಟು ಬೆಂಕಿಪೆಟ್ಟಿಗೆಗಳ ಸಂಖ್ಯೆಯು ಸಿಗುವುದು.**

ಅನಂತರ ಅಧ್ಯಾಪಿಕೆ ಪ್ರಶ್ನೆಗಳನ್ನು ಕೇಳುವುದು. 1 ರಿಂದ ಆರಂಭವಾಗುವ ವಿಷಮ ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯಲು ಸುಲಭದ ದಾರಿ ಯಾವುದು?

ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ಗುಂಪಿನ ಚರ್ಚೆ, ಪರಸ್ಪರ ಮೌಲ್ಯಮಾಪನ – ಉತ್ತಮಪಡಿಸುವುದು.

ತರಗತಿಯಲ್ಲಿ ಮಂಡನೆ.

ಚರ್ಚೆಯ ಬಳಿಕ ಉತ್ತಮಪಡಿಸಿ ಬರೆಯಲಿ.

**1 ರಿಂದ ತೊಡಗಿ ಮುಂದುವರಿಯುವ ವಿಷಮ ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯಲು ಆ ವಿಷಮ ಸಂಖ್ಯೆಗಳ ಸಂಖ್ಯೆಯನ್ನು ಅದರಿಂದಲೇ ಗುಣಿಸಿದರೆ ಸಾಕು.**

ಈ ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯ ಸಾಮರ್ಥ್ಯವನ್ನು ವಿವಿಧ ಸೂಚಕಗಳನ್ನು ಬಳಸಿಕೊಂಡು ಮೌಲ್ಯಮಾಪನ ಮಾಡುವುದು ಹೇಗೆಂದು ಪರಿಶೀಲಿಸೋಣ.

- **ಚಟುವಟಿಕೆಯ ಭಾಗವಹಿಸುವಿಕೆ**
  - ಚಟುವಟಿಕೆಯನ್ನು ವಹಿಸಿಕೊಂಡಿದ್ದಾರೆಯೇ?
  - ವೈಯಕ್ತಿಕವಾಗಿ ಮಾಡಲು ಪ್ರಯತ್ನಿಸಿದ್ದಾರೆಯೇ?
  - ಗುಂಪಿನಲ್ಲಿ ಸರಿಯಾಗಿ ಭಾಗವಹಿಸಿದ್ದಾರೆಯೇ?
  - ಆಶಯಗಳನ್ನು ಹಂಚಿಕೊಂಡಿದ್ದಾರೆಯೇ?
- **ಆಶಯಗ್ರಹಣ**
  - ಈ ಚಟುವಟಿಕೆಯ ಪರಿಣಾಮವಾಗಿ ಉಂಟಾಗಬೇಕಾದ ಆಶಯ ಗ್ರಹಣವನ್ನು ರೂಪಿಸಲು ಸಾಧ್ಯವಾಗಿದೆಯೇ?
  - ಚಟುವಟಿಕೆಗಳನ್ನು ಮತ್ತು ಫೀಡ್‌ಬ್ಯಾಕ್‌ಗಳನ್ನು ನೀಡಬೇಕಾಗಿದೆಯೇ?
- **ಸಾಮರ್ಥ್ಯಗಳ ಆರ್ಜಿಸುವಿಕೆ**
  - ಈ ಚಟುವಟಿಕೆಯ ಮೂಲಕ ನಿರ್ಧರಿಸಿರುವ ಸಾಮರ್ಥ್ಯಗಳನ್ನು ಸಾಧಿಸಲು ಸಾಧ್ಯವಾಗಿದೆಯೇ?
  - ಪಟ್ಟಿ ರಚಿಸಲಾಗಿದೆಯೇ?
  - ಸಾಲುಗಳಲ್ಲೂ ಬೆಂಕಿಪೆಟ್ಟಿಗೆಗಳಲ್ಲೂ ಇರುವ ಸಂಬಂಧವನ್ನು ಕಂಡುಹಿಡಿಯಲು ಸಾಧ್ಯವಾಗಿದೆಯೇ?
  - ಹೆಚ್ಚಿನ ಪ್ರಶ್ನೆಗಳೂ, ಅಧ್ಯಾಪಕರ ಸಹಾಯವೂ ಬೇಕಾಗಿ ಬಂದಿದೆಯೇ?
  - ಪಟ್ಟಿಯನ್ನು ವಿಶ್ಲೇಷಿಸಿ ನಿಗಮನಕ್ಕೆ ತಲುಪಲು ಸಾಧ್ಯವಾಗಿದೆಯೇ? ಇತರರ ಸಹಾಯವು ಬೇಕಾಯಿತೇ?
- **ಪ್ರದರ್ಶನ/ಮಂಡನೆ**
  - ವೈಯಕ್ತಿಕ ಚಟುವಟಿಕೆಯ ನಂತರ ಹಾಗೂ ಗುಂಪು ಚಟುವಟಿಕೆಯ ನಂತರ ಕಂಡುಹಿಡಿದ ವಿಷಯವನ್ನು ಮಂಡಿಸಲು ಪ್ರಯತ್ನಿಸಿದ್ದಾರೆಯೇ?
  - ನಿಗಮನವನ್ನು ಯುಕ್ತಿಯುಕ್ತವಾಗಿ ಸಮರ್ಥಿಸಲು ಸಾಧ್ಯವಾಗಿದೆಯೇ?
- **ದಾಖಲಿಸುವಿಕೆ/ತಯಾರಿಸುವಿಕೆ**
  - ಚಟುವಟಿಕೆಗಳ ಮೂಲಕ ಸಾಗಿ ಹೋದಾಗ ಅಗತ್ಯವಾದ ದಾಖಲೆಗಳನ್ನು ಮಾಡಲಾಗಿದೆಯೇ?
  - ದಾಖಲಿಸಿರುವುದು ಇತರರಿಗೆ ಅರ್ಥವಾಗು ವಂತಿದೆಯೇ?
  - ದಾಖಲಾತಿ ಶಿಸ್ತುಬದ್ಧವಾಗಿದೆಯೇ?
  - ಪಟ್ಟಿಯನ್ನು ಸರಿಯಾಗಿ ಸಿದ್ಧಪಡಿಸಲಾಗಿದೆಯೇ?
  - ವೈಯಕ್ತಿಕವಾದ ಗುಂಪು ಚರ್ಚೆಯ ನಂತರದ ಹಾಗೂ ತರಗತಿ ಚರ್ಚೆಯ ನಂತರದ ದಾಖಲೀಕರಣ ನಡೆದಿದೆಯೇ?

**ಸೂಚನೆ :** ಪ್ರತಿಯೊಂದು ಚಟುವಟಿಕೆಗೂ ಇದೇ ಸೂಚಕಗಳನ್ನು ಬಳಸಿ ಎಲ್ಲ ಮಕ್ಕಳನ್ನು ಮೌಲ್ಯಮಾಪನ ಮಾಡಿ ಗ್ರೇಡ್ ದಾಖಲಿಸಬೇಕಾಗಿಲ್ಲ. ಈ ಸೂಚಕಗಳನ್ನು ಆಧರಿಸಿ ಒಂದು ಅವಧಿಯ ಒಟ್ಟು ಪ್ರದರ್ಶನವನ್ನು ಮೌಲ್ಯಮಾಪನ ಮಾಡಬೇಕಾಗಿದೆ. ಅವಧಿಯ ಕೊನೆಯಲ್ಲಿ ಪ್ರತಿಯೊಂದು ಸೂಚಕಕ್ಕೂ 4/3/2/1 ಎಂಬಂತೆ ಅಂಕಗಳನ್ನು ನೀಡಿ ಪ್ರಕ್ರಿಯೆಯ ಗ್ರೇಡ್ ಲೆಕ್ಕಹಾಕಬೇಕು. ಇದಕ್ಕಾಗಿ ಮಗುವಿನ ನೋಟು ಪುಸ್ತಕದ ಬರವಣಿಗೆಯನ್ನು ಬಳಸಿಕೊಳ್ಳಬಹುದು.

**ನಿರಂತರ ಮೌಲ್ಯಮಾಪನದ ಅಂಗವಾಗಿ ಭಾಷಾಕಲಿಕೆಯಲ್ಲಿ ಕಲಿಕಾ ಪ್ರಕ್ರಿಯೆಗಳನ್ನು ಮೌಲ್ಯನಿರ್ಣಯ ಮಾಡುವುದು ಹೇಗೆಂದು ಪರಿಶೀಲಿಸೋಣ.**

ಭಾಷಾ ಕಲಿಕೆಯಲ್ಲಿ ಮಗುವಿಗೆ ಆಂತರಂಗಿಕವಾದ ಆಶಯವು ಲಭ್ಯವಾಗುದುರೊಂದಿಗೆ ವ್ಯವಹಾರ ರೂಪಗಳಿಗೆ ಸಂಬಂಧಿಸಿದ ಜ್ಞಾನ ಹಾಗೂ ಭಾಷಾ ಕೌಶಲಗಳ ಪ್ರಗತಿಯೂ ಆಗುತ್ತದೆ. ಹಾಗಾದರೆ ಸೂಚಕಗಳನ್ನು ಪರಿಗಣಿಸಿಕೊಂಡು ಕಲಿಕಾ ಪ್ರಕ್ರಿಯೆಗಳನ್ನು ಮೌಲ್ಯಮಾಪನ ಮಾಡುವುದು ಹೇಗೆ?

- **ಭಾಗವಹಿಸುವಿಕೆ**

ಕಲಿಕಾ ಚಟುವಟಿಕೆಯಲ್ಲಿ ವಿದ್ಯಾರ್ಥಿಯ ಆಸಕ್ತಿ, ಗುಂಪು ಚಟುವಟಿಕೆಯಲ್ಲಿ ಭಾಗವಹಿಸುವಿಕೆ, ವಿವಿಧ ಭಾಷಾ ಕಲಿಕೆಯ

ತಂತ್ರಗಳ ಮೂಲಕ (ಗ್ರಂಥಾಲಯ, ನಿಯೋಜಿತ ಕೆಲಸವನ್ನು ಮಾಡುವುದು.....) ಜ್ಞಾನವನ್ನು ಸೃಷ್ಟಿಸುವ ವಿಧಾನ ಮುಂತಾದುವುಗಳನ್ನು ಇದರಲ್ಲಿ ಪರಿಗಣಿಸಬೇಕು.

- **ಆಶಯಗ್ರಹಣ**

ಭಾಷಾ ಕಲಿಕೆಯಲ್ಲಿ ವಸ್ತು ವಿಷಯಕವಾದ ಅರಿವು, ವ್ಯವಹಾರ ರೂಪದ ಸ್ವರೂಪ, ಗುಣಮಟ್ಟ ಸೂಚಕಗಳು, ಭಾಷಿಕ ನೈಪುಣ್ಯ ಎಂಬಿವುಗಳಲ್ಲಿ ವಿದ್ಯಾರ್ಥಿಯಾವ ಹಂತದಲ್ಲಿದ್ದಾನೆ ಎಂಬುದನ್ನು ಅಧ್ಯಾಪಕರು ಇಲ್ಲಿ ಮೌಲ್ಯನಿರ್ಣಯ ಮಾಡಬೇಕು.

- **ಕೌಶಲಗಳು**

ಆಲಿಸುವಿಕೆ, ಮಾತುಗಾರಿಕೆ ಭಾಷಣ, ವಾಚನ, ಲೇಖನ, ಸೃಜನ ಶೀಲತೆ ಮೊದಲಾದ ಕೌಶವಲಯಗಳಲ್ಲಿ ವಿದ್ಯಾರ್ಥಿಯ ಪ್ರಗತಿಯನ್ನು ಗುರುತಿಸಿ ಫೀಡ್‌ಬ್ಯಾಕ್ ನೀಡಬೇಕು. ಇಲ್ಲಿ ವಿವಿಧ ಭಾಷಾ ವ್ಯವಹಾರ ವಲಯಗಳು, ಭಾಷಿಕ ಅಂಶಗಳು, ವಿಚಾರ ವಿನಿಮಯ ಎಂಬಿವುಗಳಲ್ಲಿ ಮಗುವಿನ ಸಾಮರ್ಥ್ಯವನ್ನು ಪರಿಗಣಿಸಬೇಕು.

- **ಪ್ರದರ್ಶನ/ ಮಂಡನೆ**

ಭಾಷೆಯಲ್ಲಿ ವಿಚಾರಗಳ ಅಭಿವ್ಯಕ್ತಿಗೆ ಹಲವು ದಾರಿಗಳಿವೆಯಲ್ಲವೇ? ಮಗುವಿನ ರಚನಾ ಕೌಶಲದಂತೆಯೇ ಇತರ ಭಾಷಿಕ ಚಟುವಟಿಕೆಗಳೂ ಪ್ರಧಾನವಾಗಿವೆ. (ವಾಚನ, ಹಾಡುವಿಕೆ, ಅಭಿನಯ, ಚಿತ್ರರಚನೆ, ಭಾಷಣ) ಇವುಗಳಲ್ಲಿ ಉಚ್ಚಾರಶುದ್ಧಿ, ಸ್ಪಷ್ಟತೆ ಎಂಬಿವುಗಳನ್ನು ಪರಿಗಣಿಸಿಕೊಂಡು ಅಧ್ಯಾಪಕರು ಫೀಡ್‌ಬ್ಯಾಕ್ ನೀಡಬೇಕಾಗಿದೆ.

- **ದಾಖಲಿಸುವುದು/ ಸಿದ್ಧಪಡಿಸುವುದು**

ಚಟುವಟಿಕೆಗಳ ಮೂಲಕ ಸಾಗಿ ಹೋದಾಗ ಅಗತ್ಯವಾದ ದಾಖಲೀಕರಣ ನಡೆಸಲಾಗಿದೆಯೇ? ಈ ದಾಖಲೆಗಳು ಇತರರಿಗೆ ಅರ್ಥವಾಗುವಂತಿವೆಯೇ? ದಾಖಲೆಗಳು ಶಿಸ್ತು ಬದ್ಧವಾಗಿ ಇವೆಯೇ? ತರಗತಿ ಚರ್ಚೆಯ ಬಳಿಕ ಗುಂಪಿನಲ್ಲಿ ಉತ್ತಮಪಡಿಸಲಾಗಿದೆಯೇ? ತಪ್ಪಿಲ್ಲದೆ ರಚನೆಗಳನ್ನು ನಿರ್ವಹಿಸಲು ಮಕ್ಕಳಿಗೆ ಸಾಧ್ಯವಾಗಿದೆಯೇ? ಎಂಬಿವುಗಳನ್ನು ಅಧ್ಯಾಪಕರು ಮೌಲ್ಯಮಾಪನ ಮಾಡಬೇಕು.

**ಮೇಲೆ ಸೂಚಿಸಿದ ವಲಯಗಳಲ್ಲಿ ಒಂದು ಅವಧಿ ಮುಗಿಯುವಾಗ ವಿದ್ಯಾರ್ಥಿಯ ಸಮಗ್ರ ಪ್ರಗತಿಯನ್ನು ಪರಿಗಣಿಸಿಕೊಂಡು ಕಲಿಕಾ ಪ್ರಕ್ರಿಯೆಯನ್ನು ಮೌಲ್ಯಮಾಪನ ಮಾಡಿ ಅಧ್ಯಾಪಕರು ಗ್ರೇಡ್ ನೀಡಬೇಕಾಗಿದೆ.**

ಈ ಸೂಚಕಗಳೆಲ್ಲವೂ ಭಾಷಾ ಕಲಿಕೆಯ ಪ್ರಕ್ರಿಯೆಯಲ್ಲಿ ಯಾವಾಗಲೂ ಪ್ರಸ್ತುತವಾಗಿರುತ್ತವೆ. ಒಂದು ಅವಧಿಯ ವಿವಿಧ ಘಟಕಗಳ ನಿರ್ದಿಷ್ಟ ಕಲಿಕಾ ಸಾಧನೆಗಳನ್ನು ಖಾತರಿಪಡಿಸುವ ಎಲ್ಲ ಕಲಿಕಾ ಪ್ರಕ್ರಿಯೆಗಳಲ್ಲಿಯೂ ವಿದ್ಯಾರ್ಥಿಯ ಸಾಧನೆಯನ್ನು ಅಧ್ಯಾಪಕರು ಮೌಲ್ಯಮಾಪನ ಮಾಡಬಹುದು. ಅಗತ್ಯಕ್ಕೆ ಅನುಸರಿಸಿ ಟೀಚಿಂಗ್ ಮಾನ್ವೆಲ್‌ನ ಪ್ರತಿಕ್ರಿಯೆಯ ಪುಟದಲ್ಲಿ ದಾಖಲಿಸಲೂಬಹುದು.

- ಭಾಷೆಯ ಒಂದು ಕಲಿಕಾ ಪ್ರಕ್ರಿಯೆಯ ಸೂಕ್ಷ್ಮ ಪ್ರಕ್ರಿಯೆಯನ್ನು ನೋಡಿರಿ. (ವಿವರಣೆ ತಯಾರಿಸುವ ಕಲಿಕಾ ಪ್ರಕ್ರಿಯೆ)
- ಮಕ್ಕಳು ಹೂದೋಟದ ವಿವರಣೆ ತಯಾರಿಸಲಿ.

**ಪ್ರಕ್ರಿಯಾ ಹಂತಗಳು**

- ಲಭಿಸಿದ ಅನುಭವ (ನೇರ ಅನುಭವ, ದೃಶ್ಯ) ಹಾಗೂ ಆರ್ಜಿತ ಅರಿವಿನ ಆಧಾರದಲ್ಲಿ ವೈಯಕ್ತಿಕವಾಗಿ ವಿವರಣೆಯನ್ನು ತಯಾರಿಸುವುದು.
- ಗುಂಪಿನಲ್ಲಿ ಓದಿ ಮಂಡಿಸುವುದು. ಅಗತ್ಯ ಸೇರ್ಪಡೆ, ತಿದ್ದುವಿಕೆ ನಡೆಸಿ ಉತ್ತಮಪಡಿಸುವುದು.
- ಗುಂಪಿನ ಮಂಡನೆ

- ವಸ್ತು, ಸ್ವರೂಪ, ಭಾಷಾ ಪ್ರಯೋಗ ಇವುಗಳಿಗೆ ಸಂಬಂಧಿಸಿದಂತೆ ತರಗತಿಯಲ್ಲಿ ಸರಳ ಚರ್ಚೆ.
- ವಿವರಣೆಯ ಗುಣಮಟ್ಟ ಸೂಚಕಗಳನ್ನು ಪರಿಚಯಿಸುವುದು.
- ಉತ್ತಮಪಡಿಸಿದ ವಿವರಣೆ ತಯಾರಿಸುವುದು.

| ಇದನ್ನು ಎಡಿಟಿಂಗ್ ಪ್ರಕ್ರಿಯೆಗೆ ಒಳಪಡಿಸಿದರೆ ಪ್ರಕ್ರಿಯಾ ಹಂತಗಳು ಹೇಗಿರಬಹುದು? |
|---|

- ವೈಯಕ್ತಿಕ ರಚನೆ
- ಗುಂಪಿನಲ್ಲಿ ಓದಿ ಮಂಡನೆ – ಚರ್ಚೆ
- ಗುಂಪಿನ ಉತ್ಪನ್ನ ತಯಾರಿಸುವುದು (ಎಲ್ಲರೂ ಚರ್ಚಿಸಿ ಒಂದು ಉತ್ಪನ್ನ ತಯಾರಿಸಬೇಕು)
- ಗುಂಪಿನಲ್ಲಿ ತಯಾರಿಸಿದ ವಿವರಣೆಯನ್ನು ಪ್ರದರ್ಶಿಸುವುದು.
- ಅಧ್ಯಾಪಕರ ಮಾದರಿಯ ಪ್ರದರ್ಶನ.
- ಸರಾಸರಿಯಾಗಿರುವ ಒಂದು ಉತ್ಪನ್ನವನ್ನು ಪರಿಗಣಿಸಿ ನಿಖರವಾದ ಪ್ರಶ್ನೆಗಳನ್ನು ಕೇಳುವುದು. (ಆಶಯ ಹಂತ, ವಾಕ್ಯರಚನೆ, ಪದ, ಅಕ್ಷರ, ಚಿಹ್ನೆ)
- ಚರ್ಚೆಯ ಆಧಾರದಲ್ಲಿ ಮಕ್ಕಳು ತಮ್ಮ ರಚನೆಗಳನ್ನು ಉತ್ತಮಪಡಿಸುವುದು.

ಈ ಚಟುವಟಿಕೆಯನ್ನು ವಿವಿಧ ಸೂಚಕಗಳನ್ನು ಉಪಯೋಗಿಸಿ ಮೌಲ್ಯಮಾಪನ ಮಾಡುವುದು ಹೇಗೆಂದು ಪರಿಶೀಲಿಸೋಣ.

- ಭಾಗವಹಿಸುವಿಕೆ : ಚಟುವಟಿಕೆಯುದ್ದಕ್ಕೂ ಇರುವ ಭಾಗವಹಿಸುವಿಕೆ.
- ಆಶಯ ಗ್ರಹಣ : ಹೂದೋಟದ ವಿವರಣೆಯಲ್ಲಿ ಪರಿಗಣಿಸಬೇಕಾದ ಆಶಯಗಳು, ವಿವರಣೆಯ ಸ್ವರೂಪ, ಸೂಚಕಗಳ ಗುಣಮಟ್ಟ ಸಂಬಂಧಿಸಿದ ಜ್ಞಾನ.
- ಸಾಮರ್ಥ್ಯಗಳು : ಭಾಷಣ, ವಾಚನ, ಲೇಖನ ಮೊದಲಾದುವುಗಳಲ್ಲಿ ಮಗುವಿನ ಸಾಮರ್ಥ್ಯ.
- ಅಭಿವ್ಯಕ್ತಿ : ವೈಯಕ್ತಿಕ ರಚನೆಯನ್ನು ಗುಂಪಿನಲ್ಲಿ ಓದಿ ಮಂಡಿಸುವಾಗಲೂ, ಗುಂಪಿನ ಮಂಡನೆಯಲ್ಲಿಯೂ.
- ದಾಖಲಿಸುವಿಕೆ : ವೈಯಕ್ತಿಕ ರಚನೆ, ಗುಂಪಿನ ಉತ್ತಮಪಡಿಸುವಿಕೆ, ಚಟುವಟಿಕೆಯುದ್ದಕ್ಕೂ ಮಾಡಿದಾಗ ದಾಖಲೀಕರಣ ಎಂಬಿವುಗಳನ್ನು ಪರಿಗಣಿಸಿ, ಈ ಚಟುವಟಿಕೆಯನ್ನು ಮೌಲ್ಯಮಾಪನ ಮಾಡಿ ಅಗತ್ಯಕ್ಕೆ ಅನುಸರಿಸಿ ಟೀಚಿಂಗ್ ಮಾನ್ವೆಲ್‌ನಲ್ಲಿ ದಾಖಲಿಸುವಿರಲ್ಲವೇ?

ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಕೆಲವು ಉದಾಹರಣೆಗಳನ್ನು ಗಮನಿಸಿರುವಿರಲ್ಲವೇ? ಅವಧಿಯ ಕೊನೆಯಲ್ಲಿ ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನ ದಾಖಲಿಸುವಾಗ ಅಧ್ಯಾಪಕರಿಗೆ

(i) ತಮ್ಮ ಟೀಚಿಂಗ್ ಮಾನ್ವೆಲ್

(ii) ಮಕ್ಕಳ ನೋಟು ಪುಸ್ತಕ ಇವುಗಳನ್ನು ಆಧಾರವಾಗಿಸಬೇಕು.

## 1. ಟೀಚಿಂಗ್ ಮ್ಯಾನುವೆಲ್‌ನ ವಿವರಗಳು

ಕಲಿಕೆಯ ಚಟುವಟಿಕೆಗಳನ್ನು ಸುಸೂತ್ರವಾಗಿ ಸಂಯೋಜನೆ ಮಾಡುವುದಕ್ಕೂ, ಶಾಸ್ತ್ರೀಯವಾದ ನಿರಂತರ ಮೌಲ್ಯಮಾಪನವನ್ನು ಮಾಡುವುದಕ್ಕೂ ಟೀಚಿಂಗ್ ಮ್ಯಾನುವೆಲ್‌ನ್ನು ಸಿದ್ಧಪಡಿಸುವುದು ಅವಶ್ಯಕವಾಗಿದೆ.

ಟೀಚಿಂಗ್ ಮ್ಯಾನುವೆಲ್‌ಗಳಲ್ಲಿ ಕೆಳಗೆ ನೀಡಲಾದ ಘಟಕಗಳನ್ನು ಕೊಡಬಹುದಾಗಿದೆ.

- ಕಲಿಕಾ ಸಾಧನೆಗಳು
- ಆಶಯಗಳು/ತಿಳುವಳಿಕೆಗಳು

- ಕೌಶಲಗಳು
- ಮೌಲ್ಯಗಳು/ಮನೋಭಾವಗಳು
- ಕಲಿಕೋಪಕರಣಗಳು
- ನಿರೀಕ್ಷಿಸುವ ಉತ್ಪನ್ನಗಳು
- ಸಮಯ
- ಚಟುವಟಿಕೆಗಳು ಮತ್ತು ಮೌಲ್ಯಮಾಪನ ಒಳಗೊಂಡ ಪ್ರಕ್ರಿಯಾ ಪುಟ, ಮೌಲ್ಯಮಾಪನದ ಮಾಹಿತಿಗಳನ್ನು ದಾಖಲಿಸಿದ ಮೌಲ್ಯನಿರ್ಣಯದ ಪುಟ.
- ಮೌಲ್ಯನಿರ್ಣಯದ ಪುಟದ ಮಾಹಿತಿಗಳನ್ನು ಆಧರಿಸಿದ ಅವಲೋಕನ ಟಿಪ್ಪಣಿಗಳು

ಮ್ಯಾನುವೆಲ್‌ನಲ್ಲಿ ಹೊಂದಾಣಿಕೆಯಿಂದ ಕೂಡಿದ ಕಲಿಕಾ ಚಟುವಟಿಕೆಗಳ ಯೋಜನೆ, ಮೌಲ್ಯನಿರ್ಣಯ ಸಂದರ್ಭಗಳು, ತಂತ್ರಗಳು, ಉಪಕರಣಗಳಿರಬೇಕು.

## 2. ವಿಷಯಾಧಾರಿತ ನೋಟ್‌ಬುಕ್ ಸಂಬಂಧಿಸಿದ ವಿವರಗಳು

ವಿದ್ಯಾರ್ಥಿಯ ನೋಟ್ ಪುಸ್ತಕವು ವೈಜ್ಞಾನಿಕ ವಲಯದ ಮೌಲ್ಯಮಾಪನಕ್ಕೆ ಆಧಾರವಾಗಿವ ಪ್ರಧಾನ ದಾಖಲೆಯಾಗಿದೆ. ಕಲಿಕೆಯ ಪ್ರಕ್ರಿಯೆಗಳಿಗನುಸರಿಸಿ ವಿವಿಧ ಚಟುವಟಿಕೆಗಳನ್ನು ಪೂರ್ತೀಕರಿಸಲು ನೋಟ್‌ಪುಸ್ತಕವು ಸಹಕಾರಿಯಾಗಿದೆ. ವಿದ್ಯಾರ್ಥಿಯ ಸೃಜನಶೀಲತೆ, ಚಿಂತನ ಪ್ರಕ್ರಿಯೆಗಳು, ಭಾಷಾ ನೈಪುಣ್ಯ ಮೊದಲಾದವುಗಳು ನೋಟ್ ಪುಸ್ತಕದಲ್ಲಿ ಪ್ರತಿಫಲಿಸುತ್ತವೆ. ಪಾಠ ವಿನಿಮಯ ಮಾಡುವುದಕ್ಕೆ ಬಳಸುವ ವಿವಿಧ ತಂತ್ರಗಳು, ಅವುಗಳ ಪೂರ್ತೀಕರಣಕ್ಕೆ ವಿದ್ಯಾರ್ಥಿ ನಡೆಸುವ ಸಿದ್ಧತೆಗಳು, ಚಟುವಟಿಕೆಗಳ ವಿವಿಧ ಹಂತಗಳ ಪಾಲ್ಗೊಳ್ಳುವಿಕೆ ಮೊದಲಾದ ಎಲ್ಲಾ ಮಾಹಿತಿಗಳು ನೋಟ್ ಪುಸ್ತಕದಲ್ಲಿರಬೇಕು. ಚಟುವಟಿಕೆಗಳ ಮೂಲಕ ರೂಪುಗೊಂಡ ಉತ್ಪನ್ನಗಳಿಗೆ ಸಂಬಂಧಿಸಿದ ವಿವರಗಳನ್ನು ನೋಟ್‌ಪುಸ್ತಕದಲ್ಲಿಯೇ ದಾಖಲಿಸಬೇಕು.

ನಿರ್ದಿಷ್ಟ ಸಮಯದೊಳಗೆ ಸಾಧನೆಗಳ ಮೌಲ್ಯಮಾಪನ ಮಾಡಿ ಕಲಿಕೆಯ ಪ್ರಗತಿಗೆ ಅಗತ್ಯವಾದ ಸೂಚನೆಗಳನ್ನು, ಮಾರ್ಗದರ್ಶನವನ್ನು ಅಧ್ಯಾಪಕರು ನೀಡಬೇಕು. ಘಟಕದ ಕೊನೆಯಲ್ಲಿ ಕಲಿಕಾ ಸಾಧನೆಗಳನ್ನು ವಿದ್ಯಾರ್ಥಿ ಗಳಿಸಿಕೊಂಡಿರುವನೋ? ಎಂದು ಪರೀಕ್ಷಿಸುವ ದಾಖಲೆಯಾಗಿ ನೋಟ್‌ಪುಸ್ತಕಗಳು ಕಾರ್ಯ ನಿರ್ವಹಿಸಬೇಕು.

ನೋಟ್‌ಪುಸ್ತಕವು ಆಶಯಸ್ಪಷ್ಟತೆಯಿಂದ ಕೂಡಿರುವುದು, ಆಶಯ ಮತ್ತು ಸನ್ನಿವೇಶಗಳಿಗೆ ಯೋಗ್ಯವಾದ ಉಲ್ಲೇಖಗಳಿರುವುದು, ತನ್ನ ಚಿಂತನೆಗಳನ್ನು ಒಳಗೊಂಡಿರುವುದು ಮತ್ತು ಪ್ರತಿಫಲಿಸುವಂತಹದು ಆಗಿರಬೇಕು. ವಿಷಯಗಳನ್ನು ನಿಖರವಾಗಿ ಮಂಡಿಸಿರಬೇಕು. ನೋಟ್‌ಪುಸ್ತಕಕ್ಕೆ ಸಮಗ್ರತೆ ಮತ್ತು ಮುಂದುವರಿಕೆಯಿರಬೇಕು.

## ಪೋರ್ಟ್‌ಫೋಲಿಯೋ ಮೌಲ್ಯಮಾಪನ

ಕಲಿಕಾ ಚಟುವಟಿಕೆಯಲ್ಲಿ ಮುಂದುವರಿಯುವಾಗ ಸಿಗುವ ಎಲ್ಲಾ ಉತ್ಪನ್ನಗಳನ್ನು ಪೋರ್ಟ್‌ಫೋಲಿಯೋದಲ್ಲಿ ಅಳವಡಿಸಿ ಮೌಲ್ಯಮಾಪನ ಮಾಡಬೇಕು. ಕಲಿಕೆಗೆ ಸಂಬಂಧಿಸಿ ಮಗುವಿಗೂ ಹೆತ್ತವರಿಗೂ ಫೀಡ್‌ಬ್ಯಾಕ್ ನೀಡುವ ಕೆಲಸವನ್ನು ಪೋರ್ಟ್‌ಫೋಲಿಯೋ ನೀಡುತ್ತದೆ. ಇದು ಕಲಿಕೆಯನ್ನು ತ್ವರಿತಗೊಳಿಸುತ್ತದೆ.

ಪೋರ್ಟ್‌ಫೋಲಿಯೋದಲ್ಲಿ,

- ನೋಟ್‌ಬುಕ್
- ಇತರ ರಚನೆಗಳು (ವೈಯಕ್ತಿಕ ರಚನೆ, ಉತ್ತಮಗೊಳಿಸಿದ ರಚನೆ)
- ಇತರ ಕಲಿಕಾ ಸಾಕ್ಷ್ಯಗಳು (ಚಿತ್ರಗಳು, ಸಂಗ್ರಹಗಳು, ಕಲಿಕೋಪಕರಣಗಳು)
- ಸೃಜನಶೀಲ ರಚನೆಗಳು

- ವರ್ಕ್‌ಶೀಟ್‌ಗಳು

ಈ ಮೊದಲಾದುವು ಸೇರಿಕೊಂಡಿವೆ.

ಪೋರ್ಟ್‌ಫೋಲಿಯೋ ಮೌಲ್ಯಮಾಪನಕ್ಕೆ ಕೆಳಗೆ ಕೊಡಲಾದ ಸೂಚಕಗಳನ್ನು ಬಳಸಬಹುದು.

- ಆಶಯ ಸ್ಪಷ್ಟತೆ
- ತಿಳುವಳಿಕೆಗಳನ್ನು ತನ್ನದಾಗಿಸಿರುವುದು
- ಯೋಗ್ಯವಾದ ಸಂರಚನೆ
- ಪೂರ್ಣತೆ
- ನೈಜತೆ

ಪೋರ್ಟ್‌ಫೋಲಿಯೋ ಮೌಲ್ಯಮಾಪನಕ್ಕೆ ಸಂಬಂಧಿಸಿ ಒಂದು ಉದಾಹರಣೆಯನ್ನು ನೋಡೋಣ.

**ಚಟುವಟಿಕೆ : ಕಲಿಕೋಪಕರಣ ನಿರ್ಮಾಣ**

ಏಳನೇ ತರಗತಿಯ ವಿಜ್ಞಾನ ವಿಷಯದ ಪ್ರಕಾಶ ವಿಸ್ಮಯಗಳು ಎಂಬ ಪಾಠಭಾಗಕ್ಕೆ ಸಂಬಂಧಿಸಿದ ಪ್ರತಿಫಲನದ ಆವರ್ತನೆ ಎಂಬ ಆಶಯವನ್ನು ವಿವರಿಸಲು ಚೋಕ್ ಪೆಟ್ಟಿಗೆ ಹಾಗೂ ಕನ್ನಡಿಯ ತುಂಡುಗಳನ್ನು ಬಳಸಿಕೊಂಡು ಮಗು ಒಂದು ಉಪಕರಣವನ್ನು ನಿರ್ಮಿಸುತ್ತದೆ. ಚೋಕ್ ಪೆಟ್ಟಿಗೆಯ ಎರಡೂ ಬದಿಗಳಲ್ಲಿ ಸಮಾನಾಂತರವಾಗಿ ಕನ್ನಡಿಯ ತುಂಡುಗಳನ್ನು ಅಂಟಿಸುವುದು. ಪೆಟ್ಟಿಗೆಯ ಒಂದು ಬದಿಯಲ್ಲಿ ಚಿಕ್ಕ ದ್ವಾರವನ್ನು ನಿರ್ಮಿಸಿ, ಆ ಬದಿಯಲ್ಲಿ ಅಂಟಿಸಿದ ಕನ್ನಡಿಯ ಚೂರಿನ ಪಾದರಸ ಲೇಪನವನ್ನು ಸ್ವಲ್ಪ ತೆಗೆಯಬೇಕು. ಚೋಕ್ ಪೆಟ್ಟಿಗೆಯಲ್ಲಿ ಯಾವುದಾದರೂ ಒಂದು ವಸ್ತುವನ್ನಿರಿಸಿ, ಪೆಟ್ಟಿಗೆಯ ದ್ವಾರದ ಮೂಲಕ ನೋಡಿದರೆ ಅನೇಕ ಪ್ರತಿಬಿಂಬಗಳನ್ನು ಕಾಣಬಹುದು. ಪೋರ್ಟ್‌ಫೋಲಿಯ ಮೌಲ್ಯಮಾಪನದ ಸೂಚಕಗಳನ್ನು ಉಪಯೋಗಿಸಿ ಈ ಚಟುವಟಿಕೆಯನ್ನು ಹೇಗೆ ಮೌಲ್ಯಮಾಪನ ಮಾಡಬಹುದು ಎಂದು ಪರಿಶೀಲಿಸೋಣ.

**1. ಆಶಯ ಸ್ಪಷ್ಟತೆ**

ನಯವಾದ ಕನ್ನಡಿಯು ಬೆಳಕಿನ ಕಿರಣಗಳನ್ನು ಚೆನ್ನಾಗಿ ಪ್ರತಿಫಲಿಸುವುದು ಹಾಗೂ ಬೆಳಕಿನ ಕಿರಣಗಳು ಆವರ್ತನೆಗೊಂಡು ಪ್ರತಿಫಲಿಸುವುದರಿಂದ ಅನೇಕ ಪ್ರತಿಬಿಂಬಗಳು ಉಂಟಾಗುತ್ತವೆ ಎಂಬ ಆಶಯ ವಿಶದೀಕರಣಕ್ಕೆ ಸಹಾಯಕವಾದ ಒಂದು ಉಪಕರಣವಿದೆಂದು ಮಗು ತಿಳಿದುಕೊಂಡಿದೆ.

**2. ಅರಿವನ್ನು ತನ್ನದಾಗಿಸಿಕೊಳ್ಳುವುದು**

ಕನ್ನಡಿಯ ಚೂರುಗಳನ್ನು ಪರಸ್ಪರ ಮುಖಾಮುಖಿಯಾಗಿ ಇರಿಸುವ ಅಗತ್ಯ, ಸಮಾನಾಂತರವಾಗಿ ಇರಿಸುವ ಅಗತ್ಯ, ಇವುಗಳನ್ನು ತಿಳಿದುಕೊಳ್ಳುವುದು ಹಾಗೂ ಕನ್ನಡಿಯ ಚೂರನ್ನು ಅಂಟಿಸಿದ ಭಾಗದಲ್ಲಿ ತೂತುಮಾಡಿ, ಕನ್ನಡಿಯ ಪಾದರಸ ಲೇಪನವನ್ನು ತೆಗೆದು, ಬೆಳಗ್ಗೆ ನೋಡುವಾಗ ಅನೇಕ ಪ್ರತಿಬಿಂಬಗಳನ್ನು ಕಾಣಲು ಸಾಧ್ಯ ಮೊದಲಾದ ಅರಿವುಗಳು ಮಗುವಿಗೆ ಸಿಕ್ಕಿದೆಯೇ ಎಂದು ತಿಳಿಯಲು ಮಗುವಿನೊಡನೆ ಚರ್ಚೆ ಮಾಡಬೇಕಾಗಬಹುದು.

**3. ಯೋಗ್ಯವಾದ ರೂಪರಚನೆ**

ಈ ಸೂಚಕವನ್ನು ಕೆಳಗೆ ನೀಡಲಾದ ಘಟಕಗಳನ್ನು ಉಪಯೋಗಿಸಿ ಮೌಲ್ಯಮಾಪನ ಮಾಡುವಾಗ ಮುಖ್ಯವಾಗಿ ಪರಿಗಣಿಸಬೇಕಾಗಿದೆ.

- ಚೋಕ್ ಪೆಟ್ಟಿಗೆ ಹಾಗೂ ಇತರ ಯೋಗ್ಯ ವಸ್ತುಗಳನ್ನು ಆರಿಸಲಾಗಿದೆಯೇ?
- ಬಳಸಿದ ಕನ್ನಡಿ ಚೂರುಗಳ ಗಾತ್ರ.
- ಕನ್ನಡಿಯ ಚೂರುಗಳನ್ನು ಯಾವ ಬದಿಗಳಲ್ಲಿ ಅಂಟಿಸಲಾಗಿದೆ?
- ಪ್ರತಿಬಿಂಬ ಸಿಗಬೇಕಾದ ವಸ್ತು ಇರಿಸಿದ್ದು ಎಲ್ಲಿ?

**4. ಪರಿಪೂರ್ಣತೆ**

ಉಪಕರಣ ಪರಿಪೂರ್ಣವಾಗಿದೆಯೇ, ಅನೇಕ ಪ್ರತಿಬಿಂಬಗಳನ್ನು ಕಾಣಲು ಸಾಧ್ಯವಾಗಿದೆಯೇ ಮೊದಲಾದ ವಿಷಯಗಳನ್ನು ಪರಿಶೀಲಿಸಿ ಉಪಕರಣದ ಪರಿಪೂರ್ಣತೆಯನ್ನು ಮೌಲ್ಯಮಾಪನ ಮಾಡಬಹುದು.

**5. ನೈಜತೆ**

ಉಪಕರಣದ ಚೆಲುವು, ಪ್ರತಿಬಿಂಬ ಸಿಗಬೇಕಾದ ವಸ್ತುವಿನ ಆಯ್ಕೆ (ಉದಾ: ಹೂಗಳು, ಚಿಕ್ಕ ಬೊಂಬೆಗಳು, ಲೈಟ್...) ಸ್ವಚ್ಛತೆ, ಬಾಳಿಕೆ ಮೊದಲಾದ ವಿಷಯಗಳಲ್ಲಿ ನೈಜತೆಯಿದೆಯೇ ಎಂದು ಪರಿಶೀಲಿಸಬಹುದು.

ಮೇಲೆ ಸೂಚಿಸಿದ ಘಟಕಗಳ ಆಧಾರದಲ್ಲಿ ಸೂಚಕಗಳನ್ನು ಉಪಯೋಗಿಸಿ ಉತ್ಪನ್ನವನ್ನು (ಪೋರ್ಟ್ ಫೋಲಿಯೋ) ಮೌಲ್ಯಮಾಪನ ಮಾಡಬಹುದು. ಕಲಿಕಾ ಪ್ರಕ್ರಿಯೆಯ ಅಂಗವಾಗಿ ರೂಪುಗೊಳ್ಳುವ ಉತ್ಪನ್ನಗಳನ್ನು ಆಯಾ ಸಂದರ್ಭಗಳಲ್ಲಿ ಮೌಲ್ಯಮಾಪನ ಮಾಡಿ ಟೀಚಿಂಗ್ ಮಾನ್ವೆಲ್‌ನ ಪ್ರತಿಕ್ರಿಯಾ ಪುಟದಲ್ಲಿ ಅಥವಾ ಪ್ರತ್ಯೇಕ ಟಿಪ್ಪಣಿಗಳಾಗಿ ದಾಖಲಿಸಬಹುದು. ಅವಧಿಯಲ್ಲಿ ಒಂದು ಸಲ ಎಲ್ಲ ಉತ್ಪನ್ನಗಳನ್ನು ಸಮಗ್ರವಾಗಿ ಕಂಡು ಸೂಚಕಗಳಿಗೆ ಅನುಸರಿಸಿ ಅಂಕಗಳನ್ನು ನೀಡಬಹುದು.

**ಪ್ರಕ್ರಿಯೆ ಮತ್ತು ಪೋರ್ಟ್‌ಫೋಲಿಯೋ ಮೂಲಕ ಗ್ರೇಡ್ ನಿರ್ಧರಿಸುವ ರೀತಿ :**

ಪ್ರಕ್ರಿಯೆಯ ಮೌಲ್ಯನಿರ್ಣಯ ಮತ್ತು ಪೋರ್ಟ್‌ಫೋಲಿಯೋ ಮೌಲ್ಯನಿರ್ಣಯಗಳ ಪ್ರತಿಯೊಂದು ಸೂಚಕವು ಅತ್ಯುತ್ತಮ / ಉತ್ತಮ / ಸರಾಸರಿ/ ಇನ್ನೂ ಉತ್ತಮಗೊಳ್ಳಬೇಕಾಗಿದೆ ಎಂದು ಮೌಲ್ಯನಿರ್ಣಯ ಮಾಡಿ ಅನುಕ್ರಮವಾಗಿ 4/ 3/2/1 ಎಂಬಂತೆ ಅಂಕಗಳನ್ನು ಕೊಡಬೇಕು.

5 ಸೂಚಕಗಳನ್ನು ಪರಿಗಣಿಸುವಾಗ ಪ್ರತಿಯೊಂದು ಸೂಚಕಕ್ಕೂ 4/3/2/1 ಎಂಬಂತೆ ಅಂಕಗಳನ್ನು ನೀಡಿದರೆ ಗರಿಷ್ಠ 20 ಅಂಕಗಳು ಎಂದು ಪರಿಗಣಿಸಬಹುದು.

ಕೆಳಗೆ ನೀಡಲಾದ ರೀತಿಯಲ್ಲಿ ಅಂಕಗಳನ್ನು ಗ್ರೇಡ್ ಆಗಿ ಬದಲಾಯಿಸಬಹುದು.

| ಸ್ಕೋರ್ | ಗ್ರೇಡ್ |
|---|---|
| 15 – 20 | A |
| 12 – 14 | B |
| 9 – 11 | C |
| 7 – 8 | D |
| 7 ಕ್ಕಿಂತ ಕಡಿಮೆ | E |

ಒಂದು ಅವಧಿಯ ಪ್ರಕ್ರಿಯೆ ಮತ್ತು ಪೋರ್ಟ್‌ಫೋಲಿಯೋವನ್ನು ಸಮಗ್ರವಾಗಿ ಗಮನದಲ್ಲಿಟ್ಟು ಪ್ರತಿಯೊಂದು ಸೂಚಕಕ್ಕೂ ಅಂಕಗಳನ್ನು ನೀಡಿ ಗ್ರೇಡಿಗೆ ಬದಲಾಯಿಬೇಕು. ಹೀಗೆ ಅವಧಿಯ ಕೊನೆಯಲ್ಲಿ ಪ್ರಕ್ರಿಯೆಗಳ ಮೌಲ್ಯಮಾಪನವನ್ನು ನಮೂನೆಗಳಲ್ಲಿ ದಾಖಲಿಸುವಾಗ ಅಧ್ಯಾಪಕರು ತಮ್ಮ ಟೀಚಿಂಗ್ ಮ್ಯಾನುವೆಲ್‌ನ ಪ್ರತಿಕ್ರಿಯೆಯ ಪುಟ, ವಿದ್ಯಾರ್ಥಿಗಳ ನೋಟ್‌ಬುಕ್ ಎಂಬಿವುಗಳನ್ನು ಉಪಯೋಗಿಸಬಹುದು.

## ಘಟಕ ಮಟ್ಟದ ಮೌಲ್ಯಮಾಪನ

ಒಂದು ಘಟಕದಲ್ಲಿ ವಿವಿಧ ಕಲಿಕಾ ಸಾಧನೆಗಳಿಗಿರುವ ಚಟುವಟಿಕೆಗಳು ಪರಸ್ಪರ ಸಂಬಂಧದೊಂದಿಗೆ ವಿನ್ಯಾಸಗೊಂಡಿರುತ್ತವೆ. ಇದಕ್ಕೊಂದು ಸಮಗ್ರ ಸ್ವರೂಪವಿದೆ. ಒಂದು ಘಟಕವನ್ನು ಮೌಲ್ಯಮಾಪನ ಮಾಡುವುದರ ಮೂಲಕ ಈ ಸಮಗ್ರತಾ ಪ್ರಜ್ಞೆ (ಎಲ್ಲಾ ಕಲಿಕಾ ಸಾಧನೆಗಳನ್ನು ಪರಿಗಣಿಸಿ) ಯನ್ನು ಬೆಳೆಗಟ್ಟುವುದಾಗಿದೆ. ವಾಚಿಕದ ಮೌಲ್ಯಮಾಪನ, ರಸಪ್ರಶ್ನೆ ಕಾರ್ಯಕ್ರಮ, ಓಪನ್ ಬುಕ್ ಮೌಲ್ಯಮಾಪನ, ಪ್ರಶ್ನೆ ತಯಾರಿ ಮತ್ತು ಉತ್ತರ ಕಂಡುಹಿಡಿಯುವುದು, ಹೊಸ ರಚನೆಗಳ ಮೌಲ್ಯಮಾಪನ ಮೊದಲಾದುವುಗಳನ್ನು ಘಟಕ ಮೌಲ್ಯಮಾಪನಕ್ಕೆ ಪರಿಗಣಿಸಬೇಕು. ನಿರ್ದಿಷ್ಟ ಘಟಕದ ಕಲಿಕಾ ಸಾಧನೆಗಳ ವಿಷಯದಲ್ಲಿ ಮಗು ಯಾವ ಹಂತದಲ್ಲಿದ್ದಾನೆಂದು ತಿಳಿಯಲು ಸಹಾಯಕವಾದ ರೇಟಿಂಗ್ ಸ್ಕೇಲ್, ಚೆಕ್‌ಲಿಸ್ಟ್ ಮೊದಲಾದುವುಗಳನ್ನು ಉಪಯೋಗಿಸಬೇಕು. ಘಟಕ ಮೌಲ್ಯಮಾಪನವು ಕಲಿಕಾ ಚಟುವಟಿಕೆಯೊಂದಿಗೆ ಸಹಜವಾಗಿ ನಡೆಯಬೇಕಾಗಿದೆ.

ಘಟಕ ಮೌಲ್ಯಮಾಪನದ ಸೂಚಕಗಳ ಆಧಾರದಲ್ಲಿ ಅಂಕಗಳನ್ನು ನೀಡಿ, ಗ್ರೇಡಿಗೆ ಪರಿವರ್ತಿಸಿ, ಅವಧಿಯ ಕೊನೆಯಲ್ಲಿ ನಿಗದಿತ ನಮೂನೆಯಲ್ಲಿ ದಾಖಲಿಸಬೇಕು. ಒಂದು ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಘಟಕಗಳ ಮೌಲ್ಯಮಾಪನವಿರುವುದರಿಂದ ಘಟಕ ಮೌಲ್ಯಮಾಪನದ ಸರಾಸರಿಯನ್ನು ಅವಧಿಯ ಕೊನೆಯಲ್ಲಿ ದಾಖಲಿಸಬೇಕು. ಇದಕ್ಕೆ ಬಳಸಿದ ಮಾಪನದ ಸ್ವಭಾವಕ್ಕನುಸರಿಸಿ ಸೂಚಕಗಳನ್ನು ಅಧ್ಯಾಪಕರು ತಯಾರಿಸಬೇಕು. ಕಲೆಯ ಕಲಿಕೆ, ವೃತ್ತಿ ಪರಿಚಯ ಕಲಿಕೆ, ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ ಎಂಬ ವಿಷಯಗಳಿಗೆ ಪ್ರಕ್ರಿಯೆ, ಪೋರ್ಟ್‌ಫೋಲಿಯೋ, ಘಟಕ ಮಟ್ಟ – ಎಂಬ ಮೌಲ್ಯಮಾಪನಗಳನ್ನು ನಡೆಸಿ ಗ್ರೇಡ್ ನೀಡಬೇಕು.

## CE ಗ್ರೇಡ್ ಕಂಡುಹಿಡಿಯುವ ವಿಧಾನ

ಪ್ರತಿಯೊಂದು ವಿಷಯದ ಪ್ರಕ್ರಿಯೆ, ಪೋರ್ಟ್‌ಫೋಲಿಯೋ, ಘಟಕ ಮಟ್ಟದ ಮೌಲ್ಯಮಾಪನ ಎಂಬಿವುಗಳಲ್ಲಿ ಪ್ರತಿಯೊಂದರ ಗ್ರೇಡನ್ನು ಲೆಕ್ಕ ಮಾಡಿದ ಬಳಿಕ ಅವುಗಳನ್ನು A, B, C, D, E ಗ್ರೇಡ್‌ಗಳಿಗೆ ಅನುಕ್ರಮವಾಗಿ 5, 4, 3, 2, 1 ಎಂಬ ಹಾಗೆ ಅಂಕಗಳನ್ನು ನೀಡಬೇಕು. ಹೀಗೆ ಸಿಗುವ ಒಟ್ಟು ಗ್ರೇಡ್ ಪಾಯಿಂಟ್‌ಗಳ ಆಧಾರದಲ್ಲಿ ವಿದ್ಯಾರ್ಥಿಯ CE ಗ್ರೇಡನ್ನು ಕಂಡುಹಿಡಿಯಬಹುದು.

$$\text{CE ಗ್ರೇಡ್} = \frac{\text{ಒಟ್ಟು ಲಭಿಸಿದ ಗ್ರೇಡ್ ಪಾಯಿಂಟ್}}{\text{ಗರಿಷ್ಠ ಗ್ರೇಡ್ ಪಾಯಿಂಟ್}} \times 100$$

ಉದಾಹರಣೆಗೆ, ಒಂದು ಮಗುವಿಗೆ ಕನ್ನಡದಲ್ಲಿ ಪ್ರಕ್ರಿಯೆ, ಪೋರ್ಟ್‌ಫೋಲಿಯೋ ಮತ್ತು ಘಟಕ ಮಟ್ಟದ ಮೌಲ್ಯಮಾಪನ ಇವುಗಳ ಗ್ರೇಡ್ ಅನುಕ್ರಮವಾಗಿ A, B, B ಎಂದು ಭಾವಿಸಿರಿ. ಎಂದರೆ ಒಟ್ಟು ಲಭಿಸಿದ ಗ್ರೇಡ್ ಪಾಯಿಂಟ್ $5+4+4 = 13$ ಆಗಿದೆ. ಗರಿಷ್ಠ ಸಿಗಬಹುದಾದ ಗ್ರೇಡ್ ಪಾಯಿಂಟ್ 15.

ಗ್ರೇಡ್ ಪಾಯಿಂಟ್ (ಶೇಕಡಾದಲ್ಲಿ $\frac{13}{15} \times 100 = 86.67$)

ಕೆಳಗಿನ ಪಟ್ಟಿಯ ಪ್ರಕಾರ ಕನ್ನಡದ CE ಗ್ರೇಡ್ A ಆಗಿದೆ. ಕೆಳಗೆ ಕೊಟ್ಟಿರುವ ಪಟ್ಟಿಯನ್ನುಪಯೋಗಿಸಿ CE ಗ್ರೇಡನ್ನು ಕಂಡುಹಿಡಿಯಬಹುದು.

| ಗ್ರೇಡ್ ಪಾಯಿಂಟ್ | ಶೇಕಡಾ | ಗ್ರೇಡ್ |
|---|---|---|
| 12 – 15 | 75 – 100 | A |
| 9 – 11 | 60 – 74 | B |
| 7 – 8 | 45 – 59 | C |
| 5 – 6 | 33 – 44 | D |
| Below 5 | Below 33 | E |

## ಅವಧಿ ಮೌಲ್ಯಮಾಪನ (TE)

ಪ್ರಾಥಮಿಕ ಶಾಲಾ ಹಂತದಲ್ಲಿ ಭಾಷಾ ವಿಷಯಗಳಿಗೆ ಅವಧಿಯನ್ನು ಪರಿಗಣಿಸಿಕೊಂಡು ಘಟಕಗಳ ಕಲಿಕಾ ಸಾಧನೆಗಳನ್ನು ನಿರ್ಧರಿಸಬೇಕು. ಭಾಷೆಯ ವ್ಯವಹಾರ ರೂಪಗಳು, ಭಾಷಾ ಸತ್ಯಾಂಶಗಳು, ಭಾಷಾ ಕೌಶಲ್ಯಗಳು ಎಂಬ ವಲಯಗಳನ್ನು ಪರಿಗಣಿಸಿಕೊಂಡು ಅವಧಿ ಮೌಲ್ಯಮಾಪನವನ್ನು ನಡೆಸಬೇಕು. ಒಳಹೂರಣ ವಲಯಗಳಿಗೆ ಮತ್ತು ಕೌಶಲ್ಯಗಳಿಗೆ ಒತ್ತು ನೀಡಿರುವ ವೈವಿಧ್ಯಪೂರ್ಣ ಪ್ರಶ್ನೆಗಳ ಮಾದರಿಗಳು ಒಳಗೊಂಡಿರಬೇಕು. ವಿಜ್ಞಾನ ವಿಷಯಗಳಿಗೆ ಅವಧಿಯಲ್ಲಿ ಒಳಗೊಂಡಿರುವ ಘಟಕಗಳ ಒಳ ಹೂರಣಗಳನ್ನು ಆಧರಿಸಿ ಅವಧಿ ಮೌಲ್ಯಮಾಪನ ನಡೆಸಬೇಕು. ಕಲಿಕಾ ಸಾಧನೆಗಳಿಗೆ ಒತ್ತು ಕೊಡುವ ರೀತಿಯಲ್ಲಿ ಆಶಯಗಳನ್ನು ಮತ್ತು ಕೌಶಲ್ಯಗಳನ್ನು ಮೌಲ್ಯಮಾಪನ ಮಾಡುವುದಕ್ಕೆ ಯೋಗ್ಯವಾದ ಪ್ರಶ್ನೆಗಳನ್ನು ತಯಾರಿಸಬೇಕು.

ಪ್ರತಿಯೊಂದು ಘಟಕ/ಆಶಯ ವಲಯಗಳಿಗೂ ವಿವಿಧ ಹಂತದ ಮಾನಸಿಕ ಪ್ರಕ್ರಿಯೆಗಳಿಗೂ (ಜ್ಞಾನ ಕರಗತ ಮಾಡುವುದು/ತಿಳುವಳಿಕೆಯ ಸಾಧನೆ, ಆಶಯಗಳು/ತಿಳುವಳಿಕೆಗಳು ಇವುಗಳ ಪ್ರಯೋಗ, ನಿಗಮನ ರೂಪಿಸುವುದು, ಮೌಲ್ಯನಿರ್ಣಯ, ಸೃಜನಾತ್ಮಕ ಮಾನಸಿಕ ಪ್ರಕ್ರಿಯೆಗಳು) ಸರಿಯಾದ ವೆಯ್ಟೇಜ್ (Weightage) ನೀಡಿ ನೀಲಿನಕಾಶೆ ತಯಾರಿಸಿ, ವೈವಿಧ್ಯಪೂರ್ಣ ಪ್ರಶ್ನೆಗಳಿವೆಯೆಂದು ಖಾತ್ರಿಪಡಿಸಿ, ಪ್ರಶ್ನೆಪತ್ರಿಕೆ ತಯಾರಿಸಬೇಕು. ಪ್ರಶ್ನೆಗಳಿಗೆ ಯೋಗ್ಯವಾದ ಸೂಚಕಗಳನ್ನು ರೂಪಿಸಿ, ಅವುಗಳ ಆಧಾರದಲ್ಲಿ ಮೌಲ್ಯಮಾಪನವನ್ನು ನಿರ್ವಹಿಸಬೇಕು.

ಕಲೆಯ ಕಲಿಕೆ, ವೃತ್ತಿ ಪರಿಚಯ ಕಲಿಕೆ, ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ ಎಂಬೀ ವಿಷಯಗಳಿಗೆ ಸಂಬಂಧಿಸಿ ಟರ್ಮಿನಲ್ ಮೌಲ್ಯಮಾಪನವನ್ನು ಪ್ರದರ್ಶನ ಮಾಲ್ಯಮಾಪನ (Performance Assessment) ವಾಗಿ ನಡೆಸಬೇಕು.

ಅದಕ್ಕಿರುವ ಮಾದರಿಗಳನ್ನು ಆಯಾ ವಿಷಯಗಳ ಕೈಪಿಡಿಗಳಲ್ಲಿ ನೀಡಲಾಗಿದೆ. ಕಲೆಯ ಕಲಿಕೆ, ವೃತ್ತಿಪರಿಚಯ ಕಲಿಕೆ, ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ ಎಂಬಿವುಗಳಿಗೆ ಈ ರೀತಿಯಲ್ಲಿ ಗ್ರೇಡ್ ನೀಡಬೇಕಾಗಿದೆ.

## ವೈಜ್ಞಾನಿಕ ವಲಯದ ಮೌಲ್ಯಮಾಪನ – ಅವಧಿ ಕ್ರೋಡೀಕರಣ

### 1. ತರಗತಿ 1 ರಿಂದ 4 ರ ವರೆಗೆ

1 ರಿಂದ 4 ರ ವರೆಗಿನ ತರಗತಿಗಳಲ್ಲಿ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ CE ಮೌಲ್ಯಮಾಪನ, TE ಮೌಲ್ಯಮಾಪನ ಎಂಬಿವುಗಳನ್ನು ಪ್ರತ್ಯೇಕವಾಗಿ ಕಂಡು ಅವಧಿಗೆ ಅನುಗುಣವಾಗಿ ದಾಖಲಿಸಬೇಕು. ಇದಕ್ಕಾಗಿ $F_1$ ನಮೂನೆಯನ್ನು ಉಪಯೋಗಿಸಬಹುದು. $F_1$ ನಮೂನೆಯನ್ನು ಅನುಬಂಧದಲ್ಲಿ ನೀಡಲಾಗಿದೆ. CE, TE ಎಂಬಿವುಗಳನ್ನು ಗ್ರೇಡುಗಳಾಗಿ ದಾಖಲಿಸಬೇಕು. $F_1$ ನಮೂನೆಯಲ್ಲಿ ಪ್ರತಿಯೊಬ್ಬ, ವಿದ್ಯಾರ್ಥಿಯ CE, TE ವಿವರಗಳನ್ನು ಮೂರು ಅವಧಿಗಳಿಗೂ ದಾಖಲಿಸಿಲು ಅವಕಾಶವಿದೆ. ಒಂದೇ ನಮೂನೆಯಲ್ಲಿ ಒಮ್ಮೆಗೆ ದಾಖಲಿಸುವುದರಿಂದ ಮಗುವಿನ ಅಬಿವೃದ್ಧಿ ಕ್ರಮಾನುಗತವಾಗಿ ನಡೆಯುತ್ತಿದೆಯೇ? ಯಾರೆಲ್ಲ ಹಿಂದಕ್ಕೆ ಹೋಗುತ್ತಿದ್ದಾರೆ? ಮೊದಲಾದ ವಿಷಯಗಳನ್ನು ತಿಳಿಯಲು ಸಾಧ್ಯ.

### 2. ತರಗತಿ 5 ರಿಂದ 8 ರ ವರೆಗೆ

5 ರಿಂದ 8 ರ ವರೆಗಿನ ತರಗತಿಗಳಲ್ಲಿ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ CE ಮೌಲ್ಯಮಾಪನ, TE ಮೌಲ್ಯಮಾಪನ ಎಂಬಿವುಗಳನ್ನು ಪ್ರತ್ಯೇಕವಾಗಿ ಕಂಡು ಅವಧಿಗೆ ಅನುಗುಣವಾಗಿ ದಾಖಲಿಸಬೇಕು. ಇದಕ್ಕಾಗಿ $F_2$ ನಮೂನೆಯನ್ನು ಉಪಯೋಗಿಸಬಹುದು. $F_2$ ನಮೂನೆಯನ್ನು ಅನುಬಂಧವಾಗಿ ನೀಡಲಾಗಿದೆ. CE, TE ಎಂಬಿವುಗಳನ್ನು ಗ್ರೇಡುಗಳಾಗಿ ದಾಖಲಿಸಬೇಕು.

## ಮೌಲ್ಯಮಾಪನ – ವಾರ್ಷಿಕ ಕ್ರೋಡೀಕರಣ

### 1) ತರಗತಿ 1 ರಿಂದ 4 ರ ವರೆಗೆ

1ರಿಂದ 4ನೇ ತರಗತಿಯ ವರೆಗೆ ಅವಧಿಯಾಗಿ ದಾಖಲಿಸುವ ನಮೂನೆ ($F_1$) ಮತ್ತು CE, TE ಗ್ರೇಡುಗಳನ್ನು ವಾರ್ಷಿಕವಾಗಿ ಕ್ರೋಡೀಕರಿಸುವ ನಮೂನೆ ($F_3$) ಆಗಿದೆ. ಇದರಲ್ಲಿ ಪ್ರತಿಯೊಬ್ಬ ಮಗುವಿನ ವಿಷಯಾಧಾರಿತ CE, TE ಗ್ರೇಡುಗಳನ್ನು ಅವಧಿಯಾಗಿ ದಾಖಲಿಸಬೇಕು. ($F_3$ ನೋಡಿರಿ.) ಅವಧಿಯಲ್ಲಿ ಸಿಗುವ CE ಗ್ರೇಡುಗಳನ್ನು ಪರಿಗಣಿಸುವಾಗ ಮೂರು ಅವಧಿಗಳಲ್ಲಾಗಿ ಮಗುವಿಗೆ ಸಿಕ್ಕಿದ ಅತಿ ಉನ್ನತ ಗ್ರೇಡ್ CE ಆಗಿದೆ. ಇದು ($F_3$) ನಮೂನೆಯಲ್ಲಿ ಪ್ರತ್ಯೇಕವಾಗಿ ವೃತ್ತದೊಳಗೆ Overall CEಗ್ರೇಡೆಂದು ಸೂಚಿಸಬೇಕು. TE ಗ್ರೇಡುಗಳನ್ನು ಪರಿಗಣಿಸುವಾಗ 3ನೇ ಅವಧಿಯಲ್ಲಿ ಮಗುವಿಗೆ ಸಿಕ್ಕಿದ ಗ್ರೇಡ್ TE ಗ್ರೇಡು ಎಂದು ಪರಿಗಣಿಸಬೇಕು.

ಸಾಮಾಜಿಕ ಭಾವನಾತ್ಮಕ ಮಂಡಲಗಳ ನೈಪುಣ್ಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಸಂಬಂಧಿಸಿ ಅತ್ಯುತ್ತಮವಾದುದನ್ನು ಕಾಲಂನಲ್ಲಿ ದಾಖಲಿಸಬೇಕು. ಉತ್ತಮವಾಗಿ ಪ್ರದರ್ಶಿಸಲ್ಪಡದ ನೈಪುಣ್ಯವನ್ನು ದಾಖಲಿಸಬೇಕಾಗಿಲ್ಲ.

### 2) ತರಗತಿ 5 ರಿಂದ 8 ರ ವರೆಗೆ

5 ರಿಂದ 8 ರ ವರೆಗಿನ ವಿಷಯ ಕಲಿಸುವ ಅಧ್ಯಾಪಕರು ನೀಡುವ ವಿಷಯದ CE, TE ಗ್ರೇಡುಗಳನ್ನು $F_2$ ನಮೂನೆಯಲ್ಲಿ ದಾಖಲಿಸಬೇಕು. ವಾರ್ಷಿಕ ಕ್ರೋಡೀಕರಣಕ್ಕಾಗಿ $F_4$ ಉಪಯೋಗಿಸಬೇಕು. ಇದರಲ್ಲಿ ಪ್ರತಿ ಮಗುವಿನ ವಿಷಯಾಧಾರಿತ CE, TE ಅವಧಿಗಳಾಗಿ ದಾಖಲಿಸಬೇಕು. ($F_4$ ನೋಡಿರಿ) ಅವಧಿಯಾಗಿ ಸಿಗುವ CE ಗ್ರೇಡುಗಳನ್ನು ಪರಿಗಣಿಸುವಾಗ ಮೂರು ಅವಧಿಗಳಲ್ಲಿ ಮಗುವಿಗೆ ಸಿಕ್ಕಿದ ಅತ್ಯುತ್ತಮ ಗ್ರೇಡ್ ಅವನ CE ಗ್ರೇಡು ಆಗಿದೆ. ಇದು $F_4$ ನಲ್ಲಿ ಪ್ರತ್ಯೇಕವಾಗಿ ದಾಖಲಿಸುವ CE ಎಂದು ಸೂಚಿಸಬೇಕಾಗಿದೆ.

TE ಗ್ರೇಡುಗಳನ್ನು ಪರಿಗಣಿಸುವಾಗ 3ನೇ ಅವಧಿಯಲ್ಲಿ ಮಗುವಿಗೆ ಸಿಕ್ಕಿದ ಗ್ರೇಡ್ TE ಗ್ರೇಡು ಎಂದು ಪರಿಗಣಿಸಬೇಕು. ಸಾಮಾಜಿಕ ಭಾವನಾತ್ಮಕ ಮಂಡಲಗಳ ನೈಪುಣ್ಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಸಂಬಂಧಿಸಿ ಅತ್ಯುತ್ತಮವಾದುದನ್ನು ಕಾಲಂನಲ್ಲಿ ದಾಖಲಿಸಬೇಕು. ಉತ್ತಮವಾಗಿ ಪ್ರದರ್ಶಿಸಲ್ಪಡದ ನೈಪುಣ್ಯವನ್ನು ದಾಖಲಿಸಬೇಕಾಗಿಲ್ಲ.

ಹೀಗೆ ವೈಜ್ಞಾನಿಕ ಮಂಡಲದಲ್ಲೂ ಸಾಮಾಜಿಕ ಭಾವನಾತ್ಮಕ ಮಂಡಲದಲ್ಲೂ ಮಗುವಿನ ಉತ್ತಮ ಪ್ರದರ್ಶನವನ್ನು ಮೌಲ್ಯನಿರ್ಣಯಿಸಿ ದಾಖಲಿಸಬೇಕು. ಉತ್ತಮ ಮನೋಭಾವ ಮೂಡಿಬರಲು ಅಗತ್ಯವಾದ ಕಾರ್ಯಗಳನ್ನು ಕೈಗೊಂಡು ಅವನ ಅತ್ಯುತ್ತಮವಾದ ಗ್ರೇಡನ್ನು ಮಾತ್ರ ದಾಖಲಿಸಿದರೆ ಸಾಕು.

**ಸೂಚನೆ :** ಮೌಲ್ಯನಿರ್ಣಯಕ್ಕಿರುವ ವಿವಿಧ ನಮೂನೆಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

# ಮೌಲ್ಯಮಾಪನ ಒಂದೇ ನೋಟದಲ್ಲಿ

**ಮೌಲ್ಯಮಾಪನ**

ಸಮೀಪನ : ಕಲಿಕಾ ಸಾಧನೆಗಳಿಗೆ ಒತ್ತು ಕೊಡುವ ಸಮೀಪನ

ನಿರಂತರ ಹಾಗೂ ಸಮಗ್ರವಾದ ಮೌಲ್ಯಮಾಪನ (CCE)

ವೈಜ್ಞಾನಿಕ ವಲಯ

- ನಿರಂತರ ಮೌಲ್ಯಮಾಪನ
  - ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನ
  - ಪೋರ್ಟ್‌ಫೋಲಿಯೋ ಮೌಲ್ಯಮಾಪನ
  - ಘಟಕ ಮಟ್ಟದ ಮೌಲ್ಯಮಾಪನ
- ಅವಧಿ ಮೌಲ್ಯಮಾಪನ
  - ಆಶಯಗಳು ಪ್ರಕ್ರಿಯೆಗಳು ಮೊದಲಾದುವು

ಸಾಮಾಜಿಕ, ಭಾವನಾತ್ಮಕ ವಲಯ

1. ವಿಚಾರ ವಿನಿಮಯ ಸಾಮರ್ಥ್ಯ (Communication Skills)
2. ಅಂತರ್ವ್ಯಕ್ತಿ ನೈಪುಣ್ಯ (Interpersonal Skills)
3. ಸಹಭಾವ (Empathy)
4. ಭಾವನೆಗಳೊಂದಿಗೆ ಹೊಂದಿಕೆ (Coping with emotions)
5. ಮಾನಸಿಕ ಒತ್ತಡದೊಂದಿಗೆ ಹೊಂದಾಣಿಕೆ (Coping with stress)
6. ಸಮಸ್ಯೆ ಪರಿಹಾರ ಕೌಶಲ (Problem Solving Skills)
7. ತೀರ್ಮಾನ ಕೈಗೊಳ್ಳುವುದು (Decision making)
8. ವಿಮರ್ಶಾತ್ಮಕ ಚಿಂತನೆ (Critical thinking)
9. ಸೃಜನಶೀಲ ಚಿಂತನ ಕೌಶಲ (Creative thinking skills)
10. ಸ್ವನಿರ್ವಹಣೆ (Self management)

## ಮೌಲ್ಯಮಾಪನದ ವಿವಿಧ ನಮೂನೆಗಳು

**$F_1$**

**a) ನಿರಂತರ ಮೌಲ್ಯಮಾಪನ (CE), ಅವಧಿ ಮೌಲ್ಯಮಾಪನ (TE) ಎಂಬಿವುಗಳನ್ನು ಪ್ರತಿಯೊಂದು ಅವಧಿಯಲ್ಲೂ ದಾಖಲಿಸಲಿರುವ ವಿಷಯಾಧಾರಿತ ಕ್ರೋಢೀಕರಣ ನಮೂನೆ ($F_1$).**

ಅವಧಿ : 1/2/3

ತರಗತಿ :

ಡಿವಿಷನ್ :

| ನಂಬ್ರ | ವಿದ್ಯಾರ್ಥಿಯ ಹೆಸರು | ಕನ್ನಡ | | | | | ಅರಬಿಕ್/ಸಂಸ್ಕೃತ | | | | | ಇಂಗ್ಲೀಷ್ | | | | | ಗಣಿತ | | | | | ಪರಿಸರ ಅಧ್ಯಯನ | | | | | ಕಲಾ ಕಲಿಕೆ | | | | | ವೃತ್ತಿ ಪರಿಚಯ ಕಲಿಕೆ | | | | | ಆರೋಗ್ಯ ಮತ್ತು ಕ್ರೀಡಾಕಲಿಕೆ | | | | | ಷರಾ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 1 | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 | 1 | 2 | 3 | 4 | 5 | |
| | | ಪ್ರಕ್ರಿಯೆ | ಪೋರ್ಟ್‌ಫೋಲಿಯೋ | ಘಟಕ ಮೌಲ್ಯಮಾಪನ | CE ಗ್ರೇಡ್ | TE ಗ್ರೇಡ್ | ಪ್ರಕ್ರಿಯೆ | ಪೋರ್ಟ್‌ಫೋಲಿಯೋ | ಘಟಕ ಮೌಲ್ಯಮಾಪನ | CE ಗ್ರೇಡ್ | TE ಗ್ರೇಡ್ | ಪ್ರಕ್ರಿಯೆ | ಪೋರ್ಟ್‌ಫೋಲಿಯೋ | ಘಟಕ ಮೌಲ್ಯಮಾಪನ | CE ಗ್ರೇಡ್ | TE ಗ್ರೇಡ್ | ಪ್ರಕ್ರಿಯೆ | ಪೋರ್ಟ್‌ಫೋಲಿಯೋ | ಘಟಕ ಮೌಲ್ಯಮಾಪನ | CE ಗ್ರೇಡ್ | TE ಗ್ರೇಡ್ | ಪ್ರಕ್ರಿಯೆ | ಪೋರ್ಟ್‌ಫೋಲಿಯೋ | ಘಟಕ ಮೌಲ್ಯಮಾಪನ | CE ಗ್ರೇಡ್ | TE ಗ್ರೇಡ್ | ಪ್ರಕ್ರಿಯೆ | ಪೋರ್ಟ್‌ಫೋಲಿಯೋ | ಘಟಕ ಮೌಲ್ಯಮಾಪನ | CE ಗ್ರೇಡ್ | TE ಗ್ರೇಡ್ | ಪ್ರಕ್ರಿಯೆ | ಪೋರ್ಟ್‌ಫೋಲಿಯೋ | ಘಟಕ ಮೌಲ್ಯಮಾಪನ | CE ಗ್ರೇಡ್ | TE ಗ್ರೇಡ್ | ಪ್ರಕ್ರಿಯೆ | ಪೋರ್ಟ್‌ಫೋಲಿಯೋ | ಘಟಕ ಮೌಲ್ಯಮಾಪನ | CE ಗ್ರೇಡ್ | TE ಗ್ರೇಡ್ | |
| | | | | | | | | | | | | | | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | | | | | | | | | | | | | | | | | |

$F_2$

**b) ನಿರಂತರ ಮೌಲ್ಯಮಾಪನ (CE), ಅವಧಿ ಮೌಲ್ಯಮಾಪನ (TE) ಇವುಗಳನ್ನು ಪ್ರತಿಯೊಂದು ಅವಧಿಯಲ್ಲೂ ದಾಖಲಿಸಲಿರುವ ವಿಷಯಾಧಾರಿತ ಕ್ರೋಡೀಕೃತ ನಮೂನೆ ($F_2$)**

ಅವಧಿ : 1/2/3

ವಿಷಯ: ........................................ ತರಗತಿ: ..................... ಡಿವಿಷನ್: ................................

| ಕ್ರಮ ನಂಬ್ರ | ವಿದ್ಯಾರ್ಥಿಯ ಹೆಸರು | CE ವಿಭಾಗ | | | ಒಟ್ಟು CE ಗ್ರೇಡ್ | TE ಗ್ರೇಡ್ | ಷರಾ |
|---|---|---|---|---|---|---|---|
| | | ಪ್ರಕ್ರಿಯೆ | ಪೋರ್ಟ್ ಫೋಲಿಯೋ | ಘಟಕ ಮೌಲ್ಯಮಾಪನ | | | |
| | | | | | | | |

# ವಾರ್ಷಿಕ ಕ್ರೋಡೀಕರಣ ನಮೂನೆ ( 1 – 4 ತರಗತಿ) ನಮೂನೆ 3

**F₃**

ತರಗತಿ : ಡಿವಿಷನ್ :

ವರ್ಷ :

| ನಂಬ್ರ | ವಿದ್ಯಾರ್ಥಿಯ ಹೆಸರು | ಟರ್ಮ್ | ಕನ್ನಡ | | ಇಂಗ್ಲೀಷ್ | | ಅರಬಿಕ್/ ಸಂಸ್ಕೃತ | | ಪರಿಸರ ಅಧ್ಯಯನ | | ಗಣಿತ | | ಕಲಾ ಕಲಿಕೆ | | ವೃತ್ತಿ ಪರಿಚಯ ಕಲಿಕೆ | | ಆರೋಗ್ಯ ಮತ್ತು ಕ್ರೀಡಾಕಲಿಕೆ | | ಸಾಮಾಜಿಕ, ಭಾವನಾತ್ಮಕ ವಲಯ |
|---|---|---|---|---|---|---|---|---|---|---|---|---|---|---|---|---|---|---|---|
| | | | CE | TE | CE | TE | CE | TE | CE | TE | CE | TE | CE | TE | CE | TE | CE | TE | |
| | | I | | | | | | | | | | | | | | | | | |
| | | II | | | | | | | | | | | | | | | | | |
| | | III | | | | | | | | | | | | | | | | | |

# ವಾರ್ಷಿಕ ಕ್ರೋಢೀಕರಣ ನಮೂನೆ ( 5 – 8 ತರಗತಿ) ನಮೂನೆ 4

**F4**

ತರಗತಿ :

ಡಿವಿಷನ್ :

ವರ್ಷ :

| ನಂಬ್ರ | ವಿದ್ಯಾರ್ಥಿಯ ಹೆಸರು | ಡಿವಿ | ಭಾಷೆ I | | ಕನ್ನಡ | | ಇಂಗ್ಲೀಷ್ | | ಹಿಂದಿ | | ಮೂಲ ವಿಜ್ಞಾನ | | ಸಮಾಜ ವಿಜ್ಞಾನ | | ಗಣಿತ | | ಕಲಾ ಕಲಿಕೆ | | ವೃತ್ತಿ ಪರಿಚಯ ಕಲಿಕೆ | | ಆರೋಗ್ಯ ಮತ್ತು ಕ್ರೀಡಾಕಲಿಕೆ | | ಸಾಮಾಜಿಕ, ಭಾವನಾತ್ಮಕ ವಲಯ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | CE | TE | CE | TE | CE | TE | CE | TE | CE | TE | CE | TE | CE | TE | CE | TE | CE | TE | CE | TE | |
| | | | | | | | | | | | | | | | | | | | | | | | |
| | | | | | | | | | | | | | | | | | | | | | | | |
| | | | | | | | | | | | | | | | | | | | | | | | |
| | | | | | | | | | | | | | | | | | | | | | | | |

## ಸಾಮಾಜಿಕ, ಭಾವನಾತ್ಮಕ ವಲಯದ ಮೌಲ್ಯಮಾಪನ

ವೈಜ್ಞಾನಿಕ ವಲಯದಂತೆಯೇ ಸಾಮಾಜಿಕ, ಭಾವನಾತ್ಮಕ ವಲಯಗಳ ಮೌಲ್ಯಮಾಪನವು ಪ್ರಧಾನವಾದುದು. Learning to know, Learning to do, Learning together, Learning to be ಎಂಬ ನೈಪುಣ್ಯಗಳನ್ನು ಇಲ್ಲಿ ಪರಿಗಣಿಸಬೇಕು. ಸಾಮಾಜಿಕ, ಭಾವನಾತ್ಮಕ ವಲಯಗಳ ಮೌಲ್ಯಮಾಪನಕ್ಕೆ ಸಂಬಂಧಿಸಿ ಕೆಳಗೆ ಕೊಟ್ಟಿರುವ ನೈಪುಣ್ಯಗಳನ್ನು ಮೌಲ್ಯಮಾಪನ ಮಾಡಬೇಕು.

1. ವಿಚಾರ ವಿನಿಮಯ ಕೌಶಲ (Communication Skills)
2. ಅಂತರ್‌ವ್ಯಕ್ತಿ ನೈಪುಣ್ಯ (Inter Personal Skills)
3. ಸಹಭಾವ (Empathy)
4. ಭಾವನೆಗಳೊಂದಿಗೆ ಹೊಂದಾಣಿಕೆ (Coping with Emotions)
5. ಮಾನಸಿಕ ಒತ್ತಡದೊಂದಿಗೆ ಹೊಂದಾಣಿಕೆ (Copying with stress)
6. ಸಮಸ್ಯೆ ಪರಿಹಾರ ಕೌಶಲ (Problem solving skills)
7. ತೀರ್ಮಾನ ಕೈಗೊಳ್ಳುವುದು (Decision making)
8. ವಿಮರ್ಶಾತ್ಮಕ ಚಿಂತನೆ (Critical thinking)
9. ಸೃಜನಶೀಲ ಚಿಂತನ ಕೌಶಲ (Creative thinking skills)
10. ಸ್ವ ನಿರ್ವಹಣೆ (Self management)

ವೈಜ್ಞಾನಿಕ ವಲಯದ ವಿಷಯಗಳನ್ನು ನಿರ್ವಹಿಸುವ ಅಧ್ಯಾಪಕರೇ ಇವುಗಳ ಮೌಲ್ಯಮಾಪನವನ್ನು ಮಾಡಬೇಕು. ಆಯಾ ವಿಷಯಗಳ ಪ್ರಕ್ರಿಯೆ ಮೌಲ್ಯಮಾಪನದ ಭಾಗವಾಗಿ, ಈ ಮೌಲ್ಯಮಾಪನವನ್ನು ನಡೆಸಬೇಕು. ಇಲ್ಲಿ ಪ್ರಕ್ರಿಯಾ ಕೌಶಲದ ಮೌಲ್ಯಮಾಪನ ರೂಪುಗೊಳ್ಳುತ್ತದೆಯೋ ಎಂಬುದನ್ನು ಮೌಲ್ಯಮಾಪನ ಮಾಡಬೇಕು.

ಸಾಮಾಜಿಕ ಭಾವನಾತ್ಮಕ ವಲಯದಲ್ಲಿ ವಿದ್ಯಾರ್ಥಿಯ ಸಾಮರ್ಥ್ಯವನ್ನು ಸಂಬಂಧಿಸಿದ ಧನಾತ್ಮಕವಾದ ಅಂಶಗಳನ್ನು ಗುರುತಿಸಿ ದಾಖಲಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯ ಧನಾತ್ಮಕವಾದ ನೈಪುಣ್ಯಗಳನ್ನು ಪ್ರೋತ್ಸಾಹಿಸಬೇಕು. ಈ ಸಂಬಂಧವಾದ ದಾಖಲೆಗಳು ಟೀಚಿಂಗ್ ಮ್ಯಾನುವೆಲ್‌ನಲ್ಲಿರಬೇಕು. ಸಾಮಾಜಿಕ, ಭಾವನಾತ್ಮಕ ವಲಯದ ಮೌಲ್ಯಮಾಪನವನ್ನು ವಾರ್ಷಿಕ ಕ್ರೋಡೀಕರಣ ನಮೂನೆಯಲ್ಲಿ ದಾಖಲಿಸಬೇಕು. ಇದಕ್ಕಾಗಿ ನಮೂನೆಯಲ್ಲಿ ಪ್ರತ್ಯೇಕವಾದ ಕಾಲಂಗಳನ್ನು ನೀಡಲಾಗಿದೆ. ವಿದ್ಯಾರ್ಥಿಯ ಕಲಿಕಾ ಪ್ರಗತಿಯ ದಾಖಲೆಯಲ್ಲಿಯೂ ಈ ಸಂಬಂಧವಾದ ಗುಣಾತ್ಮಕವಾದ ದಾಖಲಾತಿ ಇರಬೇಕು.

# ಮಾತೃಭಾಷಾ ಕಲಿಕೆಯ ಸಮೀಪನ

ಭಾಷೆ ಎಂಬುದು ಆಶಯ ವಿನಿಮಯಕ್ಕಾಗಿ ಎಂಬುವುದಕ್ಕಿಂತಲೂ ಮಿಗಿಲಾಗಿ ಒಂದು ಜನತೆಯ ಸಂಸ್ಕೃತಿ ಮತ್ತು ಸ್ವಂತಿಕೆಯ ಪ್ರತಿಫಲವಾಗಿದೆ. ಸಾಮಾಜಿಕ ಜೀವನದೊಂದಿಗೆ ಬೆರೆಯುವ ಮಟ್ಟವನ್ನು ತಿಳಿಯಲು, ಲೋಕದ ಸ್ಥಿತಿಗತಿಗಳನ್ನು ತಿಳಿಯಲು ಭಾಷೆಯಿಂದ ಸಾಧ್ಯವಿದೆ. ಸಂಸ್ಕೃತಿಯ ವಿಕಾಸದ ಸಾಮರ್ಥ್ಯ ಹಾಗೂ ನವೀಕರಣಕ್ಕೂ ಭಾಷೆಯ ಪ್ರಧಾನವಾದ ಮಾಧ್ಯಮವಾಗಿದೆ. ಭಾಷೆಯು ಉದ್ಯೋಗಾವಕಾಶವನ್ನು ಸೃಷ್ಟಿಸುತ್ತದೆ. ಇವುಗಳನ್ನು ಸದುಪಯೋಗಗೊಳಿಸಲು ಭಾಷಾ ನೈಪುಣ್ಯವನ್ನು ಗಳಿಸಿಕೊಳ್ಳಬೇಕಾಗಿದೆ.

ಪ್ರಜಾಪ್ರಭುತ್ವದಲ್ಲಿ ವ್ಯವಹರಿಸಲು ಭಾಷೆಯನ್ನು ಸುದೃಢಗೊಳಿಸಬೇಕಾಗಿದೆ. ಆಶಯ ವಿನಿಮಯದ ಕೊರತೆಯು ವ್ಯಕ್ತಿಗಳೊಳಗೆ, ವೃತ್ತಿ – ಸಮಾಜದೊಳಗೆ ಕಲಹಕ್ಕೆ ಕಾರಣವಾಗಬಹುದು.

ವ್ಯಕ್ತಿಗಳ ಮತ್ತು ಸಮಾಜದ ಸ್ವಾತಂತ್ರ್ಯವನ್ನು ಪ್ರಕಟಿಸಲು ಭಾಷೆಯು ಸಂದರ್ಭವನ್ನುಂಟುಮಾಡಬೇಕು. ಸ್ವಂತ ಜೀವನ ಶೈಲಿಯನ್ನು ರೂಪಿಸಲು ಇದು ಅತ್ಯಗತ್ಯ. ಭಾಷೆಯು ಒಂದು ಸ್ವಂತ ಜ್ಞಾನ ವಲಯವೂ ಇತರ ಜ್ಞಾನ ಮಂಡಲದ ಹಾಗೂ ಸಂಸ್ಕೃತಿಯ ವಿನಿಮಯ ಮಾಧ್ಯಮವಾಗಿದೆ. ಜೀವನದ ಪ್ರಾಥಮಿಕ ಅವಶ್ಯಕತೆಯ ನಿರ್ವಹಣೆಯಿಂದ ತೊಡಗಿ ಆವಿಷ್ಕಾರದ ಹಂತದವರೆಗೆ ಭಾಷೆಯು ವಿಸ್ತರಿಸಿದೆ.

ಆಧುನಿಕ ಭಾಷಾ ವಿಜ್ಞಾನ ಮತ್ತು ಮನೋವಿಜ್ಞಾನ ಭಾಷಾ ಕಲಿಕೆಯ ಪ್ರಾಧಾನ್ಯವನ್ನು ಸ್ಪಷ್ಟಪಡಿಸುತ್ತಿದೆ. ತಾರ್ಕಿಕ ಚಿಂತನೆ, ಬೌದ್ಧಿಕ ವಿಕಾಸ, ಸಾಮಾಜಿಕ ಜವಾಬ್ದಾರಿ, ಜೀವನ ಮೌಲ್ಯಗಳು ಮೊದಲಾದವುಗಳನ್ನು ಬೆಳೆಸುವುದರಲ್ಲಿ ಭಾಷಾ ಕಲಿಕೆಯ ಪಾತ್ರವು ನಿರ್ಣಾಯಕವಾಗಿದೆ. ಕೇರಳವು ಭಾಷಾ ಸೂತ್ರವನ್ನು ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಿದ ರಾಜ್ಯವಾಗಿದೆ. ಮಾತೃಭಾಷೆ, ಇಂಗ್ಲೀಷ್, ಹಿಂದಿ ಇವುಗಳ ಹೊರತು ಅರಬಿ, ಸಂಸ್ಕೃತ, ಉರ್ದು ಮೊದಲಾದ ಭಾಷೆಗಳನ್ನು ಪ್ರಾಥಮಿಕ ಹಂತದಿಂದಲೇ ಕಲಿಯಲು ಕೇರಳದಲ್ಲಿ ಅವಕಾಶವಿದೆ. ಆದರೆ ಕೇರಳದ ವೈವಿಧ್ಯತೆಗೆ ಅನುಸಾರವಾಗಿ ಸಾಮಾಜಿಕ ಸಂದರ್ಭಗಳಿಗೆ ಅನುಗುಣವಾಗಿ ಒಂದು ಭಾಷಾ ಕಲಿಕಾ ಸಮೀಪನವನ್ನು ರೂಪಿಸುವಾಗ ಕೆಲವು ಸಂಕೀರ್ಣತೆಯನ್ನು ಎದುರಿಸಬೇಕಾಗುತ್ತದೆ. ಕನ್ನಡ ಭಾಷೆಯನ್ನು ಪ್ರಥಮ ಭಾಷೆಯಾಗಿ ಕಲಿಯುವ ಅನೇಕರು ಮಾತೃಭಾಷೆ ಬೇರೆಯೇ ಆಗಿದೆ. ಎಲ್ಲಾ ಮಕ್ಕಳು ಎರಡನೇ ಭಾಷೆಯಾಗಿ ಇಂಗ್ಲೀಷ್ ಕಲಿಯಬಹುದು. ಒಂದನೇ ತರಗತಿಯಿಂದ ಮಾತೃಭಾಷೆಯ ಜೊತೆಗೆ ಅರೆಬಿಕ್ ಕಲಿಯುವ ಮಕ್ಕಳಿದ್ದಾರೆ. ಐದನೇ ತರಗತಿಯಿಂದ ಹಿಂದಿಯು ಕಡ್ಡಾಯ ಭಾಷೆಯಾಗಿದೆ. ಆಸಕ್ತ ಮಕ್ಕಳಿಗೆ ಈ ಹಂತದಲ್ಲಿ ಸಂಸ್ಕೃತ, ಅರಬಿ, ಉರ್ದು ಭಾಷೆಗಳನ್ನು ಕಲಿಯಬಹುದು.

ಮಾತೃಭಾಷಾ ವಿದ್ಯಾರ್ಥಿಗಳ ಮತ್ತು ಇತರ ಭಾಷಾ ವಿದ್ಯಾರ್ಥಿಗಳ ಕಲಿಕಾ ಮಟ್ಟ ಒಂದೇ ರೀತಿಯಲ್ಲ. ಭಾಷಾ ವಿದ್ಯಾರ್ಥಿಗಳು ಭಾಷೆಯಿಂದ ತರಗತಿಗೆ ತಲಪುತ್ತಾರೆ. ತಮ್ಮ ಸಮಾಜದಲ್ಲಿ ಭಾಷೆಯ ಸಂವಹನವನ್ನು ನಡೆಸಿರುತ್ತಾರೆ. ತರಗತಿಗಳಲ್ಲಿ ಅವರ ಮುಂದುವರಿಕೆಯ ಉದ್ದೇಶವು ಓದುವಿಕೆ ಮತ್ತು ಬರೆಯುವಿಕೆಯಾಗಿದೆ. ಇತರ ಭಾಷಾ ವಿದ್ಯಾರ್ಥಿಗಳಿಗೆ ಆ ಭಾಷೆ ಇನ್ನೂ ಕರಗತವಾಗಬೇಕಷ್ಟೆ.

### 2.2.1. ಭಾಷಾ ಕಲಿಕೆ – ಕೆಲವು ಸವಾಲುಗಳು

ಮಗುವಿನ ನೈಸರ್ಗಿಕವಾದ ಸಾಮರ್ಥ್ಯಗಳ ವಿಕಾಸಕ್ಕೂ ಸ್ವತಂತ್ರ ಓದುವಿಕೆಗೆ ಪ್ರೇರೇಪಿಸುವ ರೀತಿಯಲ್ಲಿ ಭಾಷಾ ಕಲಿಕೆಯನ್ನು ಸುಧೃಡಗೊಳಿಸಲು ಪಠ್ಯಕ್ರಮಕ್ಕೆ ಸಾಧ್ಯವಾಗಿದೆ. ಆದರೆ ಭಾಷಾಕಲಿಕೆಯು ಹಲವು ಸವಾಲುಗಳನ್ನು ಎದುರಿಸುತ್ತಿದೆ. ಭಾಷಾ ಸಮಗ್ರತೆ ಎಂಬ ದೃಷ್ಟಿಕೋನವನ್ನು ಆಧಾರವಾಗಿಟ್ಟುಕೊಂಡು ಸೈದ್ಧಾಂತಿಕವಾಗಿ ಕಲಿಕೆಯನ್ನು ಪ್ರತಿಪಾದಿಸಿದರೂ

ಪ್ರಾಯೋಗಿಕವಾಗಿ ವಿಫಲತೆಯತ್ತ ಸಾಗುತ್ತಿದೆ. ಪ್ರಧಾನವಾಗಿ ಆಶಯ ವಿನಿಮಯ ನಡೆಯುವಲ್ಲಿ ಇದರ ವಿಫಲತೆ ಕಾಣುವುದು.

- ಭಾಷಾ ಸಾಮರ್ಥ್ಯವನ್ನು ವಿಕಸಿಸುವಲ್ಲಿ ನ್ಯೂನತೆ ಕಂಡುಬಂದಿದೆ.
- ಅರ್ಥ ಪೂರ್ಣವಾದ ಭಾಷಾ ನಿರ್ಮಾಣದ ರೀತಿಯಲ್ಲಿ ಕಲಿಕೆ ಸಾಗುವುದಿಲ್ಲ.
- ಎಲ್ಲಾ ಮಕ್ಕಳ ಓದುವಿಕೆ ಮತ್ತು ಬರವಣಿಗೆಯು ನಿಶ್ಚಿತ ಮಟ್ಟಕ್ಕೆ ತಲಪುವಂತೆ ಮಾಡಲು ಸಾಧ್ಯವಾಗಿಲ್ಲ.
- ಭಾಷಾ ಪ್ರಯೋಗದಲ್ಲಿ ನ್ಯೂನತೆಗಳು ವ್ಯಾಪಕವಾದ ಆಕ್ಷೇಪಗಳಿಗೆ ದಾರಿ ಮಾಡಿಕೊಟ್ಟಿತು. ಕೈಗೊಂಡ ಕ್ರಮಗಳ ನೀರಸ ಪುನರಾವರ್ತನೆ ಭಾಷಾ ಕಲಿಕೆಯನ್ನು ಯಾಂತ್ರಿಕವಾಗಿಸುತ್ತದೆ. ವ್ಯವಹಾರ ರೂಪಗಳಿಗೆ ಕೊಡುವ ಅಮಿತ ಪ್ರಾಧಾನ್ಯವು ಭಾಷಾ ಕಲಿಕೆಯ ಇತರ ಮೂಲಭೂತ ಸಾಮರ್ಥ್ಯ ತಿಳುವಳಿಕೆಯ ಪ್ರಾಧಾನ್ಯತೆಯನ್ನು ಕಡಿಮೆ ಮಾಡಿದೆ.
- ಅಕ್ಷರ ಗಟ್ಟಿಗೊಳ್ಳದಿರುವಿಕೆ, ಭಾಷಾ ಸೌಂದರ್ಯ, ಭಾಷಾ ಶುದ್ಧಿ, ವಿಮರ್ಶಾತ್ಮಕವಾಗಿದೆ. ಒಂದೇ ವ್ಯವಹಾರ ರೂಪ ಒಂದೇ ರೀತಿಯಲ್ಲಿ ಎಲ್ಲ ತರಗತಿಯಲ್ಲಿ ಆವರ್ತಿಸುತ್ತಿದೆ ಎಂಬ ಆರೋಪವಿದೆ.
- 10 ನೇ ತರಗತಿ ಪೂರ್ತಿಗೊಳಿಸಿದ ಹಲವು ವಿದ್ಯಾರ್ಥಿಗಳಿಗೆ ಮಾತೃಭಾಷೆಯನ್ನು ಸರಿಯಾಗಿ ಓದಲು ಬರೆಯಲು ಸಾಧ್ಯವಾಗುವುದಿಲ್ಲ ಎಂಬ ಆತಂಕವಿದೆ.

ಈ ಸಮಸ್ಯೆಗಳನ್ನು ಪರಿಹರಿಸಲು ಭಾಷಾ ಕಲಿಕೆಯಲ್ಲಿ ಹಲವು ದೃಢ ನಿರ್ಧಾರಗಳ ಅಗತ್ಯವಿದೆ. ಆಶಯ ಆವಿಷ್ಕಾರ ರೀತಿಯನ್ನು ಉಳಿಸಿಕೊಂಡು ಭಾಷಾ ಸಾಮರ್ಥ್ಯಗಳು ಮತ್ತು ಭಾಷಾ ಜ್ಞಾನವನ್ನು ದೃಢಗೊಳಿಸುವಂತೆ ಕಲಿಕೆಯನ್ನು ಕ್ರಮೀಕರಿಸಬೇಕು. ಪ್ರತೀ ಹಂತದಲ್ಲೂ ಸಮಗ್ರತಾ ದರ್ಶನವನ್ನು ಬೆಂಬಲಿಸುವ ಇತರ ಪ್ರಾಂತ್ಯಗಳಲ್ಲಿ ಪದ, ಅಕ್ಷರ, ವಾಕ್ಯ ಘಟನೆ ಮೊದಲಾದುವುಗಳನ್ನು ದೃಢೀಕರಿಸುವ ತಂತ್ರಗಳನ್ನು ಫಲಪ್ರದವಾಗಿಸುವುದನ್ನು ಕಾಣಬಹುದು. ಭಾಷೆಯ ಮೂಲ ಸಾಮರ್ಥ್ಯವನ್ನು ವರ್ಧಿಸುವ ವಿಚಾರದಲ್ಲಿ ಯಾಂತ್ರಿಕವಾದ ಪುನರಾವರ್ತನೆ ಸರಿಯಲ್ಲ. ಮೂಲಸಾಮರ್ಥ್ಯದ ಕೊರತೆಯು ಮಕ್ಕಳ ಆತ್ಮವಿಶ್ವಾಸವನ್ನು ಕಡಿಮೆ ಮಾಡುವುದಲ್ಲದೆ ಕಲಿಕೆಯಲ್ಲಿ ವಿಮುಖತೆಯನ್ನುಂಟು ಮಾಡುತ್ತದೆ.

ಈ ಸವಾಲನ್ನು ಎದುರಿಸುವಲ್ಲಿ ಕೆಳಗಿನ ವಿಚಾರಗಳನ್ನು ಪರಿಗಣಿಸಬೇಕಾಗಿದೆ.

- ಮಗುವು ವಿಭಿನ್ನ ಸಾಮರ್ಥ್ಯಗಳನ್ನು ಪ್ರತೀ ಹಂತದಲ್ಲೂ ಗಳಿಸುತ್ತದೆ ಎಂದ ದೃಢೀಕರಿಸುವುದು.
- ನಿರರ್ಗಳವಾದ ಓದುವಿಕೆಗೂ, ಆಶಯಗ್ರಹಣ ಮಾಡಲು ಓದಿ ಅರ್ಥ ಮಾಡಿಕೊಳ್ಳಲು ಅಗತ್ಯವಾದ ಅನುಭವಗಳನ್ನು ದೃಢೀಕರಿಸಬೇಕು.
- ಪ್ರತಿಯೊಂದು ಹಂತದಲ್ಲಿ ಅಗತ್ಯವಾಗಿರಬೇಕಾದ ಭಾಷಾ ಘಟಕಗಳು, ಪದಸಂಪತ್ತು ಗಳಿಸಲು ಸಂದರ್ಭವನ್ನು ನೀಡಬೇಕು.
- ಉನ್ನತ ಚಿಂತನೆ, ವಿಶ್ಲೇಷಣಾ ಸಾಮರ್ಥ್ಯ, ಸೃಜನಾತ್ಮಕ ಚಿಂತನೆ, ಆವಿಷ್ಕರಣ ಸಾಮರ್ಥ್ಯ ಮೊದಲಾದವುಗಳನ್ನು ಪ್ರತಿಯೊಂದು ಹಂತದಲ್ಲೂ ದೃಢೀಕರಿಸಬೇಕು.
- ಭಾಷೆಯ ಮೂಲಕ ಪ್ರತಿಬಿಂಬಿಸುವ ಸಂಸ್ಕೃತಿ ಬಗ್ಗೆ ತಿಳಿಯಲು ಸಂದರ್ಭವನ್ನು ಒದಗಿಸಬೇಕು.
- ಪ್ರತಿಯೊಂದು ಹಂತದಲ್ಲಿ ಯೋಗ್ಯವಾದ ವ್ಯತ್ಯಸ್ತ ಸಾಹಿತ್ಯ ಮಾದರಿಗಳನ್ನು ಭಾಷಾ ವ್ಯವಹಾರ ಮಾದರಿಗಳನ್ನು ಪರಿಚಯಪಡಲೂ, ಆಸ್ವಾದಿಸಲೂ, ವಿಶೇಷತೆಯನ್ನು ತಿಳಿಯಲು ಅವುಗಳನ್ನು ರಚಿಸಲೂ ಸಂದರ್ಭಗಳನ್ನು ನೀಡಬೇಕು.

## 2.2.2. ಭಾಷಾ ಕಲಿಕೆ – ಸಾಮಾನ್ಯ ಉದ್ದೇಶಗಳು

1. ಕೇವಲ ಆಶಯ ವಿನಿಮಯ ಮಾತ್ರವಲ್ಲದೆ ಸಂಸ್ಕೃತಿಗಳ ವಿನಿಮಯ ಮತ್ತು ಚಿಂತನೆ ಮಾಧ್ಯಮ ಎಂಬೀ ಮಟ್ಟದಲ್ಲಿ ಭಾಷೆಯ ಸಾಧ್ಯತೆಯನ್ನು ಪರಿಗಣಿಸಬೇಕು.
2. ಪ್ರದೇಶದ ಸಂಸ್ಕೃತಿ, ಪರಂಪರೆ ಎಂಬಿವುಗಳನ್ನು ಅಳವಡಿಸಿಕೊಂಡು ವಿಶ್ಲೇಷಣೆ ಮಾಡುವ ಮನೋಭಾವವನ್ನು ಬೆಳೆಸಲು.
3. ಪ್ರಾದೇಶಿಕ ಭಾಷೆಯನ್ನು ಆರ್ಜಿಸುವುದರೊಂದಿಗೆ ಇತರ ಭಾಷಾರೂಪಗಳನ್ನು ತಿಳಿದುಕೊಳ್ಳಲು.
4. ಶಿಷ್ಟ ಭಾಷೆಯನ್ನು ಬೆಳೆಸಲು ಸಂದರ್ಭಗಳನ್ನು ನೀಡಬೇಕು.
5. ಭಾಷಾ ವೈವಿಧ್ಯಗಳನ್ನ ಅಂಗೀಕರಿಸುವುದರೊಂದಿಗೆ ಅವುಗಳ ಪರಿಮಿತಿಗಳನ್ನು ದಾಟಿ ಭಾಷೆಗಳನ್ನು ಪರಸ್ಪರ ಬಂಧಿಸುವಂತಹ ಸಂದರ್ಭಗಳನ್ನು ಒದಗಿಸಬೇಕು.
6. ಸೃಜನಾತ್ಮಕತೆ, ವೈಚಾರಿಕ ಭಾವನೆಗಳ ಆವಿಷ್ಕಾರ ಎಂಬ ನೆಲೆಯಲ್ಲೂ ಭಾಷೆಯನ್ನು ಪರಿಗಣಿಸಬೇಕು.
7. ವ್ಯತ್ಯಸ್ತ ಜೀವನ ಸ್ತರಗಳನ್ನು ವಿಶ್ಲೇಷಣೆ ಮಾಡುವುದು ಅಲ್ಲದೆ ವ್ಯತ್ಯಸ್ತ ಸಂಸ್ಕೃತಿಯನ್ನು ಮೈಗೂಡಿಸಲು ವಿಶಾಲವಾದ ಮಾನವೀಯತೆಯನ್ನು ಬೆಳೆಸಲು ಭಾಷಾಕಲಿಕೆಯಿಂದ ಸಾಧ್ಯವಾಗಬೇಕು.
8. ಪರಿಸರ ಜ್ಞಾನ, ಪ್ರಜಾಪ್ರಭುತ್ವ ಜ್ಞಾನ, ಲಿಂಗವ್ಯತ್ಯಾಸ ಮೊದಲಾದ ಮೌಲ್ಯಗಳನ್ನು ಬೆಳೆಸುವುದಕ್ಕೆ.
9. ಬೌದ್ಧಿಕ ಚಿಂತನೆ, ವಿಮರ್ಶಾತ್ಮಕವಾದ ಚಿಂತನೆ ಮೊದಲಾದವುಗಳನ್ನು ಬೆಳೆಸುವಂತಿರಬೇಕು.
10. ಭಾಷಾ ಕಲಿಕಾ ವೈಕಲ್ಯ ಇರುವ ಮಕ್ಕಳಿಗೆ ಮುಂದಿನ ಬೆಳವಣಿಗೆ ಮತ್ತು ವಿಕಾಸವನ್ನು ಖಚಿತಪಡಿಸಲು ಅಂಗೀಕರಿಸಲ್ಪಟ್ಟ ಆಂಗಿಕ ಭಾಷೆಗಳ ಪರಿಚಯವನ್ನು ಮಾಡಿ ಕೊಡಬೇಕು.
11. ವ್ಯತ್ಯಸ್ತ ಸಾಮರ್ಥ್ಯ ಗಳಿಸಿರುವ ಮಕ್ಕಳ ಭಾಷಾ ವಿಕಾಸಕ್ಕೆ ಸಹಾಯವಾಗಲು ಪ್ರತ್ಯೇಕವಾಗಿ ತಯಾರಿಸಿದ ಸಾಮಾಗ್ರಿಗಳನ್ನು ಒದಗಿಸಬೇಕು.
12. ಮನೆ ಭಾಷೆಯ ಸಾಧ್ಯತೆಗಳನ್ನು ಪರಿಗಣಿಸುವುದು.

## 2.2.3. ಭಾಷೆಯೊಂದಿಗಿರುವ ಸಮೀಪನ –ಪ್ರೈಮರಿ

ಭಾಷಾ ಕಲಿಕೆಯಲ್ಲಿ ಆಶಯ ಗ್ರಹಣ, ಆಶಯ ವ್ಯಕ್ತಪಡಿಸುವಿಕೆ ಎಂಬಿವುಗಳಲ್ಲದೆ ಓದುವಿಕೆ, ಬರೆಯುವಿಕೆ ಮೊದಲಾದ ಸಾಮರ್ಥ್ಯಗಳಿಗೆ ಪರಿಗಣನೆ ನೀಡಬೇಕು. ಭಾಷಾನುಭವದೊಂದಿಗೆ ಜೀವನ ಮೌಲ್ಯಗಳನ್ನು ಅನುಸರಿಸುವುದಕ್ಕೆ ಮಗುವಿಗೆ ಸಾಧ್ಯವಾಗಬೇಕು.

1, 2 ಕ್ಲಾಸುಗಳನ್ನು ಒಂದು ಯೂನಿಟ್ ಆಗಿ ಪರಿಗಣಿಸಬಹುದು. ಎರಡನೇ ಕ್ಲಾಸಿನ ಮೊದಲ ಹಂತದಲ್ಲೇ ಎಲ್ಲಾ ಅಕ್ಷರಗಳನ್ನು ಚಿಹ್ನೆಗಳನ್ನು ಮಗು ಕರಗತಮಾಡಿಕೊಂಡಿರಬೇಕು. ಸಂಭಾಷಣೆ, ಕಥೆ, ಕವಿತೆ, ಲಘುಟಿಪ್ಪಣಿ ಮೊದಲಾದ ಭಾಷಾ ವ್ಯವಹಾರ ರೂಪಗಳನ್ನು ಓದಲು, ಬರೆಯಲು ಇರುವ ಸಾಮರ್ಥ್ಯಗಳನ್ನು ಗಳಿಸಬೇಕು. ಸ್ವತಂತ್ರವಾಗಿ ಲಘು ಪ್ರಬಂಧ, ಲಲಿತವಾದ ಭಾಷಾ ಪ್ರಯೋಗಗಳನ್ನು ಶೈಲಿಗಳನ್ನೂ, ಒಗಟುಗಳನ್ನೂ, ಗಾದೆಮಾತುಗಳನ್ನು ಬಳಸುವ ಸಾಮರ್ಥ್ಯಗಳನ್ನು 2 ನೇ ಕ್ಲಾಸು ತೇರ್ಗಡೆಯಾಗುವಾಗ ಪಡೆದಿರಬೇಕು.

### 2.2.4 ಉದ್ದೇಶಗಳು

1. ಓದುವ ಸಾಮರ್ಥ್ಯವಲ್ಲದೆ ಲಿಪಿ ರೂಪದಲ್ಲಿ ಬರೆದು ಓದುವ ಸಾಮರ್ಥ್ಯಗಳನ್ನು ಗಳಿಸಬೇಕು.
2. ಭಾಷಾ ಘಟಕಗಳನ್ನು ಅರಿತು ಓದಲು ಬರೆಯಲು ಸಮರ್ಥನಾಗಿರಬೇಕು.
3. ಅಕ್ಷರಗಳನ್ನು ಜೋಡಿಸಿ ಅರ್ಥಪೂರ್ಣವಾಗಿ ಪದಗಳನ್ನೂ ವಾಕ್ಯಗಳನ್ನು ಬರೆಯಲು ಸಾಧ್ಯವಾಗಬೇಕು.
4. ಕತೆಗಳು, ಹಾಡುಗಳು, ಸಂಭಾಷಣೆಗಳು, ವಿವರಣೆಗಳು ಮುಂತಾದವುಗಳನ್ನು ಕೇಳಿ ಅರ್ಥೈಸುವುದಲ್ಲದೆ ಬಾಯ್ದೆರೆಯಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಪಡೆಯಬೇಕು.
5. ಭಾಷೆಯನ್ನು ಶ್ರವಣ ಮಾಡುವುದಕ್ಕೂ, ಬಾಯ್ದೆರೆಯಾಗಿ ವ್ಯಕ್ತಪಡಿಸುವುದಕ್ಕೂ ಲಘು ವಾಕ್ಯಗಳನ್ನು ಬರೆದು ಓದುವ ಸಾಮರ್ಥ್ಯವನ್ನು ಹೊಂದಿರಬೇಕು.

**ಪ್ರೈಮರಿ ಕ್ಲಾಸುಗಳ ವಿಷಯಗಳ ಸ್ವರೂಪಗಳನ್ನು ಈ ಕೆಳಗಿರುವಂತೆ ಕ್ರೋಡೀಕರಿಸಬಹುದು.**

1. ಮಕ್ಕಳಲ್ಲಿ ಭಾಷಾ ಕಲಿಕಾಸಕ್ತಿಯನ್ನು ಬೆಳೆಸುವಂತದ್ದು.
2. ಮಕ್ಕಳಲ್ಲಿ ಸ್ವತಂತ್ರವಾಗಿ ಆಶಯಗ್ರಹಣ ಮಾಡುವುದಕ್ಕೂ ಸ್ವಂತವಾಗಿ ಆಶಯಗಳನ್ನು ಪ್ರಕಟಿಸುವುದಕ್ಕೂ ಸಂದರ್ಭಗಳನ್ನು ನೀಡುವಂತದ್ದು.
3. ಮಕ್ಕಳನ್ನು ವೈಚಾರಿಕವಾಗಿ ಸ್ವಾಧೀನಿಸಲು ಸಾಧ್ಯತೆ ಉಳ್ಳದ್ದು.
4. ಸರಳ ರೀತಿಯ ಭಾಷಾ ವ್ಯವಹಾರ ಮಾದರಿಗಳನ್ನು ಪರಿಚಯಿಸಲು.
5. ಪದಜೋಡಣೆ, ವಾಕ್ಯರಚನೆ ಎಂಬಿವುಗಳ ಸರಿಯಾದ ರೂಪಕಲ್ಪನೆ
6. ಭಾಷಾ ಪ್ರಯೋಗದ ಸೌಂದರ್ಯವನ್ನು ಮನವರಿಕೆಮಾಡಲು.
7. ಭಾಷಾ ವ್ಯತ್ಯಾಸವನ್ನು ತಿಳಿಯಲು ಹಾಗೂ ಅವುಗಳ ಸಾಂಸ್ಕೃತಿಕ ಮೌಲ್ಯಗಳನ್ನು ಅವಕಾಶವನ್ನು ಕಲ್ಪಿಸುವುದು.
8. ವಿಮರ್ಶಾತ್ಮಕ ಚಿಂತನೆ ಹಾಗೂ ಸೃಜನಾತ್ಮಕತೆಯನ್ನು ಬೆಳೆಸಲು.

**ತಿರುಳು**

- ಭಾಷೆಯ ಲಿಪಿರೂಪಗಳು (ಅಕ್ಷರಗಳು, ಚಿಹ್ನೆಗಳು)
- ಸರಳವಾದ ಭಾಷಾವ್ಯವಹಾರ ರೂಪಗಳು (ಕತೆ, ಕವಿತೆ, ಸಂಭಾಷಣೆ, ವಿವರಣೆ, ಆಮಂತ್ರಣ ಪತ್ರಿಕೆ, ದಿನಚರಿ, ಟಿಪ್ಪಣಿ ಒಗಟು ಇತ್ಯಾದಿ)
- ಭಾಷಾ ಪ್ರಯೋಗದ ವ್ಯವಸ್ಥೆಯಲ್ಲಿನ ಮೂಲ ಕಲ್ಪನೆಗಳು( ಪ್ರಯೋಗಗಳು, ಕಾಲಗಳು ಮೊದಲಾದವುಗಳು)
- ಓದು ಮತ್ತು ಬರವಣಿಗೆಯಲ್ಲಿ ವೈವಿಧ್ಯತೆ (ಭಾಷಾ ಆಟಗಳು)

# ಕಲಿಕಾ ಸಾಧನೆಗಳು

1. ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
2. ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
3. ಪದಗಳು, ಪದಪ್ರಯೋಗಗಳು, ಗಾದೆಗಳು, ಶೈಲಿಗಳು ಮೊದಲಾದ ಭಾಷಾ ಘಟಕಗಳನ್ನು ಅಳವಡಿಸಿ ಸಂದರ್ಭಾನುಸಾರವಾಗಿ ಮಾತನಾಡುವುದು. ಸ್ವಂತ ರಚನೆಗಳಲ್ಲಿ ಅವುಗಳನ್ನು ಸಂದರ್ಭಾನುಸಾರವಾಗಿ ಉಪಯೋಗಿಸುವುದು.
4. ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
5. ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
6. ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
7. ನೀಡಿದ ಸಂದರ್ಭಕ್ಕೆ ಸೂಕ್ತವಾದ ವ್ಯವಹಾರ ರೂಪಗಳನ್ನು ಕಂಡುಕೊಂಡು ರಚನೆಗಳನ್ನು ಮಾಡುವುದು.
8. ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
9. ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
10. ಸೂಕ್ತ ಸೂಚಕಗಳನ್ನು ರೂಪಿಸಿ ಸ್ವಂತ ಹಾಗೂ ಇತರರ ರಚನೆಗಳ ಮೌಲ್ಯ ನಿರ್ಣಯಿಸುವುದು.
11. ಕೃತಿಯ ಕಥಾಪಾತ್ರಗಳು, ಸನ್ನಿವೇಶಗಳು, ಭಾಷಾಶೈಲಿ, ಮಂಡನೆಯ ರೀತಿ ಎಂಬಿತ್ಯಾದಿಗಳನ್ನು ಪರಿಗಣಿಸಿ ಓದಿದ ಕೃತಿಯ ಆಸ್ವಾದನಾ ಟಿಪ್ಪಣಿ ತಯಾರಿಸುವುದು.
12. ಕಥೆ, ಕವಿತೆಗಳಲ್ಲಿ ಕಥಾಪಾತ್ರಗಳ ಮಾನಸಿಕ ಸ್ಥಿತಿ, ಅವುಗಳಿಗಿರುವ ಸ್ಥಾನ ಇತ್ಯಾದಿಗಳನ್ನು ಗುರುತಿಸಿ ಬಾಯ್ದೆರೆಯಾಗಿ ಮತ್ತು ಲಿಖಿತವಾಗಿ ಪಾತ್ರಚಿತ್ರಣ ಮಾಡುವುದು.
13. ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
14. ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯಮಾಡುವುದರೊಂದಿಗೆ ಉತ್ತಮಗೊಳಿಸುವುದು.
15. ಪಾಠಭಾಗದಲ್ಲಿರುವ ಪದಗಳನ್ನು ಅರ್ಥವ್ಯತ್ಯಾಸವಿಲ್ಲದೆ ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವ ಚಟುವಟಿಕೆಯಲ್ಲಿ ತೊಡಗುವುದು.
16. ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
17. ಸೃಜನಾತ್ಮಕ ರಚನೆಗಳ ಭಾವವನ್ನು ಅರ್ಥೈಸಿಕೊಂಡು ನಾಟಕ, ಭಾವಾಭಿನಯ ಮತ್ತು ಮೂಕಾಭಿನಯಗಳ ಮೂಲಕ ಮಂಡಿಸುವುದು.
18. ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.
19. ಪರಿಚಿತವಾದ ಕವಿತೆಗಳಲ್ಲಿರುವ ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸುವುದು ಮತ್ತು ವಾಚಿಕವಾಗಿ ಮಂಡಿಸುವುದು.
20. ದೃಶ್ಯ–ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

# ವಾರ್ಷಿಕ ಯೋಜನೆ (Scheme of Work)

**ಕನ್ನಡ ಭಾಷೆ** **ತರಗತಿ VI**

| ಹಂತ | ತಿಂಗಳು | ಮುಂದುವರಿದ ಪಠ್ಯ | ಪಿರೇಡು | ಮೂಲ ಪಠ್ಯ | ಪಿರೇಡು |
|---|---|---|---|---|---|
| 1 | ಜೂನ್ | **ಘಟಕ 1 : ಸಿರಿನುಡಿ** | | **ಘಟಕ 1. ವಸುಧೆಯ ವೈಭವ** | |
| | | ಗಂಧದ ಬುವಿಯಿದು | 5 | ಮರುಹುಟ್ಟು | 6 |
| | | ಶಿವಪ್ಪಾಯ್ಯ ಕೋಂಟೆ ಹಿಡಿದ್ಹಾಂಗೆ | 7 | | |
| | | ಯಕ್ಷಗಾನ ಬೊಂಬೆಯಾಟ | 6 | | |
| | ಜುಲೈ | ವಾತ್ಸಲ್ಯ | 6 | ನೇಸರು | 5 |
| | | **ಘಟಕ 2 : ಹಸಿರೇ ಉಸಿರು** | | ಪ್ರವಾಸಿಗರ ಸ್ವರ್ಗ ವಯನಾಡು | 7 |
| | | ದುಡಿಮೆಯ ಫಲ | 6 | | |
| | ಆಗಸ್ಟ್ | ರೈತ | 5 | ನೀನಾರಿಗಾದೆಯೋ ಎಲೆ ಮಾನವ | 6 |
| | | ಹಸಿರು ಚಿನ್ನ | 7 | | |
| 2 | ಸಪ್ಟಂಬರ್ | **ಘಟಕ 3 : ತಾಣಯಾನ** | | **ಘಟಕ 2 : ಒಂದಾಗಿ ಬಾಳೋಣ** | |
| | | ಹೊಸ ಕಾರಿನ ಓಟ | 6 | ಕೆಚ್ಚಿನ ಹಿಡಿ | 7 |
| | | ಕಾಶ್ಮೀರದ ಸರೋವರದ ತೀರಗಳಲ್ಲಿ | 5 | | |
| | ಒಕ್ಟೋಬರ್ | ಬದುಕಿನ ಸತ್ಯ | 6 | | |
| | | **ಘಟಕ 4 : ಜೀವನ ಕಲೆ** | | ಐದು ಬೆರಳು ಕೂಡಿ | 5 |
| | | ತೋಳ ಮತ್ತು ಕೊಕ್ಕರೆ | 6 | | |
| | ನವಂಬರ್ | ರಾಣ ಮತ್ತು ಅಕ್ಬರ | 8 | ಸಮಬಾಳು | 7 |
| | | ನಿರೀಕ್ಷೆ | 5 | | |
| | ದಶಂಬರ್ | ಸದಾಚಾರ | 5 | | |
| | | **ಘಟಕ 5 : ಸ್ವಾಸ್ಥ್ಯ** | | | |
| | | ನಾಲಿಗೆಯ ಮಹಿಮೆ | 3 | | |
| 3 | ಜನವರಿ | ನಾಲಗೆಯ ಮಹಿಮೆ | 3 | **ಘಟಕ 3 : ಮರವಿದ್ದು ಫಲವೇನು?** | |
| | | ಆರೋಗ್ಯ ಭಾಗ್ಯ | 5 | ಮರವಿದ್ದು ಫಲವೇನು? | 5 |
| | | ತಾಯಿಯ ಋಣ | 7 | | |
| | ಫೆಬ್ರವರಿ | **ಘಟಕ 6 : ಪರಿವರ್ತನೆ** | | | |
| | | ಮೋಡಗಳೇ | 6 | ಆತ್ಮ ವಿಶ್ವಾಸದ ಗೆಲುವು | 6 |
| | | ಮೈಕಲ್ ಫ್ಯಾರಡೇ | 7 | | |
| | ಮಾರ್ಚ್ | ಅನಿಲನ ಕಾರು | 6 | ಕೊಡದಪ್ಪ ಬಿಡದಪ್ಪ | 6 |

# ಟೀಚಿಂಗ್ ಮ್ಯಾನುವೆಲ್

| | | |
|---|---|---|
| ತರಗತಿ | : | 6 |
| ಘಟಕ | : | 1. ಸಿರಿ ನುಡಿ |
| ಪಾಠದ ಹೆಸರು | : | ಶಿವಪ್ಪಾಯ್ಯ ಕೋಂಟೆ ಹಿಡಿದ್ವಾಂಗೆ |
| ಸಮಯ | : | 7 ಪಿರೇಡುಗಳು |

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಪದಗಳು, ಪದಪ್ರಯೋಗಗಳು, ಗಾದೆಗಳು ಶೈಲಿಗಳು ಮೊದಲಾದ ಭಾಷಾ ಘಟಕಗಳನ್ನು ಅಳವಡಿಸಿ ಸಂದರ್ಭಾನುಸಾರ ಮಾತನಾಡುವುದು. ಸ್ವಂತ ರಚನೆಗಳಲ್ಲಿ ಅವುಗಳನ್ನು ಸಂದರ್ಭಾನುಸಾರವಾಗಿ ಉಪಯೋಗಿಸುವುದು.
- ನೀಡಿದ ಸಂದರ್ಭಕ್ಕೆ ಸೂಕ್ತವಾದ ವ್ಯವಹಾರ ರೂಪಗಳನ್ನು ಕಂಡುಕೊಂಡು ರಚನೆಗಳನ್ನು ಮಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನ ಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವದರೊಂದಿಗೆ ಉತ್ತಮಗೊಳಿಸುವುದು.

| | | |
|---|---|---|
| ಆಶಯಗಳು | : | ಕಾಸರಗೋಡಿನಲ್ಲಿ ಅದರದೇ ಆದ ಸಂಸ್ಕೃತಿ ನೆಲೆಗೊಂಡಿದೆ.<br>ಕಥೆಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳುವುದು.<br>ಕಾಸರಗೋಡಿನ ಸಂಸ್ಕೃತಿಯನ್ನು ಬಿಂಬಿಸುವ ಹಲವು ಸಾಹಿತ್ಯಗಳು ಕನ್ನಡದಲ್ಲಿವೆ. |
| ಕೌಶಲ್ಯಗಳು | : | ಮಾತುಗಾರಿಕೆ, ಓದುವಿಕೆ, ಬರವಣಿಗೆ ಪಾತ್ರಾಭಿನಯ |
| ಭಾಷಾ ಸತ್ಯಾಂಶಗಳು | : | ಸರಳ ವಾಕ್ಯಗಳು |
| ವ್ಯವಹಾರ ರೂಪಗಳು | : | ಸಂಭಾಷಣೆ, ಗಾದೆಯ ಆಶಯ |
| ಮೌಲ್ಯಗಳು – ಮನೋಭಾವಗಳು | : | ಹಿರಿಯರ ಸಲಹೆಗಳನ್ನು ಸ್ವೀಕರಿಸುವುದು ಮತ್ತು ಅವರನ್ನು ಗೌರವಿಸುವುದು.<br>ಹಸಿದು ಬಂದವನಿಗೆ ಇದ್ದುದನ್ನು ನೀಡಿ ಅತಿಥಿ ಸತ್ಕಾರ ಮಾಡುವುದು. |
| ಕಲಿಕೋಪಕರಣಗಳು | : | ಉತ್ಪನ್ನಗಳು ಗಾದೆಯ ಆಶಯ |

**ಕಲಿಕೋಪಕರಣಗಳು**

ಅಡಕಮುದ್ರಿಕೆ, ಚಾರ್ಟುಗಳು, ಪುಸ್ತಕಗಳು

| ಪ್ರಕ್ರಿಯೆ | ಮೌಲ್ಯನಿರ್ಣಯ |
|---|---|
| • ಚರ್ಚೆ<br>ಕನ್ನಡದ ಸಾಹಿತ್ಯ ರಚನೆ ಮಾಡಿದ ಹಲವಾರು ಕವಿಗಳಿದ್ದಾರೆ. ಅವರಲ್ಲಿ ನಮ್ಮ ಕಾಸರಗೋಡಿನವರೂ ಇದ್ದಾರೆ. ಅವರು ಯಾರು?<br>– ಮಕ್ಕಳಿಂದ ಕಾಸರಗೋಡಿನ ಕನ್ನಡ ಕವಿಗಳ ಹೆಸರುಗಳನ್ನು ಹೇಳಿಸುವುದು.<br>– ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು<br>– ಅವರು ಬರೆದ ಯಾವುದಾದರೂ ಕೃತಿಗಳ ಹೆಸರು ಹೇಳಬಹುದೇ?<br>– ಮಕ್ಕಳಿಂದ ಈ ಕವಿಗಳು ರಚಿಸಿದ ಕತೆಯನ್ನು ಹೇಳಿಸುವುದೋ ಕವಿತೆಯನ್ನು ಹಾಡಿಸುವುದೋ ಮಾಡುವುದು<br>ನಾವೀಗ ಕಾಸರಗೋಡಿನ ಬೇಕಲ ರಾಮನಾಯಕರು ಬರೆದ ‘ಶಿವಪ್ಪಾಯ್ಯ ಕೋಂಟೆ ಹಿಡಿದ್ವಾಂಗೆ’ ಎಂಬ ಕತೆಯನ್ನು ಓದೋಣ ಎನ್ನುತ್ತಾ ಪಾಠ ಪ್ರವೇಶ ಮಾಡುವುದು.<br>– ಮಕ್ಕಳು ಕತೆಯನ್ನು ಮೌನವಾಗಿ ಓದುವುದು<br>– ನವೀನ ಪದಗಳ ಅರ್ಥವನ್ನು ಅರ್ಥಕೋಶದ ಸಹಾಯದಿಂದ ಅವುಗಳ ಅರ್ಥವನ್ನು ತಿಳಿದುಕೊಳ್ಳುವುದು.<br>– ಮಕ್ಕಳಿಗೆ ಆಶಯಗ್ರಹಣ ಪ್ರಶ್ನೆಗಳನ್ನು ಕೇಳುವುದು.<br>• ತಿರುಕನು ತಳಮಳಿಸುತ್ತಿದ್ದುದು ಯಾಕೆ?<br>• ‘ಇಟ್ಟು ರಾಗಿ ಗಂಜಿ ಬೇಯ್ಸಿಟ್ಟಿದ್ದೇನೆ ನಂಜ್ಲಿಕ್ಕೇನು ಇಲ್ಲ’ ಈ ಮಾತನ್ನು ಯಾರು ಹೇಳಿದರು?<br>• ಅಜ್ಜಿ ರಾಗಿ ಗಂಜಿಯನ್ನು ಎಲೆಯಲ್ಲಿ ಇಕ್ಕಿದಾಗ ಏನಾಯಿತು?<br>• ರಾಗಿ ಗಂಜಿ ಕುಡಿಯಲು ಕಷ್ಟ ಮಾಡುತ್ತಿದ್ದ ತಿರುಕನನ್ನು ನೋಡಿ ಅಜ್ಜಿ ಏನು ಹೇಳಿದಳು?<br>• ನಿಜವಾಗಿಯೂ ತಿರುಕನು ಯಾರಾಗಿದ್ದನು?<br>• ಅವನು ವೇಷ ಪಲ್ಲಟ ಮಾಡಿ ತಿರುಗಾಡುತ್ತಿದ್ದುದು ಯಾಕೆ?<br>– ಅಧ್ಯಾಪಕರು ಉಚ್ಚಾರ ಸ್ಪಷ್ಟತೆಯೊಂದಿಗೆ ಭಾವಪೂರ್ಣವಾಗಿ ಓದುವುದು. | ಕಾಸರಗೋಡಿನ ಕನ್ನಡ ಕವಿಗಳು ಯಾರು? |

| | |
|---|---|
| – ಮೂರು ಮಕ್ಕಳಂತೆ ಗುಂಪು ಮಾಡುವುದು, ಒಂದು ಗುಂಪಿನಿಂದ ಪಾಠದ ಒಂದು ವಾಕ್ಯವನ್ನು ಓದಿದಾಗ ಇನ್ನೊಂದು ಗುಂಪು ನಿರ್ದಿಷ್ಟ ಸಮಯದಲ್ಲಿ ಅದರ ಮುಂದಿನ ವಾಕ್ಯವನ್ನು ಸ್ಪಷ್ಟವಾಗಿ ಓದಬೇಕು  ಈ ರೀತಿ ಓದುವ ಆಟ ಮುಂದುವರಿಯುವುದು | |
| **2ನೇ ಪಿರೇಡು**<br>– ಚರ್ಚೆ ನಡೆಸುವುದು<br>● ಅಜ್ಜಿ ಶಿವಪ್ಪನಾಯಕನನ್ನು ಹೇಗೆ ಉಪಚರಿಸಿದಳು?<br>● ಆ ಬಡ ಅಜ್ಜಿಯ ಉಪಚಾರಕ್ಕೆ ರಾಜನು ಹೇಗೆ ಪ್ರತಿಕ್ರಯಿಸಿದನು?<br>● ಇಲ್ಲಿ ರಾಜನ ಯಾವ ಗುಣ ವ್ಯಕ್ತವಾಗುತ್ತದೆ?<br>● ರಾಜನ ಈ ಗುಣದ ಬಗ್ಗೆ ನಿಮ್ಮ ಅನಿಸಿಕೆ ಏನು?<br>ಈ ಮೇಲಿನ ಪ್ರಶ್ನೆಗಳ ಮೂಲಕ ಚರ್ಚೆ ಮುನ್ನಡೆಸುವುದು.<br><br>**ಕ್ರೋಡೀಕರಣ**<br>ಒಬ್ಬ ಉತ್ತಮ ರಾಜನಲ್ಲಿರಬೇಕಾದ ಗುಣಗಳಲ್ಲಿ ಇದು ಒಂದಾಗಿದೆ. ಬಡ ಮುದುಕಿ ತನ್ನನ್ನು ಅವಹೇಳನ ಮಾಡಿದಳು ಎಂದು ಬೇಸರಿಸದೆ ಅವಳ ಮಾತಿನ ಒಳಾರ್ಥವನ್ನು ಗ್ರಹಿಸಿ ಅಜ್ಜಿಯನ್ನು ಮನಸಾರೆ ಅಭಿನಂದಿಸಿದನು. ಉತ್ತಮ ಸಲಹೆ ನೀಡಿದರೆ, ಅದು ಯಾರು ನೀಡಿದರೂ ಸ್ವೀಕರಿಸುವುದು ಒಳ್ಳೆಯ ಗುಣ<br><br>● ಉತ್ತರಿಸುವುದು.<br>ಪಾಠದಲ್ಲಿ ನೀಡಿದ ಪ್ರಶ್ನೆಗಳಿಗೆ ಮಕ್ಕಳು ಗುಂಪಿನಲ್ಲಿ ಕುಳಿತು ಉತ್ತರ ಬರೆಯುವುದು. ಬಳಿಕ ಪ್ರತಿ ಗುಂಪಿನಲ್ಲಿ ಮಂಡಿಸುವುದು. ಮಂಡಿಸಿದ  ಉತ್ತರದ ಬಗ್ಗೆ ಚರ್ಚಿಸುವುದು.<br>● ಸಂದರ್ಭ ಬರೆಯುವುದು<br>"ಏನಪ್ಪಾ। ನೀನು. ಶಿವಪ್ಪಾಯ್ಯ ಕೋಂಟೆ ಹಿಡಿದ್ಹಾಂಗೆ ಮಾಡ್ತಿಯಲ್ಲಾ।" ಈ ಹೇಳಿಕೆಯನ್ನು ಉಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಬಳಿಕ ಕೆಳಗಿನ ಸೂಚಕಗಳ ಆಧಾರದಲ್ಲಿ ಚರ್ಚೆ ನಡೆಸುವುದು.<br>● ಈ ಮಾತನ್ನು ಯಾರು ಹೇಳಿದರು?<br>● ಯಾರೊಡನೆ ಹೇಳಿದರು? | ಪಾಠ–ಯಾರಿಗೆಲ್ಲ ಪೂರ್ಣಆಶಯಗ್ರಹಣ |

- ಯಾವಾಗ ಹೇಳಿದರು
- ಯಾಕೆ ಹೇಳಿದರು

ಚರ್ಚೆಯ ಆಧಾರದಲ್ಲಿ ಮಕ್ಕಳು ವೈಯುಕ್ತಿಕವಾಗಿ ಟಿಪ್ಪಣಿ ತಯಾರಿಸುವರು.

ಕೆಲವರಿಂದ ಮಂಡನೆ.

**ಅಧ್ಯಾಪಕರಿಂದ ಮಂಡನೆ**

ಈ ಮಾತನ್ನು ಬೇಕಲ ರಾಮನಾಯಕರು ಬರೆದ 'ಶಿವಪ್ಪಾಯ್ಕ ಕೋಂಟೆ ಹಿಡಿದ್ವಾಂಗೆ' ಎಂಬ ಪಾಠದಲ್ಲಿ ಅಜ್ಜಿಯು ತಿರುಕನೊಡನೆ ಹೇಳಿದಳು. ಅಜ್ಜಿಯು ಹಸಿದಿದ್ದ ತಿರುಕನಿಗೆ ಎಲೆಯಲ್ಲಿ ರಾಗಿ ಗಂಜಿ ಬಡಿಸಿದಾಗ  ಅದು ಅತ್ತಿತ್ತ ಓಡಾಡತೊಡಗಿತು. ಆಗ ಅವನು ಅಲ್ಲಿ ಇಲ್ಲಿ ಆಚೆ ಈಚೆ ಹಿಡಿಯುತ್ತಾ ಒಂದು ಕಡೆಯೂ ಹಿಡಿಯಲಾರದೆ ಪೇಚಾಡುತ್ತಿದ್ದನು. ಆಗ ಆ ಅಜ್ಜಿ ನಗುತ್ತಾ ಏನಪ್ಪಾ ನೀನು ಶಿವಪ್ಪಾಯ್ಕ ಕೋಂಟೆ ಹಿಡಿದ್ವಾಂಗೆ ಮಾಡ್ತಿಯಲ್ಲ। ಒಂದ್ಕಡೆ ಹಿಡಿದ್ರೆ ನಾಲ್ಕು ಕಡೆ ಬಿಡುತ್ತಿ ಎಂದಳು.

ಮೂರ್ದಿನವಾಯ್ತಜ್ಜಿ ಊಟವಿಲ್ದೆ ಈ ಮಾತಿನ ಸಂದರ್ಭವನ್ನು ಮಕ್ಕಳು ಮನೆಕೆಲಸವಾಗಿ ಮಾಡುವುದು.

**3ನೇ ಪಿರೇಡು**

ಮನೆಯಲ್ಲಿ ಬರೆದುಕೊಂಡು ಬಂದ ಸಂದರ್ಭ ಟಿಪ್ಪಣಿಯನ್ನು ಮಕ್ಕಳು ಮಂಡಿಸುವುದು.

- ಸಂಭಾಷಣೆ ಬರೆಯುವುದು

– ಮಕ್ಕಳು ಪಾಠದಿಂದ ತಮಗಿಷ್ಟವಾದ ಭಾಗವನ್ನು ಆಯ್ದುಕೊಳ್ಳುವುದು

– ಆ ಭಾಗದಲ್ಲಿರುವ ಪಾತ್ರಗಳನ್ನು ತಿಳಿದುಕೊಂಡು ವೈಯುಕ್ತಿಕವಾಗಿ ಸಂಭಾಷಣೆ ರಚಿಸುವುದು

– ನಾಲ್ಕು ಮಂದಿಯ ಗುಂಪಿನಲ್ಲಿ ಕುಳಿತುಕೊಂಡು ತಾನು ರಚಿಸಿದ ಸಂಭಾಷಣೆಯನ್ನು ಮಂಡಿಸುವುದು.

– ಸಂಭಾಷಣೆಯನ್ನು ಉತ್ತಮ ಪಡಿಸುವುದು

– ಉತ್ತಮ ಪಡಿಸಿದ ಸಂಭಾಷಣೆಯೊಂದಿಗೆ ಆ ಸನ್ನಿವೇಶವನ್ನು ಏಕಪಾತ್ರಾಭಿನಯದ ಮೂಲಕ ಪ್ರಸ್ತುತ ಪಡಿಸುವುದು

– ಪ್ರತಿಯೊಬ್ಬನೂ ಅಭಿನಯಿಸುವಾಗ ಉಳಿದ ಮಕ್ಕಳು ಮೌಲ್ಯನಿರ್ಣಯ ನಡೆಸಿ ಅಂಕ ನೀಡುವುದು.

– ಕೊನೆಗೆ ಅತೀ ಹೆಚ್ಚು ಅಂಕ ಪಡೆದವನನ್ನು ಅಭಿನಂದಿಸುವುದು

ಚರ್ಚೆ

| ಸ್ವ ಮೌಲ್ಯನಿರ್ಣಯ | ಹೌದು | ಇಲ್ಲ |
|---|---|---|
| ಸಂದರ್ಭವನ್ನು ಗುರುತಿಸಲಾಗಿದೆ | ☐ | ☐ |
| ಆಶಯಕ್ಕನುಗುಣವಾಗಿ ಸಂದರ್ಭವನ್ನು ತಿಳಿಸಲಾಗಿದೆ | ☐ | ☐ |
| ಆಶಯವನ್ನು ಅನುಕ್ರಮವಾಗಿ ಬರೆಯಲಾಗಿದೆ | ☐ | ☐ |
| ಅಕ್ಷರ ಪದ,ವಾಕ್ಯ ಇವೇ ಮೊದಲಾದ ಭಾಷಾ ಘಟಕಗಳನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ | ☐ | ☐ |

- ಅತೀ ಹೆಚ್ಚು ಅಂಕ ಪಡೆದವನ ಏಕಪಾತ್ರಾಭಿನಯದಲ್ಲಿದ್ದ ವಿಶೇಷತೆಗಳು ಯಾವುವು?

**ಕ್ರೋಢೀಕರಣ**

- ಹಾವ ಭಾವ ಆಂಗಿಕ ಚಲನೆಗಳಿಂದ ಕೂಡಿದ ಅಭಿನಯ
- ಸ್ವರ ಭಾರ ಮತ್ತು ಸ್ಪಷ್ಟ ಉಚ್ಛಾರದೊಂದಿಗೆ ಭಾವಪೂರ್ಣವಾದ ಸಂಭಾಷಣೆ
- ಪಾತ್ರಕ್ಕೆ ಸೂಕ್ತವಾದ ಸಂಭಾಷಣೆ ಮತ್ತು ಸ್ವರ ಬದಲಾವಣೆ
- ಆರಿಸಿದ ಸನ್ನಿವೇಶಕ್ಕೆ ಅನುಗುಣವಾದ ಏಕಪಾತ್ರಾಭಿನಯ

**4ನೇ ಪಿರೇಡು**

- ಗಾದೆ ಮಾತಿನ ಆಶಯ ಬರೆಯುವುದು

– ಚರ್ಚೆ ನಡೆಸುವುದು

- ಪಾಠದಲ್ಲಿ ಬಂದ ಗಾದೆ ಮಾತು ಯಾವುದು?
- ನಿಮಗೆ ಯಾವುದಾದರೊಂದು ಗಾದೆ ಮಾತು ಹೇಳಬಹುದೇ?
- ಅದರ ಅರ್ಥವೇನು ಎಂದು ತಿಳಿದಿದೆಯೇ?

– ಮಕ್ಕಳು ತಮಗೆ ತಿಳಿದ ಗಾದೆಮಾತುಗಳನ್ನು ಪಟ್ಟಿ ಮಾಡುವುದು.

– ಕೆಲವರು ಮಂಡಿಸುವುದು

– ತಮಗೆ ಇಷ್ಟವಾದ ಗಾದೆಮಾತನ್ನು ಮಕ್ಕಳು ಆಯ್ಕೆ ಮಾಡುವುದು.

– ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸುವುದು

– ಪ್ರತಿ ಗುಂಪಿಗೂ ಒಂದು ಗಾದೆ ಮಾತಿನ ಆಶಯವನ್ನು ವಿತರಿಸುವುದು.

**ಬೆಳ್ಳಗಿದ್ದದ್ದೆಲ್ಲ ಹಾಲಲ್ಲ**

ಹಾಲಿನ ಬಣ್ಣ ಬಿಳಿ. ಅದೇ ರೀತಿ ಬಿಳಿ ಬಣ್ಣದ ಪೈಂಟೂ ಇದೆ. ಬಿಳಿ ಬಣ್ಣದ ಹಲವಾರು ದ್ರವ ವಸ್ತುಗಳನ್ನು ತಯಾರಿಸಬಹುದು. ಬಿಳಿಯಾಗಿ ಕಂಡ ಕೂಡಲೇ ಅದು ಹಾಲು ಎಂಬ ನಿರ್ಧಾರಕ್ಕೆ ಬರಬಾರದು. ಅದರ ಗುಣ, ರುಚಿ, ವಾಸನೆ ಇತ್ಯಾದಿಗಳನ್ನು ಪರಿಶೀಲಿಸಿ ನಿರ್ಧಾರಕ್ಕೆ ಬರಬೇಕಾಗುತ್ತದೆ. ಇದೇ ರೀತಿ ಒಬ್ಬ ವ್ಯಕ್ತಿ ಒಳ್ಳೆಯವನಾಗಿದ್ದರೆ ಎಲ್ಲರೂ ಒಳ್ಳೆಯವರೆಂದು ನಂಬಬಾರದು. ಸಮಾಜದಲ್ಲಿ ವಿವಿಧ ಗುಣ ಸ್ವಭಾವದ ಜನರಿದ್ದಾರೆ. ಅವರ ಗುಣ ಸ್ವಭಾವವನ್ನು ತಿಳಿದು ಅವರೊಂದಿಗೆ ವ್ಯವಹರಿಸಬೇಕು. ಹೆಚ್ಚಾಗಿ ವಂಚನೆಗೊಳಗಾಗುವ ಅಮಾಯಕರಿಗೆ ಈ ಗಾದೆಮಾತು ಅನ್ವಯವಾಗುತ್ತದೆ.

– ಮಕ್ಕಳು ಒಬ್ಬರು ಅದನ್ನು ಗುಂಪಿನಲ್ಲಿ ಮಂಡಿಸುವುದು

| | |
|---|---|
| – ಬಳಿಕ ವೈಯುಕ್ತಿಕವಾಗಿ ತಾವು ಆಯ್ಕೆ ಮಾಡಿದ ಗಾದೆಮಾತಿನ ಆಶಯವನ್ನು ಬರೆಯುವುದು<br>– ಕೆಲವರಿಂದ ಮಂಡನೆ<br>– ಸಾಮಾನ್ಯ ಚರ್ಚೆ ನಡೆಸುವುದು<br>• ಆರಿಸಿದ ಗಾದೆ ಮಾತು ಯಾವುದು?<br>• ಗಾದೆ ಮಾತಿನ ಸಾಮಾನ್ಯ ಅರ್ಥವನ್ನು ವಿಶದಪಡಿಸಲಾಗಿದೆಯೇ?<br>• ಗಾದೆ ಮಾತಿನಲ್ಲಿ ಅಡಗಿರುವ ಗೂಢಾರ್ಥವನ್ನು ತಿಳಿಯಲಾಗಿದೆಯೇ?<br>• ಆಶಯವನ್ನು ಸೂಕ್ತ ಅಕ್ಷರ ಪದ ವಾಕ್ಯ ಪ್ರಯೋಗಗಳಿಂದ ವ್ಯಕ್ತಪಡಿಸಲಾಗಿದೆಯೇ?<br>• ಗಾದೆ ಮಾತಿನ ಬಳಕೆಯ ಸಂದರ್ಭವನ್ನು ತಿಳಿಸಲಾಗಿದೆಯೇ?<br>• ಗಾದೆ ಮಾತಿನ ಆಶಯವನ್ನು ಉದಾಹರಣೆ ಸಹಿತ ವಿಶ್ಲೇಷಿಸಲಾಗಿದೆಯೇ?<br>– ಗಾದೆಮಾತಿನ ಮೌಲ್ಯ ನಿರ್ಣಯ ಸೂಚಕವನ್ನು ನಿರ್ಧರಿಸುವುದು.<br>– ಮಕ್ಕಳು ಗುಂಪಿನಲ್ಲಿ ಕುಳಿತು ತಮ್ಮ ಟಿಪ್ಪಣಿಗಳನ್ನು ಮಂಡಿಸುವುದು<br>– ಸೂಚಕಗಳಿಗನುಸರಿಸಿ ಮೌಲ್ಯನಿರ್ಣಯ ನಡೆಸುವುದು<br>– ಬಳಿಕ ತಮ್ಮ ರಚನೆಯನ್ನು ಉತ್ತಮ ಪಡಿಸುವುದು<br>– ಕೊನೆಗೆ ಎಲ್ಲರ ರಚನೆಗಳನ್ನು ಸೇರಿಸಿ ಗಾದೆ ಸಂಚಿಕೆ ತಯಾರಿಸುವುದು<br>– ಆ ಗಾದೆ ಸಂಚಿಕೆಗೆ ಅಧ್ಯಾಪಕರು ಮುನ್ನುಡಿ ಬರೆಯುವರು<br><br>**5ನೇ ಪಿರೇಡು**<br>• ಗ್ರಾಮ್ಯ–ಶಿಷ್ಟ<br>ಅಧ್ಯಾಪಕರು ಈ ಕೆಳಗಿನ ವಾಕ್ಯಗಳನ್ನು ಕರಿಹಲಗೆಯಲ್ಲಿ ಬರೆಯುವುದು.<br>1. "ಅಯ್ಯೋ ಮಗ್ನೇ ನಾನು ಅನ್ನ ಕಂಡ್ರಲ್ವೇ ನಂಗನ್ನ ಹಾಕೋದು?"<br>2 "ಅಯ್ಯೋ ಮಗನೇ ನಾನು ಅನ್ನವನ್ನೇ ಕಂಡರಲ್ಲವೇ ನಿನಗೆ ಅನ್ನವನ್ನು ಹಾಕುವುದು?<br>ಚರ್ಚೆ<br>• 1 ಮತ್ತು 2ನೇ ವಾಕ್ಯಗಳ ಏನಾದರೂ ವ್ಯತ್ಯಸವಿದೆಯೇ?<br>• ಯಾವ ರೀತಿಯ ವ್ಯತ್ಯಾಸಗಳಿವೆ?<br>• ಆಶಯಗಳಲ್ಲಿ ವ್ಯತ್ಯಾಸವಿದೆಯೇ? | |

**ಕ್ರೋಡೀಕರಣ**

ಎರಡೂ ಕನ್ನಡ ನುಡಿಯ ವಾಕ್ಯಗಳಾಗಿವೆ.
ಒಂದನೆಯದು ನಾವು ಮಾತನಾಡುವಾಗ ಬಳಸುವ ಭಾಷೆಯಂತಿವೆ
ಎರಡನೆಯದು ಬರವಣಿಗೆಯ ರೀತಿಯಲ್ಲಿದೆ
ಒಂದನೆಯದು ಗ್ರಾಮ್ಯ ಪದಗಳನ್ನು ಹೊಂದಿವೆ ಆದ್ದರಿಂದ
ಇದನ್ನು ಗ್ರಾಮ್ಯರೂಪ ಎಂದು ಕರೆಯುತ್ತೇವೆ.
ಎರಡನೆಯದು ಶಿಷ್ಟರೂಪವಾಗಿದೆ.

- ❑ ಇದೇ ರೀತಿ ಕೆಳಗಿನ ವಾಕ್ಯಗಳನ್ನು ಮಕ್ಕಳು ಶಿಷ್ಟರೂಪಕ್ಕೆ ಬದಲಾಯಿಸುವುದು
- "ಇಟ್ಟು ರಾಗಿ ಗಂಜಿ ಬೇಯ್ಸಿಟ್ಟದ್ದೇನೆ"
- "ಮೂರ್ದಿನವಾಯ್ತಜ್ಜಿ ಊಟವಿಲ್ದೆ"
- "ಶಿವಪ್ಪಾಯ್ಕ ಕೋಂಟೆ ಹಿಡಿದ್ಹಾಂಗೆ ಮಾಡ್ತಿಯಲ್ಲಾ!

ಬಳಿಕ ಮಂಡಿಸುವುದು
ಸರಳ ವಾಕ್ಯಗಳಾಗಿ ಬರೆಯುವುದು
ಕೆಳಗಿನ ವಾಕ್ಯಗಳನ್ನು ಕರಿಹಲಗೆಯಲ್ಲಿ ಬರೆಯುವುದು
ತಿರುಕನೊಬ್ಬನು ಕಡು ಬಿಸಿಲಿನಲ್ಲಿ ನಡೆದು ನಡೆದು
ಆಯಾಸಗೊಂಡು ಹಸಿವನ್ನು ತಾಳಲಾರದೆ ತಳಮಳಿಸುತ್ತಿದ್ದನು
ಚರ್ಚೆ
ಈ ಎರಡು ವಾಕ್ಯಗಳಲ್ಲಿ ನೀವು ಗಮನಿಸಿದ ಪ್ರಧಾನ ವ್ಯತ್ಯಾಸಗಳೇನು?

**ಕ್ರೋಡೀಕರಣ**

ಮೊದಲನೆಯದು ಒಂದೇ ವಾಕ್ಯವಾಗಿದೆ.
ಎರಡನೆಯದರಲ್ಲಿ ಒಂದನೇ ವಾಕ್ಯವನ್ನು ಎರಡು ವಾಕ್ಯಗಳಾಗಿ ಬರೆಯಲಾಗಿದೆ.
ಎರಡು ವಾಕ್ಯಗಳಾಗಿ ಮಾಡುವಾಗ ಆಶಯದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ.
ಇವುಗಳನ್ನು ಸರಳವಾಕ್ಯಗಳು ಎನ್ನುತ್ತೇವೆ.

– ಮಕ್ಕಳು ಕೆಳಗಿನ ವಾಕ್ಯಗಳನ್ನು ಸರಳ ವಾಕ್ಯಗಳಾಗಿ ಬರೆಯುವುದು.

- ಅಜ್ಜಿ ಬಾವಡಿಯಲ್ಲಿ ರಾಗಿ ಗಂಜಿ ತಂದು ನಾಲ್ಕು ಚಿಪ್ಪು ಇಕ್ಕಿದಳು.
- ತಿರುಕನು ಹೊದೆದಿದ್ದ ಕಂಥೆಯನ್ನು ಸರಿಸಿಕೊಂಡು ಎಲೆ ಮುಂದೆ ಕುಳಿತನು.
- ಬದಲಾಯಿಸಿ ಬರೆದ ಸರಳ ವಾಕ್ಯಗಳನ್ನು ತರಗತಿಯಲ್ಲಿ ಮಂಡಿಸುವುದು.

# 1. ಸಿರಿನುಡಿ

ಒಂದು ನಾಡಿನ ಕಲೆ ಮತ್ತು ಸಂಸ್ಕೃತಿ ಆ ನಾಡಿನ ಭವ್ಯ ಪರಂಪರೆಯನ್ನು ಎತ್ತಿ ತೋರಿಸುತ್ತವೆ. ಸಂಸ್ಕೃತಿಯನ್ನು ಸಾಕಾರಗೊಳಿಸುವ ಸಾಂಪ್ರದಾಯಿಕ ಆಚಾರ ವಿಚಾರಗಳನ್ನು ಜನಪದ ವೈಭವಗಳನ್ನು ಮುಂದಿನ ತಲೆಮಾರಿಗೆ ಹಸ್ತಾಂತರಿಸಬೇಕಾದರೆ ಅವುಗಳನ್ನು ಉಳಿಸಿ ಬೆಳೆಸುವುದು ಅತಿ ಅಗತ್ಯ. ಇದಕ್ಕಾಗಿ ಸಮಾಜದಲ್ಲಿ ಸಂದರ್ಭಕ್ಕನುಸಾರವಾಗಿ ಕಲೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳು ನಡೆಯಬೇಕಾಗಿದೆ. ಎಲ್ಲಾ ಕಾರ್ಯಕ್ರಮಗಳನ್ನು ವೀಕ್ಷಿಸುವ, ವಿಶ್ಲೇಷಿಸುವ ಮತ್ತು ಭಾಗವಹಿಸುವ ಅವಕಾಶ ಮಕ್ಕಳಿಗೆ ಲಭಿಸಬೇಕು.

ನಮ್ಮ ನಾಡಿನಲ್ಲಿರುವ ಪುರಾತನ ವಸ್ತು, ಪ್ರಾಚೀನ ಸ್ಮಾರಕ, ಕೆತ್ತನೆ, ಶಿಲ್ಪಕಲೆ ಮುಂತಾದವುಗಳ ಬಗ್ಗೆ ಅಧ್ಯಯನ ಮಾಡುವ ಮನೋಭಾವ ಮಕ್ಕಳಲ್ಲಿ ಉಂಟಾಗಬೇಕು. ಅಂತಹ ಅಧ್ಯಯನಗಳ ಮೂಲಕ ಭಾಷಾ ಕೌಶಲಗಳು ಅವರಿಗರಿವಿಲ್ಲದೇ ಕರಗತವಾಗುವುದು. ಇದಕ್ಕಾಗಿ ಶಿಕ್ಷಕರು, ರಕ್ಷಕರು ಮತ್ತು ಸಮಾಜದ ಸಂಘ ಸಂಸ್ಥೆಗಳು ಕೈ ಜೋಡಿಸಬೇಕು. ಕೋಟೆ ಕೊತ್ತಲಗಳಿಗೆ ಸಂಬಂಧಿಸಿದ ಜನಪದ ನಡೆನುಡಿಗಳು ಇಂದಿಗೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ. ಇವುಗಳು ಮಕ್ಕಳಿಗೆ ಪರಿಚಿತವಾಗಬೇಕು. ಯಕ್ಷಗಾನ ಬೊಂಬೆಯಾಟದಂತಹ ಕಲೆಗಳ ವಿಶೇಷತೆ, ಸಮಾಜದಲ್ಲಿ ಅವುಗಳ ಸ್ಥಾನ ಮೊದಲಾದವುಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲು ಮಕ್ಕಳು ಮುಂದಾಗಬೇಕು. ಇದಕ್ಕೆ ಅಗತ್ಯವಾದ ಕೆಲವು ವಿಚಾರಗಳನ್ನು ಪಠ್ಯ ಪುಸ್ತಕದಲ್ಲಿ ಅಳವಡಿಸಲಾಗಿದೆ. ಅದಕ್ಕೆ ಪೂರಕ ವಿಚಾರಗಳನ್ನು ಇನ್ನಷ್ಟು ನೀಡಿ ಅದನ್ನು ಸಂಪುಷ್ಠಗೊಳಿಸಬೇಕಾಗಿದೆ. ಜನಪದ ನಮ್ಮ ಪುರಾತನ ಸಂಸ್ಕೃತಿಯ ಪ್ರತೀಕವಾಗಿದೆ. ಜನಪದ ಕಲೆ ಮತ್ತು ಸಂಸ್ಕೃತಿಯು ನಮ್ಮ ಜೀವನಮೌಲ್ಯ, ಸಾಮಾಜಿಕ ಮೌಲ್ಯ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸಲು ಸಹಾಯಕವಾಗುವುದು.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಪದಗಳು, ಪದಪ್ರಯೋಗಗಳು, ಗಾದೆಗಳು, ಶೈಲಿಗಳು ಮೊದಲಾದ ಭಾಷಾ ಘಟಕಗಳನ್ನು ಅಳವಡಿಸಿ ಸಂದರ್ಭಾನುಸಾರವಾಗಿ ಮಾತನಾಡುವುದು. ಸ್ವಂತ ರಚನೆಗಳಲ್ಲಿ ಅವುಗಳನ್ನು ಸಂದರ್ಭಾನುಸಾರವಾಗಿ ಉಪಯೋಗಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ನೀಡಿದ ಸಂದರ್ಭಕ್ಕೆ ಸೂಕ್ತವಾದ ವ್ಯವಹಾರ ರೂಪಗಳನ್ನು ಕಂಡುಕೊಂಡು ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೂಕ್ತ ಸೂಚಕಗಳನ್ನು ರೂಪಿಸಿ ತನ್ನ ಹಾಗೂ ಇತರರ ರಚನೆಗಳ ಮೌಲ್ಯ ನಿರ್ಣಯಿಸುವುದು.

- ಕೃತಿಯ ಕಥಾಪಾತ್ರಗಳು, ಸನ್ನಿವೇಶಗಳು, ಭಾಷಾಶೈಲಿ, ಮಂಡನೆಯ ರೀತಿ ಎಂಬಿತ್ಯಾದಿಗಳನ್ನು ಪರಿಗಣಿಸಿ ಓದಿದ ಕೃತಿಯ ಆಸ್ವಾದನ ಟಿಪ್ಪಣಿ ತಯಾರಿಸುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಉತ್ತಮಗೊಳಿಸುವುದು.
- ಪಾಠಭಾಗದಲ್ಲಿರುವ ಪದಗಳನ್ನು ಅರ್ಥವ್ಯತ್ಯಾಸವಿಲ್ಲದೆ ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವ ಚಟುವಟಿಕೆಯಲ್ಲಿ ತೊಡಗುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 1 : ಸಿರಿನುಡಿ** ಸಮಯ : 5+7 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಗಂಧದ ಭುವಿಯದು | • ಕನ್ನಡ ನಾಡು ನುಡಿಯ ಬಗ್ಗೆ ತಿಳಿಯವುದು<br>• ಕನ್ನಡ ನಾಡು ನುಡಿಗಳಿಗೆ ಸಂಬಂಧಿಸಿದ ಅನೇಕ ಕವಿತೆಗಳಿವೆ.<br>• ಇಂತಹ ಕವಿತೆಗಳನ್ನು ಹಾಡಿ ಆಸ್ವಾದಿಸುವುದು.<br>• ಕನ್ನಡ ನಾಡು ನುಡಿಗೆ ಸಂಬಂಧಿಸಿದ ಕವಿತೆಗಳನ್ನು ಸಂಗ್ರಹಿಸುವುದು<br>• ಕನ್ನಡ ಭಾಷೆಯ ಮೇಲೆ ಅಭಿಮಾನ ಮೂಡಿಸುವುದು. | • ಹಾಡುವುದು<br>• ಪ್ರಾಸಪದ ಗುರುತಿಸುವುದು<br>• ಉತ್ತರಿಸುವುದು<br>• ಆಶಯ ಬರೆಯುವುದು<br>• ಹೋಲಿಸಿ ಬರೆಯುವುದು<br>• ಪದ ಹುಡುಕುವುದು<br>• ಹಾಡುಗಳ ಸಂಗ್ರಹ | • ಧ್ವನಿ ಸುರುಳಿ<br>• ಕನ್ನಡ ನಾಡು ನುಡಿಗೆ ಸಂಬಂಧಿಸಿದ ಪುಸ್ತಕಗಳು. | • ಪ್ರಶ್ನೋತ್ತರ<br>• ಆಶಯ ಟಿಪ್ಪಣಿ<br>• ಹೋಲಿಕೆಯ ಟಿಪ್ಪಣಿ |
| 2. ಶಿವಪ್ನಾಯ್ಕ ಕೋಂಟೆ ಹಿಡಿದ್ವಾಂಗೆ | • ನಮ್ಮ ಸಂಸ್ಕೃತಿ ಪರಂಪರೆಯನ್ನು ತಿಳಿದುಕೊಳ್ಳುವುದು<br>• ಗಾದೆ ಮಾತು/ ನುಡಿಗಟ್ಟುಗಳ ಆಶಯ ತಿಳಿಯುವುದು<br>• ಗಾದೆ ಮಾತು/ನುಡಿಗಟ್ಟುಗಳನ್ನು ಸೃಜನಾತ್ಮಕ ಬರವಣಿಗೆಯಲ್ಲಿ ಬಳಸುವುದು<br>• ಸಂಸ್ಕೃತಿಯನ್ನು ತಿಳಿಯುವ ಕಥೆಗಳನ್ನು ಓದುವುದು, ಸಂಗ್ರಹಿಸುವುದು<br>• ಗ್ರಾಮ್ಯ ಭಾಷೆಯ ಸೌಂದರ್ಯವನ್ನು ಆಸ್ವಾದಿಸುವುದು. | • ಗಟ್ಟಿಯಾಗಿ ಓದುವುದು<br>• ಉತ್ತರಿಸುವುದು<br>• ಚರ್ಚಿಸುವುದು<br>• ಸಂದರ್ಭ ಬರೆಯುವುದು<br>• ಸಂಭಾಷಣೆ ಬರೆಯುವುದು<br>• ಮಾದರಿಯಂತೆ ಬದಲಾಯಿಸಿ ಬರೆಯುವುದು<br>• ಸರಳ ವಾಕ್ಯಗಳಾಗಿ ಬರೆಯುವುದು<br>• ಗಾದೆ ವಿಸ್ತರಿಸುವುದು | • ಜನಜೀವನ, ಸಂಸ್ಕೃತಿಗೆ ಸಂಬಂಧಿಸಿದ ಕತೆಗಳು. | • ಸಂಭಾಷಣೆ<br>• ಗ್ರಾಮ್ಯ–ಶಿಷ್ಟರೂಪ<br>• ಗಾದೆ ವಿಸ್ತರಣೆ. |

# ಯೂನಿಟ್ ಗ್ರಿಡ್

**ಯೂನಿಟ್ 1 : ಸಿರಿನುಡಿ**

ಸಮಯ : 6+6 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3. ಯಕ್ಷಗಾನ ಬೊಂಬೆಯಾಟ | • ಕಲೆಗಳು ನಮ್ಮ ಸಂಸ್ಕೃತಿಯ ಮೇಲೆ ಪ್ರಭಾವ ಬೀರುತ್ತವೆ.<br>• ನಮ್ಮ ಜನಪದ ಕಲೆಗಳ ಕುರಿತು ತಿಳಿಯುವುದು<br>• ನಮ್ಮ ದೇಶದ ಸಂಸ್ಕೃತಿಯನ್ನು ಇತರರಿಗೆ ತಿಳಿಯಪಡಿಸುವ ಒಂದು ಕಲೆಯಾಗಿದೆ ಯಕ್ಷಗಾನ ಬೊಂಬೆಯಾಟ ಎಂದು ತಿಳಿಯುವುದು.<br>• ಬೊಂಬೆಯಾಟದಂತಹ ಕಲೆಗಳ ಮೇಲೆ ಅಭಿಮಾನ ಹೊಂದುವುದು. | • ಓದುವುದು<br>• ಉತ್ತರಿಸುವುದು<br>• ಆಮಂತ್ರಣ ಪತ್ರಿಕೆ ತಯಾರಿ<br>• ಸಂಯುಕ್ತ ವಾಕ್ಯ<br>• ವರದಿ<br>• ಸಂದರ್ಶನ ಪ್ರಶ್ನಾವಳಿ<br>• ಟಿಪ್ಪಣಿ<br>• ಆಲ್ಬಂ ತಯಾರಿ | • ಜನಪದ ಕಲೆಗಳ ಸಿ.ಡಿ. ಪ್ರದರ್ಶನ<br>• ಬೊಂಬೆಯಾಟದ ಸಿ.ಡಿ. ಪ್ರದರ್ಶನ. | • ಆಮಂತ್ರಣ ಪತ್ರಿಕೆ<br>• ಸಂದರ್ಶನ ಪ್ರಶ್ನಾವಳಿ<br>• ವರದಿ |
| 4. ವಾತ್ಸಲ್ಯ | • ನಮ್ಮ ಸಂಸ್ಕೃತಿಯನ್ನು ತಿಳಿಸುವ ಹಲವಾರು ಜನಪದ ಗೀತೆಗಳಿವೆ.<br>• ತಾಯಿಗೆ ಮಗುವಿನ ಮೇಲಿರುವ ಪ್ರೀತಿ ವಾತ್ಸಲ್ಯವನ್ನು ತಿಳಿಸುವ ಸುಂದರವಾದ ಜನಪದ ಗೀತೆಗಳಿವೆ.<br>• ಇಂತಹ ಜನಪದ ಗೀತೆಗಳನ್ನು ಹಾಡಿ ಆಸ್ವಾದಿಸುವುದು<br>• ಗ್ರಾಮ್ಯ ಭಾಷಾ ಸೌಂದರ್ಯವನ್ನು ತಿಳಿಯುವುದು. | • ಹಾಡುವುದು<br>• ಉತ್ತರಿಸುವುದು<br>• ಪಟ್ಟಿ ಪೂರ್ತಿಗೊಳಿಸುವುದು<br>• ಸಾರಾಂಶ ಬರೆಯುವುದು<br>• ಟಿಪ್ಪಣಿ ಬರೆಯುವುದು<br>• ಸಾಲು ಗುರುತಿಸುವುದು<br>• ಪದ ವಿಂಗಡಿಸುವುದು<br>• ಸಂಚಿಕೆ ತಯಾರಿಸುವುದು. | • ಜನಪದ ಗೀತೆಗಳ ಪುಸ್ತಕ<br>• ಜನಪದ ಕತೆಗಳು<br>• ಧ್ವನಿ ಸುರುಳಿ | • ಪ್ರಶ್ನೋತ್ತರ<br>• ಸಾರಾಂಶ<br>• ಟಿಪ್ಪಣಿ |

# 1. ಗಂಧದ ಭುವಿಯದು

## ಚಟುವಟಿಕೆಗಳು

ಕನ್ನಡದಲ್ಲಿ ಪ್ರಸಿದ್ಧಿ ಪಡೆದ 'ಗಂಧದ ಗುಡಿ' ಎಂಬ ಚಲನಚಿತ್ರದ 'ನಾವಾಡುವ ನುಡಿಯೇ ಕನ್ನಡ ನುಡಿ' ಎಂಬ ಹಾಡನ್ನು ಒಂದೆರಡು ಸಲ ಕೇಳಿಸುವುದು. ಅನಂತರ ಹಾಡಿನಲ್ಲಿ ತಮಗೆ ನೆನಪಿರುವ ಸಾಲುಗಳನ್ನು ಮಕ್ಕಳು ಬರೆಯಲಿ.

ನಿರ್ದಿಷ್ಟ ಸಾಲುಗಳು ಮಾತ್ರ ಯಾಕೆ ನೆನಪಿನಲ್ಲಿ ಉಳಿದುವು? ಎಂಬುದಕ್ಕಿರುವ ಕಾರಣಗಳನ್ನು ಚರ್ಚಿಸುವುದು. ಬಳಿಕ ನಮ್ಮ ನಾಡು, ನಮ್ಮ ಭಾಷೆಯ ಬಗ್ಗೆ ಅಭಿಮಾನ ಮೂಡಿಸುವಂತಹ ಅನೇಕ ಹಾಡುಗಳಿವೆ. ಅಂತಹ ಒಂದು ಹಾಡನ್ನು ನಾವೀಗ ಪರಿಚಯಿಸಿಕೊಳ್ಳೋಣ ಎಂದು ಹೇಳುತ್ತಾ ಪಾಠ ಪ್ರವೇಶ ಮಾಡಬಹುದು.

## ಹಾಡಿರಿ

ಪದ್ಯದ ಆಸ್ವಾದನೆಯಾಗಬೇಕಾದರೆ ಅದನ್ನು ರಾಗ, ತಾಳ, ಲಯಬದ್ಧವಾಗಿ ಹಾಡಬೇಕು. ಮೊದಲಿಗೆ ಮಕ್ಕಳು ತಮಗೆ ತಿಳಿದಂತೆ ರಾಗವಾಗಿ ಹಾಡಲಿ. ಬಳಿಕ ಗುಂಪಿನಲ್ಲಿ ರಾಗ ಸಂಯೋಜನೆ ಮಾಡಲು ಅವಕಾಶ ನೀಡುವುದು. ರಾಗ ಸಂಯೋಜನೆ ಮಾಡಿದ ಬಳಿಕ ಪ್ರತಿಯೊಂದು ಗುಂಪಿನವರೂ ಹಾಡಲಿ. ಒಂದು ಗುಂಪಿನವರು ಹಾಡುವಾಗ ಇತರ ಗುಂಪಿನವರು ಮೌಲ್ಯನಿರ್ಣಯ ಮಾಡಲಿ. ಉತ್ತಮವಾಗಿ ಹಾಡಿದ ಗುಂಪು ಯಾವುದೆಂದು ಮಕ್ಕಳೇ ಹೇಳಲಿ. ಈ ಸಂದರ್ಭದಲ್ಲಿ ಮೌಲ್ಯ ನಿರ್ಣಯಕ್ಕೆ ಅಗತ್ಯವಾದ ಸೂಚಕಗಳ ಬಗ್ಗೆ ಚರ್ಚೆ ನಡೆಸಿ ಸೂಚಕಗಳನ್ನು ಮಕ್ಕಳೇ ನಿರ್ಧರಿಸಲಿ. ಮೌಲ್ಯ ನಿರ್ಣಯಕ್ಕೆ ಸ್ವೀಕರಿಸಿದ ಸೂಚಕಗಳ ಸರಿಯಾದ ರೂಪವನ್ನು ಕರಿಹಲಗೆಯಲ್ಲಿ ಬರೆಯುವುದು.

## ಸೂಚಕಗಳು

- ರಾಗ, ತಾಳ, ಲಯ ಬದ್ಧವಾಗಿ ಹಾಡುವುದು
- ಎಲ್ಲರ ಭಾಗವಹಿಸುವಿಕೆ
- ಭಾವಪೂರ್ಣವಾಗಿ ಹಾಡುವುದು
- ಉಚ್ಚಾರ ಸ್ಪಷ್ಟತೆ

ಈ ಚಟುವಟಿಕೆಯ ಬಳಿಕ 'ಗಂಧದ ಭುವಿಯಿದು' ಎಂಬ ಹಾಡನ್ನು ಅಡಕ ಮುದ್ರಿಕೆಯ ಸಹಾಯದಿಂದ ಆಲಿಸಲು ಸಂದರ್ಭವನ್ನು ಒದಗಿಸುವುದು.

## ಪ್ರಾಸ ಪದಗಳನ್ನು ಗುರುತಿಸಿರಿ

ಪ್ರಾಸ ಪದಗಳ ಬಳಕೆಯು ಪದ್ಯದ ಸೌಂದರ್ಯವನ್ನು ಹೆಚ್ಚಿಸುತ್ತದೆ. ಪದಕ್ಕೆ ಗೇಯತೆಯನ್ನು ನೀಡುವಲ್ಲಿ ಪ್ರಾಸ ಪದಗಳು ಸಹಾಯಕವಾಗುತ್ತವೆ. ವಿದ್ಯಾರ್ಥಿಗಳಲ್ಲಿ ಪ್ರಾಸ ಪದಗಳನ್ನು ಗುರುತಿಸುವ ಮತ್ತು ಪ್ರಯೋಗಿಸುವ ಸಾಮರ್ಥ್ಯ ಬೆಳೆಯಬೇಕೆಂಬ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ. ಪ್ರಾಸದ ಕುರಿತಾದ ಹೆಚ್ಚಿನ ವಿವರಗಳನ್ನು ಇದೇ ಪುಸ್ತಕದ ಮೂಲಪಠ್ಯ ವಿಭಾಗದ ಎರಡನೇ ಘಟಕದಲ್ಲಿ ನೀಡಲಾಗಿದೆ. ಮಕ್ಕಳು ಪ್ರಾಸ ಪದಗಳನ್ನು ಗುರುತಿಸಿ ಬರೆಯಲಿ.

- ಹಾಡಿನಲ್ಲಿ ಬಂದಿರುವ ಪ್ರಾಸ ಪದಗಳು

| | |
|---|---|
| ನಾಡು | ಹಾಡು |
| ಕಾನನ | ಉದ್ಯಾನ |
| ಬಸವರು | ರಕ್ಷಕರು |
| ಪೊನ್ನರು | ಪುಂಗವರು |
| ಕರುನಾಡು | ಸಿರಿನಾಡು |

ಇಲ್ಲಿ ಡು – ಡು, ನ – ನ, ರು – ರು ಮುಂತಾದವು ಅಂತ್ಯಪ್ರಾಸಕ್ಕೆ ಉದಾಹರಣೆಗಳಾಗಿವೆ.

## ಉತ್ತರಿಸಿರಿ

ಇದು ಆಶಯಗ್ರಹಣಕ್ಕೆ ಸಂಬಂಧಿಸಿದ ಚಟುವಟಿಕೆಯಾಗಿದೆ. ಮಗುವು ಹಾಡಿನ ಆಶಯದ ಮೂಲಕ ಪುನಃ ಹಾದು ಹೋಗಲು ಈ ಪ್ರಶ್ನೆಗಳು ಸಹಾಯ ಮಾಡುತ್ತವೆ. ಮಕ್ಕಳು ಉತ್ತರವನ್ನು ವೈಯಕ್ತಿಕವಾಗಿ ಬರೆದು ಮಂಡಿಸಲಿ. ಗುಂಪಿನಲ್ಲಿ ಉತ್ತಮ ಪಡಿಸಿ ಬರೆಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ನೀಡುವುದು.

## ಆಶಯ ಬರೆಯಿರಿ

ಮಕ್ಕಳು ನೀಡಿದ ಸಾಲುಗಳ ಆಶಯವನ್ನು ವೈಯಕ್ತಿಕವಾಗಿ ಬರೆಯಲಿ. ಕೆಲವರು ಮಂಡಿಸಲಿ. ಅನಂತರ ಮಕ್ಕಳು ತಾವು ಬರೆದ ಆಶಯವನ್ನು ಗುಂಪಿನಲ್ಲಿ ಚರ್ಚಿಸಿ ಉತ್ತಮಪಡಿಸಲಿ. ಈ ಸಂದರ್ಭದಲ್ಲಿ ಉತ್ತಮ ಆಶಯ ಬರವಣಿಗೆಯಲ್ಲಿ ಇರಬೇಕಾದ ಅಂಶಗಳ ಬಗ್ಗೆ ಚರ್ಚೆ ನಡೆಯಬೇಕು. ಚರ್ಚೆಯ ಆಧಾರದಲ್ಲಿ ಸೂಚಕಗಳನ್ನು ಕಂಡುಕೊಳ್ಳಲಿ. ತಾವು ಗುಂಪಿನಲ್ಲಿ ಬರೆದ ಆಶಯವನ್ನು ಮಂಡಿಸಲಿ. ಒಂದು ಗುಂಪಿನವರು ಮಂಡಿಸುವಾಗ ಉಳಿದವರು ಸೂಚಕಗಳ ಸಹಾಯದಿಂದ ಮೌಲ್ಯನಿರ್ಣಯ ಮಾಡಲಿ.

## ಸೂಚಕಗಳು

- ಆಶಯವನ್ನು ಸಮಗ್ರವಾಗಿ ಬರೆಯಲಾಗಿದೆ.
- ಅನುಕ್ರಮವಾಗಿ ಬರೆಯಲಾಗಿದೆ.
- ಸ್ವತಂತ್ರವಾದ ಭಾಷಾ ಶೈಲಿಯನ್ನು ಹೊಂದಿದೆ.
- ಅಕ್ಷರ, ಪದ, ವಾಕ್ಯಗಳು ಸರಿಯಾಗಿ ಬಳಕೆಯಾಗಿವೆ.

ಉತ್ತಮವಾಗಿ ಬರೆದ ಗುಂಪನ್ನು ಅಭಿನಂದಿಸುವುದು. ಅನಂತರ ಅಧ್ಯಾಪಕರು ಬರೆದ ಆಶಯವನ್ನು ಮಂಡಿಸುವುದು.

### ಆಶಯ ಹೀಗೂ ಇರಬಹುದೇ?

ಕನ್ನಡ ನಾಡನ್ನು ಹಕ್ಕ ಬುಕ್ಕರು ಆಳಿದ್ದಾರೆ. ಇದು ಶಾಂತಿ ಮತ್ತು ಸಹನೆಯಿಂದ ಕೂಡಿದ ನಾಡಾಗಿತ್ತು. ಕೃಷ್ಣದೇವರಾಯನ ಕಾಲದಲ್ಲಿ ಮುತ್ತು ರತ್ನಗಳನ್ನು ಬೀದಿಗಳಲ್ಲಿ ರಾಶಿ ಹಾಕಿ ಅಳೆದು ಮಾರುತ್ತಿದ್ದರು. ಹೀಗೆ ಕನ್ನಡ ನಾಡು ಹಿಂದೆ ಸಂಪದ್ಭರಿತವಾಗಿತ್ತು ಎಂದು ಕವಿ ಹೇಳುತ್ತಾರೆ.

## ಆರಿಸಿ ಬರೆಯಿರಿ

ಪಠ್ಯ ಪುಸ್ತಕದಲ್ಲಿ ನೀಡಿದ ಪದಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳು ಪದಗಳ ಅರ್ಥವನ್ನು ಅರ್ಥಕೋಶದ ಸಹಾಯದಿಂದ ತಿಳಿಯಲಿ. ಅನಂತರ ಒಂದೇ ಗುಂಪಿಗೆ ಸೇರಿದ (ಸಮಾನ ಅರ್ಥ ನೀಡುವ) ಪದಗಳನ್ನು ಆರಿಸಿ ಬರೆಯಲಿ. ಈ ರೀತಿಯ ಚಟುವಟಿಕೆಗಳಿಂದ ಮಕ್ಕಳ ಪದ ಸಂಪತ್ತು ಹೆಚ್ಚುವುದು.

**ಒಂದೇ ಗುಂಪಿಗೆ ಸೇರಿದ ಪದಗಳು**

- ಬುವಿ, ಪೃಥ್ವಿ, ಇಳೆ, ಭೂಮಿ
- ಸಂಪತ್ತು, ಸಂಪದ, ಸಿರಿ, ಐಶ್ವರ್ಯ
- ವಿಪಿನ, ಕಾನನ, ಅಡವಿ, ಕಾಡು

## ಹೋಲಿಸಿರಿ

ಮಕ್ಕಳು ಕವಿತೆಗಳನ್ನು ಹೋಲಿಸಿ ಬರೆಯುವುದಕ್ಕೆ ಮುನ್ನ ಒಂದು ಲಘು ಚರ್ಚೆ ನಡೆಸುವುದು.

- ಎರಡೂ ಕವಿತೆಗಳ ಆಶಯಗಳು ಸಮಾನವಾಗಿವೆಯೇ?
- ಗೇಯತೆ ಇದೆಯೇ?
- ಪ್ರಾಸ ಪದಗಳು ಬಳಕೆಯಾಗಿವೆಯೇ?
- ಹೋಲಿಕೆಗಳು ಏನೇನು?
- ಸಾಮ್ಯತೆಗಳಿವೆಯೇ?
- ಕವಿಗಳ ಬಗ್ಗೆ ಪ್ರಸ್ತಾಪವಿದೆಯೇ?
- ವರ್ಣನೆಯ ಸ್ವರೂಪ ಒಂದೇ ಆಗಿದೆಯೇ?

ಮೊದಲಾದ ಪ್ರಶ್ನೆಗಳನ್ನು ಇಲ್ಲಿ ಬಳಸಿಕೊಳ್ಳಬಹುದು. ಚರ್ಚೆಯ ಆಧಾರದಲ್ಲಿ ಮಕ್ಕಳು ಕವಿತೆಗಳ ಸಾಮ್ಯ ಮತ್ತು ವ್ಯತ್ಯಾಸಗಳನ್ನು ಬರೆಯಲಿ. ಅನಂತರ ಪ್ರತಿಯೊಬ್ಬರೂ ಹೋಲಿಕೆಯ ಟಿಪ್ಪಣಿ ರಚಿಸಲಿ. ಕೆಲವರು ಮಂಡಿಸಲಿ. ಬಳಿಕ ಗುಂಪಿನಲ್ಲಿ ಉತ್ತಮ ಪಡಿಸಲಿ. ಅನಂತರ ಎಲ್ಲಾ ಗುಂಪುಗಳು ತಮ್ಮ ಉತ್ತಮ ರಚನೆಯನ್ನು ಮಂಡಿಸಲಿ. ಮಂಡನೆಗೆ ಮೊದಲು ಹೋಲಿಕೆಯ ಟಿಪ್ಪಣಿಯನ್ನು ಮೌಲ್ಯನಿರ್ಣಯ ಮಾಡಲಿರುವ ಸೂಚಕಗಳನ್ನು ವಿದ್ಯಾರ್ಥಿಗಳೇ ಪರಸ್ಪರ ಚರ್ಚಿಸಿ ಕಂಡುಕೊಳ್ಳಲಿ. ಒಂದು ಗುಂಪು ಮಂಡಿಸುವಾಗ ಇತರ ಗುಂಪುಗಳು ಮೌಲ್ಯ ನಿರ್ಣಯ ಮಾಡಲಿ. ಉತ್ತಮವಾಗಿ ಬರೆದ ಗುಂಪನ್ನು ಅಭಿನಂದಿಸಲು ಮರೆಯಬಾರದು.

## ಸೂಚಕಗಳು

- ಎರಡು ಕವಿತೆಗಳ ಆಶಯ, ಪದಸೌಂದರ್ಯ, ಗೇಯತೆ, ವರ್ಣನೆ ಮೊದಲಾದವುಗಳನ್ನು ಪರಸ್ಪರ ಹೋಲಿಸಲಾಗಿದೆ.
- ಎರಡು ಕವಿತೆಗಳ ಆಶಯಗಳನ್ನು ಕಂಡುಕೊಂಡು ಒಳಗಿನ ಅರ್ಥವನ್ನು ತಿಳಿಯಲು ಶ್ರಮಿಸಲಾಗಿದೆ.
- ತನ್ನದೇ ಆದ ಶೈಲಿಯಲ್ಲಿ ಹೋಲಿಸಲಾಗಿದೆ.
- ಅಕ್ಷರ ಸ್ಫುಟತೆ, ಪದ, ವಾಕ್ಯ, ವ್ಯಾಕರಣಗಳಿಗೆ ಬದ್ಧವಾಗಿದೆ.

### ಹೋಲಿಕೆ ಹೀಗೂ ಆಗಬಹುದು

‘ಕನ್ನಡ ಬಳಸೋಣ’ ಹಾಗೂ ‘ಗಂಧದ ಭುವಿಯಿದು ’ಎಂಬ ಎರಡೂ ಕವಿತೆಗಳಲ್ಲಿ ಕನ್ನಡ ನಾಡು ಹಾಗೂ ನುಡಿಯ ಶ್ರೇಷ್ಠತೆಯನ್ನು ಪ್ರತಿಪಾದಿಸಲಾಗಿದೆ. ‘ಗಂಧದ ಭುವಿಯಿದು’ ಎಂಬ ಹಾಡಿನಲ್ಲಿ ಕನ್ನಡ ನಾಡಿನಲ್ಲಿ ಬಾಳಿ ಬದುಕಿದ ಪಂಪ, ರನ್ನ, ಪೊನ್ನ ಮೊದಲಾದ ವಿಶ್ವಮಾನ್ಯ ಕವಿಗಳ ಬಗ್ಗೆ, ನದಿಗಳು, ವನಸಂಪತ್ತು, ಬೆಟ್ಟಗಳು ಮೊದಲಾದ ಪ್ರಾಕೃತಿಕ ಸಂಪತ್ತುಗಳ ಬಗ್ಗೆ ಪ್ರಸ್ತಾಪವಿದೆ. ಕನ್ನಡ ಕವಿಗಳಿಗೆ ದೊರಕಿದ ಜ್ಞಾನಪೀಠವೇ ಮೊದಲಾದ ಪ್ರಶಸ್ತಿಗಳು ಭಾರತ ಮಾತೆಯ ಕೊರಳಲ್ಲಿ ಮಿನುಗುವ ಹಾರಗಳೆಂದು ಹೇಳಲಾಗಿದೆ. ನಮ್ಮ ಕನ್ನಡ ಸಂಸ್ಕೃತಿಯನ್ನು ರಕ್ಷಿಸುವಲ್ಲಿ ಕನಕದಾಸ, ಪುರಂದರದಾಸ, ಅಲ್ಲಮಪ್ರಭು, ಬಸವಣ್ಣ ಮೊದಲಾದ ಶ್ರೇಷ್ಠರು ಪ್ರಧಾನ ಪಾತ್ರ ವಹಿಸಿದ್ದಾರೆ. ಕನ್ನಡ ನಾಡು ಶಾಂತಿ, ಸಹನೆಗಳಿಗೆ ಹೆಸರಾಗಿದ್ದು ಹಕ್ಕ ಬುಕ್ಕ, ಕೃಷ್ಣದೇವರಾಯ ಮೊದಲಾದ ಜಗತ್ಪ್ರಸಿದ್ಧ ರಾಜಮಹಾರಾಜರುಗಳಿಂದ ಆಳಲ್ಪಟ್ಟಿತ್ತು. ಕೃಷ್ಣದೇವರಾಯನ ಕಾಲದಲ್ಲಿ ಮುತ್ತು ರತ್ನಗಳನ್ನು ಎಲ್ಲೆಂದರಲ್ಲಿ ರಾಶಿ ಹಾಕಿ ಅಳೆದು ಮಾರುತ್ತಿದ್ದರು. ಈ ಎಲ್ಲಾ ವಿಚಾರಗಳನ್ನು ಈ ಕವಿತೆಯಲ್ಲಿ ಆಕರ್ಷಕವಾಗಿ ವರ್ಣಿಸಲಾಗಿದೆ.

‘ಕನ್ನಡ ಬಳಸೋಣ’ ಎಂಬ ಕವಿತೆಯು ಕನ್ನಡ ಭಾಷೆಯ ಶ್ರೇಷ್ಠತೆಯನ್ನು ಹೆಚ್ಚು ಎತ್ತಿ ಹಿಡಿದಿದೆ. ನಾವೆಲ್ಲಾ ಕನ್ನಡವನ್ನು ಉಳಿಸಿ, ಬೆಳೆಸಿ ಕನ್ನಡಮ್ಮನ ಋಣ ವನ್ನು ತೀರಿಸೋಣವೆಂಬ  ಸಂದೇಶವನ್ನು ನೀಡಿದೆ. ಕನ್ನಡವು ಪಶ್ಚಿಮ ಘಟ್ಟಗಳಂತೆ ಸ್ಥಿರವಾಗಿ, ದೃಢವಾಗಿ ನಿಲ್ಲಬೇಕು, ಕಡಲಿನಲ್ಲಿ ಅಲೆಗಳು ನಲಿವಂತೆ ಪ್ರತಿಯೊಬ್ಬರ ನಾಲಿಗೆಯಲ್ಲಿ ನಲಿಯಬೇಕು, ಕಾವೇರಿಯಂತೆ ಹರಿಯಬೇಕು, ಪ್ರತಿಯೊಂದು ಮನೆಗೂ ತಲುಪಬೇಕು, ಅಲ್ಲಿ ಜಯಭೇರಿ ಹೊಡೆಯಬೇಕು ಎಂಬುದಾಗಿ ಹೇಳುವ ಕವಿಯ ಮಾತುಗಳು ನಮ್ಮಲ್ಲಿನ ಭಾಷಾ ಪ್ರೇಮವನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಒಟ್ಟಿನಲ್ಲಿ ಎರಡೂ ಕವಿತೆಗಳು ಕನ್ನಡ ಭಾಷೆ, ಕನ್ನಡದ ನೆಲದ ಶ್ರೇಷ್ಠತೆಯನ್ನು ವರ್ಣಿಸುವಲ್ಲಿ ಸಫಲವಾಗಿವೆ. ಎರಡೂ ಹಾಡುಗಳು ಗೇಯತೆಯಿಂದ ಕೂಡಿದ್ದು ರಾಗವಾಗಿ ಹಾಡಲು ಯೋಗ್ಯವಾಗಿವೆ. ಅವುಗಳು ಒಳಗೊಂಡ ಪ್ರಾಸಯುಕ್ತ ಪದಗಳ ಪಥ್ಯದ ಆಸ್ವಾದನೆಗೆ ಹೆಚ್ಚು ಪೂರಕವಾಗಿವೆ.

### ಪದ ಹುಡುಕಿರಿ

ಕವಿತೆಯಲ್ಲಿ ಬಂದಿರುವ ಕೆಲವು ಪದಗಳ ಅಕ್ಷರಗಳನ್ನು ಕೋಣೆಗಳಲ್ಲಿ ಕಾಣಬಹುದು. ಮಕ್ಕಳು ಅಕ್ಷರಗಳನ್ನು ಕ್ರಮೀಕರಿಸಿ ಪದಗಳನ್ನು ಬರೆಯಲಿ. ಈ ಸಂದರ್ಭದಲ್ಲಿ ಮಕ್ಕಳು ಮತ್ತೊಮ್ಮೆ ಕವಿತೆಯ ಸಾಲುಗಳ ಮೂಲಕ ಹಾದುಹೋಗುತ್ತಾರೆ. ಇದು ಹಾಡಿನ ಓದುವಿಕೆಗೆ ಮತ್ತೊಂದು ಅವಕಾಶವನ್ನು ಒದಗಿಸುತ್ತದೆ. ಇದನ್ನು ಸ್ಪರ್ಧೆಯಾಗಿಯೂ ನಡೆಸಬಹುದು.ಮೊದಲು ಎಲ್ಲಾ ಪದಗಳನ್ನು ಪೂರ್ತಿಗೊಳಿಸಿದ ಮಗುವನ್ನು ಅಭಿನಂದಿಸುವುದು.

### ಪದಗಳು

ಭಾರತದೇಶ

ಕನ್ನಡ ನಾಡು

ಭಾರತ ಮಾತೆ

ಕೃಷ್ಣದೇವರಾಯ

ವಿರಾಜಿಪ

ವಿಶ್ವಮಾನ್ಯ

ಕರುನಾಡು

## ಸಂಗ್ರಹಿಸಿರಿ

ನಾಡು ನುಡಿಗಳಿಗೆ ಸಂಬಂಧಿಸಿದ ಹಾಡುಗಳನ್ನು ಸಂಗ್ರಹಿಸಿ ಹಾಡುವುದರ ಮೂಲಕ ಕನ್ನಡ ಭಾಷೆಯ ಮೇಲಿರುವ ಅಭಿಮಾನವನ್ನೂ, ಅರಿವನ್ನೂ ಹೆಚ್ಚಿಸುವುದು ಈ ಚಟುವಟಿಕೆಯ ಉದ್ದೇಶ. ಸಂಗ್ರಹಿಸಿದ ಹಾಡುಗಳನ್ನು ಭಿತ್ತಿ ಪತ್ರಿಕೆಯಲ್ಲಿ ಪ್ರದರ್ಶಿಸುವುದು ಮತ್ತು ಸಂದರ್ಭ ದೊರಕಿದಾಗ ಹಾಡಲು ಪ್ರೇರೇಪಿಸುವುದು.

## ಕನ್ನಡ ಸಾಹಿತ್ಯಲೋಕವೂ ಜ್ಞಾನಪೀಠ ಪ್ರಶಸ್ತಿಯೂ

ಇದು ಪೂರಕ ಓದಿಗಾಗಿ ನೀಡಿದ ವಿವರಗಳಾಗಿವೆ. ಮಕ್ಕಳು ಇದೇ ರೀತಿ ಸಾಹಿತ್ಯ ಸೇವೆಗಾಗಿ ನೀಡುವ ಇತರ ಪ್ರಶಸ್ತಿಗಳ ಬಗ್ಗೆ ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ಭಿತ್ತಿ ಪತ್ರಿಕೆಯಲ್ಲಿ ಪ್ರದರ್ಶಿಸಲಿ.

## ಪೂರಕ ಓದಿಗೆ

### ಕನ್ನಡ ತಾಯಿ

ಕನ್ನಡ ಕನ್ನಡ ಕನ್ನಡ ಎನ್ನಿ
ಕನ್ನಡ ನಾಡಿನ ಬಯಲಲ್ಲಿ
ಕನ್ನಡ ಭಾಷೆಯ ಪ್ರೀತಿಯು ಮೂಡಲಿ
ಕನ್ನಡ ಸೇವೆಯ ನುಡಿಯಲ್ಲಿ

ಕನ್ನಡ ತಾಯಿಯ ಮೂರ್ತಿಯು ನೆಲೆಸಲಿ
ಕನ್ನಡ ಕುವರನ ಎದೆಯಲ್ಲಿ
ಕನ್ನಡಕ್ಕಾಗಿ ದೇಹವು ಸವೆಯಲಿ
ಕನ್ನಡ ತಾಯಿಯ ಮಡಿಲಲ್ಲಿ

ಕನ್ನಡ ನುಡಿಯೇ ಮೂಡುತಲಿರಲಿ
ಕನ್ನಡ ಮಾತೆಯ ಮುಡಿಯಲ್ಲಿ
ಕನ್ನಡ ತಾಯಿಯ ಸೇವೆಯು ನಡೆಯಲಿ
ದಿಟ್ಟ ಮನುಜನ ಕರಗಳಲ್ಲಿ

ಹನಿ ಹನಿ ರಕುತವು ಕನ್ನಡವಾಗಲಿ
ಮುಗಿಲು ಮುಟ್ಟುವ ಧ್ಯೇಯದಲಿ
ಹನಿ ಹನಿ ಬೆವರು ಸಾರ್ಥಕವಾಗಲಿ
ಕನ್ನಡ ಉಳಿಸುವ ಕಾರ್ಯದಲಿ

(ಸಂಗ್ರಹ)

# ಕನ್ನಡ ತುತ್ತೂರಿ

ಹರಡಿದೆ ಕನ್ನಡ ಕಸ್ತೂರಿ
ಮೊಳಗಿಸು ಕನ್ನಡ ತುತ್ತೂರಿ
ನೆಲವೂ ಕನ್ನಡ ಮುಗಿಲೂ ಕನ್ನಡ
ಎಲ್ಲರ ಹೃದಯದ ಒಲವೂ ಕನ್ನಡ
ಗಿಡಮರ ಚಿಗುರೆಲೆ ಎಲೆಯೂ ಕನ್ನಡ
ಉಲಿಯುವ ಕೋಗಿಲೆ ದನಿಯೂ ಕನ್ನಡ

ಸುರಿಯುವ ಹನಿಹನಿ ಮಳೆಯೂ ಕನ್ನಡ
ಕುಡಿಯುವ ಪ್ರತಿಹನಿ ಜಲವೂ ಕನ್ನಡ
ಹರಿಯುವ ತೊರೆಗಳ ಮೊರೆಯೂ ಕನ್ನಡ
ಮುಡಿಯುವ ಹೂವುಗಳೆಲ್ಲವೂ ಕನ್ನಡ

ಹಸುರೂ ಕನ್ನಡ ಉಸಿರೂ ಕನ್ನಡ
ದೇಹದ ಹನಿ ಹನಿ ರಕುತವು ಕನ್ನಡ
ತೊಟ್ಟಿಲ ಕಂದನ ಚೆಲುವೂ ಕನ್ನಡ
ಕೆಂದುಟಿ ಮೇಲಿನ ನಗೆಯೂ ಕನ್ನಡ

ನಾನೂ ನೀನೂ ಅವನೂ ಅವಳೂ
ಎಲ್ಲರೂ ಇಲ್ಲಿ ಕನ್ನಡವು:
ಕನ್ನಡವೇ ಈ ಬಾಳಿಗೆ ಹಸಿರು
ಕನ್ನಡವೇ ಈ ಜೀವದ ಉಸಿರು

(ಸಂಗ್ರಹ)

# 2. ಶಿವಪ್ಪಾಯ್ಕ ಕೋಂಟೆ ಹಿಡಿದ್ವಾಂಗೆ

## ಚಟುವಟಿಕೆಗಳು

ವಿದ್ಯಾರ್ಥಿಗಳು ಈ ಕತೆಯನ್ನು ಓದುವ ಮುನ್ನ ಒಂದು ಲಘು ಚರ್ಚೆ ನಡೆಸುವುದು. ಕನ್ನಡದಲ್ಲಿ ಸಾಹಿತ್ಯ ರಚನೆ ಮಾಡಿದ ಹಲವಾರು ಕವಿಗಳಿದ್ದಾರೆ. ಅವರಲ್ಲಿ ನಮ್ಮ ಕಾಸರಗೋಡಿನವರೂ ಇದ್ದಾರೆ. ಕಾಸರಗೋಡಿನ ಕನ್ನಡ ಕವಿಗಳ ಬಗ್ಗೆ ಮಕ್ಕಳಲ್ಲಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಕಾಸರಗೋಡಿನ ಕನ್ನಡ ಕವಿಗಳ ಹೆಸರನ್ನು ಹೇಳಬಹುದೇ?
- ಅವರು ಬರೆದ ಯಾವುದಾದರೂ ಹಾಡು, ಕತೆ, ಕೃತಿಗಳ ಹೆಸರು ಹೇಳಬಹುದೇ? ಇತ್ಯಾದಿ.

ಇಲ್ಲಿ ಕತೆಯನ್ನು ಹೇಳಿಸುವುದು, ಹಾಡನ್ನು ಹಾಡಿಸುವುದೋ ಆಗಬಹುದು.

## ಕಾಸರಗೋಡಿನ ಕನ್ನಡ ಕವಿಗಳು

ಮಂಜೇಶ್ವರ ಗೋವಿಂದ ಪೈ

ಕಯ್ಯಾರ ಕಿಞ್ಞಣ್ಣ ರೈ

ಸಾರಾ ಅಬೂಬಕ್ಕರ್

ವೆಂಕಟರಾಜ ಪುಣಿಂಚತ್ತಾಯ

ಯು. ಮಹೇಶ್ವರಿ

ಬೇಕಲ ರಾಮನಾಯಕ

ವೇಣುಗೋಪಾಲ ಕಾಸರಗೋಡು

–

–

ಬಳಿಕ ನಾವೀಗ ಬೇಕಲ ರಾಮನಾಯಕರು ಬರೆದ 'ಶಿವಪ್ಪಾಯ್ಕ ಕೋಂಟೆ ಹಿಡಿದ್ವಾಂಗೆ' ಎಂಬ ಕತೆಯನ್ನು ಓದೋಣ ಎನ್ನುತ್ತಾ ಪಾಠ ಪ್ರವೇಶ ಮಾಡುವುದು.

ಮಕ್ಕಳು ಕತೆಯನ್ನು ವೈಯಕ್ತಿಕವಾಗಿ ಮೌನವಾಗಿ ಓದಲಿ. ಬಳಿಕ ಗುಂಪಿನಲ್ಲಿ ಕುಳಿತು ಅರ್ಥ ತಿಳಿಯದ ಪದಗಳನ್ನು ಗುರುತಿಸಿ ಅರ್ಥಕೋಶದ ಸಹಾಯದಿಂದ ಅವುಗಳ ಅರ್ಥವನ್ನು ತಿಳಿದುಕೊಳ್ಳಲಿ. ಅನಂತರ ಪ್ರತಿ ಗುಂಪಿನಿಂದಲೂ ಉತ್ತಮವಾಗಿ ಓದುವವರು ಮುಂದೆ ಬಂದು ಪಾಠವನ್ನು ಗಟ್ಟಿಯಾಗಿ ಓದಲಿ. ಪ್ರತೀ ಗುಂಪಿಗೂ ಪಾಠವನ್ನು ವಿಂಗಡಿಸಿ ಭಾಗಗಳಾಗಿ ಓದಲು ಸೂಚಿಸಬಹುದು. ಮಕ್ಕಳ ಗಟ್ಟಿ ಓದಿನ ಬಳಿಕ ಅಧ್ಯಾಪಕರು ಪಾಠವನ್ನು ಸ್ವರಭಾರಯುತವಾಗಿ ಗಟ್ಟಿಯಾಗಿ ಓದುವುದು.

## ಚರ್ಚಿಸಿರಿ

- ನಿಮ್ಮ ಮನೆಗೆ ಹಸಿದು ಬಂದವರನ್ನು ಹೇಗೆ ಉಪಚರಿಸುವಿರಿ?
- ಅಜ್ಜಿ ಹಸಿದ ತಿರುಕನನ್ನು ಹೇಗೆ ಉಪಚರಿಸಿದಳು?
- ಹಸಿದು ಬಂದವನು ನಿಜವಾಗಿಯೂ ತಿರುಕನಾಗಿದ್ದನೇ?

- ಅಜ್ಜಿ ರಾಜನಿಗೆ ನೀಡಿದ ಅನುಭವದ ತಿರುಳು ಯಾವುದು?
- ರಾಜನು ಅಜ್ಜಿಯನ್ನು ಹೇಗೆ ಗೌರವಿಸಿದನು?

ಮೇಲಿನ ಪ್ರಶ್ನೆಗಳನ್ನು ಕೇಳುವ ಮೂಲಕ ಮಕ್ಕಳನ್ನು ಚರ್ಚೆಗೆಳೆಯಬಹುದು.

ಅಜ್ಜಿಯು ಬಾಳೆ ಎಲೆಯಲ್ಲಿ ಬಡಿಸಿದ ಬಿಸಿಬಿಸಿ ರಾಗಿಗಂಜಿಯನ್ನು ಸೇವಿಸಲು ರಾಜನು ಪೇಚಾಡುತ್ತಿರುವಾಗ ಆಕೆ 'ಏನಪ್ಪಾ! ನೀನು ಶಿವಪ್ನಾಯ್ಕ ಕೋಂಟೆ ಹಿಡಿದ್ಹಾಂಗೆ ಮಾಡ್ತೀಯಲ್ಲಾ! ಒಂದ್ಕಡೆ ಹಿಡಿದ್ರೆ ನಾಕ್ಕಡೆ ಬಿಡ್ತಿ! ಎನ್ನುತ್ತಾಳೆ. ಆಕೆಯ ಈ ಮಾತುಗಳು ರಾಜನ ಮರ್ಮಕ್ಕೆ ನಾಟಿದುವು. ತಾನು ಹಿಡಿದ ಕೋಟೆಗಳನ್ನು ಸ್ಥಿರ ಪಡಿಸದೆ ಹೊಸ ಕೋಟೆಗಳನ್ನು ಹಿಡಿಯಲು ಪ್ರಯತ್ನಿಸುವುದು ಓಡುತ್ತಿರುವ ಗಂಜಿಯನ್ನು ಹಿಡಿದಿಡುವಷ್ಟೇ ಕಷ್ಟದ ಕೆಲಸವೆಂಬುದು ಆತನಿಗೆ ತಿಳಿಯುತ್ತದೆ. ಆಕೆಯ ಅನುಭವದ ಮಾತುಗಳಿಂದ ಪಾಠ ಕಲಿತ ರಾಜನು ಮುಂದೆ ಆ ಬಡ ಅಜ್ಜಿಯನ್ನು ಮರೆಯಲಿಲ್ಲ. ತಾನು ರಾಜನಾಗಿದ್ದೂ ಬಡ ಮುದುಕಿ ನನ್ನನ್ನು ಮೂದಲಿಸಿದಳೆಂದು ಕೋಪಗೊಳ್ಳಲಿಲ್ಲ. ಬದಲಾಗಿ ಆಕೆಯ ಮಾತುಗಳನ್ನು ಮನ್ನಿಸಿ ಆಕೆಯನ್ನು ಸೂಕ್ತ ರೀತಿಯಲ್ಲಿ ಸತ್ಕರಿಸಿದನು. ಇದು ಮಾನವನಲ್ಲಿ ಇರಬೇಕಾದ ಉತ್ತಮ ಗುಣಗಳಲ್ಲೊಂದು ಎಂಬ ಸಂದೇಶದೊಂದಿಗೆ ಚರ್ಚೆಯನ್ನು ಕ್ರೋಡೀಕರಿಸಬೇಕು.

### ಸಂದರ್ಭ ಬರೆಯಿರಿ

ಮಕ್ಕಳು ಸಂದರ್ಭ ಬರೆಯುವ ಪೂರ್ವಭಾವಿಯಾಗಿ ಅಧ್ಯಾಪಕರು ಕೆಲವು ಪ್ರಶ್ನೆಗಳನ್ನು ಕೇಳಬಹುದು.

- ಈ ಮಾತನ್ನು ಯಾರು ಹೇಳಿದರು?
- ಯಾರಲ್ಲಿ ಹೇಳಿದರು?
- ಯಾಕೆ ಹೇಳಿದರು? ಇತ್ಯಾದಿ.

ಇದು ಮಕ್ಕಳಿಗೆ ಸಂದರ್ಭ ಯಾವುದೆಂದು ತಿಳಿಯಲು ಸಹಾಯವಾಗುತ್ತದೆ. ಅನಂತರ ಮಕ್ಕಳು ಸಂದರ್ಭವನ್ನು ವೈಯಕ್ತಿಕವಾಗಿ ಬರೆಯಲಿ. ಕೆಲವರು ಮಂಡಿಸಲಿ. ಬಳಿಕ ಗುಂಪಿನಲ್ಲಿ ತಮ್ಮ ಬರವಣಿಗೆಯನ್ನು ಉತ್ತಮಪಡಿಸುವುದು. ಈ ಸಂದರ್ಭದಲ್ಲಿ ಸಂದರ್ಭ ಟಿಪ್ಪಣಿ ಹೇಗಿರಬೇಕು ಎನ್ನುವುದಕ್ಕೆ ಸೂಚಕಗಳನ್ನು ಮಕ್ಕಳೇ ಚರ್ಚಿಸಿ ಕಂಡುಕೊಳ್ಳಲಿ. ಗುಂಪಿನಲ್ಲಿ ಉತ್ತಮವಾದ ರಚನೆಯನ್ನು ತರಗತಿಯಲ್ಲಿ ಮಂಡಿಸಲಿ. ಒಂದು ಗುಂಪು ಮಂಡಿಸುವಾಗ ಉಳಿದ ಗುಂಪುಗಳು ಸೂಚಕದ ಆಧಾರದಲ್ಲಿ ಮೌಲ್ಯ ನಿರ್ಣಯ ಮಾಡಲಿ. ಉತ್ತಮ ರಚನೆಗೆ ಅಭಿನಂದನೆ ನೀಡಲು ಮರೆಯದಿರಿ.

### ಸೂಚಕಗಳು

- ಆಶಯವನ್ನು ಯಾರು, ಯಾರಿಗೆ, ಯಾಕೆ ಎಂಬ ಕ್ರಮದಲ್ಲಿ ಕ್ರಮೀಕರಿಸಿ ಬರೆಯಲಾಗಿದೆ.
- ಭಾಷಾ ಘಟಕಗಳನ್ನು ಯೋಗ್ಯ ರೀತಿಯಲ್ಲಿ ಬಳಸಿ ತನ್ನದೇ ಶೈಲಿಯಲ್ಲಿ ಬರೆಯಲಾಗಿದೆ.

ಗುಂಪಿನ ಮಂಡನೆಯ ಬಳಿಕ ಅಧ್ಯಾಪಕರು ಬರೆದ ಸಂದರ್ಭ ಟಿಪ್ಪಣಿಯನ್ನು ಮಂಡಿಸುವುದು.

**ಸಂದರ್ಭ ಟಿಪ್ಪಣಿ ಹೀಗೂ ಇರಬಹುದು**

ಈ ಮಾತನ್ನು ಬಡ ಅಜ್ಜಿಯು ತಿರುಕನ ವೇಷದಲ್ಲಿ ತಿರುಗುತ್ತಿದ್ದ ಶಿವಪ್ಪ ನಾಯ್ಕನಲ್ಲಿ ಹೇಳುತ್ತಾಳೆ. ಶಿವಪ್ಪ ನಾಯ್ಕನು ತನ್ನ ಪ್ರಜೆಗಳ ಮತ್ತು ಶತ್ರುಗಳ ಕುರಿತು ಮಾಹಿತಿ ಸಂಗ್ರಹಿಸಲು ವೇಷ ಪಲ್ಲಟ ಮಾಡಿ ತಿರುಗುತ್ತಿದ್ದನು. ಒಂದು ದಿನ ಮಧ್ಯಾಹ್ನದ ಹೊತ್ತಿನಲ್ಲಿ ಬಳಲಿದ ರಾಜನು ಸಮೀಪದಲ್ಲೇ ಕಂಡು ಬಂದ ಗುಡಿಸಲಿಗೆ ಪ್ರವೇಶಿಸುತ್ತಾನೆ. ಅದು ಬಡ

ಮುದುಕಿಯ ಗುಡಿಸಲಾಗಿತ್ತು. ರಾಜನಿಗೆ ಕೊಡಲು ಆಕೆಯ ಬಳಿ ಅನ್ನವಿರಲಿಲ್ಲ. ಆದರೆ ತುಂಬಾ ಉದಾರಿಯಾದ ಆಕೆ ತಾನು ಉಣಲೆಂದು ಬೇಯಿಸಿಟ್ಟಿದ್ದ ಬಿಸಿ ರಾಗಿಗಂಜಿಯನ್ನೇ ಆತನಿಗೆ ಬಡಿಸುತ್ತಾಳೆ. ಬಾಳೆಎಲೆಯಲ್ಲಿ ಬಡಿಸಿದ ಗಂಜಿ ನಾಲ್ಕು ಕಡೆ ಅತ್ತಿತ್ತ ಓಡಾಡುತ್ತಿರುವಾಗ ಅದನ್ನು ಉಣ್ಣಲು ಶಿವಪ್ಪ ನಾಯ್ಕನು ಪೇಚಾಡುತ್ತಾನೆ. ಆಗ ಅಜ್ಜಿಯು ನಗುತ್ತಾ "ಏನಪ್ಪಾ! ನೀನು ಶಿವಪ್ನಾಯ್ಕ ಕೋಂಟೆ ಹಿಡಿದ್ದಾಂಗೆ ಮಾಡ್ತೀಯಲ್ಲಾ!" ಎನ್ನುತ್ತಾಳೆ.

### ಸಂಭಾಷಣೆ ಬರೆಯಿರಿ

ಮಕ್ಕಳು ಪಾಠದಿಂದ ಅವರಿಗಿಷ್ಟವಾದ ಘಟನೆಯನ್ನು ಆಯ್ಕೆ ಮಾಡಲಿ. ಅಲ್ಲಿ ಬರುವ ಪಾತ್ರಗಳನ್ನು ಗುರುತಿಸಲಿ. ಪಾತ್ರಗಳಿಗೆ ತಕ್ಕುದಾದ ಸಂಭಾಷಣೆಯನ್ನು ವೈಯಕ್ತಿಕವಾಗಿ ಬರೆಯಲಿ. ಗುಂಪಿನಲ್ಲಿ ಉತ್ತಮಪಡಿಸಿ, ಗುಂಪಿನ ಶ್ರೇಷ್ಠ ಸಂಭಾಷಣೆಯನ್ನು ಆಯ್ದು ಏಕಪಾತ್ರಾಭಿನಯ ಮಾಡಲಿ. ಅಭಿನಯಿಸುವ ಮೊದಲು ಗುಂಪಿನಲ್ಲಿ ಚರ್ಚಿಸಿ ಏಕಪಾತ್ರಾಭಿನಯಕ್ಕಿರುವ ಮೌಲ್ಯ ನಿರ್ಣಯ ಸೂಚಕಗಳನ್ನು ಮಕ್ಕಳೇ ಕಂಡು ಹಿಡಿಯಲಿ. ಒಂದು ಗುಂಪು ಮಂಡಿಸುವಾಗ ಉಳಿದ ಗುಂಪುಗಳು ಸೂಚಕದ ಆಧಾರದಲ್ಲಿ ಮೌಲ್ಯ ನಿರ್ಣಯ ಮಾಡಲಿ.

### ಸೂಚಕಗಳು

- ಪಾತ್ರಕ್ಕೆ ಯೋಗ್ಯವಾದ ಸಂಭಾಷಣೆಯಿದೆ.
- ಪಾತ್ರಕ್ಕೆ ಯೋಗ್ಯವಾದ ಅಭಿನಯವಿದೆ.
  (ಆಂಗಿಕ ಚಲನೆ, ಮುಖಭಾವ)
- ಪಾತ್ರಕ್ಕೆ ಹೊಂದಿಕೊಳ್ಳುವ ಸ್ವರಭಾರಯುತವಾದ ಸಂಭಾಷಣೆ
- ಭಾಷಾ ಶುದ್ಧಿಯಿಂದೊಡಗೂಡಿದ ಸರಾಗವಾದ ಮಾತುಗಾರಿಕೆ

ಮಕ್ಕಳು ಅಭಿನಯಿಸಿದ ಬಳಿಕ ಏಕಪಾತ್ರಾಭಿನಯಕ್ಕೆ ಸಂಬಂಧಿಸಿದ ಲಭ್ಯವಿರುವ ವೀಡಿಯೋಗಳನ್ನು ಪ್ರದರ್ಶಿಸಬಹುದು. ಇದು ಮಕ್ಕಳು ತಮ್ಮ ಅಭಿನಯ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳಲು ಸಹಾಯಕವಾಗುತ್ತದೆ.

### ಮಾದರಿಯಂತೆ ಬದಲಾಯಿಸಿರಿ

ಒಂದು ಭಾಷೆಯ ಗ್ರಾಮ್ಯ ರೂಪಗಳು ವಿಧವಿಧವಾಗಿರುತ್ತದೆ. ಸಾಮಾನ್ಯವಾಗಿ ಇದನ್ನು 'ಮನೆಮಾತು' ಎಂದೂ ಕರೆಯುತ್ತಾರೆ. ಒಂದು ಭಾಷೆಯ ಗ್ರಾಮ್ಯ ರೂಪವು ಸಮುದಾಯದಿಂದ ಸಮುದಾಯಕ್ಕೆ ಅಥವಾ ಪ್ರದೇಶದಿಂದ ಪ್ರದೇಶಕ್ಕೆ ಬದಲಾವಣೆಯನ್ನು ಪಡೆದುಕೊಳ್ಳಬಹುದು. ಶಿಷ್ಟ ಭಾಷೆಯು ಹಾಗೆ ಬದಲಾವಣೆಯನ್ನು ಪಡೆದುಕೊಳ್ಳುವುದಿಲ್ಲ. ಇದು ವ್ಯಾಕರಣ ನಿಯಮಾನುಸಾರವಾಗಿಯೇ ಇರುತ್ತದೆ. ಮಾಧ್ಯಮಗಳಲ್ಲಿ, ಆಡಳಿತ ಸಂಬಂಧೀ ವ್ಯವಹಾರಗಳಲ್ಲಿ, ಪಠ್ಯಪುಸ್ತಕಗಳಲ್ಲಿ ಉಪನ್ಯಾಸ, ಭಾಷಣ ಇತ್ಯಾದಿಗಳಲ್ಲಿ ಬಳಕೆಯಾಗುವ ಭಾಷೆಯನ್ನು ಶಿಷ್ಟ ಭಾಷೆ ಎಂದು ಕರೆಯುತ್ತಾರೆ.

ಮಕ್ಕಳು 'ಗ್ರಾಮ್ಯ' ಮತ್ತು 'ಶಿಷ್ಟ' ಭಾಷೆಯ ವ್ಯತ್ಯಾಸವನ್ನು ತಿಳಿದುಕೊಳ್ಳಲುಈ ಚಟುವಟಿಕೆ ಸಹಾಯ ಮಾಡುತ್ತದೆ. ಮಕ್ಕಳು ಪಠ್ಯ ಪುಸ್ತಕದಲ್ಲಿ ನೀಡಿದ ಮಾದರಿಯ ಸಹಾಯದಿಂದ ಉಳಿದ ವಾಕ್ಯಗಳನ್ನು ಶಿಷ್ಟರೂಪಕ್ಕೆ ಬದಲಾಯಿಸಿ ಬರೆಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸೂಕ್ತ ಸಲಹೆಗಳನ್ನು ನೀಡಲಿ.

- 'ಇಷ್ಟು ರಾಗಿಗಂಜಿ ಬೇಯಿಸಿ ಇಟ್ಟಿದ್ದೇನೆ'

- 'ಮೂರು ದಿನವಾಯಿತು ಅಜ್ಜಿ ಊಟ ಇಲ್ಲದೆ'
- 'ಶಿವಪ್ಪ ನಾಯಕ ಕೋಟೆ ಹಿಡಿದ ಹಾಗೆ ಮಾಡುತ್ತೀಯಲ್ಲಾ!'

### ಸರಳ ವಾಕ್ಯಗಳಾಗಿ ಬರೆಯಿರಿ

ಈ ಚಟುವಟಿಕೆಗಳನ್ನು ಮಾಡುವುದರಿಂದ ಸರಳವಾಕ್ಯ ಮತ್ತು ಸಂಯುಕ್ತವಾಕ್ಯಗಳೊಳಗಿನ ವ್ಯತ್ಯಾಸವು ಮಗುವಿಗೆ ತಿಳಿಯುತ್ತದೆ. ಸರಳ ವಾಕ್ಯಗಳಾಗಿ ಬರೆದಾಗ ಮಕ್ಕಳಿಗೆ ವಾಕ್ಯದ ಆಶ್ರಯವು ಹೆಚ್ಚು ಸ್ಪಷ್ಟವಾಗುತ್ತದೆ. ಸರಳವಾಕ್ಯದಲ್ಲಿ ಒಂದು ಪೂರ್ಣಕ್ರಿಯಾಪದವಿರುತ್ತದೆ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಸರಳವಾಕ್ಯಗಳು ಸೇರಿದ ವಾಕ್ಯವು ಸಂಯುಕ್ತ ವಾಕ್ಯವೆನಿಸುತ್ತದೆ. ನೀಡಲಾದ ವಾಕ್ಯಗಳನ್ನು ಮಕ್ಕಳು ಸರಳ ವಾಕ್ಯಗಳಾಗಿ ಬರೆಯಲಿ. ಅಗತ್ಯ ಬಂದಲ್ಲಿ ಅಧ್ಯಾಪಕರು ಸಹಾಯ ಮಾಡಲಿ.

### ಸರಳ ವಾಕ್ಯಗಳು

- ಅಜ್ಜಿ ಬಾವಡಿಯಲ್ಲಿ ರಾಗಿಗಂಜಿ ತಂದಳು. ನಾಲ್ಕು ಚಿಪ್ಪು ಇಕ್ಕಿದಳು.
- ತಿರುಕನು ಹೊದೆದಿದ್ದ ಕಂಥೆಯನ್ನು ಸರಿಸಿಕೊಂಡನು. ಎಲೆಯ ಮುಂದೆ ಕುಳಿತನು.

### ಗಾದೆ ಮಾತಿನ ಆಶಯ ಬರೆಯಲಿ

ಗಾದೆ ಮಾತುಗಳೆಲ್ಲವೂ ಕೆಲವೇ ಪದ ಸಮೂಹಗಳಿಂದ ಕೂಡಿದ್ದು, ವಿಶಾಲವಾದ ಅರ್ಥವನ್ನು ಕೊಡುತ್ತವೆ. ವಾಚ್ಯಾರ್ಥ, ಸೂಚ್ಯಾರ್ಥಗಳೆರಡನ್ನು ಒಳಗೊಂಡ ಚಮತ್ಕಾರವಿರುವ ಗಾದೆ ಮಾತುಗಳೂ ಇವೆ. ಗಾದೆಮಾತುಗಳ ಅರ್ಥ ವೈಶಾಲ್ಯವನ್ನು ತಿಳಿದು ಅದನ್ನು ಬರವಣಿಗೆಯ ಮೂಲಕ ಅಭಿವ್ಯಕ್ತಗೊಳಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದೇ ಈ ಚಟುವಟಿಕೆಯ ಉದ್ದೇಶವಾಗಿದೆ.

ಮಕ್ಕಳು ತಮಗೆ ತಿಳಿದ ಗಾದೆಗಳನ್ನು ಪಟ್ಟಿ ಮಾಡಲಿ.

- ಅಗಸನನ್ನು ಮೊಸಳೆ ಹಿಡಿದ ಹಾಗೆ
- ವೆಂಕು ಪಣಂಬೂರಿಗೆ ಹೋದ ಹಾಗೆ
- ಮಂಗನ ಕೈಗೆ ಮಾಣಿಕ್ಯ ಕೊಟ್ಟಂತೆ
- ನೀರಿನಲ್ಲಿ ಹೋಮ ಮಾಡಿದಂತೆ
- ಕೋಣನ ಮುಂದೆ ಕಿನ್ನರಿ ಬಾರಿಸಿಂತೆ – ಇತ್ಯಾದಿ.

ಪಟ್ಟಿ ಮಾಡಿದ ಬಳಿಕ ತಮಗೆ ಇಷ್ಟವಾದ ಗಾದೆಯ ಆಶಯವನ್ನು ವೈಯಕ್ತಿಕವಾಗಿ ಬರೆಯಲಿ. ಕೆಲವರು ಮಂಡಿಸಲಿ. ಅನಂತರ ಗುಂಪಿನಲ್ಲಿ ಚರ್ಚಿಸಿ ಗಾದೆಯ ಆಶಯದ ಮೌಲ್ಯನಿರ್ಣಯಕ್ಕೆ ಅಗತ್ಯವಾದ ಸೂಚಕಗಳನ್ನು ಕಂಡುಕೊಳ್ಳಲಿ.

### ಸೂಚಕಗಳು

- ಗಾದೆ ಮಾತಿನ ಸಾಮಾನ್ಯ ಅರ್ಥದೊಂದಿಗೆ ಅದರ ಅಂತರಾರ್ಥವನ್ನು ವಿಶ್ಲೇಷಿಸಿ ಬರೆಯಲಾಗಿದೆ.
- ಗಾದೆಮಾತಿನ ಆಶಯವನ್ನು ಉದಾಹರಣೆ ಸಹಿತ ಸಮರ್ಥಿಸಲಾಗಿದೆ.

- ಆಶಯವು ಗಾದೆಗೆ ಪೂರಕವಾಗಿ ಸಂಕ್ಷಿಪ್ತವಾಗಿದೆ.
- ಭಾಷಾ ಘಟಕಗಳಾದ ಅಕ್ಷರ, ಪದ, ವಾಕ್ಯಗಳನ್ನು ಸರಿಯಾದ ರೂಪದಲ್ಲಿ ಬರೆಯಲಾಗಿದೆ.

ಸೂಚಕಗಳ ಆಧಾರದಲ್ಲಿ ಗುಂಪಿನಲ್ಲಿ ಬರವಣಿಗೆಯನ್ನು ಉತ್ತಮ ಪಡಿಸಿ ಬರೆದು ಉತ್ತಮವಾದುದನ್ನು ಆರಿಸಿ ತರಗತಿಯಲ್ಲಿ ಮಂಡಿಸಲಿ. ಕೊನೆಗೆ ಅಧ್ಯಾಪಕರು ಬರೆದ ಗಾದೆಯ ಆಶಯವನ್ನು ಪ್ರದರ್ಶಿಸುವುದು.

**ಗಾದೆಗಳ ಆಶಯ ಹೀಗೂ ಇರಬಹುದು**

## ಮಂಗನ ಕೈಗೆ ಮಾಣಿಕ್ಯ ಕೊಟ್ಟಂತೆ

ಇದು ನಮ್ಮ ಊರಿನಲ್ಲಿ ಸಾಧಾರಣವಾಗಿ ಕೇಳಿ ಬರುವ ಒಂದು ಗಾದೆಮಾತಾಗಿದೆ. ಮಾಣಿಕ್ಯವೆಂಬುದು ನವರತ್ನಗಳಲ್ಲಿ ಒಂದು. ಇದು ಬಹಳ ಬೆಲೆಬಾಳುವ ವಸ್ತುವಾಗಿದೆ. ಇದನ್ನು ಬಳಸಿ ಆಕರ್ಷಕವಾದ ಆಭರಣಗಳನ್ನು ತಯಾರಿಸುತ್ತಾರೆ. ಇದು ಮಾನವನಿಗೆ ಬಹಳ ಉಪಯುಕ್ತವಾಗಿದೆ. ಹೀಗೆ ಬಹಳ ಶ್ರೇಷ್ಠವಾದ ಮಾಣಿಕ್ಯವನ್ನು ಮಂಗನ ಕೈಗೆ ಕೊಟ್ಟರೆ ಅದು ಅದಕ್ಕೆ ಸಾಮಾನ್ಯ ಕಲ್ಲು ಅದು ಅದನ್ನು ತಿನ್ನಬಹುದೇ ಎಂದು ಪರೀಕ್ಷಿಸಿ ಎಸೆದು ಬಿಡುತ್ತದೆ. ಅದರ ಬೆಲೆ ಅದಕ್ಕೆ ತಿಳಿಯದು.

ಒಂದು ವಸ್ತುವಿನ ಪ್ರಯೋಜನ, ಬೆಲೆ ಇತ್ಯಾದಿಗಳನ್ನು ತಿಳಿಯದ ವ್ಯಕ್ತಿಯ ಕೈಗೆ ಆ ವಸ್ತುವನ್ನು ನೀಡಿ ಪ್ರಯೋಜನವಿಲ್ಲ. ಆ ಸಂದರ್ಭದಲ್ಲಿ ಅವನು ಮಂಗನಂತೆ ವರ್ತಿಸುವನು. ಅವನ ಕೈಯಲ್ಲಿ ಆ ವಸ್ತು ನಾಶ ಹೊಂದುತ್ತದೆ. ನುಡಿಸಲು ಬಾರದವನ ಕೈಗೆ ಕೊಳಲು ನೀಡಿ ಏನೂ ಪ್ರಯೋಜನವಿಲ್ಲ. ಅದೇ ರೀತಿ ಬರೆಯಲು ಉಪಯೋಗಿಸುವ ಪೆನ್ನು ವಿದ್ಯಾವಂತರಿಗೆ ಮೌಲ್ಯಯುತವಾಗಿರಬಹುದು. ಅದನ್ನು ಓದು ಬರಹ ತಿಳಿಯದವನಿಗೆ ನೀಡಿ ಏನು ಪ್ರಯೋಜನ?

**ಪೂರಕ ಓದಿಗೆ**

## ಮದಕರಿ

ಮದಿಸಿದ್ದ ಗಜವನ್ನು ಮಲಗಿದ್ದ ಹಾವನ್ನು
ಮದಿರೆಯ ಕುಡಿದು ಬರುವೋನ ಕಂಡರೆ
ಹರದಾರಿ ಇಟ್ಟು ಹರಿದೋಡು

ದಿಲ್ಲಿಯಲ್ಲಿ ದೀಪಾವಳಿ ಹಬ್ಬ ನಡೆದಿತ್ತು. ಅ ಹಬ್ಬದ ದಿನ ಅರಮನೆಯ ಆನೆಗಳಿಗೆ ಸ್ನಾನ ಮಾಡಿಸಿ, ಅಲಂಕಾರ ಮಾಡಿ ಪೂಜಿಸಿ ಹೊಟ್ಟೆ ತುಂಬ ಅಹಾರ ತಿನ್ನಿಸಿದ್ದರು. ರಣಭೈರವಿ ಎಂಬ ಪಟ್ಟದಾನೆಯು ನೀರು ಮುಟ್ಟದೆ ಗರ್ಜಿಸುತ್ತಾ ಇತ್ತು. ಮಾವಟಿಗನು ಕಬ್ಬಿನ ಹಾಲನ್ನಾದರೂ ಕುಡಿಯಲಿ ಎಂದು ಕಬ್ಬಿನ ಹೊರೆಯನ್ನು ತರಿಸಿ ಹಾಕಿದ. ಅದು ಕಬ್ಬನ್ನು ತಿಂದಿತು. ಮಾವಟಿಗನನ್ನು ಹಿಡಿದು ಕಬ್ಬಿನಂತೆ ಮುರಿದು ಬಿಸಾಡಿತು. ಅದಕ್ಕೆ ಮದ ಬಂದಿತ್ತು. ಆ ಮದಕರಿಯು ಕಾಲಿನ ಸರಪಳಿಯನ್ನು ಹರಿದಿಕ್ಕಿ ಸಿಕ್ಕಿದ ಕಡೆ ಓಡಾಡ ಹತ್ತಿತು. ಸಿಕ್ಕಿ ಸಿಕ್ಕಿದುದನ್ನೆಲ್ಲ ಹಿಡಿದು ಎಸೆಯುತ್ತಿತ್ತು. ಮರಗಳನ್ನು ಕೆಡವಿ ಗಿಡಗಳನ್ನು ಕಿತ್ತು ಅಂಗಡಿಗಳನ್ನು ಹೊಕ್ಕು ಮನೆಗಳಿಗೆ ನುಗ್ಗಿ ತಂಟೆ ಮಾಡುತ್ತಿತ್ತು. ಜನರೆಲ್ಲ ಕಂಗಾಲಾದರು. ಈ ಸುದ್ದಿ ಬಾದಶಹನಿಗೂ ಮುಟ್ಟಿತು.

ಪ್ರಧಾನಿಯು ಬಂದು ನಾಲ್ಕು ಸಲಾಮು ಹಾಕಿ, 'ಖಾವಂದ್! ರಣಭೈರವಿ ಆನೆಗೆ ಸೊಕ್ಕೇರಿದೆ. ಅದನ್ನು ಹಿಡಿಸದೆ ನಿರ್ವಾಹವಿಲ್ಲ. ಹಿಡಿಸಲಾಗದಿದ್ದರೆ ಕೊಲ್ಲಿಸುವುದೊಂದೇ ಮಾರ್ಗ' ಎಂದು ಅರಿಕೆ ಮಾಡಿದನು.

‘ಕೊಲ್ಲಿಸುವುದೆ! ರಣಭೈರವಿ ಸಾವಿರ ಸೈನ್ಯದ ಶಕ್ತಿಯುಳ್ಳ ಕಾಳಗದಾನೆ. ಅದನ್ನು ಕೊಲ್ಲಿಸಲಾಗದು. ನನ್ನನ್ನು ಕಂಡರೆ ಅದಕ್ಕೆ ಪ್ರೀತಿ. ನಾನೇ ಹೋಗಿ ಅದನ್ನು ಸಮಾಧಾನಗೊಳಿಸುತ್ತೇನೆ. ನಡೆಯಿರಿ!’ ಎಂದು ಬಾದಶಹನು ಹೊರಟನು.

ಮದಕರಿಯು ದಿಲ್ಲಿಯ ಬೀದಿಗಳಲ್ಲಿ ಓಡಾಡಿ ಮೆಟ್ಟಿ ತುಳಿದು, ಹೊಕ್ಕು ಮುರಿದು, ಎಲ್ಲವನ್ನು ಹಾಳುಗೆಡವಿ ಉತ್ತರ ದಿಕ್ಕಿಗೆ ಬಂದಿತ್ತು. ದೂರದಲ್ಲಿ ಹಸನಾದ ಬಾಳೆಯ ತೋಟವೊಂದು ಕಾಣಿಸಿತು. ಮದಕರಿಯು ತೋಟವನ್ನು ನುಗ್ಗಿತು. ಬಾಳೆಗಳನ್ನು ಕಿತ್ತೆಸೆಯಿತು. ದಿಂಡುಗಳನ್ನು ಸಿಗಿದು ಮುಕ್ಕಿತು.

ಬಳಿಯ ಗುಡಿಸಲಿನಲ್ಲಿದ್ದ ತರುಣ ಹೊರಗೆ ತಲೆಯಿಕ್ಕಿ ನೋಡಿದ. ಬಾಳೆಗಳೆಲ್ಲ ಬುಡಕಿತ್ತು ಬಿದ್ದಿವೆ. ಮದಕರಿಯು ಎಲ್ಲವನ್ನೂ ಹಾಳುಗೆಡವಿದೆ. ತರುಣನ ಹೊಟ್ಟೆಯುರಿಯಿತು. ಆನೆಯು ಭಯಂಕರವಾಗಿ ಗರ್ಜಿಸುತ್ತಿತ್ತು. ಅ ಗರ್ಜನೆ ಕೇಳಿದವರ ಎದೆ ಧಸಕ್ಕೆನ್ನುತ್ತಿತ್ತು. ಅದರ ಮದಜಲ ಸುರಿಯುತ್ತಿತ್ತು. ತರುಣ ಬಿಲ್ಲು ಬಾಣ ತೆಗೆದುಕೊಂಡು ಹೊರಗಿಳಿದ.

ಸರ್ರೆಂದು ಹಾರಿದ ಬಾಣ ಮದಕರಿಯ ಕಿವಿಯ ಹಾಲೆಯನ್ನು ಹರಿಯಿತು. ರಕ್ತ ಸುರಿಯಿತು. ಮದಗಜವು ಕಿವಿ ಅಗಲಿಸಿ, ಸೊಂಡಿಲೆತ್ತಿ, ಭೀಕರವಾಗಿ ಗರ್ಜಿಸಿತು. ಗರ್ಜನೆಯನ್ನು ಕೇಳಿ ತರುಣನ ತಾಯಿಯು ಗಾಬರಿಯಿಂದ ಹೊರಬಂದಳು. ಆನೆ ಸುತ್ತಲೂ ನೋಡಿ ತರುಣನನ್ನು ಕಂಡು ಮುಂದೆ ನುಗ್ಗಿತು. ನೋಡುತ್ತಿದ್ದ ತಾಯಿ‘ಅಯ್ಯೋ! ಮಗನೆ!’ ಎಂದು ಕೂಗಿ ಕೆಳಗೆ ಬಿದ್ದಳು.

ಆ ಕೂಗನ್ನು ಕೇಳುತ್ತಲೇ ಆನೆಯು ನಿಂತುಬಿಟ್ಟಿತು. ಅದಕ್ಕೆ ಆ ದನಿಯ ಗುರುತು ಹತ್ತಿತ್ತೋ ಏನೋ! ತರುಣನನ್ನೇ ನೋಡಿತು. ತರುಣನು ಆನೆಯನ್ನೇ ನೋಡುತ್ತ ನಿಂತ. ಕೈಯಲ್ಲಿ ಇನ್ನೊಂದು ಬಾಣ ಹೆದೆಯೇರಿ ನಿಂತಿತ್ತು. ಮದಕರಿ ಹಿಂದಕ್ಕೆ ಸರಿಯಿತು. ಏತದ ಬಾವಿಗೆ ಸೊಂಡಿಲಿಳಿಸಿ ನೀರು ಕುಡಿಯಿತು. ಅನಂತರ ತರುಣನ ಬಳಿಗೆ ಓಡಿ ಅವನ ಮುಂದೆ ಸೊಂಡಿಲೆತ್ತಿ ಮುಂಗಾಲನ್ನು ತಗ್ಗಿಸಿತು. ತರುಣನು ಸೊಂಡಿಲನ್ನು ಸವರಿ, ತಗ್ಗಿಸಿದ ಮುಂಗಾಲ ಮೇಲೆ ಹತ್ತಿ ಬೆನ್ನ ಮೇಲೆ ಕುಳಿತುಕೊಂಡ. ಗಜ ಎದ್ದು ಗುಡಿಸಲ ಕಡೆ ನಡೆಯಿತು.

ಮದಕರಿ ಸಾಧುವಾಗಿತ್ತು!

ತರುಣನು ‘ಅಮ್ಮಾ’ ಎಂದು ಕರೆದ. ತಾಯಿ ಹೊರಗೆ ಬಂದು ಕಣ್ಣು ಉಜ್ಜಿ ಉಜ್ಜಿ ನೋಡಿದಳು. ಅಷ್ಟರಲ್ಲಿ ಬಾದಶಹನು ಪ್ರಧಾನಿಯೊಡನೆ ಕುದುರೆಯನ್ನೋಡಿಸಿಕೊಂಡು ಅಲ್ಲಿಗೆ ಬಂದು ಮುಟ್ಟಿದನು. ರಣಭೈರವಿ ಬಾದಶಹನಿಗೆ ಸಲಾಂ ಹಾಕಿತು. ಅದನ್ನೇರಿದ ತರುಣನನ್ನು ನೋಡಿ ಬೆರಗಾಗಿ ‘ಯಾರಪ್ಪಾ ನೀನು?’ ಎಂದು ಕೇಳಿದ ಬಾದಶಹ.

‘ರಣಭೈರವಿಯ ಮಾವುತನ ಮಗ.’

‘ಮಾವುತನೆಲ್ಲಿ?’

‘ಅವರು ತೀರಿಹೋಗಿ ಮೂರು ವರ್ಷವಾಯಿತು. ಇವರೇ ನನ್ನ ತಾಯಿ’

ಬಾದಶಹ ತರುಣನ ತಾಯಿಯ ಕಡೆಗೆ ತಿರುಗಿ, ‘ನಾಳೆ ನೀವು ಈ ಕುಮಾರನೊಂದಿಗೆ ಅರಮನೆಗೆ ಬನ್ನಿ. ಇಂಥ ಧೀರನನ್ನು ಪಡೆದ ನೀವು ಭಾಗ್ಯವಂತರು’ ಎಂದು ಹೇಳಿ ಕುದುರೆಯನ್ನೇರಿಕೊಂಡು ತೆರಳಿದ.

ಮರುದಿನ ಬಾದಶಹನು ಒಡ್ಡೋಲಗ ಕೊಡುತ್ತಿದ್ದ. ಸಭೆಯಲ್ಲಿ ಮುಖ್ಯ ಅಧಿಕಾರಿಗಳೂ ನಾಗರಿಕರೂ ನೆರೆದಿದ್ದರು. ಬಾದಶಹನು ಮದಕರಿಯನ್ನು ಸಾಧುಗೊಳಿಸಿದ ತರುಣನನ್ನು ಬಳಿಗೆ ಕರೆದು ಅವನ ಧೀರತನವನ್ನು ಹೊಗಳಿ ‘ಮದಕರಿ’ ಎಂಬ ಬಿರುದನ್ನಿತ್ತು ಮನ್ನಿಸಿದ. ಹತ್ತು ಗ್ರಾಮಗಳ ಜಹಗೀರನ್ನು ಬರೆಸಿಕೊಟ್ಟ. ಮುಂದೆ ಇವನು ಚಿತ್ರದುರ್ಗದ ಪಾಳಯಗಾರನಾಗಿ ವೀರ ಮದಕರಿ ನಾಯಕನೆಂದು ಇತಿಹಾಸ ಪ್ರಸಿದ್ಧನಾದನು.

# ಬೇಕಲಕೋಟೆ

ಬಹುಭಾಷೆ, ಸಂಸ್ಕೃತಿಯ ಸಂಗಮವಾಗಿರುವ ಕಾಸರಗೋಡು ಐತಿಹಾಸಿಕ ಸ್ಮಾರಕಗಳ ತವರು.. ಕೇರಳದಲ್ಲಿ ಅತ್ಯಂತ ಹೆಚ್ಚಿನ ಕೋಟೆಗಳನ್ನು ಹೊಂದಿರುವ ಕಾಸರಗೋಡು ಜಿಲ್ಲೆಯ ಬೇಕಲಕೋಟೆ ತಾಯಿಕೋಟೆಯೆಂದೇ ಹೆಸರು ಗಳಿಸಿದೆ. ಕಡಲ ತಡಿಯಲ್ಲಿ ತಲೆಯೆತ್ತಿ ನಿಂತಿರುವ ಭವ್ಯ ಬೇಕಲಕೋಟೆಯಲ್ಲಿ ಭೋರ್ಗರೆಯುವ ಕಡಲು ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸುತ್ತದೆ.

ಕಾಸರೋಡು ಜಿಲ್ಲೆಯಿಂದ ದಕ್ಷಿಣಕ್ಕೆ 12 ಕಿಲೋಮೀಟರ್ ದೂರದ ಪಳ್ಳಿಕರೆ ಪಂಚಾಯತಿನ ಸಮುದ್ರ ತೀರದಲ್ಲಿ ಗದ್ದೆ, ಕೆರೆ, ತೋಡುಗಳಿಂದ, ಭತ್ತ, ತೆಂಗು–ಕಂಗು ಹಲಸು ಮರಗಳಿಂದ ಕಂಗೊಳಿಸುವ ಸಮೃದ್ಧ ಪ್ರದೇಶವಾದ ಬೇಕಲದಲ್ಲಿ ಕೋಟೆ ನೆಲೆನಿಂತಿದೆ. ಸಮುದ್ರದ ವರೆಗೆ ಚಾಚಿದಂತೆ ನಿಂತಿರುವ ಕೋಟೆಯ ಸೊಬಗು ಮನಸ್ಸನ್ನು ಮೊದಲ ನೋಟಕ್ಕೆ ಸೂಚಿ ಕಲ್ಲಿನಂತೆ ಸೆಳೆದು ಬಿಡುತ್ತದೆ.

ಕೇಂದ್ರ ಸರಕಾರದ ಆರ್ಕಿಯೋಲಜಿಕಲ್ಸ್ ಇಲಾಖೆಯ ಅಧೀನದಲ್ಲಿರುವ ಈ ಸುಂದರ ಕೋಟೆ ಸಮುದ್ರಮಟ್ಟದಿಂದ 130 ಅಡಿ ಎತ್ತರದಲ್ಲಿದೆ. ಕೋಟೆಗೆ ತಾಗಿಕೊಂಡು ಮದ್ದುಗುಂಡು ಸುರಕ್ಷಿತವಾಗಿಡುವ ಕಟ್ಟಡ ಹಾಗೂ ಶತ್ರುಗಳನ್ನು ಕಾಯುವುದಕ್ಕಾಗಿರುವ ಸೌಕರ್ಯವೂ ಇದೆ.

ಬೇಕಲಕೋಟೆ ಸುಮಾರು 35 ಎಕರೆ ವಿಸ್ತೀರ್ಣ ಹೊಂದಿದೆ. ಕೋಟೆಯ ಉತ್ತರ ಭಾಗದಲ್ಲಿ ಹೆಬ್ಬಾಗಿಲು ಇದೆ. ಎಡ–ಬಲ ಸೇರಿದಂತೆ ಕೋಟೆಯ ಎಂಟು ಮೂಲೆಗಳಲ್ಲಿ ಬುರುಜುಗಳಿವೆ. ಅದರ ಮೇಲೆ ನಿಂತ ಸೈನಿಕರು ಕುದಿಯುವ ಎಣ್ಣೆಮತ್ತು ಹುರಿದ ಮರಳು ಎರಚಿ ಕೋಟೆಯನ್ನು ಮುತ್ತಿದ ಶತ್ರುಗಳನ್ನು ಹಿಮ್ಮೆಟ್ಟಿಸುತ್ತಿದ್ದರಂತೆ. ಕೋಟೆಯ ಕೆಳಭಾಗದ ಸುತ್ತಲೂ ಇರುವ ಕಂದಕವು ಅಲ್ಲಿಂದ ಉತ್ತರಾಭಿಮುಖವಾಗಿ ಹೊರಕ್ಕೆ ತಾಗಿ ಅಲ್ಲಿಂದ ಪೂರ್ವದ ವರೆಗೂ ವ್ಯಾಪಿಸಿದೆ. ವೈರಿಗಳು ಕೋಟೆಯನ್ನೇರದಂತೆ ಮಾಡಲು ಅದನ್ನು ನೀರಿನಿಂದ ತುಂಬಿಸಿಡಲಾಗುತ್ತಿತ್ತಂತೆ. ಬುರುಜಿನ ಮೇಲೇರಿದಾಗ ಕಾಣುವ ನೋಟ ಅದೆಷ್ಟು ಸುಂದರವಾಗಿದೆ. ಆಕಾಶವೇ ಭೂಮಿಗೆ ಕವುಚಿ ಬಿತ್ತೋ ಎಂಬಂತೆ ಅರಬೀ ಸಮುದ್ರ. ಅದರ ಮೇಲೆ ಉಯ್ಯಾಲೆಯಂತೆ ತೇಲಾಡುತ್ತಿರುವ ಬೋಟುಗಳು. ಸಮುದ್ರ ತೀರದ ಮರಳ ಹಾಸಿಗೆಯಲ್ಲಿ ಶಿಸ್ತಿನ ಸಿಪಾಯಿಗಳಂತೆ ಒಂದಾಗಿ ನಿಂತಿರುವ ಹಚ್ಚ ಹಸಿರಿನ ತೆಂಗಿನ ಮರಗಳು ಪ್ರವಾಸಿಗರಿಗೆ ಇನ್ನಷ್ಟು ಮುದ ನೀಡುತ್ತವೆ.

ಚೆಲುವಿನ ಬೇಕಲಕೋಟೆಯ ದೊಡ್ಡ ದೊಡ್ಡ ಭಿತ್ತಿಗಳು, ಅಡಗು ತಾಣಗಳು ಹೆಚ್ಚು ಆಕರ್ಷಣೀಯವಾಗಿದೆ. ಹಿಂದೆ ಕರ್ನಾಟಕದ ಜಿಲ್ಲಾಧಿಕಾರಿಯಾಗಿದ್ದ ಖಾನ್ ಬಹದೂರ್ ಅಸೀಸುದ್ದೀನ್ ಅವರ ನೇತೃತ್ವದಲ್ಲಿ ನಿರ್ಮಿಸಿದ ವಿಶ್ರಾಂತಿ ಕೇಂದ್ರವಾಗಿದೆ ಈಗ ಬೇಕಲಕೋಟೆಗೆ ಆಗಮಿಸುವ ಪ್ರವಾಸಿಗರಿಗೆ ಏಕ ಆಶ್ರಯ ಕೇಂದ್ರವಾದ ಟ್ರಾವೆಲ್ಸ್ ಕಟ್ಟಡ. ಕೋಟೆಯ ಬಲಭಾಗದಲ್ಲಿ ನವೀಕರಿಸಿ ನಿರ್ಮಿಸಿದ ಹೈದ್ರೋಸ್ ಪಳ್ಳಿ ಟಿಪ್ಪು ಸುಲ್ತಾನ್ ನಿರ್ಮಿಸಿರುವುದಾಗಿ ಐತಿಹ್ಯವಿದೆ.

**ಹೆಸರು ಹೇಗೆ ಬಂತು :**

ದೊಡ್ಡ ಆಸ್ಥಾನ ಎಂದು ಕರೆಯಲ್ಪಡುವ 'ಬಲಿಕ್ಕುಳಂ' ಎಂಬ ಪದದಿಂದಾಗಿ ಬೇಕಲ ಎಂಬ ಪದ ಉಂಟಾಗಿದೆ ಎಂದು ಬೇಕಲ ರಾಮನಾಯಕ್ ಎಂಬ ಕನ್ನಡ ಕವಿ ಅಭಿಪ್ರಾಯಪಟ್ಟಿದ್ದಾರೆ. ನಂತರ ಬೇಕ್ಕುಳಂ ಬೇಕಲ್ ಆಗಿ ಬಳಿಕ್ಕುಳಂ ಎಂಬ ಪದ ಮಾಯವಾಯಿತು. ಹಿಂದಿನ ಕಾಲದಲ್ಲಿ ದೊಡ್ಡ ಆಸ್ಥಾನಗಳ ನಾಡಾಗಿತ್ತು ಬೇಕಲ. ಬೀಡನೂರಿನ ಶಿವಪ್ಪ ನಾಯ್ಕ 1650–1670ರ ಮಧ್ಯೆ ಧಾರಾಳ ಕೋಟೆಗಳನ್ನು ನಿರ್ಮಿಸಿರುವುದಾಗಿ ಎಚ್.ಎ. ಸ್ಟೂವರ್ಟ್ ಹ್ಯಾಂಡ್ಸ್ 'ಬುಕ್ ಆಫ್ ಸೌತ್ ಕೆನರಾ' ಎಂಬ ಪುಸ್ತಕದಲ್ಲಿ ತಿಳಿಸಿದ್ದಾರೆ. ಬೇಕಲ, ಚಂದ್ರಗಿರಿ ಕೋಟೆಗಳು ಕೋಲತ್ತಿರಿಯವರ, ಚಿರಕ್ಕಲ್ ರಾಜರ ಕಾಲದಲ್ಲಿ ನಿರ್ಮಿಸಲಾಗಿದ್ದು, ನಂತರ ಶಿವಪ್ಪ ನಾಯ್ಕ ಅದನ್ನು ಆಕ್ರಮಿಸಿ ವಶಪಡಿಸಿಕೊಂಡನು. ಬೇಕಲ್, ಚಂದ್ರಗಿರಿ ಕೋಟೆಗಳ ಪುನರುದ್ಧಾರವನ್ನು ನಡೆಸಿದುದು ಬೀಡನೂರಿನ ರಾಜರಾಗಿದ್ದರು. ಚಿರಕ್ಕಲ್ ರಾಜವಂಶಜರ ಆರಂಭದ ಕಾಲದಿಂದಲೇ ನೆಲೆಗೊಂಡಿರುವ ಕೋಟೆಯಾಗಿದೆ ಬೇಕಲಕೋಟೆ. ಕೋಲತ್ತಿರಿ ರಾಜ್ಯದ ಆಡಳಿತ ನಡೆಸಿಕೊಂಡಿದ್ದುದು ಹಿರಿಯ ಕೋಲತ್ತಿರಿ ರಾಜವಂಶದ ಪುರುಷ ಪ್ರಜೆಯಾಗಿದ್ದನು. ಆ ವಂಶದ ರಾಜರು ಬೇಕೋಲಂ ಅರಮನೆಯಲ್ಲಿ ವಾಸಿಸಿಕೊಂಡು

ಬಾಯಕೋಲಂಕೂರ್ ಎಂದು ತಿಳಿಯಲ್ಪಡುತ್ತಿದ್ದರು. ಇಂದಿನ ಬೇಕಲಕೋಟೆ ಈ ಬೇಕೋಲಂ ಅರಮನೆಯಾಗಿದೆ ಎಂದು ಕೆ.ಪಿ.ಪದ್ಮನಾಭ ಮೆನೋನ್ ಕೇರಳ ಚರಿತ್ರೆಯಲ್ಲಿ ತಿಳಿಸಿದ್ದು, ಈ ಅಭಿಪ್ರಾಯದಲ್ಲಿ ಎಲ್ಲ ಪಂಡಿತರೂ ಒಂದಾಗಿದ್ದರು. 1763ರಲ್ಲಿ ಬೇಕಲ ಅರಮನೆಯನ್ನು ಹೈದರಾಲಿ ವಶಪಡಿಸಿಕೊಂಡಿದ್ದನು. 1799ರಲ್ಲಿ ಟಿಪ್ಪುವಿನ ಪರಾಜಯದಿಂದಾಗಿ ಕೋಟೆ ಈಸ್ಟ್ ಇಂಡಿಯಾ ಕಂಪೆನಿಯ ಅಧೀನಕ್ಕೆ ಸೇರಿತ್ತು. ಸೌತ್ ಕೆನರಾಕ್ಕೊಳಪಟ್ಟಿದ್ದ ಕಾಸರಗೋಡು ತಾಲೂಕನ್ನು ಬೇಕಲ್ ಎಂದು ಕರೆದರು.

ಬೇಕಲ್ ಕೋಟೆಯ ಮೇಲೆ ಆಕರ್ಷಕವಾದ ಗೋಪುರವಿದೆ. ಈ ಗೋಪುರ 30 ಅಡಿ ಎತ್ತರವೂ 80 ಅಡಿ ಸುತ್ತಳತೆಯೂ ಇದೆ. ಸಮುದ್ರ ತೀರದಲ್ಲಿ ನೆಲೆಗೊಂಡಿರುವ ಕೋಟೆಯ ಸುತ್ತು ಇರುವ ಆವರಣ ಗೋಡೆಯ ಎತ್ತರ 175 ಅಡಿಯಾಗಿದೆ. ರಾಜ್ಯದ ಇತರ ಯಾವುದೇ ಸಮುದ್ರ ತೀರಕ್ಕಿಂತ ಆಕರ್ಷಕವೂ, ರಮಣೀಯವೂ ಆದ ತೀರವು ಹೊಂದಿರುವುದರಿಂದ ಬೇಕಲಕೋಟೆಯು ಅಂತಾರಾಷ್ಟ್ರೀಯ ಪ್ರವಾಸೋದ್ಯಮ ಕೇಂದ್ರವಾಗಿ ಮಾರ್ಪಾಡುಗೊಂಡಿದೆ.

**ವೀರ ಹನುಮಾನ್ ಕ್ಷೇತ್ರ:**

ಬೇಕಲಕೋಟೆಯ ಪ್ರವೇಶದ್ವಾರದಲ್ಲಿ ಶತಮಾನಗಳ ಇತಿಹಾಸವಿರುವ ಹನುಮಾನ್ ಕ್ಷೇತ್ರವಿದೆ. ಈ ಕ್ಷೇತ್ರ ಕೋಟೆಗೆ ಕಾವಲೆಂಬಂತೆ ಇದೆ. ಇಕ್ಕೇರಿ ರಾಜವಂಶಜರ ಕುಲದೇವತೆಯಾದ ಹನುಮಂತ ಇಲ್ಲಿನ ಪ್ರತಿಷ್ಠಾ ಮೂರ್ತಿ. ಇಕ್ಕೇರಿ ರಾಜವಂಶಜರ ಕೋಟೆಯಾಗಿದೆ ಎಂಬುದಕ್ಕೆ ಇದು ಸಾಕ್ಷಿ. ಕೆಳದಿಯ ಅರಸ ಇಕ್ಕೇರಿಯ ಶಿವಪ್ಪ ನಾಯಕ ಕಟ್ಟಿಸಿದ ಈ ಕೋಟೆಯಲ್ಲಿ ನಂತರ ಹೈದರಾಲಿ ಮತ್ತು ಟಿಪ್ಪು ಆಧಿಪತ್ಯ ಸ್ಥಾಪಿಸಿದ್ದರು ಎಂಬುದಕ್ಕೆ ಸಾಕ್ಷಿಯಾಗಿ ಹೈದ್ರೋಸ್ ಮಸೀದಿ ಇದೆ.

**ಕಾವಲು ಗೋಪುರ:**

ಕೋಟೆಯ ಸುತ್ತಲೂ 30 ಅಡಿ ಎತ್ತರದ ಸುತ್ತುಗೋಡೆ ಕಾಣಬಹುದಾಗಿದೆ. ಕೋಟೆಯ ಮಧ್ಯದಲ್ಲಿ 80 ಅಡಿ ಎತ್ತರದಲ್ಲಿ ನಿರ್ಮಿಸಲಾಗಿರುವ ವಾಚ್ ಟವರ್ ಆಶ್ಚರ್ಯವನ್ನುಂಟು ಮಾಡುತ್ತಿದೆ. ಆರು ಅಡಿ ಅಗಲದಲ್ಲಿರುವ ವಾಚ್ ಟವರ್‌ನ ಮೇಲ್ಭಾಗದಲ್ಲೊಂದು ದಾರಿ ಇದೆ. ಈ ದಾರಿಗೆ ಕೆಂಪುಕಲ್ಲು ಹಾಸಲಾಗಿದೆ. ಫಿರಂಗಿಗಳು, ಕುದುರೆ ಗಾಡಿಗಳನ್ನು ಟವರ್ ಮೇಲ್ಭಾಗಕ್ಕೆ ಕೊಂಡೊಯ್ಯುವ ದಾರಿಯಾಗಿದೆ ಇದು ಎಂದು ಹೇಳಲಾಗುತ್ತಿದೆ. ಕೋಟೆಯಿಂದ ಸಮುದ್ರದ ಪಕ್ಕದಲ್ಲಿ ಒಂದು ಸುರಂಗವಿದೆ. ಕೆಂಪುಕಲ್ಲಿನಿಂದ ನಿರ್ಮಿಸಿದ ಆಯುಧ ಕೊಠಡಿ ಅದ್ಭುತವಾಗಿದೆ. ಟವರ್‌ನ ಮೇಲ್ಭಾಗಕ್ಕೆ ಹೋಗಿ ನಿಂತರೆ ಅರಬೀ ಸಮುದ್ರದ ಸೌಂದರ್ಯವನ್ನು, ಪಳ್ಳಿಕರೆ ಬೀಚನ್ನೂ ಕಾಣಬಹುದಾಗಿದೆ. ಇಲ್ಲಿಂದ ಸೂರ್ಯಾಸ್ತಮಾನ ಕಾಣಬಹುದು. ಕೋಟೆಯ ಸಮೀಪದಲ್ಲಿ ಸಮುದ್ರಕ್ಕೆ ತಾಗಿಕೊಂಡು ಇನ್ನೊಂದು ಟವರ್ ಇದೆ.

**ಮೂಗುತಿ ಬಾವಿ :**

ಕೋಟೆಯನ್ನು ನಿರ್ಮಿಸಲು ಬಳಸಿದ ಪ್ರತಿಯೊಂದು ಕಲ್ಲುಗಳನ್ನು ನೋಡಿದರೆ ಅದ್ಭತವೆನಿಸುತ್ತದೆ. ಒಂದು ಕಲ್ಲನ್ನು ಎತ್ತಲು ಐದಾರು ಮಂದಿ ಜನರು ಬೇಕಾಗಬಹುದು. ಆದರೆ ಹಿಂದಿನ ಕಾಲದಲ್ಲಿ ಆಧುನಿಕ ಸೌಲಭ್ಯಗಳಿಲ್ಲದ ಸಂದರ್ಭದಲ್ಲಿ ಈ ಕೋಟೆಯನ್ನು ಹೇಗೆ ನಿರ್ಮಿಸಿದ್ದಾರೆ ಎಂಬ ಪ್ರಶ್ನೆ ಜನರಲ್ಲಿ ಉಂಟಾಗುತ್ತದೆ.

ಕೋಟೆಯ ಮಧ್ಯಭಾಗದಲ್ಲಿ ಮತ್ತು ಬದಿಗಳುದ್ದಕ್ಕೂ ಹೊಸತಾಗಿ ಬೆಳೆಸಿದ ಹೂದೋಟವನ್ನು ನೋಡುತ್ತಾ ಮುಂದೆ ಸರಿದಾಗ ಕಿಂಡಿ ಕಾಣಿಸುತ್ತದೆ. ಕೋಟೆಯ ಬುರುಜಿನ ಅಕ್ಕಪಕ್ಕದಲ್ಲಿ ಎರಡು ಬಾವಿಗಳಿವೆ. ಅವುಗಳೇ ಅಕ್ಕ–ತಂಗಿ ಬಾವಿಗಳಾಗಿವೆ. ಹಿಂದಿನ ಕಾಲದಲ್ಲಿ ಯುದ್ಧದಲ್ಲಿ ವೀರ ಸೈನಿಕರು ಮಡಿದಾಗ ಅವರ ಪತ್ನಿಯರು ಆ ಬಾವಿಯೊಳಗೆ ಧುಮುಕಿ ಪ್ರಾಣಾರ್ಪಣೆ ಮಾಡುತ್ತಿದ್ದರಂತೆ. ಅದಕ್ಕೆ ಪುರಾವೆಯಾಗಿ ಪ್ರಾಚ್ಯವಸ್ತು ಸಂಶೋಧಕರು ಅಲ್ಲಿಂದ ಎರಡು ಹಳೆ ಮೂಗುತಿಗಳನ್ನು ಶೋಧಿಸಿದ್ದಾರೆ. ಆದುದರಿಂದಲೇ ಆ ಬಾವಿಗೆ ಮೂಗುತಿ ಬಾವಿ ಎಂಬ ಹೆಸರಿದೆ. ಮುಂದೆ ನಡೆದರೆ ಸುರಂಗ ಮಾರ್ಗ ಗೋಚರಿಸುತ್ತದೆ. ಅದರೊಳಗೆ ದಟ್ಟವಾದ ಕತ್ತಲೆಯನ್ನು ಭೇದಿಸುತ್ತಾ ಹೊರಗೆ ನೋಡಿದರೆ ಸಮುದ್ರದ ಅಲೆಗಳ ಭೋರ್ಗರೆತ ಕಾಣುವುದು.

# 3. ಯಕ್ಷಗಾನ ಬೊಂಬೆಯಾಟ

## ಪದಸೂರ್ಯ ಪೂರ್ತಿಗೊಳಿಸಿರಿ

ಕೆಳಗಿನ ಪದಸೂರ್ಯವನ್ನು ಕರಿಹಲಗೆಯಲ್ಲಿ ಬರೆಯುವುದು.




ಮಕ್ಕಳು ಒಬ್ಬೊಬ್ಬರಾಗಿ ಬಂದು ಪದಸೂರ್ಯ ಪೂರ್ತಿಗೊಳಿಸಲಿ. ಕತೆ, ಕವಿತೆ, ನಾಟಕ, ಸಿನೆಮಾ, ಯಕ್ಷಗಾನ, ಭಾಷಣ, ವಿಚಾರಸಂಕಿರಣ , ಭಿತ್ತಿ ಪತ್ರಿಕೆ, ವಾರ್ತಾಪತ್ರಿಕೆಗಳು, ಸಂಭಾಷಣೆಗಳು– ಇತ್ಯಾದಿಗಳನ್ನು ಬರೆಯಲಿ.

## ಲಘು ಚರ್ಚೆ

- ಭಾಷಾ ಕಲಿಕೆಯಲ್ಲಿ ಯಕ್ಷಗಾನದ ಪಾತ್ರವೂ ಹಿರಿದು ಅಲ್ಲವೇ?
- ನೀವು ಯಕ್ಷಗಾನ ಬಯಲಾಟ ನೋಡಿರುವಿರಾ?
- ಬಯಲಾಟದಲ್ಲಿ ಏನನ್ನೆಲ್ಲಾ ಗಮನಿಸಿರುವಿರಿ?
- ಭಾಗವತರು ಹಾಡುವ ಪದ್ಯದಿಂದ ಕತೆ ಪೂರ್ಣವಾಗಿ ತಿಳಿಯುತ್ತದೆಯೇ?
- ಕತೆ ಅರ್ಥವಾಗುವುದು ಹೇಗೆ?
- ಅಲ್ಲಿ ಬರುವ ಪಾತ್ರಗಳನ್ನು ನಿರ್ವಹಿಸುವವರು ಯಾರು?
- ಒಂದು ವೇಳೆ ಬೊಂಬೆಗಳು ಆ ಪಾತ್ರಗಳನ್ನು ನಿರ್ವಹಿಸಿದರೆ ಹೇಗಿರಬಹುದು?

ಯಕ್ಷಗಾನ ಬೊಂಬೆಯಾಟದ ತುಣುಕೊಂದನ್ನು ಅಡಕ ಮುದ್ರಿಕೆಯನ್ನು ಬಳಸಿ ಪ್ರದರ್ಶಿಸುವುದು ಬಳಿಕ ಮಕ್ಕಳನ್ನು ಪಾಠದತ್ತ ಸೆಳೆಯುವುದು.

## ಓದುವಿಕೆ

ಆಶಯಗ್ರಹಣಕ್ಕೆ ಸರಳ ಪ್ರಶ್ನೆಗಳನ್ನು ಕರಿಹಲಗೆಯಲ್ಲಿ ಬರೆಯುವುದು.

ಮಕ್ಕಳು ವೈಯಕ್ತಿಕವಾಗಿ ಓದಿ ಆ ಸರಳ ಪ್ರಶ್ನೆಗಳಿಗೆ ಉತ್ತರ ಬರೆಯಲಿ.

- ಬೊಂಬೆಯಾಟವು ಎಲ್ಲಿ ಜನಪ್ರಿಯವಾಗಿದೆ?
- ಕಾಸರಗೋಡಿನಲ್ಲಿ 'ಶ್ರೀ ಗೋಪಾಲಕೃಷ್ಣ ಬೊಂಬೆಯಾಟ' ಸಂಘವನ್ನು ಸ್ಥಾಪಿಸಿದವರು ಯಾರು?
- ರಮೇಶರಿಗೆ ತಾನೂ ಬೊಂಬೆಗಳನ್ನು ಕುಣಿಸಬೇಕೆಂಬ ಛಲ ಉಂಟಾಗಲು ಪ್ರೇರಣೆ ನೀಡಿದುದು ಯಾವುದು?
- ಶ್ರೀಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘವು ಎಲ್ಲೆಲ್ಲಾ ಪ್ರದರ್ಶನ ನೀಡಿದೆ?

- ಈ ಸಂಘಕ್ಕೆ ಲಭಿಸಿದ ಅಂತಾರಾಷ್ಟ್ರೀಯ ಪ್ರಶಸ್ತಿ ಯಾವುದು?
- ಬೊಂಬೆಗಳನ್ನು ಯಾವುದರಿಂದ ನಿರ್ಮಿಸಲಾಗುತ್ತದೆ?
- ಬೊಂಬೆಗಳನ್ನು ಕುಣಿಸುವವನು ಯಾರು?

## ಗಟ್ಟಿ ಓದುವಿಕೆ

ಪಾಠಕ್ಕೆ ಸಂಬಂಧಿಸಿದ ಕೆಲವು ಪ್ರಧಾನ ಆಶಯಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಈ ಆಶಯಗಳಿಗೆ ಸಂಬಂಧಿಸಿದ ವಿವರಣೆಯನ್ನು ಪಾಠದಿಂದ ಆಯ್ದು ಓದಲಿ. ಇದನ್ನು ಗುಂಪು ಸ್ಪರ್ಧೆಯಾಗಿಯೂ ನೀಡಬಹುದು. ಸ್ಪರ್ಧೆಯನ್ನು ಹೀಗೆಯೂ ನಡೆಸಬಹುದು. ಕರಿಹಲಗೆಯಲ್ಲಿ ಬರೆದ ಆಶಯಗಳಿಗೆ ಕ್ರಮಸಂಖ್ಯೆ ನೀಡುವುದು ಕ್ರಮ ಸಂಖ್ಯೆಗಳನ್ನು ಬರೆದ ಚೀಟಿಗಳನ್ನು ಗುಂಪುಗಳಿಗೆ ನೀಡುವುದು. ಪ್ರತೀ ಗುಂಪಿನವರು ತಮಗೆ ಸಿಕ್ಕಿದ ಕ್ರಮಸಂಖ್ಯೆಗನುಗುಣವಾದ ಆಶಯದ ವಿವರಣೆಯನ್ನು ಸ್ಪಷ್ಟ ಉಚ್ಚಾರದೊಂದಿಗೂ, ಸ್ವರಭಾರದೊಂದಿಗೂ ಓದುವುದು. ಒಂದು ಗುಂಪಿನವರು ಓದುವಾಗ ಉಳಿದ ಗುಂಪಿನವರು ಅಂಕ ಹಾಕಲಿ. ಉತ್ತಮವಾಗಿ ಮಂಡಿಸಿದ ಗುಂಪಿನವರನ್ನು ಅಭಿನಂದಿಸುವುದು.

## ಪ್ರಧಾನ ಆಶಯಗಳು

- ಚಂದ್ರಗಿರಿ ತೀರದಲ್ಲಿ ಬೊಂಬೆಯಾಟದ ಉದಯ.
- ಸೂತ್ರದ ಬೊಂಬೆಯಾಟ ಒಂದು ಕಲೆ.
- ಯಕ್ಷಗಾನ ಬೊಂಬೆಯಾಟದ ರಂಗಸ್ಥಳ
- ಶ್ರೀಗೋಪಾಲಕೃಷ್ಣ ಬೊಂಬೆಯಾಟ ಸಂಘ
- ಸೂತ್ರದ ಬೊಂಬೆಗಳ ತಯಾರಿ
- ಬೊಂಬೆ ಮನೆ ಅಥವಾ ಯಕ್ಷ ಪುತ್ಥಳಿ ಸಮುಚ್ಚಯ
- ದೊರಕಿದ ಪ್ರಶಸ್ತಿ, ಸನ್ಮಾನಗಳು
- ಪಿಲಿಕುಂಜೆಗೆ ವಿದೇಶೀ ಕಲಾವಿದರ ಭೇಟಿ

## ಚೆಕ್‌ಲಿಸ್ಟ್

| ಹೇಳಿಕೆಗಳು | ಉತ್ತಮ | ಸಾಧಾರಣ | ಕನಿಷ್ಠ |
|---|---|---|---|
| • ಪಾಠದಲ್ಲಿ ಬರುವ ಎಲ್ಲಾ ನವೀನ ಪದಗಳನ್ನು ಅರ್ಥೈಸಲು ಸಾಧ್ಯವಾಗಿದೆ. | ☐ | ☐ | ☐ |
| • ಪಾಠದ ಸಮಗ್ರ ಆಶಯವನ್ನು ಗ್ರಹಿಸಲು ಸಾಧ್ಯವಾಗಿದೆ. | ☐ | ☐ | ☐ |
| • ಪಾಠದಲ್ಲಿ ಬರುವ ಎಲ್ಲಾ ಪದಗಳನ್ನು ಉಚ್ಚಾರ ಸ್ಪಷ್ಟತೆಯೊಂದಿಗೆ ಓದಲು ಸಾಧ್ಯವಾಗಿದೆ. | ☐ | ☐ | ☐ |
| • ಪಾಠದಲ್ಲಿ ಬರುವ ಭಾಷಾ ಪ್ರಯೋಗಗಳನ್ನು ಕಂಡುಕೊಳ್ಳಲಾಗಿದೆ. | ☐ | ☐ | ☐ |
| • ಈ ಪಾಠವು ಆಕರ್ಷಕವಾಗಿದ್ದು ಇಷ್ಟವಾಗಿದೆ. | ☐ | ☐ | ☐ |

## ಉತ್ತರಿಸಿರಿ

ನೀಡಲಾದ ಪ್ರಶ್ನೆಗಳಿಗೆ ಮಕ್ಕಳು ಗುಂಪಿನಲ್ಲಿ ಕುಳಿತು ಉತ್ತರ ಬರೆದು ಮಂಡಿಸಲಿ.

## ಆಮಂತ್ರಣ ಪತ್ರಿಕೆ ತಯಾರಿ

ಆಮಂತ್ರಣ ಪತ್ರಿಕೆಗಳು ಬೇರೆ ಬೇರೆ ರೀತಿಯಲ್ಲಿರುತ್ತದೆ. ಹಲವು ರೀತಿಯ ಆಮಂತ್ರಣ ಪತ್ರಿಕೆಗಳನ್ನು ಮಕ್ಕಳು ಓದಿ ಆಮಂತ್ರಣ ಪತ್ರಿಕೆಯ ಸ್ವರೂಪವನ್ನು ತಿಳಿದು ಆಮಂತ್ರಣ ಪತ್ರಿಕೆಯನ್ನು ತಯಾರಿಸುವ ಸಾಮರ್ಥ್ಯ ಗಳಿಸಬೇಕಾಗಿದೆ.

- ಹಲವು ತರದ ಆಮಂತ್ರಣ ಪತ್ರಿಕೆಗಳನ್ನು ಗುಂಪಿಗೆ ನೀಡುವುದು.
- ಬಳಿಕ ವೈಯಕ್ತಿಕವಾಗಿ ಆಮಂತ್ರಣ ಪತ್ರಿಕೆ ತಯಾರಿಸುವುದು.
- ಕೆಲವರಿಂದ ಮಂಡನೆ
- ಗ್ರೇಡಿಂಗ್ ಸೂಚಕಗಳನ್ನು ನಿರ್ಣಯಿಸುವುದು
- ಗುಂಪಿನಲ್ಲಿ ಚರ್ಚೆ, ಮಂಡನೆ, ಉತ್ತಮವಾದವುಗಳನ್ನು ಆರಿಸುವುದು
- ತರಗತಿಯಲ್ಲಿ ಮಂಡನೆ
- ಅಧ್ಯಾಪಕರು ಸಿದ್ಧಪಡಿಸಿದ ಆಮಂತ್ರಣ ಪತ್ರಿಕೆಯ ಮಾದರಿ

**ಸೂಚಕಗಳು**

- ಆಮಂತ್ರಣ ಪತ್ರಿಕೆಯ ಚೌಕಟ್ಟನ್ನು ಪಾಲಿಸಲಾಗಿದೆ.
- ಅಮಂತ್ರಣದ ಆಶಯವು ಸಮಗ್ರವಾಗಿದ್ದು ಕ್ರಮೀಕರಿಸಿ ಬರೆಯಲಾಗಿದೆ.
- ಆಶಯವು ಸಂಕ್ಷಿಪ್ತವಾಗಿದೆ.
- ಭಾಷಾ ದೋಷಗಳಿಲ್ಲದೆ ತನ್ನದೇ ಶೈಲಿಯಲ್ಲಿ ಬರೆಯಲಾಗಿದೆ.

### ಕರೆಯೋಲೆ

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸಿರಿಪುರ**

ಸಿರಿಪುರ

ಪ್ರಿಯರೇ, 25–10–2014

ನಮ್ಮ ಶಾಲೆಯ ವಾರ್ಷಿಕೋತ್ಸವದ ಅಂಗವಾಗಿ 10–11– 2014ನೇ ಮಂಗಳವಾರದಂದು ಸಂಜೆ 5 ಗಂಟೆಗೆ ಸರಿಯಾಗಿ **ನರಕಾಸುರ ವಧೆ** ಎಂಬ ಯಕ್ಷಗಾನ ಬೊಂಬೆಯಾಟ ಪ್ರದರ್ಶನವು ಶಾಲಾ ಸಭಾಂಗಣದಲ್ಲಿ ನಡೆಯಲಿರುವುದು. ಈ ಕಾರ್ಯಕ್ರಮಕ್ಕೆ ಪ್ರೀತಿ ಪೂರ್ವಕವಾಗಿ ತಮ್ಮೆಲ್ಲರನ್ನು ಆಮಂತ್ರಿಸುತ್ತೇವೆ.

ಇತಿ,

| | |
|---|---|
| ಅಧ್ಯಕ್ಷರು ಮತ್ತು ಸದಸ್ಯರು | ಮುಖ್ಯೋಪಾಧ್ಯಾಯರು |
| ರಕ್ಷಕ–ಶಿಕ್ಷಕ ಸಂಘ | ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿರಿಪುರ |

## ಸಂಯುಕ್ತ ವಾಕ್ಯ ರಚಿಸಿರಿ

ಭಾಷಾ ಪ್ರಯೋಗಗಳನ್ನು ತಿಳಿದುಕೊಳ್ಳಲು ಈ ಚಟುವಟಿಕೆ ಪೂರಕವಾಗಿದೆ. ಎರಡು ವಾಕ್ಯಗಳನ್ನು ಜೋಡಿಸುವಾಗ ಅರ್ಥ ವ್ಯತ್ಯಾಸವಾಗದಂತೆ ಅಧ್ಯಾಪಕರು ಗಮನಿಸಬೇಕು. ಮಾದರಿಯನ್ನು ಗಮನಿಸಿ ಇತರ ಸರಳವಾಕ್ಯಗಳನ್ನು ಸಂಯುಕ್ತವಾಕ್ಯವಾಗಿ ಬರೆಯಲಿ. ಬಳಿಕ ಅಧ್ಯಾಪಕರು ಸಂಯುಕ್ತ ವಾಕ್ಯಗಳನ್ನು ಕರಿಹಲಗೆಯಲ್ಲಿ ಬರೆಯುವುದು/ತಖ್ತೆಯಲ್ಲಿ ಬರೆದು ತೂಗಿ ಹಾಕುವುದು. ಮಕ್ಕಳು ತಾವು ಬರೆದುದನ್ನು ಕರಿಹಲಗೆಯಲ್ಲಿ ಬರೆದುದನ್ನು ಹೋಲಿಸಿ ನೋಡಿ ತಪ್ಪಿದ್ದರೆ ಸರಿಪಡಿಸಲಿ.

- ಆರು ಸೂತ್ರಗಳನ್ನು ಜೋಡಿಸಲು ಒಂದು ಅಡಿ ಉದ್ದದ ಮೂರು ಕೋಲುಗಳನ್ನು ಉಪಯೋಗಿಸಲಾಗಿದೆ.
- ಸೂತ್ರಧಾರ ಬೊಂಬೆಗಳನ್ನು ಕುಣಿಸುವಾಗ ಅವುಗಳು ಕುಣಿಯುತ್ತಿರುವುದು ಮಾತ್ರ ಪ್ರೇಕ್ಷಕರಿಗೆ ಕಾಣುತ್ತದೆ.
- ಪ್ರವಾಸಿಗಳು ಪಿಲಿಕುಂಜೆಯ ಪ್ರಶಾಂತ ವಾತಾವರಣಕ್ಕೆ ಬಂದು ಯಕ್ಷಗಾನದ ರಮ್ಯಾದ್ಭುತ ಸನ್ನಿವೇಶಗಳನ್ನು ವೀಕ್ಷಿಸಿದರು.
- ಗೊಂಬೆ ಆರತಿ ಬೆಳಗುವುದರೊಂದಿಗೆ ಯಜ್ಞ ಯಾಗಾದಿಗಳನ್ನು ಮಾಡುತ್ತದೆ.

## ವರದಿ ಬರೆಯಿರಿ

ವರದಿ ಬರೆಯುವುದು ಬರವಣಿಗೆಯನ್ನು ಉತ್ತಮ ಪಡಿಸಲಿರುವ ಮತ್ತು ಸೃಜನಾತ್ಮಕತೆಯನ್ನು ಪ್ರೇರೇಪಿಸುವ ಚಟುವಟಿಕೆಯಾಗಿದೆ.

ಮಕ್ಕಳನ್ನು ಗುಂಪುಗಳಾಗಿ ಮಾಡುವುದು. ಆ ಗುಂಪುಗಳಿಗೆ ಕೆಲವು ವರದಿಗಳ ಮಾದರಿಗಳನ್ನು ನೀಡುವುದು. ಅವರು ಆ ವರದಿಗಳನ್ನು ಓದಲಿ. ಬಳಿಕ ವೈಯಕ್ತಿಕವಾಗಿ ವರದಿ ತಯಾರಿಸಲಿ.

- ಕೆಲವರಿಂದ ಮಂಡನೆ
- ಗುಂಪಿನಲ್ಲಿ ಚರ್ಚೆ
- ಉತ್ತಮವಾದ ವರದಿಯನ್ನು ಆಯ್ಕೆ ಮಾಡುವುದು.

ಉತ್ತಮವಾದ ವರದಿಯನ್ನು ಆಯ್ಕೆ ಮಾಡಲು ಅನುಸರಿಸಿದ ಸೂಚಕಗಳ ಕುರಿತು ಚರ್ಚಿಸಲಿ.

**ಸೂಚಕಗಳು**

- ಚೌಕಟ್ಟು (ಪ್ರಾರಂಭ, ವಿಷಯ ವಿಸ್ತಾರ, ಮುಕ್ತಾಯ)
- ಆಶಯ ಸಮಗ್ರತೆ
- ಘಟನೆಗಳ ಕ್ರಮೀಕರಣ
- ಭಾಷಾ ಶೈಲಿ
- ಭಾಷಾ ಪ್ರಯೋಗ (ಅಕ್ಷರ, ಪದ, ವಾಕ್ಯ, ವ್ಯಾಕರಣ, ಲೇಖನ ಚಿಹ್ನೆ)

ಆಯ್ಕೆ ಮಾಡಿದ ವರದಿಯನ್ನು ಸೂಚಕಗಳ ಆಧಾರದಿಂದ ಮೌಲ್ಯನಿರ್ಣಯ ಮಾಡುವುದು. ಅಧ್ಯಾಪಕರು ತಾವು ಸ್ವತಃ ರಚಿಸಿದ ವರದಿಯನ್ನು ತಖ್ತೆಯಲ್ಲಿ ಪ್ರದರ್ಶಿಸುವುದು.

**ವರದಿ ಹೀಗೂ ಇರಬಹುದು**

ಸಿರಿಪುರ ಸರಕಾರಿ ಬುನಾದಿ ಶಾಲೆಯಲ್ಲಿ ನವೆಂಬರ್ 10ರಂದು 'ನರಕಾಸುರ ವಧೆ' ಎಂಬ ಯಕ್ಷಗಾನ ಬೊಂಬೆಯಾಟ ಪ್ರದರ್ಶನವು ನಡೆಯಿತು. ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷರಾದ ಸುಕುಮಾರ ಅರಂತೋಡು ವಹಿಸಿದ್ದರು. ಪಂಚಾಯತು ಶಿಕ್ಷಣ ಸ್ಥಾಯೀ ಸಮಿತಿಯ ಅಧ್ಯಕ್ಷರಾದ ಮುರಳಿ ಚೇನಂಗೋಡು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ 'ಬೊಂಬೆಯಾಟದಂತಹ ಪ್ರದರ್ಶನಗಳು ಮಕ್ಕಳಲ್ಲಿ ಮನೋರಂಜನೆ ಉಂಟು ಮಾಡುವುದಲ್ಲದೆ ಕಲೆಯ ಬಗ್ಗೆ ಆಸಕ್ತಿ ಮೂಡಿಸುತ್ತದೆ. ಇಂತಹ ಕಾರ್ಯಕ್ರಮಗಳು ಶಾಲೆಗಳಲ್ಲಿ ಆಗಾಗ್ಗೆ ನಡೆಯುತ್ತಿರಬೇಕು' ಎಂದು ಅಭಿಪ್ರಾಯಪಟ್ಟರು. ಬೊಂಬೆಯಾಟ ಪ್ರದರ್ಶನವನ್ನು ಶ್ರೀ ರಮೇಶ್ ಪಿಲಿಕುಂಜೆ ನೇತೃತ್ವದ ತಂಡ ಅದ್ಭುತವಾಗಿ ನಿರ್ವಹಿಸಿತು. ಬೊಂಬೆಯಾಟ ನಡೆಸಿಕೊಟ್ಟ ತಂಡದವರಿಗೆ ಶಾಲೆಯ ಪರವಾಗಿ ಸ್ಮರಣಿಕೆ ನೀಡಲಾಯಿತು. ಶಾಲಾ ಮುಖ್ಯ ಶಿಕ್ಷಕರಾದ ವಿನ್ಸೆಂಟ್ ಡಿ'ಸೋಜ ಸ್ವಾಗತಿಸಿದರು. ವಿದ್ಯಾರ್ಥಿ ನಾಯಕಿ ತಾಹಿರ ವಂದಿಸಿದಳು.

ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಸಂದರ್ಶನ ಪ್ರಶ್ನಾವಳಿ

ಮಕ್ಕಳಲ್ಲಿ ವಿವರ ಸಂಗ್ರಹಿಸುವ ಸಾಮರ್ಥ್ಯವನ್ನು ಬೆಳೆಸಬೇಕು. ಇದಕ್ಕಾಗಿ ಸಂದರ್ಶನ ಪ್ರಶ್ನಾವಳಿಯನ್ನು ತಯಾರಿಸುವ ಕೌಶಲವೂ ಬೆಳೆಯಬೇಕಲ್ಲವೇ?

## ಸಂದರ್ಶನ ಪ್ರಶ್ನಾವಳಿ ತಯಾರಿಸುವ ವಿಧಾನ

- ಸಂದರ್ಶನ ಪ್ರಶ್ನಾವಳಿಯ ಅವಶ್ಯಕತೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು.
- ವೈಯಕ್ತಿಕವಾಗಿ ಸಂದರ್ಶನ ಪ್ರಶ್ನಾವಳಿಯ ತಯಾರಿ
- ಕೆಲವರಿಂದ ಮಂಡನೆ
- ಪ್ರಶ್ನಾವಳಿಯ ಕುರಿತು ಚರ್ಚೆ ನಡೆಸುವುದು

❑ ಕಲಾವಿದನ ಕುರಿತು ಸಮಗ್ರ ವಿವರಗಳನ್ನು ಸಂಗ್ರಹಿಸಲಿರುವ ಪ್ರಶ್ನೆಗಳಿವೆಯೇ?

❑ ಕಲಾವಿದನಿಗೆ ಸ್ವ ಅಭಿಪ್ರಾಯಗಳನ್ನು ಸಂದೇಶಗಳನ್ನು ನೀಡುವ ಪ್ರಶ್ನೆಗಳಿವೆಯೇ?

❑ ಪ್ರಶ್ನೆಗಳು ಅನುಕ್ರಮವಾಗಿವೆಯೋ?

❑ ಸಂದರ್ಶಕರು ವಿವರ ನೀಡುವಂತೆ ಪ್ರೇರೇಪಿಸುವ ಪ್ರಶ್ನೆಗಳಾಗಿವೆಯೇ?

❑ ಭಾಷಾ ಪ್ರಯೋಗ ಉತ್ತಮವಾಗಿದ್ದು ಪ್ರಶ್ನಾವಳಿ ಆಕರ್ಷಕವಾಗಿದೆಯೋ?

- ಗುಂಪಿನಲ್ಲಿ ಕುಳಿತು ತಾವು ರಚಿಸಿದ ಪ್ರಶ್ನಾವಳಿಯನ್ನು ಉತ್ತಮಪಡಿಸುವುದು.
- ಅತ್ಯುತ್ತಮವಾದ ಪ್ರಶ್ನಾವಳಿಯನ್ನು ಗುಂಪಿನಲ್ಲಿ ಆಯ್ಕೆ ಮಡುವುದು.
- ಪ್ರತಿಯೊಂದು ಗುಂಪು ಮಂಡಿಸುವುದು
- ಅಧ್ಯಾಪಕರು ತಾವು ತಯಾರಿಸಿದ ಸಂದರ್ಶನ ಪ್ರಶ್ನಾವಳಿಯನ್ನು ಮಂಡಿಸುವುದು.

**ಸಂದರ್ಶನ**

ನಮ್ಮ ಊರಿನ ಪ್ರಸಿದ್ಧ ಕಲಾವಿದರಾದ ತಮ್ಮನ್ನು ಸಂದರ್ಶಿಸಲು ನಾವು ಸಂತೋಷಪಡುತ್ತೇವೆ. ನಮ್ಮ ಶಾಲೆಯ ತಂಡವನ್ನು ಮುನ್ನಡೆಸುವವರು ಶಿಕ್ಷಕರಾದ ರಘುರಾಮ ಹೊಳ್ಳರು. ತಂಡದ ಸದಸ್ಯರಾದ ನಾವು ನಿಮ್ಮೊಂದಿಗೆ ಒಂದಿಷ್ಟು ಸಮಯ ಮಾತನಾಡ ಬಯಸುತ್ತೇವೆ ಎಂದು ಹೇಳಿದ ಬಳಿಕ ಪ್ರಶ್ನೆ ಕೇಳಬಹುದು.

**ಸಂದರ್ಶನ ಪ್ರಶ್ನೆಗಳು ಹೀಗೂ ಇರಬಹುದೇ?**

- ತಾವು ಹುಟ್ಟಿದ ಊರು ಯಾವುದು?
- ನಿಮ್ಮ ತಂದೆ, ತಾಯಿಯ ಹೆಸರು ಏನು? ಕುಟುಂಬದ ಇತರ ಸದಸ್ಯರು ಯಾರು?
- ಏನು ಮಾಡುತ್ತಿದ್ದಾರೆ?
- ಹಿರಿಯರು ನಿಮ್ಮ ಹಾಗೆಯೇ ಕಲಾವಿದರಾಗಿದ್ದಾರೆಯೇ?
- ನಿಮಗೆ ಈ ಕಲೆಯಲ್ಲಿ ಅಭಿರುಚಿ ಮೂಡಲು ಕಾರಣವೇನು?
- ನಿಮ್ಮ ಗುರುಗಳು ಯಾರು?
- ಎಷ್ಟು ವರ್ಷಗಳಿಂದ ಈ ಕಲೆಯಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡಿದ್ದೀರಿ?
- ನಿಮಗೆ ವೃತ್ತಿರಂಗದಲ್ಲಿ ಆದ ಒಳ್ಳೆಯ ಅನುಭವಗಳು ಯಾವುವು? ತಿಳಿಸುವಿರಾ?
- ವೃತ್ತಿ ಜೀವನದಲ್ಲಿ ನೀವು ಎದುರಿಸಿದ ಸವಾಲುಗಳೇನು?
- ನಿಮಗೆ ಸಂದ ಮನ್ನಣೆಗಳ ಬಗ್ಗೆ ತಿಳಿಸುವಿರಾ?
- ಇಂದಿನ ಯುವ ಪೀಳಿಗೆಗೆ ನೀವು ನೀಡುವ ಸಂದೇಶವೇನು?
- ಕಲೆಯ ಉನ್ನತೋನ್ನತ ಅಭಿವೃದ್ಧಿಗೆ ನಿಮ್ಮ ಸಲಹೆ ಸೂಚನೆಗಳೇನು?
- ಎಳೆಯ ಮಕ್ಕಳಾದ ನಮಗೆ ನೀವು ನೀಡುವ ಮಾರ್ಗದರ್ಶನವೇನು?

**ಟಿಪ್ಪಣಿ ತಯಾರಿಸಿರಿ**

ಒಂದು ವಿಷಯದ ಕುರಿತು ಸಮಗ್ರ ವಿಚಾರಗಳನ್ನು ಸರಳವಾಗಿಯೂ ಸಂಕ್ಷಿಪ್ತವಾಗಿಯೂ ಬರೆಯುವುದೇ ಟಿಪ್ಪಣಿ.ಈ ಸಾಮರ್ಥ್ಯವನ್ನು ಬೆಳೆಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ.

**ಲಘು ಚರ್ಚೆ:** ಯಾವುದರ ಕುರಿತು ಟಿಪ್ಪಣಿ ತಯಾರಿಸಬೇಕು? ವೇದಿಕೆಯ ಬಗ್ಗೆ ಪಾಠ ಪುಸ್ತಕದಲ್ಲಿ ಬಂದಿದೆಯೇ? ಆ ವಿಚಾರಗಳನ್ನು ಮಕ್ಕಳು ಗುರುತಿಸಲಿ. ವೇದಿಕೆಯ ವಿಚಾರಗಳನ್ನು ಮಾತ್ರ ಗುರುತಿಸುವಂತೆ ಹೇಳಬೇಕು.

- ಮಕ್ಕಳು ವೈಯಕ್ತಿಕವಾಗಿ ಟಿಪ್ಪಣಿ ತಯಾರಿಸಲಿ.
- ಕೆಲವರು ಮಂಡಿಸಲಿ
- ಗುಂಪಿನಲ್ಲಿ ಕ್ರೋಡೀಕರಣ
- ಉತ್ತಮವಾದುದರ ಆಯ್ಕೆ
- ತರಗತಿಯಲ್ಲಿ ಮಂಡನೆ

**ಸೂಚಕಗಳು**

- ಸಮಗ್ರ ಆಶಯವನ್ನು ಸಂಕ್ಷಿಪ್ತವಾಗಿ ಬರೆಯಲಾಗಿದೆ.
- ಆಶಯಗಳು ವಸ್ತುನಿಷ್ಠವಾಗಿವೆ.
- ಆಶಯಗಳನ್ನು ಕ್ರಮೀಕರಿಸಿ ಬರೆಯಲಾಗಿದೆ.
- ಯೋಗ್ಯವಾದ ಭಾಷಾ ಪ್ರಯೋಗ (ಅಕ್ಷರ, ಪದ, ವಾಕ್ಯ, ವ್ಯಾಕರಣ).

**ಟಿಪ್ಪಣಿ ಹೀಗೂ ಇರಬಹುದು**

ಯಕ್ಷಗಾನ ಬೊಂಬೆಯಾಟದ ವೇದಿಕೆ ಯಕ್ಷಗಾನ ಬಯಲಾಟದ ವೇದಿಕೆಗಿಂತ ವ್ಯತ್ಯಸ್ತವಾಗಿದೆ. ರಂಗಸ್ಥಳದ ಮೂರು ಬದಿಗಳನ್ನು ಪರದೆಗಳಿಂದ ಮುಚ್ಚಲಾಗುತ್ತಿದೆ. ವೇದಿಕೆಯು 10ಅಡಿ ಉದ್ದ, 10 ಅಡಿ ಅಗಲ ಮತ್ತು 5 ಅಡಿ ಎತ್ತರವಿದೆ. ಈ ವೇದಿಕೆಯ ಎದುರು ಪರದೆಯ ಹಿಂದೆ ಇನ್ನೊಂದು ಕಿರಿದಾದ ಪರದೆಯನ್ನು ಎರಡು ಅಡಿ ಅಂತರದಲ್ಲಿ ಕಟ್ಟಲಾಗುತ್ತದೆ. ಈ ಪರದೆಯ ಹಿಂದೆ ಮರೆಯಾಗಿ ನಿಂತು ಸೂತ್ರಧಾರ ಬೊಂಬೆಗಳನ್ನು ಕುಣಿಸುತ್ತಾನೆ.

## ಆಲ್ಬಂ ತಯಾರಿಸಿರಿ

ಜನಪದ ಕಲೆಗಳಲ್ಲಿ ಹಲವು ವಿಧಗಳಿವೆ. ಈ ಕಲೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಮಕ್ಕಳು ಸಂಗ್ರಹಿಸಿಕೊಂಡು ಬರಲಿ. ಆ ಚಿತ್ರಗಳನ್ನು ವಿವಿಧ ಕಲೆಗಳಿಗನುಸಾರವಾಗಿ ವರ್ಗೀಕರಿಸಿ, ಆಲ್ಬಂ ತಯಾರಿಸಲಿ.

## ವಿವಿಧ ಕಲೆಗಳು

- ಯಕ್ಷಗಾನ ಬಯಲಾಟ
- ಯಕ್ಷಗಾನ ಬೊಂಬೆಯಾಟ
- ಭೂತಾರಾಧನೆ
- ನಾಗಾರಾಧನೆ
- ಮುಸ್ಲಿಂ ಜಾನಪದ
- ಕ್ರೈಸ್ತ ಜಾನಪದ
- ಡೊಳ್ಳು ಕುಣಿತ ಇತ್ಯಾದಿ.

## ಪೂರಕ ಓದಿಗೆ

# ತೊಗಲು ಗೊಂಬೆಯಾಟ

ಕರ್ನಾಟಕದ ಗೊಂಬೆಯಾಟದ ಪ್ರಕಾರಗಳಲ್ಲಿ ತೊಗಲು ಗೊಂಬೆಗೆ ಪ್ರಧಾನ ಸ್ಥಾನವಿದೆ. ಇದು ಸಿಳ್ಳೆಖ್ಯಾತ ಎಂಬ ಜನರಲ್ಲಿ ವಂಶಪಾರಂಪರ್ಯವಾಗಿ ಬೆಳೆದು ಬಂದಿರುವ ಕಲೆ. ಈ ಸಿಳ್ಳೆಕ್ಯಾತ ಅಥವಾ ಕಿಳ್ಳೆಕ್ಯಾತ ಜನಾಂಗ ಮೂಲತಃ ರತ್ನಗಿರಿ ಜಿಲ್ಲೆಗೆ ಸೇರಿದವರು. ಇವರು ಮರಾಠಿ ಮಿಶ್ರಿತ ತೆಲುಗು ಅಥವಾ ಕನ್ನಡ ಮಾತನಾಡುತ್ತಾರೆ. ತೊಗಲು ಗೊಂಬೆಯಾಡಿಸುವವರನ್ನು ಕಿಳ್ಳೆಖ್ಯಾತರು, ಸಿಳ್ಳೆಖ್ಯಾತರು, ಗೊಂಬೆರಾಮರು, ಗೊಂಬೆಯೋರು ಎಂಬ ಹಲವಾರು ಹೆಸರಿನಿಂದ ಕರೆಯುತ್ತಾರೆ. ತೆಲುಗಲ್ಲಿ

ಇವನರನ್ನು ಬೊಮ್ಮಲಾಟವಾಳ್ಳು ಎನ್ನುವರು.

ಇವರ ಮನೆ ಮಾತು ಮರಾಠಿ. ಮಹಾರಾಷ್ಟ್ರದ ಕಡೆಯಿಂದ ವಲಸೆ ಬಂದ ಜನ ಇವರು ಎಂಬುದಕ್ಕೆ ಸಾಕಷ್ಟು ಆಧಾರಗಳು ಸಿಗುತ್ತವೆ. ವಲಸೆ ಬರಲು ಕಾರಣವೇನೇ ಇರಲಿ. ಇವರು ಬಂದ ಕಡೆಯೇ ಹೊಂದಿಕೊಂಡಿರುವುದಂತೂ ನಿಜ. ತೊಗಲು ಗೊಂಬೆಯಾಟ ಉದ್ಯೋಗಿ ಕಲೆಯಾದ್ದರಿಂದ ಇವರು ಒಂದೆಡೆ ನೆಲೆಸಲು ಸಾಧ್ಯವಾಗುವುದಿಲ್ಲ. ಇವರು ಹಳ್ಳಿ ಹಳ್ಳಿಗೆ ಹೋಗಿ ಗೊಂಬೆಗಳನ್ನು ಆಡಿಸಿ ಜನರನ್ನು ಸಂತೋಷಪಡಿಸಿ ಅವರು ನೀಡಿದ ದವಸ, ಧಾನ್ಯ, ಹಣ ಮುಂತಾದ ಕಾಣಿಕೆಗಳನ್ನು ಸಂಗ್ರಹಿಸಿ ಜೀವನ ಸಾಗಿಸುತ್ತಾರೆ.

ಇವರು ಎಲ್ಲಾ ಸಂದರ್ಭಗಳಲ್ಲೂ ಒಂದೇ ರೀತಿಯ ಆಟ ಪ್ರದರ್ಶಿಸುವುದಿಲ್ಲ. ತಿಥಿ ಸಂದರ್ಭದಲ್ಲಿ ಸ್ವರ್ಗಾರೋಹಣ ಪ್ರಸಂಗ, ಮದುವೆ ಮತ್ತಿತರ ಸಂದರ್ಭದಲ್ಲಿ ಗಿರಿಜಾ ಕಲ್ಯಾಣ ಪ್ರಸಂಗ ಆರಿಸಿಕೊಳ್ಳುತ್ತಾರೆ. ಮಳೆ ಬರದೆ ಕ್ಷಾಮ ಒದಗಿದಾಗ ಮಳೆ ಹುಯ್ಯಲಿ ಎಂದು ತೊಗಲು ಗೊಂಬೆ ಆಟ ಆಡಿಸುವುದುಂಟು. ಕಲಾವಿದರು ಅನೇಕ ಆಟಗಳ ಸಾಹಿತ್ಯವನ್ನು ಬಾಯಿಪಾಠ ಮಾಡಿಕೊಂಡಿರುತ್ತಾರೆ. ಆರಂಭದಲ್ಲೂ ಗಣೇಶನ ಪೂಜೆ, ಮುಕ್ತಾಯದಲ್ಲೂ ಗಣೇಶನ ಪೂಜೆ, ಸ್ತುತಿ ಇರುತ್ತದೆ. ಕಲಾ ಪ್ರದರ್ಶನದಲ್ಲಿ ಹೆಂಗಸರೂ ಭಾಗವಹಿಸುತ್ತಾರೆ. ಸ್ತ್ರೀ ಪಾತ್ರಗಳ ಗೊಂಬೆಗಳನ್ನು ಕುಣಿಸುವಲ್ಲಿ ಹಾಡು ಮತ್ತು ಸಂಭಾಷಣೆಗಳಿಗೆ ಸ್ತ್ರೀಯೇ ಕಂಠದಾನ ಮಾಡುತ್ತಾಳೆ.

ಮೊದಲು ಗೊಂಬೆರಾಮರು ತೊಗಲು ಗೊಂಬೆಯನ್ನು ಜಿಂಕೆಯ ಚರ್ಮದಿಂದ ಮಾಡುತ್ತಿದ್ದರು. ಆದರೆ ಈಗ ಜಿಂಕೆಯ ಚರ್ಮ ಬಳಸುವರು. ತೊಗಲು ಗೊಂಬೆ ಆಡಿಸುವುದು ಒಂದು ಕಲೆಯಾದರೆ ಆ ಗೊಂಬೆ ಮಾಡುವುದು ಒಂದು ಕುಶಲ ಕಲೆ. ಚರ್ಮ ಹದಮಾಡಿ ಒಣಗಿಸಬೇಕು. ಪಾತ್ರಗಳ ಲಕ್ಷಣ ಹಾಗೂ ಔಚಿತ್ಯಕ್ಕೆ ತಕ್ಕಂತೆ ತೊಗಲನ್ನು ಕತ್ತರಿಸಿ ಯಾವ ಪಾತ್ರಗಳಿಗೆ ಯಾವ ಬಣ್ಣ ಹಾಕಬೇಕು ಎಂಬುದನ್ನು ನೋಡಿಕೊಂಡು ಬಣ್ಣ ಹಾಕುತ್ತಾರೆ. ಬಿದಿರಿನ ಕಡ್ಡಿಯನ್ನು ಪೆನ್ನಿನ ರೀತಿಯಲ್ಲಿ ಬಳಸಿ ಚಿತ್ರಗಳ ರೂಪ ರಚಿಸುತ್ತಾರೆ. ವಿವಿಧ ರೀತಿಯ ಸಣ್ಣ ಉಳಿಗಳನ್ನು ಬಳಸಿ ಚಿತ್ರಗಳಲ್ಲಿ ಬೇಕಾದ ಕಡೆ ರಂಧ್ರ ಮಾಡಿ ಬೆಳಕು ತೂರಿ ಬರುವಂತೆ ಮಾಡುತ್ತಾರೆ. ಗೊಂಬೆಗಳು ಚಲಿಸುವಂತೆ ಅನುಕೂಲವಾಗಲು ಕೈ ಕಾಲು ಕತ್ತುಗಳಿಗೆ ಕೀಲುಗಳಿರುತ್ತದೆ. ಕೈಚಳಕದಿಂದ ಆಡಿಸಲು ಹಿಂದಕ್ಕೆ ಬಿದಿರಿನ ಕಡ್ಡಿಯನ್ನು ಕಟ್ಟಿರುತ್ತಾರೆ. ಗೊಂಬೆಯಾಡಿಸುವುದು ಆಡಿಸುವವನ ಕೈ ಚಳಕದ ಮೇಲೆ ನಿಂತಿರುತ್ತದೆ. ಗೊಂಬೆಗಳು ಸುಮಾರು ಎರಡು ಮೂರು ಅಡಿ ಎತ್ತರ ಇರುತ್ತವೆ. ಕೆಲವೆಡೆ ಮಾನವಾಕೃತಿಯ ಅಳತೆಯ ಗೊಂಬೆಗಳು ಇರುವುದೂ ಉಂಟು. ಗೊಂಬೆಗಳು ನೋಟಕ್ಕೆ ಪುರಾಣ ಪುರುಷರ ಕಲ್ಪನೆ ಉಂಟು ಮಾಡುತ್ತವೆ. ಗೊಂಬೆಗಳನ್ನು ತಯಾರಿಸುವಾಗ ಪಾತ್ರದ ಹಿರಿಮೆ, ಗಂಭೀರತೆ, ಜನ್ಮಕಾಲ, ಬೆಳವಣಿಗೆ ಕಾಲ ಹೀಗೆ ವಿವಿಧ ಹಂತಗಳಿಗೆ ಅನುಗುಣವಾಗಿ ಅವುಗಳ ಆಕಾರವೂ ಸಹ ಬದಲಾವಣೆ ಹೊಂದುತ್ತದೆ. ಎಂಟರಿಂದ ಹತ್ತು ಬಿದಿರುಗಳನ್ನು ಬಳಸಿ ಮಂಟಪದ ರೀತಿ ರಚಿಸಿ ಉದ್ದದ ಬಿಳೀ ಬಟ್ಟೆ ಸುಕ್ಕಿರದಂತೆ ಕಟ್ಟುತ್ತಾರೆ. ಪೆಟ್ರೋಮ್ಯಾಕ್ಸ್ ಇಲ್ಲವೇ ವಿದ್ಯುಚ್ಛಕ್ತಿ ದೀಪದ ಬೆಳಕು ಬಳಸುತ್ತಾರೆ. ತೆರೆಯ ಹಿಂದೆ ಕುಳಿತ ಕಲಾವಿದರು ಯಾರೂ ಪ್ರೇಕ್ಷಕರಿಗೆ ಕಾಣಿಸುವುದಿಲ್ಲ. ತೆರೆಯ ಮೇಲೆ ಪಡಿನೆಳಲಾಗುವ ಗೊಂಬೆಗಳನ್ನು ಬಿಟ್ಟು ಉಳಿದ ಗೊಂಬೆಗಳು ಯಾರಿಗೂ ಕಾಣುವುದಿಲ್ಲ. ಈ ಆಟ ಜನಸಾಮಾನ್ಯರಿಗೆ ಸುಲಭವಾಗಿ ಪೌರಾಣಿಕ ಕಥೆಗಳನ್ನು ಹೇಳುವ ಮಾಧ್ಯಮ. ತೊಗಲು ಗೊಂಬೆಯಾಟ ಆಡಿಸಿದರೆ ಊರಿಗೆ ತಗುಲಿದ ರೋಗ ರುಜಿನ ಅನಿಷ್ಟಗಳು ತೊಲಗುತ್ತದೆಂದು, ಮಳೆ ಬಾರದಿದ್ದಾಗ ಆಡಿಸಿದರೆ ಮಳೆ ಬೀಳುವುದೆಂದು ಜನರಲ್ಲಿ ನಂಬಿಕೆಯಿದೆ. ರಾತ್ರಿ 9ರಿಂದ ಪ್ರಾರಂಭಿಸಿ ಮಧ್ಯರಾತ್ರಿ 2 ಗಂಟೆ ಅಥವಾ 3 ಗಂಟೆಯ ವರೆಗೂ ಆಟ ನಡೆಯುತ್ತದೆ.

(ಸಂಗ್ರಹ)

## ಸೂತ್ರದ ಬೊಂಬೆಯಾಟ

ಕರ್ನಾಟಕ ಜನಪದ ಕಲೆಗಳಲ್ಲಿ ಅತ್ಯಂತ ಪುರಾತನ ಕಲೆಗಳ ಸಾಲಿಗೆ ಸೇರಿರುವ ಕಲೆ ಸೂತ್ರದ ಬೊಂಬೆಯಾಟ. ಈಗ ಬೊಂಬೆಯಾಟ ನೋಡುವುದೆಂದರೆ 'ದುರ್ಬಿನ ಹಿಡಿದು ಹುಡುಕಾಡುವ ಪರಿಸ್ಥಿತಿ ಬಂದೊದಗಿದೆ. ಇತ್ತೀಚಿನ ದಿನಗಳಲ್ಲಿ ಆಧುನಿಕ ತಂತ್ರಜ್ಞಾನದ ಗುಂಗಿನಲ್ಲಿರುವ ಜನರಿಗೆ ಹಿಂದಿನ ಜನಪದ ಕಲೆಗಳ ಚಿಂತನೆ ಮಾಡುವಷ್ಟು ತಾಳ್ಮೆ ಇಲ್ಲದಿರುವುದರಿಂದ ಕರ್ನಾಟಕದ ಅನೇಕ ಜನಪದ ಕಲೆಗಳು ಹುಟ್ಟಿಸಿದ ಜನತೆಯೊಂದಿಗೇ ಕಾಲ್ಕಿತ್ತರೆ, ಉಳಿದವುಗಳು ತಮ್ಮ ಕೊನೆಯ ಗಳಿಗೆಯನ್ನು

ಎಣಿಸುತ್ತಾ ಕುಳಿತಿವೆ! ಈಗ ಇವುಗಳ ಪಾಲಿಗೆ ಸೂತ್ರದ ಬೊಂಬೆಯಾಟವು ಸೇರುತ್ತಿರುವುದು ಶೋಚನೀಯ. ಜಾನಪದ ಲೋಕದಲ್ಲಿ ಅತ್ಯಂತ ಕೈಚಳಕಯುತ ಪರಿಣಾಮಕಾರಿ, ಸೃಜನಾತ್ಮಕ ಕಲೆ ಇದು. ಸುಗ್ಗಿಯ ಕಾಲದಲ್ಲಿ ಹಳ್ಳಿಯ ಜನರು ತಮ್ಮ ಸಂತೋಷವನ್ನು ವ್ಯಕ್ತಪಡಿಸುವ ಕಲೆಯೆಂದರೆ ಸೂತ್ರದ ಬೊಂಬೆಯಾಟ.

ದಾರದ ಹಿಡಿತದಲ್ಲಿ ಆಡಿಸಿದಂತೆ ಕುಣಿಯುವ ಬೊಂಬೆಯೇ ಸೂತ್ರದ ಬೊಂಬೆ ತೆರೆಯ ಮರೆಯಲ್ಲಿ ನಿಂತು ಆಡಿಸುವಾತನ ಕೈ ಚಳಕದಂತೆ ಕುಣಿಯುವ ಬೊಂಬೆ ನೋಡುಗರನ್ನು ಮೂಗಿನ ಮೇಲೆ ಬೆರಳಿಡುವಂತೆ ಮಾಡುತ್ತದೆ. ಬೊಂಬೆಯ ದಾರಗಳು ನೋಡುಗರಿಗೆ ಎಳ್ಳಷ್ಟು ಕಾಣದು. ಮನೋರಂಜನೆಗಾಗಿ ಹುಟ್ಟಿಕೊಂಡ ಸೂತ್ರದ ಬೊಂಬೆಯಾಟ ಜನಾಕರ್ಷಣೆಯ ಕೇಂದ್ರಬಿಂದುವಾಗಿತ್ತು. ಆದರೆ ಆಧುನಿಕತೆಯ ಬಿರುಗಾಳಿ ಬೀಸುತ್ತಿದ್ದಂತೆ ಇದು ಧೂಳುಮಯವಾಗಲಾರಂಭಿಸಿತು. ಈ ಕಲೆಯನ್ನು ಅನೇಕ ಮಂದಿ ತಮ್ಮ ಜೀವನೋಪಾಯಕ್ಕಾಗಿಯೂ ಸ್ವೀಕರಿಸಿದ್ದರು. ಆದರೆ ಇದು ಇಂತಹ ಜನಾಂಗಕ್ಕೆ ಎಂದು ಸೀಮಿತವಾಗಿರಲಿಲ್ಲ. ಬೊಂಬೆಯಾಟದಲ್ಲಿ ಅನೇಕ ಪ್ರಕಾರಗಳಿದ್ದು ತೊಗಲು ಬೊಂಬೆಯಾಟ, ಸೂತ್ರದ ಗೊಂಬೆಯಾಟ, ತೋಲ್ಪವ, ಕೂತ್ತು ಮೊದಲಾದವುಗಳು ಭಾರತದಲ್ಲಿ ಪ್ರಚಲಿತದಲ್ಲಿರುವ ಬೊಂಬೆಯಾಟಗಳು.

ಸೂತ್ರದ ಬೊಂಬೆಯಾಟ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದ ಜನಪದ ಕಲೆಗಳಲ್ಲೊಂದು. ಇದರೊಂದಿಗೆ ತೊಗಲು ಗೊಂಬೆಯಾಟ ಕರ್ನಾಟಕಕ್ಕೆ ವಲಸೆ ಬಂದು ಇಲ್ಲಿಯ ಕಲೆಗಳಲ್ಲೊಂದಾಗಿ ಸೇರಿತು. ಬೊಂಬೆಗಳನ್ನು ಸಾಗುವಾನಿ,ಹತ್ತಿ ಮೊದಲಾದ ಹಗುರವಾದ ಮರಗಳಿಂದ ತಯಾರಿಸಲಾಗುತ್ತಿದೆ. ಇವನ್ನು ಗಂಡು – ಹೆಣ್ಣು, ನಕಲಿ ಗೊಂಬೆ ಎಂದು ಮೂರು ಭಾಗಗಳಾಗಿ ವಿಭಜಿಸಲಾಗುತ್ತಿದೆ. ಕೀಲು ಅಥವಾ ಗಟ್ಟಿಯಾದ ದಾರಗಳಿಂದ ಕೈ,ಕಾಲು, ಕುತ್ತಿಗೆಯನ್ನು ಪ್ರತ್ಯೇಕವಾಗಿ ಜೋಡಿಸಲಾಗುತ್ತದೆ. ಈ ದಾರಗಳ ತುದಿಗಳನ್ನು ಒಂದು ಅಡ್ಡಪಟ್ಟಿಗೆ ಬಿಗಿಯಲಾಗುತ್ತದೆ. ಯಕ್ಷಗಾನದ ಪಾತ್ರಗಳಿಗಿರುವಂತೆಯೇ ವಸ್ತ್ರಾಲಂಕಾರ ಹಾಗೂ ರೌದ್ರ, ಸೌಮ್ಯ, ಕೋಮಲ ಸ್ವಭಾವಕ್ಕೆ ಸರಿಯಾದ ಬಣ್ಣಗಳನ್ನು ಬೊಂಬೆಗಳಿಗೆ ಲೇಪಿಸಲಾಗುತ್ತದೆ.

ಪಾತ್ರಗಳಿಗೆ ತಕ್ಕಂತೆ ಆಯುಧಗಳನ್ನು ಕೈಗಳಿಗೆ ಹೊಂದಿಸಲಾಗುತ್ತದೆ. ಗಂಡು ಬೊಂಬೆಗಳನ್ನು ಕುಣಿಸುವಾಗ ಅದಕ್ಕೊಪ್ಪುವ ವೀರ ಗಂಭೀರ ನಿಲುವುಗಳು ಪ್ರದರ್ಶಿತವಾಗುವಂತೆಯೂ ಹೆಣ್ಣು ಬೊಂಬೆಗಳನ್ನು ಕುಣಿಸುವಾಗ ನಾಚಿಕೆ, ವಯ್ಯಾರಗಳನ್ನು ತೋರಿಸುವಂತೆಯೂ ಸೂತ್ರಧಾರನು ತನ್ನ ಕೈಯ ಚಮತ್ಕಾರವನ್ನು ಹೊರಸೂಸುತ್ತಾನೆ. ಬೊಂಬೆಯಾಟವಾಡಿಸುವುದರಿಂದ ದನಕರುಗಳಿಗೆ ಬರುವ ರೋಗದ ನಿವಾರಣೆ, ಮಳೆ, ಸಂತಾನ ಪ್ರಾಪ್ತಿ ಎಂಬ ನಂಬಿಕೆ ಗ್ರಾಮಾಂತರ ಜನರಲ್ಲಿದೆ. ಜಾತ್ರೆ ಉತ್ಸವಗಳಲ್ಲಿ ಆಟ ಆಡಿಸಲಾಗುತ್ತದೆ. ಮದುವೆಯ ಸಂದರ್ಭದಲ್ಲಿ ಮನೋರಂಜನೆಗಾಗಿ ಬೊಂಬೆಯಾಟವನ್ನು ನಡೆಸಲಾಗುತ್ತದೆ. ಇದೊಂದು ಕೈಚಳಕದಿಂದ ಆಡಿಸುವಂತಹ ಕುತೂಹಲಕಾರಿ ಪ್ರದರ್ಶನ. ಪೌರಾಣಿಕ ಕಥೆ, ಜಾನಪದ ಕಥೆಗಳನ್ನು ಕೂಡಾ ಇಲ್ಲಿ ಪ್ರದರ್ಶಿಸಲಾಗುತ್ತದೆ. ಹಾಸ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಲಾಗುವುದರಿಂದ ಕಲಾಸಕ್ತರನ್ನು ರಂಜಿಸುತ್ತದೆ.

ರಂಗಸ್ಥಳದಲ್ಲಿ ರಂಗಕ್ಕೆ ಬಿಳಿಯ ಪಂಚೆಯೊಂದನ್ನು ಅಡ್ಡಕ್ಕೆ ಕಟ್ಟಿ ಪರದೆಯ ಹಿಂದೆ ಸುಮಾರು ಆರೇಳು ಮಂದಿ ಕಲಾವಿದರು ಕುಳಿತುಕೊಳ್ಳುತ್ತಾರೆ. ಒಬ್ಬ ಏಕಕಾಲದಲ್ಲಿ ಎರಡು ಬೊಂಬೆಗಳನ್ನು ಆಡಿಸಬಲ್ಲ. ಸೂತ್ರದ ಕಡ್ಡಿಗಳನ್ನು ಕೈ ಬೆರಳಿಗೆ ಸಿಕ್ಕಿಸಿಕೊಂಡು ಕೈಚಳಕದಿಂದ ಕುಣಿಸಲಾಗುತ್ತದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಬಹಳ ಏಕಾಗ್ರತೆಯಿಂದ ಕಾರ್ಯ ನಿಭಾಯಿಸಬೇಕಾಗುತ್ತದೆ. ಕಥೆಗಳಿಗನುಸಾರವಾಗಿ ಬೊಂಬೆಗೆ ಜೀವ ತುಂಬುವ ಜವಾಬ್ದಾರಿ ಆತನದ್ದಾಗಿರುತ್ತದೆ. ಸ್ಪರ್ಧಾತ್ಮಕ ಯುಗದಲ್ಲಿ ನಶಿಸುತ್ತಿರುವ ಇಂತಹ ಜನಪದ ಕಲೆಗಳ ಬಗ್ಗೆ ಎಲ್ಲರೂ ಗಮನಹರಿಸಿ ಇದರ ಬಗ್ಗೆ ಆಳವಾದ ಅಧ್ಯಯನ ನಡೆಸಬೇಕಾಗಿದೆ. ಜನಪದ ಸಾಹಿತ್ಯ ಅತ್ಯಂತ ಕುತೂಹಲಕಾರಿಯಾಗಿದ್ದು ಆ ಸಾಹಿತ್ಯದ ಸಂಗ್ರಹವೂ ಕೂಡಾ ಆಗಬೇಕಿದೆ. ನಾಶದಂಚಿನಲ್ಲಿರುವ ಜನಪದ ಕಲೆಗಳನ್ನು ಕೊಲೆ ಮಾಡದೆ ಅದಕ್ಕೆ ಮತ್ತಷ್ಟು ಜೀವ ತುಂಬುವ ಕಾರ್ಯವನ್ನು ಮಾಡಬೇಕಾದ ಜವಾಬ್ದಾರಿ ಇಂದಿನ ಯುವ ಪೀಳಿಗೆಯ ಮೇಲಿದೆ.

(ಸಂಗ್ರಹ)

# 4. ವಾತ್ಸಲ್ಯ

## ಪತ್ರಿಕಾ ವಾರ್ತೆ

**ಜಾನಪದ ಪುರಸ್ಕಾರ ಪಡೆದ ಪೋರಿ!**

ಹುಣಸೂರು ಡಿಸೆಂಬರ್ 10 : ಎಂಟು ವರ್ಷದ ಬಾಲಕಿ ರಮ್ಯ ಈ ವರ್ಷದ ಜಾನಪದ ಅಕಾಡೆಮಿ ಪ್ರಶಸ್ತಿಯನ್ನು ಪಡೆದು ಎಲ್ಲರ ಹುಬ್ಬೇರುವಂತೆ ಮಾಡಿದ್ದಾಳೆ. ಅವಳು ಜನಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವುದಲ್ಲದೆ ಸಾವಿರಕ್ಕಿಂತಲೂ ಹೆಚ್ಚಿನ ಹಾಡುಗಳನ್ನು ಕಂಠಪಾಠ ಹೇಳುತ್ತಾಳೆ. ಅಜ್ಜಿ ಹೊನ್ನಮ್ಮ ತನ್ನ ಸಾಧನೆಗೆ ಪ್ರೇರಣೆಯೆಂದು ಹೇಳಲು ಮರೆಯದೇ ಇರುವುದು ಅವಳ ಸೌಜನ್ಯವನ್ನು ಎತ್ತಿ ತೋರಿಸುತ್ತದೆ.

ಈ ಮೇಲಿನ ಪತ್ರಿಕಾ ವಾರ್ತೆಯನ್ನು ತಖ್ತೆಯಲ್ಲಿ ಬರೆದು ಪ್ರದರ್ಶಿಸುವುದು, ಮಕ್ಕಳು ಮೌನವಾಗಿ ಓದಲಿ. ಬಳಿಕ ವಾರ್ತೆಯಲ್ಲಿರುವ ವಿಷಯದ ಕುರಿತು ಚರ್ಚಿಸುವುದು.

- ವಾರ್ತೆ ಯಾವುದರ ಕುರಿತಾಗಿದೆ?
- ಪುರಸ್ಕಾರ ಸಿಗಲು ಕಾರಣವೇನು?
- ಅವಳ ಸಾಧನೆಗೆ ಪ್ರೇರಣೆ ಯಾರು?

ನಿಮಗೆ ಜನಪದ ಹಾಡುಗಳು ಇಷ್ಟವೇ?

ಮಕ್ಕಳು ತಿಳಿದಿರುವ ಯಾವುದಾದರೂ ಜನಪದ ಹಾಡನ್ನು ಹಾಡಲಿ.

## ಹಾಡಿರಿ

ಮಕ್ಕಳು ಗುಂಪುಗಳಲ್ಲಿ ಕುಳಿತು ತಮ್ಮದೇ ಆದ ರೀತಿಯಲ್ಲಿ ಹಾಡಲು ಸಿದ್ಧತೆ ನಡೆಸಲಿ. ಬಳಿಕ ಪ್ರತಿಯೊಂದು ಗುಂಪು ಹಾಡಲಿ. ಹಾಡುವಿಕೆಯನ್ನು ಉಳಿದ ಗುಂಪುಗಳು ಸೂಚಕಗಳಿಗನುಗುಣವಾಗಿ ಮೌಲ್ಯನಿರ್ಣಯ ಮಾಡಲಿ.

ಬಳಿಕ ಧ್ವನಿಮುದ್ರಿಕೆಯ ಮೂಲಕ ತರಗತಿಯಲ್ಲಿ ಕೇಳಿಸುವುದು.

## ಉತ್ತರಿಸಿರಿ

ಪದ್ಯದ ಆಶಯ ತಿಳಿದಿದ್ದಾರೆಯೇ ಎಂದು ತಿಳಿಯಲು ಈ ಚಟುವಟಿಕೆ ಕೊಡಲಾಗಿದೆ. ಮಕ್ಕಳು ಕೊಟ್ಟಿರುವ ಪ್ರಶ್ನೆಗಳಿಗೆ ಸೂಕ್ತವಾದ ಆಶಯ ಪೂರ್ಣವಾದ ಉತ್ತರವನ್ನು ಬರೆಯಲಿ. ಅಕ್ಷರ ಸ್ಪುಟತೆ, ವಾಕ್ಯರಚನಾ ಶೈಲಿ ಚೆನ್ನಾಗಿರಬೇಕು.

## ಪದವಿಂಗಡಣೆ

ಮಕ್ಕಳು ಪದಗಳನ್ನು ವಿಂಗಡಿಸುವಾಗ ಪ್ರತಿಯೊಂದು ಪದವೂ ಅರ್ಥವತ್ತಾಗಿರಬೇಕೆಂಬುದನ್ನು ಅಧ್ಯಾಪಕರು ಸೂಚಿಸುವುದು.

| | | |
|---|---|---|
| ಒಳಗಿಲ್ಲ | – | ಒಳಗೆ + ಇಲ್ಲ |
| ತಲೆಗಾಯು | – | ತಲೆ + ಕಾಯು |
| ಹೊಡೆಯದಿರು | – | ಹೊಡೆಯದೆ + ಇರು |
| ತಾಯ್ತನ್ನ | – | ತಾಯಿ + ತನ್ನ |

### ಶಿಷ್ಟರೂಪ ಬರೆಯಿರಿ

ಜನಪದ ಹಾಡುಗಳು ಮತ್ತು ಗ್ರಾಮೀಣ ಕತೆಗಳಲ್ಲಿ ಹೆಚ್ಚಾಗಿ ಗ್ರಾಮ್ಯಪದಗಳು ಬಳಕೆಯಾಗುತ್ತವೆ. ಹಿಂದಿನ ಕಾಲದಲ್ಲಿ ಬಳಕೆಯಲ್ಲಿದ್ದ ಅಡುಭಾಷೆಯನ್ನು ಉಪಯೋಗಿಸಿಕೊಂಡು ಜನಪದ ಹಾಡುಗಳು ರಚಿತವಾಗಿವೆ. ಪದ್ಯದಲ್ಲಿ ಬಂದ ಗ್ರಾಮ್ಯ ಪದಗಳನ್ನು ಕಂಡುಕೊಂಡು ಅವುಗಳ ಶಿಷ್ಟರೂಪವನ್ನು ಚರ್ಚಿಸಿ ಬರೆಯುವುದು.

| **ಗ್ರಾಮ್ಯಪದ** | **ಶಿಷ್ಟಪದ** |
|---|---|
| ಹೋದ್ಲು | ಹೋದಳು |
| ದೊಡ್ಡೋರ | ದೊಡ್ಡವರ |
| ಕಂದನ್ನ | ಕಂದನನ್ನು |
| ಬಾಡ್ಯಾವು | ಬಾಡಿಯಾವು |
| ........... | .................. |
| ........... | .................. |
| ........... | .................. |
| ........... | .................. |

### ಸಾಲು ಗುರುತಿಸಿರಿ

ಮಕ್ಕಳು ತಮಗೆ ಇಷ್ಟವಾದ ಸಾಲುಗಳನ್ನು ಗುರುತಿಸಲಿ. ಬಳಿಕ ಹಾಡಲಿ. ಯಾಕೆ ಇಷ್ಟವಾಯಿತು ಎಂಬುದನ್ನು ಸಮರ್ಥಿಸಿ ಬರೆಯಲಿ. ಬಳಿಕ ಮಂಡಿಸಲಿ.

### ಸಾರಾಂಶ ಬರೆಯಿರಿ

ಮೊದಲು ಮಕ್ಕಳು ತಮಗೆ ಈ ಪದ್ಯದಲ್ಲಿ ಇಷ್ಟವಾದ ಸಾಲುಗಳ ಆಶಯವನ್ನು ಹೇಳಲಿ. ಬಳಿಕ ವೈಯಕ್ತಿಕವಾಗಿ ಹಾಡಿನ ಸಾರಾಂಶವನ್ನು ಬರೆಯಲಿ. ಕೆಲವರು ಮಂಡಿಸಲಿ. ಗುಂಪಿನಲ್ಲಿ ಕುಳಿತು ಉತ್ತಮಪಡಿಸಿ ಬರೆದು ಮಂಡಿಸಲಿ.

ಸಾರಾಂಶ ಹೇಗಿರಬೇಕು?

### ಸೂಚಕಗಳು

- ಹಾಡಿನ ಆಶಯವನ್ನು ಸಂಕ್ಷಿಪ್ತವಾಗಿ ಬರೆಯಲಾಗಿದೆ.
- ಸಾರಾಂಶವು ಕ್ರಮಾನುಗತವಾಗಿದೆ.
- ಭಾಷಾ ಘಟಕಗಳನ್ನು ಯೋಗ್ಯವಾದ ರೀತಿಯಲ್ಲಿ ಬಳಸಲಾಗಿದೆ.
  (ಅಕ್ಷರ, ಪದ, ವಾಕ್ಯ)

ಸೂಚಕಗಳ ಆಧಾರದಲ್ಲಿ ಉತ್ತಮ ಸಾರಾಂಶವನ್ನು ಗುಂಪಿನಿಂದ ಆಯ್ಕೆ ಮಾಡಿ ಮಂಡಿಸಲಿ. ಬಳಿಕ ಅಧ್ಯಾಪಕರು ತಾವು ಬರೆದ ಸಾರಾಂಶವನ್ನು ಪ್ರದರ್ಶಿಸುವುದು.

## ವಾತ್ಸಲ್ಯ

ವಾತ್ಸಲ್ಯ – ಇದೊಂದು ಜನಪದ ಹಾಡಾಗಿದೆ. ಕಂದನ ಬಗ್ಗೆ ಹಿರಿಯರಿಗಿರುವ ಮಮತೆಯನ್ನು ಈ ಹಾಡಿನಲ್ಲಿ ಸೊಗಸಾಗಿ ತಿಳಿಸಲಾಗಿದೆ. ತಾಯಿ ನೀರಿಗೆ ಹೋದಾಗ ಅಳುವ ಕಂದನನ್ನು ಹಿರಿಯರು ಸಮಾಧಾನ ಪಡಿಸುತ್ತಾರೆ. ಮಗುವಿಗೆ ಅಂದವಾದ ವಿವಿಧ ಆಭರಣಗಳನ್ನು ಮಾಡಿಸಿ ತೊಡಿಸಬೇಕೆಂಬುದು ಹಿರಿಯರ ಆಸೆಯಾಗಿರುತ್ತದೆ. ಆದರೆ ಮಗುವನ್ನು ನೋಯಿಸುವುದು ಯಾರಿಗೂ ಇಷ್ಟವಿಲ್ಲ. ಆದ್ದರಿಂದಲೇ ಜನಪದರು ಕಂದನನ್ನು ಪವಿತ್ರವಾದ ಗೋಮಾತೆಯೊಂದಿಗೆ ಹೋಲಿಸಿದ್ದಾರೆ. ಕಂದ ಮತ್ತು ಹಸು ಮನೆಗೆ ಸಂಪತ್ತು ಇದ್ದ ಹಾಗೆ ಎಂಬುದು ಜನಪದರ ನಂಬಿಕೆಯಾಗಿದೆ. ಆದ್ದರಿಂದಲೇ ಕಂದನನ್ನು ರಕ್ಷಿಸಬೇಕು ಎಂದು ಸಂಧ್ಯಾದೇವತೆಯೊಡನೆ ಬೇಡಿಕೊಳ್ಳುತ್ತಾರೆ. ತಾಯಿಗೆ ಕಂದನ ಮೇಲೆ ಅಪಾರ ಮಮತೆ. ಅದಕ್ಕಾಗಿಯೇ ಚಿನ್ನ, ರನ್ನ, ಹವಳ ಎಂದು ಮುದ್ದಿನಿಂದ ಕರೆಯುತ್ತಾಳೆ. ಮಗು ಹಸಿವಿನಿಂದ ಅಳುವಾಗ ಆಗ ತಾನೆ ಕರೆದ ನೊರೆ ಹಾಲನ್ನು ಅಮ್ಮ ನೀಡುತ್ತಾಳೆ. ಹೀಗೆ ಜನಪದರು ಕಂದನನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು ಎಂಬುದನ್ನು ಹಾಡಿನ ಮೂಲಕ ತಿಳಿಸಿದ್ದಾರೆ.

### ಟಿಪ್ಪಣಿ ಬರೆಯಿರಿ

ಜನಪದ ಸಾಹಿತ್ಯಗಳಲ್ಲಿ ಗ್ರಾಮೀಣ ಜನರಲ್ಲಿರುವ ಕೆಲವು ನಂಬಿಕೆಗಳ ಬಗ್ಗೆಯೂ ವಿಷಯಗಳು ಇರುತ್ತವೆ. 'ವಾತ್ಸಲ್ಯ' ಎಂಬ ಕವಿತೆಯಲ್ಲೂ ಅಂತಹ ನಂಬಿಕೆಯೊಂದನ್ನು ಪ್ರಸ್ತಾಪಿಸಲಾಗಿದೆ. ಈ ವಿಷಯದ ಬಗ್ಗೆ ತರಗತಿಯಲ್ಲಿ ಲಘು ಚರ್ಚೆ ನಡೆಸುವುದು.

- ಗ್ರಾಮೀಣ ಜನರ ನಂಬಿಕೆಯೊಂದು ಈ ಹಾಡಿನಲ್ಲಿ ಬಂದಿದೆ. ಅದು ಯಾವುದು?
- ಇದೇ ರೀತಿಯ ನಂಬಿಕೆಗಳನ್ನು ನೀವು ಕೇಳಿರುವಿರಾ?

ಆಗ ಮಕ್ಕಳು ತಮಗೆ ತಿಳಿದಿರುವ ನಂಬಿಕೆಗಳನ್ನು ಹೇಳಲಿ. ಇಂತಹ ಕೆಲವು ನಂಬಿಕೆಗಳನ್ನು ಅಧ್ಯಾಪಕರೂ ಹೇಳುವುದು.

- ಸಂಧ್ಯಾ ಸಮಯದಲ್ಲಿ ನಿದ್ರೆ ಮಾಡುವುದು, ತಿನ್ನುವುದು ಒಳ್ಳೆಯದಲ್ಲ
- ಬೆಳಗ್ಗೆ ಬೇಗನೆ ಎದ್ದು ದೇವರಿಗೆ ಕೈ ಮುಗಿಯಬೇಕು.
- 
- 

ಮಕ್ಕಳು ತಮ್ಮ ಹಿರಿಯರಲ್ಲಿ ಇಂತಹ ಜನಪದ ನಂಬಿಕೆಗಳನ್ನು ಕೇಳಿ ಸಂಗ್ರಹಿಸಲಿ. ಬಳಿಕ ತರಗತಿಯಲ್ಲಿ ಗುಂಪಿನಲ್ಲಿ ಕುಳಿತು ಟಪ್ಪಣಿ ತಯಾರಿಸಲಿ. ಮಕ್ಕಳು ತಯಾರಿಸಿದ ಟಿಪ್ಪಣಿಯನ್ನು ಅಧ್ಯಾಪಕರು ಮೌಲ್ಯ ನಿರ್ಣಯ ಮಾಡುವುದು.

### ಸಂಚಿಕೆ ತಯಾರಿಸಿರಿ

ಅದೆಷ್ಟೋ ಜನಪದ ಹಾಡುಗಳನ್ನು ನಾವು ಕೇಳಿರುತ್ತೇವೆ. ಅದನ್ನು ಹಾಡುವ ಶೈಲಿ ಪ್ರತ್ಯೇಕವಾಗಿದೆ. ಅದು ಎಲ್ಲರನ್ನೂ ಆಕರ್ಷಿಸುತ್ತದೆ. ಮಕ್ಕಳು ತಿಳಿದಿರುವ ಜನಪದ ಹಾಡುಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಲಿ. ಸಂಚಿಕೆಗೆ ಆಕರ್ಷಕ ಮುಖಪುಟ, ಸಂಪಾದಕೀಯ, ಮುನ್ನುಡಿ, ಅನುಕ್ರಮಣಿಕೆ ಬರೆದು ತರಗತಿಯಲ್ಲಿ ಬಿಡುಗಡೆ ಮಾಡಲಿ.

**ಪೂರಕ ಓದಿಗೆ**

## ಜನಪದ ಸಾಹಿತ್ಯದಲ್ಲಿ ಮಕ್ಕಳು

ಕಾಡೋ ಕಂದನ ಬಿಟ್ಟು ಬಾವಿ ನೀರಿಗೋದ್ಲು
ಕಾಡದಿರು ರಾಮ ಲಕ್ಷುಮಣ – ನಿಮ್ಮವ್ವ
ಕೋಗಿಲೆ ಸಂತೈಸಿ ಬರುತಾಳೆ

> ಮಕ್ಕಳೆಲ್ಲಾಡಿದವು ಮಳಲಗುಪ್ಪೇ ಮೇಲೆ
> ಚಿಕ್ಕ ಚಿನ್ನಾದ ಹುಣಸೇ (ಯ) – ಮರದಡಿ
> ಮಕ್ಕಳಾಡಿದವೆ ಬುಗರೀಯ

ಬಾಲರೆಲ್ಲಾಡಿದರು ಜಾರಗುಪ್ಪೇ ಮೇಲೆ
ಜಾಲ ಅಲದ ಹುಣಸೇ(ಯ) ಮರದಡಿ
ಬಾಲರಾಡಿದರೆ ಚಿಣ್ಣೆಯನು

> ತೋಟಕ್ಕೋದ ಪುಟ್ಟುಡುಗ ಊಟಕ್ಕೆ ಬರಲಿಲ್ಲ
> ತೋಟದ ಹೂವ ತಲೆತುಂಬ– ಮುಡಕೊಂಡು
> ಊಟದ್ಹಂಬಲವ ಮರೆತಾನು

ಆಡುವ ಮಕ್ಕಳಿರಾ ನಮ್ಮರಗಿಣೀಯ ಕಾಣೀಗ
ಕಂಡ ಮಕ್ಕಳಿರ ಕರೆತನ್ನಿ– ಕಂದಯ್ಯ
ಉಂಡಿಲ್ಲ ಹೊಟ್ಟೆ ಹಸಿದಾವು.

> ಜೋಗುಳ ಹಾಡಿದರೆ ಆಗಲೇ ಕೇಳ್ಯಾನು
> ಹಾಲ ಹಂಬಲವ ಮರೆತಾನು ಕಂದಂಗೆ
> ಜೋಗುಳದಾಗೆ ಅತಿ ಮುದ್ದು

ಕೂಸು ಇದ್ದ ಮನೆಗೆ ಬೀಸಣಿಗೆ ಯಾತಕ್ಕೆ
ಕೂಸು ಕಂದಯ್ಯ ಒಳ ಹೊರಗ ಆಡಿದರೆ
ಬೀಸಣಿಗೆ ಗಾಳಿ ಸುಳಿದಾವ

> ಅತ್ತು ಕಾಡುವನಲ್ಲ ಮತ್ತೆ ಬೇಡುವನಲ್ಲ
> ಎತ್ತಿಕೊಳ್ಳೆಂಬ ಹಟವಿಲ್ಲ ನಿನ್ನಂತ
> ಹತ್ತು ಮಕ್ಕಳೂ ಇರಬಹುದು

ತೋಳುದ್ದ ತಲೆದಿಂಬು ಮಾರುದ್ದ ಹಾಸಿಗೆ
ಮಾಣಿಕ್ಯದಂಥ ಮಗ ಮುಂದೆ ಮಲಗಿರಲು
ಮಾರಾಯ್ರಗೊಡವಿ ನನಗೇನ

> ಬಡತನ ನನಗಿರಲಿ ಬಹಳ ಮಕ್ಕಳಿರಲಿ
> ಮೇಲೆ ಗುರುವಿನ ದಯೆಯಿರಲಿ ನನ ಗುರುವೆ
> ಬಡತನದ ಚಿಂತೆ ನಿನಗಿರಲಿ

## ಮೌಲ್ಯನಿರ್ಣಯ ಚಟುವಟಿಕೆಗಳು

1. ಶ್ರೀಯುತ ಕೈಯಾರ ಕಿಞ್ಞಣ್ಣ ರೈಯವರ ಜನ್ಮ ದಿನಾಚರಣೆಯನ್ನು ನಿಮ್ಮ ಶಾಲೆಯಲ್ಲಿ ಆಚರಿಸಬೇಕಾಗಿದೆ. ಆ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ತಯಾರಿಸಿರಿ.

2. ಕಾಸರಗೋಡಿನ ಯಾವುದಾದರೂ ಒಂದು ಕಲೆಯ ಬಗ್ಗೆ ಟಿಪ್ಪಣಿ ಬರೆಯಿರಿ.

3. ಇಲ್ಲಿ ನೀಡಿರುವ ಪದ್ಯವನ್ನು ಓದಿ ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸಿರಿ.

ಪಂಚಮಿ ಹಬ್ಬ ಉಳಿದಾವ ದಿನನಾಕ
ಅಣ್ಣ ಬರಲಿಲ್ಲ ಯಾಕ ಕರಿಯಾಕ ॥

ನನ್ನ ತವರೂರು ಗೋಕುಲ ನಗರ
ಮನೆಯೆಂಥಾ ರಾಜಮಂದಿರ
ನನ್ನ ಅಣ್ಣಯ್ಯ ಭಾರಿ ಸಾಹುಕಾರ
ಅಣ್ಣ ಬರಲಿಲ್ಲ ಯಾಕ ಕರಿಯಾಕ ॥

ನನ್ನ ತವರಲ್ಲಿ ಪಂಚಮಿ ಭಾರಿ
ಅರಳು ಅವಲಕ್ಕಿ ತಂಬಿಟ್ಟು ಸೂರಿ
ನಾನು ತಿನುವಾಕಿ ನಾನು ತಿನುವಾಕಿ
ತವರೀಗೆ ಹೋದ ಮ್ಯಾಗ
ಅಣ್ಣ ಬರಲಿಲ್ಲ ಯಾಕ ಕರಿಯಾಕ ॥

(ಅ) ಈ ಪದ್ಯದಲ್ಲಿ ಯಾವ ಹಬ್ಬದ ಕುರಿತು ಹೇಳಲಾಗಿದೆ?

(ಆ) 'ಮ್ಯಾಗ' ಎನುವ ಪದದ ಶಿಷ್ಟರೂಪ ಬರೆಯಿರಿ.

(ಇ) ಈ ಪದ್ಯದ ಸಾರಾಂಶ ಬರೆಯಿರಿ.

4. ನಿಮ್ಮ ಶಾಲೆಯಲ್ಲಿ ಜರಗಿದ ವಾಚನಾ ದಿನಾಚರಣೆಯ ವರದಿಯನ್ನು ಬರೆಯಿರಿ.

# 2. ಹಸಿರೇ ಉಸಿರು

ಅನಾದಿ ಕಾಲದಿಂದಲೂ ಮಾನವನು ಆಹಾರಕ್ಕಾಗಿ ಪ್ರಕೃತಿಯನ್ನು ಅವಲಂಬಿಸಿಕೊಂಡು ಬಂದಿದ್ದಾನೆ. ಜನಸಂಖ್ಯೆ ಹೆಚ್ಚಾದ ಹಾಗೆ ಆಹಾರವಸ್ತುಗಳ ಬೇಡಿಕೆಯೂ ಹೆಚ್ಚಿತು. ಇದರಿಂದಾಗಿ ಮಾನವನು ಆಹಾರವಸ್ತುಗಳನ್ನು ಹೆಚ್ಚು ಬೆಳೆಸತೊಡಗಿದನು. ಹಲವಾರು ಸಂಶೋಧನೆಗಳ ಫಲವಾಗಿ ಆಹಾರ ವಸ್ತುಗಳ ಅಧಿಕ ಉತ್ಪಾದನೆಯ ಕನಸು ನನಸಾಗುತ್ತಿದೆ. ಕೃಷಿ ಎಂಬುದು 'ತಪಸ್ಸು' ಮಾಡಿದಂತೆ. ಪ್ರಕೃತಿಯೊಂದಿಗೆ ನಾವೂ ಒಂದಾಗಿ ಬೆರೆತು ತಿಳಿಯುವ, ರಕ್ಷಿಸುವ ಕರ್ತವ್ಯವನ್ನು ಮಾಡಬೇಕಾದುದು ಅಗತ್ಯ ಕೃಷಿ ಮಾಡುವ ಮತ್ತು ಕೃಷಿಕರ ಬಗ್ಗೆ ಉತ್ತಮ ಮನೋಭಾವ ಮೂಡಿಸುವ ಉದ್ದೇಶದಿಂದ ಈ ಘಟಕವನ್ನು ನೀಡಲಾಗಿದೆ. ಇದರಲ್ಲಿ ದುಡಿಮೆಯ ಮಹತ್ವವನ್ನು ಸಾರುವ 'ದುಡಿಮೆಯ ಫಲ' ಕತೆ, 'ರೈತ' ಕವಿತೆ ಮತ್ತು ಕೃಷಿಯಲ್ಲಿ ಸಾಧನೆ ಮಾಡಿದ ಚೇರ್ಕಾಡಿ ಶ್ರೀರಾಮಚಂದ್ರರಾಯರ ಆತ್ಮಕಥೆಯಾದ 'ಹಸಿರು ಚಿನ್ನ'ವನ್ನು ಕೊಡಲಾಗಿದೆ. ಈ ಘಟಕದ ಮೂಲಕ ಅನ್ನದಾತರೆನಿಸಿದ ಕೃಷಿಕರನ್ನು ಶ್ರಮಜೀವಿಗಳನ್ನು ಗೌರವದಿಂದ ಕಾಣುವ ಮನೋಭಾವವನ್ನು ಮಕ್ಕಳಲ್ಲಿ ಮೂಡಿಸಬೇಕು. ಈ ಪಾಠಗಳ ಮೂಲಕ ವಿದ್ಯಾರ್ಥಿಗಳು ಕೃಷಿಯಲ್ಲಿ ತೊಡಗುವಂತೆ, ಪ್ರೇರಣೆ ಉಂಟಾಗಬೇಕು. ಅದೇ ರೀತಿ ವಿವಿಧ ಕೃಷಿ ಸಾಧಕರ ಕುರಿತು, ಕೃಷಿಗಳ ಕುರಿತು, ಕೃಷಿ ವಸ್ತುವಾಗಿರುವ ಸಾಹಿತ್ಯ ಕೃತಿಗಳನ್ನು ಓದುವಂತೆ ಪ್ರೇರೇಪಿಸುವುದು ಈ ಘಟಕದ ಉದ್ದೇಶವಾಗಿದೆ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ-ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಪದಗಳು, ಪದಪ್ರಯೋಗಗಳು, ಗಾದೆಗಳು, ಶೈಲಿಗಳು ಮೊದಲಾದ ಭಾಷಾ ಘಟಕಗಳನ್ನು ಅಳವಡಿಸಿ ಸಂದರ್ಭಾನುಸಾರವಾಗಿ ಮಾತನಾಡುವುದು. ಸ್ವಂತ ರಚನೆಗಳಲ್ಲಿ ಅವುಗಳನ್ನು ಸಂದರ್ಭಾನುಸಾರವಾಗಿ ಉಪಯೋಗಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ನೀಡಿದ ಸಂದರ್ಭಕ್ಕೆ ಸೂಕ್ತವಾದ ವ್ಯವಹಾರ ರೂಪಗಳನ್ನು ಕಂಡುಕೊಂಡು ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಕೃತಿಯ ಕಥಾಪಾತ್ರಗಳು, ಸನ್ನಿವೇಶಗಳು, ಭಾಷಾಶೈಲಿ, ಮಂಡನೆಯ ರೀತಿ ಎಂಬಿತ್ಯಾದಿಗಳನ್ನು ಪರಿಗಣಿಸಿ ಓದಿದ ಕೃತಿಯ ಆಸ್ವಾದನ ಟಿಪ್ಪಣಿ ತಯಾರಿಸುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಅವುಗಳನ್ನು ಉತ್ತಮಗೊಳಿಸುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.
- ದೃಶ್ಯ-ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 2 : ಹಸಿರೇ ಉಸಿರು** ಸಮಯ : 6+5 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ದುಡಿಮೆಯ ಫಲ | • ದುಡಿಮೆಯ ಮಹತ್ವವನ್ನು ತಿಳಿಯುವುದು.<br>• ಶ್ರಮದ ದುಡಿತ ಉತ್ತಮ ಫಲವನ್ನೇ ನೀಡುತ್ತದೆ ಎಂದು ತಿಳಿಯುವುದು.<br>• ಸೋಮಾರಿತನವು ಮನುಷ್ಯನ ಅವನತಿಗೆ ಕಾರಣವಾಗುತ್ತದೆ ಎಂದು ತಿಳಿಯುವುದು. | • ಓದುವುದು<br>• ಚರ್ಚಿಸುವುದು<br>• ಪದ ಹುಡುಕುವುದು<br>• ಉತ್ತರಿಸವುದು<br>• ಸಂಭಾಷಣೆ<br>• ಸಂದರ್ಭ ತಿಳಿಸುವುದು<br>• ಕಥೆ ವಿಸ್ತರಿಸಿ ಬರೆಯುವುದು<br>• ಸಮಾನಾರ್ಥ ಪದ ಬರೆಯುವುದು<br>• ಗಾದೆಗಳ ಸಂಗ್ರಹ | • ದುಡಿಮೆಗೆ ಸಂಬಂಧಿಸಿದ ಕತೆ, ಲೇಖನಗಳು<br>• ಸಿ.ಡಿ.<br>• ಶ್ರಮ ಜೀವಿಗಳ ಸಂದರ್ಶನ | • ಸಂಭಾಷಣೆ<br>• ಕಥೆ |
| 2. ರೈತ | • ರೈತನು ದೇಶದ ಬೆನ್ನೆಲುಬು ಎಂಬುದನ್ನು ತಿಳಿಯವುದು.<br>• ಎಲ್ಲರ ಉದರವನ್ನು ತುಂಬಿಸುವವನೇ ರೈತ ಎಂಬುದನ್ನು ತಿಳಿಯುವುದು.<br>• ದೇಶದ ಅಸ್ತಿತ್ವವು ರೈತನ ದುಡಿಮೆಯನ್ನು ಆಶ್ರಯಿಸಿದೆ ಎಂಬುದನ್ನು ತಿಳಿಯುವುದು. | • ಹಾಡುವುದು<br>• ಚರ್ಚಿಸುವುದು<br>• ಉತ್ತರಿಸುವುದು<br>• ಸ್ವಾರಸ್ಯ ಬರೆಯುವುದು<br>• ಪ್ರಾಸ ಪದ ಬರೆಯುವುದು<br>• ಆಸ್ವಾದನಾ ಟಿಪ್ಪಣಿ<br>• ಪ್ರಬಂಧ<br>• ಸಂಚಿಕೆ ತಯಾರಿ<br>• ಪದ್ಯ ಪೂರ್ತಿಗೊಳಿಸುವುದು | • ದುಡಿಮೆಗೆ ಸಂಬಂಧಿಸಿದ ಕತೆ, ಕವಿತೆಗಳು<br>• ಸಿ.ಡಿ. | • ಸ್ವಾರಸ್ಯ ಬರೆಯುವುದು<br>• ಆಸ್ವಾದನಾ ಟಿಪ್ಪಣಿ<br>• ಪ್ರಬಂಧ |

## ಯೂನಿಟ್ ಗ್ರಿಡ್

**ಯೂನಿಟ್ 2 : ಹಸಿರೇ ಉಸಿರು** ಸಮಯ 7 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3. ಹಸಿರು ಚಿನ್ನ | • ಕೃಷಿಯಿಂದ ಸ್ವಾವಲಂಬಿ ಬದುಕು ಸಾಧ್ಯ ಎಂದು ತಿಳಿಯುವುದು.<br>• ಶ್ರಮ ವಹಿಸಿ ದುಡಿದರೆ ಮಣ್ಣನ್ನು ಚಿನ್ನವನ್ನಾಗಿಸಬಹುದು ಎಂದು ತಿಳಿಯುವುದು.<br>• ಮಣ್ಣನ್ನು ಪ್ರೀತಿಸುತ್ತಾ ಉತ್ತಮ ಫಲವನ್ನು ಗಳಿಸಿ ತೃಪ್ತಿಯಿಂದ ಜೀವಿಸಬಹುದು ಎಂದು ತಿಳಿಯುವುದು.<br>• ಉತ್ತಮ ಕೃಷಿಕರ ಕುರಿತು ತಿಳಿಯುವುದು.<br>• ಆತ್ಮಕಥೆಯನ್ನು ಜೀವನ ಚರಿತ್ರೆಯಾಗಿ ಬದಲಾಯಿಸಲು ತಿಳಿಯುವುದು. | • ಚರ್ಚಿಸುವುದು<br>• ಉತ್ತರಿಸುವುದು<br>• ಟಿಪ್ಪಣಿ ತಯಾರಿಸುವುದು<br>• ಅಭಿನಂದನ ಪತ್ರ ತಯಾರಿ<br>• ವ್ಯಕ್ತಿ ಪರಿಚಯ<br>• ಪದ ರಚನೆ<br>• ಪದ ಹುಡುಕಿ ಬರೆಯುವುದು<br>• ವಾಕ್ಯ ರಚನೆ | • ವ್ಯಕ್ತಿ ಪರಿಚಯ<br>• ಸಿ.ಡಿ., ಪುಸ್ತಕಗಳು | • ವ್ಯಕ್ತಿ ಪರಿಚಯ<br>• ಅಭಿನಂದನ ಪತ್ರ |
| | | | | |

# 1. ದುಡಿಮೆಯ ಫಲ

## ಚಟುವಟಿಕೆಗಳು

### ಚಿತ್ರ ಓದುವಿಕೆ

ಮಕ್ಕಳು ಸೂಕ್ಷ್ಮವಾಗಿ ಚಿತ್ರವನ್ನು ವೀಕ್ಷಿಸಲಿ.

ಬಳಿಕ ಚರ್ಚೆ ನಡೆಸುವುದು.

- ಇದು ಯಾವುದಕ್ಕೆ ಸಂಬಂಧಿಸಿದ ಚಿತ್ರವಾಗಿದೆ?
- ಚಿತ್ರದಲ್ಲಿ ಏನೇನು ಕಾಣುವಿರಿ?

### ಅಡಕ ಮುದ್ರಿಕೆಯ ಪ್ರದರ್ಶನ

ಗದ್ದೆ ಕೃಷಿಯ ಕುರಿತಾದ ಅಡಕ ಮುದ್ರಿಕೆಯನ್ನು ಪ್ರದರ್ಶಿಸುವುದು.

ಬಳಿಕ ಚರ್ಚೆ

ಚಿತ್ರದಲ್ಲಿ ಏನೆಲ್ಲಾ ವೀಕ್ಷಿಸಿದಿರಿ?

ಭತ್ತದ ಕೃಷಿ ಯಾಕೆ ಮಾಡುತ್ತಾರೆ?

ಭತ್ತದ ಕೃಷಿ ಯಾರೂ ಮಾಡದಿದ್ದರೆ ಏನಾಗಬಹುದು? ಗದ್ದೆ ಇದ್ದೂ ಕೃಷಿ ಮಾಡದವರು ನಮ್ಮೂರಿನಲ್ಲಿ ಇದ್ದಾರೆಯೇ?

### ಓದುವಿಕೆ

ಮಕ್ಕಳು 'ದುಡಿಮೆಯ ಫಲ'ಕತೆಯನ್ನು ಮೌನವಾಗಿ ಓದಲಿ. ಬಳಿಕ ಕೆಲವು ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು.

- ರೈತನಿಗೆ ಎಷ್ಟು ಮಂದಿ ಮಕ್ಕಳಿದ್ದರು?
- ರೈತನು ತನ್ನ ಸಂಪತ್ತೆಲ್ಲವನ್ನೂ ಮಕ್ಕಳಿಗೆ ಹಂಚಲು ತೀರ್ಮಾನಿಸಿದುದು ಯಾಕೆ?
- ಎರಡನೆಯ ಕೋಣೆಯಲ್ಲಿ ಏನಿತ್ತು?
- ರೈತನ ಮಕ್ಕಳಿಗೆ ಬಹಳ ಬೇಗ ದಣಿವಾಗಲು ಕಾರಣವೇನು?
- ಮಕ್ಕಳು ಪರಸ್ಪರ ದೂರಲು ಕಾರಣವೇನು?

ಆ ಮೇಲೆ ಅಧ್ಯಾಪಕರು ಕತೆಯನ್ನು ಸ್ವರಭಾರಯುತವಾಗಿ ಓದಿ ಮಂಡಿಸುವುದು.

### ಚರ್ಚೆಸಿರಿ

ವಿದ್ಯಾರ್ಥಿಗಳು 'ದುಡಿಮೆಯ ಫಲ' ಪಾಠದಲ್ಲಿ ಕಂಡುಕೊಂಡ ವಿಚಾರಗಳನ್ನು ತರಗತಿಯಲ್ಲಿ ಅಭಿವ್ಯಕ್ತಗೊಳಿಸಲು ಅವಕಾಶವನ್ನು ಒದಗಿಸುವುದು. ಅದಕ್ಕಾಗಿ ಚರ್ಚಾ ಕೂಟವನ್ನು ಏರ್ಪಡಿಸುವುದು.

'ಕೃಷಿಯನ್ನು ಅವಗಣಿಸಿದ್ದಾದರೆ ಉಪವಾಸ ಬಿದ್ದು ಸಾಯಬೇಕು.' ಈ ಮಾತಿನ ಬಗ್ಗೆ ಚರ್ಚಿಸುವುದು.

ತರಗತಿಯಲ್ಲಿ ಅಧ್ಯಾಪಕರು ನಿರ್ದಿಷ್ಟ ಚರ್ಚಾ ಸೂಚಕಗಳ ಆಧಾರದಲ್ಲಿ ಚರ್ಚೆಯನ್ನು ಮುಂದುವರಿಸುವುದು ಉತ್ತಮವಲ್ಲವೇ?

- ನಾವು ಕೃಷಿ ಮಾಡುವುದು ಯಾಕೆ?
- ಕೃಷಿ ಮಾಡದಿದ್ದರೆ ಉಪವಾಸ ಬೀಳಬೇಕಾದೀತೆ?
- ಯಾಕೆ?
- ಎಲ್ಲರೂ ಕೃಷಿ ಮಾಡದಿದ್ದರೆ ಏನಾಗಬಹುದು?
-
-

ಚರ್ಚೆಯ ಆಧಾರದಲ್ಲಿ ಮಕ್ಕಳು ಟಿಪ್ಪಣಿಯನ್ನು ಬರೆದು ಮಂಡಿಸಲಿ.

## ಉತ್ತರಿಸಿರಿ

ಪಾಠದ ಆಶಯ ಗ್ರಹಣದ ಪರೀಕ್ಷೆಗಾಗಿ ಈ ಪ್ರಶ್ನೆಗಳನ್ನು ಕೊಡಲಾಗಿದೆ. ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡು ಬರೆದು ಮಂಡಿಸುವುದು.

## ಸಂಭಾಷಣೆ ರಚಿಸಿರಿ

ಪಾಠಭಾಗದಲ್ಲಿ ಮೂವರು ಹಸಿವಿನಿಂದ ಕಂಗೆಟ್ಟು ಪರಸ್ಪರ ದೂರಲು ತೊಡಗಿದ ಸಂದರ್ಭವು ಸಂಭಾಷಣೆ ರಚಿಸಲು ಯೋಗ್ಯವಾದ ಭಾಗವಾಗಿದೆ. ಸಂಭಾಷಣೆಯನ್ನು ಬರೆಯಲು ಹೇಳುವುದು. ಸಂಭಾಷಣೆಯನ್ನು ಉತ್ತಮ ಪಡಿಸುವುದಕ್ಕಾಗಿ ಅಗತ್ಯವಾದ ಸಲಹೆ ಸೂಚನೆಗಳನ್ನು ಅಧ್ಯಾಪಕರು ನೀಡುವುದು. ರಚಿಸಿದ ಸಂಭಾಷಣೆಯನ್ನು ಅಧ್ಯಾಪಕರು ಮೌಲ್ಯಮಾಪನ ಮಾಡುವುದು.

ಮೂರನೆಯವನು : ಛೆ! ಎಂಥ ಕಷ್ಟವಿದು? ತಿನ್ನಲು ಏನೂ ಇಲ್ಲ. ಈ ಅವಸ್ಥೆಗೆ ನೀನೆ ಕಾರಣ.

ಹಿರಿಯವನು : ನಾನೇ? ನಾನೇನು ತಪ್ಪು ಮಾಡಿದ್ದೇನೆ? ಸುಮ್ಮನೆ ನನ್ನನ್ನು ದೂರಬೇಡ.

ಎರಡನೆಯವನು : ನೀನು ಹಿರಿಯವನು. ನಿನಗೆ ತಂದೆಯ ಸ್ಥಾನವಿದೆ. ಎಲ್ಲರನ್ನೂ ಸರಿಯಾದ ದಾರಿಯಲ್ಲಿ ಕೊಂಡೊಯ್ಯಬೇಕಾದವ ನೀನು.

ಹಿರಿಯವನು : ನೀವು ಹೇಳಿಯೇ ಬಿತ್ತನೆಯ ಧಾನ್ಯಗಳನ್ನು ಆಹಾರಕ್ಕಾಗಿ ಬಳಸಿದುದು. ಎತ್ತುಗಳನ್ನು ಮಾರಲು ನೀವೇ ಕಾರಣ.

ಮೂರನೆಯವನು : ನಮ್ಮ ಮಾತು ಕೇಳಿ ನೀನು ಹಾಗೆ ಮಾಡಿದುದು ಸರಿಯಲ್ಲ.

ಎರಡನೆಯವನು : ನೀನು, ನಮ್ಮನ್ನು ಸೇರಿಸಿ ದುಡಿಯಲು ಪ್ರೇರೇಪಿಸಬೇಕಿತ್ತು.

ಮೂರನೆಯವನು : ಅಪ್ಪ ಹೇಳಿದುದು ನೆನಪಿಲ್ಲವೆ? 'ಕೃಷಿಯನ್ನು ಅವಗಣಿಸಿದ್ದಾದರೆ ಉಪವಾಸದಿಂದ ಸಾಯಬೇಕಾದೀತು' ಎಂದು.

ಎರಡನೆಯವನು : ಅದು ಹೌದು, ಅಪ್ಪ ಇನ್ನೊಂದು ಮಾತೂ ಹೇಳಿದ್ದಾರಲ್ಲಾ, ಉಗ್ರಾಣದ ಮೂರನೆಯ ಕೋಣೆಯಲಿ.... ಎಂದೇನೋ....

ಮೂರನೆಯವನು : ಹೌದು. ಆದರೆ ಅದನ್ನು ತೆರೆಯಲು ಹೇಳಿಲ್ಲವಲ್ಲ.

ಹಿರಿಯವನು : ಏನೋ ಹೇಳಬೇಕೆಂದಿದ್ದರು. ಕೆಲವೊಮ್ಮೆ ತೆರೆಯಲು ಹೇಳಬೇಕೆಂದು ಬಯಸಿರಬಹುದು.

ಎರಡನೆಯವನು : ಈಗ ಆ ಕೋಣೆ ತೆರೆಯೋಣ ನಮಗೆ ಏನಾದರೊಂದು ಪರಿಹಾರ ಖಂಡಿತವಾಗಿಯೂ ದೊರಕಬಹುದು.

ಹಿರಿಯವನು ಮತ್ತು
ಮೂರನೆಯವನು : ಸರಿ. ಈಗಲೇ ಹೋಗಿ ತೆರೆಯೋಣ. (ಮೂವರೂ ಹೋಗುವರು)

## ಸಂದರ್ಭ ಬರೆಯಿರಿ

ಗದ್ಯ/ಪದ್ಯ ಕಾವ್ಯಗಳಲ್ಲಿ ಬರುವ ಹೇಳಿಕೆಗಳು, ಗಾದೆಗಳು, ನುಡಿಗಟ್ಟುಗಳು ಇತ್ಯಾದಿ ವಿಚಾರಗಳು ಯಾವ ಸಂದರ್ಭದಲ್ಲಿ ಹೇಳಲ್ಪಟ್ಟಿದೆ. ಅದರ ಔಚಿತ್ಯವೇನು? ವಿಷಯಕ್ಕೂ ಹೇಳಿಕೆಗೂ ಇರುವ ಸಂಬಂಧವೇನು? ಇತ್ಯಾದಿ ವಿಚಾರಗಳನ್ನು ಗುರುತಿಸುವ ಸಾಮರ್ಥ್ಯವು ಮಕ್ಕಳಲ್ಲಿ ಬೆಳೆಯಬೇಕು. ಪಾತ್ರಗಳು ಆಡುವ ಮಾತು, ಸಂದರ್ಭ, ಪರಿಣಾಮ ಇತ್ಯಾದಿ ವಿಚಾರಗಳು ಇದರಲ್ಲಿ ಒಳಗೊಂಡಿರಬಹುದು. ಅಧ್ಯಾಪಕರು 'ಬಿತ್ತನೆಗೆ ಧಾನ್ಯವಿಲ್ಲದ ಮೇಲೆ ಎತ್ತುಗಳು, ಕೃಷಿ ಉಪಕರಣಗಳು ಏತಕೆ? ಎಂಬ' ಈ ಹೇಳಿಕೆಯನ್ನು ಕರಿಹಲಗೆಯಲ್ಲಿ ಬರೆಯುವುದು. ಬಳಿಕ ಕೆಳಗಿನ ಸೂಚಕಗಳ ಆಧಾರದಲ್ಲಿ ಚರ್ಚೆ ನಡೆಸುವುದು.

- ಇದನ್ನು ಯಾರು ಹೇಳಿದರು?
- ಯಾರೊಡನೆ ಹೇಳಿದರು?
- ಯಾವಾಗ ಹೇಳಿದರು?
- ಯಾಕಾಗಿ ಹೇಳಿದರು?
- ಎಲ್ಲಿ ಹೇಳಿದರು?

ಚರ್ಚೆಯ ಆಧಾರದಲ್ಲಿ ಮಕ್ಕಳು ವೈಯಕ್ತಿಕವಾಗಿ ಸಂದರ್ಭವನ್ನು ಬರೆಯಲಿ.

- ಕೆಲವರಿಂದ ಮಂಡನೆ
- ಚರ್ಚೆ
- ಸೂಚಕಗಳ ಆಧಾರದಲ್ಲಿ ಮೌಲ್ಯನಿರ್ಣಯ

**ಸೂಚಕಗಳು**

- ಯಾರು ಯಾರಿಗೆ ಹೇಳಿದುದು ಎಂಬುದನ್ನು ಬರೆಯಲಾಗಿದೆ.
- ಸಂದರ್ಭವನ್ನು ತಿಳಿಸಲಾಗಿದೆ.
- ಆಶಯವನ್ನು ಸ್ಪಷ್ಟವಾಗಿ ಕ್ರಮೀಕರಿಸಿ ಬರೆಯಲಾಗಿದೆ.
- ಅಕ್ಷರ, ಪದ, ವಾಕ್ಯ ರಚನೆಯ ನಿಯಮಗಳನ್ನು ಪಾಲಿಸಿಕೊಂಡು ತನ್ನದೇ ಆದ ಶೈಲಿಯಲ್ಲಿ ಬರೆಯಲಾಗಿದೆ.

- ಗುಂಪಿನಲ್ಲಿ ಎಲ್ಲರ ಮಂಡನೆ
- ಉತ್ತಮವಾದುದನ್ನು ಆಯ್ಕೆ ಮಾಡುವುದು
- ತರಗತಿಯಲ್ಲಿ ಮಂಡನೆ

ಅಧ್ಯಾಪಕರು ತಾವು ಬರೆದುದನ್ನು ಮಂಡಿಸುವುದು. ಮಕ್ಕಳು ತಮ್ಮ ರಚನೆಯನ್ನು ಉತ್ತಮಪಡಿಸುವುದು.

### ಗಾದೆ ವಿಸ್ತರಿಸಿರಿ

ಗಾದೆಮಾತುಗಳೆಲ್ಲವು ಕೆಲವೇ ಪದ ಸಮೂಹಗಳಿಂದ ಕೂಡಿದ್ದು ವಿಶಾಲವಾದ ಅರ್ಥವನ್ನು ಕೊಡುತ್ತವೆ. ವಾಚ್ಯಾರ್ಥ, ಸೂಚ್ಯಾರ್ಥಗಳೆರಡನ್ನೂ ಒಳಗೊಂಡ ಚಮತ್ಕಾರವಿರುವ ಗಾದೆ ಮಾತುಗಳೂ ಇವೆ. ಗಾದೆ ಮಾತುಗಳ ಅರ್ಥ ವೈಶಾಲ್ಯವನ್ನು ತಿಳಿಯುವುದು ಮತ್ತು ಅದನ್ನು ಬರವಣಿಗೆಯ ಮೂಲಕ ಅಭಿವ್ಯಕ್ತಿಗೊಳಿಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ.

"ಕೂತುಣ್ಣುವವನಿಗೆ ಕುಡಿಕೆ ಹೊನ್ನು ಸಾಲದು" ಎಂಬ ಗಾದೆ ಮಾತು ಪಾಠದಲ್ಲಿ ಬಂದಿರುತ್ತದೆ. ಮಕ್ಕಳು ಈ ಗಾದೆಯ ಆಶಯವನ್ನು ಕಥೆಯ ಆಧಾರದಲ್ಲಿ ವಿಸ್ತರಿಸಿ ಬರೆಯುವುದು.

ಬರೆಯಲು ತೊಡಗುವ ಮೊದಲು ಚರ್ಚೆ ನಡೆಸಿದರೆ ಒಳ್ಳೆಯದಲ್ಲವೇ?

- ಈ ಗಾದೆಯು ಯಾವ ಸಂದರ್ಭದಲ್ಲಿ ಬಳಕೆಯಾಗಿದೆ?
- ಕುಳಿತು ಉಣ್ಣುವುದು ಎಂಬುದರ ಅಂತಾರಾರ್ಥವೇನು?
- ಕುಡಿಕೆ ಹೊನ್ನಿನ ಮೌಲ್ಯವೇನು?
- ಸಂಪಾದನೆ ಮಾಡದವನಿಗೆ ಹಿರಿಯರು ತೆಗೆದಿರಿಸಿದ್ದು ಎಷ್ಟು ದಿನಗಳವರೆಗೆ ಸಾಕಾಗಬಹುದು?

ಮಕ್ಕಳು ಬರೆದು ಮಂಡಿಸಲಿ. ಕೊನೆಗೆ ಅಧ್ಯಾಪಕರು ತಮ್ಮ ಬರವಣಿಗೆಯನ್ನು ಮಂಡಿಸುವುದು.

**ಹೀಗೂ ಆಗಬಹುದಲ್ಲವೇ**

ಯಾವುದೇ ಕೆಲಸ ಮಾಡದೇ ಇದ್ದರೆ ಸಂಪಾದನೆಯಾಗದು. ಹಿರಿಯರು ಉಳಿಸಿದ್ದನ್ನು ಉಪಯೋಗಿಸಿ ಜೀವನ ನಡೆಸಿದರೆ ಕೂಡಿಟ್ಟ ಸಂಪತ್ತು ಮುಗಿಯುವವರೆಗೆ ಜೀವನ ಸಾಗಬಹುದು. ಬಳಿಕ ಜೀವನ ನಡೆಸುವುದು ಕಷ್ಟ. ಹಾಗಿರುವ ವ್ಯಕ್ತಿಗಳಿಗೆ ಎಷ್ಟೇ ಸಂಪತ್ತಿದ್ದರೂ ಅದು ಬೇಗನೇ ಮುಗಿದು ಹೋಗುವುದು. ಕತೆಯಲ್ಲಿ ರಾಮಪ್ಪನ ಮಕ್ಕಳು ಕೆಲಸ ಮಾಡದೇ ತಂದೆ ಸಂಪಾದಿಸಿಟ್ಟಿದ್ದನ್ನು ಬಳಸಿ ಮುಗಿಸಿದರು. ಸುಮ್ಮನೆ ಕುಳಿತರೂ ಹಸಿವು ಆಗುತ್ತದೆ. ಹಸಿವು ನೀಗಿಸಲು ತಿನ್ನಬೇಕು. ತಿನ್ನ ಬೇಕಿದ್ದರೆ ಆಹಾರ ಧಾನ್ಯಗಳನ್ನು ಉತ್ಪಾದಿಸಬೇಕು. ಉತ್ಪಾದಿಸಲು ದುಡಿಯಬೇಕು. ದುಡಿಯದೇ ಹಿರಿಯರು ಸಂಪಾದಿಸಿದುದನ್ನು ಖರ್ಚು ಮಾಡುತ್ತಾ ಜೀವಿಸಿದರೆ, ಕುಡಿಕೆಯಷ್ಟು ಬಂಗಾರದ ನಾಣ್ಯಗಳಿದ್ದರೂ ಸಾಲದು. ಅಂದರೆ, ಎಷ್ಟೇ ಸಂಪತ್ತು ಕೂಡಿಟ್ಟರೂ, ದುಡಿಯದೆ ತಿನ್ನುವವನಿಗೆ ಅದು ಸಾಲದು.

### ಕತೆ ವಿಸ್ತರಿಸಿ ಬರೆಯಿರಿ

- ಮಕ್ಕಳು ಕತೆಯ ಹಂದರವನ್ನು ಓದಲಿ.
- ಮಕ್ಕಳು ಕತೆಯ ಹಂದರದ ಆಧಾರದಲ್ಲಿ ಕತೆಯನ್ನು ಹೇಳಲಿ.
- ಮಕ್ಕಳು ವೈಯಕ್ತಿಕವಾಗಿ ಬರೆಯಲಿ.

- ಕೆಲವರಿಂದ ಮಂಡನೆ
- ಚರ್ಚೆ

**ಕಥೆ ವಿಸ್ತರಣೆ ಹೇಗಿರಬೇಕು?**

- ನೀಡಿದ ಹಂದರಕ್ಕೆ ಅನುಗುಣವಾಗಿ ಕತೆ ಬರೆಯಲಾಗಿದೆ.
- ಕತೆಯ ಆಶಯಗಳನ್ನು ಸನ್ನಿವೇಶಕ್ಕನುಸರಿಸಿ, ಪ್ಯಾರಾಗಳಾಗಿ ಬರೆಯಲಾಗಿದೆ.
- ಪದ, ನಡಿಗಟ್ಟು, ಹೋಲಿಕೆ, ಗಾದೆ ಮಾತು ಇತ್ಯಾದಿ ಭಾಷಾ ಘಟಕಗಳನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಂಡು ತನ್ನದೇ ಆದ ಶೈಲಿಯಲ್ಲಿ ಬರೆಯಲಾಗಿದೆ.
- ಕಥೆಯ ಆಶಯಕ್ಕೆ ಭಂಗ ಬಾರದಂತೆ ಕಥಾ ಪಾತ್ರಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಬಳಸಲಾಗಿದೆ.

ಸೂಚಕಗಳ ಆಧಾರದಲ್ಲಿ ಮಕ್ಕಳು ತಾವು ರಚಿಸಿದ ಕತೆಯನ್ನು ಉತ್ತಮಪಡಿಸಿ ಮಂಡಿಸಲಿ. ಉತ್ತಮವಾದ ಕತೆಯನ್ನು ಆಯ್ಕೆಮಾಡಿ ಅದನ್ನು ಬರೆದ ಮಗುವನ್ನು ಅಭಿನಂದಿಸುವುದು.

## ಕತೆ ಹೀಗೂ ಆಗಬಹುದಲ್ಲವೇ?

### ಒಗ್ಗಟ್ಟೇ ಬಲ

ಒಂದೂರಿನಲ್ಲಿ ಒಬ್ಬ ರೈತನಿದ್ದನು. ಅವನಿಗೆ ಮೂರು ಮಂದಿ ಮಕ್ಕಳು. ಅವರು ಯಾವಾಗಲೂ ಸಣ್ಣ ಪುಟ್ಟ ವಿಷಯಗಳಿಗೂ ಕಚ್ಚಾಡುತ್ತಿದ್ದರು. ರೈತನು ತನ್ನ ಮಕ್ಕಳಿಗೆ ಎಷ್ಟೋ ಬಾರಿ ಬುದ್ಧಿ ಹೇಳಿದನು. ಆದರೆ 'ಕಗ್ಗಲ್ಲಿನ ಮೇಲೆ ನೀರು ಸುರಿದಂತೆ' ಆದುದಲ್ಲದೆ ಯಾವ ಪ್ರಯೋಜನವೂ ಆಗಲಿಲ್ಲ.

ಹೀಗಿರಲು ಒಂದು ದಿನ ರೈತ ಮನೆಯ ಜಗಲಿಯಲ್ಲಿ ಕುಳಿತು ಮಕ್ಕಳನ್ನು ಸರಿದಾರಿಗೆ ತರುವ ಕುರಿತು ಯೋಚಿಸುತ್ತಿದ್ದನು. ಆಗ ಥಟ್ಟನೆ ಒಂದು ಉಪಾಯ ಹೊಳೆಯಿತು. ಅವನು ತನ್ನ ಮಕ್ಕಳನ್ನು ಬಳಿಗೆ ಕರೆದನು. ಪ್ರತಿಯೊಬ್ಬರಲ್ಲೂ "ಒಂದೊಂದು ಕೋಲನ್ನು ತನ್ನಿರಿ"ಎಂದು ಹೇಳಿದನು. ಮೂವರೂ ಒಂದೊಂದು ಕೋಲು ತಂದರು. "ನೀವು ತಂದ ಕೋಲನ್ನು ಮುರಿಯಿರಿ" ಎಂದು ರೈತ ಹೇಳಿದನು. ಕೂಡಲೇ ಮಕ್ಕಳು ಛಟಕ್ಕನೆ ಕೋಲನ್ನು ಮುರಿದರು. ಬಳಿಕ ರೈತನು ಮೂರು ಕೋಲುಗಳ ಕಟ್ಟನ್ನು ನೀಡಿ ಪ್ರತಿಯೊಬ್ಬರಲ್ಲೂ ಮುರಿಯಲು ಹೇಳಿದನು. ಮೂವರಿಗೂ ಆ ಕಟ್ಟನ್ನು ಮುರಿಯಲು ಆಗಲಿಲ್ಲ. ಆಗ ರೈತನು "ಮಕ್ಕಳೇ, ಒಂದು ಕೋಲನ್ನು ಮುರಿದಂತೆ ಒಬ್ಬೊಬ್ಬರಾಗಿದ್ದರೆ ಅವರನ್ನು ಸೋಲಿಸುವುದು ಸುಲಭ, ಆದರೆ ಕೋಲುಗಳ ಕಟ್ಟು ಮುರಿಯಲು ಕಷ್ಟವಾದಂತೆ ನೀವು ಒಗ್ಗಟ್ಟಾಗಿದ್ದರೆ ನಿಮ್ಮನ್ನು ಯಾರೂ ಸೋಲಿಸಲಾರರು. ಎಲ್ಲಾ ಕೆಲಸಗಳಲ್ಲೂ ಒಗ್ಗಟ್ಟಿನಿಂದ ದುಡಿಯಿರಿ, ಕಚ್ಚಾಡಬೇಡಿ" ಎಂದು ತಿಳಿ ಹೇಳಿದನು. ಬಳಿಕ ಮಕ್ಕಳು ಎಂದಿಗೂ ಜಗಳವಾಡದೆ ಒಗ್ಗಟ್ಟಿನಿಂದ ದುಡಿದು ಸುಖವಾಗಿ ಬಾಳಿದರು.

## ಸಮಾನಾರ್ಥ ಪದ ಹುಡುಕಿ ಬರೆಯಿರಿ

ಮಕ್ಕಳಲ್ಲಿ ಪದ ಸಂಪತ್ತು ಬೆಳೆದಂತೆ ಅವುಗಳನ್ನು ಬಳಸಲಿರುವ ಸಂದರ್ಭಗಳನ್ನು ಒದಗಿಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಇಲ್ಲಿ ಸಮಾನಾರ್ಥ ಪದಗಳನ್ನು ಅಡಿಗೆರೆ ಎಳೆದ ಪದಕ್ಕೆ ಬದಲಾಗಿ ಬರೆದು ಮಂಡಿಸಲಿ.

**ಸಮಾನಾರ್ಥ ಪದಗಳನ್ನು ಬಳಸಿ ಬರೆದುದು**

ರಂಗರಾಯರು ಪೇಟೆಯಿಂದ ಬಂದವರೇ ಬಳಲಿಕೆಯಿಂದ ಕುಸಿದರು. ಇದನ್ನು ಕಂಡ ಪತ್ನಿ ಕಮಲಮ್ಮ ಗಾಬರಿಗೊಂಡು "ಮಗಾ" ಎಂದು ಕೂಗಿದರು. ಮಗ ಪ್ರಕಾಶನು ಆಲಸ್ಯಮಾಡದೆ ಅಪ್ಪನನ್ನು ಆಸ್ಪತ್ರೆಗೆ ಒಯ್ದನು. ವೈದ್ಯರು ರಂಗರಾಯರನ್ನು ಪರೀಕ್ಷಿಸಿ "ಇವರ ಕಾಯಿಲೆ ಉಲ್ಬಣಿಸಿದೆ. ತುರ್ತು ಚಿಕಿತ್ಸೆಯ ಅಗತ್ಯವಿದೆ." ಎಂದರು. ಪ್ರಕಾಶನು ವೈದ್ಯರ ಮಾತನ್ನು ಅವಗಣಿಸದೆ ಸೂಕ್ತ ಚಿಕಿತ್ಸೆಯನ್ನು ಕೊಡಿಸಿದನು. ದಿನ ಕಳೆದಂತೆ ರಂಗರಾಯರ ಆರೋಗ್ಯ ಸುಧಾರಿಸತೊಡಗಿತು. ಕಮಲಮ್ಮನ ಮುಖದಲ್ಲಿ ಮಂದಹಾಸ ಮೂಡಿತು.

### ವಾಕ್ಯ ಬರೆಯಿರಿ

ಭಾಷೆಯನ್ನು ಪ್ರಯೋಗಿಸುವ ನಿಮಯಗಳನ್ನು ತಿಳಿದು ತಮ್ಮ ರಚನೆಗಳಲ್ಲಿ ಬಳಸಿಕೊಳ್ಳುವ ಉದ್ದೇಶದಿಂದ ಇಂತಹ ಚಟುವಟಿಕೆ ನೀಡಲಾಗಿದೆ. ಇಲ್ಲಿ ನಾಮ ಪದವು ಬಹುವಚನ ರೂಪ ಪಡೆದಾಗ ಕ್ರಿಯಾ ಪದದಲ್ಲಿ ಬದಲಾವಣೆಯಾಗುತ್ತದೆ ಎಂಬ ವಿಚಾರ ಮಕ್ಕಳಿಗೆ ಮನದಟ್ಟಾಗಬೇಕು.

ಅಧ್ಯಾಪಕರು ಮಕ್ಕಳಲ್ಲಿ ಮೊದಲು ಬರೆಯಲು ಹೇಳುವುದು. ತಪ್ಪಿದ್ದಲ್ಲಿ ಹೆಚ್ಚಿನ ಉದಾಹರಣೆಗಳನ್ನು ಕೊಟ್ಟು ಮನದಟ್ಟು ಮಾಡಿಸುವುದು.

### ಗಾದೆಗಳನ್ನು ಸಂಗ್ರಹಿಸಿರಿ.

ಮಕ್ಕಳು ದುಡಿಮೆಗೆ ಸಂಬಂಧಿಸಿದ ವಿವಿಧ ಗಾದೆ ಮಾತುಗಳನ್ನು ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಲಿ.

- ಬೇಸಾಯಗಾರ ಬೇಗಸಾಯ
- ರಟ್ಟೆ ಮುರಿಯಬೇಕು, ರೊಟ್ಟಿ ತಿನ್ನಬೇಕು.
- ಉತ್ತು ಬಾಳುವವನ ಬದುಕು ಎತ್ತಲೂ ಲೇಸು
- ದುಡಿತವೇ ದುಡ್ಡಿನ ತಾಯಿ
- ಆಳಾಗ ಬಲ್ಲವನು ಅರಸನಾಗಬಲ್ಲ
- ದುಡಿಯುವ ಎತ್ತು ಎಲ್ಲಿದ್ದರೂ ದುಡಿಯುತ್ತದೆ
- ನಿರುದ್ಯೋಗಿಯ ಮನಸ್ಸು ಪಿಶಾಚಿಗಳ ಕಾರ್ಖಾನೆ
- ಬಡತನ ಬಂದಾಗ ನೆಂಟರ ಬಾಗಿಲು ತಟ್ಟಬಾರದು.

## ಬೆವರಿನ ಬೆಲೆ

ಒಬ್ಬ ಪಂಡಿತನಿದ್ದ. ಮಹಾ ಸ್ವಾಭಿಮಾನಿಯಾದ ಅವನು ಧನಿಕರ ಸಹಾಯ ಪಡೆಯದೆ ಬಡ ಮಕ್ಕಳಿಗೆ ಪಾಠ ಹೇಳುತ್ತಿದ್ದ. ಅವರು ಕೊಟ್ಟಷ್ಟು ಕಾಣಿಕೆ ಪಡೆದು ತೃಪ್ತಿಯಿಂದ ಜೀವನ ನಡೆಸುತ್ತಿದ್ದ. ಅವನೆಂದೂ ಹೆಚ್ಚಿನದಕ್ಕೆ ಆಸೆ ಪಟ್ಟವನಲ್ಲ.

ದಿನ ಕಳೆದಂತೆ ಅವನಿಗೆ ವಯಸ್ಸಾಯಿತು. ಮುದುಕನ ಬಳಿ ಕಲಿಯುವುದಾದರೂ ಏನಿದೆ? ಎಂಬ ತಾತ್ಸಾರದಿಂದಲೋ ಏನೋ ಅವನಲ್ಲಿಗೆ ವಿದ್ಯಾರ್ಥಿಗಳೇ ಬರುತ್ತಿರಲಿಲ್ಲ. ಆದರಿಂದಾಗಿ ಅವನು ಒಂದು ಹೊತ್ತಿನ ಊಟಕ್ಕೂ ಕಷ್ಟಪಡಬೇಕಾಯಿತು.

ಒಂದು ದಿನ ಅವನ ಹೆಂಡತಿ "ನೀವು ಜೀವನವನ್ನೆಲ್ಲಾ ಆದರ್ಶ, ಪ್ರಾಮಾಣಿಕತೆ, ಸ್ವಾಭಿಮಾನ, ಜ್ಞಾನ ಪ್ರಸಾರ ಎಂದೆಲ್ಲಾ ವ್ಯರ್ಥವಾಗಿ ಕಳೆದುಬಿಟ್ಟಿರಿ. ಅದರಿಂದ ಇಂದು ನಮ್ಮ ಹೊಟ್ಟೆ ತುಂಬುತ್ತದೆಯೇ?" ಎಂದು ಕೇಳಿದಾಗ ಪಂಡಿತ ಏನೂ ಹೇಳಲು ತೋಚದೆ ಪೆಚ್ಚಾಗಿ ನಿಂತುಬಿಟ್ಟ. "ಹಾಗೆ ನಿಂತು ಬಿಟ್ಟರೆ ಏನು ಸಾಧಿಸಿದ ಹಾಗಾಯಿತು? ಹೋಗಿ ಇನ್ನಾದರೂ ನಿಮ್ಮ ಸ್ವಾಭಿಮಾನ ಬಿಟ್ಟು ಮಹಾರಾಜರಲ್ಲಿ ಬಿನ್ನವಿಸಿಕೊಂಡರೆ ನಮ್ಮ ದಾರಿದ್ರ್ಯವಾದರೂ ದೂರವಾದೀತು" ಎಂದು ಹೆಂಡತಿ ಮತ್ತೆ ಹೇಳಿದಳು.

ಹೆಂಡತಿಯ ಮಾತು ಮೀರಲಾರದೆ ಪಂಡಿತ ರಾಜನ ಆಸ್ಥಾನಕ್ಕೆ ಬಂದು ಆಶೀರ್ವಚನಗಳನ್ನು ಕಾವ್ಯಮಯವಾಗಿ ಉಚ್ಚರಿಸಿದ. ರಾಜನಲ್ಲಿ ಏನು ಬೇಡಬೇಕೋ ಎಂದು ತಿಳಿಯದೆ ಮಂಕಾಗಿ ನಿಂತ. ರಾಜನು ಪಂಡಿತನ ಅವಸ್ಥೆಯನ್ನು ಕಂಡು ನಗುತ್ತಾ "ಪಂಡಿತೋತ್ತಮರೇ, ನಿಮಗೇನು ಬೇಕು ಎಂಬುದನ್ನು ಧೈರ್ಯವಾಗಿ ಹೇಳಿ, ಕೊಡುತ್ತೇನೆ" ಎಂದ.

"ಅಯ್ಯಾ ಮಹಾರಾಜ, ನಾನು ಜೀವಮಾನವಿಡೀ ವೇದೋಪನಿಷತ್ತುಗಳನ್ನು ಬಡ ವಿದ್ಯಾರ್ಥಿಗಳಿಗೆ ಬೋಧಿಸುತ್ತಾ ಕಾಲ ಕಳೆದವನು. ಯಾರ ಯಾವ ಅನ್ಯಾಯದ ಸಂಪಾದನೆಯನ್ನು ನಾನು ಇದುವರೆಗೆ ಆಶಿಸಿದವನಲ್ಲ. ನೀನು ಶ್ರಮ ಪಟ್ಟು ಸಂಪಾದಿಸಿದ್ದು ತೃಣವಾದರೂ ಸರಿ, ಇದ್ದರೆ ದಯಪಾಲಿಸು, ನನಗಷ್ಟೇ ಸಾಕು" ಎಂದು ಕೇಳಿದ ಪಂಡಿತ.

ಆ ಪಂಡಿತರ ಮಾತುಗಳನ್ನು ಕೇಳುತ್ತಿದ್ದಂತೆಯೇ ರಾಜನು ಯೋಚನೆಗೆ ಬಿದ್ದ. ಇದುವರೆಗೂ ಅವನಲ್ಲಿಗೆ ಬಂದ ಯಾವ ಯಾಚಕನೂ ಇಂತಹ ದಾನ ಕೇಳಿರಲಿಲ್ಲ. ಆದರೆ ಈ ಪಂಡಿತ ಕೇಳಿರುವ ದಾನವನ್ನು ಕೊಡುವುದಾದರೂ ಹೇಗೆ? ಖಜಾನೆ ಅಪಾರ ಸಂಪತ್ತಿನಿಂದ ತುಂಬಿ ತುಳುಕುತ್ತಿರುವುದೇನೋ ನಿಜ. ಆದರೆ ಅದರಲ್ಲಿ ಒಂದು ಚಿಕ್ಕಾಸೂ ಕೂಡಾ ರಾಜ ಕಷ್ಟಪಟ್ಟು ಬೆವರು ಸುರಿಸಿ ಸಂಪಾದಿಸಿದ್ದು ಆಗಿರಲಿಲ್ಲ. ಪಂಡಿತನನ್ನು ಗದರಿಸಿ ಏನೂ ನೀಡದೆ ಕಳುಹಿಸಿ ಬಿಡುವುದೇನೋ ಸುಲಭದ ಕೆಲಸ. ಆದರೆ ದಾನಶೀಲನೆಂಬ ತನ್ನ ಕೀರ್ತಿಗೆ ಅಪಖ್ಯಾತಿ ಅಂಟಿಕೊಳ್ಳುತ್ತದೆ ಎಂದೆಲ್ಲಾ ಯೋಚಿಸಿದ ರಾಜ "ಪಂಡಿತರೇ, ನಾಳೆ ಸಂಜೆ ತಾವು ಇಲ್ಲಿಗೆ ಬಂದರೆ, ನಿಮ್ಮ ಬಯಕೆಯಂತೆ ನನ್ನ ಶ್ರಮದ ದುಡಿಮೆಯನ್ನು ನಿಮಗೆ ನೀಡುತ್ತೇನೆ" ಎಂದು ಹೇಳಿ ಪಂಡಿತನನ್ನು ಕಳುಹಿಸಿದ.

ಮರುದಿನ ರಾಜ ಬಡ ರೈತನಂತೆ ಮಾರುವೇಷ ಧರಿಸಿ ಹೊರಟ. ಅಲ್ಲಿ ದೂರದ ಹಳ್ಳಿಯೊಂದರ ಹೊಲದಲ್ಲಿ ವಯಸ್ಸಾದ ರೈತನೊಬ್ಬ ಕೆಲಸ ಮಾಡುತ್ತಿರುವುದು ಕಂಡಿತು. ರಾಜ ಸೀದಾ ಅವನ ಬಳಿಗೆ ಹೋಗಿ "ಅಜ್ಜಯ್ಯಾ, ನನಗೇನಾದರೂ ಕೆಲಸ ಕೊಡುವಿರಾ?" ಎಂದು ಕೇಳಿದ. ಆ ಮುದುಕನಾದರೋ ರಾಜನತ್ತ ತಿರುಗಿಯೂ ನೋಡದೆ "ಕೆಲಸವೇನೋ ಬೇಕಾದಷ್ಟಿದೆ, ಬಾರಯ್ಯಾ. ಆದರೆ ಶ್ರದ್ಧೆಯಿಂದ ದುಡಿಯುವ ಮನಸ್ಸಿರಬೇಕಷ್ಟೇ?" ಎಂದವನು "ಒಂದು ಮಾತು ನೆನಪಿರಲಿ, ನಾನು ಕೊಟ್ಟದ್ದನ್ನು ನೀನು ಗೊಣಗದೆ ತೆಗೆದುಕೊಂಡು ಹೋಗ ಬೇಕು ತಿಳಿಯಿತೇ? " ಎಂದು ಕೇಳಿದ.

"ಆಯಿತು ಅಜ್ಜಯ್ಯ, ನಾನು ಕೆಲಸ ಮಾಡುತ್ತೇನೆ"ಎನ್ನುತ್ತಾ ರಾಜ ಕೆಲಸಕ್ಕೆ ನಿಂತ. ಎಂದೂ ಕಷ್ಟಪಡದ ರಾಜ ಅಂದು ಆ ಮುದಿ ರೈತನ ಹೊಲದಲ್ಲಿ ಸಂಜೆಯವರೆಗೂ ದುಡಿದೇ ದುಡಿದ. ಅವನ ಅಂಗೈ, ಅಂಗಾಲುಗಳಲ್ಲಿ ಅಷ್ಟುದ್ದದ ಬೊಕ್ಕೆಗಳೆದ್ದುವು. ಮುದುಕ ಅದನ್ನು ನೋಡಿ "ಕೆಲಸ ಮಾಡಿ ಅಭ್ಯಾಸವಿಲ್ಲದವನಂತೆ ಕಾಣುತ್ತೀಯಾ? ಇಂಥಾ ಕೆಲಸ ನಿನ್ನಿಂದಾಗದು. ಇನ್ನು ಇಲ್ಲಿಗೆ ಬರಬೇಡ" ಎಂದು ಹೇಳಿ ತನ್ನ ಬುಟ್ಟಿಯಲ್ಲಿ ಉಳಿದಿದ್ದ ಯಾವುದೋ ಮೂರು ಬೀಜಗಳನ್ನು ರಾಜನಿಗೆ ಕೊಡಲು ಹೋದಾಗ "ಏನದು?" ಎಂದು ಕೇಳಿದ ರಾಜ.

"ಅದನ್ನೆಲ್ಲಾ ನೀನು ಕೇಳುವಂತಿಲ್ಲ. ನಮ್ಮ ಕರಾರಿನಂತೆ ನಾನು ಕೊಟ್ಟಿದ್ದನ್ನು ನೀನು ತೆಗೆದುಕೊಂಡು ಹೋಗಬೇಕು" ಎಂದು ಗದರಿಸಿದ ಆ ಮುದಿರೈತ. ರಾಜ ಮರು ಮಾತನಾಡದೆ ಅರಮನೆಗೆ ಬಂದು, ಅಲ್ಲಿ ಕಾಯುತ್ತಿದ್ದ ಪಂಡಿತನ ಕೈಗೆ ಆ ಬೀಜಗಳನ್ನು ಹಾಕಿ, "ಇದಿಷ್ಟೇ ನನ್ನ ಇಂದಿನ ಸಂಪಾದನೆ" ಎಂದ. ಪಂಡಿತ ರಾಜನನ್ನು ಮತ್ತೆ ಆಶೀರ್ವದಿಸಿ ಮನೆಯ ದಾರಿ ಹಿಡಿದ.

ಗಂಡ ರಾಜನಿಂದ ಬಹುಮಾನದ ರಾಶಿಯನ್ನೇ ತರುತ್ತಾನೆಂದು ದಾರಿ ಕಾಯುತ್ತಿದ್ದ ಹೆಂಡತಿ, ಪಂಡಿತ ಬರಿಗೈಯಲ್ಲಿ ಬರುತ್ತಿರುವುದನ್ನು ಕಂಡು ಅಸಹನೆಯಿಂದ ಕುದಿಯುತ್ತ "ಏನು, ನಿಮ್ಮ ಮುಖಕ್ಕೆ ಅರಮನೆಯಲ್ಲಿ ಒಂದಿಷ್ಟಾದರೂ ಪುಡಿಗಾಸು

ಸಿಗಲಿಲ್ಲವೇ?" ಎಂದು ಕೇಳಿದಾಗ. "ರಾಜನಿಂದ ಬಹುಮಾನ ಪಡೆದೇ ನಾನು ಬಂದಿರುವುದು" ಎನ್ನುತ್ತಾ ರಾಜ ಕೊಟ್ಟಿದ್ದ ಮೂರು ಬೀಜಗಳನ್ನು ಹೆಂಡತಿಯ ಕೈಗಿತ್ತ ಪಂಡಿತ.

ಅವುಗಳನ್ನು ನೋಡಿದ ಪಂಡಿತನ ಹೆಂಡತಿ ಕೋಪದಿಂದ "ಕಾಡಿಗೆ ಹೋಗಿ ಕೊಕ್ಕರೆ ಗರಿ ತಂದಂತಾಯಿತು" ಎಂದು ಹೇಳಿ ಆ ಬೀಜಗಳನ್ನು ಕಿಟಕಿಯಿಂದ ತಿಪ್ಪೆ ಗುಂಡಿಗೆ ಎಸೆದು ಬಿಟ್ಟಳು. ಅಷ್ಟರಲ್ಲೇ ಕತ್ತಲಾವರಿಸಿದ್ದರಿಂದ ಆ ಬೀಜಗಳನ್ನು ಹುಡುಕುವುದು ಕಷ್ಟವೆಂದು ಬಗೆದು ಪಂಡಿತ ಬೆಳಗ್ಗೆ ನೋಡಿದರಾಯಿತು ಎಂದು ಸುಮ್ಮನಾದ.

ಕತ್ತಲೆ ಸರಿದು ಬೆಳಗಾಗುವುದೇ ತಡ. ಪಂಡಿತ ಎದ್ದು ಮನೆಯಿಂದ ಹೊರಬಂದು ರಾಜನ ಶ್ರಮದ ದುಡಿಮೆಯ ಬೀಜಗಳನ್ನು ಹುಡುಕಲು ತಿಪ್ಪೆಯತ್ತ ನಡೆದ. ಅಲ್ಲೇನಿದೆ, ಆ ಬೀಜಗಳು ರಾತ್ರಿಯಲ್ಲೇ ಮೊಳೆತು ಬೆಳೆದು ನಿಂತು ಹೂ, ಹಣ್ಣುಗಳಿಂದ ತುಂಬಿ ತುಳುಕುತ್ತಿದೆ. ಒಂದು ಗಿಡದಲ್ಲಿ ಬೆಳ್ಳಿಯ ಹೂಗಳಿದ್ದರೆ, ಇನ್ನೊಂದರಲ್ಲಿ ಬಂಗಾರದ ಹಣ್ಣುಗಳಿದ್ದವು, ಮತ್ತೊಂದರಲ್ಲಿ ಬಗೆ ಬಗೆಯ ಉಡುಪು ತೂಗುತ್ತಿದ್ದವು. ಈ ಬೀಜಗಳು ಶ್ರಮದಿಂದ ಗಳಿಸಿದ ಸಂಪಾದನೆಯೇ ಸರಿ ಎಂದುಕೊಂಡ ಪಂಡಿತ.

# 2. ರೈತ

### ಚರ್ಚೆ

'ದುಡಿಮೆಯ ಫಲ' ಪಾಠದಲ್ಲಿ ರಾಮಣ್ಣನ ಮಕ್ಕಳು ಉಪವಾಸ ಬೀಳಬೇಕಾಯಿತು. ಯಾಕೆ? ರಾಮಣ್ಣನು ಜೀವಂತವಿರುವಾಗ ಕುಟುಂಬವು ಸುಖವಾಗಿ ಜೀವಿಸಲು ಕಾರಣವೇನು? ಎಂದು ಚರ್ಚಿಸುತ್ತಾ ಪಾಠಪ್ರವೇಶ ಮಾಡುವುದು.

### ಚಿತ್ರ ಓದುವಿಕೆ

ಪಠ್ಯ ಪುಸ್ತಕದಲ್ಲಿರುವ 31 ನೇ ಪುಟದಲ್ಲಿರುವ ಚಿತ್ರವನ್ನು ಮಕ್ಕಳು ಸೂಕ್ಷ್ಮವಾಗಿ ಗಮನಿಸಲಿ.

ಚಿತ್ರದಲ್ಲಿ ಏನೇನು ಕಾಣುತ್ತೀರಿ?

ಹಾರೆ ಹಿಡಿದು ನಡೆಯುವವನು ಯಾರು?

ರೈತರು ಏನು ಮಾಡುತ್ತಿದ್ದಾರೆ?

ಅವರು ಉಳುತ್ತಿರುವುದು ಯಾಕೆ?

ರೈತರು ದುಡಿಯುವುದರಿಂದ ಯಾರಿಗೆಲ್ಲಾ ಪ್ರಯೋಜನವಿದೆ. ಇತ್ಯಾದಿ ಪ್ರಶ್ನೆಗಳ ಮೂಲಕ ಚರ್ಚೆ ನಡೆಸುತ್ತಾ ಪಾಠ ಪ್ರವೇಶ ಮಾಡಬಹುದಲ್ಲವೇ?

### ಹಾಡಿರಿ

ಮಕ್ಕಳು ವೈಯುಕ್ತಿಕವಾಗಿ (ರೈತ) ಕವಿತೆಯನ್ನು ಓದಲಿ. ಬಳಿಕ ಗುಂಪುಗಳಲ್ಲಿ ಕುಳಿತು ಆ ಕವಿತೆಗೆ ಸೂಕ್ತವಾದ, ರಾಗ, ತಾಳ, ಲಯವನ್ನು ಅಳವಡಿಸಲಿ. ಆ ಮೇಲೆ ಪ್ರತಿಯೊಂದು ಗುಂಪು ರಾಗ, ತಾಳ, ಲಯದೊಂದಿಗೆ ಹಾಡಲಿ. ಉಳಿದ ಗುಂಪಿನವರು ಅಂಕಗಳನ್ನು ನೀಡಲಿ. ಕೊನೆಗೆ ಉತ್ತಮವಾಗಿ ಹಾಡಿದ ಗುಂಪನ್ನು ಅಭಿನಂದಿಸಲಿ. ಮೌಲ್ಯನಿರ್ಣಯ ಸೂಚಕಗಳನ್ನು ಈ ಹಿಂದಿನ ಘಟಕದಲ್ಲಿ ನೀಡಲಾಗಿದೆ. ಇಲ್ಲಿ ಮಕ್ಕಳೇ ಸೂಚಕಗಳನ್ನು ಕಂಡುಹಿಡಿಯಲಿ. ಮೌಲ್ಯನಿರ್ಣಯ ಮಾಡಲಿ. ಅಗತ್ಯವಿದ್ದರೆ ಅಧ್ಯಾಪಕರು ಸಹಾಯ ಮಾಡುವುದು.

### ಚರ್ಚಿಸಿರಿ

"ರೈತನು ನಕ್ಕರೆ ದೇಶವೇ ನಗುವುದು" ಎಂಬ ಕವಿವಾಣಿಯ ಬಗ್ಗೆ ಚರ್ಚೆ ನಡೆಸುವುದು. ಚರ್ಚೆಗೆ ಪೂರಕವಾಗಿ ಯಾವೆಲ್ಲಾ ಪ್ರಶ್ನೆಗಳನ್ನು ಕೇಳಬಹುದು.

- 'ರೈತನು ನಗುವುದು' ಎಂದರೇನು?
- ರೈತನಿಗೆ ಹೆಚ್ಚು ಸಂತಸವಾದುದು ಯಾವಾಗ?
- ರೈತನಿಗೆ ಸಿಕ್ಕಿದ ಅಧಿಕ ಬೆಳೆಯನ್ನು ಏನು ಮಾಡುತ್ತಾನೆ?

### ಉತ್ತರಿಸಿರಿ

ಮಕ್ಕಳು ಆಶಯ ಗ್ರಹಣ ಪ್ರಶ್ನೆಗಳಿಗೆ ಉತ್ತರ ಬರೆದು ಮಂಡಿಸಲಿ. ಅಧ್ಯಾಪಕರು ಇನ್ನೂ ಹೆಚ್ಚಿನ ಪ್ರಶ್ನೆಗಳನ್ನು ಕೊಟ್ಟು ಉತ್ತರ ಬರೆಯಲು ಸೂಚಿಸಬಹುದು.

### ಸ್ವಾರಸ್ಯ ಬರೆಯಿರಿ

ಅಧ್ಯಾಪಕರು ಪಾಠದ ಚಟುವಟಿಕೆಯಲ್ಲಿ ನೀಡಿರುವ ಪದ್ಯದ ಸಾಲುಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಬಳಿಕ ಚರ್ಚೆ ನಡೆಸುವುದು.

- ದೇಶದ ಆಟ ಎಂದರೇನು?
- ದೇಶದ ಆಟಕ್ಕೂ ರೈತನಿಗೂ ಏನಾದರೂ ಸಂಬಂಧವಿದೆಯೇ?
- ರೈತನು ಕ್ಷೇಮವನ್ನೂ ಶಾಂತಿಯನ್ನೂ ಹೇಗೆ ಉಂಟುಮಾಡುವನು?
- ಮಕ್ಕಳು ವೈಯಕ್ತಿಕವಾಗಿ ಟಿಪ್ಪಣಿ ತಯಾರಿಸಲಿ. ಕೆಲವರು ಮಂಡಿಸಲಿ.

ಮಂಡಿಸಿದ ಸ್ವಾರಸ್ಯ ಟಿಪ್ಪಣಿಯ ಕುರಿತು ಚರ್ಚೆ ನಡೆಸಿ ಅದು ಹೇಗಿರಬೇಕೆಂದು ಚರ್ಚೆ ನಡೆದ ಬಳಿಕ ಕ್ರೋಡೀಕರಿಸುವುದು.

**ಸ್ವಾರಸ್ಯ ಟಿಪ್ಪಣಿಯ ಸೂಚಕಗಳು**

- ಆಶಯವು ಸಂಕ್ಷಿಪ್ತವೂ ಸ್ಪಷ್ಟವೂ ಆಗಿದ್ದು ಕ್ರಮೀಕರಿಸಿ ಬರೆಯಲಾಗಿದೆ.
- ಕವಿತೆಯ ಸಾಲುಗಳು ಪ್ರತಿಬಿಂಬಿಸುವ ಆಶಯಗಳನ್ನು ತಿಳಿಸಲಾಗಿದೆ.
- ಕೊಟ್ಟ ಸಾಲುಗಳಲ್ಲಿರುವ ಪದ ಜೋಡಣೆಯ ಚಮತ್ಕಾರಗಳನ್ನು ಕಂಡುಕೊಂಡು ವಿಶದೀಕರಿಸಲಾಗಿದೆ.
- ಭಾಷಾ ಘಟಕಗಳನ್ನು ಬಳಸಿಕೊಂಡು ತನ್ನದೇ ಆದ ಶೈಲಿಯಲ್ಲಿ ಬರೆಯಲಾಗಿದೆ.

ಸೂಚಕಗಳ ಆಧಾರದಲ್ಲಿ ಮಕ್ಕಳು ತಮ್ಮ ರಚನೆಗಳನ್ನು ಉತ್ತಮಪಡಿಸಿ ಗುಂಪಿನಲ್ಲಿ ಮಂಡಿಸಲಿ. ಮಕ್ಕಳು ಗುಂಪಿನಲ್ಲಿ ಸೂಚಕಗಳ ಆಧಾರದಲ್ಲಿ ಮೌಲ್ಯ ನಿರ್ಣಯ ನಡೆಸಿ ಉತ್ತಮ ಟಿಪ್ಪಣಿಯನ್ನು ಆಯ್ಕೆ ಮಾಡಲಿ.

ಪ್ರತಿ ಗುಂಪಿನವರೂ ಟಿಪ್ಪಣಿಯನ್ನು ಮಂಡಿಸಲಿ. ಸೂಚಕಗಳ ಆಧಾರದಲ್ಲಿ ಉತ್ತಮ ಟಿಪ್ಪಣಿಯನ್ನು ಆಯ್ಕೆ ಮಾಡಿ ಅಭಿನಂದಿಸುವುದು. ಬಳಿಕ ಅಧ್ಯಾಪಕರು ತಾವು ತಯಾರಿಸಿದ ಸ್ವಾರಸ್ಯ ಟಿಪ್ಪಣಿಯನ್ನು ಬರೆದು ಮಂಡಿಸುವುದು.

## ಸ್ವಾರಸ್ಯ ಟಿಪ್ಪಣಿ ಹೀಗೂ ಆಗಬಹುದಲ್ಲವೇ?

ಕವಿತೆಯ ಈ ಸಾಲುಗಳು ರೈತನ ಬಗ್ಗೆ ತಿಳಿಸುತ್ತವೆ. 'ದೇಶದ ಆಟವು ಇವನೊಳು ನಿಂತಿದೆ' ಇಲ್ಲಿರುವ ಪದ ಜೋಡಣೆ ಸರಳವಾದರೂ ವಿಶಾಲ ಅರ್ಥವನ್ನು ಹೊಂದಿದೆ. ಇಲ್ಲಿ 'ದೇಶದ ಆಟ' ಎಂಬುದು ನಮ್ಮ ದೇಶದ ಆಗು ಹೋಗುಗಳು, ಅಭಿವೃದ್ಧಿ ಕಾರ್ಯಗಳು, ಜನರ ನಲಿವು ಎಲ್ಲವನ್ನೂ ಒಳಗೊಂಡಿದೆ. 'ಇವನೊಳು ನಿಂತಿದೆ' ಎಂದರೆ ರೈತನನ್ನು ಅವಲಂಬಿಸಿದೆ. ನಮ್ಮ ದೇಶವು ಕೃಷಿ ಪ್ರಧಾನವದ ದೇಶ. ಎಲ್ಲ ರೀತಿಯ ಉತ್ಪನ್ನಗಳನ್ನು ಮಾಡಲೂ ಕೃಷಿ ಉತ್ಪನ್ನಗಳೇ ಮೂಲ. ರೈತನು ಕೃಷಿ ಮಾಡದಿದ್ದರೆ ದೇಶ ಅಭಿವೃದ್ಧಿಯಾಗದು. ಜನರು ಉಪವಾಸದಿಂದ ಬಳಲಬೇಕಾದೀತು. ಆಹಾರಕ್ಕಾಗಿ ಜನರು ಕಳ್ಳತನ, ದರೋಡೆ ಮೊದಲಾದ ಅಡ್ಡದಾರಿಯನ್ನು ಹಿಡಿಯುವ ಸಾಧ್ಯತೆ ಇದೆ. ಇದರಿಂದ ದೇಶದ ಶಾಂತಿಯು ಕದಡಬಹುದು. ಆದುದರಿಂದ ಕವಿ ಕೊನೆಯ ಸಾಲಿನಲ್ಲಿ ಕ್ಷೇಮವ ಶಾಂತಿಯ ಬೆಳೆಸುವನು ಎಂದು ಹೇಳಿರುವರು. ರೈತನು ಚೆನ್ನಾಗಿ ದುಡಿದರೇನೇ ದೇಶವು ಸುಭಿಕ್ಷವಾಗುವುದು ಎಂಬುದು ಈ ಸಾಲಿನ ತಾತ್ಪರ್ಯವಾಗಿದೆ.

## ಪ್ರಾಸಪದ ಬರೆಯಿರಿ

ಕವಿತೆಯಲ್ಲಿ ಬರುವ ಅಂತ್ಯಪ್ರಾಸ ಪದಗಳನ್ನು ಕಂಡುಹಿಡಿದು ಬರೆಯಲಿ. ಬಳಿಕ ಅದೇ ರೀತಿ ಅಂತ್ಯಪ್ರಾಸವಿರುವ ಇನ್ನಷ್ಟು ಪದಗಳನ್ನು ಬರೆಯಲಿ.

ಉದಾ : ತೊಳೆಯುತ, ಹೊಳೆಯುತ, ಕೊಳೆಯುತ, ಮೊಳೆಯುತ

ಸಾರುವನು, ಹಾರುವನು, ಮಾರುವನು, ಜಾರುವನು...........

## ಆಸ್ವಾದನ ಟಿಪ್ಪಣಿ ತಯಾರಿಸಿ

ಪ್ರಾರಂಭದಲ್ಲಿ ಲಘು ಚರ್ಚೆ ನಡೆಸುವುದು.

- ಈ ಕವಿತೆ ಇಷ್ಟವಾಯಿತೆ?
- ಈ ಕವಿತೆಯಲ್ಲಿ ನಿಮಗೆ ಇಷ್ಟವಾದ ಸಾಲುಗಳು ಯಾವುವು? ಯಾಕೆ?
- ಕವಿತೆಯಲ್ಲಿ ನಿಮ್ಮನ್ನು ಆಕರ್ಷಿಸಿದ ವಿಚಾರಗಳು ಯಾವುವು?

### ಆಸ್ವಾದನ ಟಿಪ್ಪಣಿ ಹೀಗೂ ಆಗಬಹುದಲ್ಲವೇ.

### ರೈತ

ವಿಠ್ಠಲ ವಿ.ಗಾಂವಕರ್ ರಚಿಸಿದ 'ರೈತ' ಎಂಬ ಈ ಕವಿತೆಯು ಸರಳವಾಗಿದ್ದು ಸುಲಭವಾಗಿ ಅರ್ಥೈಸಲು ಸಾಧ್ಯವಾಗುತ್ತದೆ. ಕವಿತೆಯ ಪ್ರತಿ ಪದ್ಯದಲ್ಲೂ ಆರುಸಾಲುಗಳಿದ್ದು ಮೂರನೇ ಮತ್ತು ಆರನೇ ಚರಣದಲ್ಲಿ ಪ್ರಾಸಾಕ್ಷರಗಳು ಇವೆ. ಇದು ಉತ್ತಮ ಗೇಯತೆ ಇರುವ ಕವಿತೆಯಾಗಿದ್ದು ಹಾಡಲು ಖುಷಿಯಾಗುತ್ತದೆ.

ಈ ಕವಿತೆಯಲ್ಲಿ ರೈತನನ್ನು ಹೊಗಳಲಾಗಿದೆ. ಉದಾಹರಣೆಯಾಗಿ ಕವಿತೆಯ ಎರಡನೇ ಪದ್ಯವನ್ನು ಹೇಳಬಹುದು. ಕವಿ ರೈತನನ್ನು ಅನ್ನದಾತ ಎಂದು ಕರೆಯುತ್ತಾರೆ. ಅವನು ಕೇವಲ ಮನುಷ್ಯರಿಗೆ ಮಾತ್ರ ಅನ್ನ ನೀಡುವವನಲ್ಲ ಪ್ರಾಣಿ, ಪಕ್ಷಿಗಳ ಬದುಕಿಗೂ ಆಸರೆಯಾಗಿದ್ದಾನೆ ಎಂಬುದು ಕಟು ಸತ್ಯ. ಅದೇ ರೀತಿ ರೈತನು ಶ್ರಮ ಜೀವಿಯಾಗಿದ್ದಾನೆ ಎಂಬುದನ್ನು ಕವಿ ಒಂದನೇ ಪದ್ಯದಲ್ಲಿ ವಿಶದೀಕರಿಸಿದ್ದಾರೆ. ರೈತನು ಒಂಟಿಯಲ್ಲ ಅವನ ಬದುಕು ದನ, ಎತ್ತುಗಳೊಂದಿಗೆ ಸಾಗುತ್ತದೆ ಎಂಬ ಕವಿಯ ಭಾವನೆಯು ರೈತನ ಪ್ರಾಣಿ ಸ್ನೇಹವನ್ನು ಬಿಂಬಿಸುತ್ತದೆ.

ನನಗೆ ಈ ಕವಿತೆಯಲ್ಲಿ ಕೊನೆಯ ಪದ್ಯ ತುಂಬಾ ಇಷ್ಟವಾಯಿತು. ಯಾಕೆಂದರೆ ಇದು ಈ ಕವಿತೆಯ ಜೀವವಾಗಿದೆ ಎಂಬುದು ನನ್ನ ಅನಿಸಿಕೆ. ರೈತನು ಸಂತೋಷದಿಂದ ದುಡಿದು ಸಂಪಾದಿಸಿದರೆ ದೇಶದ ಎಲ್ಲರೂ ನೆಮ್ಮದಿಯಿಂದಿರುವರು. ಯಾಕೆಂದರೆ ರೈತನು ಕೃಷಿ ಮಾಡಿ ಉತ್ಪಾದಿಸುತ್ತಾನೆ. ಮಿಕ್ಕಿದ ಬೆಳೆಯನ್ನು ಮಾರಿ ತನ್ನ ಜೀವನವನ್ನು ಸುಖಮಯವಾಗಿಸುತ್ತಾನೆ. ಮಿಕ್ಕಿದ ಬೆಳೆಯೇ ಇತರರಿಗೆ ಆಹಾರ, ಆರೋಗ್ಯ, ನೆಮ್ಮದಿಯನ್ನು ನೀಡುತ್ತದೆ. ರೈತನಿಗೆ ಕಷ್ಟ ಬಂದರೆ ಯಾರಿಗೂ ನೆಮ್ಮದಿಯಿಲ್ಲ ಎಂಬ ವಿಶಾಲ ಅರ್ಥದ ವಿಚಾರವನ್ನು ಬಹಳ ಸರಳವಾಗಿ ತಿಳಿಸಿದ್ದಾರೆ. ಕವಿ, ರೈತನನ್ನು ಗೌರವಿಸಬೇಕೆಂದೂ, ಎಲ್ಲರೂ ಕೃಷಿ ಮಾಡಬೇಕೆಂದೂ ರೈತರು ಇಲ್ಲದಿದ್ದರೆ ದೇಶವು ಉಳಿಯದು ಎಂದೂ ತಿಳಿಸಿದ್ದಾರೆ. ಒಟ್ಟಿನಲ್ಲಿ ಇದೊಂದು ಉತ್ತಮ ಕವಿತೆಯಾಗಿದ್ದು ವಿಶಾಲ ಆಶಯವನ್ನು ಹೊಂದಿದೆ.

## ಪ್ರಬಂಧ ತಯಾರಿಸಿರಿ

ನಮ್ಮ ಊರಿನ ಬೆಳೆಗಳು ಎಂಬ ವಿಷಯದ ಕುರಿತು ತರಗತಿಯಲ್ಲಿ ವಿಚಾರ ಸಂಕಿರಣ ನಡೆಸುವುದು. ವಿಚಾರ ಸಂಕಿರಣ ನಡೆಸುವ ಮೊದಲು ಮಾಡಬೇಕಾದ ಸಿದ್ಧತೆಗಳು ಏನೆಲ್ಲ?

- ದಿನಾಂಕ ಮತ್ತು ಸಮಯ ನಿರ್ಧರಿಸುವುದು
- ವಿವಿಧ ಮೂಲಗಳಿಂದ ವಿವರಗಳನ್ನು ಸಂಗ್ರಹಿಸಿ ಪ್ರಬಂಧ ತಯಾರಿಸುವುದು.

  ಪ್ರಕ್ರಿಯೆಗಳನ್ನು ದಾಟಿ ಪ್ರತಿ ಗುಂಪಿನಿಂದ ಉತ್ತಮವಾದ ಪ್ರಬಂಧವನ್ನು ಆಯ್ಕೆ ಮಾಡುವುದು.
- ಪ್ರಬಂಧ ಮಂಡಿಸುವವರು, ಸಮನ್ವಯಕಾರ, ಸ್ವಾಗತ ಧನ್ಯವಾದ ಇತ್ಯಾದಿ ಜವಾಬ್ದಾರಿಗಳನ್ನು ಹಂಚುವುದು.
- ಆಮಂತ್ರಣ ಪತ್ರಿಕೆ ತಯಾರಿಸುವುದು.
- ಪ್ರಬಂಧ ಮಂಡಿಸುವವರಿಗೂ, ಆಲಿಸುವವರಿಗೂ ಸೂಚನೆಗಳನ್ನು ನೀಡುವುದು(ಪ್ರಶ್ನೆ ಕೇಳುವುದು, ಉತ್ತರಿಸುವುದು, ಆರೋಗ್ಯಕರ ಚರ್ಚೆ ನಡೆಸುವುದು ಇತ್ಯಾದಿ)
- ಕಾರ್ಯಕ್ರಮದ ಪಟ್ಟಿ ತಯಾರಿಸುವುದು.
- ಕಾರ್ಯಕ್ರಮದ ಸಂಪೂರ್ಣ ಜವಬ್ದಾರಿಯನ್ನು ಮಕ್ಕಳಿಗೆ ನೀಡುವುದು.
- ಅಧ್ಯಾಪಕರು ಸೂಕ್ತಮಾರ್ಗದರ್ಶನ ನೀಡುವುದು.

## ವಿಚಾರ ಸಂಕಿರಣ ನಡೆಸುವುದು ಹೇಗೆ?

- ಸಮಯಕ್ಕೆ ಸರಿಯಾಗಿ ಕಾರ್ಯಕ್ರಮ ಆರಂಭಿಸುವುದು
- ಅಧ್ಯಕ್ಷರನ್ನು, ಪ್ರಬಂಧ ಮಂಡಿಸುವವರನ್ನು, ಸಮನ್ವಯಕಾರರನ್ನು ಮತ್ತು ಇತರ ಎಲ್ಲರನ್ನೂ ಸ್ವಾಗತಿಸುವುದು.
- ಅಧ್ಯಕ್ಷರಿಂದ ಮಾತು.
- ಸಮನ್ವಯಕಾರರಿಂದ ವಿಚಾರ ಸಂಕಿರಣದ ಕುರಿತು ಒಂದೆರಡು ಮಾತು
- ಪ್ರಬಂಧ ಮಂಡನೆ–ಚರ್ಚೆ
- ಸಮನ್ವಯಕಾರರಿಂದ ಅಭಿಪ್ರಾಯ ಮಂಡನೆ
- ಧನ್ಯವಾದದೊಂದಿಗೆ ಕಾರ್ಯಕ್ರಮದ ಮುಕ್ತಾಯ.

  ಮುಂದುವರಿದ ಚಟುವಟಿಕೆಯಾಗಿ ವಿಚಾರ ಸಂಕಿರಣದ ವರದಿ ತಯಾರಿಸಿ ಪತ್ರಿಕೆಗೆ ನೀಡುವುದು.

**ಸಂಚಿಕೆ ತಯಾರಿಸಿರಿ**

ಮಕ್ಕಳು ದುಡಿಮೆಗೆ ಸಂಬಂಧಿಸಿದ ಕವಿತೆಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಸಂಚಿಕೆ ತಯಾರಿಸಲಿ. ಈ ಸಂಚಿಕೆಗೆ ಯೋಗ್ಯವಾದ ಸಂಪಾದಕೀಯ ತಯಾರಿಸಲಿ. ಅಧ್ಯಾಪಕರ ಮುನ್ನುಡಿ ಇದ್ದರೆ ಇನ್ನೂ ಒಳ್ಳೆಯದಲ್ಲವೇ?

**ಪೂರ್ತಿಗೊಳಿಸಿರಿ**

ಪಾಠ ಪುಸ್ತಕದ 33ನೇ ಪುಟದಲ್ಲಿ ನೀಡಲಾದ ಕವಿತೆಯಲ್ಲಿ ಬಿಟ್ಟು ಹೋದ ಸಾಲುಗಳನ್ನು ಪೂರ್ತಿಗೊಳಿಸಿ ಮಂಡಿಸಲಿ.

ಟಪ್ ಟಪ್ ಸದ್ದು ಮಾಡಿ
ವೈದ್ಯರಿಲ್ಲಿ ಬಂದರು
ನಗುವ ಚೆಲ್ಲಿ ರೈತರಲ್ಲಿ
ವಿಷಯ ಕೇಳಿ ತಿಳಿದರು

ಕಣ್ಣು ಬಾಯಿ ತೆರೆದು ನೋಡಿ
ರೋಗವನ್ನು ಅರಿತರು
ಹರಯ ಭಾರವನ್ನು ತಿಳಿದು
ಚೀಟಿಬರೆದು ಕೊಟ್ಟರು.

**ಪೂರಕ ಓದಿಗೆ**

## ರೈತನ ಹಾಡು

ರೈತನಿಂದಲೆ ಎಲ್ಲ ಜನರು ಅನ್ನವನುಣುತಿಹರು
ನಿತ್ಯವು ಅವನು ದುಡಿಯುತಲಿಹನು ಸುರಿಸುತಲಿ ಬೆವರು
ಅವನ ದುಡಿಮೆಯೊಂದೇ ಜನರ ಬಾಳ ಆಧಾರ
ಮರೆಯಬೇಡಿ ಎಂದೂ ನೀವು ಅವನ ಉಪಕಾರ
ಅವನ ಸೇವೆಯ ಮರೆತವರೆಲ್ಲ ದ್ರೋಹಿಗಳಾಗುವರು
ನಿತ್ಯವು ಅವನು ದುಡಿಯುತಲಿಹನು ಸುರಿಸುತಲಿ ಬೆವರು
ಅವನು ನಡೆಸೆ ನೇಗಿಲನ್ನು ಭೂಮಿ ನಗುವುದು
ಅವನ ಶ್ರಮದ ಪ್ರತಿಫಲ ದೊರಕಿ ಜಗವು ಉಳಿಯುವುದು
ರೈತನ ತ್ಯಾಗದ ಕಾರಣದಿಂದಲೆ ಎಲ್ಲರು ಬದುಕುವರು
ನಿತ್ಯವು ಅವನು ದುಡಿಯುತಲಿಹನು ಸುರಿಸುತಲಿ ಬೆವರು

ಸುಳ್ಳು ಕಪಟ ಮೋಸ ಒಂದೂ ಅವನು ಅರಿಯನು
ಭೂಮಿ ತಾಯ ಸೇವೆಯೆ ತನ್ನ ಪೂಜೆ ಎನುವನು
ರೈತನಂತೆಯೆ ಸೇವೆಯ ಮಾಡುವ ಬೇರಿನ್ಯಾರಿಹರು
ನಿತ್ಯವು ಅವನು ದುಡಿಯುತಲಿಹನು ಸುರಿಸುತಲಿ ಬೆವರು

## ಹೆಜ್ಜೆ ಗುರುತು

ಗೊಬ್ಬರ ತುಂಬಿದ ಕೈ ಬರೆದ
ಮಣ್ಣಿನ ಹಾಡು ನನ್ನದು
ಸಗಣಿ ಮೆತ್ತಿದ ಬೆರಳು ಹಿಡಿದ
ಗ್ರಾಮೀಣ ಲೇಖನಿ ನನ್ನದು

ಬೆವರು ಸುರಿಸಿ ಕಷ್ಟದಿ ದುಡಿದ
ನೆಲದ ಪದವು ನನ್ನದು
ಮುದ್ದೆ ಸೊಪ್ಪಿನ ಸಾರು ಕಂಡ
ರೈತರ ಮುದವು ನನ್ನದು

ಕೋರಿ ಬಟ್ಟೆ ತುಂಡನು ತೊಟ್ಟ
ಒರಟು ದೇಹವು ನನ್ನದು
ಒಡೆದ ಕಾಲು ನೆತ್ತರು ಸುರಿಸೋ
ಹೆಜ್ಜೆ ಗುರುತು ನನ್ನದು

ಬಿಸಿಲೇ ಇರಲಿ ಮಳೆಯೇ ಬರಲಿ
ದುಡಿಯೋ ಕಾಯಕ ನನ್ನದು
ಅವರ ಇವರ ಕೈಯೊಡ್ಡಿ ಬೇಡದ
ಸ್ವಂತದ ಬದುಕು ನನ್ನದು

ಮಣ್ಣಿನ ಬದುಕು ನನ್ನದು
ಅಪ್ಪಟ ಬದುಕು ನನ್ನದು
ನಲ್ಮೆಯ ಬದುಕು ನನ್ನದು
ತಾಳ್ಮೆಯ ಬದುಕು ನನ್ನದು

# 3. ಹಸಿರು ಚಿನ್ನ

## ವೀಡಿಯೋ ಪ್ರದರ್ಶನ

ಓರ್ವ ಶ್ರೇಷ್ಠ ಕೃಷಿಕನನ್ನು ಸಂದರ್ಶನ ನಡೆಸುವ ವೀಡಿಯೋ ಕ್ಲಿಪ್ ಒಂದನ್ನು ಪ್ರದರ್ಶಿಸುವುದು.

## ಚರ್ಚೆ

- ಈ ರೀತಿಯ ಕೃಷಿ ಸಾಧಕರು ನಿಮ್ಮ ಊರಿನಲ್ಲಿ ಇದ್ದಾರೆಯೇ?
- ಅವರ ಕೃಷಿ ಸ್ಥಳಕ್ಕೆ ಭೇಟಿ ನೀಡಿರುವಿರಾ?
- ಅವರು ಯಾವ ಯಾವ ಬೆಳೆ ಬೆಳೆಸುತ್ತಾರೆ?
-

ಇತ್ಯಾದಿ ಪ್ರಶ್ನೆಗಳ ಮೂಲಕ ಪಾಠ ಪ್ರವೇಶ ಮಾಡಬಹುದಲ್ಲವೇ?

## ಓದುವಿಕೆ

ಓದುವಿಕೆಯನ್ನು ಪ್ರಕ್ರಿಯಾ ಹಂತಗಳ ಮೂಲಕ ನಡೆಸುವಿರಲ್ಲವೇ?

ಕೆಳಗಿನ ಪ್ರಶ್ನೆಗಳನ್ನು ತಖ್ತೆಯಲ್ಲಿ ಬರೆದು ತೂಗುಹಾಕುವುದು.

1) ಚೇರ್ಕಾಡಿ ರಾಮಚಂದ್ರರಾಯರು ಮೂಡಬಿದಿರೆಯಲ್ಲಿದ್ದ ಉದ್ಯೋಗ ತೊರೆದು ಚೇರ್ಕಾಡಿಗೆ ಬರಲು ಕಾರಣವಾದ ಸನ್ನಿವೇಶ ಯಾವುದು?
2) 'ಈ ಪ್ರಕೃತಿಯಲ್ಲಿ ಎಲ್ಲವೂ ಒಂದಕ್ಕೊಂದು ಕೊಂಡಿ' ಎಂಬುದು ಅವರಿಗೆ ಹೇಗೆ ತಿಳಿಯಿತು.?
3) 'ಒಂದು ಹೊಟ್ಟೆಗೆ ಎರಡು ಕೈಗಳನ್ನು ಕೊಟ್ಟಿದೆ' ಮನಸ್ಸು ಮಾಡಿದರೆ ನಾವು ಎಷ್ಟು ಬೇಕಾದರೂ ಸಂಪಾದಿಸಬಹುದು' ಚೇರ್ಕಾಡಿಯವರ ಭತ್ತದ ಕೃಷಿ ಸಾಧನೆಗೆ ಇದು ಹೇಗೆ ಅನ್ವಯಿಸುತ್ತದೆ?
4) ಚೇರ್ಕಾಡಿಯವರು ಕಲೆಕ್ಟರೊಂದಿಗೆ ಏನು ಹೇಳಿದರು?
5) ಚೇರ್ಕಾಡಿಯವರ ಕೃಷಿ ಮತ್ತು ಆದಾಯಕ್ಕೆ ಸಂಬಂಧಿಸಿದ ವಿವರಗಳನ್ನು ಪಠ್ಯದಲ್ಲಿ ಗುರುತಿಸಿರಿ.
6) ಚೇರ್ಕಾಡಿಯವರು ಇಂದಿನ ಯುವ ಪೀಳಿಗೆಗೆ ನೀಡುವ ಸಂದೇಶವೇನು?

ಮಕ್ಕಳು ಈ ಪ್ರಶ್ನೆಗಳಿಗೆ ಉತ್ತರವಾಗಿ ಬರುವ ಭಾಗವನ್ನು ಗುಂಪುಗಳಲ್ಲಿ ಕಂಡುಹಿಡಿಯಲಿ. ಬಳಿಕ ಗಟ್ಟಿಯಾಗಿ ಓದಿ ಮಂಡಿಸಲಿ.

## ವಾಕ್ಯ ಕಂಡುಹಿಡಿಯಿರಿ

ಅಡಿಗೆರೆ ಎಳೆದ ಪದಗಳ ಸಮಾನಾರ್ಥ ಪದಗಳಿರುವ ವಾಕ್ಯಗಳನ್ನು ಪಾಠದಿಂದ ಕಂಡುಹಿಡಿದು ಬರೆಯಲಿ.

- ಹೆತ್ತವರು ಇಲ್ಲದ ಮಕ್ಕಳು ಜೀವನ ಸಾಗಿಸಲು ಕಷ್ಟಪಡಬೇಕಾಗುತ್ತದೆ.
- ನಾವು ನಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕು.

- ನೀನು ಸುಮ್ಮನೇ ಕುಳಿತು ಯಾಕೆ ಸಮಯವನ್ನು ಕೊಲ್ಲುತ್ತೀಯಾ ಎಂದು ತಂದೆ ಮಗನಲ್ಲಿ ಕೇಳಿದರು.
- ಅಪ್ಪಾ, ಸುಲಭದಲ್ಲಿ ಮರ ಹತ್ತುವ ಯಂತ್ರವನ್ನು ಕಂಡುಹಿಡಿಯಲು ತೊಡಗಿದ್ದೇನೆ' ಎಂದು ಮಗ ಉತ್ತರಿಸಿದನು.
- ಇತ್ತೀಚೆಗಿನ ವರ್ಷಗಳಲ್ಲಿ ಕೃಷಿ ಭೂಮಿಯು ಬಂಜರಾಗುತ್ತಾ ಇದೆ.
- ಆಹಾರದ ಬೆಳೆಗಳನ್ನು ಬೆಳೆಸುವುದು ದೇಶಕ್ಕೆ ಹಿತ ಎಂಬ ಅರಿವು ಉಂಟಾಯಿತು.

## ಚರ್ಚಿಸಿರಿ

ರಟ್ಟೆ ಮುರೀಬೇಕು ರೊಟ್ಟಿ ತಿನ್ನಬೇಕು

ಹೊನ್ನು ವಂಚಿಸಿದರೂ ಮಣ್ಣು ವಂಚಿಸದು

ಈ ಗಾದೆ ಮಾತುಗಳು ಚೇರ್ಕಾಡಿಯವರ ಕೃಷಿ ಜೀವನಕ್ಕೆ ಹೇಗೆ ಹೊಂದಿಕೆಯಾಗುತ್ತದೆ ಎಂಬುದನ್ನು ಚರ್ಚಿಸುವುದು. 'ರಟ್ಟೆ ಮುರೀಬೇಕು ರೊಟ್ಟಿ ತಿನ್ನಬೇಕು', 'ಮಣ್ಣು ವಂಚಿಸಿದರೂ ಹೊನ್ನು ವಂಚಿಸದು ' ಎಂಬೀ ಗಾದೆ ಮಾತುಗಳ ಆಶಯವನ್ನು ಮೊದಲು ಹೇಳಿಸುವುದು. ಬಳಿಕ ಚೇರ್ಕಾಡಿಯವರ ಕೃಷಿ ಜೀವನಕ್ಕೆ ಹೇಗೆ ಹೊಂದಿಕೆಯಾಗುತ್ತದೆ ಎಂಬುದನ್ನು ಚರ್ಚಿಸುವುದು.

## ಕ್ರೋಢೀಕರಣ

- ಅನಾಥರಾದ ರಾಮಚಂದ್ರರಾಯರು ಕೈಮಗ್ಗದ ಕೆಲಸ ಮಾಡುತ್ತಾ ಕೃಷಿ ಆರಂಭಿಸಿದರು.
- ತಮಗಿರುವ ಕೇವಲ ಎರಡೂವರೆ ಎಕರೆ ಭೂಮಿಯಲ್ಲಿ ಹಲವು ತರದ ಕೃಷಿ ಮಾಡಿದ್ದಾರೆ.
- ಯಾಂತ್ರೀಕೃತ ಕೃಷಿ ಮಾಡದೆ ಸಾಂಪ್ರದಾಯಿಕ ಕೃಷಿ ಮಾಡಿದರು.
- ನೀರಾವರಿಗಾಗಿ ಆಳದ ಬಾವಿಯಿಂದ ನೀರೆತ್ತಲು 'ಸರ್ವೋದಯ ರಾಟೆ'ಯನ್ನು ಕಂಡುಹಿಡಿದರು.
- ತನ್ನ ಸ್ವಂತ ನೆಲದಲ್ಲಿ ದುಡಿದು ಸಂಪಾದಿಸಿದುದರಲ್ಲಿ ಜೀವನದ ಖರ್ಚು ಕಳೆದು ಲಕ್ಷಗಳಷ್ಟು ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇರಿಸಿದ್ದಾರೆ.

## ಉತ್ತರಿಸಿರಿ

ಪಾಠದ ಆಶಯ ಗ್ರಹಣವಾಗಿದೆಯೇ ಎಂಬುದನ್ನು ತಿಳಿಯುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಮಕ್ಕಳು ಪ್ರಶ್ನೆಗಳಿಗೆ ಉತ್ತರ ಬರೆದು ಮಂಡಿಸಲಿ. ಚರ್ಚಿಸಿ ಸರಿಯಾದ ಉತ್ತರಗಳನ್ನು ಕಂಡು ಹಿಡಿದು ಬರೆಯಲು ಸಹಾಯ ಮಾಡುವುದು.

## ಟಿಪ್ಪಣಿ ತಯಾರಿಸಿರಿ

ಆಳು – ಯಜಮಾನ ಎಂಬ ಪದಗಳ ಅರ್ಥದ ಕುರಿತು ಚರ್ಚೆ ನಡೆಸಬಹುದು. ಬಳಿಕ ಮಕ್ಕಳು ವೈಯಕ್ತಿಕವಾಗಿ ಟಿಪ್ಪಣಿ ತಯಾರಿಸಿ ಮಂಡಿಸಲಿ.

ಗುಂಪು ಚರ್ಚೆಯ ಮೂಲಕ ಉತ್ತಮಪಡಿಸಲಿ.

ಅಧ್ಯಾಪಕರು ಅಗತ್ಯವಿದ್ದಲ್ಲಿ ಸಹಾಯ ಮಾಡುವುದು.

### ಟಿಪ್ಪಣಿ ಹೀಗೂ ಇರಬಹುದಲ್ಲವೇ

ಚೇರ್ಕಾಡಿಯವರು ಸ್ವಾವಲಂಬನೆಯ ಬದುಕಿನ ಕುರಿತು ಹೇಳುತ್ತಾರೆ. ನಾವು ಇರುವ ಭೂಮಿಯಲ್ಲಿ ಚೆನ್ನಾಗಿ ದುಡಿದು ಸಂಪಾದಿಸಿದರೆ ಅದು ನಮ್ಮ ಬದುಕಿಗೆ ಆಧಾರವಾಗುತ್ತದೆ. ಚೇರ್ಕಾಡಿಯವರು ತಾವೇ ಹಾರೆ, ಗುದ್ದಲಿ ತೆಗೆದು ಆಳಿನಂತೆ ಕೆಲಸ ಮಾಡಿ ಉತ್ತಮ ಫಸಲನ್ನು ಗಳಿಸಿದರು. ಶ್ರಮ ಪಟ್ಟು ಕೆಲಸ ಮಾಡಿದುದರ ಫಲವಾಗಿ ಸುಖ ಜೀವನವನ್ನು ನಡೆಸಿದರು. ಅಲ್ಲದೆ ಲಕ್ಷಾಂತರ ರೂ.ಗಳನ್ನು ಸಂಪಾದಿಸಿ ಬ್ಯಾಂಕಿನಲ್ಲಿ ಠೇವಣಿ ಇರಿಸಿದರು. ಆರಂಭದಲ್ಲಿ ಆಳಿನಂತೆ ದುಡಿದು ಬಳಿಕ ಯಜಮಾನರಂತೆ ಬದುಕು ಸಾಗಿಸಿದರು. ಇತರರ ಆಳಾಗಿ ದುಡಿಯುವವರು ಎಂದಿಗೂ ಆಳಾಗಿಯೇ ಉಳಿಯುತ್ತಾನೆ. ಆದರೆ ಸ್ವಂತ ಭೂಮಿಯಲ್ಲಿ ಆಳಾಗಿ ದುಡಿದರೆ ಒಂದಲ್ಲ ಒಂದು ದಿನ ಯಜಮಾನನಾಗುತ್ತಾನೆ. ಸ್ವಂತ ಭೂಮಿಯಲ್ಲಿ ಶ್ರಮ ಪಟ್ಟು ದುಡಿದರೆ ನೆಮ್ಮದಿಯಿಂದ ಜೀವಿಸಬಹುದು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಆದುದರಿಂದ 'ನಾ೦ೀವು ಇತರರ ಆಳಾಗಿ ದುಡಿಯದೆ ಸ್ವಂತ ಭೂಮಿಯಲ್ಲಿ ಆಳಾಗಿ ದುಡಿದರೆ ನಾವೇ ಯಜಮಾನರಾಗಬಹುದು' ಎಂಬ ಚೇರ್ಕಾಡಿಯವರ ಮಾತು ನಿತ್ಯ ಸತ್ಯ.

### ಅಭಿನಂದನ ಪತ್ರ ತಯಾರಿಸಿರಿ

ಮಕ್ಕಳನ್ನು ಗುಂಪುಗಳಾಗಿ ಮಾಡುವುದು. ಕೆಲವು ಅಭಿನಂದನ ಪತ್ರಗಳನ್ನು ಮಕ್ಕಳ ಗುಂಪಿಗೆ ನೀಡುವುದು. ಅವರು ಅವುಗಳನ್ನು ಗುಂಪಿನಲ್ಲಿ ಓದಲಿ. ಅಭಿನಂದನ ಪತ್ರದಲ್ಲಿ ಏನೆಲ್ಲಾ ಇರಬೇಕು ಎಂಬುದರ ಕುರಿತು ಚರ್ಚೆ ನಡೆಸುವುದು.

ಹೀಗೊಂದು ಅಭಿನಂದನಾ ಪತ್ರ.

ಕಮಲಪುರ
18–07–2015

ಒಲವಿನ ಪುರುಷಯ್ಯನವರಿಗೆ ವಂದನೆಗಳು.

ಈ ವರ್ಷದ ಪದ್ಮಶ್ರೀ ಪ್ರಶಸ್ತಿಯನ್ನು ಪಡೆದು ನಾಡಿಗೆ ಕೀರ್ತಿ ತಂದ ನಿಮಗೆ ನನ್ನ ಅಭಿನಂದನೆಗಳು. ತಾವು ಕಳೆದ ಇಪ್ಪತ್ತೈದು ವರ್ಷಗಳಿಂದ 'ಪದ್ಮನಾಭ ಕೃಪಾಪೋಷಿತ ಯಕ್ಷಗಾನ ಮಂಡಳಿ'ಯಲ್ಲಿ ಕಲಾವಿದನಾಗಿ ಸೇವೆ ಸಲ್ಲಿಸುತ್ತಿದ್ದೀರಿ. ವಿವಿಧ ಪಾತ್ರಗಳನ್ನು ನಿರ್ವಹಿಸಿ ನಮ್ಮ ಮನಸ್ಸಿನಲ್ಲಿ ಸದಾ ನೆಲೆಯೂರಿದ್ದೀರಿ. ತಾವು ಸಹಜವಾಗಿಯೂ ಈ ಪ್ರಶಸ್ತಿಗಿಂತಲೂ ಉನ್ನತ ಪ್ರಶಸ್ತಿಗೆ ಅರ್ಹತೆ ಹೊಂದಿದ್ದೀರಿ.

ನಿಮ್ಮ ಸೇವೆಯು ಇನ್ನೂ ಮುಂದುವರಿದು ಜನಮಾನಸದಲ್ಲಿ ಯಕ್ಷಗಾನದ ಬಗ್ಗೆ ಅಭಿರುಚಿ ಮೂಡಿಸುವಂತಾಗಲಿ. ಅದೇ ರೀತಿ ಇನ್ನೂ ಉನ್ನತ ಪ್ರಶಸ್ತಿಗಳು ನಿಮಗೆ ಲಭಿಸಲಿ ಎಂದು ಹಾರೈಸುತ್ತೇನೆ.

ಇತಿ
ಪೊನ್ನಯ್ಯ

### ಕ್ರೋಡೀಕರಣ

- ಸ್ಥಳ, ದಿನಾಂಕ
- ಸಂಬೋಧನೆ
- ವಿಷಯ ಪ್ರಸ್ತಾವನೆ
- ಮುಕ್ತಾಯ

ಬಳಿಕ ಮಕ್ಕಳು ವೈಯಕ್ತಿಕವಾಗಿ ಅಭಿನಂದನ ಪತ್ರ ತಯಾರಿಸಲಿ.

ಕೆಲವರಿಂದ ಮಂಡನೆ.

ಮಂಡನೆಯ ಬಳಿಕ ಸೂಚಕಗಳ ಕುರಿತು ಚರ್ಚೆ ನಡೆಸುವುದು.

**ಸೂಚಕಗಳ ಕ್ರೋಡೀಕರಣ**

- ಚೌಕಟ್ಟು ಹೊಂದಿರಬೇಕು. (ಸ್ಥಳ, ದಿನಾಂಕ, ಸಂಬೋಧನೆ, ವಿಷಯ ಪ್ರಸ್ತಾವನೆ, ಮುಕ್ತಾಯ)
- ಅಭಿನಂದನಾ ಪತ್ರವು ಚೌಕಟ್ಟಿನಂತೆ ಕ್ರಮಾನುಗತವಾಗಿರಬೇಕು.
- ಅಭಿನಂದಿಸಲ್ಪಡುವ ವ್ಯಕ್ತಿಯ ಕಾರ್ಯವನ್ನು ಹೊಗಳಿ ಬರೆದಿರಬೇಕು.
- ಭಾಷಾ ಪ್ರಯೋಗವು ಶುದ್ಧವಾಗಿದ್ದು, ತನ್ನದೇ ಆದ ಶೈಲಿಯಲ್ಲಿ ಬರೆದಿರಬೇಕು.
- ಆಶಯಗಳ ವ್ಯಕ್ತ ಪಡಿಸುವಿಕೆಯು ಆಕರ್ಷಣೀಯವಾಗಿರಬೇಕು.

ಮಕ್ಕಳು ಗುಂಪಿನಲ್ಲಿ ಕುಳಿತು ಸೂಚಕಗಳ ಆಧಾರದಲ್ಲಿ ಪರಸ್ಪರ ರಚನೆಗಳನ್ನು ಮೌಲ್ಯ ನಿರ್ಣಯ ನಡೆಸಲಿ. ಬೇಕಾದ ತಿದ್ದುಪಡಿ ಮಾಡಿ ಪ್ರತ್ಯೇಕ ಹಾಳೆಯಲ್ಲಿ ಬರೆಯಲಿ. ಇದನ್ನು ಅಧ್ಯಾಪಕರು ಮೌಲ್ಯನಿರ್ಣಯ ಮಾಡುವುದು.

**ವ್ಯಕ್ತಿ ಪರಿಚಯ ಬರೆಯಿರಿ**

ಪಾಠ ಪುಸ್ತಕದ 38ನೇ ಪುಟದಲ್ಲಿ ಕೊಟ್ಟ ಕೃಷಿಕರ ಮಾಹಿತಿಗಳನ್ನು ಆಧರಿಸಿ ಮಕ್ಕಳು ವ್ಯಕ್ತಿ ಪರಿಚಯ ಬರೆಯಲಿ. ಅದನ್ನು ಸ್ವಮೌಲ್ಯನಿರ್ಣಯ ಮಾಡಲಿ.

**ಚೆಕ್‌ಲಿಸ್ಟ್**

| ಹೇಳಿಕೆಗಳು | ಉತ್ತಮ | ಸರಾಸರಿ | ಇಲ್ಲ |
|---|---|---|---|
| • ಕೊಟ್ಟ ಮಾಹಿತಿಗನುಸರಿಸಿ ಆಶಯಗಳನ್ನು ಸಮಗ್ರವಾಗಿ ಬರೆಯಲಾಗಿದೆ | ☐ | ☐ | ☐ |
| • ಇದ್ದುದನ್ನು ಇದ್ದ ಹಾಗೆ ಬರೆಯಲಾಗಿದೆ | ☐ | ☐ | ☐ |
| • ಭಾಷಾ ಶುದ್ಧಿಯೊಂದಿಗೆ ತನ್ನದೇ ಆದ ಶೈಲಿಯಲ್ಲಿ ಬರೆಯಲಾಗಿದೆ. | ☐ | ☐ | ☐ |
| • ವ್ಯಕ್ತಿಯನ್ನು ಪರಿಚಯಿಸುವ ರೀತಿಯಲ್ಲಿ ಬರೆಯಲಾಗಿದೆ. | | | |
| • ಆಶಯವನ್ನು ಕ್ರಮೀಕರಿಸಿ ಬರೆಯಲಾಗಿದೆ. | ☐ | ☐ | ☐ |

**ವ್ಯಕ್ತಿ ಪರಿಚಯ**

ಪೆರ್ಲ ಸಮೀಪದ ಸರವು ಎಂಬಲ್ಲಿರುವ ಹಸೈನಾರ್ ಹಾಜಿ ಮತ್ತು ರಷೀದಾ ದಂಪತಿಗಳ ಪುತ್ರರಾಗಿ 16.05.1977 ರಂದು ಅಬೂಬಕ್ಕರ್ ಅವರು ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆದ ಇವರು ಕೃಷಿ ಮತ್ತು ಹೈನುಗಾರಿಕೆಯಲ್ಲಿ

ತಮ್ಮನ್ನು ತಾವು ತೊಡಗಿಸಿಕೊಂಡರು. ಅವರ ಪತ್ನಿ ಮಿಸಿರಿಯಾ ಕೂಡಾ ಇವರ ಜೊತೆಗೂಡಿದರು. ಇವರು 50 ದನಗಳಿಂದ ದಿನಕ್ಕೆ 300ರಿಂದ 400 ಲೀಟರ್ ವರೆಗೆ ಹಾಲು ಸಂಗ್ರಹಿಸುತ್ತಾರೆ. ಇದಕ್ಕಾಗಿ ಏಳು ಎಕರೆ ಬಂಜರು ಭೂಮಿಯಲ್ಲಿ ಹುಲ್ಲು ಬೆಳೆಸುತ್ತಾರೆ. ದನದ ಸೆಗಣಿಯನ್ನುಪಯೋಗಿಸಿ ಬಯೋಗ್ಯಾಸಿನಿಂದ ಮನೆಗೆ ಬೇಕಾದ ಇಂಧನ ಪಡೆಯುತ್ತಾರೆ. ಇವರಿಗೆ ಸಹಾಯಕರಾಗಿ 5 ಮಂದಿ ನಿರಂತರ ದುಡಿಯುತ್ತಿದ್ದಾರೆ. ಇವರ ಈ ಶ್ರಮವನ್ನು ಮನಗಂಡು ಇವರಿಗೆ ತಿರುವನಂತಪುರದ ಕಲ್ಲಕ್ಕಾಡು ಫೌಂಡೇಶನ್‌ನವರು ರಾಜ್ಯಮಟ್ಟದಲ್ಲಿ ಪುರಸ್ಕರಿಸಿದ್ದಾರೆ. ಬ್ಲೋಕ್ ಮಟ್ಟದಲ್ಲಿ ಸತತವಾಗಿ ನಾಲ್ಕು ವರ್ಷಗಳಿಂದ 'ಅತ್ಯುತ್ತಮ ಹೈನುಗಾರಿಕೆ'ಪ್ರಶಸ್ತಿಯನ್ನು ಪಡೆದಿದ್ದಾರೆ. ಈಗ ಇರುವ 50 ದನಗಳ ಬದಲು 150 ದನಗಳನ್ನು ಸಾಕಬೇಕು ಎಂಬ ಯೋಜನೆಯನ್ನು ಈ ಸ್ವಾವಲಂಬಿ  ಕೃಷಿಕ ಹಾಕಿಕೊಂಡಿದ್ದಾರೆ.

## ಪದ ರಚಿಸಿರಿ

ಕೋಣೆಗಳಲ್ಲಿರುವ ಅಕ್ಷರಗಳನ್ನು ಕ್ರಮೀಕರಿಸಿ ಪದ ರಚಿಸಲಿ. ಇದನ್ನು ಮನೆಕೆಲಸವಾಗಿ ಕೊಡಬಹುದು. ಇಂತಹ ಚಟುವಟಿಕೆಗಳು ಬುದ್ಧಿಶಕ್ತಿ ಮತ್ತು ಏಕಾಗ್ರತೆಯನ್ನು ಬೆಳೆಸಲು ಸಹಾಯಕವಾಗಿವೆ. ಬಿಡುವಿನ ಸಮಯದಲ್ಲಿ ಮಕ್ಕಳು ಇಂತಹ ಚಟುವಟಿಕೆಗಳಲ್ಲಿ ಪರಸ್ಪರ ತೊಡಗುವಂತೆ ಪ್ರೇರೇಪಿಸುವುದು.

## ಉತ್ತರಗಳು

- ಉತ್ಪಾದನೆ
- ಅಭಿನಂದನೆ
- ಕರಿಮೆಣಸು
- ಆಕಾಶವಾಣಿ
- ಜ್ಞಾನೋದಯ
- ಅನಿರೀಕ್ಷಿತ

## ಪದ ಹುಡುಕಿರಿ

ಭಾಷೆ ಬೆಳೆಯಬೇಕಾದರೆ ಪದ ಸಂಪತ್ತು ಹೆಚ್ಚಾಗಬೇಕು. ಈಗ ಹಿಂದಿನಂತೆ ಅಲ್ಲ. ವಿಶ್ವದ ಎಲ್ಲಾ ಜನರೊಂದಿಗೆ ವ್ಯವಹರಿಸುವಾಗ ಆ ಜನರ ಭಾಷೆಯ ಪದಗಳು ನಮ್ಮ ಭಾಷೆಯೊಂದಿಗೆ ಸೇರಿ ಹೋಗುತ್ತದೆ. ಆಗ ಭಾಷೆ ಬೆಳೆಯುತ್ತದೆ. ಕನ್ನಡ ಭಾಷೆಯೂ ಇದರಿಂದ ಹೊರತಾಗಿಲ್ಲ. ಕನ್ನಡ ಬಾಷೆಯಲ್ಲಿ ಸಾಕಷ್ಟು ಅನ್ಯ ದೇಶದ ಭಾಷೆಯ ಪದಗಳು ಸೇರಿಕೊಂಡಿವೆ. (ಉದಾ:–ಆಂಗ್ಲ, ಹಿಂದಿ, ಪೋರ್ಚುಗೀಸ್ ಇತ್ಯಾದಿ) ಈ ಪಾಠದಲ್ಲಿ ಹೆಚ್ಚಾಗಿ ಆಂಗ್ಲ ಪದಗಳು ಬಂದಿವೆ. ಅವುಗಳನ್ನು ಮಕ್ಕಳು ಕನ್ನಡ ಪದಗಳೆಂದು ತಿಳಿಯುವ ಸಾಧ್ಯತೆಯಿದೆ. ಇದನ್ನು ಮನದಟ್ಟು ಮಾಡುವುದೇ ಈ ಚಟುವಟಿಕೆಯ ಉದ್ದೇಶವಾಗಿದೆ.

## ವಾಕ್ಯ ರಚಿಸಿರಿ

ಭಾಷೆಯ ಶೈಲಿಯಲ್ಲಿ ದ್ವಿರುಕ್ತಿಗಳ ಪಾತ್ರವು ಮಹತ್ವದ್ದಾಗಿದೆ. ಮೊದಲನೇ ಪದವು ಎರಡು ಸಲ ಆವರ್ತಿಸಿದಾಗ ಆ ವಾಕ್ಯದಲ್ಲಿ ಆ ಪದಕ್ಕೆ ಹೆಚ್ಚಿನ ಮಹತ್ವ ಬರುತ್ತದೆ.

ಉದಾ: ಅವನು ಬೇಗ ಬೇಗನೇ ನಡೆದನು. ಇಲ್ಲಿ ಬೇಗ ಬೇಗನೇ ಎಂಬುದು. 'ಬೇಗ' ಎಂಬುದಕ್ಕೆ ಹೆಚ್ಚು ಒತ್ತು ಕೊಡುವುದರಿಂದ ಆ ವಾಕ್ಯದಲ್ಲಿ ಆ ಪದಕ್ಕೆ ಮಹತ್ವ ಕೊಟ್ಟಂತಾಗುತ್ತದೆ. ಇಂತಹ ದ್ವಿರುಕ್ತಿ ಪದಗಳನ್ನು ಸರಿಯಾದ ಸಂದರ್ಭದಲ್ಲಿ ಬಳಸುವ ಸಾಮರ್ಥ್ಯವು ಮಕ್ಕಳಲ್ಲಿ ಬೆಳೆಯಬೇಕು.

# ಚೇರ್ಕಾಡಿ ರಾಮಚಂದ್ರರಾಯರು

ದೂರದಲ್ಲೆಲ್ಲೋ ಇದ್ದ ಫುಕುವೋಕಾ ತನ್ನಷ್ಟಕ್ಕೇ ತಾನೇ ಕೃಷಿ ಮಾಡುತ್ತಾ ಜಗತ್ತಿನ ಗಮನ ಸೆಳೆದ. ನಮ್ಮಲ್ಲೇ ಇದ್ದ ಚೇರ್ಕಾಡಿ ರಾಮಚಂದ್ರ ರಾಯರು (ಬ್ರಹ್ಮಾವರ ಸಮೀಪ) ಎಂಬ ಮೌನ ಸಾಧಕ ಈ ಫುಕುವೋಕಗಿಂತ ಒಂದು ತೂಕ ಹೆಚ್ಚೇ ಸಾಧನೆ ಮಾಡಿದವರು. ವಿಪರ್ಯಾಸವೆಂದರೆ ಚೇರ್ಕಾಡಿ ರಾಯರ ಸರಳ ತತ್ತ್ವ, ಬದುಕು ಯಾರ ಗಮನಕ್ಕೂ ಬರಲೇ ಇಲ್ಲ. ಎಂಥದೇ ಸಂದರ್ಭದಲ್ಲೂ ಗಾಂಧಿ ತತ್ತ್ವ ಕೈ ಬಿಡದ ಈ ಅಜ್ಜ ತಮ್ಮ ಒಂಬತ್ತು ದಶಕಗಳ ಸುದೀರ್ಘ ಬದುಕಿಗೆ ಫೆ. 21, 2010ರಂದು ವಿದಾಯ ಹೇಳಿದ್ದಾರೆ! ಇವತ್ತೂ ಎಲ್ರೂ ಹೆಚ್ಗೆ ಬೆಳೆ ಬೇಕು, ಹೆಚ್ಗೆ ಹಣ ಬೇಕು ಅನ್ನೋರೇ! ವಾಸ್ತವ ನೋಡಿ. ಪ್ರಕೃತಿಗೆ ಶರಣಾದರೆ ಸಾಕು. ಆ ಮಾತೆಯೇ ನಮಗೆ ಬೇಕೆನಿಸುವಷ್ಟು ಸಂಪತ್ತು ನೀಡ್ತಾಳೆ' ಎಂದು ಚೇರ್ಕಾಡಿಯವರು ಹೇಳಿದ್ದು ಇನ್ನೂ ಕಿವಿಗಳಲ್ಲಿ ಗುಂಯ್‌ಗುಡುತ್ತಿದೆ.

ಅವರ ಎರಡು ಎಕರೆ ತೋಟದಲ್ಲಿ ಏನುಂಟು? ಏನಿಲ್ಲ...? ಮಾವು, ತೆಂಗು, ಗೇರು, ಪೇರಲೆ, ಸಪೋಟ, ಹಲಸು, ಕಾಳುಮೆಣಸಿನಿಂದ ಹಿಡಿದು ತರಕಾರಿ, ಸೊಪ್ಪು, ಗಡ್ಡೆ-ಗೆಣಸು...ಒಂದೇ ಎರಡೇ..! ಹತ್ತಾರು ಎಕರೆ ಜಮೀನು ಇದ್ದೂ ಹಲವು ಕಾರಣಗಳಿಂದ ಕೃಷಿಯಲ್ಲಿ ವೈಫಲ್ಯ ಅನುಭವಿಸಿ ಆತ್ಮ ಹತ್ಯೆಗೆ ಯತ್ನಿಸುವ ರೈತರ ಬಗ್ಗೆ ಮಾತನಾಡುತ್ತಾ ರಾಯರನ್ನು ಕೇಳಿದ್ದೆ-'ಇದಕ್ಕೆಲ್ಲಾ ಕೊನೆ ಹೇಗೆ? ಅನ್ನದಾತ ಎಂದು ಹಾಡಿ ಹೊಗಳುವ ರೈತ ಈ ದುಸ್ಥಿತಿಗೆ ಬಂದದ್ದೇಕೆ?' ತಕ್ಷಣ ರಾಯರು ಉತ್ತರಿಸಿದ್ದರು- 'ರೈತ ಹೆಚ್ಚು ಹಣ ಮಾಡಬೇಕು ಎಂಬ ಸ್ಥಿತಿಗೆ ಕರೆದೊಯ್ದವರು ಇದಕ್ಕೆ ಉತ್ತರ ಹೇಳಬೇಕು.' 'ಅಧಿಕ ಇಳುವರಿಯ ಹೆಸರಿನಲ್ಲಿ ರೈತರನ್ನು ಶೋಷಿಸುತ್ತಿದ್ದ ವ್ಯವಸ್ಥೆಯತ್ತ ಅವರ ಸಾತ್ವಿಕ ಸಿಟ್ಟು.

ರಾಯರು ಅನುಸರಿಸಿಕೊಂಡು ಬಂದ ಕೃಷಿಗೆ ವಿಶೇಷ ಹಿನ್ನೆಲೆಯೇನಿಲ್ಲ. ಹುಟ್ಟೂರು ಕೊಡಗು ಜಿಲ್ಲೆ. ಬಾಲ್ಯದಲ್ಲೇ ತಂದೆ-ತಾಯಿಯನ್ನು ಕಳೆದುಕೊಂಡು ಅಕ್ಕ-ಭಾವನ ಜತೆ ಚೇರ್ಕಾಡಿಗೆ ಬಂದ ಬಾಲಕ ರಾಮಚಂದ್ರ ರಾಯನ ಮೇಲೆ ಪ್ರಭಾವ ಬೀರಿದ್ದು ಅವರ ಶಾಲೆಯ ಶಿಕ್ಷಕ ರಾಮಚಂದ್ರ ಪಾಟೀಲ. ಅವರ ಸರಳ, ಸ್ವಾವಲಂಬಿ ಬದುಕು ರಾಮಚಂದ್ರರಾಯರ ಮೇಲೆ ಪರಿಣಾಮ ಬೀರಿತು. ಅನ್ನ-ವಸ್ತ್ರ ಸ್ವಯಂ ಉತ್ಪಾದಿಸಿಕೊಳ್ಳುವಂತೆ ಗಾಂಧೀಜಿ ಕರೆಗೆ ಓಗೊಟ್ಟರು. ಅದರ ಪ್ರಕಾರ ಚರಕ ತಂದಿಟ್ಟುಕೊಂಡು ನೂಲುವುದಕ್ಕೆ ಶುರು.

1945-46ರಲ್ಲಿ ಮಹಾಯುದ್ಧದ ಹೊಡೆತಕ್ಕೆ ನೇಯ್ಗೆ ಕಸುಬು ನಷ್ಟವಾಯಿತು. ಈ ಬಗ್ಗೆಯೇ ಯೋಚಿಸುತ್ತಿದ್ದಾಗ ರಾಯರಿಗೆ ಹೊಳೆದಿದ್ದು 'ತಾವು ಈವರೆಗೆ ವಸ್ತ್ರಕ್ಕೆ ಮಾತ್ರ ಆದ್ಯತೆ ಕೊಟ್ಟಿದ್ದು. ಆಹಾರದ ಉತ್ಪಾದನೆಯತ್ತ ಗಮನ ಹರಿಸಿಲ್ಲ' ಎಂದು. ಆಹಾರ ಉತ್ಪಾದನೆಗೆ ಜಮೀನು ಎಲ್ಲಿ? ಹುಡುಕಾಟ ಶುರುವಾಯಿತು. ಆದರೆ ಹಣ ಇರಲಿಲ್ಲ. ಕೊನೆಗೆ ಭಾವನಿಂದ ಮೂಲಗೇಣಿಗೆ ಪಡೆದ ಎರಡು ಎಕರೆ ಹೊಲದಲ್ಲಿ ಅನ್ನ ಉತ್ಪಾದನೆಗೆ ಪಣ ತೊಟ್ಟರು ಏನೂ ಬೆಳೆಯಲಾರದ ಜಮೀನಿನಲ್ಲಿ ರಾಯರು ಕೃಷಿ ಮಾಡಲು ನಿರ್ಧರಿಸಿದ್ದನ್ನು ನೋಡಿದ ಜನರು 'ಅವ ಮರ್‌ಲ' (ಅವನು ಹುಚ್ಚ) ಎಂದು ಅಪಹಾಸ್ಯ ಮಾಡಿದರು. ರಾಯರು ಧೃತಿಗೆಡಲಿಲ್ಲ. ಕೆಲವು ವರ್ಷಗಳಲ್ಲೇ ಬರಡು ನೆಲದಲ್ಲಿ ಹಸಿರು ಚಿಗುರಿತು. ಮೋಸ ಮಾಡುವುದು ಗಿಡಗಳಿಗೆ ಗೊತ್ತೇ ಇಲ್ಲ. ಮಾನವನಿಂದಲೇ ಅವು ಮೋಸ ಹೋಗುವುದುಂಟು ಎನ್ನುವ ರಾಯರ ಮಾತಿನಲ್ಲೇ ಅವರ ಕೃಷಿಯ ಯಶಸ್ಸು ಅರ್ಥವಾಗುತ್ತದೆ.

ಕೃಷಿ ಎಂದರೇನೇ ಹೊರೆ ಎಂಬಂತಾಗಿರುವ ಕಾಲದಲ್ಲಿ ರಾಯರು ಅದನ್ನು ಎಷ್ಟು ಸರಳವಾಗಿ ನಡೆಸುತ್ತಿದ್ದರು ಎಂಬುದೇ ಅಚ್ಚರಿಯ ಸಂಗತಿ. ಅವರು ಜಮೀನು ಖರೀದಿಸಿದಾಗ ತೋಟದಲ್ಲೊಂದು ಬಾವಿ ಇತ್ತು. ಅದಕ್ಕೆ ತಾವೇ ರಾಟೆ ತಯಾರಿಸಿದರು. ಇದರಿಂದಲೇ ನೀರು ಮೇಲಕ್ಕೆತ್ತಿ ಗಿಡಕ್ಕೆ ಹಾಕುತ್ತಿದ್ದರು. ಬೆಳೆಗಳಿಂದ ಆದಾಯ ಬರುವುದು ತಡ ಎಂಬುದನ್ನು ಅರಿತು ಕೆಲವೇ ದಿನಗಳಲ್ಲಿ ಕೊಯ್ಲಿಗೆ ಬರುವ ತರಕಾರಿ ಬೆಳೆದರು. ದೀರ್ಘಕಾಲೀನ ಆದಾಯಕ್ಕೆ ಸಾಕಷ್ಟು ಮರ ಬೆಳೆಸಿದರು.

ಎಲ್ಲರೂ ಗದ್ದೆಯಲ್ಲಿ ನೀರು ನಿಲ್ಲಿಸಿ ಭತ್ತ ಬೆಳೆಯುತ್ತಿದ್ದ ಸಮಯದಲ್ಲಿ ಸ್ವಲ್ಪ ನೀರಿನಲ್ಲಿ ಕುಟುಂಬಕ್ಕೆ ಬೇಕಾಗುವಷ್ಟು ಭತ್ತ ಬೆಳೆದುಕೊಂಡರು. ಕಡಿಮೆ ಒಳಸುರಿಯಲ್ಲಿ ಎಕರೆಗೆ 16 ಕ್ವಿಂಟಲ್ ಇಳುವರಿ ನೀಡುತ್ತಿದ್ದ ಇದು ಚೇರ್ಕಾಡಿ ವಿಧಾನ ಎಂದೇ ಪ್ರಸಿದ್ಧಿ ಪಡೆಯಿತು.

ನಿನ್ನೆ–ಮೊನ್ನೆಯ ವರೆಗೂ ತೋಟದಲ್ಲಿ ಓಡಾಡಿಕೊಂಡಿದ್ದ ರಾಯರಿಗೆ ಯಾರಾದರೂ ಭೇಟಿ ಕೊಟ್ಟರೆ ಖುಷಿಯೋ ಖುಷಿ. ತಾವೇ ನೆಟ್ಟು ಬೆಳೆಸಿದ ಗಿಡ–ಮರಗಳ ಮಧ್ಯೆ ಮೆಲ್ಲಗೆ ಓಡಾಡುತ್ತ ಕೃಷಿಯಲ್ಲಿನ ಖುಷಿಯನ್ನು ಬಣ್ಣಿಸುತ್ತಿದ್ದರು. ಅವರೊಟ್ಟಿಗೆ ತೋಟದೊಳಗೆ ತೋಟದೊಳಗೆ ಹೋಗುತ್ತಿದ್ದಾ ಒಮ್ಮೆಲೇ ನಿಂತು ನೆಲದೆಡೆಗೆ ಬೊಟ್ಟು ಮಾಡಿ 'ಇಲ್ಲಿ ನನ್ನ ಫಿಕ್ಸ್‌ಡ್ ಡೆಪಾಸಿಟ್ ಇದೆ' ಎಂದು ತುಸು ಬೆರಗು ಮೂಡಿಸುವ ದನಿಯಲ್ಲಿ ಹೇಳಿದರು. ನಮಗೆ ಗಾಬರಿ ಅಚ್ಚರಿ.ತಕ್ಷಣವೇ ನಕ್ಕ ಅಜ್ಜ 'ಅಂದ್ರೆ ಇಲ್ಲಿ ಶುಂಠಿ ಬೆಳೆದಿದ್ದೇನೆ. ಒಳ್ಳೇ ರೇಟ್ ಇದ್ದಾಗ ಮಾರ್ತೇನೆ. ಇಲ್ಲದಿದ್ರೆ ಅಲ್ಲೇ ಬಿಡ್ತೇನೆ' ಎಂದಾಗ ಅವರ ಜಾಣ್ಮೆ ಕಂಡು ನಮಗೂ ನಗು!!!

ರಾಯರ ಸಾಧನೆಯ ತಾಣಕ್ಕೆ ಭೇಟಿ ಕೊಟ್ಟವರಲ್ಲಿ ದೇಶ–ವಿದೇಶಗಳ ರೈತರು ವಿಜ್ಞಾನಿಗಳು, ಅಧಿಕಾರಿಗಳು, ವಿದ್ಯಾರ್ಥಿಗಳು ಸೇರಿದ್ದಾರೆ. ರಾಯರು ಹೇಳುತ್ತಿದ್ದುದು, 'ನೋಡಿ ನಾನೊಬ್ಬ ಪರಿಪೂರ್ಣ ಸ್ವಾವಲಂಬಿ ರೈತ. ನನ್ನಲ್ಲಿ ಕಾರ್ ತಗೊಳ್ಳುವಷ್ಟು ಹಣ ಇದೆ. ಆದರೆ ನಾನು ತಗೊಳ್ಳಿಲ್ಲ ಯಾಕೆ? ಅನಗತ್ಯ ಖರ್ಚಿಗೆ ಕಡಿವಾಣ ಹಾಕಿಕೊಳ್ಳೇನೆ.' ಅವರನ್ನು ಈ ಸ್ಥಿತಿಗೆ ತರಲಾಗಿದೆ ಎಂಬ ನೋವು ರಾಯರಲ್ಲಿ ಉಳಿದುಕೊಂಡಿತ್ತು.

ಕೃಷಿಯಲ್ಲಿ ಯಂತ್ರಗಳು ನಮ್ಮ ಮೇಲೆ ಸವಾರಿ ಮಾಡುತ್ತಿವೆ ಎಂಬ ಆತಂಕ ಅವರದ್ದಾಗಿತ್ತು. ಈ ಸ್ಥಿತಿ ಬಾರದಂತೆ ಸ್ವತಃ ರೈತರೇ ಎಚ್ಚರ ವಹಿಸಬೇಕು ಎಂದೂ ಮನವಿ ಮಾಡುತ್ತಿದ್ದರು. ಇದಕ್ಕೆಲ್ಲಾ ತಮ್ಮದೇ ಉದಾಹರಣೆ ಕೊಡುತ್ತಿದ್ದರು. 'ನೋಡಿ ಸ್ವಾಮಿ, ನಾನು ಸರ್ಕಾರಕ್ಕೆ, ದೇಶಕ್ಕೆ ಭಾರ ಅಲ್ಲ. ನನಗೆ ಸಾಲ ಕೊಡಿ, ಸಬ್ಸಿಡಿ ಕೊಡಿ ಅಂತ ಗೋಗರೆಯುವುದಿಲ್ಲ'

'ನಾನೊಬ್ಬ ಸ್ವಾವಲಂಬಿ ಪರಿಪೂರ್ಣ ಭಾರತೀಯ ಕೃಷಿಕ, ಪ್ರಕೃತಿಯ ಜತೆ ಸಹಕಾರ–ಅನಗತ್ಯ ವೆಚ್ಚಕ್ಕೆ ಕಡಿವಾಣ. ಇದೇ ಗಾಂಧಿ ತತ್ವಕ್ಕೂ ಕೃಷಿಗೂ ಇರುವ ಸಂಬಂಧ' ಎನ್ನುತ್ತಿದ್ದ ರಾಯರಿಗೆ ಗಾಂಧಿ ತತ್ವ ದೂರ ತಳ್ಳಿದ ಈಗಿನ ಶಿಕ್ಷಣದ ಬಗ್ಗೆ ಬೇಸರವಿತ್ತು. ಇದನ್ನೇ ಅವರು ತಮಾಷೆಯಾಗಿ ಹೇಳುತ್ತಿದ್ದರು – 'ನಾನು ಮೂರನೇ ತರಗತಿಗೆ ಶಾಲೆ ಬಿಟ್ಟದ್ದು ಒಳ್ಳೆಯದಾಯ್ತು, ಇಲ್ದಿದ್ರೆ ಯಾವುದೋ ಕಛೇರೀಲಿ ಗುಮಾಸ್ತನಾಗಿ ಕಾಲ ಕಳೀಬೇಕಿತ್ತು. ಆಗ ಇಷ್ಟೊಂದು ನೆಮ್ಮದಿ, ಖುಷಿ, ಸಂಪತ್ತು ಎಲ್ಲಿ ಸಿಗುತ್ತಿತ್ತು?!'

ರಾಯರ ಸಾಧನೆ ಕಂಡು ಬೆರಗಾದ ಅಂದಿನ ಕಲೆಕ್ಟರ್ ಒಬ್ಬರು ಅಕ್ಕಪಕ್ಕದ ಜಮೀನನ್ನು ಇವರಿಗೆ ನೀಡಲು ಆದೇಶಿಸಿದರು. ಆದರೆ ಇದನ್ನು ನಯವಾಗಿ ನಿರಾಕರಿಸಿದ ರಾಯರು, 'ನನಗೆ ಇಷ್ಟೇ ಸಾಕು, ಇಲ್ಲದವರಿಗೆ ಅದನ್ನು ಹಂಚಿ ಬಿಡಿ' ಎಂದು ಸೂಚಿಸಿದ್ದರು. 'ನನಗೆ ಇಷ್ಟೇ ಹಣ ಬೇಕು ಎಂದು ಭೂಮಿಯ ಮೇಲೆ ಒತ್ತಡ ಹಾಕುವುದಿಲ್ಲ. ಭಗವಂತ ಎಷ್ಟು ಕೊಡುತ್ತಾನೋ ಅಷ್ಟು ಸಾಕು. ಅದರಲ್ಲೇ ನೆಮ್ಮದಿ ಇದೆ' ಎನ್ನುತ್ತಿದ್ದ ರಾಯರು ಬಲತ್ಕಾರದಿಂದ ಬೆಳೆ ತೆಗೆಯುವ ಪದ್ಧತಿಯನ್ನು ವಿರೋಧಿಸುತ್ತಿದ್ದರು.

92 ವರ್ಷಗಳ ಸುದೀರ್ಘ ಸಮೃದ್ಧ ಕೃಷಿ ಬದುಕಿನಲ್ಲಿ ರಾಯರು ಒಮ್ಮೆಯೂ ದುರಾಸೆಗೆ ಬಲಿಯಾಗಲಿಲ್ಲ ಎಂಬುದೇ ಅಚ್ಚರಿಗೊಳಿಸುವ ಸಂಗತಿ. ಬೇರೆಯವರೆಲ್ಲ ಆಧುನಿಕ ಕೃಷಿಯ ಜಾಲಕ್ಕೆ ಸಿಲುಕಿ, ಅಧಿಕ ಇಳುವರಿಯ ಹಿಂದೆ ಓಡಿದರು. ಹಸಿರು ಕ್ರಾಂತಿಯ ಪ್ರಲೋಭನೆಗಳಿಗೆ ಒಳಗಾಗದ ರಾಯರು ತುಳಿದಿದ್ದು 'ಗಾಂಧಿ ಹಾದಿ'ಯನ್ನು. ತಮಗಿದ್ದ ತುಂಡು ನೆಲದಲ್ಲಿ ಎಲ್ಲವನ್ನೂ ಬೆಳೆಯಲು ಹೊರಗಿನ ಸಂಪನ್ಮೂಲ ಬಾಚಿ ತರಲಿಲ್ಲ. ತಮ್ಮಲ್ಲೇ ಲಭ್ಯವಿದ್ದ ಸಂಪನ್ಮೂಲ ಬಳಸಿಕೊಂಡರು. ಶ್ರಮವಹಿಸಿ ದುಡಿದರು. ಇವರ ಕೆಲಸಗಳಿಗೆಲ್ಲ ಪತ್ನಿ ಲಕ್ಷ್ಮಿ ನೀಡಿದ ಸಹಕಾರವನ್ನಂತೂ ಮರೆಯುವಂತಿಲ್ಲ. 'ನಾನು ಯಾವ ದೇವಸ್ಥಾನಕ್ಕೂ ಹೋಗಲಿಲ್ಲ. ನನ್ನ ಬಳಿಯೇ ಭಗವಂತನಿದ್ದ. ನನ್ನ ತೋಟದಲ್ಲಿನ ಹಣ್ಣು ಸವಿಯುವಾಗ ಪ್ರಕೃತಿ ಮಾತೆಯನ್ನು ನೆನೆದು ಪುಳಕಿತನಾಗುತ್ತೇನೆ' ಎನ್ನುವ ರಾಯರ ಮಾತಿನಲ್ಲಿ ನಿಸರ್ಗದೆಡೆಗಿನ ಪ್ರೇಮ ಅರ್ಥವಾಗುತ್ತದೆ.

ಫುಕುವೋಕ ಮಾಡಿದಷ್ಟೇ ಸಾಧನೆಯನ್ನು ಚೇರ್ಕಾಡಿ ರಾಯರೂ ಮಾಡಿದ್ದಾರೆ. ಆದರೆ ಅದು ಸುದ್ದಿಯಾಗಲಿಲ್ಲ ಎನ್ನುವುದಕ್ಕಿಂತ ಕೃಷಿ ವಲಯ ಅವರ ಅನುಭವಗಳನ್ನು ಬಳಸಿಕೊಳ್ಳಲಿಲ್ಲ. ವಿಜ್ಞಾನಿಗಳ ಹುಚ್ಚಾಟದ ಆಡುಂಬೊಲವಾಗಿರುವ ಕೃಷಿ ಕ್ಷೇತ್ರದಲ್ಲಿ ಸಂಶೋಧಕರಂತೂ ಯಾವತ್ತಿಗೂ ಭೂಮಿಯನ್ನು ದುರ್ಬಳಕೆ ಮಾಡಿಕೊಳ್ಳುವ ವರ್ಗಕ್ಕೇ ಸೇರಿದವರು. ಹೆಚ್ಚು ಸಂಪನ್ಮೂಲ ಬಳಸಿ, ಹೇಗೆ ಹೆಚ್ಚೆಚ್ಚು ಲಾಭ ಪಡೆಯಬೇಕು ಎಂಬುದಕ್ಕೆ ಅವರ ಸಂಶೋಧನೆ ಮೀಸಲು. ಇತ್ತ ಅವರು ತೋರಿಸಿದ ಹಾದಿಯಲ್ಲಿ ನಡೆದ ರೈತರು, ಸಂಕಟಕ್ಕೆ ಸಿಲುಕುತ್ತಿದ್ದಾರೆ.

ಅಧಿಕ ಇಳುವರಿಯ ಅಮಿಷವೊಡ್ಡಿ ವಿಜ್ಞಾನಿಗಳಾದ ನಾರ್ಮನ್ ಬೋರ್ಲಾಂಗ್, ಎಂ.ಎಸ್.ಸ್ವಾಮಿನಾಥನ್ ಅವರಂಥವರನ್ನು ಕೃಷಿ ಋಷಿ ಎನ್ನಲಾಗುತ್ತದೆ. ಆದರೆ ನಿಜವಾಗಿ ಆ ಮನ್ನಣೆ ಸಿಗಬೇಕಾದದ್ದು ಚೇರ್ಕಾಡಿ ರಾಮಚಂದ್ರ ರಾಯರಂಥವರಿಗೆ.

ಇನ್ನೊಬ್ಬರಿಗೆ ಹಾನಿ ಮಾಡದ ಹಾದಿಯಲ್ಲಿ ಸಾಗಿದ ಚೇರ್ಕಾಡಿ, ಗಾಂಧಿ ತತ್ವದೊಂದಿಗೆ ನೆಮ್ಮದಿಯಿಂದ ಬದುಕಬಹುದು ಎಂಬುದನ್ನು ತೋರಿಸಿದ ಮಹಾನ್ ಕೃಷಿಕ. ಕೃಷಿ ಕ್ಷೇತ್ರ ಅಶಾಂತತೆಯ ಗೂಡಾಗಿರುವ ಇಂದಿನ ದಿನದಲ್ಲಿ ಸಂತನಂತೆ ಬದುಕಿದವರು ಚೇರ್ಕಾಡಿ ರಾಯರು. ಅವರ ಸಮೃದ್ಧ ಬದುಕು, ಸಾಧನೆ ಯಾವ ಪ್ರಶಸ್ತಿಗೂ ಮೀರಿದ್ದು.

(ಸಂಗ್ರಹ)

## ಮೌಲ್ಯನಿರ್ಣಯ ಚಟುವಟಿಕೆಗಳು

1. ಇಲ್ಲಿ ನೀಡಲಾದ ಪದ್ಯವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ.

ಸುಗ್ಗಿಯು ಬಂದಿತು ಹಿಗ್ಗನು ತಂದಿತು.
ನಮ್ಮಯ ನಾಡಿನ ಜನಕೆಲ್ಲಾ
ಸಗ್ಗದ ಸುಖವನು ನೀಡುತ ರೈತಗೆ
ದುಡಿಯಲು ಹೆಚ್ಚಿತು ದಿನವೆಲ್ಲ
ಬೆಳಸಿಯೆ ತಿನ್ನುತ ಮಜ್ಜಿಗೆ ಕುಡಿಯುತ
ಇರುವರು ರೈತರು ಸುಖದಲ್ಲಿ
ಜೋಳವ ಕೊಯ್ಯುತ ಗೂಡನು ಹಾಕುತ
ಕುಣಿವರು ರೈತರು ಹೊಲದಲ್ಲಿ
ಕಣವನು ಕಡಿಯುತ ನೀರನು ಹೊಡೆಯುತ
ಮೇಟಿಯ ಕುಣಿಯನು ಅಗೆಯುವರು
ತೆನೆಯನು ಮುರಿಯುತ ಹೆಸರನು ಹೇಳುತ
ಗುಂಪಿಯನೆಳೆಯುತ ಒಗೆಯುವರು
ಹಂತಿಯ ಹೊಡೆಯುತ ಕಂತಿಯ ತೆಗೆಯುತ
ಬೆಳಗಿನ ವರೆಗೂ ಹಾಡುವರು
ಕಾಳನು ತೂರುತ ಗಾಡಿಯ ಹೇರುತ
* * *
ಊರಿನ ಕಡೆಗೆ ಓಡುವರು

**ದಾ.ರಾ. ಬಳೂರಗಿ**

(ಮೇಟಿ – ಕೃಷಿ, ಗುಂಪಿ–ಹುಲ್ಲು, ಕಂತಿ – ಹುಲ್ಲಿನ ಕಂತೆ, ಹಂತಿ–ಕಣದಲ್ಲಿ ತೆನೆಯನ್ನು ತುಳಿಯಲು ಕಟ್ಟುವ ದನಗಳ ಸಾಲು)

ಅ) ಈ ಪದ್ಯಕ್ಕೆ ಸೂಕ್ತವಾದ ಶೀರ್ಷಿಕೆಯನ್ನು ನೀಡಿರಿ.

ಆ) ಈ ಪದ್ಯದ ಆಸ್ವಾದನ ಟಿಪ್ಪಣಿಯನ್ನು ಬರೆಯಿರಿ.

2) ದುಡಿಮೆಗೆ ಸಂಬಂಧಿಸಿದ ಯಾವುದಾದರೊಂದು ಗಾದೆಯ ಆಶಯವನ್ನು ಬರೆಯಿರಿ.

3) 'ದುಡಿಮೆಯ ಫಲ' ಎಂಬ ಕಥೆಯಲ್ಲಿ ರಾಮಪ್ಪಯ್ಯನ ಮೂವರು ಮಕ್ಕಳು ಮೂರನೆಯ ಕೋಣೆಯ ಬಾಗಿಲನ್ನು ತೆರೆದಾಗ ಬಿತ್ತನೆಗೆ ಬೇಕಾದ ಧಾನ್ಯ, ಗೊಬ್ಬರ ಸಿಕ್ಕಿತು. ಅನಂತರ ಅವರು ಉತ್ತಮ ಕೃಷಿಯನ್ನು ಮಾಡಿ ಜೀವನ ಮಾಡಲು ತೀರ್ಮಾನಿಸಿದರು. ಈ ಸಂದರ್ಭದಲ್ಲಿ ಅವರೊಳಗೆ ನಡೆದಿರಬಹುದಾದ ಮಾತುಕತೆಯನ್ನು ಊಹಿಸಿ ಸಂಭಾಷಣೆ ಬರೆಯಿರಿ.

1ನೇ ಮಗ : ನೋಡಿ ತಮ್ಮಂದಿರೇ!.. ನಮಗೆ ಬಿತ್ತನೆಗೆ ಬೇಕಾದ ಧಾನ್ಯ ಇಲ್ಲಿದೆ.

2 ನೇ ಮಗ : ಹೌದು, ಮಳೆಗಾಲ ಪ್ರಾರಂಭವಾಗುವ ಲಕ್ಷಣ ಕಾಣುತ್ತಿದೆ. ಬೇಸಾಯಕ್ಕೆ ಸಿದ್ದತೆ ನಡೆಸಬೇಕಿದೆ.

3 ನೇಮಗ : ಬೇಸಾಯ ಮಾಡಲು ಬೇಕಾದ ಉಪಕರಣಗಳನ್ನು ನಾನು ಸಿದ್ಧಗೊಳಿಸುತ್ತೇನೆ.

1ನೇ ಮಗ :

2ನೇ ಮಗ :

3ನೇ ಮಗ :

4) 'ಕೃಷಿಕರು ಎದುರಿಸುತ್ತಿರುವ ಸಮಸ್ಯೆಗಳು' ಎಂಬ ವಿಷಯದ ಕುರಿತು ವಿಚಾರ ಸಂಕಿರಣ ನಡೆಸಲು ಪ್ರಬಂಧವೊಂದನ್ನು ತಯಾರಿಸಿರಿ.

# 3. ತಾಣ – ಯಾನ

ಬಹಳ ಹಿಂದಿನ ಕಾಲದಿಂದಲೇ ಜನರು ತಮ್ಮ ಅಗತ್ಯಗಳನ್ನು ಪೂರೈಸಲು ಒಂದೂರಿನಿಂದ ಇನ್ನೊಂದೂರಿಗೆ ಪ್ರಯಾಣ ಮಾಡುತ್ತಿದ್ದರು. ಪ್ರಯಾಣದ ಸಂದರ್ಭಗಳಲ್ಲಿ ಧಾರಾಳವಾಗಿ ಅನುಭವಗಳು ಲಭಿಸುತ್ತಿದ್ದುವು. ಆ ಅನುಭವಗಳು ಅವರಿಗೆ ಒಂದಲ್ಲ ಒಂದು ರೀತಿಯಲ್ಲಿ ಪ್ರಯೋಜನಕರವಾಗುತ್ತಿದ್ದುವು.

ಇಂದು ಸಾರಿಗೆ ಸಂಪರ್ಕದಲ್ಲಾದ ಪ್ರಗತಿಯು ಮನುಷ್ಯನಲ್ಲಿ ದೂರದ ಊರಿಗೆ ಪ್ರಯಾಣ ಮಾಡುವ, ಅಲ್ಲಿಯೇ ನೆಲೆನಿಲ್ಲುವ ಆಸಕ್ತಿಯನ್ನು ಹೆಚ್ಚಿಸಿದೆ. ವಿನೋದಕ್ಕಾಗಿ ಪ್ರಯಾಣ ಮಾಡುವವರ ಸಂಖ್ಯೆಯೂ ಇಂದು ವರ್ಧಿಸಿದೆ. ಹೀಗೆ ಪ್ರಯಾಣಿಸುವುದರಿಂದ ಜನರಿಗೆ ಇತರ ಪ್ರದೇಶಗಳ ಆಚಾರ–ವಿಚಾರ, ರೀತಿ–ನೀತಿ, ಉಡುಗೆ ತೊಡುಗೆ, ಆಹಾರ–ವಿಹಾರಗಳೇ ಇತ್ಯಾದಿ ವಿಚಾರಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಜನರು ತಮ್ಮ ಅನುಭವಗಳನ್ನು ಲೇಖನಿಗಿಳಿಸಿದ ಪರಿಣಾಮವಾಗಿಯೇ ಪ್ರವಾಸ ಸಾಹಿತ್ಯವೆಂಬ ಸಾಹಿತ್ಯ ಪ್ರಕಾರ ಹುಟ್ಟಿಬಂತು.

'ತಾಣ ಯಾನ' ಎಂಬ ಈ ಘಟಕದಲ್ಲಿ ಒಂದು ಪದ್ಯ ಮತ್ತು ಎರಡು ಗದ್ಯಗಳಿವೆ. 'ಹೊಸ ಕಾರಿನ ಓಟ' ಎಂಬ ಪದ್ಯ ಮಕ್ಕಳಲ್ಲಿ ಆಸ್ವಾದನ ಸಾಮರ್ಥ್ಯ ಬೆಳೆಸುವುದರೊಂದಿಗೆ ರಸ್ತೆ ಸುರಕ್ಷತೆಯ ಕುರಿತು ಅರಿವು ಮೂಡಿಸುತ್ತದೆ. 'ಕಾಶ್ಮೀರದ ಸರೋವರದ ತೀರಗಳಲ್ಲಿ' ಎಂಬ ಪ್ರವಾಸ ಕಥನವು ದೂರದ ಪ್ರದೇಶಗಳ ಸೌಂದರ್ಯವನ್ನು ಓದಿ ತಿಳಿಯುವ ಪ್ರವಾಸ ಹೋಗುವ ಹಾಗೂ ಅನುಭವಗಳನ್ನು ದಾಖಲಿಸುವ ಅಭ್ಯಾಸವನ್ನು ಮಕ್ಕಳಲ್ಲಿ ಬೆಳೆಸುವ ಉದ್ದೇಶದಿಂದ ಕೊಡಲ್ಪಟ್ಟಿದೆ. 'ಬದುಕಿನ ಸತ್ಯ'ವು ಜಲ ಸಂಚಾರದ ಕುರಿತು ತಿಳಿಸುತ್ತದೆ. ಹಾಗೂ ಬದುಕಿನಲ್ಲಿ ಯಾವುದೇ ಕಷ್ಟ ಬಂದರೂ ಎದುರಿಸಿ ಬದುಕಬೇಕು, ಕಷ್ಟದ ಹಿಂದೆ ಸುಖವಿದೆ ಎಂಬ ನೀತಿಯನ್ನು ತಿಳಿಸುತ್ತದೆ. ಈ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಈ ಘಟಕವನ್ನು ಕೊಡಲಾಗಿದೆ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡುವುದು, ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ನೀಡಿದ ಸಂದರ್ಭಕ್ಕೆ ಸೂಕ್ತವಾದ ವ್ಯವಹಾರ ರೂಪಗಳನ್ನು ಕಂಡುಕೊಂಡು ರಚನೆಗಳನ್ನು ಮಾಡುವುದು.

- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಕಥೆ, ಕವಿತೆಗಳಲ್ಲಿ, ಕಥಾಪಾತ್ರಗಳ ಮಾನಸಿಕ ಸ್ಥಿತಿ, ಅವುಗಳಿಗಿರುವ ಸ್ಥಾನ ಇತ್ಯಾದಿಗಳನ್ನು ಗುರುತಿಸಿ ಬಾಯ್ದೆರೆಯಾಗಿ ಮತ್ತು ಲಿಖಿತವಾಗಿ ಪಾತ್ರಚಿತ್ರಣ ಮಾಡುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಉತ್ತಮಗೊಳಿಸುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಸೃಜನಾತ್ಮಕ ರಚನೆಗಳ ಭಾವವನ್ನು ಅರ್ಥೈಸಿಕೊಂಡು ನಾಟಕ, ಭಾವಾಭಿನಯ ಮತ್ತು ಮೂಕಾಭಿನಯಗಳ ಮೂಲಕ ಮಂಡಿಸುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸುವುದು ಮತ್ತು ವಾಚಿಕವಾಗಿ ಮಂಡಿಸುವುದು.
- ದೃಶ್ಯ-ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 3 : ತಾಣ ಯಾನ** ಸಮಯ : 6+5 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಹೊಸ ಕಾರಿನ ಓಟ | • ರಸ್ತೆ ಸುರಕ್ಷತೆಯ ಅರಿವು ಮೂಡಿಸುವುದು<br>• ಸಾರಿಗೆ ನಿಯಮಗಳನ್ನು ತಿಳಿಯುವುದು | • ಹಾಡುವುದು<br>• ಚರ್ಚಿಸುವುದು<br>• ಸಂಭಾಷಣೆ ಬರೆಯುವುದು<br>• ಸಾರಾಂಶ ಬರೆಯುವುದು<br>• ಅನ್ಯದೇಶೀಯ ಪದಗಳನ್ನು ಗುರುತಿಸುವುದು<br>• ಪ್ರಾಸಪದ ಬರೆಯುವುದು<br>• ಸೂಚನಾ ಫಲಕ ತಯಾರಿಸುವುದು<br>• ಟಿಪ್ಪಣಿ ತಯಾರಿಸುವುದು. | • ಕತೆ, ಪದ್ಯ | • ಸಂಭಾಷಣೆ<br>• ಟಿಪ್ಪಣಿ |
| 2. ಕಾಶ್ಮೀರದ ಸರೋವರದ ತೀರಗಳಲ್ಲಿ | • 'ಪ್ರವಾಸ ಕಥನ'ಗಳ ಪರಿಚಯ ಮಾಡುವುದು.<br>• ಪ್ರಕೃತಿಯಲ್ಲಿರುವ ಸುಂದರ ತಾಣಗಳನ್ನು ವೀಕ್ಷಿಸಿ ಆನಂದಿಸುವ ಮನೋಭಾವ ಬೆಳೆಸುವುದು.<br>• ಪ್ರಕೃತಿಯನ್ನು ಪ್ರೀತಿಸುವ ಮನೋಭಾವ ಬೆಳೆಸುವುದು.<br>• ಪ್ರವಾಸ ಕಥನವನ್ನು ಬರೆಯುವುದು. | • ಚರ್ಚಿಸುವುದು<br>• ಉತ್ತರಿಸುವುದು<br>• ಕ್ರಮೀಕರಿಸಿ ಬರೆಯುವುದು<br>• ಪತ್ರ ಬರೆಯುವುದು<br>• ವರ್ಣನೆ ಬರೆಯುವುದು<br>• ಆಲ್ಬಂ ತಯಾರಿಸುವುದು | • ಪ್ರವಾಸ ಕಥನ<br>• ಕಾಶ್ಮೀರದ ಪ್ರೇಕ್ಷಣೀಯ ಸ್ಥಳಗಳ ವಿಡೀಯೋ | • ವರ್ಣನೆ |

# ಯೂನಿಟ್ ಗ್ರಿಡ್

**ಯೂನಿಟ್ 3 : ತಾಣ ಯಾನ** ಸಮಯ : 6 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3. ಬದುಕಿನ ಸತ್ಯ | • ಜೀವನದಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವುದು<br>• ಕಷ್ಟ ಸಹಿಷ್ಣುತೆಯನ್ನು ಬೆಳೆಸುವುದು<br>• ವಿದೇಶೀ ಅನುವಾದಿತ ಕತೆಗಳ ಪರಿಚಯ<br>• ಭಾಷಾ ಸತ್ಯಾಂಶಗಳನ್ನು ತಿಳಿಯುವುದು. | • ಓದುವುದು<br>• ಚರ್ಚಿಸುವುದು<br>• ಉತ್ತರಿಸುವುದು<br>• ಕ್ರಮೀಕರಿಸಿ ಬರೆಯುವುದು.<br>• ಸ್ವಂತ ವಾಕ್ಯ ಬರೆಯುವುದು.<br>• ಕತೆ ಪೂರ್ಣಗೊಳಿಸುವುದು.<br>• ಊಹಿಸಿ ಬರೆಯುವುದು.<br>• ಸಂದರ್ಶನ ವರದಿ ತಯಾರಿಸುವುದು. | • ಅನುವಾದಿತ ವಿದೇಶಿ ಕತೆಗಳು | • ಕತೆ<br>• ವರದಿ |
| | | | | |

# 1. ಹೊಸ ಕಾರಿನ ಓಟ

## ಚಟುವಟಿಕೆಗಳು

ಮಕ್ಕಳಲ್ಲಿ ವಾಹನಗಳ ಹೆಸರನ್ನು ಹೇಳಲು ಹೇಳುವುದು. ಹೇಳಿದ ಹೆಸರುಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಅವುಗಳಲ್ಲಿ ಅವರಿಗೆ ಇಷ್ಟವಿರುವ ವಾಹನ ಯಾವುದು? ಯಾಕೆ? ಎಂದು ಮುಂತಾಗಿ ಪ್ರಶ್ನಿಸುವುದು.

ಚರ್ಚೆಯ ಮೂಲಕ ಅತ್ಯಂತ ವೇಗವಾಗಿ ವಾಹನಗಳನ್ನು ಚಲಾಯಿಸುವುದು ಸರಿಯೋ? ಇವುಗಳಿಂದ ತೊಂದರೆಗಳೇನು? ಇತ್ಯಾದಿ ಪ್ರಶ್ನೆಗಳ ಮೂಲಕ ಪಾಠ ಪ್ರವೇಶ ಮಾಡುವುದು.

ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡುವುದು. ಮೌನವಾಗಿ ಓದಲು ಹೇಳುವುದು. ಗುಂಪುಗಳೊಂದಿಗೆ ಸರದಿಯಂತೆ ಹಾಡಲು ಹೇಳುವುದು. ಗುಂಪಿನಲ್ಲಿ ತಯಾರಿ ನಡೆಸಲು 5–10 ನಿಮಿಷಗಳ ಸಮಯಾವಕಾಶ ನೀಡುವುದು. ಒಂದು ಗುಂಪು ಹಾಡುವಾಗ ಉಳಿದ ಗುಂಪುಗಳು ಮೌಲ್ಯಮಾಪನ ಮಾಡಲಿ.

## ಮೌಲ್ಯಮಾಪನ ಸೂಚಕಗಳು

- ಎಲ್ಲರ ಭಾಗವಹಿಸುವಿಕೆ
- ರಾಗ, ತಾಳ, ಲಯಬದ್ಧವಾಗಿ ಹಾಡುವುದು.
- ಉಚ್ಚಾರ ಸ್ಪಷ್ಟತೆ

ಮೌಲ್ಯಮಾಪನ ಸೂಚಕಗಳ ಆಧಾರದಲ್ಲಿ ಉಳಿದ ಗುಂಪುಗಳು ಮೌಲ್ಯಮಾಪನ ಮಾಡಲಿ. ಹೆಚ್ಚು ಅಂಕಗಳು ಲಭಿಸಿದ ಗುಂಪಿನ ಮೌಲ್ಯನಿರ್ಣಯ ಮಾಡಿ ಅಭಿನಂದಿಸುವುದು.

ಆಯಾ ಗುಂಪಿನವರಲ್ಲಿ ಕಠಿಣ ಪದಗಳನ್ನು ಗುರುತಿಸಲು ಹೇಳುವುದು. ಗುರುತಿಸಿದ ಪದಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಅರ್ಥಕೋಶದ ಸಹಾಯದಿಂದ ಅರ್ಥ ಕಂಡುಹಿಡಿಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ಮಾಡುವುದು.

## ಚರ್ಚಾಸಿರಿ

- 'ಸಾವಧಾನದಲ್ಲಿ ನೋವು ತಾ ಕಡಿಮೆ' ಈ ವಾಕ್ಯವನ್ನು ಕರಿಹಲಗೆಯಲ್ಲಿ ಬರೆಯುವುದು. ಬಳಿಕ ಈ ರೀತಿ ಕವಿ ಹೇಳಲು ಕಾರಣವೇನು?
- ವೇಗವಾಗಿ ಹೋಗುವುದರಿಂದ ಏನು ಸಂಭವಿಸುತ್ತದೆ?
- ನಾವು ವೇಗವಾಗಿ ಹೋಗುವುದೇಕೆ?
- ಸಮಯಪಾಲನೆ ಅಗತ್ಯವಲ್ಲವೇ?
- ಸಾವಧಾನವಾಗಿ ಹೋಗುವುದರ ಪ್ರಯೋಜನವೇನು?

ಇತ್ಯಾದಿ ವಿಚಾರಗಳನ್ನು ಚರ್ಚಿಸುವುದು.

ಪ್ರಧಾನ ವಿಷಯಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಕ್ರೋಡೀಕರಿಸಿ ಟಿಪ್ಪಣಿ ತಯಾರಿಸುವುದು.

**ಟಿಪ್ಪಣಿ ಹೇಗಿರಬೇಕು?**

- ಪ್ರಧಾನ ಆಶಯವಿರಬೇಕು.
- ಉಪ ಆಶಯಗಳು ಸಂಕ್ಷಿಪ್ತವಾಗಿರಬೇಕು.
- ಭಾಷೆ, ಶೈಲಿ ಇತ್ಯಾದಿ ಅಂಶಗಳನ್ನು ಗಮನಿಸಬೇಕು.

**ಟಿಪ್ಪಣಿ ಹೀಗೂ ಇರಬಹುದು**

'ನಿಧಾನವೇ ಪ್ರಧಾನ' ಎಂಬ ಗಾದೆ ಮಾತಿದೆ. ಅವಸರವು ಆಪತ್ತಿಗೆ ಕಾರಣವಾಗುತ್ತದೆ. ವಾಹನಗಳನ್ನು ಮಿತವಾದ ವೇಗದಿಂದ ಚಲಾಯಿಸಬೇಕು. ಅಮಿತವಾದ ವೇಗವು ಅಪಘಾತಕ್ಕೆ ಕಾರಣವಾಗುತ್ತದೆ. ಇದರಿಂದ ಸಾವು, ನೋವುಗಳು, ನಾಶ–ನಷ್ಟಗಳು ಸಂಭವಿಸುತ್ತವೆ. ತಡವಾಗಿ ಹೊರಡುವುದು, ಹೊಸ ವಾಹನವೆಂಬ ಹುಮ್ಮಸ್ಸು, ಯುವಕ – ಯುವತಿಯರಲ್ಲಿರುವ ಸ್ಪರ್ಧಾಮನೋಭಾವ ಎಂಬಿವೆಲ್ಲ ಅಮಿತವೇಗಕ್ಕೂ ಅಪಘಾತಗಳಿಗೂ ಕಾರಣವಾಗುತ್ತವೆ. ಸಾವಧಾನವನ್ನು ಪಾಲಿಸಬೇಕಾದುದು ಅಗತ್ಯ ಎಂಬ ಕವಿವಾಣಿಯು ಎಲ್ಲರಿಗೂ ಉತ್ತಮ ಸಂದೇಶವಾಗಿದೆ.

### ಸಂಭಾಷಣೆ ಬರೆಯಿರಿ

ಪದ್ಯದಲ್ಲಿ ಬಂದಿರುವ ಹಳೆಯ ಲಾರಿ ಮತ್ತು ಹೊಸ ಕಾರುಗಳೊಳಗೆ ಸಂಭಾಷಣೆ ಹೇಗೆ ನಡೆದಿರಬಹುದು ಎಂಬುದಾಗಿ ಪ್ರಶ್ನಿಸುವುದು.

- ಕಾರು ಏನು ಹೇಳುತ್ತದೆ?
- ಲೋರಿಯ ಉತ್ತರವೇನು?

ಮಕ್ಕಳಿಂದ ಉತ್ತರ ಹೇಳಿಸುವುದು ಮತ್ತು ಬರೆಸುವುದು.

### ಸಂಭಾಷಣೆ ಹೀಗೂ ಇರಬಹುದು

ಕಾರು : ಓ ಮುದಿ ಲಾರಿಯೇ, ರೇಸಲ್ಲಿ ನನ್ನನ್ನು ಹಿಮ್ಮೆಟ್ಟಿಸುವೆಯಾ? ಮುದಿ ಆಮೆ ಸಹ ನಿನ್ನನ್ನು ಹಿಮ್ಮೆಟ್ಟಿಸಬಹುದಲ್ಲ!

ಲಾರಿ : (ನಗುತ್ತಾ) ನಾನು ಸಾಗುವುದು ಹೀಗೆ!

ಕಾರು : (ಮರಕ್ಕೆ ಢಿಕ್ಕಿ ಹೊಡೆಯುತ್ತ) ಅಯ್ಯೋ!....

ಲಾರಿ : ನಿನ್ನ ತಪ್ಪನ್ನು ಈಗ ಅರಿತೆಯಾ?

ಕಾರು :

ಲಾರಿ :

ಹೀಗೆ ಸಂಭಾಷಣೆ ಮುಂದುವರಿಸಿ ಬರೆಯಲು ಹೇಳುವುದು.

### ಸಾರಾಂಶ ಬರೆಯಿರಿ

ಕವಿತೆಯ ಪ್ರಧಾನ ಆಶಯವೇನು?

ಕವಿತೆಯ ಒಟ್ಟು ಆಶಯವೇನು?

ಇತ್ಯಾದಿ ಪ್ರಶ್ನೆಗಳನ್ನು ಕೇಳುವುದು.

**ಸಾರಾಂಶ ಬರೆಯುವಾಗ ಗಮನಿಸಬೇಕಾದ ವಿಚಾರಗಳು**

- ಕವಿತೆಯ ಪ್ರಧಾನ ಆಶಯವಿರಬೇಕು.
- ಒಟ್ಟು ಆಶಯ ಸಂಕ್ಷಿಪ್ತವಾಗಿರಬೇಕು.

**ಸಾರಾಂಶ ಹೀಗೂ ಇರಬಹುದಲ್ಲವೇ?**

ಹಳೆಯ ಲಾರಿ ಸಾಗುತ್ತಿರುವಾಗ ಹೊಸ ಕಾರು, 'ಓ ಮುದಿ ಲಾರಿಯೇ ನನ್ನನ್ನು ಹಿಮ್ಮೆಟ್ಟಿಸಲು ಸಾಧ್ಯವೇ? ಆಮೆಯು ಕೂಡಾ ನಿನಗಿಂತ ವೇಗವಾಗಿ ಸಾಗೀತು' ಎಂದು ಮೂದಲಿಸುವಾಗ ಹಳೆಯ ಲಾರಿ ಹಿಂದಿನಿಂದ ಮೌನವಾಗಿ ಸಾಗುತ್ತದೆ. ಕಾರು ಮುಂದಕ್ಕೆ ಓಡಿ ಮರಕ್ಕೆ ಢಿಕ್ಕಿ ಹೊಡೆದು ನಿಂತಾಗ, 'ಈಗ ತಪ್ಪು ತಿಳಿಯಿತೇ? ನಾನೂ ಹೊಸಬನಾಗಿದ್ದಾಗ ನಿನ್ನ ಹಾಗೆಯೇ ಓಡಿ ಅಪಘಾತಕ್ಕೆ ಸಿಕ್ಕಿಕೊಂಡೆ, ಸಾವಧಾನದಲ್ಲಿ ನೋವು ಕಡಿಮೆ ಎಂದು ತಿಳಿ' ಎಂದು ಲಾರಿ ಹೇಳುತ್ತಾ ಹಗ್ಗದ ಸಹಾಯದಿಂದ ಕಾರನ್ನು ಎಳೆದು ತಂದು ರಿಪೇರಿಯ ಸ್ಥಳದಲ್ಲಿ ನಿಲ್ಲಿಸುತ್ತದೆ. ಆಗ ಕಾರು, 'ಹಿರಿಯವನೆಂದು ತಿಳಿಯದೆ ನಡೆದುಕೊಂಡೆ, ನನ್ನನ್ನು ಕ್ಷಮಿಸು' ಎಂಬುದಾಗಿ ಹೇಳುತ್ತದೆ.

**ಅನ್ಯದೇಶೀಯ ಪದ ಗುರುತಿಸಿರಿ**

ಯಾವುದೇ ಭಾಷೆಯಲ್ಲಿಯೂ ಅನ್ಯದೇಶೀಯ ಪದಗಳ ಬಳಕೆ ಇರುತ್ತದೆ. ಕನ್ನಡವೂ ಇದಕ್ಕೆ ಹೊರತಲ್ಲ. ಅನ್ಯದೇಶೀಯ ಪದಗಳನ್ನು ಗುರುತಿಸುವ, ಅವುಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನು ತಿಳಿಯುವ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸಬೇಕು. ಅದಕ್ಕಾಗಿ ಈ ಚಟುವಟಿಕೆಯನ್ನು ನೀಡಲಾಗಿದೆ.

ಈ ಪಾಠದಲ್ಲಿ ಬಂದ ಅನ್ಯದೇಶಿಯ ಪದಗಳು ಕಾರು, ಲಾರಿ, ಟಾರು, ರಸ್ತೆ, ರೇಸು, ರಿಪೇರಿ ಇತ್ಯಾದಿ.

**ಪ್ರಾಸ ಪದ ಬರೆಯಿರಿ**

(ಸೂಚನೆ: ಪ್ರಾಸ ಪದಗಳ ಹೆಚ್ಚಿನ ವಿವರಗಳನ್ನು ಮೂಲಪತ್ಯದ ಎರಡನೇ ಘಟಕದಲ್ಲಿ ನೀಡಲಾಗಿದೆ.)

**ಪ್ರಾಸ ಪದಗಳು**

ನೀನು – ತಾನು, ಈಗ – ಹೊಸದಿರುವಾಗ, ನಗುತ – ಹೊಡೆಯುತ, ಹಿಂದೆ – ಮುಂದೆ, ಈಗ – ಬೇಗ, ತಂದು – ಎಂದು, ಬೆಂದು – ನೊಂದು.

ಇಲ್ಲಿ ಎಲ್ಲೆಡೆಗಳಲ್ಲೂ ಕೊನೆಯಲ್ಲಿರುವ ವ್ಯಂಜನಗಳು ಮತ್ತು ಸ್ವರಗಳು ಒಂದೇ ಆಗಿವೆ. ಇದನ್ನು ಮಕ್ಕಳ ಗಮನಕ್ಕೆ ತರುವುದು.

**ಸೂಚನಾ ಫಲಕ ತಯಾರಿಸಿರಿ**

ಯಾವುದಾದರೂ ವಿಚಾರದ ಕುರಿತು ಖಚಿತವಾದ ನಿರ್ದೇಶನ ಕೊಡುವುದು, ಸಲಹೆ ಕೊಡುವುದು, ಅಥವಾ ಎಚ್ಚರಿಕೆ ಕೊಡುವುದು ಇತ್ಯಾದಿಗಳನ್ನು ತಿಳಿಸುವ ಒಂದು ಮಾರ್ಗವೇ ಸೂಚನಾ ಫಲಕ.

**ಸೂಚನಾ ಫಲಕ ಹೇಗಿರಬೇಕು?**

- ಆಶಯಸ್ಪಷ್ಟತೆ

- ಸೂಚನೆಗಳ ಸಂಕ್ಷಿಪ್ತತೆ
- ಸುಲಭವಾಗಿ ತಿಳಿಯುವಂತಿರವುದು
- ಆಕರ್ಷಕವಾಗಿರುವುದು.

ಮಕ್ಕಳಲ್ಲಿ ಸೂಚನಾ ಫಲಕಗಳನ್ನು ತಯಾರಿಸಲು ಹೇಳುವುದು. ಮೇಲಿನ ಸೂಚಕಗಳ ಆಧಾರದಿಂದ ತಾವು ಬರೆದ ಸೂಚನೆಗಳನ್ನು ಅವರು ಪರಸ್ಪರ ಬದಲಾಯಿಸಿ ಮೌಲ್ಯಮಾಪನ ನಡೆಸಲಿ.

**ಕೆಲವು ಸೂಚನೆಗಳು**

- ನಿಧಾನವೇ ಪ್ರಧಾನ
- ಅವಸರವೇ ಅಪಘಾತಕ್ಕೆ ಕಾರಣ
- ಜೀಬ್ರಾ ಕ್ರಾಸ್‌ನಲ್ಲಿ ಮಾತ್ರ ರಸ್ತೆ ಅಡ್ಡ ದಾಟಿರಿ.
- ಮದ್ಯಪಾನ ಮಾಡಿ ವಾಹನ ಚಲಾಯಿಸದಿರಿ.
- ಮೊಬೈಲ್‌ನಲ್ಲಿ ಮಾತನಾಡುತ್ತ ವಾಹನ ಚಲಾಯಿಸದಿರಿ.
- ಪಾದಚಾರಿಗಳು ತಮ್ಮ ಬಲಬದಿಯಲ್ಲೇ ನಡೆಯಿರಿ.

ಅಧ್ಯಾಪಕರು ಸೂಚನೆಗಳನ್ನು ತಖ್ತೆಯಲ್ಲಿ ಬರೆದು ತೂಗಿಸುವುದು ಉತ್ತಮ.

**ಟಿಪ್ಪಣಿ ತಯಾರಿಸಿರಿ**

- ರಸ್ತೆ ಅಪಘಾತ ಎಂದರೇನು?
- ಇದಕ್ಕೆ ಕಾರಣಗಳೇನು?
- ರಸ್ತೆ ಅಪಘಾತಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆಯೇ?
- ವಾಹನಗಳ ಹೆಚ್ಚಳ ಮಾತ್ರ ಕಾರಣವೇ?
- ಬೇರೇನು ಕಾರಣಗಳಿವೆ?
- ರಸ್ತೆಗಳು ಹೇಗಿರಬೇಕು?
- ಜನರು ನಿಯಮಗಳನ್ನು ಪಾಲಿಸುತ್ತಾರೆಯೇ?

ಇತ್ಯಾದಿ ಪ್ರಶ್ನೆಗಳ ಮೂಲಕ ಮಕ್ಕಳೊಂದಿಗೆ ಚರ್ಚೆ ನಡೆಸುವುದು.

ಬಳಿಕ ಕ್ರೋಡೀಕರಣ ಮಾಡುವುದು.

**ಟಿಪ್ಪಣಿ**

ರಸ್ತೆ ಅಪಘಾತಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಜನಸಂಖ್ಯೆ ಹೆಚ್ಚಾದಂತೆ ವಾಹನಗಳ ಸಂಖ್ಯೆಯೂ ಹೆಚ್ಚುತ್ತಿದೆ. ಭಾರತದಲ್ಲಿ ಪ್ರತಿವರ್ಷ ವಾಹನ ಬಳಸುವವರ ಸಂಖ್ಯೆಗಳು ಹೆಚ್ಚುತ್ತಿವೆ ಎಂಬುದಾಗಿ ಅಂಕಿ, ಅಂಶಗಳು ತಿಳಿಸುತ್ತವೆ. ಹಾಗೆಯೇ ರಸ್ತೆ ಅಪಘಾತಗಳೂ ಹೆಚ್ಚುತ್ತಿವೆ. ವಾಹನಗಳನ್ನು ಅಜಾಗರೂಕತೆಯಿಂದ ಚಲಾಯಿಸುವುದು, ಹೊಂಡದಿಂದ ಕೂಡಿದ ರಸ್ತೆಗಳು, ಅಗಲ ಕಿರಿದಾದ ರಸ್ತೆಗಳು ಮುಂತಾದವುಗಳು ಅಪಘಾತಕ್ಕೆ ಕಾರಣವಾಗುತ್ತವೆ. ಮದ್ಯಪಾನ ಮಾಡಿ ವಾಹನ ಚಲಾಯಿಸುವುದು, ಮೊಬೈಲ್ ಬಳಸಿಕೊಂಡು ವಾಹನ ಚಲಾಯಿಸುವುದು, ಅಮಿತ ವೇಗ, ಮೋಟಾರು ನಿಯಮಗಳನ್ನು ಪಾಲಿಸದಿರುವುದು ಕೂಡಾ ಅಪಘಾತಗಳಿಗೆ ಕಾರಣವಾಗುತ್ತವೆ. ಉತ್ತಮವಾದ ರಸ್ತೆಗಳು, ಕಟ್ಟುನಿಟ್ಟಾದ ನಿಯಮ ಪಾಲನೆಗಳಿಂದ ಅಪಘಾತಗಳನ್ನು ಬಹುಮಟ್ಟಿಗೆ ತಡೆಯಬಹುದು.

• ಸಾರಿಗೆ ಸಂಪರ್ಕ ವ್ಯವಸ್ಥೆಗೆ ಸಂಬಂಧಿಸಿದ ಕವಿತೆಗಳನ್ನು ಸಂಗ್ರಹಿಸಿ ಬರೆಯಿರಿ.

**ಪೂರಕ ಓದಿಗೆ**

## ನಮ್ಮ ಊರ ಬಸ್ಸು

ಅದೋ ಅಲ್ಲಿ ನಮ್ಮ ಊರ ಬಸ್ಸು ಬಂತು ನೋಡಿ
ನೀವು ಸಹ ಹೋಗಬೇಕೆ ಬೇಗ ಬೇಗ ಓಡಿ
ಮೈ ಕೆಂಪು ಕೆಂಪು, ಒಳ ಬಣ್ಣ ಹಸಿರು
ಜನರಿಂದ ತುಂಬಿಹುದು ಆ ಬಸ್ಸಿನ ಬಸಿರು
ಆದರೂ ನಾವು ಏರುವೆವು ಹೇಗಾದರೂ ನಿಲ್ಲುವೆವು
ಅಂತು ಇಂತು ಪೇಟೆವರೆಗೆ ನಾವು ಹೋಗಿ ಬಿಡುವೆವು
ಇದು ಒಂದೇ ಬಸ್ಸು ಈ ಊರಿಗೆಲ್ಲ
ಅದರಲ್ಲೆ ಹೋಗಬೇಕು ಊರ ಜನರು ಎಲ್ಲ
ಅರ್ಜಿ ನಾವು ಬರೆಯುವೆವು, ಸ್ಟ್ರೈಕ್ ನಾವು ಮಾಡುವೆವು
ನಮ್ಮೂರಿಗೆ ಇನ್ನೂ ಕೆಲವು ಬಸ್ಸು ಬೇಕು ಎನ್ನುವೆವು.
ಅದರೊಳಗಿನ ಗತಿಯನ್ನು ನೋಡಿದವರು ಎಲ್ಲ
ಹೇಳುತಿಹರು ಇದರ ವಿಷಯ ದೇವನೊಬ್ಬ ಬಲ್ಲ
ಸೀಟು ಎಲ್ಲ ಹರಿದಿದೆ ಬಣ್ಣ ಎಲ್ಲ ಹೋಗಿದೆ
ಅದರ ಶಬ್ದ ಕೇಳಿದರೆ ಏನೂ ತಿಳಿಯದಾಗಿದೆ.

(ಸಂಗ್ರಹ)

## ಪವಾಡ (ಕಥನ ಕವನ)

ದಾರಿಯಲ್ಲಿ ಕೆಟ್ಟು ನಿಂತಿತು, ಧುಮುಕಿ
ಚಾಲಕನು ತೆರಳಿದನು ಬುಡದ ಬಳಿಗೆ
ಕೂಲಿಯವ ನಿಲ್ಲಿಸಿದ ಜ್ಯಾಕನ್ನು ಎತ್ತರಿಸಿ
ಸರಿಪಡಿಸ ತೊಡಗಿದನು ಒರಗಿ ಕೆಳಗೆ
ಗಾಲಿ ಸರಿಯಿದ್ದವು, ಬೋಲ್ಟು ಬಿಗಿಯಿದ್ದವು
ಗಟ್ಟಿಯಾಗಿ ಇಟ್ಟವು ನೆಟ್ಟು
ಬ್ರೇಕಿಗೂ ಇರಲಿಲ್ಲ ತೊಂದರೆಯು ಹಿಡಿ ಚಕ್ರ
ಎಲ್ಲವೂ ಸರಿಯಾಗೆ ಇತ್ತು, ಒಟ್ಟು
ಆದರೂ ಎಂಜನ್ನು ಬುಸುಗುಟ್ಟಿ ಕೆಲಹೊತ್ತು
ನಿಂತು ಹೋಗುತ್ತಿತ್ತು ಉಸಿರು ಗಟ್ಟಿ

ಬಿಸಿಯಾಯಿತೆಂದು ಒಂದೆರಡು ಬಾಲ್ದಿ ನೀರು
ಹೊಯ್ದು ಕಾದರು ಮೈಯ ತಟ್ಟಿ
ಎಷ್ಟು ಧಡಪಡಿಸಿದರು ಲಾರಿ ಮಿಸುಕಲೆ ಇಲ್ಲ
ಅಷ್ಟರಲ್ಲಿ ಬಂತು ಇನ್ನೊಂದು ಲಾರಿ
ಬದಿಗೆ ನಿಲ್ಲಿಸಿ ಗಾಡಿ ಚಾಲಕನು ಕೇಳಿದನು
ನಿಂತು ಹೋಗಿದೆಯಲ್ಲಿ ಬೆಂಝು ಸವಾರಿ?
ಕುದುರೆ ಕುದುರೆಯ ಗೋಣ ತಿಕ್ಕಿ ನೆಕ್ಕಿದ ಹಾಗೆ
ಅಕ್ಕಪಕ್ಕದಿ ನಿಂತವೆರಡು ಲಾರಿ
ಆಗಲೆ ನಡೆಯಿತು ಪವಾಡ, ಮುಂಚಿನ ಗಾಡಿ
ಓಡತೊಡಗಿತು ಸದ್ದು ಮಾಡಿ ಭಾರಿ
ಲಾರಿ ಲಾರಿಯ ಕಂಡು ಸ್ನೇಹ ಮಾಡುವುದುಂಟು
ಮೊಂಡು ಹಿಡಿಯುವುದುಂಟು ಜಗಳಾಡಿ
ಬಾಡಿಗೆಯ ಭಾರವನು ಹೊತ್ತು ಮುಗಿಯದ ಪಯಣ
ಅದಕು ಬೇಸರವೆಂಬುದುಂಟು ನೋಡಿ.

– ಸು.ರಂ ಎಕ್ಕುಂಡಿ

## 2. ಕಾಶ್ಮೀರದ ಸರೋವರಗಳ ತೀರದಲ್ಲಿ

ಕಾಶ್ಮೀರದ ಪ್ರೇಕ್ಷಣೀಯ ಸ್ಥಳಗಳ ಸ್ಲೈಡ್ ಅಥವಾ ವೀಡಿಯೋವನ್ನು ಪ್ರದರ್ಶಿಸುವುದು.

ಬಳಿಕ ಈ ದೃಶ್ಯಗಳೆಲ್ಲ ಹೇಗಿವೆ?

ಇವು ಎಲ್ಲಿಯ ಸ್ಥಳಗಳೆಂದು ಹೇಳಲು ಸಾಧ್ಯವೇ? ಇತ್ಯಾದಿ ಪ್ರಶ್ನೆಗಳ ಮೂಲಕ, ಇನ್ನು ಅಲ್ಲಿಯ ಸರೋವರದ ಕುರಿತು ತಿಳಿಯೋಣ ಎಂದು ಹೇಳಿ ಪಾಠ ಪ್ರವೇಶ ಮಾಡಬಹುದು.

ಮಕ್ಕಳನ್ನು ಗುಂಪುಗಳಾಗಿ ಮಾಡುವುದು. ಪ್ರತಿಯೊಂದು ಗುಂಪಿಗೆ ಪಾಠದ ಒಂದೊಂದು ಭಾಗವನ್ನು ಹಂಚುವುದು. ಗುಂಪಿನಲ್ಲಿ ಚೆನ್ನಾಗಿ ಓದುವವರನ್ನು ಗುಂಪಿನಲ್ಲಿದ್ದವರೇ ಆಯ್ಕೆ ಮಾಡಲಿ. ಬಳಿಕ ಪ್ರತಿಯೊಂದು ಗುಂಪಿನಿಂದ ಒಬ್ಬೊಬ್ಬರು ತಮಗೆ ಸಿಕ್ಕಿದ ಪಾಠಭಾಗವನ್ನು ಸರದಿಯಂತೆ ಗಟ್ಟಿಯಾಗಿ ಓದಲಿ. ಅದೇ ಗುಂಪಿನ ಇನ್ನೊಂದು ಮಗು ಅದೇ ಭಾಗದಿಂದ ಪ್ರಶ್ನೆ ಕೇಳಲಿ. ಉಳಿದವರು ಉತ್ತರಿಸದಿದ್ದರೆ ಅದೇ ಗುಂಪು ಉತ್ತರಿಸಲಿ. ಹೀಗೆ ಎಲ್ಲ ಗುಂಪಿನವರೂ ಓದುವುದನ್ನು ಮತ್ತು ಪ್ರಶ್ನೆ ಕೇಳುವುದನ್ನು ಸರದಿಯಂತೆ ಮಾಡಲಿ.

### ಚಟುವಟಿಕೆಗಳು

#### ಚರ್ಚೆಸಿರಿ

ಈಗಾಗಲೇ ವಿದ್ಯಾರ್ಥಿಗಳು ಪ್ರಶ್ನೆಗಳನ್ನು ತಯಾರಿಸಿದ್ದಾರೆ. ಅವುಗಳನ್ನು ಕರಿಹಲಗೆಯಲ್ಲಿ/ ತಖ್ತೆಯಲ್ಲಿ ಬರೆದು ತೂಗುಹಾಕಿ, ಚರ್ಚಿಸುವುದು.

ಉತ್ತರಗಳನ್ನು ಕ್ರೋಡೀಕರಿಸಿ ಚರ್ಚಾಟಿಪ್ಪಣಿ ಬರೆಯುವುದು.

**ಚರ್ಚಾಟಿಪ್ಪಣಿ ಸೂಚಕಗಳು**

- ಆಶಯ ಪೂರ್ಣತೆ
- ಸಂಕ್ಷಿಪ್ತತೆ
- ಕ್ರಮಾನುಗತವಾಗಿರುವಿಕೆ
- ಭಾಷೆ, ಶೈಲಿ, ಪ್ರಯೋಗ
- ಸ್ವಂತ ಅಭಿಪ್ರಾಯ ಪ್ರಕಟಣೆ

**ಚರ್ಚಾಟಿಪ್ಪಣಿ ಹೀಗೂ ಇರಬಹುದು**

ಕಾಶ್ಮೀರದ ಕಣಿವೆಯಲ್ಲಿ ಸುಂದರವಾದ ಸರೋವರಗಳಿವೆ. ಅಲ್ಲಲ್ಲಿ ಪರ್ವತ ಸಾಲುಗಳು ಹಸುರುಡುಗೆಯುಟ್ಟು ಸುಂದರವಾಗಿ ಗೋಚರಿಸುತ್ತವೆ. ದಾಲ್ ಸರೋವರ, ಶಾಲಿಮಾರ್ ಬಾಗ್, ಪರೀಮಹಲ್, ಶ್ರೀನಗರದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಾಗಿವೆ. ಕಣಿವೆಯ ಕೊನೆಯಲ್ಲಿರುವ ಹಿಮಾಚ್ಛಾದಿತ ಶಿಖರಗಳಾದ ಸಿಂಬಲ್, ಕುಡುಲೈ, ಅಮರಾನಾಥ್ ಹಾಗೂ ಮಾಚೋಯ್ ಬೆಳ್ಳಿಯ ಶಿಖರಗಳಂತೆ ಮಿಂಚುತ್ತವೆ. ಹಿತವಾದ ವಾತಾವರಣವಿರುವ 'ನಿಚನೈ'ನಿಂದ ಕಾಣುವ ದೃಶ್ಯವು ನಯನ ಮನೋಹರವಾಗಿದೆ. ತೊರೆಗಳು, ಹಸಿರಿನ ಮೈದಾನಗಳು, 'ವಿಷನ್‌ಸಾರ್' ಸರೋವರ, ಸುತ್ತುವರಿದ ಬೆಟ್ಟದ ಸಾಲುಗಳು, ಕೈಬೀಸಿ ಕರೆಯುತ್ತಿರುವ ಕೆಂಪು, ಬಿಳಿ, ಹಳದಿ ಬಣ್ಣದ ಹೂಗಳು ಎಲ್ಲವೂ ವಿಭಿನ್ನ ಹಾಗೂ ಆಕರ್ಷಕ. ಗಡ್‌ಸಾರ್, ಕಿಶನ್‌ಸಾರ್ ಸರೋವರಗಳು ಬಿಸಿಲಿನಲ್ಲಿ ತಿಳಿನೀಲಿ ಹಾಗೂ ಹಸಿರು ಬಣ್ಣಗಳಲ್ಲಿ ಕಂಗೊಳಿಸುತ್ತವೆ. ಹೀಗೆ ಅಪ್ರತಿಮ ಪ್ರಕೃತಿ ಸೌಂದರ್ಯದಿಂದ ಕೂಡಿದ, ಶುದ್ಧ ತಂಗಾಳಿ ನೀಡುವ ಮೋಹಕ ದೃಶ್ಯಗಳ ಮೂಲಕ ಕಣ್ಣಿಗೆ ಹಬ್ಬವುಂಟುಮಾಡುವ ಕಾಶ್ಮೀರವು ಭೂಲೋಕದ ಸ್ವರ್ಗವೆನ್ನುವುದರಲ್ಲಿ ಎರಡು ಮಾತಿಲ್ಲ.

## ಉತ್ತರಿಸಿರಿ

ಪ್ರಶ್ನೆಗಳಿಗೆ ಉತ್ತರ ಬರೆಯಲು ಸೂಚಿಸುವುದು. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ಮಾಡಬೇಕು. ಮಕ್ಕಳು ಬರೆದುದನ್ನು ಪರಸ್ಪರ ಬದಲಾಯಿಸಿ ಉತ್ತರ ಸರಿಯಾಗಿದೆಯೇ ಎಂದೂ ಪರೀಕ್ಷಿಸಲಿ.

## ಕ್ರಮೀಕರಿಸಿ ಬರೆಯಿರಿ

ಓದಿದ ಕತೆಯ ಆಶಯವನ್ನು ಮಕ್ಕಳು ಪೂರ್ಣವಾಗಿ ಮನನ ಮಾಡಕೊಂಡಿರುವರೇ, ಕಥೆ ನೆನಪಿಗೆ ತರಲು ಸಾಧ್ಯವಾಗುವುದೇ ಎಂಬುದನ್ನು ಪರೀಕ್ಷಿಸಲು ಈ ಚಟುವಟಿಕೆಯನ್ನು ಅಳವಡಿಸಲಾಗಿದೆ. ಮಕ್ಕಳು ವಾಕ್ಯಗಳನ್ನು ಅನುಕ್ರಮವಾಗಿ ಆಶಯ ಪೂರ್ಣವಾಗಿ ಜೋಡಿಸಿ ತರಗತಿಯಲ್ಲಿ ಮಂಡಿಸಲಿ. ಮನೆಗೆಲಸವಾಗಿಯೂ ಈ ಚಟುವಟಿಕೆಯನ್ನು ನೀಡಬಹುದು.

## ಪತ್ರ ಬರೆಯಿರಿ

ಪತ್ರ ಬರವಣಿಗೆ ಒಂದು ಭಾಷಾ ವ್ಯವಹಾರ ರೂಪವಾಗಿದೆ. ವೈಯಕ್ತಿಕ ಪತ್ರ ಬರೆಯುವ ರೀತಿ ಇಂದು ಕಡಿಮೆಯಾಗಿದ್ದರೂ, ಪತ್ರ ಬರೆಯುವ ಕ್ರಮವನ್ನು ಮಕ್ಕಳು ತಿಳಿದುಕೊಳ್ಳಬೇಕಾದುದು ಅಗತ್ಯ. ಈ ಉದ್ದೇಶವನ್ನು ಮುಂದಿಟ್ಟುಕೊಂಡು ಈ ಚಟುವಟಿಕೆಯನ್ನು ಕೊಡಲಾಗಿದೆ.

- ಪತ್ರ ಬರೆಯುವಾಗ ನಾವು ಗಮನಿಸಬೇಕಾದ ವಿಚಾರಗಳು ಯಾವುವು? ಎಂಬುದಾಗಿ ಚರ್ಚಿಸುವುದು.
- ಪತ್ರ ಹೇಗಿರಬೇಕು? ಪತ್ರದಲ್ಲಿ ಇರಲೇ ಬೇಕಾದ ವಿಚಾರಗಳು ಯಾವುವು? ಚರ್ಚೆಯ ಮೂಲಕ ತೀರ್ಮಾನಿಸುವುದು.

## ವೈಯಕ್ತಿಕ ಪತ್ರದಲ್ಲಿ ಇರಲೇ ಬೇಕಾದ ವಿಚಾರಗಳು

- ಸ್ಥಳ
- ದಿನಾಂಕ

- ಸಂಬೋಧನೆ
  - ಕ್ಷೇಮ ಸಮಚಾರ (ಸಂಕ್ಷಿಪ್ತವಾಗಿ)
  - ಪತ್ರದಲ್ಲಿ ತಿಳಿಸಬೇಕಾದ ಪ್ರಧಾನ ವಿಚಾರಗಳು
  - ಮುಕ್ತಾಯ

ಸಹಿ

- ತಲುಪಬೇಕಾದ ವಿಳಾಸ

ವಿಳಾಸ

ಮಕ್ಕಳು ತಾವು ಕೈಗೊಂಡ ಪ್ರವಾಸದ ಅನುಭವಗಳನ್ನು ಗೆಳೆಯರಿಗೆ ತಿಳಿಸುವುದಕ್ಕಾಗಿ ಪತ್ರ ಬರೆಯಲು ಹೇಳುವುದು.

### ಪತ್ರ ಹೀಗಿದ್ದರೆ.....

ಬಂದಡ್ಕ

25.03.2015

ಪ್ರೀತಿಯ ರಸಿಯಾಳಿಗೆ

ನಿನ್ನ ಗೆಳತಿ ರೇಶ್ಮಳ ನಮಸ್ಕಾರಗಳು.

ನಾವೆಲ್ಲರೂ ಇಲ್ಲಿ ಸುಖವಾಗಿದ್ದೇವೆ. ನೀನು ಕ್ಷೇಮ ತಾನೇ? ನಿನ್ನ ಮನೆಯವರೆಲ್ಲರೂ ಕ್ಷೇಮವಲ್ಲವೇ?

ಕಳೆದ ತಿಂಗಳು ನಮ್ಮ ಶಾಲೆಯಿಂದ ನಾವು ಪ್ರವಾಸ ಕೈಗೊಂಡೆವು. 40 ಮಂದಿಯಿದ್ದ ನಮ್ಮ ತಂಡ ಜನವರಿ 23ನೇ ತಾರೀಕಿನಂದು ಬೆಳಗ್ಗೆ 6 ಗಂಟೆಗೆ ಬಸ್ಸಿನಲ್ಲಿ ಹೊರಟಿತು. ಮಡಿಕೇರಿಯ ದಾರಿಯಲ್ಲಿದ್ದ ಜಲಪಾತವೊಂದರ ಬಳಿ ನಾವು ಕೊಂಡು ಹೋದ ಇಡ್ಲಿ, ಚಟ್ನಿ ತಿಂದು, ನೀರಿನಲ್ಲಿ ಆಡಿ ಪ್ರಯಾಣ ಮುಂದುವರಿಸಿದೆವು.

ಮೈಸೂರಿಗೆ ತಲುಪಿದಾಗ ಮಧ್ಯಾಹ್ನವಾಗಿತ್ತು. ಊಟ ಮುಗಿದ ಕೂಡಲೇ ನಾವು ಟಿಪ್ಪು ಸುಲ್ತಾನನ ಸಮಾಧಿ ನೋಡಲು ಹೋದೆವು. ಭವ್ಯವಾದ ಆ ಸಮಾಧಿಯನ್ನು ಕಂಡಾಗ ಆ ಪರಾಕ್ರಮಿಯಾದ ರಾಜನ ನೆನಪಾಯಿತು. ಹತ್ತಿರವೇ ಟಿಪ್ಪುವಿನ ತಂದೆ ಹೈದರಾಲಿಯ ಸಮಾಧಿಯನ್ನು ಕಂಡು, ಬಳಿಕ ರಂಗನತಿಟ್ಟು ಪಕ್ಷಿಧಾಮಕ್ಕೆ ಹೋದೆವು. ಅಲ್ಲಿ ಈ ತನಕ ಕಂಡು ಕೇಳರಿಯದ ಹಲವು ವಿಧದ ಬಣ್ಣ ಬಣ್ಣದ ಪಕ್ಷಿಗಳನ್ನು ಕಂಡೆವು.

ಅಲ್ಲಿಂದ ನೇರವಾಗಿ ಮೈಸೂರು ವೃಂದಾವನಕ್ಕೆ ಹೋಗಿ, ಕೃಷ್ಣರಾಜ ಸಾಗರ ಅಣೆಕಟ್ಟನ್ನು ಕಂಡು ಸಂಗೀತ ಕಾರಂಜಿಯ ನೃತ್ಯ ನಡೆಯುವ ಜಾಗದ ಸಮೀಪ ಬಂದು ಕುಳಿತೆವು. ಸ್ವಲ್ಪ ಹೊತ್ತಿನಲ್ಲೇ ಸಂಗೀತದ ತಾಳಕ್ಕನುಗುಣವಾಗಿ ಬಣ್ಣಬಣ್ಣದ

ಕಾರಂಜಿ ಚಿಮ್ಮ ತೊಡಗಿತು. ಅದೆಷ್ಟು ಸುಂದರ! ಮನಸೂರೆಗೊಳ್ಳುವ ಆ ದೃಶ್ಯ ಕಂಡೇ ಅನುಭವಿಸಬೇಕು.

ಅಲ್ಲಿಂದ ಹಿಂತಿರುಗಿ ನಾವು ಹೋಟೆಲೊಂದರಲ್ಲಿ ತಂಗಿದೆವು. ಮರುದಿನ ಬೆಳಗ್ಗೆ 8 ಗಂಟೆಗೆ ಸರಿಯಾಗಿ ಮೃಗಾಲಯಕ್ಕೆ ತಲುಪಿದೆವು. ಮೃಗಾಲಯದಲ್ಲಿ ಹುಲಿ, ಸಿಂಹ, ಕರಡಿ, ಜಿಂಕೆ, ಕಾಡುಕೋಣಗಳು, ಆನೆ ಎಲ್ಲವನ್ನೂ ಕಂಡೆವು. ಜೀಬ್ರಾ, ಜಿರಾಫೆಗಳನ್ನು ಬಹಳ ಸಮೀಪದಿಂದ ಕಂಡೆವು. ಹಲವು ತರದ ಮಂಗಗಳು, ಉಷ್ಟ್ರಪಕ್ಷಿ, ಪೆಂಗ್ವಿನ್, ಬಿಳಿ ನವಿಲು ಮುಂತಾದ ಪಕ್ಷಿಗಳು, ಕಾಳಿಂಗ ಸರ್ಪವನ್ನು ಒಳಗೊಂಡು ಹಲವು ತರದ ಹಾವುಗಳು, ಒಂದೆ ಎರಡೇ! ದೂರದರ್ಶನದಲ್ಲಿ ಮಾತ್ರ ಇವುಗಳನ್ನೆಲ್ಲ ಕಂಡಿದ್ದ ನಮಗೆ, ಕಣ್ಣ ಮುಂದೆಯೇ ಇವುಗಳನ್ನು ಕಂಡಾಗ ಆದ ಅನಂದ ಅಷ್ಟಿಷ್ಟಲ್ಲ. ಅಲ್ಲಿಂದ ಹಿಂತಿರುಗುವಾಗ 12 ಗಂಟೆಯಾಗಿತ್ತು.

ಅನಂತರ ಊಟ ಮುಗಿಸಿ ನೇರವಾಗಿ ಮೈಸೂರು ಅರಮನೆಗೆ ಹೋದೆವು. ಅಲ್ಲಿ ರಾಜರುಗಳ ಚಿತ್ರಪಟಗಳು, ಅವರು ಬಳಸಿದ್ದಂತಹ ಆಯುಧಗಳು, ಆಭರಣಗಳು, ಕಿರೀಟಗಳು ಅಲ್ಲದೆ ಹಳೆಯ ಮನೆ ಬಳಕೆ ಸಾಮಗ್ರಿಗಳು, ಅತಿ ಚಿಕ್ಕ ರಾಮಾಯಣ, ಮಹಾಭಾರತ ಗ್ರಂಥ. ಹೀಗೆ ಎಷ್ಟೆಷ್ಟು ವಸ್ತುಗಳು! ಅದು ಕಂಡಷ್ಟೂ ಮುಗಿಯಲಾರದಂತಹ ಅಪೂರ್ವ ವಸ್ತು ಸಂಗ್ರಹಾಲಯವೇ ಸರಿ.

ಸಂಜೆ 4 ಗಂಟೆಗೆ ಮೈಸೂರಿನಿಂದ ಹೊರಟು ರಾತ್ರಿ 8 ಗಂಟೆಗೆ ನಮ್ಮ ಊರಿಗೆ ತಲುಪಿದೆವು.

ನಿಮ್ಮ ಶಾಲೆಯಿಂದ ಪ್ರವಾಸ ಹೋಗುತ್ತಾರೆಯೇ? ಎಲ್ಲಿಗೆ ಪ್ರವಾಸ? ನೀನೂ ಹೋಗುತ್ತೀಯಲ್ಲವೇ? ಹೋಗಿ ಬಂದ ಬಳಿಕ ನನಗೆ ಪತ್ರ ಬರೆಯುವಿಯಲ್ಲವೇ?

ನಿನ್ನ ಅಪ್ಪ, ಅಮ್ಮ ತಂಗಿಗೆ ನನ್ನ ನಮಸ್ಕಾರಗಳನ್ನು ತಿಳಿಸು. ಬೇರೇನೂ ವಿಶೇಷವಿಲ್ಲ.

ಇತೀ
ನಿನ್ನ ಗೆಳತಿ
ಸಹಿ/

ಇವರಿಗೆ
ರಸಿಯಾಬಾನು
6 ಬಿ ತರಗತಿ
ಜಿ.ಯಚ್.ಎಸ್.ಎಸ್. ಮಂಗಲ್ಪಾಡಿ
ಅಂಚೆ: ಉಪ್ಪಳ – 671322

ಇವರಿಂದ
ರೇಶ್ಮ ಎಂ.
ಮಾಡಕಲ್ಲು ಮನೆ
ಅಂಚೆ: ಬಂದಡ್ಕ
ವಯಾ: ಚೆಂಗಳ – 671541

## ವರ್ಣನೆ ಬರೆಯಿರಿ

ಒಂದು ವಿಚಾರವನ್ನು ಕಣ್ಣಿಗೆ ಕಟ್ಟುವಂತೆ ಆಕರ್ಷಣೀಯವಾಗಿ ಬರೆಯವುದನ್ನು ವರ್ಣನೆ ಎನ್ನುತ್ತೇವೆ. ವಿಚಾರವನ್ನು ಸಮರ್ಥಿಸಲು ಇತರ ಹೋಲಿಕೆಗಳನ್ನು ನೀಡುವ ಕ್ರಮವಿದೆ. ಭಾಷೆ, ಶೈಲಿ, ಭಾಷಾ ಪ್ರಯೋಗಕ್ಕೆ ಇಲ್ಲಿ ಹೆಚ್ಚಿನ ಗಮನ ಕೊಡಬೇಕು.

- ನಿಮ್ಮ ಮನೆ ಸಮೀಪದಲ್ಲಿ ತೋಡು, ಹೊಳೆ, ನದಿಗಳಿವೆಯೇ?
- ನದಿ/ಹೊಳೆ ಮಳೆಗಾಲದಲ್ಲಿ ಹೇಗಿರುತ್ತದೆ?
- ಬೇಸಗೆಯಲ್ಲಿ ಹೇಗಿರುತ್ತದೆ?
- ನಿಮಗೆ ಅಲ್ಲಿ ಆಡುವುದು ಈಜುವುದು ಇಷ್ಟವೇ?

ಈ ವಿಚಾರವನ್ನು ನಮಗೆ ನೇರವಾಗಿ ಎರಡು ಮೂರು ವಾಕ್ಯಗಳಲ್ಲಿ ಹೇಳಬಹುದು. ತೋಡು/ಹೊಳೆ ಎಲ್ಲರೂ ನೋಡಿರಬಹುದಲ್ಲವೇ?

ನಮ್ಮ ಸಮೀಪದ ತೋಡು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ.

ಬೇಸಿಗೆಯಲ್ಲಿ ನೀರು ತುಂಬಾ ಕಡಿಮೆ ಇರುತ್ತದೆ. (ಇದು ಎಲ್ಲರಿಗೂ ತಿಳಿದಿರುವ ವಿಚಾರ)

ನಿಮ್ಮ ತೋಡು ಅಥವಾ ಹೊಳೆಯ ವಿಚಾರಗಳನ್ನು ಇತರರಿಗೂ ನೋಡಬೇಕೆಂಬ ಆಸಕ್ತಿ ಮೂಡಬೇಕಿದ್ದರೆ, ಅದನ್ನು ಹೇಗೆ ಹೇಳಬೇಕು? ಹೋಲಿಕೆಗಳನ್ನು ಕೊಟ್ಟು, ಸುಂದರವಾದ ಪದ ಸಮೂಹಗಳಿಂದ ಇತರರಿಗೆ ಕಣ್ಣಿಗೆ ಕಟ್ಟುವಂತೆ ಹೇಳಬೇಕು. ಆಗ ಅದು ಓದುವವರಿಗೆ ಹೆಚ್ಚು ಆಸ್ವಾದನೆಯನ್ನು ನೀಡುತ್ತದೆ.

## ಸೂಚಕಗಳು

- ಆಶಯ ಪೂರ್ಣವಾಗಿರಬೇಕು.
- ಹೋಲಿಕೆಗಳು ಆಲಂಕಾರಿಕ ಪದಗಳು ನುಡಿಗಟ್ಟು, ಗಾದೆಮಾತುಗಳ ಮೂಲಕ ಓದುಗರನ್ನು ಸೆಳೆಯುವಂತಿರಬೇಕು.
- ಭಾಷಾ ಪ್ರಯೋಗಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡಬೇಕು.

## ವರ್ಣನೆ ಹೀಗೂ ಇರಬಹುದೇ?

ನಮ್ಮ ಮನೆಯ ಅಂಗಳದ ಎಡತುದಿಯಿಂದ 10–12 ಮೆಟ್ಟಲುಗಳನ್ನಿಳಿದರೆ ತೋಟದ ಬದಿಯಲ್ಲಿ ಒಂದು ತೋಡು ಇದೆ. ವರ್ಷದ ಎಲ್ಲಾ ಸಮಯದಲ್ಲೂ ಈ ತೋಡಿನಲ್ಲಿ ನೀರಿರುತ್ತದೆ. ಬೇಸಗೆಯಲ್ಲಿ ಕಟ್ಟ ಕಟ್ಟಿ ನೀರು ನಿಲ್ಲಿಸಿ ತೋಟಕ್ಕೆ ನೀರು ಸರಬರಾಜು ಮಾಡುತ್ತೇವೆ. ಮಳೆಗಾಲದಲ್ಲಿ ತುಂಬಿ ಹರಿಯುವ ಕೆನ್ನೀರು ಭಯವನ್ನು ಹುಟ್ಟಿಸಿದರೂ, ತೇಲಿ ಹೋಗುತ್ತಿರುವ ಕಸಕಡ್ಡಿಗಳು, ರೂಪುಗೊಳ್ಳುವ ಸುಳಿಗಳು, ಭೋರ್ಗರೆಯುವ ಶಬ್ದ ನೋಡುತ್ತಾ ನಿಂತರೆ ಸಮಯ ಹೋಗುವುದೇ ತಿಳಿಯುವುದಿಲ್ಲ. ಕೆಲವೊಮ್ಮೆ ನಾವು ಗೆಳೆಯರು ಸೇರಿ, ಕಾಗದದ ದೋಣಿ ಮಾಡಿ ತೇಲಿಸಿ, ಯಾರ ದೋಣಿ ಮುಂದೆ ಇದೆ ಎಂದು ನೋಡಲು ತೋಡಿನ ಉದ್ದಕ್ಕೂ ಓಡುತ್ತಿದ್ದೆವು. ಆದರೆ ಬೇಸಗೆ ಬಂತೆಂದರೆ ಇದರ ಚೆಲುವೇ ಬೇರೆ. ಗಾಜಿನಂತೆ ಪಾರದರ್ಶಕವಾಗಿ ಹರಿಯುವ ನೀರು ಮೊಣಕಾಲು ಮುಳುಗುವಷ್ಟೇ ಇರುತ್ತದೆ. ನೀರಿನಡಿಯಲ್ಲಿರುವ ಬಿಳಿ, ಕಪ್ಪು, ಕಂದುಬಣ್ಣದ ಕಲ್ಲುಗಳು ಅಕ್ವೇರಿಯಂನಲ್ಲಿರುವಂತೆ ಸುಂದರವಾಗಿ ಕಾಣುತ್ತವೆ. ಕಟ್ಟ ಕಟ್ಟಿದ ಬಳಿಕ ನಮ್ಮ ತೋಡಿಗೆ ಎಂತಹ ಗಾಂಭೀರ್ಯ! ಹಸಿರು ನೀರು ತುಂಬಿದ ತೋಡು, ಊರಿನ ಎಲ್ಲರ ಈಜುಕೊಳ. ಕಡು ಬೇಸಗೆಯಲ್ಲೂ ಈ ತೋಡಿನ ಸಮೀಪದ ಮರದಡಿಯಲ್ಲಿ ಕುಳಿತಾಗ ಏನು ತಂಪು!

## ಆಲ್ಬಂ ತಯಾರಿಸಿರಿ

- ವೃತ್ತ ಪತ್ರಿಕೆ, ಕ್ಯಾಲೆಂಡರ್‌ಗಳಲ್ಲಿ ಪ್ರಕೃತಿ ರಮಣೀಯವಾದ ಸ್ಥಳಗಳ ಚಿತ್ರಗಳು ಇರುತ್ತವೆ. ಅವುಗಳನ್ನು ಸಂಗ್ರಹಿಸಿ, ಸುಂದರವಾಗಿ ಅಂಟಿಸಿ, ಅಡಿ ಟಿಪ್ಪಣಿಯನ್ನು ಬರೆಸಿದರೆ ಉತ್ತಮ.

**ಪೂರಕ ಓದಿಗೆ**

## ಕನ್ಯಾಕುಮಾರಿಯೆಡೆಗೆ....

ಕನ್ಯಾಕುಮಾರಿಯಿಂದ ಹಿಮಾಚಲದೆಡೆಗೆ..... ಎಂಬ ನನ್ನ ಈ ಪ್ರವಾಸ ಕಥನದ ಮೂಲ ಕೇಂದ್ರ ಸ್ಥಳವೇ ಕನ್ಯಾಕುಮಾರಿ. ಅಲ್ಲದೆ ಇದು ಅರಬ್ಬಿ ಸಮುದ್ರ, ಹಿಂದು ಮಹಾಸಾಗರ, ಬಂಗಾಲ ಉಪಸಾಗರ ಈ ಮೂರು ಸಮುದ್ರಗಳು ಒಟ್ಟು ಸೇರಿದ ಮಹಾಸಂಗಮ ಸ್ಥಳವಾಗಿದೆ. ಇಲ್ಲಿಂದಲೇ ಹಡಗು ಹತ್ತಿ ನಮ್ಮ ವಿವೇಕಾನಂದರು ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಚಿಕಾಗೋ ನಗರಕ್ಕೆ ಪ್ರಯಾಣಿಸಿದ್ದು. ಅಲ್ಲಿ ಭಾರತದ ಹಿರಿಮೆಯನ್ನು ಎತ್ತಿಹಿಡಿದ ನೆನಪಿಗಾಗಿ ಅವರು ಯೋಗ ಮಾಡಿ ಜ್ಞಾನಯೋಗಿಯಾದ ಈ ದಿವ್ಯ ಸ್ಥಳದಲ್ಲಿ 'ವಿವೇಕಾನಂದ ರಾಕ್' ಅನ್ನು ಇಡೀ ಜಗತ್ತೇ ನಿಂತು ನಿಬ್ಬೆರಗಾಗಿ ನೋಡುವಂತೆ ನಿರ್ಮಿಸಲಾಗಿದೆ.

ಯಾರೀತ... ಯಾರೀತ... ಆ ಯೋಗಿಪುರುಷ ಅನ್ನುವಂತಹ ದಿವ್ಯ ತೇಜಸ್ಸುಳ್ಳ ವಿವೇಕಾನಂದರ ಬೃಹತ್ತಾದ ದಿವ್ಯಮೂರ್ತಿ ಅದರ ಹಿನ್ನೆಲೆಯಲ್ಲಿ ಮೂರು ಸಮುದ್ರಗಳು ಉಕ್ಕೇರಿ ತೂರಿ ಬರುವ ಅಲೆಗಳು ದಡಕ್ಕೆ ಅಪ್ಪಳಿಸಿ ಉಂಟು ಮಾಡುವ ಸುಂದರ ನೋಟ, ಗಂಭೀರ ರುದ್ರ ಭೋರ್ಗರೆವ ನಿನಾದ, ಕಣ್ಣು ಸಾಗಿದಷ್ಟು ದೂರಕ್ಕೆ ಹಬ್ಬಿರುವ ಸಮುದ್ರ, ಸೂರ್ಯೋದಯ, ಸೂರ್ಯಾಸ್ತಗಳನ್ನು ಈ ಕನ್ಯಾಕುಮಾರಿಯಲ್ಲಿಯೇ ಕಾಣಬೇಕು. ಸೂರ್ಯಾಸ್ತಕ್ಕಿಂತ ಸೂರ್ಯೋದಯವೇ ಇಲ್ಲಿಯ ಪ್ರಮುಖ ಪ್ರವಾಸೀ ಆಕರ್ಷಣೆ.

ಇಂತಹ ಕನ್ಯಾಕುಮಾರಿಯನ್ನು ಹದಿನೈದು ವರ್ಷದ ಹಿಂದೆ ಬರಿಗಣ್ಣಿಂದ ಕಾಣುವುದಕ್ಕೂ; ಈಗ ಲೇಖಕನ ಕಣ್ಣಿನಿಂದ ಕಂಡು ಹಿಡಿದಿಡುವುದಕ್ಕೂ ಸಾಕಷ್ಟು ಅಂತರವಿದೆ. ಆಗ ಬಂದಾಗ ಜೊತೆಯಲ್ಲಿ ಪತ್ನಿ ಇದ್ದಳು. ಈಗ ಏಕಾಂಗಿಯಾಗಿಯೇ ಬಂದಿರುವೆ. ಯಾವ ಸ್ನೇಹಿತರನ್ನು ಈ ಸಲ ಉದ್ದೇಶಪೂರ್ವಕವಾಗಿ ಕರೆತರಲಿಲ್ಲ. ಈ ತಟದಲ್ಲಿ ಏಕಾಂಗಿಯಾಗಿ ಓಡಾಡಬೇಕು. ಗಂಭೀರತೆಯನ್ನು ಆಸ್ವಾದಿಸಬೇಕು, ಅನುಭವಿಸಬೇಕು ಎಂಬುದೇ ಉದ್ದೇಶ.

ಆಗಸ್ಟ್ ಹದಿನೈದು ಸ್ವಾತಂತ್ರ್ಯದ ದಿನ ಈ ಕನ್ಯಾಕುಮಾರಿಯಲ್ಲಿದ್ದೆ. ಹಿಂದಿನ ಸಲ ಬಂದಾಗ ಇಲ್ಲಿ ತಿರುವಳ್ಳುವರ ಕವಿಯ ಪ್ರತಿಮೆ ಇರಲಿಲ್ಲವೆಂಬ ನೆನಪು. ವಿವೇಕಾನಂದ ರಾಕ್ ಪಕ್ಕದಲ್ಲಿಯೇ ಸ್ವಲ್ಪ ಅಂತರದಲ್ಲಿ ತಮಿಳರ ಪ್ರಖ್ಯಾತ ಕವಿ ತಿರುವಳ್ಳುವರ್ ಪ್ರತಿಮೆ ಸ್ಥಾಪಿಸಲಾಗಿದೆ.

ಕನ್ಯಾಕುಮಾರಿಯ ಮಂದಿರವು ಸಮುದ್ರ ದಡದಲ್ಲಿದ್ದು ಇದು ಕೂಡಾ ಯಥಾಪ್ರಕಾರ ಬೃಹತ್ತಾದ ಕಟ್ಟಡವೇ ಆಗಿದೆ. ಇಲ್ಲಿ ಕನ್ಯಾಕುಮಾರಿ ದೇವತೆಗೆ ಪೂಜೆ ನಡೆಯುತ್ತದೆ. ಅಲ್ಲಿಂದ ಮುಂದೆ ಪುಟ್ಟ ಪುಟ್ಟ ಹಡಗು, ದೋಣಿಗಳಲ್ಲಿ ವಿವೇಕಾನಂದ ರಾಕ್ ಕಡೆಗೆ ಸಮುದ್ರಯಾನ ಮಾಡಿ ತಲುಪಬೇಕು. ಹಾಗಾಗಿ ಸಮುದ್ರಯಾನ ಮಾಡಲು ಎಲ್ಲರಿಗೂ ಥ್ರಿಲ್ ಹಾಗೂ ಅಲ್ಪಸ್ವಲ್ಪ ಭಯ. ಆದಾಗ್ಯೂ ಮುಂಜಾನೆ 9ರಿಂದ ಸಾಯಂಕಾಲ 5 ಗಂಟೆಯ ವರೆಗೆ ವಿವೇಕಾನಂದ ರಾಕ್ ಗೆ ಪ್ರವಾಸಿಗರ ನೂಕುನುಗ್ಗಲು ಇರುತ್ತದೆ.

ಆ ಯೋಗಮಂದಿರ (ವಿವೇಕಾನಂದ ರಾಕ್) ದಲ್ಲಿ ಕುಳಿತು ಯೋಗ ಅಭ್ಯಾಸಕ್ಕೆ ತೊಡಗಿದರೆ ಅಪೂರ್ವವಾದ ಆನಂದ ದೊರಕುವುದರಲ್ಲಿ ಸಂದೇಹವಿಲ್ಲ. ವಿವೇಕಾನಂದರಂತಹ ಅಪೂರ್ವ ಯೋಗಿಯ ನೆಲವದು. ನೆಲದ ಮಹಿಮೆ, ಸುತ್ತಲಿನ ಮೂರು ಸಮುದ್ರಗಳ ಗಂಭೀರ ನಿನಾದ, ಯೋಗಕ್ಕೆ ಕುಳಿತೇ ಆ ಆನಂದ ಸಾಗರವನ್ನು ಆಸ್ವಾದಿಸಿಕೊಳ್ಳಬೇಕು. ಕಣ್ಣುಮುಚ್ಚಿ ಯೋಗಕ್ಕೆ ತೊಡಗಿಕೊಂಡಿದ್ದೆ.

* * *

ನಾಳೆ ಕನ್ಯಾಕುಮಾರಿಗೆ ಹೋಗ್ತಿಯಂತಲ್ಲೋ ಮಿತ್ರಾ. ನಾನು ಬರ್ಲಾ ಎಂಬ ಸ್ನೇಹಿತನ ಮಾತಿಗುತ್ತರವಾಗಿ, ನಾನು 'ಇಲ್ಲ ಮಾರಾಯ, ನಾನೆಲ್ಲಿ ಹೋಗ್ಲಿ. ನಾಳೆ ಶಿವಕಾಶಿಗೆ ಹೋಗಿಬರ್ತೀನಿ. ತರಬೇತಿ ಮುಗಿದ ಮೇಲೆ ಕನ್ಯಾಕುಮಾರಿಗೆ

ಹೋಗಿ 4–6 ದಿನ ರಜೆ ಹಾಕಿ ಅಲ್ಲೇ ಇದ್ದು ಬರಬೇಕೆಂದು ಮಾಡಿದ್ದೇನೆ' ಎಂದು ಹೇಳಿ 'ಶಿವಕಾಶಿ'ಗೆ ಹೊರಟವನು. ಅಲ್ಲಿಂದ ಕನ್ಯಾಕುಮಾರಿ ಹತ್ತಿರವಾಗುವುದನ್ನು ಕಂಡುಕೊಂಡು ಅದೇ ದಿನ ಜರ್ನಿ ಮುಂದುವರಿಸಲು ನಿರ್ಧರಿಸಿದೆ.

'ಶಿವಕಾಶಿ' ಮಧುರೈಯಿಂದ ಹೊರಟರೆ 3–4 ಗಂಟೆಯ ಹಾದಿ. ಅಲ್ಲಿ ತಲುಪಿದಾಗ ಬೃಹತ್ತಾದ ಫ್ಯಾಕ್ಟರಿಗಳು, ಎಲ್ಲವೂ ಕ್ರ್ಯಾಕರ್ಸ್ (ಪಟಾಕಿ) ಫ್ಯಾಕ್ಟರಿಗಳೇ. ಊರಿನ ಬೀದಿ ಬೀದಿಯಲ್ಲಿ ತಿರುಗಾಡುತ್ತಿದ್ದಾಗ ನಮ್ಮ ಕಡೆ ರೈತರು ಮನೆಯ ಮುಂದೆ ಸೇಂಗಾ, ಸಜ್ಜಿ ಒಣಹಾಕಿದಂತೆ ಜನರು ತಮ್ಮ ಮನೆಮನೆಗಳಲ್ಲಿ ತಾವು ತಯಾರಿಸಿದ ಮದ್ದಿನ ಡಬ್ಬಿ, ಪಟಾಕಿಗಳನ್ನು ಮನೆಯ ಮುಂದೆ ಅಲ್ಲಲ್ಲಿ ಹಾಕಿದ್ದರು. ಅವು ಇನ್ನೂ ಪೂರ್ಣ ತಯಾರಿಸಲ್ಪಟ್ಟ ರೂಪು ಪಡೆದಿರಲಿಲ್ಲ. ಒಂದು ಐಟಂ ತಯಾರಿಸುವಾಗಿನ ಪೂರ್ವ ತಯಾರಿಯ ಹಾಗಿದ್ದವು.

ಪಟಾಕಿ ಹಾಗೂ ಪ್ರಿಂಟಿಂಗ್ ವಸ್ತುಗಳಿಗಾಗಿ ಶಿವಕಾಶಿ ತುಂಬಾ ಫೇಮಸ್. ಇಲ್ಲಿಯ ಕ್ಯಾಲೆಂಡರುಗಳು, ಫೋಟೋಗಳು ದೇಶದ ನಾನಾ ಮೂಲೆಗಳಿಗೆ ಹೋಗುತ್ತವೆ. ಶಿವಕಾಶಿಯಲ್ಲಿ ನಾನು ಕಾಣಬೇಕಾದವರನ್ನು ಕಂಡು ಮಾತಾಡಿ ಅಲ್ಲಿಂದ ಸ್ವಲ್ಪ ಹಿಂದಕ್ಕೆ ಮಧುರೈ ಮಾರ್ಗದ ಕಡೆಗೆ ಬಂದರೆ ಸೂರ್ಯೋದಯವಂತು ಕಳೆದ ಸಲ ಮನಪೂರ್ವಕ ನೋಡಿರುವೆ. ಈಗ ಹೋದರೆ ಖಂಡಿತ ಸೂರ್ಯಾಸ್ತ ಸಿಗುತ್ತದೆ. ಅಂತ ಸಿಕ್ಕ ಬಸ್ ಹತ್ತಿ ಕನ್ಯಾಕುಮಾರಿಯೆಡೆಗೆ ಪ್ರಯಾಣಿಸಿದ್ದೆ.

ಮಧುರೈಯಿಂದ ಹೊರಟರೆ ಐದು ಗಂಟೆಯ ಹಾದಿ – ಕನ್ಯಾಕುಮಾರಿಗೆ, ಈ ಕಡೆಯು ವಿಡಿಯೋ ಕೋಚ್ ಬಸ್ ಇರಲಿಲ್ಲ. ಬೆಳಗ್ಗೆ 4 ಗಂಟೆಗೆ ಗಾಂಧಿ ಗ್ರಾಮ ಬಿಟ್ಟವನು 10 ಗಂಟೆಗೆ ಶಿವಕಾಶಿಯಲ್ಲಿದ್ದೆ. 12 ಗಂಟೆಗೆ ಶಿವಕಾಶಿ ಬಿಟ್ಟವನು 4 ಗಂಟೆಯಷ್ಟೊತ್ತಿಗೆ ಕನ್ಯಾಕುಮಾರಿಯಲ್ಲಿದ್ದೆ.

'ವಿವೇಕಾನಂದ ರಾಕ್' ತಲುಪಲು ದೋಣಿ ಹತ್ತಿ ಕುಳಿತು ರಾಕ್ ತಲುಪಿದ್ದೆ. ಸುತ್ತಲಿನ ಸಮುದ್ರ, ಗಂಭೀರ ನಿನಾದ, ಭೋರ್ಗರೆತದ ಹಿಮ್ಮೇಳನದ ಜೊತೆ ಧ್ಯಾನಸ್ಥನಾಗಿದ್ದ ನನಗೆ ಅಪೂರ್ವ ಆನಂದವಾಗಿತ್ತು. ಹಾಗೂ ಮುಂಜಾನೆಯಿಂದ ಇಲ್ಲಿಯವರೆಗೆ ನಡೆದ ಘಟನೆಗಳೆಲ್ಲ ಆ ಏಕಾಂತದಲ್ಲಿ ನೆನಪಾಗಿದ್ದವು. ಶಹಾಪುರ ಬಿಡುವಾಗಲೆ ನಮ್ಮ ತಂದೆ ಶರಣಪ್ಪ ಹೊನ್ಗಲ್ ಹಾಗೂ ನಮ್ಮ ಮಾವನವರಾದ ಕಾಮಾ ಶಿವಶರಣಪ್ಪರವರು ವಿವೇಕಾನಂದ ರಾಕ್‌ನಲ್ಲಿ ಧ್ಯಾನ ಮಾಡಿ ಬರಲು ತಿಳಿಸಿದ್ದರು. ಸಾಕಷ್ಟು ಕಡೆ ಧ್ಯಾನ ಮಾಡಿದ್ದರು ಸಹ ಇಲ್ಲಿಯ ಆನಂದ ವರ್ಣಿಸಲಾಗದು.

ವಿವೇಕಾನಂದ ರಾಕ್‌ನಿಂದ ಹಿಂದಿರುಗಿ ಬಂದಾಗ ಬೆಳಗಿನಿಂದ ಸರಿಯಾಗಿ ಏನನ್ನು ತಿಂದಿಲ್ಲವೆಂದು ನೆನಪಾಯಿತು. ಒಂದು ಉತ್ತಮ ಹೋಟೆಲ್ ಹುಡುಕಿ ಸರಿಯಾಗಿ ಹೊಟ್ಟೆ ತುಂಬಿಸಿಕೊಂಡೆ. ಅನ್ನ ದೇವರ ಮುಂದೆ ಇನ್ನು ದೇವರು ಇಲ್ಲವಂತೆ ಅಲ್ಲವೇ? ಹತ್ತಾರು ಫೋಟೋ ತೆಗೆದುಕೊಂಡು ನಮ್ಮ ಬಸವಪ್ರಭು, ವಸಂತ, ಕಾವ್ಯಳಿಗಾಗಿ ಮತ್ತು ನನ್ನ ಸಹೋದರ ವಿಜಯಕುಮಾರನ ಮಕ್ಕಳಾದ ಪೂಜಾ, ಪ್ರೇಮ, ಪ್ರವೀಣರಿಗಾಗಿ ಬೈನಾಕುಲರ್ ಖರೀದಿಸಿದೆ. ಸುಮಾರು 15 ಕಿ.ಮೀ. ಅಂತರದಲ್ಲಿರುವ ಹಡಗು ಸಹ ಕಣ್ಣ ಮುಂದೆ ಕಾಣುವಂತಹ ಬೈನಾಕುಲರ್‌ಗಳು ಇಲ್ಲಿ ಸಿಕ್ಕವು.

ಇಲ್ಲಿ ಅನೇಕರು ಕೆಮರಾ, ರೇಬಾನ ಸ್ಪೆಕ್ಟಗಳು ಬೇಕೇ ಎಂದು ಗಂಟುಬಿದ್ದಿದ್ದರು. ನಮ್ಮ ಸಹೋದರ ಜಗ್ಗುಗಾಗಿ ಸ್ಪೆಕ್ಟ್ ತೆಗೆದುಕೊಳ್ಳಬೇಕೆನಿಸಿತು. ಅವನು ಉಪಯೋಗಿಸದಿದ್ದರೆ ವಿಜಯನಾದರು ಉಪಯೋಗಿಸುತ್ತಾನೆ ಎಂದು ಕೊಳ್ಳಬೇಕೆಂದಿರುವಾಗ ಇವು ಒರಿಜಿನಲ್ ಅಲ್ಲವಾಗಿದ್ದರೆ ಅವರ ಎದುರು ಹಗುರವಾಗುವುದು ಬೇಡವೆನಿಸಿ ಬಿಟ್ಟುಬಿಟ್ಟೆ.

ಇಲ್ಲಿ ಅನೇಕ ವಿದೇಶೀ ವಸ್ತುಗಳನ್ನು ಮಾರಾಟಕ್ಕೆ ತರುತ್ತಾರೆ. ಅವು ವಿದೇಶಿಯವೋ ಅಥವಾ ಸುಮ್ಮನೇ ಹಾಗೇ ಹೇಳುತ್ತಾರೋ ಗೊತ್ತಾಗುವುದಿಲ್ಲ. ನಮ್ಮ ಜನರಿಗೆ ವಿದೇಶೀ ವಸ್ತುಗಳು ಅಂದ್ರೆ ಸಾಕು ಮುಗಿಬೀಳುತ್ತಾರೆಂಬ ಕ್ರೇಜ್ ಮಾರುವವರಿಗೆ ಗೊತ್ತಿರುವುದರಿಂದ ಇಂತಹ ಸುಳ್ಳು ಹೇಳುತ್ತಾರೆನಿಸಿತು.

ಸಾಯಂಕಾಲ 5.30 ಆಗತೊಡಗಿದಂತೆಯೇ ಇಡೀ ಕನ್ಯಾಕುಮಾರಿಯ ಸಮುದ್ರ ತಟವು ನಿಧಾನವಾಗಿ ರಂಗಾಗ ತೊಡಗಿತು. ಸೂರ್ಯ ಪಶ್ಚಿಮ ಸಮುದ್ರ ಕಡೆಗೆ ಹೊರಟಿದ್ದ. ಸಮುದ್ರದ ತಟದಲ್ಲಿ ಸೂರ್ಯಾಸ್ತ ಹಾಗೂ ಸೂರ್ಯೋದಯ

ಗಮನಿಸಲು ಬೃಹತ್ತಾಗಿ ನಿರ್ಮಿಸಿದ ಕಟ್ಟಡಕ್ಕೆ ಹೋಗಲು ಜನರು ಮುಂದಾದರು. ನಾನು ಸಹ ಆ ಕಟ್ಟಡದಲ್ಲಿ ನಿಂತು ನೋಡಲು ಎಂದು ಟಿಕೇಟು ಖರೀದಿಸಿ ಹೋಗಿ ಮೇಲೇರಿದೆ. ಮೇಲೆ ನಿಂತಾಗ ಪಶ್ಚಿಮ ದಿಕ್ಕಿನಲ್ಲಿ ಸಮುದ್ರದ ಪಕ್ಕದಲ್ಲಿ ಸೂರ್ಯ ಕಾಣುತ್ತಿದ್ದ. ಆಗ ಜನ ಅಲ್ಲಿಂದ ಇಳಿದು ಇಲ್ಲಿ ಸರಿ ಕಾಣುವುದಿಲ್ಲ, ಮುಂದೆ ಈ ದಿಬ್ಬ ದಾಟಿಹೋದರೆ ಸರಿಯಾಗಿ ಕಾಣುತ್ತದೆ ಎಂದು ಇಳಿದು ಹೋಗತೊಡಗಿದರು. ನಾನು ಇಳಿದು ಬಂದು ಆ ಕಡೆ ಹೋಗುವ ಆಟೋ ಹತ್ತಿ ಕುಳಿತೆ.

ಸ್ಪೀಡಾಗಿ ಹೋದ ಆಟೋ ದಿಬ್ಬದ ಆಚೆಗೆ ಇಳಿಸಿಹೋಯಿತು. ಅಲ್ಲಿಯು ಸಹ ಸೂರ್ಯ ಸಮುದ್ರದ ಹೊರಗಡೆಯಲ್ಲಿ ಮುಳುಗುತ್ತಿದ್ದ. ಸಮುದ್ರದ ಮೇಲಿನಿಂದ ಮುಳುಗಿದ್ದರೆ ಸೂರ್ಯನ ಕಿರಣಗಳು ನೀರಿನಲ್ಲಿ ಪ್ರತಿಫಲಿಸಿ ಇಡೀ ಸಮುದ್ರವೇ ಕೆಂಪಾಗಿ ಆಕರ್ಷಕವಾಗಿ ಕಾಣುತ್ತಿತ್ತು.

ಸೂರ್ಯೋದಯದಲ್ಲಿ ಅದನ್ನು ಗಮನಿಸಿರುವ ಜನರು, ಸೂರ್ಯಾಸ್ತದಲ್ಲೂ ಅದನ್ನು ನಿರೀಕ್ಷಿಸಿ ಹತ್ತಾರು ಆಟೋ ಹತ್ತಿ ಇಲ್ಲಿ ಬಂದಿದ್ದರು. ನಾನು ಬಂದಿದ್ದೆ. ಎಲ್ಲರೂ ಬೇಸ್ತುಬಿದ್ದ ಹಾಗಾಯಿತು. ಸೂರ್ಯ ಸಮುದ್ರ ಪಕ್ಕದಲ್ಲಿ ನಮ್ಮ-ನಿಮ್ಮ ಊರುಗಳಲ್ಲಿ ಮುಳುಗುವಂತೆ ಮುಳುಗಿದ. ಆದರೆ ಪಕ್ಕದಲ್ಲಿ ಸಮುದ್ರ ನೋಡುತ್ತ ನಾವು ಸೂರ್ಯಸ್ತವನ್ನು ಕಲ್ಪಿಸಿಕೊಂಡು ಹರ್ಷಿಸಬೇಕಾಯಿತು.

ಸೂರ್ಯಾಸ್ತವಾದ ತಕ್ಷಣ ಇಡೀ ಸಮುದ್ರ ದಂಡೆ ನಿಯಾನ್ ದೀಪಗಳ ಬೆಳಕಿನಲ್ಲಿ ಗಂಭೀರವಾಗಿ ಕಾಣತೊಡಗಿತು. ದೂರದಲ್ಲಿ  ದೋಣಿಯಲ್ಲಿಯ ಬೆಳಕು ಕಾಣುತ್ತಿತ್ತು.

ಕನ್ಯಾಕುಮಾರಿಯ ಬಸ್ ಸ್ಟ್ಯಾಂಡಿಗೆ ಬಂದು ಗಾಂಧಿ ಗ್ರಾಮಕ್ಕೆ ಹಿಂದಿರುಗುವ ಬಸ್ ವಿಚಾರಿಸಿದೆ. ಮಧುರೈಗೆ ಹೋಗಿ, ಅಲ್ಲಿಂದ ಹೋಗಿ ಅಂದ್ರು. ರಾತ್ರಿಯ ಊಟ ಮುಗಿಸಿ ಬಸ್ ಹತ್ತಿ ಕುಳಿತೆ. ಬೆಳಗಿನ 4 ಗಂಟೆಯಿಂದ ಬಿಟ್ಟು ಬಿಡದೆ ಪ್ರಯಾಣಿಸಿ, ಓಡಾಡಿ ದಣಿದ ದೇಹ – ಮನಸ್ಸುಗಳು ವಿಶ್ರಾಂತಿಗಾಗಿ ಹಂಬಲಿಸುತ್ತಿದ್ದುವು. ಸೆಮಿಲಕ್ಸುರಿಯಂತಿದ್ದ ಆ ಬಸ್‌ನಲ್ಲಿ ಸೀಟ್ ಇಳಿಸಿ ಕಣ್ಣು ಮುಚ್ಚಿಕೊಂಡೆ. ಮಧುರೈ ಬಂದಾಗ ಬೆಳಗಿನ 5 ಗಂಟೆ. ಅಲ್ಲಿಂದ ಮತ್ತೊಂದು ಬಸ್ ಹತ್ತಿ ಗಾಂಧಿ ಗ್ರಾಮ ತಲುಪಿದಾಗ ಬೆಳಗಿನ 9 ಗಂಟೆ. ನಮ್ಮ ತರಬೇತಿ ಕೇಂದ್ರ ಅದೇ ತಾನೇ ನಿದ್ದೆಗಣ್ಣಿನೊಂದಿಗೆ ಜೂಗರಿಸುತ್ತ ಅರೆಮಂಪರಿನಲ್ಲಿತ್ತು. ಹೋಗಿ ನಮ್ಮ ರೂಮ್ ಬಾಗಿಲು ತಟ್ಟಿದೆ. ಗೆಳೆಯ ಬಿರಾದಾರ ನಿದ್ದೆಗಣ್ಣಿನಲ್ಲಿ ಬಾಗಿಲು ತೆಗೆದ. ನಮ್ಮ ಹಿರಿಯ ಸ್ನೇಹಿತರಾದ ಜಾಗೀರದಾರಸಾಬ "ಕ್ಯಾಜಿ ಹೊನ್ಕಲ್, ತುಮಾರಾ ದೋಸ್ತಕು ಚೋಡಕೆ  ಕನ್ಯಾಕುಮಾರಿ ಜಾಕೆ ಆಯಾಕ್ಯಾಜಿ" ಎಂದು ನಿದ್ದೆ ಗಣ್ಣಿನಲ್ಲಿಯೇ ಕೇಳಿದರು.

"ಕನ್ಯಾಕುಮಾರಿಕೂ ಅಭಿ ನಹಿ ಗಯಾ ಹೂಂ ಸಾಬ, ಬಾದ್‌ಮೆ ಜಾಯಿಂಗೆ, ಅಭಿ ಏಖ್ ಬಾರ್ ಫಿರ್" ಎಂದು ಹೇಳುತ್ತಲೇ ನನ್ನ ಬೆಡ್ ಮೇಲೆ ಮಲಗಿ ಕಣ್ಣು ಮುಚ್ಚಿಕೊಂಡೆ. ದೂರದಲ್ಲಿ ತಮಿಳು ಕೋಳಿಯೊಂದು ಜೋರಾಗಿ ಕೂಗಿತು.

ಕನ್ಯಾಕುಮಾರಿಯಲ್ಲಿ
ಕೂಗುವ ಕೋಳಿಯ ಕೂಗು
ಹಿಮಾಲಯದ ತಪ್ಪಲಲಿ
ಸರ್ವವೂ  ಮರೆತು ಕುಳಿತ
ಸಂತರಿಗೂ ಕ್ಷಣ ತಟ್ಟಿ ಎಬ್ಬಿಸುತ್ತದೆ ........

ಎಂಬ ನನ್ನ ಕವನದ ಸಾಲುಗಳು ನೆನಪಾಗತೊಡಗಿದವು.

(ಸಂಗ್ರಹ)

# 3. ಬದುಕಿನ ಸತ್ಯ

## ಚಟುವಟಿಕೆಗಳು

- ನಾವು ಸಂಚಾರ ಮಾಡಲು ಬಳಸುವ ವಾಹನಗಳು ಯಾವುವು?
- ದೋಣಿ, ಹಡಗುಗಳನ್ನು ಯಾಕೆ ಬಳಸುತ್ತಾರೆ?
- ಇತರ ವಾಹನಗಳಂತೆ ಹಡಗುಗಳು ಅಪಘಾತಕ್ಕೊಳಗಾಗುತ್ತವೆಯೇ? ಯಾವಾಗ?

ಇತ್ಯಾದಿ ಪ್ರಶ್ನೆಗಳನ್ನು ಕೇಳಿ ಚರ್ಚೆ ನಡೆಸುವುದು.

ಬಳಿಕ ಸಮುದ್ರ ದಾರಿಯಾಗಿ ವ್ಯಾಪಾರಕ್ಕಾಗಿ ದೂರ ದೇಶಕ್ಕೆ ಹೊರಟ ಅಪ್ಪ ಮತ್ತು ಮಗಳ ಕಥೆಯನ್ನು ತಿಳಿಯೋಣ ಎಂಬುದಾಗಿ ಹೇಳಿ ಪಾಠ ಪ್ರವೇಶ ಮಾಡುವುದು. ವಿದ್ಯಾರ್ಥಿಗಳಲ್ಲಿ ಮೌನವಾಗಿ ಓದಲು ಹೇಳುವುದು.

ಬಳಿಕ ಅಧ್ಯಾಪಕರು ಪಾಠವನ್ನು ಗಟ್ಟಿಯಾಗಿ, ಉಚ್ಚಾರ ಸ್ಪಷ್ಟತೆಯಿಂದ ಭಾವಪೂರ್ಣವಾಗಿ ಓದುವುದು.

ಮಕ್ಕಳಿಂದ ಸರಣಿಯಂತೆ ಓದಿಸುವುದು.

## ಓದಿರಿ

ಮಕ್ಕಳಲ್ಲಿ ಪಾಠವನ್ನು ಮೌನವಾಗಿ ಓದಲು ಹೇಳುವುದು. ಅವರಿಗೆ ಇಷ್ಟವಾದ ಭಾಗವನ್ನು ಗುರುತಿಸಿ ಓದಲು ಹೇಳುವುದು. ಅನಂತರ ಯಾಕೆ ಇಷ್ಟವಾಯಿತು ಎಂಬುದನ್ನು ಬರೆದು ಓದಲು ಹೇಳುವುದು.

## ಚರ್ಚಿಸಿರಿ

- ಫಾತಿಮಾಳ ಬದುಕಿನಲ್ಲಿ ಉಂಟಾದ ಕಹಿ ಅನುಭವಗಳು ಯಾವುವು? ಅವಳು ಏನೇನು ಕಷ್ಟಗಳನ್ನು ಅನುಭವಿಸಿದಳು?
- ಚೈನಾಕ್ಕೆ ತಲುಪಿದ ಫಾತಿಮ ಯಾರನ್ನು ಭೇಟಿಯಾದಳು?
- ಹಿಂದಿನ ಅನುಭವಗಳು ಅವಳಿಗೆ ಹೇಗೆ ಪ್ರಯೋಜನಕಾರಿಯಾದುವು? ಕೊನೆಗೆ ಏನು ಸಂಭವಿಸಿತು?

ಇತ್ಯಾದಿ ಪ್ರಶ್ನೆಗಳನ್ನು ವಿದ್ಯಾರ್ಥಿಗಳಲ್ಲಿ ಕೇಳುವುದು. ಈ ಪ್ರಶ್ನೆಗಳ ಅಭಿಪ್ರಾಯವನ್ನು ಕ್ರೋಢೀಕರಿಸಿ ಹೇಳುವುದು.

## ಉತ್ತರಿಸಿರಿ

ಪ್ರಶ್ನೆಗಳನ್ನು ವೈಯಕ್ತಿಕವಾಗಿ ಓದಿದ ಬಳಿಕ ತಮ್ಮ ಪುಸ್ತಕಗಳಲ್ಲಿ ಉತ್ತರಗಳನ್ನು ಬರೆಯಲಿ. ಅಧ್ಯಾಪಕರು ಉತ್ತರಗಳನ್ನು ಕರಿಹಲಗೆಯಲ್ಲಿ ಬರೆಯುವುದು. ವಿದ್ಯಾರ್ಥಿಗಳು ತಾವು ಬರೆದ ಪುಸ್ತಕಗಳನ್ನು ಪರಸ್ಪರ ಕೈ ಬದಲಾಯಿಸಿದ ಬಳಿಕ ಅಧ್ಯಾಪಕರು ಬರೆದ ಉತ್ತರಗಳನ್ನು ಮತ್ತು ಮಕ್ಕಳು ಬರೆದ ಉತ್ತರಗಳನ್ನು ಹೋಲಿಸಿ ಮೌಲ್ಯಮಾಪನ ಮಾಡಲಿ.

## ಕ್ರಮೀಕರಿಸಿ ಬರೆಯಿರಿ

ಕತೆಯ ಆಶಯವನ್ನು ಮಕ್ಕಳು ಪೂರ್ಣವಾಗಿ ಮನನ ಮಾಡಿದ್ದಾರೆ ಎಂಬುದನ್ನು ಪರೀಕ್ಷಿಸಲು ಈ ಚಟುವಟಿಕೆಯನ್ನು

ಅಳವಡಿಸಲಾಗಿದೆ. ಮಕ್ಕಳು ವಾಕ್ಯಗಳನ್ನು ಆಶಯ ಪೂರ್ಣವಾಗಿ, ಅನುಕ್ರಮವಾಗಿ ಜೋಡಿಸಿ, ತರಗತಿಯಲ್ಲಿ ಮಂಡಿಸಲಿ. ಇದನ್ನು ಮಕ್ಕಳಿಗೆ ಮನೆಗೆಲಸವಾಗಿ ಕೊಡಬಹುದು.

## ಸ್ವಂತ ವಾಕ್ಯ ರಚಿಸಿರಿ

ಹೊಸ ಪದಗಳು, ನುಡಿಗಟ್ಟುಗಳೇ ಮುಂತಾದವುಗಳನ್ನು ಬಳಸಿ ವಾಕ್ಯರಚಿಸಲು ತರಬೇತಿ ನೀಡುವುದೇ ಈ ಚಟುವಟಿಕೆಯ ಉದ್ದೇಶವಾಗಿದೆ. ಇದಕ್ಕಾಗಿ ವಾಕ್ಯಗಳು ಅಥವಾ ಅರ್ಥಪೂರ್ಣ ಗದ್ಯಭಾಗವನ್ನು ರಚಿಸಬಹುದು.

ರೈಲಿನಲ್ಲಿ ಕುಳಿತು ಕತೆ ಓದುವುದರಲ್ಲೇ ತಲ್ಲೀನನಾಗಿದ್ದ ಅವನ ಕಿಸೆ ಹರಿದುದು ತಿಳಿದಾಗ ಆಕಾಶವೇ ಕಳಚಿಬಿದ್ದಂತಾಯಿತು. ರೈಲು ಪ್ರಯಾಣದಲ್ಲಿ ಜಾಗರೂಕರಾಗಿರಬೇಕು ಎಂದು ಅಪ್ಪ ಹೇಳಿದ ಮಾತು ನೆನಪಾಯಿತು. ಇದಕ್ಕಿದ್ದಂತೆ ಪೊಲೀಸರು ಪ್ರತ್ಯಕ್ಷರಾದಾಗ ಅವನಿಗೆ ಸಮಾಧಾನವಾಯಿತು.

## ಕತೆ ಪೂರ್ಣಗೊಳಿಸಿರಿ

ಮಕ್ಕಳಲ್ಲಿ ಸೃಜನಶೀಲತೆಯನ್ನು ಹೆಚ್ಚಿಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಕೊಟ್ಟ ಗದ್ಯಭಾಗವನ್ನು ಅಧ್ಯಾಪಕರು ಒಂದೆರಡು ಬಾರಿ ಗಟ್ಟಿಯಾಗಿ ಓದುವುದು. ಬಳಿಕ ಮುಂದುವರಿದ ಭಾಗ ಹೇಗಿರಬಹುದೆಂದು ಚರ್ಚಿಸುವುದು. ಹಲವು ಸಾಧ್ಯತೆಗಳನ್ನು ಅಧ್ಯಾಪಕರು ಸೂಚಿಸುವುದು.

ಉದಾ:

1) ಅಧ್ಯಾಪಕರಾದ ರಾಜು ಮತ್ತು ಶೇಖರ್ ಸಮುದ್ರ ತೀರಕ್ಕೆ ಹೋದರು. ಅಲ್ಲಿ ಒಂದು ಕಡೆಯಲ್ಲಿ ದೊಡ್ಡ ಗುಂಪೊಂದು ಸೇರಿತ್ತು. ರಾಜು ಮತ್ತು ಶೇಖರ್‌ರ ಎದೆ ಡವಗುಟ್ಟಿತು. ಅವರು ನೇರವಾಗಿ ಅಲ್ಲಿಗೆ ಹೋದರು. ಅಲ್ಲಿ ನೋಡಿದಾಗ ಅವರು ಕಂಡಿದ್ದೇ ಬೇರೆ. ನೂತನ್ ಹ್ಯೊಗೆಯಲ್ಲಿ ಗಾಂಧೀಜಿಯ ರೂಪ ಬಿಡಿಸುತ್ತಿದ್ದ. ನೂತನ್ ಚಿತ್ರ ರಚನೆಯ ಎಲ್ಲಾ ಸ್ಪರ್ಧೆಗಳಲ್ಲಿಯೂ ಪ್ರಥಮ ಸ್ಥಾನ ಗಳಿಸುತ್ತಿದ್ದವನು. ಚಿತ್ರ ಬಿಡಿಸಲು ಕುಳಿತರೆ ಅವನಿಗೆ ಊಟದ ಪರಿವೆಯೇ ಇಲ್ಲ. ಅಧ್ಯಾಪಕರಿಬ್ಬರು ಅಲ್ಲಿಗೆ ತಲುಪುವಾಗ ನೂತನ್ ಚಿತ್ರದ ಕೊನೆಯ ಹಂತದಲ್ಲಿದ್ದ. ಅಧ್ಯಾಪಕರು ಅವನ ಹೆಸರು ಹಿಡಿದು ಕೂಗಿದಾಗಲೇ ಅವನು ಈ ಲೋಕಕ್ಕೆ ಬಂದುದು. ಅಧ್ಯಾಪಕರು ಅವರ ತಂಡದೊಡನೆ 'ನೂತನ್ ನಮ್ಮ ಜತೆಯಲ್ಲಿದ್ದಾನೆ. ಐದು ನಿಮಿಷದಲ್ಲಿ ಬರುತ್ತೇವೆ' ಎಂದು ಮೊಬೈಲ್‌ನಲ್ಲಿ ಸಂಪರ್ಕಿಸಿ ಹೇಳಿದರು. ಚಿತ್ರವನ್ನು ಕಂಡ ಜನರು ನೂತನ್ ಹಾಗೂ ಅಧ್ಯಾಪಕರನ್ನು ಮಾತನಾಡಿಸಿ ಅಭಿನಂದಿಸಿದರು. ಹಿರಿಯ ಚಿತ್ರ ಕಲಾವಿದ ವೆಂಕಟೇಶ್ ತಮ್ಮ ಕುಟುಂಬದೊಂದಿಗೆ ಸಮುದ್ರ ತೀರಕ್ಕೆ ಬಂದವರು ನೂತನ್‌ನನ್ನು 'ಒಳ್ಳೆಯ ಕಲಾವಿದನಾಗಿ ದೇಶಕ್ಕೆ ಹೆಸರು ತರಬೇಕು' ಎಂಬುದಾಗಿ ಹರಸಿದರು. ಕೆಲವೇ ನಿಮಿಷಗಳಲ್ಲಿ ನೂತನ್ ಅಲ್ಲಿ ಹೀರೋ ಆಗಿದ್ದ. ಅವನಿಗೆ ಸಂತೋಷವಾದರೂ ತುಂಬಾ ಹೊತ್ತು ಅಲ್ಲಿ ಉಳಿದುದಕ್ಕೆ ಅಧ್ಯಾಪಕರು ಛೀಮಾರಿ ಹಾಕುತ್ತಾರೆಂದು ಭಾವಿಸಿದ. ಆದರೆ ಅವರು 'ನೂತನ್ ನಿನಗೆ ನಮ್ಮಲ್ಲಿ ಹೇಳಬಹುದಿತ್ತಲ್ಲ!' ಎಂದು ಹೇಳಿದರು. ಆಗ ನೂತನ್, 'ನಾನು ನೀರು ಕುಡಿಯಲು ಬಂದಾಗ ಒಂದು ಮಗು ಮರದ ಚಿತ್ರ ಬಿಡಿಸುತ್ತಿತ್ತು. ಅದನ್ನು ಸರಿಪಡಿಸಲು ಕುಳಿತವನಿಗೆ ಗಾಂಧೀಜಿಯ ಚಿತ್ರ ಬಿಡಿಸಬೇಕೆಂದು ತೋರಿತು ಸರ್. ಕ್ಷಮಿಸಿ, ನನ್ನನ್ನು ತುಂಬ ಹುಡುಕಿದ್ರ ಸರ್?' ಎಂದು ಪ್ರಶ್ನಿಸಿದ. 'ಏನಿಲ್ಲ ನೂತನ್, ಗುಂಪಿನಲ್ಲಿ ನಿನ್ನನ್ನು ಕಾಣದಾಗ ತುಂಬಾ ಹೆದರಿಬಿಟ್ಟೆವು ಅಷ್ಟೇ ಎಂದು ಹೇಳಿ' ನೂತನ್‌ನನ್ನು ಕರೆದುಕೊಂಡು ಬಸ್ಸಿನ ಕಡೆಗೆ ನಡೆದರು.

2) ಅಧ್ಯಾಪಿಕೆಯರಾದ ನಯನ ಮತ್ತು ಉಷ ಟೀಚರ್ ನೂತನ್‌ನನ್ನು ಹುಡುಕುತ್ತಾ ಹೊರಟರು. ರಾಜು ಮಾಸ್ಟರ್ ಅವರನ್ನು ಕೂಡಿಕೊಂಡರು. ಅವರು ಮಕ್ಕಳು ಆಡುತ್ತಿದ್ದ ಕಡೆಯಲ್ಲೇ ನೋಡಿದರು. ಎಲ್ಲಿಯೂ ನೂತನ್ ಕಣ್ಣಿಗೆ ಬೀಳಲಿಲ್ಲ. ನಯನ ಟೀಚರಂತೂ ಅಳಲಿಕ್ಕೆ ತೊಡಗಿದರು. ಆಗ ರಾಜು ಮಾಸ್ಟರ್ ಅವರನ್ನು ಅಲ್ಲಿ ನಿಲ್ಲಲು ಹೇಳಿ. ಸಮೀಪವಿದ್ದ ಕಡಲತೀರದ ಪೊಲೀಸರಲ್ಲಿ ವಿಚಾರವನ್ನು ಹೇಳಿದರು. ಆಗ ಅವರು 'ನೀವೇನು ಭಯ ಪಡಬೇಡಿ. ಯಾರೂ ಸಮುದ್ರದಲ್ಲಿ ತೇಲಿ ಹೋಗಲಿಲ್ಲ. ಸಮುದ್ರ ಪಾಲಾಗಿದ್ದರೆ ಇಲ್ಲಿರುವ ಕ್ಯಾಮರಾದ ಮೂಲಕ ತಿಳಿಯುತ್ತಿತ್ತು. ಅವನು ಇಲ್ಲೆಲ್ಲಾದರೂ ಇರಬಹುದು. ಗಾಬರಿಪಡದೆ ಹುಡುಕಿ' ಎಂದು ಹೇಳಿದರು. ಅಷ್ಟರಲ್ಲಿ ವ್ಯಕ್ತಿಯೊಬ್ಬರು ನೂತನ್‌ನ ಕೈ ಹಿಡಿದುಕೊಂಡು ಅಧ್ಯಾಪಕರ ಕಡೆಗೆ ನಡೆದು ಬರುತ್ತಿದ್ದರು. ಎಲ್ಲರಿಗೂ ಹೋದ ಜೀವ ಬಂದಂತಾಯಿತು. ಆಗ ಆ ವ್ಯಕ್ತಿ "ನಾವೂ ಮಕ್ಕಳನ್ನು ಕರೆದುಕೊಂಡು ಸಮುದ್ರ ತೀರಕ್ಕೆ ಬಂದಿದ್ದೆವು. ನಮ್ಮ ಮಕ್ಕಳ ಮತ್ತು ನಿಮ್ಮ ಮಕ್ಕಳ ಸಮವಸ್ತ್ರದ ಬಣ್ಣ ಒಂದೇ ನೋಡಿ. ಈ ಹುಡುಗ ಬಹಳ ಹಿಂದಿನಿಂದ ಓಡಿ ಬಂದು ನಮ್ಮ ಗುಂಪು ಸೇರಿಕೊಂಡ. ಅಪರಿಚಿತರಾದ ನಮ್ಮನ್ನು ಕಂಡು ಹುಡುಗ ಅಳತೊಡಗಿದ. ನಾವು ಸಮಾಧಾನಪಡಿಸಿ, ನಿಮ್ಮನ್ನು ಹುಡುಕುತ್ತಾ ಹೊರಟಿದ್ದೆವು" ಎಂದು ಹೇಳಿದರು. ನೂತನ್‌ನನ್ನು ಕಂಡು ಸಮಾಧಾನಗೊಂಡ ಉಷ ಟೀಚರ್ ಯಾವತ್ತಿನಂತೆ ಕೋಪಗೊಳ್ಳದೆ 'ಅಂತೂ ನಮ್ಮನ್ನು ಹೆದರಿಸಿ ಬಿಟ್ಟೆಯಲ್ಲ!' ಎಂದು ಹೇಳಿ ಅಧ್ಯಾಪಕರಿಗೆ ಕೃತಜ್ಞತೆ ಸಲ್ಲಿಸಿ, ಬಸ್ಸಿನ ಕಡೆಗೆ ನಡೆದರು.

ಹೀಗೆ ಕತೆಗೆ ಹಲವು ರೀತಿಯಲ್ಲಿ ತಿರುವು ನೀಡಲು ಅಧ್ಯಾಪಕರು ಸೂಚಿಸಬಹುದು.

## ಊಹಿಸಿ ಬರೆಯಿರಿ

ಈ ಗದ್ಯಭಾಗವನ್ನು ವಿದ್ಯಾರ್ಥಿಗಳಲ್ಲಿ ಓದಲು ಹೇಳುವುದು. ಬಳಿಕ ಅನಾಥಳಾದ ಫಾತಿಮ ಏನು ಚಿಂತಿಸಿರಬಹುದು? ಮಕ್ಕಳೊಂದಿಗೆ ಚರ್ಚಿಸುವುದು. ಬಳಿಕ ಅವರಲ್ಲಿ ವೈಯಕ್ತಿಕವಾಗಿ ತಮಗೆ ಸೂಕ್ತವೆಂದು ತೋರಿದ ರೀತಿಯಲ್ಲಿ ಊಹನೆ ಮಾಡಿ ಬರೆಯಲು ಹೇಳುವುದು. ಗಟ್ಟಿಯಾಗಿ ಓದುವುದು. ಅಕ್ಷರ ತಪ್ಪು, ಭಾಷಾ ಶೈಲಿಯಲ್ಲಿ ಏನಾದರೂ ತಪ್ಪುಗಳಿದ್ದರೆ ಅಧ್ಯಾಪಕರು ಸರಿಪಡಿಸುವಿರಲ್ಲವೇ? ಎಲ್ಲರ ಊಹನೆ ಒಂದೇ ರೀತಿಯಾಗಲಾರದು.

### ಊಹನೆ ಹೀಗೂ ಇರಬಹುದಲ್ಲವೇ?

ಅಯ್ಯೋ! ನಾನೆಂತಹ ಪಾಪಿ! ಹುಟ್ಟಿದಾಗಲೇ ಅಮ್ಮನನ್ನು ಕಳೆದುಕೊಂಡೆ. ಈಗ ಅಪ್ಪನನ್ನೂ. ನಾನ್ಯಾಕೆ ಇನ್ನು ಜೀವಿಸಬೇಕು? ಈ ಸಮುದ್ರದಲ್ಲಿ ಹಾರಿ ಸಾಯುವುದೇ ಒಳಿತಲ್ಲವೇ? ಛೇ! ನನ್ನ ಪ್ರೀತಿಯ ಅಪ್ಪ, ಆತ್ಮಹತ್ಯೆ ಪಾಪವೆಂದು ಅದೆಷ್ಟು ಬಾರಿ ಹೇಳಿದ್ದಾರೆ. ದೇವರು ನಮಗೆ ಎಲ್ಲ ಅವಯವಗಳನ್ನು ನೀಡಿ ಸೌಭಾಗ್ಯವಂತರನ್ನಾಗಿ ಸೃಷ್ಟಿಸಿದ್ದಾರೆ. ಬೇರೆ ಯಾವ ಸಂಪತ್ತಿಲ್ಲದಿದ್ದರೂ ಆರೋಗ್ಯವುಳ್ಳ ಈ ಶರೀರವಿದೆಯಲ್ಲ. ಅದು ಯಾರಿಗಾದರೂ ಸಹಾಯವಾಗಿ ಒದಗಬೇಕು. ಅದಕ್ಕಾಗಿ ಎಂತಹ ಕಷ್ಟಗಳು ಬಂದರೂ ಎದುರಿಸಿ ಜೀವಿಸಬೇಕು. ಹೇಗಿದ್ದರೂ ತೀರ ತುಂಬಾ ಉದ್ದವಾಗಿದೆಯಲ್ಲವೇ? ತೀರದುದ್ದಕ್ಕೂ ನಡೆಯುತ್ತೇನೆ. ದೇವರಿಟ್ಟಂತಾಗಲಿ......

## ಸಂದರ್ಶನ ವರದಿ ತಯಾರಿಸಿರಿ

ಕೇಳಿ ತಿಳಿದ ವಿಚಾರಗಳನ್ನು ಅಚ್ಚುಕಟ್ಟಾಗಿ ಲೇಖನ ರೂಪದಲ್ಲಿ ಬರೆಯುವ ರೀತಿಯನ್ನು ಕಲಿಸುವ ನಿಟ್ಟಿನಲ್ಲಿ ಈ ಚಟುವಟಿಕೆಯನ್ನು ನೀಡಲಾಗಿದೆ. ಸಂದರ್ಶನ ವರದಿ ತಯಾರಿಸುವುದರ ಮೊದಲು ಸಂದರ್ಶನ ಪ್ರಶ್ನಾವಳಿ ತಯಾರಿಸಬೇಕು.

ಒಂದನೇ ಘಟಕದಲ್ಲಿ ಪ್ರಶ್ನಾವಳಿಯ ರೀತಿಯನ್ನು ಕೊಡಲಾಗಿದೆ. ಪ್ರಶ್ನೆಗಳಿಗೆ ಲಭ್ಯವಾದ ಉತ್ತರಗಳ ಆಧಾರದಲ್ಲಿ ಸಂದರ್ಶನ ವರದಿ ತಯಾರಿಸಬಹುದು.

**ಸಂದರ್ಶನ ಪ್ರಶ್ನಾವಳಿ ಮತ್ತು ಉತ್ತರ ಹೀಗೂ ಇರಬಹುದಲ್ಲವೇ!**

ಪ್ರಶ್ನೆ : ನಮಸ್ಕಾರ, ನಮಗೆ ನಿಮ್ಮ ಕುರಿತು ಸ್ವಲ್ಪ ವಿಚಾರ ತಿಳಿಯಬೇಕಿತ್ತು. ಕೇಳಬಹುದೇ?

ಉತ್ತರ : ಓ ಧಾರಾಳವಾಗಿ ಕೇಳಿ.

ಪ್ರಶ್ನೆ : ತಾವು ಎಷ್ಟು ವರ್ಷಗಳಿಂದ ವಾಹನ ಚಲಾಯಿಸುತ್ತಿದ್ದೀರಿ?

ಉತ್ತರ : ಸುಮಾರು 50 ವರ್ಷಗಳಿಂದ

ಪ್ರಶ್ನೆ : ಈಗ ತಮ್ಮ ಪ್ರಾಯವೆಷ್ಟು?

ಉತ್ತರ : ನನಗೆ ಈಗ 65 ವರ್ಷಗಳು. 15ನೇ ವರ್ಷದಿಂದಲೇ ನಾನು ವಾಹನ ಚಲಾಯಿಸಲು ಆರಂಭಿಸಿದ್ದೇನೆ.

ಪ್ರಶ್ನೆ : ನಿಮ್ಮ ಊರು ಯಾವುದು?

ಉತ್ತರ : ಕರ್ನಾಟಕದ ಗದಗ ನನ್ನ ಹುಟ್ಟೂರು. ನನಗೆ ಅಪ್ಪ ಅಮ್ಮ ನನ್ನ ಕಂಡ ನೆನಪೇ ಇಲ್ಲ.

ಪ್ರಶ್ನೆ : ಹಾಗಿದ್ದರೆ ನೀವು ಈ ಊರಿಗೆ ಹೇಗೆ ತಲುಪಿದಿರಿ?

ಉತ್ತರ : ರಾಮಕೃಷ್ಣಯ್ಯ ಎಂಬೊಬ್ಬರು ಈ ಊರಿನಿಂದ ಲಾರಿ ತೆಗೆದುಕೊಂಡು, ಸರಕು ಸಾಗಾಣಿಕೆಗೆ ನಮ್ಮ ಊರಿಗೆ ಬಂದಿದ್ದರು. ಅನಾಥನಾದ ನಾನು ಹೊಟ್ಟೆ ತುಂಬಿಸಲು ಯಾರಾದರೂ ಹೇಳಿದ ಕೆಲಸ ಮಾಡುತ್ತಿದ್ದೆ. ರಾಮಕೃಷ್ಣಯ್ಯನವರ ಲಾರಿಯನ್ನು ನಾನು ತೊಳೆಯುತ್ತಿದ್ದೆ. ಹೀಗೆ ತಿಂಗಳಿಗೊಂದು ಬಾರಿ ಬರುತ್ತಿದ್ದ ಅವರಿಗೆ ನನ್ನಲ್ಲಿ ಕರುಣೆ ಮೂಡಿತು. ನನ್ನೊಂದಿಗೆ ಬರುತ್ತೀಯಾ? ಎಂದು ಕೇಳಿದರು. ಅನಾಥನಾದ ನನಗೆ ಎಲ್ಲಾದರೇನು? ಅವರೊಂದಿಗೆ ಬಂದು ಬಿಟ್ಟೆ.

ಪ್ರಶ್ನೆ : ಬಳಿಕ ಇಲ್ಲಿ ಬಂದು ಚಾಲಕ ವೃತ್ತಿಯಲ್ಲಿ ತೊಡಗಿದಿರೇ?

ಉತ್ತರ : ಅವರೊಂದಿಗೆ ಸಹಾಯಕನಾಗಿ ಎಲ್ಲ ಕಡೆಗೂ ಹೋಗುತ್ತಿದ್ದೆ. ಅವರೊಂದಿಗೆ ಇದ್ದುದರಿಂದ ಗಾಡಿ ಚಾಲನೆ ಮಾಡಲು ಕಲಿತೆ.

ಪ್ರಶ್ನೆ : ಚಾಲಕ ವೃತ್ತಿ ಯಾವಾಗ ತೊಡಗಿದಿರಿ?

ಉತ್ತರ : ನಾನು ಇಲ್ಲಿ ಬಂದು ಎರಡು ವರ್ಷಗಳ ಬಳಿಕ ರಾಮಕೃಷ್ಣಯ್ಯನವರಿಗೆ ಹೃದಯಾಘಾತವಾಯಿತು. ಡಾಕ್ಟರು ವಾಹನ ಚಾಲನೆ ಮಾಡಬೇಡವೆಂದು ಸೂಚಿಸಿದರು. ಅಂತೂ ಜೀವಿಸಬೇಕಲ್ಲ! ಪುನಃ ಲಾರಿಯಲ್ಲಿ ಹೋಗಲು ಹೊರಟರು. ಆಗ ನಾನು ಚಾಲಕನ ಸ್ಥಾನದಲ್ಲಿ ಕುಳಿತೆ. ಅವರು ಬಳಿಯಲ್ಲೇ ಕುಳಿತಿರುತ್ತಿದ್ದರು. ಪ್ರಾಯ ಪೂರ್ತಿಯಾದಾಗ ಪರವಾನಗಿ ದೊರಕಿತು. ಮತ್ತೆ ನಾನು ಅವರನ್ನು ಮನೆಯಲ್ಲೇ ಉಳಿಯಲು ಹೇಳಿ ಅವರ ಕೆಲಸವನ್ನು ನಾನೇ ಮಾಡಲು ತೊಡಗಿದೆ.

ಪ್ರಶ್ನೆ : ಮತ್ತೆ ನೀವು ಊರಿಗೆ ಹೋಗಲಿಲ್ಲವೇ?

ಉತ್ತರ : ಇಲ್ಲ. ನಾನ್ಯಾಕೆ ಹೋಗಬೇಕು? ಇಲ್ಲಿ ರಾಮಕೃಷ್ಣಯ್ಯ ಮತ್ತು ಪತ್ನಿ ನನ್ನನ್ನು ಸ್ವಂತ ಮಗನಂತೆಯೇ ಕಂಡಿದ್ದರು. ಹಾಗೆಯೇ ನಾನು ಅವರನ್ನು ತಂದೆ ತಾಯಿಯಂತೆಯೇ ಕಂಡೆ.

ಪ್ರಶ್ನೆ : ಈಗಲೂ ನೀವು ಅಲ್ಲಿ ವಾಸಿಸುತ್ತಿದ್ದೀರಾ?

ಉತ್ತರ : ಇಲ್ಲ. ರಾಮಕೃಷ್ಣಯ್ಯನವರ ಮರಣದ ಬಳಿಕ ಬೇರೆ ವಾಸಿಸಲು ಆರಂಭಿಸಿದೆ. ಅವರು ಕಲಿಸಿದ ವಿದ್ಯೆ ನನಗೆ ಅನ್ನ ನೀಡಿತು. ನನ್ನನ್ನು ಇಷ್ಟರ ವರೆಗೆ ಬೆಳೆಸಿತು. ಈ ಊರಿನ ಬಸ್ಸಿನ  ಚಾಲಕನಾಗಿಯೇ 30 ವರ್ಷಗಳು ಕಳೆದುವು.

ಪ್ರಶ್ನೆ : ಈ ವೃತ್ತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ : ಕೆಲಸ ಯಾವುದೇ ಇರಲಿ, ಪ್ರಾಮಾಣಿಕವಾಗಿ ಮಾಡಬೇಕು. ಪ್ರಾಮಾಣಿಕತೆಯಿಂದ ಮಾಡುವ ವೃತ್ತಿ, ಯಾವುದೇ ಅಗಿರಲಿ, ಅದು ಉತ್ತಮ ಪ್ರತಿಫಲ ಕೊಟ್ಟೇ ಕೊಡುತ್ತದೆ. ಹಾಗಾಗಿ ನನಗೆ ಒಂದು ದಿನವೂ ಕೆಲಸವಿಲ್ಲದೆ ಅಲೆಯಬೇಕಾಗಿ ಬರಲೇ ಇಲ್ಲ.

ಪ್ರಶ್ನೆ : ಈಗ ನಿಮ್ಮ ಸ್ಥಿತಿ ಹೇಗಿದೆ?

ಉತ್ತರ : ಈಗ ನನಗೆ ಎರಡು ಲಾರಿಗಳಿವೆ. ಹಾಗಿದ್ದರೂ ಬಸ್ಸಿನ ಚಾಲಕ ವೃತ್ತಿಯೇ ಇಷ್ಟ. ಊರಿನ ಎಲ್ಲರಿಗೂ ನನ್ನಲ್ಲಿ ಪ್ರೀತಿಯಿದೆ. ಇಷ್ಟೇ ಸಾಕಲ್ಲವೇ?

ಪ್ರಶ್ನೆ : ಇತ್ತೀಚೆಗೆ ನಿಮಗೆ ಉತ್ತಮ ಚಾಲಕ ಪ್ರಶಸ್ತಿ ನೀಡಿದ್ದಾರಲ್ಲವೇ?

ಉತ್ತರ : ಹೌದು  ಚಾಲಕ ವೃತ್ತಿಯೂ ಒಂದು ವೃತ್ತಿಯೆಂದು ಗುರುತಿಸಿದ್ದಾರಲ್ಲಾ. ಅದು ಬಹಳ ಸಂತೋಷ.

ಪ್ರಶ್ನೆ : ಇಷ್ಟು ವಿಚಾರಗಳನ್ನು  ತಿಳಿಸಿದಿರಲ್ಲಾ. ನಿಮಗೆ ಧನ್ಯವಾದಗಳು.

ವಾಹನ ಚಾಲಕ/ವಿದೇಶದಲ್ಲಿರುವವರ ಸಂದರ್ಶನ ಮಾಡುವವರು ಯಾರೆಲ್ಲ? ವಿದ್ಯಾರ್ಥಿಗಳು ಎರಡು ಗುಂಪುಗಳಾಗಬಹುದಲ್ಲವೇ? ಅವರನ್ನು ಸಂದರ್ಶನ ಮಾಡಲು, ಎರಡೂ ಗುಂಪುಗಳಲ್ಲಿ, ಪ್ರಶ್ನೆ ತಯಾರಿಸಲು ಹೇಳುವುದು. ಬಳಿಕ ಪ್ರತಿಯೊಂದು ಗುಂಪಿನ ಪ್ರಶ್ನಾವಳಿ ಪ್ರಸ್ತುತಪಡಿಸಲಿ. ಚರ್ಚೆಯ ಮೂಲಕ ಕ್ರಮಾನುಗತವಾದ ಪ್ರಶ್ನೆಗಳನ್ನು ತಯಾರಿಸಿ, ಗುಂಪಿನಲ್ಲಿ ಯಾರು, ಯಾವ ಪ್ರಶ್ನೆಗಳನ್ನು ಕೇಳಬೇಕೆಂದು ತೀರ್ಮಾನಿಸಲಿ. ಬಳಿಕ ಮಕ್ಕಳು ಸಂದರ್ಶನ ಮಾಡಿ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಬರೆದು ತಂದುದನ್ನು ತರಗತಿಯಲ್ಲಿ ಪ್ರಸ್ತುತಪಡಿಸಲಿ. ವಿಷಯಗಳನ್ನು ಅನುಕ್ರಮವಾಗಿ ಜೋಡಿಸಿ ವರದಿ ತಯಾರಿಸಲಿ. ಅಧ್ಯಾಪಕರು ಕ್ರೋಢೀಕರಿಸಿ ವರದಿಯನ್ನು ಕರಿಹಲಗೆ/ ತಖ್ತೆಯಲ್ಲಿ ಬರೆದು ತೂಗು ಹಾಕುವುದು.

## ಸಂದರ್ಶನ ವರದಿ

ಇತ್ತೀಚೆಗೆ ಉತ್ತಮ ಚಾಲಕ ಪ್ರಶಸ್ತಿಯನ್ನು ಪಡೆದ ಹುಸೇನ್ ಸಾಬಿಯವರನ್ನು ದಿನಾಂಕ 28.3.2015 ರಂದು ಸಂದರ್ಶನ ನಡೆಸಿದೆನು. ಸ್ನೇಹಜೀವಿಯಾದ ಇವರು ಬಹಳ ಚೆನ್ನಾಗಿ ಉಪಚರಿಸಿದರು. ಬಳಿಕ ತಮ್ಮ ಕರುಣಾಜನಕ, ಶ್ರಮಭರಿತ ಜೀವನಗಾಥೆಯನ್ನು ಬಿಡಿಬಿಡಿಯಾಗಿ ನನ್ನ ಮುಂದಿರಿಸಿದರು. ಇವರು ಕರ್ನಾಟಕದ ಗದಗದಲ್ಲಿ ಜನಿಸಿದರು. ಚಿಕ್ಕವನಿರುವಾಗಲೇ ಅನಾಥರಾದ ಇವರು ಹೊಟ್ಟೆ ತುಂಬಿಸಲು ಯಾರಾದರೂ ಹೇಳಿದ ಕೆಲಸ ಮಾಡುತ್ತಿದ್ದರು. ಇವರ ಸ್ಥಿತಿಯನ್ನು ಕಂಡು ಮರುಗಿದ ಲಾರಿ ಚಾಲಕರಾದ ಶ್ರೀರಾಮಕೃಷ್ಣಯ್ಯ ಕಾಸರಗೋಡಿಗೆ ಕರೆತಂದು ಪೋಷಿಸಿದರು. ಚಾಲಕ ವೃತ್ತಿಯನ್ನು ಕಲಿಸಿದರು. ಇದು ಅವರನ್ನು ಇಂದಿನವರೆಗೂ ಬಸ್ಸು ಚಾಲಕನಾಗಿ ದುಡಿಯಲು ಪ್ರೇರೇಪಿಸಿತು. ಯಾವುದೇ ಕೆಲಸವಿರಲಿ ಪ್ರಾಮಾಣಿಕವಾಗಿ ದುಡಿದರೆ ಉತ್ತಮ ಪ್ರತಿಫಲ ಸಿಕ್ಕಿಯೇ ಸಿಗುವುದು ಎಂದು ದೃಢವಾಗಿ ನಂಬುವ ಇವರ ಬಳಿ ಈಗ ಎರಡು ಲಾರಿಗಳು ಇವೆ. 'ದುಡಿತವೆ ದುಡ್ಡಿನ ತಾಯಿ' ಎಂಬ ನಾಣ್ಣುಡಿಯು ಇವರ ಜೀವನಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತದೆ.

**ಪೂರಕ ಓದಿಗೆ**

# ಹೂಗ್ಲಿಯ ಮಡಿಲಲ್ಲಿ

ನಾನು ಕಲ್ಕತ್ತಾ ತಲುಪಿದುದು ಕಾಳೀಪೂಜೆಯ ಸಂದರ್ಭದಲ್ಲಿ. ಅಲ್ಲಿ ನನ್ನ ಗೆಳೆಯ ಸುರೇಶನೊಂದಿಗೆ ಗಂಗಾಸಾಗರ್‌ಗೆ ಮೋಟಾರ್ ಬೈಕಿನಲ್ಲಿ ಹೋಗಲು ತೀರ್ಮಾನಿಸಿದೆನು.

ಮಾರನೇ ದಿನ ಬೆಳಗ್ಗೆ ನಾವು ಗಂಗಾಸಾಗರ್‌ಗೆ ಪ್ರಯಾಣ ಅರಂಭಿಸಿದೆವು. ಪಟ್ಟಣ ದೂರವಾದೊಡನೆ ಗಂಗಾಸಾಗರ್‌ಗೆ ಹೋಗುವ ಸೂಚನಾ ಫಲಕಗಳು ಎದುರಾದುವು. 35–40 ಕಿ.ಮೀ. ದೂರದ ವರೆಗೂ ಪಟ್ಟಣದಲ್ಲಿದ್ದ ನಮಗೆ ನಿಧಾನವಾಗಿ ಗ್ರಾಮ ಜೀವನದ ದರ್ಶನವಾಗಲು ತೊಡಗಿತು.

ತೆಂಗಿನ ತೋಟಗಳು, ಭತ್ತದ ಬಯಲುಗಳನ್ನು ಹಾದು ನಾವು ಹೂಗ್ಲಿಯ ತೀರಕ್ಕೆ ತಲುಪಿದೆವು. ಅಲ್ಲಿ ಲುಂಗಿ ಉಟ್ಟುಕೊಂಡು ನಡೆದಾಡುತ್ತಿರುವ ಜನರನ್ನು , ತೆಂಗಿನ ತೋಟಗಳನ್ನು ಕಾಣುವಾಗ ಇದು ಕೇರಳವೋ ಎಂಬಂತೆ ತೋರುತ್ತಿತ್ತು. ಹೂಗ್ಲಿ ತೀರದಲ್ಲಿ ರಸ್ತೆ ಮುಗಿಯಿತು. ಕಣ್ಣೆದುರಿನಲ್ಲಿ ಸಮುದ್ರದಂತೆ ವಿಶಾಲವಾದ ಹೂಗ್ಲಿನದಿ ಹರಿಯುತ್ತಿತ್ತು. ಆಚೆಯ ದಡ ಕಾಣದಂತಹ ದೊಡ್ಡ ನದಿಯನ್ನು ನಾನು ಇಷ್ಟರ ವರೆಗೆ ಕಂಡಿರಲಿಲ್ಲ.

ಅಲ್ಲಿಂದ ಬೋಟು ಜೆಟ್ಟಿಗೆ ಹೋದೆವು. ಆಗ ಸಂಜೆ 5 ಗಂಟೆ. ನಮ್ಮಂತೆಯೇ ಗಂಗಾಸಾಗರ್‌ಗೆ ಹೋಗಲು ಜನರು ಬೋಟಿಗಾಗಿ ಕಾಯುತ್ತಿದ್ದರು. ಅಲ್ಲಿ ವಿಚಾರಿಸಿದಾಗ ಇನ್ನು 8 ಗಂಟೆಗೆ ಬೋಟ್ ಬಂದೀತಷ್ಟೆ ಎಂಬ ಉತ್ತರ ಬಂತು. ಕಾರಣ ಅದು ಇಳಿತದ ಸಮಯವಾಗಿತ್ತು. ಭರತದ ಸಮಯದಲ್ಲಿ ಮಾತ್ರ ಬೋಟ್ ಬರುತ್ತಿತ್ತು. ಕತ್ತಲಾಗುತ್ತಿದ್ದಂತೆ ಜನಸಂದಣಿ ಹೆಚ್ಚಾಯಿತು. ಒಂದು ಬೋಟಿನಲ್ಲಿ ಇಷ್ಟು ಮಂದಿ ಹೇಗೆ ಹೋದಾರು? ಎಂಬುದು ನನ್ನ ಗೆಳೆಯನ ಸಂಶಯ. ಆಗ 8 ಗಂಟೆ ಹಾಗೂ 8.15ಕ್ಕೆ ಬೋಟುಗಳಿವೆಯೆಂದು ತಿಳಿದು ಸಮಾಧಾನವಾಯಿತು.

ಆದರೆ ಆಗ ಇನ್ನೊಂದು ಚಿಂತೆ ಬಾಧಿಸಿತು. ನನ್ನ ಬೈಕನ್ನು ಹೇಗೆ ಬೋಟಲ್ಲಿಡಲಿ? ಎಂದು. ನನ್ನ ಹಾಗೆಯೇ ಬೈಕಿದ್ದ ಒಂದಿಬ್ಬರು ಅಲ್ಲಿದ್ದರು. ಅವರಲ್ಲಿ ವಿಚಾರಿಸಿದಾಗ, ಅವರು, 'ಭಯ ಬೇಡ ಬೋಟಿನ ಕೆಲಸಗಾರರು ತೆಗೆದಿಡುತ್ತಾರೆ' ಎಂದು ಹೇಳಿದರು. ಆದರೂ ನನಗೆ ಒಳಗೊಳಗೇ ಭಯವಿತ್ತು. ಸಾಧಾರಣ ಬೈಕುಗಳ ಇಮ್ಮಡಿ ಭಾರವಿರುವ 'ಎನ್‌ಫಿಲ್ಡ್' ನನ್ನದು.

8 ಗಂಟೆಗೆ ಬೋಟ್ ಬಂದಿತು. ಆದರೆ ಅದರಲ್ಲಿ ಬೈಕ್ ಹತ್ತಿಸಲಾಗುವುದಿಲ್ಲವೆಂದು ಹೇಳಿದರು. ಅಂತೂ 8.30ಕ್ಕೆ ಎರಡನೆ ಬೋಟ್ ಬಂತು. ಬೋಟಿನ ಕೆಲಸಗಾರರು ಉಳಿದ ಎರಡು ಬೈಕ್‌ಗಳನ್ನು ಹೊತ್ತು ಬೋಟಲ್ಲಿರಿಸಿದರು. ನನ್ನ ಸರದಿ ಬಂದಾಗ, 'ಸಾಧ್ಯವಿಲ್ಲ'ವೆಂದೇ ಹೇಳಿದರು. ಕಾರಣ ಬೋಟ್ ಮತ್ತು ಜೆಟ್ಟಿಯ ನಡುವೆ ತುಂಬಾ ಅಂತರವಿತ್ತು. ಬೋಟಿನ ಡ್ರೈವರ್ ಸುಮ್ಮನೆ ಸಮಯ ಕಳೆಯುವುದೇತಕ್ಕೆ? ಎಂದು ಬೋಟ್ ಸ್ಟಾರ್ಟ್ ಮಾಡಲು ತೊಡಗಿದ. 'ಅಯ್ಯೋ ಹಾಗೆ ಹೇಳಬೇಡಿ, ಹೇಗಾದರೂ ಹತ್ತಿಸಿ' ಎಂದು ನಾವು ಗೋಗರೆದೆವು. ಬೋಟ್‌ನಲ್ಲಿದ್ದ ಕೆಲವರು 'ನಮ್ಮ ಊರಿಗೆ ಬಂದ ಅತಿಥಿಗಳಲ್ಲವೇ? ಎಲ್ಲರೂ ಸೇರಿ ಪ್ರಯತ್ನಿಸಿದರೆ ಆಗದೆ?' ಎಂದು ಹೇಳಿದವರೇ ನಾಲ್ಕೆಂಟು ಮಂದಿ ಇಳಿದು ಬಂದು ಲೀಲಾ ಜಾಲವಾಗಿ ಬೈಕನ್ನು ಹೊತ್ತು ಬೋಟ್‌ನಲ್ಲಿಟ್ಟರು. ನನಗೆ ಆಶ್ಚರ್ಯವೂ ಆನಂದವೂ ಒಟ್ಟಿಗೇ ಉಂಟಾದ ಕ್ಷಣವದು.

ಒಂದೂವರೆ ಗಂಟೆಯ ಪ್ರಯಾಣದ ಬಳಿಕ ನಾವು ತೀರಕ್ಕೆ ತಲುಪಿದೆವು. ಎಲ್ಲಿಗೆ ಹೋಗುವುದೆಂದು ಸಂಶಯಗೊಂಡು ನಿಂತಿರುವಾಗ ಒಬ್ಬ ಯುವಕ ಬಂದು ನೀವು ಕೇರಳದವರೇನು? ಎಂದು ಪ್ರಶ್ನಿಸಿದ ಬಳಿಕ ನಮ್ಮೊಂದಿಗೆ ಗಂಗಾಸಾಗರ್ ವರೆಗೆ ಬಂದ. ಗಂಗಾಸಾಗರ್ ಆ ದಡದಿಂದ ಸಾಮಾನ್ಯ 30 ಕಿ.ಮೀ. ದೂರವಿತ್ತು. ಅಲ್ಲಿ ಒಂದು ಅತಿಥಿ ಗೃಹದಲ್ಲಿ ನಮ್ಮನ್ನು ತಂಗಲು ಹೇಳಿ ನಾಳೆ ಭೇಟಿಯಾಗೋಣ ಎಂದು ಹೇಳಿದ. ಆತನ ಎಷ್ಟೋ ಮಂದಿ ಗೆಳೆಯರೂ, ಸಂಬಂಧಿಕರೂ ಕೇರಳದಲ್ಲಿ ಕೆಲಸ ಮಾಡುತ್ತಿದ್ದಾರಂತೆ. ಅನ್ಯ ರಾಜ್ಯ ಕಾರ್ಮಿಕರೆಂದು ತಿಳಿಯಲ್ಪಡುವ ಬಂಗಾಳಿಗಳು ಇವರು.

ಮಾರನೆಯ ಬೆಳಗ್ಗೆ ಕಾಫಿ ಕುಡಿದು ಕ್ಯಾಮರಾ ತೆಗೆದು ಹೊರಟಾಗ ಹಿಂದಿನ ದಿನ ಭೇಟಿಯಾದ ಯುವಕ ದಿನೇಶ್ ಬಂದಿದ್ದ. ಅವನು ನಮ್ಮನ್ನು ಅವನ ಗ್ರಾಮಕ್ಕೆ ಕರೆದುಕೊಂಡು ಹೋದ. ಬತ್ತದ ಬಯಲುಗಳಿಂದ ಕೂಡಿದ ಸುಂದರಗ್ರಾಮ. ಹುಲ್ಲು ಛಾವಣಿಯ ತಗ್ಗಾದ ದೊಡ್ಡ ಮನೆಗಳು, ಬತ್ತದ ಗದ್ದೆಗಳ ಮಧ್ಯೆ ಅಲ್ಲಲ್ಲಿ ದೊಡ್ಡ ಕೊಳಗಳು. ಅದರಲ್ಲಿ ತುಂಬಾ ಮೀನುಗಳು. ವೀಳ್ಯದೆಲೆ ಇವರ ಪ್ರಧಾನ ಕೃಷಿ. ದಾರಿಯಲ್ಲಿ ಕಂಡವರಲ್ಲೆಲ್ಲ. ದಿನೇಶ್, ನಮ್ಮನ್ನು ಕೇರಳದಿಂದ ಬಂದವರೆಂದು ಹೇಳಿದ. ನಮ್ಮ ಊರಿಗೆ ವಿದೇಶಿಯರು ಬಂದಾಗ ನಾವು ಗೌರವ ತೋರಿಸುವಂತೆ, ಅವರು ನಮಗೆ ಆದರ ಸೂಚಿಸುತ್ತಿದ್ದರು. ಅವರ 'ಅರಬ್ಬಿ'ಗಳಲ್ಲವೇ ನಾವು? ಸ್ವಲ್ಪ ಮುಂದೆ ಬಂದಾಗ ಒಬ್ಬ ಯುವಕ ಬಂದು ನನ್ನನ್ನು ಆಲಿಂಗಿಸಿದ. ಅವನಿಗೆ ಸ್ವಲ್ಪ ಮಟ್ಟಿಗೆ ಮಲೆಯಾಳಂ ಬರುತ್ತಿತ್ತು. ಕೇರಳದ ಹಲವೆಡೆಗಳಲ್ಲಿ ಆತ ಕೆಲಸ ಮಾಡಿದ್ದ. ಕೇರಳಕ್ಕೆ ಪುನಃ ಬರುವ ಆಲೋಚನೆಯಲ್ಲಿದ್ದೇನೆ ಎಂದೂ ಸೂಚಿಸಿದ.

ದಿನೇಶ್ ಮಧ್ಯಾಹ್ನದ ಊಟಕ್ಕೆ ನಮ್ಮನ್ನು ಆಮಂತ್ರಿಸಿದ. ಹೊಸ ಊರಿನ ಆಹಾರಕ್ರಮ ತಿಳಿಯಬಹುದಲ್ಲವೇ? ಕೂಡಲೇ ಆಮಂತ್ರಣ ಸ್ವೀಕರಿಸಿದೆವು. ಮಲ್ಲಿಗೆ ಮೊಗ್ಗಿನಂತಿರುವ ಅಕ್ಕಿಯ ಅನ್ನ. ತರಕಾರಿಗಳಿಂದ ತಯಾರಿಸಿದ ಎರಡು ಮೂರು ಬಗೆಯ ಪದಾರ್ಥಗಳು. ಹುರಿದ ಮೀನು. ಪುಷ್ಕಳವಾಗಿಯೇ ಉಂಡೆವು. ಊಟದ ಮಧ್ಯೆ ದಿನೇಶನ ತಾಯಿ, 'ಈ ತರಕಾರಿಗಳೆಲ್ಲ ನಾವು ಬೆಳೆದುದೇ ಆಗಿದೆ. ಅಕ್ಕಿಯೂ ನಮ್ಮ ಗದ್ದೆಯಲ್ಲಿ ಬೆಳೆದುದೇ. ಇಂದು ಬೆಳಿಗ್ಗೆ ನಮ್ಮ ಕೊಳದಿಂದಲೇ ಹಿಡಿದ ಮೀನು ಇದು ಎಂದು ಹೇಳಿದರು.

ನಮ್ಮ ಊರಿನಲ್ಲಿ ಯಾವುದಾದರೂ ಒಂದು ಮನೆಯಿಂದ ಹೀಗಿರುವ ಊಟ ದೊರಕೀತೇ? ಹೊಟ್ಟೆ ತುಂಬ ಊಟ ಮಾಡಿದ ನಾವು ಎಲ್ಲರನ್ನೂ ಸೇರಿಸಿ ಫೋಟೋ ತೆಗೆದೆವು. ದಿನೇಶನಿಗೆ ಹಾಗೂ ಕುಟುಂಬಕ್ಕೆ ಕೃತಜ್ಞತೆ ಸಲ್ಲಿಸಿ ಅಲ್ಲಿಂದ ಹೊರಟೆವು.

ಹಿಮಾಲಯದಿಂದ ಹೊರಟು, ಅಲಕನಂದ, ಮಂದಾಕಿನೀ, ಸರಸ್ವತಿಗಳೆಂಬ ಹಲವು ಹೆಸರಿನಲ್ಲಿ ಹರಿದು ಹೃಷಿಕೇಶದಲ್ಲಿ ಸಂಗಮಿಸಿ ಸಾಗರವನ್ನು ಸೇರುವ ಸ್ಥಳವೇ ಗಂಗಾಸಾಗರ್. ಪಶ್ಚಿಮ ಬಂಗಾಳದ ಒಂದು ದ್ವೀಪವಿದು. ಸಾಹಸಿಗರನ್ನು, ಪ್ರವಾಸಿಗರನ್ನು ಕೈಬೀಸಿ ಕರೆಯುವ ತಾಣ. ಸಾವಿರಾರು ಎಕರೆಯಷ್ಟು ವಿಸ್ತಾರವಾಗಿ ಹರಡಿರುವ ಹೊೖಗೆ, ಮೇಲೆ ವಿಶಾಲವಾದ ನೀಲಾಕಾಶ. ಶಾಂತವಾದ ಸಮುದ್ರ. ಗಂಗಾನದಿ ಬಂಗಾಳಕೊಲ್ಲಿಯನ್ನು ಸೇರುವಲ್ಲಿ ಮಕರ ಸಂಕ್ರಾಂತಿಯಂದು 'ಗಂಗಾಸಾಗರ್ ಮೇಳ' ನಡೆಯುತ್ತದೆ. ಕುಂಭಮೇಳ ಬಿಟ್ಟರೆ ಇದು ಅತ್ಯಂತ ಹೆಚ್ಚು ಜನರು ಸೇರುವ ಉತ್ಸವವಾಗಿದೆ. ಇಲ್ಲಿ ದಡದಲ್ಲಿ ಕಪಿಲಮುನಿಯ ಆಶ್ರಮವಿದೆ. 1973ರಲ್ಲಿ ಈ ಆಶ್ರಮ ಸ್ಥಾಪಿತವಾಯಿತು. ಅದಕ್ಕೂ ಮುಂಚೆ ಮೂರು ದೇವಸ್ಥಾನಗಳಿದ್ದು, ಅವೆಲ್ಲವನ್ನು ಸಾಗರ ನುಂಗಿ ಹಾಕಿತ್ತು.

ಅತ್ಯಂತ ಹೆಚ್ಚು ವಲಸೆಗಾರ ಪಕ್ಷಿಗಳು ಕಂಡು ಬರುವ ತಾಣವಿದು. ಇದು ರಾಮಾಯಣ, ಮಹಾಭಾರತಗಳಲ್ಲಿಯೂ, ಬಂಕಿಂಚಂದ್ರ, ರವೀಂದ್ರನಾಥ್ ಠಾಗೋರ್‌ರಂತಹ ಪ್ರಸಿದ್ಧರ ಸಾಹಿತ್ಯ ಕೃತಿಗಳಲ್ಲಿಯೂ ಉಲ್ಲೇಖಿಸಲ್ಪಟ್ಟ ಸ್ಥಳವಾಗಿದೆ. ಮತ್ತೂ ಒಂದೆರಡು ದಿನಗಳು ನಾನೂ ನನ್ನ ಗೆಳೆಯನೂ ಅಲ್ಲೇ ಸುತ್ತಾಡಿದೆವು. ಹಿಂತಿರುಗುವ ದಿನ ಭರತವಿದ್ದುದರಿಂದ ಬೋಟ್ ತೀರದ ಅತೀ ಸಮೀಪಕ್ಕೆ ಬಂದಿತ್ತು. ಬೈಕ್‌ನ್ನು ಓಡಿಸಿಯೇ ಬೋಟ್‌ನೊಳಕ್ಕೆ ಹತ್ತಿಸಲು ಸಾಧ್ಯವಾಯಿತು. ಹೀಗೆಯೇ ದಡ ಸೇರಿದ ಬಳಿಕ ಇಳಿಸಲೂ ಸಾಧ್ಯವಾಯಿತು. ಗ್ರಾಮದ ಸೌಂದರ್ಯವನ್ನು ಹಿಂದಿಕ್ಕುತ್ತಾ ಕಲ್ಕತ್ತೆಗೆ ಬಂದು ಬೈಕನ್ನು ರೈಲುಗಾಡಿಯಲ್ಲಿ ಢಿಲ್ಲಿಗೆ ಕಳುಹಿಸಿ, ಸುರೇಶನನ್ನು ಬೀಳ್ಕೊಟ್ಟು ನಾನೂ ಢಿಲ್ಲಿಗೆ ಹೋಗಲು ಸಿದ್ಧನಾದೆ.

# ಸಾಹಸೀ ಯಾತ್ರಿಕ

'ಭೂಮಿಯು ದುಂಡಗಾಗಿದೆ. ಒಂದು ದಿಕ್ಕಿನಲ್ಲಿ ಮನುಷ್ಯನು ನೇರವಾಗಿ ಪ್ರಯಾಣ ಮಾಡಿದರೆ ಅವನು ಮೊದಲಿದ್ದ ಸ್ಥಳಕ್ಕೆ ಬರುತ್ತಾನೆ' ಎಂಬ ಮಾತನ್ನು ಸಾಧಿಸಿ ತೋರಿಸಿ ಕೊಟ್ಟವನು ಸಾಹಸಿ ನಾವಿಕನಾದ ಮೆಗಲನ್ ಎಂಬಾತ. ಇವನು ಪೋರ್ಚುಗಲ್ಲಿನವನಾದರೂ ಈತನ ಕಾರ್ಯಕ್ಕೆ ಪ್ರೋತ್ಸಾಹವಿತ್ತವನು ಸ್ಪೈಯಿನ್ ದೇಶದ ದೊರೆ.

ಮೆಗಲನ್‌ನ ಭೂಪ್ರದಕ್ಷಿಣೆಯ ಕಾರ್ಯವು ಸಾಮಾನ್ಯವಾಗಿರಲಿಲ್ಲ. ಸುಮಾರು 25 ಸಾವಿರ ಮೈಲುಗಳಷ್ಟು ಸುತ್ತಳತೆಯ ದೂರವನ್ನು ಹಡಗಿನಲ್ಲಿ ಸಂಚರಿಸುವುದೆಂದರೆ ಒಂದು ಸಾಹಸವೇ ಸರಿ.

ಸ್ಪೈಯಿನ್ ದೇಶದಿಂದ ನೇರ ಪಶ್ಚಿಮಕ್ಕೆ ಪ್ರಯಾಣ ಮಾಡಿದರೆ ಕೊನೆಗೆ ಇದೇ ಸ್ಥಳಕ್ಕೆ ಮರಳಿ ತಲಪಬಹುದು ಎಂದು ಮೆಗಲನ್ ಆತ್ಮವಿಶ್ವಾಸದಿಂದ ಹೇಳಿದನು.

ಉತ್ತರ ಅಮೇರಿಕಾ ಮತ್ತು ದಕ್ಷಿಣ ಅಮೇರಿಕಾದ ನಡುವೆ ಹಡಗು ಪ್ರಯಾಣಕ್ಕೆ ದಾರಿ ಇಲ್ಲ ಎಂಬುದನ್ನು ನಂಬಿದ ಮೆಗಲನ್, "ಒಂದು ಕಡೆ ಅಟ್ಲಾಂಟಿಕ್ ಮತ್ತು ಶಾಂತ ಸಾಗರಗಳಿಗೆ ಸಂಬಂಧ ಕಲ್ಪಿಸುವ ಜಲಸಂಧಿ ಇರಬೇಕು. ಇದನ್ನು ಕಂಡುಹಿಡಿದು ಭೂಮಿ ದುಂಡಗಾಗಿದೆ ಹಾಗೂ ಹೊಸದಾಗಿ ಸಾಂಬಾರು ಜೀನಸುಗಳ ಪ್ರದೇಶವನ್ನು ಪತ್ತೆಹಚ್ಚಿ ದೇಶಕ್ಕೆ ಐಶ್ವರ್ಯವನ್ನು ಹೊತ್ತು ತರುತ್ತೇನೆ" ಎಂದು ಸಾರಿದನು.

ಕ್ರಿ.ಶ. 1519 ಸೆಪ್ಟಂಬರ್ 20 ರಂದು ಐದು ಹಡಗುಗಳನ್ನು ಸ್ಪೈಯಿನ್ ದೊರೆಯಿಂದ ಪಡೆದು 239 ಜನರ ತಂಡದೊಡನೆ ಸಮುದ್ರದಲ್ಲಿ ನೇರ ಪಶ್ಚಿಮಕ್ಕೆ ಪ್ರಯಾಣ ಮಾಡಿದನು. ಇದೊಂದು ಅಪಾಯಕಾರಿ ಪ್ರಯಾಣವಾಗಿತ್ತು. ಅಮೇರಿಕಾ ತೀರ ತಲುಪಿದಾಗ ಅತಿಯಾದ ಚಳಿಯಿಂದ ತ್ತರಿಸತೊಡಗಿದನು. ಹಡಗುಗಳನ್ನು ಲಂಗರು ಹಾಕಿ ಕೆಲವು ದಿನ ತಂಗಬೇಕಾಯಿತು. ಹೆದ್ದೆರೆಗಳು ಹಡಗುಗಳಿಗೆ ಅಪ್ಪಳಿಸತೊಡಗಿದುವು. ಚಳಿಗಾಲದ 5 ತಿಂಗಳುಗಳನ್ನು ಸುರಕ್ಷಿತವಾಗಿ ಕಳೆದ ನಂತರ ಪ್ರಯಾಣವನ್ನು ಮುಂದುವರಿಸಲಾಯಿತು.

ಮೆಗಲನ್ ಪ್ರಯಾಣ ಮುಂದುವರಿಸುತ್ತಿದ್ದಂತೆ ಭಯಂಕರ ಬಿರುಗಾಳಿ ಬೀಸಿದುದರಿಂದ ಒಂದು ಹಡಗು ದಡಕ್ಕೆ ಅಪ್ಪಳಿಸಿ ಒಡೆದು ಹೋಯಿತು. ಆ ಹಡಗಿನಲ್ಲಿಯೂ ಆಹಾರ ವಸ್ತುಗಳಿದ್ದುದರಿಂದ ಮೆಗಲನ್‌ಗೆ ಚಿಂತೆಯಾಯಿತು.

ಮೆಗಲನ್ ಧೈರ್ಯ ತಂದುಕೊಂಡು ಪ್ರಯಾಣ ಬೆಳೆಸಿದ. ಮುಂದೆ ಶಾಂತ ಸಾಗರವನ್ನು ತಲುಪಿದ. ಆದರೆ ಇಲ್ಲಿ ಮೆಗಲನ್‌ಗೆ ದುರದೃಷ್ಟವೊಂದು ಕಾದಿತ್ತು. ಉಳಿದ ನಾಲ್ಕು ಹಡಗುಗಳಲ್ಲಿ ಆಂಟೋನಿಯೋ ಎಂಬ ಒಂದು ಹಡಗಿನ ಜನರು ದಂಗೆಯೆದ್ದು ಗುಪ್ತವಾಗಿ ಸ್ಪೈಯಿನ್ ಕಡೆಗೆ ತಿರುಗಿಸಿದರು. ಇದರಿಂದಾಗಿ ಆಹಾರದ ಕೊರತೆ ಮೆಗಲನ್‌ಗೆ ಉಂಟಾಯಿತು. ಕೆಲವು ನಾವಿಕರು ಸತ್ತರು. ಮುಂದೆ ಕ್ರಿ.ಶ. 1521 ರಲ್ಲಿ ಮೆಗಲನ್ ತಂಡಕ್ಕೆ ಫಿಲಿಫೈನ್ಸ್ ದ್ವೀಪಗಳನ್ನು ಕಂಡುಹಿಡಿದು, ಅಲ್ಲಿಯ ಜನರನ್ನು ಬಗ್ಗು ಬಡಿದು ಆ ದ್ವೀಪಗಳನ್ನು ವಶಪಡಿಸಬೇಕೆಂಬ ಆಸೆ ಉಂಟಾಯಿತು. ಇಲ್ಲಿ ನಡೆದ ಕದನದಲ್ಲಿ ಮೆಗಲನ್ ಕೊಲ್ಲಲ್ಪಟ್ಟನು.

ಅಳಿದುಳಿದ 49 ಜನರು 1522 ನೇ ಸೆಪ್ಟಂಬರ್ 8ರಂದು ಸ್ಪೈಯಿನ್ ತಲುಪಿದರು. ಆ ಹಡಗಿನಲ್ಲಿ 26 ಟನ್ ಸಾಂಬಾರ ಜೀನಸುಗಳಿದ್ದುವು. ಇದರಿಂದ ಸ್ಪೈಯಿನ್ ದೊರೆ ಮಾಡಿದ ಖರ್ಚಿಗಿಂತಲೂ ಹೆಚ್ಚು ಮೌಲ್ಯ ಕೂಡಿ ಬಂತು. ಮೆಗಲನ್‌ನ ಸಾಹಸದಿಂದಾಗಿ ಭೂಮಿಯ ಅಜ್ಞಾತ ಪ್ರದೇಶಗಳ ಅರಿವು ಯುರೋಪಿಯನ್ನರಿಗುಂಟಾಯಿತು.

## ಮೌಲ್ಯನಿರ್ಣಯ ಚಟುವಟಿಕೆಗಳು

1) ಹರಿ ಮತ್ತು ಗೋಪು ಶಾಲೆ ಬಿಟ್ಟು ಮನೆಗೆ ತೆರಳುತ್ತಿದ್ದಾಗ ರಸ್ತೆಯಲ್ಲಿ ವೇಗವಾಗಿ ಬಂದ ಕಾರು ಗೋಪುವನ್ನು ಸ್ಪರ್ಶಿಸಿ ಮುಂದೆ ಹೋಗುತ್ತದೆ. ಇದರಿಂದಾಗಿ ರಸ್ತೆಗೆ ಬಿದ್ದ ಗೋಪುವಿಗೆ ಸಣ್ಣ ಪುಟ್ಟ ಗಾಯಗಳಾದುವು. ಕೂಡಲೇ ಹರಿಯು ಗೋಪುವನ್ನು ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸುತ್ತಾನೆ. ವೈದ್ಯರು ಗೋಪುವಿಗಾದ ಗಾಯಕ್ಕೆ ಔಷಧವನ್ನು ಹಚ್ಚುತ್ತಾರೆ.

   ಗೋಪು, ಹರಿ ಮತ್ತು ವೈದ್ಯರೊಳಗೆ ನಡೆದ ಸಂಭಾಷಣೆ ಏನಾಗಿರಬಹುದು? ಊಹಿಸಿ ಬರೆಯಿರಿ.

2) ನೀವು ನೋಡಿದ ಯಾವುದಾದರೊಂದು ಬೆಟ್ಟದ ಬಗ್ಗೆ ವರ್ಣಿಸಿ ಬರೆಯಿರಿ.

3) ನಾವು ರಸ್ತೆಯನ್ನು ಬಳಸುವಾಗ ವಹಿಸಬೇಕಾದ ಜಾಗ್ರತೆಯ ಕುರಿತು ತಿಳಿಸುತ್ತಾ ಗೆಳೆಯ/ಗೆಳತಿಗೊಂದು ಪತ್ರ ಬರೆಯಿರಿ.

4) ಅಡಿಗೆರೆ ಎಳೆದ ಪದವನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ಬರೆಯಿರಿ.

   - ವಿದ್ಯುತ್ ದೀಪಗಳ ಬೆಳಕಿಗೆ ಅರಮನೆಯು <u>ಕಂಗೊಳಿಸುತ್ತಿತ್ತು</u>.
   - ನಾವು ಮೃಗಾಲಯದಲ್ಲಿರುವ ಹಲವಾರು ಪ್ರಾಣಿಗಳನ್ನು <u>ವೀಕ್ಷಿಸಿದೆವು</u>
   - ರಮೇಶನು ನಡೆದುಕೊಂಡು ಹೋಗುತ್ತಿದ್ದಾಗ <u>ಅಕಸ್ಮಿಕವಾಗಿ</u> ಜಾರಿ ಬಿದ್ದನು.
   - ಸುಮನಳ ದೀನ ಸ್ಥಿತಿಯನ್ನು ಕಂಡು ನಮಿತಳಿಗೆ <u>ಕನಿಕರ ಮೂಡಿತು</u>
   - ಅಪಘಾತದ ಸುದ್ದಿ ತಿಳಿದಾಗ ಸುಂದರನಿಗೆ <u>ಆಕಾಶವೇ ಕಳಚಿ</u> ಬಿದ್ದಂತಾಯಿತು.

# 4. ಜೀವನ ಕಲೆ

ಜೀವನವೂ ಒಂದು ಕಲೆ, ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಆದರೂ ಉತ್ತಮವಾದ ಗುಣಗಳನ್ನು ಮೈಗೂಡಿಸಿಕೊಂಡು ಇತರರಿಗೆ ಉಪಕಾರ ಮಾಡಿ ಧನ್ಯತೆಯನ್ನು ಪಡೆಯುವುದೇ ಮಾನವ ಜೀವನದ ಗುರಿಯಾಗಿರಬೇಕು. ಹಂಚಿ ತಿನ್ನುವುದು, ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದು, ಧೈರ್ಯ, ವಿನಯ ಶೀಲತೆ, ಗುರುಹಿರಿಯರಲ್ಲಿ ಗೌರವ, ಮಾತಿಗೆ ತಪ್ಪದಿರುವುದು ಮುಂತಾದ ಉದಾತ್ತ ಗುಣಗಳನ್ನು ಮಕ್ಕಳಲ್ಲಿ ಬೆಳೆಸಬೇಕಾದುದು ಅಗತ್ಯ. ಯಾವ ವ್ಯಕ್ತಿಯೂ 'ಉತ್ತಮ'ಎಂದೆನಿಸಿಕೊಳ್ಳಲು ಇಂತಹ ಗುಣಗಳು ಅಗತ್ಯ ಎಂಬುದನ್ನು ಮಕ್ಕಳಿಗೆ ಮನದಟ್ಟು ಮಾಡುವ ಉದ್ದೇಶದಿಂದ ಈ ಘಟಕದಲ್ಲಿ 'ತೋಳ ಮತ್ತು ಕೊಕ್ಕರೆ' ಎಂಬ ಷಟ್ಪದಿ ಪ್ರಕಾರದಲ್ಲಿ ರಚಿತವಾದ ಕಥನ ಕವನವನ್ನೂ, 'ರಾಣ ಮತ್ತು ಅಕ್ಬರ'ಎಂಬ ಚಾರಿತ್ರಿಕ ನಾಟಕವನ್ನೂ, 'ನಿರೀಕ್ಷೆ'ಎಂಬ ಸಣ್ಣ ಕತೆಯನ್ನೂ 'ಸದಾಚಾರ' ಎಂಬ ಕೀರ್ತನೆಯನ್ನೂ ನೀಡಲಾಗಿದೆ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ-ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಪುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಸೂಕ್ತ ಸೂಚಕಗಳನ್ನು ರೂಪಿಸಿ ಸ್ವಂತ ಹಾಗೂ ಇತರರ ರಚನೆಗಳ ಮೌಲ್ಯ ನಿರ್ಣಯಿಸುವುದು.
- ಕೃತಿಯ ಕಥಾಪಾತ್ರಗಳು, ಸನ್ನಿವೇಶಗಳು, ಭಾಷಾಶೈಲಿ, ಮಂಡನೆಯ ರೀತಿ ಎಂಬಿತ್ಯಾದಿಗಳನ್ನು ಪರಿಗಣಿಸಿ ಓದಿದ ಕೃತಿಯ ಆಸ್ವಾದನಾ ಟಿಪ್ಪಣಿ ತಯಾರಿಸುವುದು.
- ಕಥೆ, ಕವಿತೆಗಳಲ್ಲಿ ಕಥಾಪಾತ್ರಗಳ ಮಾನಸಿಕ ಸ್ಥಿತಿ, ಅವುಗಳಿಗಿರುವ ಸ್ಥಾನ ಇತ್ಯಾದಿಗಳನ್ನು ಗುರುತಿಸಿ ಬಾಯ್ದೆರೆಯಾಗಿ ಮತ್ತು ಲಿಖಿತವಾಗಿ ಪಾತ್ರಚಿತ್ರಣ ಮಾಡುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಸೃಜನಾತ್ಮಕ ರಚನೆಗಳ ಭಾವವನ್ನು ಅರ್ಥೈಸಿಕೊಂಡು ನಾಟಕ, ಭಾವಾಭಿನಯ ಮತ್ತು ಮೂಕಾಭಿನಯಗಳ ಮೂಲಕ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸುವುದು ಮತ್ತು ವಾಚಿಕವಾಗಿ ಮಂಡಿಸುವುದು.
- ದೃಶ್ಯ-ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 4 : ಜೀವನ ಕಲೆ** ಸಮಯ : 6+8 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ತೋಳ ಮತ್ತು ಕೊಕ್ಕರೆ | • ಕಥನ ಕವನಗಳಂತಹ ಸಾಹಿತ್ಯ ರಚನೆಗಳನ್ನು ತಿಳಿಯುವುದು.<br>• ಓದಿ ಆಸ್ವಾದಿಸುವುದು.<br>• ಷಟ್ಪದಿ ಪ್ರಕಾರವನ್ನು ತಿಳಿಯುವುದು.<br>• ಭೋಗ ಷಟ್ಪದಿಯನ್ನು ಪರಿಚಯಿಸುವುದು.<br>• ಒಂದು ವ್ಯವಹಾರ ರೂಪದಿಂದ ಇನ್ನೊಂದು ವ್ಯವಹಾರ ರೂಪಕ್ಕೆ ಬದಲಾಯಿಸಿ ಬರೆಯುವುದು.<br>• ಆಶಯಗಳನ್ನು ಸ್ವತಂತ್ರವಾಗಿ ಉತ್ತಮ ಭಾಷೆ, ಶೈಲಿಯ ಮೂಲಕ ವ್ಯಕ್ತ ಪಡಿಸುವುದು. | • ಹಾಡುವುದು<br>• ಉತ್ತರಿಸುವುದು<br>• ಕಾರಣ ಬರೆಯುವುದು<br>• ಶೀರ್ಷಿಕೆ ನೀಡುವುದು<br>• ಟಿಪ್ಪಣಿ<br>• ಕಥೆ ಬರೆಯುವುದು<br>• ಪದ ವಿಂಗಡಣೆ<br>• ಹೋಲಿಸುವುದು | • ಕಥನ ಕವನಗಳ ಪುಸ್ತಕ<br>• ಸಿ.ಡಿ.<br>• ಷಟ್ಪದಿ ಕಾವ್ಯ | • ಟಿಪ್ಪಣಿ<br>• ಕಥೆ ಬರೆಯುವುದು<br>• ಹೋಲಿಸಿ ಬರೆಯುವುದು |
| 2. ರಾಣ ಮತ್ತು ಅಕ್ಬರ | • ನಾಟಕ ಪ್ರಕಾರವನ್ನು ತಿಳಿಯುವುದು<br>• ಚಾರಿತ್ರಿಕ ನಾಟಕಗಳ ಕುರಿತು ತಿಳಿಯುವುದು.<br>• ಸಹಾನುಭೂತಿ, ಪ್ರೀತಿ, ವಿಶ್ವಾಸಗಳು, ಮಾನವನಲ್ಲಿರಬೇಕಾದ ಉತ್ತಮ ಗುಣಗಳೆಂಬುದನ್ನು ತಿಳಿಯುವುದು.<br>• ನಾಟಕ ಅಭಿನಯಿಸುವುದು<br>• ನಾಟಕವನ್ನು ಕತೆಯಾಗಿ ರೂಪಾಂತರಿಸಿ ಬರೆಯುವುದು. | • ಚರ್ಚಿಸುವುದು<br>• ಉತ್ತರಿಸುವುದು<br>• ಸಂದರ್ಭ ತಿಳಿಸುವುದು<br>• ಪಾತ್ರ ಚಿತ್ರಣ<br>• ಊಹಿಸಿ ಬರೆಯುವುದು<br>• ಟಿಪ್ಪಣಿ ಬರೆಯುವುದು<br>• ಕಥೆ ಬರೆಯುವುದು<br>• ನಾಟಕಾಭಿನಯ | • ಚರಿತ್ರೆಗೆ ಸಂಬಂಧಿಸಿದ ಕಥೆಗಳು<br>• ಸಿ.ಡಿ.<br>• ನಾಟಕಗಳು, ಕತೆಗಳು | • ಪಾತ್ರ ಚಿತ್ರಣ<br>• ಟಿಪ್ಪಣಿ<br>• ಕಥೆ ಬರೆಯುವುದು |

# ಯೂನಿಟ್ ಗ್ರಿಡ್

**ಯೂನಿಟ್ 4 : ಜೀವನ ಕಲೆ**ಸಮಯ                                                    ಸಮಯ : 5+5 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3. ನಿರೀಕ್ಷೆ | • ಮಾನವರೆಲ್ಲರೂ ಒಂದೇ ಎಂಬ ಮನೋಭಾವ ಬೆಳೆಸುವುದು.<br>• ಮನುಷ್ಯರಲ್ಲಿ ಮೇಲು–ಕೀಳು ಎಂಬುದು ವರ್ತನೆಯಿಂದಲೇ ಹೊರತು ಹುಟ್ಟಿನಿಂದಲ್ಲ ಎಂಬುದನ್ನು ತಿಳಿಯುವುದು.<br>• ಕಥೆಯಲ್ಲಿ ಬರುವ ಪಾತ್ರದ ವೈಶಿಷ್ಟ್ಯವನ್ನು ಸ್ವಂತ ಭಾಷೆ, ಶೈಲಿಗಳ ಮೂಲಕ ವ್ಯಕ್ತಪಡಿಸುವುದು.<br>• ಒಂದು ವ್ಯವಹಾರ ರೂಪದಿಂದ ಇನ್ನೊಂದಕ್ಕೆ ಬದಲಾಯಿಸುವುದು. | • ಉತ್ತರಿಸುವುದು<br>• ಸಂದರ್ಭ ಗುರುತಿಸುವುದು<br>• ಸಂಭಾಷಣೆ ತಯಾರಿ<br>• ವರ್ಣನೆ<br>• ಪಾತ್ರ ಚಿತ್ರಣ | • ಪುರಾಣದ ಪುಣ್ಯಕಥೆಗಳು<br>• ಪುರಾಣನಾಮ ಚೂಡಾಮಣಿ<br>• ರಾಮಾಯಣದ ಕಥೆಗಳು<br>• ಯಕ್ಷಗಾನ ಸಿ.ಡಿ. | • ಪ್ರಶ್ನೋತ್ತರ<br>• ಸಂಭಾಷಣೆ ಟಿಪ್ಪಣಿ<br>• ವರ್ಣನ ಟಿಪ್ಪಣಿ<br>• ಪಾತ್ರ ಚಿತ್ರಣ |
| 4. ಸದಾಚಾರ | • ದಾಸ ಸಾಹಿತ್ಯದ ಬಗ್ಗೆ ತಿಳಿಯುವುದು<br>• ಪುರಂದರ ದಾಸರ ಕೀರ್ತನೆಗಳು ದಾಸ ಸಾಹಿತ್ಯದಲ್ಲಿ ಪ್ರಸಿದ್ಧವಾಗಿದೆ ಎಂಬುದನ್ನು ತಿಳಿಯುವುದು.<br>• ಕೀರ್ತನೆಗಳು ಭಕ್ತಿಯೊಂದಿಗೆ ಸದಾಚಾರದ ಸಂದೇಶಗಳನ್ನು ನೀಡುತ್ತವೆ ಎಂಬುದನ್ನು ತಿಳಿಯುವುದು.<br>• ಕೀರ್ತನೆಗಳನ್ನು ಹಾಡಿ ಆಸ್ವಾದಿಸುವುದು.<br>• ಇತರ ಕೀರ್ತನೆಗಳನ್ನು ಸಂಗ್ರಹಿಸುವುದು. | • ರಾಗ, ತಾಳ, ಲಯಬದ್ಧವಾಗಿ ಹಾಡುವುದು.<br>• ಸಾಲು ಗುರುತಿಸುವುದು<br>• ಸ್ವಾರಸ್ಯ ಬರೆಯುವುದು<br>• ಲೇಖನ ಬರೆಯುವುದು | • ಪುರಂದರ ದಾಸರ ಕೀರ್ತನೆಗಳು<br>• ಸಿ.ಡಿ. | • ಹಾಡುವಿಕೆ<br>• ಸ್ವಾರಸ್ಯ ಟಿಪ್ಪಣಿ<br>• ಲೇಖನ |

# 1. ತೋಳ ಮತ್ತು ಕೊಕ್ಕರೆ

## ಚಟುವಟಿಕೆಗಳು

ಪರಸ್ಪರ ಸಹಾಯ ಮಾಡುವ ಗುಣ ಎಲ್ಲರಲ್ಲೂ ಬೆಳೆಯಬೇಕು. ಕಷ್ಟದಲ್ಲಿರುವವರನ್ನು ನೋಡಿ ಯಾರೂ ನಗಾಡಬಾರದು. ಸಹಾಯ ಮಾಡಿದವರನ್ನು ಮರೆಯಬಾರದು ಎಂಬ ಉದಾತ್ತ ಗುಣಗಳು ಈ ಕಥನ ಕವನದಲ್ಲಿದೆ ಎಂಬ ವಿಚಾರವನ್ನು ಹೇಳಿ ಪಾಠ ಪ್ರವೇಶ ಮಾಡಬಹುದು.

## ಹಾಡಿರಿ

ಹಾಡುವ ಚಟುವಟಿಕೆಯನ್ನು ಆರಂಭಿಸುವ ಮೊದಲು ವಿದ್ಯಾರ್ಥಿಗಳಲ್ಲಿ ಇತರರಿಗೆ ಅವರು ಉಪಕಾರ ಮಾಡಿರುವ ಸಂದರ್ಭಗಳನ್ನು ನೆನಪಿಸಿ ಹೇಳಲು ಹೇಳುವುದು. ಅಧ್ಯಾಪಕರು ತಮಗೆ ತಿಳಿದಿರುವ ಕತೆ,ಪದ್ಯವನ್ನು ಹೇಳುವುದು. ಬಳಿಕ ತಮಗಿಷ್ಟವಾದ ರೀತಿಯಲ್ಲಿ ಪುಸ್ತಕದಲ್ಲಿರುವ ಹಾಡನ್ನು ಹಾಡಿಸುವುದು. ಇಲ್ಲಿ ಯಾವ ತಂತ್ರ ಬೇಕಾದರೂ ಬಳಸಬಹುದು. ಕೊನೆಯಲ್ಲಿ ಧ್ವನಿಸುರುಳಿಯ ಮೂಲಕ ಮಕ್ಕಳಿಗೆ ಈ ಹಾಡನ್ನು ಕೇಳಿಸುವುದು.

## ಉತ್ತರಿಸಿರಿ

ಪದ್ಯ ಎಷ್ಟರ ಮಟ್ಟಿಗೆ ಅರ್ಥವಾಗಿದೆ ಎಂದು ತಿಳಿಯಲು ಈ ಚಟುವಟಿಕೆ ಅತೀ ಅಗತ್ಯ. ಇಂತಹ ಚಟುವಟಿಕೆಗಳು ಮಕ್ಕಳ ಆಶಯ ಗ್ರಹಣ ಸಾಮರ್ಥ್ಯ, ಬರವಣಿಗೆ ಮತ್ತು ಸೃಜನಾತ್ಮಕತೆಗೆ ಹೆಚ್ಚು ಒತ್ತು ನೀಡುತ್ತದೆ. ಆದುದರಿಂದ ಈ ಚಟುವಟಿಕೆಯನ್ನು ಮಕ್ಕಳೇ ಮಾಡುವುದು ಉತ್ತಮ.

## ಕಾರಣ ಬರೆಯಿರಿ

ಈ ಚಟುವಟಿಕೆಯೂ ಮಕ್ಕಳ ಸೃಜನಾತ್ಮಕತೆ, ಆಸ್ವಾದನೆಗೆ ಹೆಚ್ಚು ಪ್ರಾಧಾನ್ಯವನ್ನು ನೀಡುತ್ತದೆ. ಮಕ್ಕಳು ಪದ್ಯವನ್ನು ಅರ್ಥೈಸಿಕೊಂಡು ಓದಿದ ಬಳಿಕ ತಮಗೆ ಇಷ್ಟವಾದ ಸಾಲುಗಳನ್ನು ಗುರುತಿಸಿ ಬರೆಯಲಿ. ಯಾಕೆ ಇಷ್ಟವಾಯಿತು ಎಂಬ ಕಾರಣವನ್ನು ಬರೆಯಲಿ. ಈ ಚಟುವಟಿಕೆಯನ್ನು ವೈಯಕ್ತಿಕವಾಗಿ ಅಥವಾ ಗುಂಪಿನಲ್ಲಿ ಬರೆದು ಮಂಡಿಸಲಿ.

ಉದಾಹರಣೆಗೆ :

> ಉದ್ದವಾದ ತನ್ನ ಕೊಕ್ಕ
> ನುದ್ದವಾಗಿ ನೀಡಿ ಬಾಯೊ
> ಳಿದ್ದ ಎಲುಬು ಹೊರಗೆ ತೆಗೆದು ತಿನಿಸ ಕೇಳಿದ।

ಈ ಸಾಲುಗಳು ನನಗೆ ಇಷ್ಟವಾಯಿತು. ಇವುಗಳು ಲಯಬದ್ಧವಾಗಿದ್ದು ಆದಿಪ್ರಾಸದಿಂದ ಕೂಡಿವೆ. ಉದ್ದವಾದ ಕಾಲುಗಳು ಮತ್ತು ಕೊಕ್ಕನ್ನು ಹೊಂದಿರುವ ಕೊಕ್ಕರೆಯ ಚಿತ್ರ ಕಣ್ಣ ಮುಂದೆ ಬರುತ್ತದೆ. ಬೇರೊಬ್ಬನ ಗಂಟಲಿನಲ್ಲಿ ಸಿಲುಕಿರುವ ಎಲುಬನ್ನು ತನ್ನ ಕೊಕ್ಕಿನ ಸಹಾಯದಿಂದ ತೆಗೆವ ಪರೋಪಕಾರ ಬುದ್ಧಿಯನ್ನು ಸರಳವಾಗಿ ಮಂಡಿಸುವಲ್ಲಿ ಕವಿ ಯಶಸ್ವಿಯಾಗಿದ್ದಾರೆ.

## ಶೀರ್ಷಿಕೆ ನೀಡಿರಿ

ಇದು ಸೃಜನಾತ್ಮಕ ಚಟುವಟಿಕೆಯಾಗಿದೆ. ಮಕ್ಕಳನ್ನು ಹಲವು ಹೆಸರುಗಳಿಂದ ಕರೆಯುವಂತೆ ಕತೆ, ಪದ್ಯಗಳಿಗೂ ತಮಗಿಷ್ಟವಾದ, ಸೂಕ್ತವಾದ ಹೆಸರು ನೀಡಬಹುದು ಎಂದು ಹೇಳುವುದು. ಮಕ್ಕಳು ಕವನವನ್ನು ಓದಿ ಆಸ್ವಾದಿಸಿದ ಬಳಿಕ

ಅಲ್ಲಿ ಬರುವ ಚಿತ್ರ, ಸನ್ನಿವೇಶ, ಪಾತ್ರಗಳನ್ನು ಗಮನಿಸಿ ಉತ್ತಮವಾದ ಶೀರ್ಷಿಕೆಗಳನ್ನು ನೀಡಲಿ.

- ನಯವಂಚಕ
- ದುಷ್ಟಬುದ್ಧಿ
- ಪರೋಪಕಾರ
-
-

### ಟಿಪ್ಪಣಿ ಬರೆಯಿರಿ

ಯಾವುದೇ ಒಂದು ಪದ್ಯ ಅಥವಾ ಗದ್ಯದ ರಸಾಸ್ವಾದನೆ ಆಗಿದೆಯೇ ಎಂಬುದನ್ನು ಈ ಚಟುವಟಿಕೆಯ ಮೂಲಕ ತಿಳಿಯಬಹುದು. ಪದ್ಯವನ್ನು ಹಾಡಿ ಆಸ್ವಾದಿಸಿದ ಮಕ್ಕಳು ಕಥನ ಕವನದ ಕತೆಯನ್ನು ತಿಳಿದುಕೊಳ್ಳುವರು. ಪದ್ಯದ ಆಶಯವನ್ನು ಕಥಾ ಪಾತ್ರಗಳನ್ನು ಗಮನಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವೈಯಕ್ತಿಕವಾಗಿ ಬರೆಯಲಿ. ಅದನ್ನು ಮಂಡಿಸಿದ ಬಳಿಕ ಗುಂಪುಗಳಲ್ಲಿ ಕುಳಿತು ಸರಿಪಡಿಸಿ ಬರೆದು ಮಂಡಿಸಲಿ.

ಆಶಯ ಪೂರ್ಣತೆ, ಸಂಕ್ಷಿಪ್ತತೆ, ಶೀರ್ಷಿಕೆಗಳಿಗೆ ಹೆಚ್ಚಿನ ಪ್ರಾಧಾನ್ಯ ನೀಡಲಿ.

**ಪರೋಪಕಾರವೇ ಪರಮ ಧರ್ಮ**

ಅಡವಿಯಲ್ಲಿ ಆಹಾರವನ್ನು ಹುಡುಕುತ್ತಿದ್ದ ತೋಳಕ್ಕೆ ಜಿಂಕೆ ಮರಿಯೊಂದು ಕಂಡಿತು. ಅದನ್ನು ಹಿಡಿದು ತಿನ್ನುತ್ತಿರುವಾಗ ಅದರ ಎಲುಬು ಗಂಟಲಲ್ಲಿ ಸಿಲುಕಿಕೊಂಡು ತುಂಬಾ ನೋವನ್ನುಂಟುಮಾಡಿತು. ಇದನ್ನು ತೆಗೆಯುವವರು ಯಾರಾದರೂ ಇದ್ದಾರೆಯೇ? ಎಂದು ಸುತ್ತಲೂ ನೋಡಿತು. ಯಾರನ್ನೂ ಕಾಣದಾಯಿತು. 'ಈ ಎಲುಬನ್ನು ತೆಗೆದು ಸಹಾಯ ಮಾಡಿದವರಿಗೆ ಏನಾದರೂ ತಿನಿಸು ಕೊಡುತ್ತೇನೆ'ಎಂದು ಹೇಳಿತು. ಇದರ ಕೂಗಾಟವನ್ನು ಕೇಳಿ ಉದ್ದ ಕಾಲಿನ ಕೊಕ್ಕರೆ ತನ್ನ ನೀಳ ಕೊಕ್ಕಿನ ಸಹಾಯದಿಂದ ಎಲುಬನ್ನು ತೆಗೆದು ಸಹಾಯ ಮಾಡಿತು. ಮತ್ತು 'ತನ್ನ ತಿನಿಸು ಕೊಡು' ಎಂದು ಕೇಳಿತು. ಆದರೆ 'ಪರೋಪಕಾರವೇ ಪರಮ ಧರ್ಮ' ಎಂದು ತಿಳಿದು ಸಹಾಯ ಮಾಡಿದ ಕೊಕ್ಕರೆಗೆ ತೋಳವು 'ನಿನ್ನನ್ನು ತಿನ್ನದೇ ಹಾಗೇ ಬಿಟ್ಟದ್ದು ಸಾಲದೇ? ಹೆಚ್ಚು ಮಾತನಾಡಬೇಡ ಹೋಗು ಇಲ್ಲಿಂದ, ಇಲ್ಲದಿದ್ದರೆ ಈಗಲೇ ನಿನ್ನನ್ನು ತಿನ್ನುವೆನು' ಎಂದಿತು. ನೀವು ಕಷ್ಟದಲ್ಲಿರುವಾಗ ಇತರರಿಗೆ ಆಸೆ ತೋರಿಸಿ ತಮ್ಮ ಕೆಲಸವನ್ನು ಸಾಧಿಸಿ ಬಳಿಕ ಅವರನ್ನು ಮರೆತು ಬಿಡುವ ತೋಳದಂತಹ ಬುದ್ಧಿ ಒಳ್ಳೆಯದಲ್ಲ ಎಂಬ ನೀತಿ ಈ ಪದ್ಯದಲ್ಲಿದೆ.

### ಕಥೆ ಬರೆಯಿರಿ

ಬರವಣಿಗೆಗೆ ಸಹಾಯಕವಾಗುವ ಈ ಚಟುವಟಿಕೆಯಲ್ಲಿ ಶೀರ್ಷಿಕೆ, ಆರಂಭ, ಘಟನೆಗಳ ಕ್ರಮೀಕರಣ ಮುಕ್ತಾಯ ಮತ್ತು ಆಶಯಗಳಿಗೆ ಹೆಚ್ಚಿನ ಪ್ರಾಧಾನ್ಯವನ್ನು ನೀಡಬೇಕು. ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತು ಈ ಚಟುವಟಿಕೆ ಮಾಡಲಿ.

### ಪದ ವಿಂಗಡಿಸಿರಿ

ಇಂತಹ ಚಟುವಟಿಕೆಗಳು ಈಗಾಗಲೇ ಮಕ್ಕಳಿಗೆ ತುಂಬಾ ಪರಿಚಿತವಾಗಿದೆ. ಪದ ವಿಂಗಡಣೆ ಅರ್ಥ ವ್ಯತ್ಯಾಸವಾಗುವಂತೆ ಇರಬಾರದು.

ಅಡವಿ + ಒಳಗೆ = ಅಡವಿಯೊಳಗೆ
ಹುಡುಕಿ + ಒಂದು = ಹುಡುಕಿಯೊಂದು

ಹೋದರು + ಒಬ್ಬರು + ಆದರು + ಅದನು = ಹೋದರೊಬ್ಬರಾದರದನು

ವರವನು + ಈವೆವು + ಎಂದು = ವರವನೀವೆವೆಂದು

ತೆಗೆಯಲು + ಒಪ್ಪಿದ = ತೆಗೆಯಲೊಪ್ಪಿದ

## ಹೋಲಿಸಿರಿ

'ಹೋಲಿಸಿರಿ'ಚಟುವಟಿಕೆಯು ಆಸ್ವಾದನೆಯ ವಿಭಿನ್ನ ಶೈಲಿಗಳನ್ನು ಪರಿಚಯಿಸಲು ಸಹಾಯವಾಗುತ್ತದೆ. ಕೊಟ್ಟಿರುವ ಪದ್ಯವನ್ನು ಓದಿ ಅರ್ಥೈಸಿಕೊಂಡ ಬಳಿಕ ಮಕ್ಕಳು ಎರಡೂ ಪದ್ಯದಲ್ಲಿರುವ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಗುರುತಿಸಲಿ.

## ಹೋಲಿಸಿ ಬರೆಯುವುದು

'ತೋಳ ಮತ್ತು ಕೊಕ್ಕರೆ' ಎಂಬ ಕಥನ ಕವನವು ಭೋಗ ಷಟ್ಪದಿಯಲ್ಲಿ ರಚಿತವಾಗಿದೆ. 'ಪ್ರತಿಫಲ' ಪದ್ಯವು ಸಾಧಾರಣ ಕವಿತೆಯಾಗಿದೆ. 'ತೋಳ ಮತ್ತು ಕೊಕ್ಕರೆ'ಪದ್ಯದಲ್ಲಿ ಪ್ರಾಸ ಪದಗಳ ಬಳಕೆಯಾಗಿದೆ. ಇದರಲ್ಲಿ ಆದಿ ಪ್ರಾಸವಿದೆ. ದುಷ್ಟರಿಗೆ ಉಪಕಾರ ಮಾಡಿದರೆ ಅದರಿಂದ ಅಪಕಾರವೇ ಹೆಚ್ಚು ಎಂಬ ಸಂದೇಶ ಈ ಪದ್ಯದಲ್ಲಿದೆ. 'ಪ್ರತಿಫಲ' ಪದ್ಯದಲ್ಲಿ ಎರಡು ಮತ್ತು ನಾಲ್ಕನೇ ಸಾಲಿನಲ್ಲಿ ಪ್ರಾಸಪದದ ಬಳಕೆಯಾಗಿದೆ. ಈ ಪದ್ಯದಲ್ಲಿ ಪ್ರತಿಫಲದ ಅಪೇಕ್ಷೆ ಇಲ್ಲದೆ ದುಡಿಯ ಬೇಕು ಎಂಬ ಸಂದೇಶವಿದೆ. ಎರಡೂ ಪದ್ಯಗಳನ್ನು ರಾಗ, ತಾಳದೊಂದಿಗೆ ಹಾಡಲು ಸಾಧ್ಯವಿದೆ.

## ಷಟ್ಪದಿ

'ಷಟ್ಪದಿ' ಹೆಸರೇ ಸೂಚಿಸುವಂತೆ ಆರು ಸಾಲುಗಳಿರುವ ಪದ್ಯ. ಷಟ್ಪದಿಗಳಲ್ಲಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ – ಹೀಗೆ ಆರು ವಿಧಗಳಿವೆ. ಈ ಆರೂ ಷಟ್ಪದಿಗಳ ಲಕ್ಷಣ ಬೇರೆಬೇರೆಯಾಗಿವೆ.

'ತೋಳ ಮತ್ತು ಕೊಕ್ಕರೆ' ಎನ್ನುವ ಕಥನ ಕವನವು 'ಭೋಗ' ಷಟ್ಪದಿಯಲ್ಲಿ ರಚಿತವಾಗಿದೆ.

**ಭೋಗ ಷಟ್ಪದಿ:**

ಇದರಲ್ಲಿ ಆರು ಸಾಲುಗಳಿವೆ. ಇದರ 1, 2, 4, 5 ನೇ ಸಾಲುಗಳೂ 3, 6 ನೇ ಸಾಲುಗಳೂ ಸಮಾನವಾಗಿವೆ. 1, 2, 4, 5 ನೇ ಸಾಲುಗಳಲ್ಲಿ ಮೂರು ಮಾತ್ರೆಗಳ ನಾಲ್ಕು ಗಣಗಳೂ 3 ಮತ್ತು 6 ನೇ ಸಾಲುಗಳಲ್ಲಿ ಮೂರು ಮಾತ್ರೆಗಳ ಆರು ಗಣಗಳೂ ಕೊನೆಯಲ್ಲಿ ಒಂದು ಗುರುವೂ ಇರುತ್ತದೆ. 3 ಮತ್ತು 6 ನೇ ಸಾಲಿನ ಕೊನೆಯಲ್ಲಿ ಲಘು ಇದ್ದರೂ ಅದನ್ನು ಗುರುವೆಂದೇ ಪರಿಗಣಿಸಲಾಗುತ್ತದೆ.

ಉದಾ :

ಅಡವಿ|ಯೊಳಗೆ|ಬೇಟೆ|ಯನ್ನು

ಹುಡುಕಿ|ಹುಡುಕಿ|ಯೊಂದು|ತೋಳ

ಕಡೆಗೆ|ನೋಡಿ|ಹಿಡಿದು|ದೊಂದು|ಹುಲ್ಲೆ|ಮರಿಯ|ನು

ಒಡನೆ|ಯದನು|ತಿನ್ನುತಿರಲು

ತಡೆದು|ನಿಂತಿ|ತೊಂದು|ಎಲುಬು

ನಡುವೆ|ಗಂಟ|ಲೊಳಗೆ|ಬಹಳ|ನೋವ|ನೆಸಗು|ತ

**ಪೂರಕ ಓದಿಗೆ**

## ಮಡಿವಾಳನೂ ಮೊಸಳೆಯೂ

ಪುರದ ಜನರ ಬಟ್ಟೆಯೊಗೆದು
ಬರುವ ಹಣದಿ ತನ್ನ ಹೊಟ್ಟೆ
ಹೊರೆಯುತಿದ್ದ ಅಗಸನೊಬ್ಬನೊಂದು ದಿನದಲಿ
ಕೆರೆಗೆ ಹೋಗಿ, ವಸ್ತ್ರವೊಗೆಯು
ತಿರಲು ಹಾಸ್ಯಕೆಂದು ಬರಿದೆ
'ಅರೆರೆ! ಮೊಸಳೆ ಬಂತು, ಮೊಸಳೆ' ಎಂದು ಕೂಗಿದ.
ಮೊರೆಯ ಕೇಳಿ ನೆರೆಯ ಜನರು
ಕರುಣಗೊಂಡು, ನೆಗಳೆಯನ್ನು
ತರಿಯಲೆಂದು ದೊಣ್ಣೆ ಕತ್ತಿಗಳನು ಹಿಡಿಯುತ
ಕೆರೆಯ ಸೇರಿ ನೋಡೆ, ಮೊಸಳೆ
ಯಿರಲೆ ಇಲ್ಲ, ಕೈಯ ತಟ್ಟಿ
ಹರುಷದಿಂದ ನಗುವ ರಜಕನನ್ನು ಕಂಡರು
ಸುಳ್ಳುಗಾರನಿವನು ನೋಡಿ
ಕೇಳುತಿವನ ಕೂಗನಿಂದು
ಪಾಲಿಸಲ್ಕೆ ಬಂದು ನಾವು ಮೋಸ ಹೋದೆವು
ಖೂಳನನ್ನು ನಂಬಬೇಡಿ
ಹೇಳ್ವ ಸಟೆಯನೆಂದು ಕೋಪ
ತಾಳಿ, ಹಳಿಯುತವನ ತಮ್ಮ ಮನೆಗೆ ನಡೆದರು.
ಕಳೆಯೆ ಸ್ವಲ್ಪ ಸಮಯ, ಸರಸಿ
ಯೊಳಗೆ ವಾಸಿಸಿದ್ದ ನೆಗಳೆ
ಸುಳಿಯೆ ಮೇಲೆ 'ಮೊಸಳೆ ಬಂತು, ಮೊಸಳೆ'ಎನ್ನುತ
ಛಲದೊಳೊದರೆ, ಮೊದಲಿನಂತೆ
ಅಳುತಿರುವನು ಬರಿದೆಯೆಂದು
ತಿಳಿದು ಮನದಿ ಜನರು ಸುಮ್ಮಗಿರಲು, ಅಗಸನ
ಕಾಲ ಹಿಡಿದು ಮೊಸಳೆ ಕೆರೆಯ
ಆಳವಾದ ತಳವ ಸೇರೆ
ಗೋಳನಿಟ್ಟು ಮರುಗಿ ತನ್ನ ಪ್ರಾಣ ಬಿಟ್ಟನು
ಕೇಳಿ! ಸುಳ್ಳನಾಡುವವನು
ಮೇಲೆನಿಸುವ ಸತ್ಯವನ್ನು
ಹೇಳೆ ಕೂಡ ನಂಬದಿಹರು ಸತ್ಯವೀ ನುಡಿ

## ಹುಡುಗ ಮತ್ತು ಮರ

ಬೆಟ್ಟದಾ ತಪ್ಪಲಲಿ ಸುಂದರ ಬಯಲೊಂದು
ಬಯಲ ಮಧ್ಯದಲ್ಲಿತ್ತು ಒಂದು ಮರವು
ಕೂಗಳತೆ ದೂರದಲಿ ಪುಟ್ಟದೊಂದು ಮನೆಯು
ಮನೆಯ ಕಣ್ಮಣಿಯಾಗಿ ಗಂಡು ಮಗುವು ॥೧॥
ತಂದೆ ತಾಯಿಯರಂದು ಹೊಲದಲ್ಲಿ ದುಡಿದಿರಲು
ದುಡಿಯುವಾ ಸಮಯದಲಿ ಪುಟ್ಟ ಮಗುವು
ಮರದ ಬಳಿಯಲಿ ಬಂದು ಆಟವಾಡುತಲಿರಲು
ಆಟ ಪಾಠವ ಕಂಡು ನಲಿದು ಮರವು ॥೨॥
ತನ್ನ ಮೌನವ ಮುರಿದು ಮಾತುಗಳನಾಡುತಲಿ
ಮಾತು ಬಾರದ ಕಂದಗದನು ಕಲಿಸಿ
ಹಸಿವಿಂದ ಮುಗುವೆಂದು ಬಳಸಿದರೆ ಅದ ಕಂಡು
ಬಳಲಿಕೆಯ ಮರೆಸುವುದು ಹಣ್ಣ ತಿನಿಸಿ ॥೩॥
ದಿನಮಾಸ ಉರುಳಿರಲು ಮಗುವು ತಾ ಬೆಳೆದಿರಲು
ಬೆಳೆವ ಮಗುವನು ಕಂಡು ಮರವು ನಲಿದು
ಮಗುವಿಗೀಯುತ ನೆರಳು ಹಣ್ಣು ಬಲು ರುಚಿಯಿರಲು
ಬೆಳೆಸಿತ್ತು ತನ್ನೆದೆಯ ಸಾರ ಬಸಿದು ॥೪॥
ಬೆಳೆದ ಬಾಲಕನಾಗಿ ಮರದ ಬಳಿ ಬಂದೊಂದು
ದಿನ ಮುಖವ ಬಾಡಿಸುತ ಕುಳಿತುಕೊಳಲು
ದುಗುಡ ತಾಳಿದ ಮರವು ಬಾಲಕನ ಬೇಸರಕೆ
ಕಾರಣವು ಏನೆಂದು ತಾ ಕೇಳಲು ॥೫॥
ಹಣ್ಣುಗಳು ಸಾಕಾಯ್ತು ತಿಂದು ಬೇಸರವಾಯ್ತು
ಬರಿಮಾತು ನಿನ್ನೊಡನೆ ದಿನವೆಲ್ಲವೂ
ದಿನ ದಿನಕು ಹೊಸ ಆಟ ಪಾಠಗಳು ಬೇಕೆಂದು
ಪರಿತಪಿಸಿ ಕಾಡುತಿದೆ ನನ್ನ ಮನವು ॥೬॥

ಬಾಲಕನ ಅಭಿಲಾಷೆಯನ್ನು ಮರ ಅರಿಯುತಲಿ
ಅರಿಕೆ ಮಾಡಿತು ಅವಗೆ ಪ್ರೀತಿಯಿಂದ
ನನ್ನ ಕೊಂಬೆಗೆ ಗಟ್ಟಿ ಹಗ್ಗವನು ನೀ ಕಟ್ಟಿ
ಆಡುತಿರು ಉಯ್ಯಾಲೆ ಹರುಷದಿಂದ ।।೭।।
ಮರದ ತ್ಯಾಗದ ಅರಿವೆ ಇಲ್ಲದೆಯೆ ಬಾಲಕನು
ಸುಖಕಾಗಿ ವೃಕ್ಷದಾ ತೋಳನ್ನು ಬಳಸಿ
ಉಯ್ಯಾಲೆಯಲಿ ಕುಳಿತು ಆಡಿದನು ತೂಗಿದನು
ದೇಹ ಮನಸುಗಳನ್ನು ಏರಿಸುತ ಇಳಿಸಿ ।।೮।।
ರೆಂಬೆ ಕೊಂಬೆಗಳೆಲ್ಲ ಜಗ್ಗಿ ಮೈ ನೋವಾಗಿ
ನಲುಗಿತು ಮರ ತಾನು ದಿನ ರಾತ್ರಿಯು
ಮರದ ಪರಿವೆಯೆ ಇರದ ಬಾಲಕನು ಅನುದಿನವು
ಆಡುತಲಿ ನಲಿದಿದ್ದ ಪ್ರತಿಬಾರಿಯು ।।೯।।
ಋತು ಚಕ್ರಗಳು ಉರುಳಿ ಕುಡಿ ಮೀಸೆಯದು ಚಿಗುರಿ
ಬಾಲಕನು ಬೆಳೆದಾದ ನವ ತರುಣನು
ಆಟ ಪಾಠಗಳವಗೆ ರುಚಿಸದಿರೆ ಮರದೊಡನೆ
ಆಗ್ರಹದಿ ಹಣಕಾಗಿ ಕೇಳುತಿಹನು ।।೧೦।।
ನನ್ನ ಬಳಿ ಬಹಳಿರುವ ಹಣ್ಣುಗಳ ನೀ ಕೊಯ್ದು
ಪಟ್ಟಣಕೆ ಕೊಂಡೊಯ್ದು ವಿಕ್ರಯಿಸಲು
ಸಿಗಬಹುದು ಬಹಳ ಹಣ ನೀ ಒಂದು ಕೈ ನೋಡು
ಎಂದು ಮರ ಹೇಳಿ ಸಂಭ್ರಮಿಸಲು ।।೧೧।।
ಹಣ್ಣುಗಳ ಕೊಯ್ಯುತಲಿ ಯುವಕ ತಾ ತವಕದಲಿ
ಕೊಂಡೊಯ್ದು ಪಟ್ಟಣಕೆ ಮಾರಿ ಬರಲು
ಹಣಗಳಿಸಿ ಮರಳಿದನು ಸಿಹಿ ತಿನಿಸು ತಿನ್ನುತಲಿ
ಮರಕೇನು ಬೇಕೆಂದು ಕೇಳದಿರಲು ।।೧೨।।
ತನಗೇನು ಬೇಕಿಲ್ಲ ಭೂ ತಾಯಿ ಪೊರೆದಿಹಳು
ನೀನು ಸಂತಸ ಪಡಲು ನನಗೆ ಸಾಕು
ಗೆಳೆಯನಾ ಸುಖವೆನ್ನ ಸುಖದಂತೆ ಸಂಭ್ರಮಿಸಿ
ಮರಗಳಿಸಿ ಪುಣ್ಯವನು ಇಹಕು ಪರಕು ।।೧೩।।
ಯುವಕಗಾಯಿತು ಮದುವೆ ಮುಂದೆ ಮಕ್ಕಳುಗಳು
ಸಂಸಾರ ಬೆಳೆದಿತ್ತು ದೊಡ್ಡದಾಗಿ
ಮನೆ ಚಿಕ್ಕದೆನಿಸಿರಲು ವಿಸ್ತರಿಸೆ ಮನೆಯನ್ನು
ಕೇಳಿದನು ಮರದ ಬಳಿ ಹಲಗೆಗಾಗಿ ।।೧೪।।

ಕೆಳಗಿನಾ ಕೊಂಬೆಗಳು ಅಗಲ ಇರುವವು ಬಹಳ
ನೀ ಕಡಿಯೆ ಸಿಗುವವು ಬಹಳ ಹಲಗೆ
ಮನೆ ದೊಡ್ಡದಾದಂತೆ ಮನಸು ಮುದುಡುವುದೆಂಬ
ಮಾತನ್ನು ಮರೆಯಬೇಡೆಂದು ಕೊನೆಗೆ ।।೧೫।।
ವಾರ ಮಾಸಗಳಾಗಿ ಯುವಕನಾ ಕುರುಹಿರದೆ
ಒಂದು ದಿನ ಕುಳಿತನವ ಮರದೆಡೆಗೆ ಬಂದು
ಜೋಲು ಮೋರೆಯ ಕಂಡು ಮರವು ತಾ ಬಲುನೊಂದು
ಕೇಳಿರಲು ಅವನ ಕ್ಲೇಶವದೇನೆಂದು ।।೧೬।।
ಖರ್ಚು ಬೆಳೆಯುತಲಿಹುದು ನಿನ್ನ ಹಣ್ಣುಗಳಿಂದ
ನೀಸದಾಗದು ನನ್ನ ಸಂಸಾರವನ್ನು
ಕೊಡು ನಿನ್ನ ಬೊಡ್ಡೆಯನು ನಾ ಕಟ್ಟಿ ಹಡಗನ್ನು
ದುಡಿಯುತಲಿ ಮಾಡುವೆನು ವ್ಯಾಪಾರವನ್ನು ।।೧೭।।
ಇಷ್ಟು ಮಾಡಿದ ನಾನು ಅಷ್ಟನ್ನೂ ಮಾಡದಿರೆ
ನಮ್ಮ ಸ್ನೇಹಕೆ ಇರುವ ಅರ್ಥವೇನು
ಕಡಿದು ನೀ ನನ್ನನ್ನು ಕಟ್ಟು ಕನಸಿನ ಹಡಗು
ದುಡಿದು ನೀ ಅನುಭವಿಸು ಸಿರಿತನವನು ।।೧೮।।
ವರ್ಷಗಳು ಉರುಳಿದವು ಯುವಕ ಮರಳಿದ
ಮನೆಗೆ ಗಳಿಸುತ್ತ ಅಪಾರ ಧನ ರಾಶಿಯ
ಸಂಸಾರದೊಡಗೂಡಿ ಅನುಭವಿಸಿ ಸಿರಿತನವ
ಮರೆತಿರಲು ತ್ಯಾಗಮಯಿ ಮರದ ಇರುವ ।।೧೯।।
ವೃದ್ಧಾಪ್ಯ ಆವರಿಸಿ ದೇಹ ತಾ ಹಣ್ಣಾಗಿ
ಹೆಂಡತಿಯು ತ್ಯಜಿಸಿರಲು ಇಹಲೋಕವ
ಮಕ್ಕಳೆಲ್ಲರು ತಮ್ಮ ವ್ಯವಹಾರದಲಿ ಮುಳುಗಿ
ಕಡೆಗಣಿಸಿರಲು ಈ ಮುದುಕನಿರುವ ।।೨೦।।
ಒಂಟಿತನವನು ಕಾಡಿ ಮನಸು ಮುದುಡುತಲಿರಲು
ಆಗಾಯ್ತು ಅವನಿಗಾ ಮರದ ನೆನಪು
ಮನದಲ್ಲಿ ಬೆಳಕೊಂದು ಹೊಳೆದಂತೆ ನಡೆದಿರಲು
ಹೆಜ್ಜೆಗಳಿಗಂದಿತ್ತು ಹೊಸದೆ ಹುರುಪು ।।೨೧।।
ಕತ್ತರಿಸಿದಾ ಬೊಡ್ಡೆ ಹಾಗೆಯೇ ಉಳಿದಿತ್ತು
ಕುಳಿತುಕೊಳ್ಳಲು ಕಲ್ಲು ಹಾಸಿನಂತೆ
ಮುದುಕನನು ಕಂಡಾಗ ನಸು ನಗುತ
ಸ್ವಾಗತಿಸಿ ಹೇಳಿತ್ತು ತನ್ನ ಮೇಲೆ ಕುಳ್ಳುವಂತೆ ।।೨೨।।

ಕೊಡುವುದನು ಕಲಿಯದಲೆ ಬರಿದೆ ಕೇಳುತ ತನ್ನ
ಜೀವನವನ್ನೆಲ್ಲ ಬಸಿದ ಮುದುಕ
ಒಂದು ಘಳಿಗೆಯು ತನ್ನ ಮನದಲ್ಲಿ ಸಂತೋಷ
ಅನುಭವಿಸದೆಯೆ ಕಳೆದ ತನ್ನ ಬದುಕ ॥೨೩॥

ಪರರ ಬೇಡಿಕೆಗಳಿಗೆಂದು ಸ್ಪಂದಿಸುತ ತನ್ನ
ತಾನೇ ಅವಗೆ ಧಾರೆ ಎರೆದು
ಮರ ತಾನು ಬದುಕಿತ್ತು ಬೊಡ್ಡೆಯಾ ಸ್ಥಿತಿಯಲ್ಲಿ
ಜಗದೆಲ್ಲ ಸಂತೋಷ ಸೂರೆ ಹೊಡೆದು!! ॥೨೪॥

# 2. ರಾಣ ಮತ್ತು ಅಕ್ಬರ

## ಚಟುವಟಿಕೆಗಳು

- ಹಿಂದೆ ನಮ್ಮ ರಾಜ್ಯವನ್ನು ಆಳಿದ ಕೆಲವು ಚಕ್ರವರ್ತಿಗಳ ಹೆಸರು ಹೇಳಲು ಸಾಧ್ಯವೇ?
- ಅಕ್ಬರ ಚಕ್ರವರ್ತಿಯ ಹೆಸರು ಕೇಳಿದ್ದೀರಾ?
- ಅಕ್ಬರ ಚಕ್ರವರ್ತಿ, ರಜಪೂತ ರಾಜರುಗಳನ್ನೆಲ್ಲ ಸೋಲಿಸಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದ .
- ತಮ್ಮ ರಾಜ್ಯವನ್ನು ವಿಸ್ತರಿಸುವ ಬಯಕೆಯಿದ್ದರೂ, ಅವರಿಗೂ ಮಾನವೀಯತೆ ಇತ್ತು ಎಂಬುದನ್ನು ತಿಳಿಸುವ ಒಂದು ನಾಟಕವನ್ನು ಇಲ್ಲಿ ಕೊಡಲಾಗಿದೆ. ಇದನ್ನು ನೋಡೋಣ.

## ಚರ್ಚಿಸಿರಿ

ಪಾಠಭಾಗವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಒಂದೆರಡು ಸಲ ಓದಲು ಹೇಳುವುದು. ಪಾಠದಲ್ಲಿ ಬಂದಿರುವ ಪಾತ್ರಗಳ ಬಗ್ಗೆ ಪ್ರಶ್ನಿಸುವುದು. ಬಳಿಕ ಎಲ್ಲರ ಅಭಿಪ್ರಾಯಗಳನ್ನು ತಿಳಿಯಲೋಸುಗ ಲಘು ಚರ್ಚೆ ಏರ್ಪಡಿಸುವುದು.

ಸುಭಾನಖಾನನು ರಾಣನನ್ನು ಬಂಧಿಸದಿರುವುದು ಸರಿಯೇ? ಎಂಬ ಪ್ರಶ್ನೆಗೆ ಉತ್ತರಿಸುವುದು.

## ಉತ್ತರಿಸಿರಿ

ಹಿಂದಿನ ಪಾಠಗಳಲ್ಲಿ ನಡೆಸಿದಂತೆಯೇ ಈ ಚಟುವಟಿಕೆಯನ್ನು ನಡೆಸುವುದು. ವಿದ್ಯಾರ್ಥಿಗಳು ಪಾಠವನ್ನು ಓದಿ ಅರ್ಥೈಸಿ ಉತ್ತರ ಬರೆಯಲಿ.

## ಸಂದರ್ಭ ತಿಳಿಸಿರಿ

ಮಕ್ಕಳಲ್ಲಿ ಸೃಜನಾತ್ಮಕತೆ, ಶಬ್ದಭಂಡಾರ, ಆಶಯ ಗ್ರಹಣ ಸಾಮರ್ಥ್ಯ ಬೆಳೆಯಲು ಈ ಚಟುವಟಿಕೆ ಉಪಯುಕ್ತವಾದುದು. ಕೊಟ್ಟಿರುವ ಮಾತುಗಳು ಯಾವ ಪಾಠದಲ್ಲಿ, ಯಾವ ಸಂದರ್ಭದಲ್ಲಿ, ಯಾರು ಯಾರಿಗೆ ಹೇಳಿದರು? ಎಂದು ಕೇಳುತ್ತಾ ಉತ್ತರವನ್ನು ಕಂಡುಹಿಡಿದು ಬರೆಯಲು ಹೇಳುವುದು.

ಉದಾಹರಣೆಗೆ–

"ನಿಲ್ಲು, ಯಾರು ನೀನು? ಈ ನಡುರಾತ್ರಿಯಲ್ಲಿ ಎಲ್ಲಿಗೆ ಹೊರಟಿರುವೆ?" ಈ ಮಾತುಗಳು 'ರಾಣ ಮತ್ತು ಅಕ್ಬರ'ಪಾಠದಲ್ಲಿ ಬಂದಿದೆ. ರಾಣನು ಅಸೌಖ್ಯದಿಂದ ಮಲಗಿರುವ ತನ್ನ ಮಗನನ್ನು ನೋಡಲು ಅರಮನೆಗೆ ಹೋಗುತ್ತಿದ್ದಾಗ ಅಕ್ಬರ ಬಾದಶಹನ ಅಧಿಕಾರಿ ಸುಭಾನಖಾನನು ರಾಣನೊಡನೆ ಈ ರೀತಿ ಪ್ರಶ್ನಿಸುತ್ತಾನೆ.

### ಪಾತ್ರ ಚಿತ್ರಣ ಬರೆಯಿರಿ

ಈ ಚಟುವಟಿಕೆಯ ಮೂಲಕ ಮಕ್ಕಳ ಸೃಜನಾತ್ಮಕತೆಗೆ ಹೆಚ್ಚಿನ ಒತ್ತು ನೀಡಬಹುದು. ನಾಟಕದಲ್ಲಿ ಬಂದಿರುವ ಪಾತ್ರಗಳ ಬಗ್ಗೆ ತಿಳಿದುಕೊಳ್ಳುವುದು. ಬಳಿಕ ತಮಗೆ ಇಷ್ಟವಾದ ಪಾತ್ರದ ಬಗ್ಗೆ ಬರೆದು ಮಂಡಿಸಲಿ. ಆಶಯ ಸ್ಪಷ್ಟವಾದ ಬರವಣಿಗೆಯಲ್ಲಿ ಆ ಪಾತ್ರದ ಹಿರಿಮೆಯನ್ನು ಗುರುತಿಸಲಿ.

**ಪಾತ್ರ ಚಿತ್ರಣ ಹೀಗೂ ಇರಬಹುದು**

ನಾಟಕದಲ್ಲಿ ಬಂದಿರುವ ಪಾತ್ರಗಳು–ರಾಣ, ಸುಭಾನಖಾನ್, ದೂತ, ಮಂತ್ರಿ, ಸೇನಾಧಿಪತಿ ಮತ್ತು ಅಕ್ಬರ ಬಾದಶಹ ಇವುಗಳಲ್ಲಿ ಸೇನಾಧಿಪತಿಯ ಪಾತ್ರ ನನಗೆ ಇಷ್ಟವಾಯಿತು. ಸುಭಾನ್‌ಖಾನ್ ಮಹಾರಾಜನ ಆಜ್ಞೆಯನ್ನು ಶಿರಸಾವಹಿಸುವ ಪ್ರಾಮಾಣಿಕ ಅಧಿಕಾರಿ. 'ಕರ್ತವ್ಯವೇ ದೇವರು' ಎಂದು ತಿಳಿದವನು. ಆದರೆ ಇಂತಹ ಸುಭಾನಖಾನನು ಮಾನವೀಯತೆಗೆ ಸೋತು ರಾಣನನ್ನು ಬಂಧಿಸದೆ ಬಿಟ್ಟು ಬಿಡುತ್ತಾನೆ. ಅದನ್ನು ತಿಳಿದ ಸೇನಾಧಿಪತಿ ಸುಭಾನಖಾನನಿಗೆ ಮರಣದಂಡನೆಯ ಶಿಕ್ಷೆ ವಿಧಿಸುತ್ತಾನೆ. ಆಗ ಸುಭಾನಖಾನನು 'ರಾಜ್ಯದ ದೃಷ್ಟಿಯಿಂದ ನಾನು ಮಾಡಿದ್ದು ತಪ್ಪಾದರೂ, ಮಾನವೀಯ ದೃಷ್ಟಿಯಿಂದ ಸರಿಯಾಗಿ ಇದೆ' ಎಂದು ಹೇಳುತ್ತಾನೆ. ಮಾನವೀಯತೆಗೆ ಮಾರು ಹೋಗದವರು ಯಾರೂ ಇಲ್ಲ. ರಾಣನ ಸತ್ಯಸಂಧತೆ ಸುಭಾನಖಾನನ ಮಾನವೀಯತೆಯನ್ನು ಮೆರೆಸಿತು.

### ಊಹಿಸಿ ಬರೆಯಿರಿ

ಸೃಜನಶೀಲತೆಗೆ ಕೈಗನ್ನಡಿಯಂತಿರುವ ಈ ಚಟುವಟಿಕೆಯಲ್ಲಿ ಮಕ್ಕಳು ತಮ್ಮ ತಮ್ಮ ಕಲ್ಪನೆಗಳಿಗನುಗುಣವಾಗಿ ನಾಟಕದ ಆಶಯಕ್ಕೆ ಕುಂದುಂಟಾಗದ ರೀತಿಯಲ್ಲಿ ಬರೆದು ಮಂಡಿಸಲಿ.

### ಟಿಪ್ಪಣಿ ಬರೆಯಿರಿ

ಬರವಣಿಗೆಯನ್ನು ಪ್ರೇರೇಪಿಸುವ ಈ ಚಟುವಟಿಕೆಯು ಆಶಯಗ್ರಹಣಕ್ಕೆ ಪೂರಕವಾಗಿದೆ.

ಜೀವನದ ಅನುಭವಗಳೇ ನುಡಿಗಟ್ಟುಗಳು. ಇಲ್ಲಿ ಬಂದಿರುವ 'ನುಡಿದಂತೆ ನಡೆಯುವುದು ಮಾನವ ಧರ್ಮವಲ್ಲವೇ' ಎಂಬ ಮಾತು ಎಲ್ಲ ಮನುಷ್ಯರಿಗೂ ಅನ್ವಯವಾಗುತ್ತದೆ. ಮಾತಿಗೆ ತಪ್ಪುವುದು, ಒಪ್ಪಿ ಸೋಲಿಸುವುದು ಮೊದಲಾದವು ಮಾನವ ಗುಣಕ್ಕೆ ವಿರುದ್ಧವಾದವುಗಳು. ಹೇಳಿದಂತೆ ನಡೆದ ಅನೇಕ ಸಂದರ್ಭಗಳು ಮಕ್ಕಳಿಗೆ ಅನುಭವವಾಗಿರಬಹುದು. ಅವರ ಅನುಭವವನ್ನು ಬರೆದು ಮಂಡಿಸಲಿ.

### ಕಥೆಯಾಗಿ ಬದಲಾಯಿಸಿರಿ.

ಆಶಯ ಪೂರ್ಣತೆಯೊಂದಿಗೆ ಭಾಷಾಶೈಲಿಯಿಂದ ಕೂಡಿದ ರಚನೆಗೆ ಈ ಚಟುವಟಿಕೆ ಅಗತ್ಯ. ಬರವಣಿಗೆಯ ಸಾಮರ್ಥ್ಯವನ್ನು ಈ ಚಟುವಟಿಕೆ ಹೆಚ್ಚಿಸಬಲ್ಲುದು. ಮಕ್ಕಳ ಯೋಚನಾ ಸಾಮರ್ಥ್ಯಕ್ಕೂ ಈ ಚಟುವಟಿಕೆ ಸಹಾಯಕವಾಗಿದೆ. ನಾಟಕವನ್ನು ಓದಿ ಅರ್ಥಮಾಡಿಕೊಂಡು ಅದನ್ನು ಕಥೆಯ ರೂಪದಲ್ಲಿ ಬರೆದು ಮಂಡಿಸಲಿ. ಉತ್ತಮ ಶೀರ್ಷಿಕೆ ನೀಡಲಿ.

### ಅಭಿನಯಿಸಿರಿ

ಮಕ್ಕಳಲ್ಲಿ ಸುಪ್ತವಾಗಿರುವ ಕಲಾ ಸಾಮರ್ಥ್ಯವನ್ನು ಪ್ರದರ್ಶಿಸಲು ಉಪಯುಕ್ತವಾದ ಚಟುವಟಿಕೆ ಇದಾಗಿದೆ. 'ರಾಣ ಮತ್ತು ಅಕ್ಬರ' ನಾಟಕದ ಪಾತ್ರಗಳನ್ನು ಹಂಚಿಕೊಂಡು ಮಕ್ಕಳು ನಾಟಕ ಪ್ರದರ್ಶಿಸಲಿ. ಧ್ವನಿಯ ಏರಿಳಿತ, ಭಾವಾಭಿನಯ, ಸ್ಪಷ್ಟ ಉಚ್ಚಾರಗಳ ಕಡೆ ಹೆಚ್ಚಿನ ಗಮನ ನೀಡಲಿ.

ನಾಟಕ ಮಾಡಬೇಕಾದರೆ ಸಾಹಿತ್ಯ, ಪರಿಕರಗಳು, ರಂಗಸಜ್ಜಿಕೆ ಅತೀ ಅಗತ್ಯ. ಒಂದು ಸಂದೇಶವನ್ನು ಪ್ರೇಕ್ಷಕರಿಗೆ ಪರಿಣಾಮಕಾರಿಯಾಗಿ ತಲುಪಿಸಲು ಸಿದ್ಧತೆ ಅನಿವಾರ್ಯ.

ಇದಕ್ಕಾಗಿ ಮಾಡಬೇಕಾದ ಪೂರ್ವಸಿದ್ಧತೆಗಳು.

- ಪಾತ್ರಗಳ ಆಯ್ಕೆ
- ಪಾತ್ರಗಳ ಹಂಚುವಿಕೆ
- ನಿರ್ದೇಶನ
- ಪೂರ್ವಾಭ್ಯಾಸ
- ಹಿನ್ನೆಲೆ ಸಂಗೀತ
- ರಂಗಸಜ್ಜಿಕೆ (ವೇದಿಕೆ, ಧ್ವನಿ, ಬೆಳಕು, ಪರದೆ, ಪೀಠೋಪಕರಣಗಳು...)
- ಉಪಕರಣಗಳನ್ನು ಹೊಂದಿಸುವುದು (ಆಯುಧಗಳು, ವಸ್ತುಗಳು...)
- ಪ್ರದರ್ಶನ

**ಪೂರಕ ಓದಿಗೆ**

## ಮುನ್ನಡೆಸು ಬೆಳಕಿನೆಡೆಗೆ

**ಪಾತ್ರ ವರ್ಗ :** 1. ಮಹಾರಾಜ ಶುದ್ಧೋದನ, 2. ರಾಜಕುಮಾರ ಸಿದ್ಧಾರ್ಥ, 3. ಮಹಾಮಂತ್ರಿ. 4. ರಥದ ಸಾರಥಿ ಚೆನ್ನ. 5. ರಾಜ ಸೊಸೆ ಯಶೋಧರೆ, 6. ಮಹಾರಾಣಿ ಗೌತಮಿ, 7. ಓರ್ವ ವೃದ್ಧ, 8. ಓರ್ವ ರೋಗಿಷ್ಠ, 9. ನಾಲ್ಕಾರು ಮಂದಿ ಮಕ್ಕಳು.

**ಸಂದರ್ಭ :** ಕಪಿಲವಸ್ತುವಿನ ಮಹಾರಾಜ ಶುದ್ಧೋದನನು ಅಂತಃಪುರದಲ್ಲಿ ವಿಶ್ರಾಂತಿಯಲ್ಲಿರುವನು. ಆಗ ಆತನ ಮಗ ಸಿದ್ಧಾರ್ಥನು ತಂದೆಯ ಭೇಟಿಗಾಗಿ ಆಗಮಿಸುತ್ತಾನೆ.

### ದೃಶ್ಯ – 1

ದೂತ : (ವಿನಮ್ರನಾಗಿ ವಂದಿಸಿ) ಮಹಾರಾಜನಿಗೆ ಜಯವಾಗಲಿ. ತಮ್ಮನ್ನು ಕಾಣುವುದಕ್ಕಾಗಿ ರಾಜಕುಮಾರರು ಬಂದಿದ್ದಾರೆ.

ಶುದ್ಧೋದನ : ಯಾರು? ಸಿದ್ಧಾರ್ಥನೆ? ಒಳಗೆ ಕಳುಹಿಸು.

ದೂತ : ಅಪ್ಪಣೆ ಮಹಾಪ್ರಭೂ... (ನಿರ್ಗಮಿಸುವನು)

ಸಿದ್ಧಾರ್ಥ : (ಒಳಗೆ ಪ್ರವೇಶಿಸಿ, ವಂದಿಸುತ್ತಾ) ಅಪ್ಪಾಜಿ, ತಮಗೆ ವಂದನೆಗಳು, ಕುಶಲವಷ್ಟೇ?

ಶುದ್ಧೋದನ : (ಪ್ರೀತಿಯಿಂದ ಮಗನನ್ನು ಆಲಂಗಿಸಿ) ಓಹೋ... ನಾವು ಚೆನ್ನಾಗಿರುವೆವು. ಮಗೂ ತಂದೆಯ ಬಳಿಗೆ ಬರಲು ಮಗನಿಗೆ ಅಪ್ಪಣೆ ಬೇಕೇನು? ಸೀದಾ ಒಳಗೆ ಬರಬಾರದೇ ಕಂದಾ?

ಸಿದ್ಧಾರ್ಥ : (ನಗುತ್ತಾ) ಬರಬಹುದು, ನಿಜ, ಆದರೆ ತಾವೇ ಕಲಿಸಿದ ಶಿಷ್ಟಾಚಾರ! ಬಿಡುವುದು ಕಷ್ಟ, ಏನು ಮಾಡಲಿ?

ಶುದ್ಧೋದನ : (ಹೆಮ್ಮೆಯಿಂದ) ಎಷ್ಟಾದರೂ ನಮ್ಮ ಪುತ್ರನಲ್ಲವೇ! ಈಗ ಹೇಳು, ಬಂದ ಕಾರಣವೇನು? ಎಲ್ಲವೂ ಕುಶಲವಷ್ಟೇ? ತಂದೆಯ ಬಳಿಗೆ ಮಗನು ಆತ್ಮೀಯ ಮಾತುಕತೆಗಾಗಿ ಬಂದಿದ್ದಾನೆ ಎಂದು ಎಣಿಸೋಣವೇನು?

ಸಿದ್ಧಾರ್ಥ : ಹಾಗೆಯೇ ಎಣಿಸಿರಿ, ಅಪ್ಪಾಜಿ.

ಶುದ್ಧೋದನ : ಮಗೂ, ಯಶೋಧರೆ ಆರೋಗ್ಯವಷ್ಟೇ? ನಮ್ಮ ಸಾಮ್ರಾಜ್ಯದ ಭವಿಷ್ಯ ಆಕೆಯ ಉದರದಲ್ಲಿ ಕುಡಿಯೊಡೆದು ಬೆಳೆಯುತ್ತಿದೆ. ಪ್ರೀತಿಯಿಂದ ಲಾಲಿಸಿಕೋ...

ಸಿದ್ಧಾರ್ಥ : ಚಿಕ್ಕಮ್ಮನನ್ನೂ ಒಳಗೊಂಡಂತೆ ಇಡೀ ಅರಮನೆಗೆ ಅರಮನೆಯೇ ಯಶೋಧರೆಯ ಆರೈಕೆಗೆ ನಿಂತಿರುವಾಗ ಚಿಂತೆಯೇನಿದೆ ಅಪ್ಪಾಜಿ?

ಶುದ್ಧೋದನ : (ತಲೆದೂಗುತ್ತಾ)ಒಳ್ಳೇದು, ಒಳ್ಳೇದು, ಮಗೂ, ಇನ್ನು ಮೇಲೆ ರಾಜಕಾರಣದ ಬಗೆಗೆ ನೀನೊಂದಷ್ಟು ಜವಾಬ್ದಾರಿಯನ್ನು ವಹಿಸಬೇಕು; ಅಲ್ಲವೇ?

ಸಿದ್ಧಾರ್ಥ : ಹೂಂ, ಅಪ್ಪಾಜಿ, ನಿಮ್ಮಲ್ಲಿ ಒಂದು ಭಿನ್ನಹ.

ಶುದ್ಧೋದನ : ಹೇಳು ಮಗೂ...

ಸಿದ್ಧಾರ್ಥ : (ಅಳುಕುತ್ತಾ) ಅಪ್ಪಾಜಿ... ಅದೇಕೋ... ಈಗೀಗ ಅರಮನೆಯಲ್ಲಿ ಬಹಳ ಬೇಸರವಾಗತೊಡಗಿದೆ...

ಶುದ್ಧೋದನ : ಬೇಸರವಾದರೆ ತೋಟದಲ್ಲಿ ಅಡ್ಡಾಡು, ರಾಜಕಾರಣ ಕಲಿತುಕೋ...

ಸಿದ್ಧಾರ್ಥ : ಅದಾವುದರಲ್ಲಿ ಆಸಕ್ತಿ ಮೂಡುತ್ತಿಲ್ಲ. ಒಂದು ಬಾರಿ...ನಗರ ಸಂಚಾರ ಮಾಡಬೇಕು ಎಂಬ ಹಂಬಲ...

ಶುದ್ಧೋದನ : ಈಗ ಅರಮನೆಯಲ್ಲಿ ಆಗಿರುವ ಕೊರತೆಯಾದರೂ ಏನು? ಚಕ್ರವರ್ತಿಯಾದ ಮೇಲೆ ರಾಜ್ಯ ಸುತ್ತಿ, ಪ್ರಜೆಗಳ ಕಷ್ಟ ಸುಖ ಅರಿಯುವುದು ಇದ್ದೇ ಇದೆಯಲ್ಲ? ಈಗ ಏನು ಅವಸರ?

ಸಿದ್ಧಾರ್ಥ : ಅಪ್ಪಾಜಿ, ಹಕ್ಕಿಗೆ ರೆಕ್ಕೆ ಇರುವುದೇತಕ್ಕೆ ಹೇಳಿ?

ಶುದ್ಧೋದನ : ಇದೆಂಥ ಪ್ರಶ್ನೆ! ಹಾರಬೇಕೆಂದರೆ ರೆಕ್ಕೆ ಇರಲೇಬೇಕಷ್ಟೇ?

ಸಿದ್ಧಾರ್ಥ : ಬಂಗಾರದ ಪಂಜರ ಮಾಡಿಸಿದ ಮಾತ್ರಕ್ಕೆ ಹಕ್ಕಿ ಬಂದಿಯಾಗಿರಲು ಬಯಸುವುದೇನು?

ಶುದ್ಧೋದನ : ಇಲ್ಲ...

ಸಿದ್ಧಾರ್ಥ : ಕ್ಷಮಿಸಿ ಅಪ್ಪಾಜಿ, ನಾನು ಹಾಗೆಯೇ, ಪಂಚಭಕ್ಷ್ಯ ಪರಮಾನ್ನವನ್ನು ಸವಿಯುತ್ತಿರಬಹುದು. ಹಂಸತೂಲಿಕಾ ತಲ್ಪದಲ್ಲಿ ಮಲಗಿ ಚಿನ್ನದ ಬೀಸಣಿಗೆಯಿಂದ ಗಾಳಿ ಹಾಕಿಸಿಕೊಳ್ಳುತ್ತಿರಬಹುದು. ಹಾಗಂತ... ಅರಮನೆಯ ನಾಲ್ಕು ಗೋಡೆಗಳ ನಡುವೆ ಬಂದಿಯಾಗಲು ಸಾಧ್ಯವೇ? ಹೇಳಿ ಅಪ್ಪಾಜಿ. ನನ್ನನ್ನು ಹೀಗೆ ಕೂಡಿಹಾಕುವುದರ ಉದ್ದೇಶವಾದರೂ ಏನು?

ಶುದ್ಧೋದನ : (ಸ್ವಲ್ಪ ದೂರ ನಿಂತು, ಸ್ವಗತ) ಉದ್ದೇಶ...ಉದ್ದೇಶ(ಆತಂಕ) ಸಿದ್ಧಾರ್ಥ ಶಿಶುವಾಗಿದ್ದಾಗ ಅಸಿತ ಮುನಿಗಳು ನುಡಿದಿದ್ದ ಭವಿಷ್ಯ...ಈಗಲೂ ನನ್ನ ಕಿವಿದೆರೆಯಲ್ಲಿ ಅನುರಣಿಸುತ್ತಾ ಇದೆ! ಇಲ್ಲ... ನನ್ನ ಸಿದ್ಧಾರ್ಥ ಸನ್ಯಾಸಿಯಾಗಲು ನಾನು ಬಿಡಲಾರೆ...ಅದಕ್ಕಾಗಿಯೇ ಅವನನ್ನು ಯಾವ ನೋವೂ ಬಾಧಿಸದಂತೆ ಸುಖದ ಸುಪ್ಪತ್ತಿಗೆಯಲ್ಲಿ ಇರಿಸಿ, ಸಾಕುತ್ತಿದ್ದೇನೆ...

ಸಿದ್ಧಾರ್ಥ : ಅಪ್ಪಾಜಿ, ಏನಾದರೂ ಹೇಳಿದಿರೇನು?

ಶುದ್ಧೋದನ : (ಅನ್ಯಮನಸ್ಕತೆಯಿಂದ ಸ್ವಗತ) ಆದರೆ... ಹೆಚ್ಚು ಎಳೆದರೆ ದಾರ ತುಂಡಾದೀತು! (ಪ್ರಕಟವಾಗಿ)ಮಗೂ, ನಿನಗೆ ನಗರ ಪ್ರದಕ್ಷಿಣೆ ಮಾಡ ಬೇಕೆಂದಿದ್ದರೆ, ನಾನು ಅಡ್ಡಿ ಮಾಡಲಾರೆ. ನಾಳೆ ಸೂರ್ಯೋದಯಕ್ಕೆ ನೀನು ತಯಾರಾಗು, ಸಾರಥಿ ಚೆನ್ನನಿಗೆ ರಥ ಸಿದ್ಧಗೊಳಿಸಲು ಈಗಲೇ ಸೂಚಿಸುತ್ತೇನೆ. ಸರಿಯಷ್ಟೇ(ಕೈ ಚಪ್ಪಾಳೆ ತಟ್ಟಿ) ಯಾರಲ್ಲಿ...?

ಸಿದ್ಧಾರ್ಥ : (ಆನಂದದಿಂದ) ನೀವು ನನ್ನನ್ನು ನಿರಾಸೆಗೊಳಿಸಲಾರಿರಿ ಎಂಬುದು ನನಗೆ ಗೊತ್ತಿತ್ತು! ಪ್ರಣಾಮಗಳು ನಾನು ಬರಲೇ...ಅಪ್ಪಾಜಿ?

ಶುದ್ಧೋದನ : (ಆಶೀರ್ವಾದ ಮಾಡುತ್ತಾ) ಜಾಗ್ರತೆ ಹೋಗಿ ಬಾ ಮಗೂ...ನಿನಗೆ ಒಳಿತಾಗಲಿ.

(ಸಿದ್ಧಾರ್ಥ ನಿರ್ಗಮಿಸುವನು)

ದೂತ : (ನಮಸ್ಕರಿಸುತ್ತಾ) ಕರೆದಿರಾ ಪ್ರಭು...?

ಶುದ್ಧೋದನ : ಹೌದು, ಈಗಲೇ ಹೋಗಿ ಪ್ರಧಾನ ಮಂತ್ರಿಗಳನ್ನು ಬರಹೇಳು.

ದೂತ : ಅಪ್ಪಣೆ ಪ್ರಭೂ... (ಹಿಂದೆ ಹೆಜ್ಜೆ ಇರಿಸುತ್ತಾ ಮರೆಯಾಗುವನು.)

ಪ್ರಧಾನ ಮಂತ್ರಿ : (ವಂದಿಸುತ್ತಾ) ಮಹಾರಾಜರಿಗೆ ಜಯವಾಗಲಿ. ಹೇಳಿ ಕಳುಹಿಸಿದಿರಂತೆ. ಅಪ್ಪಣೆಯಾಗಲಿ ಪ್ರಭೂ...

ಶುದ್ಧೋದನ : (ಚಿಂತಿತನಾಗಿ) ನಿಮಗೆ ತಿಳಿಯದ್ದೇನಿದೆ ಮಂತ್ರಿಗಳೇ. ನಗರ ಪ್ರದಕ್ಷಿಣೆ ಮಾಡಲೇಬೇಕೆಂದು ಸಿದ್ಧಾರ್ಥ ಹಠ ಹಿಡಿದಿದ್ದಾನೆ. ಯಾವ ಕಾರಣಕ್ಕೂ ನಾನು ಅವನ ಮನಸ್ಸನ್ನು ನೋಯಿಸಲಾರೆ. ಚೆನ್ನನಿಗೆ ರಥವನ್ನು ಸಿದ್ಧಗೊಳಿಸಲು ತಿಳಿಸಿರಿ. ಹಾಗೆಯೇ ರಥವನ್ನು ನಡೆಸಬೇಕಾದ ಮಾರ್ಗವನ್ನೂ ನಿರ್ದೇಶಿಸಿರಿ. ಅದಕ್ಕಿಂತ ಮೊದಲು ತುರ್ತಾಗಿ ಆಗಬೇಕಾದ ಇನ್ನೊಂದು ಕಾರ್ಯವಿದೆ.

ಮಂತ್ರಿ : ಹೇಳಿ ಪ್ರಭೂ...

ಶುದ್ಧೋದನ : ನಗರವನ್ನು ತಳಿರುತೋರಣಗಳಿಂದ ಸಿಂಗರಿಸಬೇಕು. ಎಲ್ಲಿಯೂ ಕೊಳೆ, ಕಸಗಳು ಕಾಣಬಾರದು. ನೋವು ಸಂಕಟಗಳು ಇರಬಾರದು, ಎಲ್ಲೆಲ್ಲಿಯೂ ಸಂತೋಷ ತುಂಬಿ ತುಳುಕಾಡುವಂತೆ ಜಾಗ್ರತೆ ವಹಿಸಬೇಕು. ಅದರಲ್ಲೂ ಸಿದ್ಧಾರ್ಥನು ಸಂಚರಿಸುವ ಮಾರ್ಗಕ್ಕೆ ವಿಶೇಷ ಗಮನ ನೀಡಿರಿ. ಯಾವ ಕಾರಣಕ್ಕೂ ನಮ್ಮ ಮಗುವಿನ ಮನಸ್ಸು ನೋಯಬಾರದು! ಹೋಗಿ... ಮಿಂಚಿನ ವೇಗದಲ್ಲಿ ಕೆಲಸ ನಿಭಾಯಿಸಿ...

ಮಂತ್ರಿ : ತಮ್ಮ ಚಿತ್ತದಂತೆಯೇ ಆಗಲಿ ಪ್ರಭೂ....(ನಿರ್ಗಮನ)

## ದೃಶ್ಯ – 2

ಸಿದ್ಧಾರ್ಥ : (ಅರಮನೆಯ ಬಾಗಿಲಲ್ಲಿ ಚೆನ್ನನಿಗಾಗಿ ಕಾಯುತ್ತಾ) ಈ ದಿನ ಮನದಣಿಯೆ ಊರು ಸುತ್ತಬೇಕು. ಅದೇಕೋ ಅರಮನೆಯ ಆಟ, ನೋಟ, ಊಟ, ಉಪಚಾರ ಎಲ್ಲವೂ ಬೇಸರವೆನಿಸತೊಡಗಿದೆ. (ಕಾತರದಿಂದ) ಯಾಕೆ, ಚೆನ್ನ ಇನ್ನೂ ಬಂದಿಲ್ಲವಲ್ಲಾ....

(ಚೆನ್ನನ ಆಗಮನ)

ಚೆನ್ನ : (ತಲೆಬಾಗಿ ವಂದಿಸಿ) ರಾಜಕುಮಾರರಿಗೆ ಒಳಿತಾಗಲಿ. ರಥ ಸಿದ್ಧವಾಗಿದೆ. ಹೊರಡೋಣವೇ...ಕುಮಾರ?

ಸಿದ್ಧಾರ್ಥ : (ಉತ್ಸಾಹದಿಂದ) ಓಹೋ...! ನಾನು ಸಿದ್ಧನಾಗಿಯೇ ಇದ್ದೇನೆ. (ಇಬ್ಬರೂ ಹೊರಡುವರು)

ಸಿದ್ಧಾರ್ಥ : (ಸುತ್ತ ಗಮನಿಸುತ್ತಾ) ನಗರವೆಲ್ಲಾ ಮದುವಣಗಿತ್ತಿಯಂತೆ ಸಿಂಗಾರ ಗೊಂಡಿದೆಯೆಲ್ಲಾ? ಚೆನ್ನ... ಯಾವಾಗಲೂ ಹೀಗೆಯೇ ಇರುವುದೇನು?

ಚೆನ್ನ : ಇಲ್ಲ ಕುಮಾರ, ವಿಶೇಷ ಸಂದರ್ಭವೆಂದರೆ ಹೀಗೆಯೇ. ಜನರ ಉತ್ಸಾಹ ಮೇರೆ ಮೀರುತ್ತದೆ.

ಸಿದ್ಧಾರ್ಥ : ಈಗೇನು ವಿಶೇಷವಿದೆ ಚೆನ್ನ? ಏನಾದರೂ ಹಬ್ಬ ಇದೆಯೇನು?

ಚೆನ್ನ : ತಾವು ಸಂಚಾರಕ್ಕೆ ಹೊರಟಿದ್ದೀರಿ! ನಿಮ್ಮ ದರ್ಶನವೇ ಜನರಿಗೊಂದು ಹಬ್ಬ!

ಸಿದ್ಧಾರ್ಥ : ಓ... ಹಾಗೇನು? ಚೆನ್ನ, ಎಲ್ಲರೂ ನನ್ನನ್ನೇ ಏಕೆ ನೋಡುತ್ತಿದ್ದಾರೆ? ಅರಮನೆಯಲ್ಲಿ ಯಾರು ನನ್ನನ್ನು ಹೀಗೆ ದಿಟ್ಟಿಸಿ ನೋಡುವುದಿಲ್ಲ.

ಚೆನ್ನ : (ನಗುತ್ತಾ) ಅರಮನೆಯಲ್ಲಿ ನೀವು ದಿನವೂ ಇರುತ್ತೀರಿ. ಇಲ್ಲಿ ಹೀಗೆ ಅಪರೂಪಕ್ಕೆ ಬರುತ್ತಿದ್ದೀರಿ! ಜನರ ಕುತೂಹಲ ಸಹಜವಲ್ಲವೇ ಕುಮಾರ?

ಸಿದ್ಧಾರ್ಥ : (ತಲೆದೂಗುತ್ತಾ) ನಿಜ... ನಿಜ...

ಚೆನ್ನ : ಕುಮಾರ, ನೀವು ಜನರತ್ತ ಕೈ ಬೀಸಿರಿ, ಮುಗುಳ್ನಗೆ ಬೀರಿ! ಮುಂದೆ ಮಹಾರಾಜ ಆಗುವವರು. ಜನರ ವಿಶ್ವಾಸ ಗಳಿಸಿಕೊಳ್ಳಬೇಕು.

ಸಿದ್ಧಾರ್ಥ : (ಜೋರಾಗಿ ನಗುತ್ತಾ) ಚೆನ್ನಾ... ಚೆನ್ನಾ!ಚೆನ್ನಾದ ಮಾತು ಹೇಳಿದೆ. ಕೈ ಬೀಸಿದ ಮಾತ್ರಕ್ಕೆ ಜನರ ವಿಶ್ವಾಸ ಗಳಿಸಿಬಿಡಬಹುದೇನು? ಅವರಿಗಾಗಿ ಒಳಿತೇನನ್ನಾದರೂ ಮಾಡಬೇಕು. ಆಗ ಬಂದೀತು ವಿಶ್ವಾಸ! ಅಷ್ಟಕ್ಕೂ ಮಹಾರಾಜರ ಮಗ ಮಹಾರಾಜನೇ ಆಗಬೇಕೆಂದೇನೂ ಇಲ್ಲವಲ್ಲಾ?

ಚೆನ್ನ : ಬಿಡ್ತು ಎನ್ನಿ ಕುಮಾರ, ಯಾರು ಆಗುವರೋ...ಆಗಲೊಲ್ಲರೋ... ನೀವಂತೂ ನಮ್ಮ ಮಹಾರಾಜ ಅಗಲೇಬೇಕು!

ಸಿದ್ಧಾರ್ಥ : ಚೆನ್ನ, ರಾಜ್ಯವನ್ನಾಳುವ ರಾಜನಿಗಿಂತಲೂ ಜನರ ಹೃದಯವನ್ನಾಳುವ ರಾಜನಾಗಬೇಕೆಂದು ನನ್ನಾಸೆ.

ಚೆನ್ನ : ನನಗೆ ತಿಳಿಯದೇ ಕುಮಾರ! ಚಿಕ್ಕಂದಿನಿಂದಲೂ ಅಷ್ಟೇ. ನಿಮ್ಮದೆಲ್ಲಾ ಇಂಥ ಸಾತ್ವಿಕ ಬಯಕೆಗಳೇ! ಆದರೆ ನನ್ನ ಸ್ವಾಮೀ... ನೀವು ಹೃದಯಗಳನ್ನೂ ಆಳಬೇಕು... ರಾಜ್ಯವನ್ನೂ ಆಳಬೇಕು!

ಸಿದ್ಧಾರ್ಥ : (ನಗುತ್ತಾ) ಚೆನ್ನ, ನೀನಂತೂ ನನ್ನ ಮೇಲಿನ ಪ್ರೀತಿಯಿಂದ ಕುರುಡನಾಗಿದ್ದೀ...ಹೂಂ... ಮುಂದೆ ಏನಾಗುವುದೋ ನೋಡೋಣ. ಚೆನ್ನ...?

ಚೆನ್ನ : ಹೇಳಿ ಕುಮಾರ.

ಸಿದ್ಧಾರ್ಥ : (ಉತ್ಸಾಹದಿಂದ) ಅಲ್ಲಿ ನೋಡು! ಆ ಕಟ್ಟಡಗಳ ಹಿಂದೆ ಎಷ್ಟೊಂದು ಎತ್ತರದ ಮರಗಳು! ದೂರದಲ್ಲಿ ಗಿರಿಸಾಲು... ಹಾರಿ ಹೋಗುತ್ತಿರುವ ಹಕ್ಕಿ ಹಿಂಡು... ಅಹಾ...ಎಂಥ ಸೊಗಸು! ಎಂಥ ಸೊಗಸು! ಚೆನ್ನ ಮರದಷ್ಟು ಎತ್ತರ ಮನುಷ್ಯನೇಕೆ ಇಲ್ಲ?

ಚೆನ್ನ : (ನಗುತ್ತ) ಇದೆಂಥ ವಿಚಿತ್ರ ಪ್ರಶ್ನೆ ಪ್ರಭು? (ಯೋಚನಾಮಗ್ನನಾಗಿ) ಬಹುಶಃ ಮನುಷ್ಯನಲ್ಲಿ ತುಂಬಿರುವ ಸ್ವಾರ್ಥ ಇದೆಯಲ್ಲಾ ಅದು ಎತ್ತರಕ್ಕೆ ಬೆಳೆಯಲು ಬಿಡುವುದೇ ಇಲ್ಲ!

ಸಿದ್ಧಾರ್ಥ : (ಮುಗ್ಧತೆಯಿಂದ) ಸ್ವಾರ್ಥವನ್ನು ತ್ಯಜಿಸಿದರೆ? ಆಗ?

ಚೆನ್ನ : (ನಗುತ್ತ) ಒಳ್ಳೇ ಹೇಳಿದಿರಿ! ಹುಲುಮಾನವನ ಕೈಯಿಂದ ಆಗುವ ಕಾರ್ಯವೇ ಅದು?

(ಅಷ್ಟರಲ್ಲಿ ಒಬ್ಬ ಕುಷ್ಠ ರೋಗಿ ಕಾಣಸಿಗುವನು)

ಸಿದ್ಧಾರ್ಥ : (ಅಚ್ಚರಿಯಿಂದ) ಚೆನ್ನ ನೋಡು, ಅದೇನು?

ಚೆನ್ನ : ಅವನೂ ನಮ್ಮಂತೆಯೇ ಮನುಷ್ಯ ಪ್ರಭೂ...

ಸಿದ್ಧಾರ್ಥ : (ಅಚ್ಚರಿ) ಮನುಷ್ಯನೇ! ಮತ್ತೇಕೆ ಹಾಗೆ ಇದ್ದಾನೆ?

ಚೆನ್ನ : (ವಿಷಾದ) ಪಾಪ! ಯಾವ ಜನ್ಮದ ಕರ್ಮವೋ... ಕುಷ್ಠರೋಗದಿಂದ ಬಳಲುತ್ತಿದ್ದಾನೆ.

ಸಿದ್ಧಾರ್ಥ : ಅವನೇಕೆ ಮುಖ ಹಿಂಡುತ್ತಿದ್ದಾನೆ?

ಚೆನ್ನ : ನೋವು! ಅವನು ಅನುಭವಿಸುತ್ತಿರುವ ಅಪಾರ ಯಾತನೆ ಮುಖದಲ್ಲಿ ವ್ಯಕ್ತವಾಗಿದೆ. ಬಿಡಿ, ನೀವು ಅವನನ್ನೇಕೆ ನೋಡುತ್ತೀರಿ? ಇತ್ತ ಮುಖ ಮಾಡಿ.

ಸಿದ್ಧಾರ್ಥ : ಆದರೆ ನಾನು ನೋಡದಿದ್ದ ಮಾತ್ರಕ್ಕೆ ಅವನ ನೋವು ಮಾಯವಾಗುವುದಿಲ್ಲ. ಅಲ್ಲವೇ....

(ಅಷ್ಟರಲ್ಲಿ ಸೈನಿಕರು ರೋಗಿಯನ್ನು ಅಲ್ಲಿಂದ ಎಳೆದೊಯ್ಯುವರು)

ಸಿದ್ಧಾರ್ಥ : (ನೋವಿನಿಂದ ಮುಖ ಹಿಂಡಿ) ಚೆನ್ನ....

ಚೆನ್ನ : (ಸ್ವಲ್ಪ ಜೋರಾಗಿ) ನೀವು ಅತ್ತ ನೋಡಲೇಬೇಡಿರಿ!ಜೀವನವೆಂದಮೇಲೆ ಮನುಷ್ಯನಿಗೆ ನಾನಾ ಬವಣೆ ತಪ್ಪಿದ್ದಲ್ಲ ಬಿಡಿ. ಇಲ್ಲಿ ನೋಡಿ. ಪುಟ್ಟ ಮಕ್ಕಳು ಆನಂದದಿಂದ ಹೇಗೆ ಕುಣಿದು ಕುಪ್ಪಳಿಸುತ್ತಿವೆ!

ಸಿದ್ಧಾರ್ಥ : (ನಿರುತ್ಸಾಹದಿಂದ) ಹೂಂ...

(ಅಷ್ಟರಲ್ಲಿ ಹಣ್ಣು ಮುದುಕನೊಬ್ಬನು ಕೋಲೂರಿಕೊಂಡು ಬರುವನು. ಅವನನ್ನು ತಡೆಯಲು ಸೈನಿಕರು ಪ್ರಯತ್ನಿಸುವರು)

ಮುದುಕ : (ಹಠದಿಂದ) ನನ್ನ ಬಿಡಿ. ನಾನೂ ರಾಜಕುಮಾರನನ್ನು ನೋಡಬೇಕು.(ನಡುಗುವ ದನಿ, ಕಣ್ಣಮೇಲೆ ಕೈ ಅಡ್ಡ ಹಿಡಿದು) ಅಹಾ! ಎಂಥ ಮನಮೋಹಕ ಆಕೃತಿ! ಎಂಥ ತೇಜಸ್ಸು! ಇವನೇ ಏನು ರಾಜಕುಮಾರ? (ಜೋರಾಗಿ)ಎಲ್ಲರೂ ಬನ್ನಿ...ಎಲ್ಲರೂ ಬನ್ನಿ... ಕಪಿಲವಸ್ತುವಿನಲ್ಲಿ ಸೂರ್ಯೋದಯವಾಗಿದೆ. ಇನ್ನು ಕತ್ತಲೆಯಿಲ್ಲ!!

(ಪುಟ್ಟ ಮಕ್ಕಳು ಕುಣಿಯುತ್ತಾ ರಾಗವಾಗಿ ಕೂಗುವರು–ಇನ್ನು ಕತ್ತಲೆಯಿಲ್ಲ...ಇನ್ನು ಕತ್ತಲೆಯಿಲ್ಲ)

ಸಿದ್ಧಾರ್ಥ : (ಕುತೂಹಲದಿಂದ) ಚೆನ್ನ, ಅವನು ಯಾರು?ಅವನ ಬೆನ್ನೇಕೆ ಹಾಗೆ ಬಾಗಿದೆ? ಮುಖವೇಕೆ ಸುಕ್ಕುಗಟ್ಟಿದೆ? ಬಾಯಲ್ಲಿ ಹಲ್ಲುಗಳೇ ಇಲ್ಲ?

ಚೆನ್ನ : (ಒಡೆಯನ ಮುಗ್ಧತೆಗೆ ಮರುಗುತ್ತಾ) ಒಡೆಯಾ! ಒಡೆಯಾ! ಅವನು ಮುದುಕನಾಗಿದ್ದಾನೆ. ಆದ್ದರಿಂದ ಅವನ ಬೆನ್ನು ಬಾಗಿದೆ.

ಮಕ್ಕಳು : (ಅಣಕದ ದನಿಯಲ್ಲಿ) ಅವನು ಮುದುಕನಾಗಿದ್ದಾನೆ. ಆದ್ದರಿಂದ ಅವನ ಬೆನ್ನು ಬಾಗಿದೆ.(ಅಭಿನಯಿಸುತ್ತಾ ನಗುವರು)

ಚೆನ್ನ : ಅವನು ಮುದುಕನಾಗಿದ್ದಾನೆ. ಆದ್ದರಿಂದ ಹಲ್ಲುಗಳು ಉದುರಿಹೋಗಿವೆ.

ಮಕ್ಕಳು : (ಅಣಕದ ದನಿಯಲ್ಲಿ) ಅವನು ಮುದುಕನಾಗಿದ್ದಾನೆ. ಆದ್ದರಿಂದ ಹಲ್ಲುಗಳು ಉದುರಿಹೋಗಿವೆ.

ಚೆನ್ನ : (ಕೋಪದಿಂದ) ನೀವೇನು ಮಕ್ಕಳೋ ಅಲ್ಲ ಪಿಶಾಚಿಗಳ ಒಕ್ಕಲೋ? ಒಂದು ದಿನ ನೀವೂ ಹಾಗೆಯೇ ಮುದುಕರಾಗುತ್ತೀರಿ! ನಿಮ್ಮ ಬೆನ್ನು ಬಾಗುತ್ತದೆ. ಕೆನ್ನೆ ಸುಕ್ಕುಗಟ್ಟುತ್ತದೆ ಮತ್ತು ಹಲ್ಲುಗಳು ಉದುರಿಹೋಗುತ್ತವೆ! ಗೊತ್ತೇನು?

(ಮಕ್ಕಳು ಒಬ್ಬೊಬ್ಬರೂ ಒಂದೊಂದು ಮುಖಭಾವ ಮಾಡುವರು.)

ಮಕ್ಕಳು : ಇಲ್ಲ...ಇಲ್ಲ... ನಾವು ಮುದುಕರಾಗುವುದಿಲ್ಲ.(ಸೈನಿಕರು ಬಂದು ಎಲ್ಲರನ್ನೂ ಚದುರಿಸುವರು)

ಸಿದ್ಧಾರ್ಥ : ಚೆನ್ನ ...

ಚೆನ್ನ : ಹೇಳಿ ಒಡೆಯಾ.

ಸಿದ್ಧಾರ್ಥ : ಅವನು... ಅವನೇಕೆ ಮುದುಕನಾಗಿದ್ದಾನೆ?

ಚೆನ್ನ : ವೃದ್ಧಾಪ್ಯದಿಂದ ಕುಮಾರ. ವಯಸ್ಸು ಆಗ್ತಾ.. ಆಗ್ತಾ.. . ಎಲ್ಲರೂ ವೃದ್ದರಾಗುತ್ತಾರೆ.

ಸಿದ್ಧಾರ್ಥ : (ಅಚ್ಚರಿಯಿಂದ) ಎಲ್ಲರೂ...ಅಂದರೆ ನೀನೂ ವೃದ್ಧನಾಗುತ್ತೀಯೇನು ಹಾಗೆಯೇ...?

ಚೆನ್ನ : (ನಗುತ್ತಾ) ಹೂಂ...ಕುಮಾರ.

ಸಿದ್ಧಾರ್ಥ : (ನಂಬಲಾಗದವನಂತೆ)ನಮ್ಮ ತಂದೆ? ಗೌತಮೀ ಚಿಕ್ಕಮ್ಮ? ನನ್ನ... ನನ್ನ... ಯಶೋಧರೆ...?

ಚೆನ್ನ : (ದೃಢತೆಯಿಂದ) ಹೌದು ಅವರೆಲ್ಲರೂ ಒಂದಲ್ಲ ಒಂದು ದಿನ ವೃದ್ಧರಾಗಲೇ ಬೇಕು. ಆಯುಸ್ಸು ಇದ್ದರೆ!.... ಅದು ಪ್ರಕೃತಿ ನಿಯಮ.

ಸಿದ್ಧಾರ್ಥ : (ಉದ್ವೇಗದಿಂದ) ನಾನು? ನಾನು ಚೆನ್ನ? ನಾನೂ ಹಾಗೆಯೇ ಆಗುವೆನೇನು?

ಚೆನ್ನ : (ಜೋರಾಗಿ ನಗುತ್ತಾ) ಒಡೆಯಾ! ಒಡೆಯಾ! ನೀವೂ ಮನುಷ್ಯರಲ್ಲವೇನು? (ಗಂಭೀರವಾಗಿ) ಆದರೆ ಆ ಕಾಲ ಬಹಳ ದೂರವಿದೆ. ನೀವು ಈಗಲೇ ತಲೆ ಕೆಡಿಸಿಕೊಳ್ಳುವುದು ಬೇಡ.

(ಸಿದ್ಧಾರ್ಥ ಯೋಚನಾಮಗ್ನನಾಗಿ ಮೌನ ತಾಳುವನು. ಅಷ್ಟರಲ್ಲಿ ಶವಯಾತ್ರೆ ಕಂಡುಬರುವುದು)

ಸಿದ್ಧಾರ್ಥ : (ಕುತೂಹಲದಿಂದ) ಚೆನ್ನ ಅದೇನು? ಅವನೇಕೆ ನಾಲ್ಕು ಮಂದಿಯ ಹೆಗಲ ಮೇಲೆ ಮಲಗಿದ್ದಾನೆ? ಅವರೇಕೆ ಆತನನ್ನು ಹೊತ್ತೊಯ್ಯುತ್ತಿದ್ದಾರೆ? ಸುತ್ತಲಿರುವ ಜನರೆಲ್ಲಾ ಏಕೆ ಅಳುತ್ತಿದ್ದಾರೆ?

ಚೆನ್ನ : (ಸ್ವಗತ) ಅಯ್ಯೋ ದೇವರೇ...ಇದೂ ಬೀಳಬೇಕಾಯ್ತೇ ಕುಮಾರನ ಕಣ್ಣಿಗೆ! (ಪ್ರಕಟವಾಗಿ) ಒಡೆಯಾ... ಅದು ಶವಯಾತ್ರೆ.

ಸಿದ್ಧಾರ್ಥ : (ಅರ್ಥವಾಗದವನಂತೆ) ಶವಯಾತ್ರೆ?

ಚೆನ್ನ : ಆ ವ್ಯಕ್ತಿ ಸತ್ತಿದ್ದಾನೆ. ಸ್ಮಶಾನಕ್ಕೆ ಒಯ್ಯುತ್ತಿದ್ದಾರೆ. ಮಣ್ಣುಮಾಡವುದಕ್ಕಾಗಿ.

ಸಿದ್ಧಾರ್ಥ : (ಆತಂಕದಿಂದ) ಮಣ್ಣಿನಲ್ಲಿ ಹಾಕಿದರೆ ಅವನಿಗೆ ಉಸಿರು ಕಟ್ಟುವುದಿಲ್ಲವೇನು?

ಚೆನ್ನ : ಈಗಾಗಲೇ ಅವನ ಉಸಿರು ನಿಂತುಹೋಗಿದೆ.

ಸಿದ್ಧಾರ್ಥ : ಉಸಿರು ಏಕೆ ನಿಂತು ಹೋಗಿದೆ?

ಚೆನ್ನ : (ತುಸು ಅಸಮಧಾನದಿಂದ)ಬಿಡಿ ಕುಮಾರ, ಚಿಕ್ಕ ಮಗುವಿನಂತೆ ಪ್ರಶ್ನಿಸುತ್ತಿದ್ದೀರಿ. ನಿಮಗೆ ಅದೆಲ್ಲಾ ಈಗ ಅರ್ಥವಾಗದು. ಅದೋ...ಅಲ್ಲಿ ನೋಡಿ, ಜನ ಹೇಗೆ ನಿಮ್ಮತ್ತ ಕೈ ಬೀಸುತ್ತಿದ್ದಾರೆ, ಕೇಕೆ ಹಾಕಿ ಜಯಕಾರ ಕೂಗುತ್ತಿದ್ದಾರೆ!

ಸಿದ್ಧಾರ್ಥ : (ಮೊಂಡುತನದಿಂದ) ಅವನು ಏಕೆ ಸತ್ತ?

ಚೆನ್ನ : (ಸಿದ್ಧಾರ್ಥನ ಅಜ್ಞಾನಕ್ಕೆ ಮರುಗುತ್ತಾ) ಅಯ್ಯೋ... ಒಡೆಯಾ, ಈ ಭೂಮಿ ಮೇಲೆ ಜೀವ ತಾಳಿ ಬಂದವರೆಲ್ಲಾ ಕೊನೆಗೊಂದು ದಿನ ಸಾಯಲೇ ಬೇಕು. ಅದು ಪ್ರಕೃತಿ ನಿಯಮ. ಬಾಲ್ಯ, ಯೌವ್ವನ, ವೃದ್ಧಾಪ್ಯ ಮತ್ತು ಸಾವು... ಜೀವನದ ವಿವಿಧ ಹಂತಗಳು...

ಸಿದ್ಧಾರ್ಥ : ಚೆನ್ನ, ಸತ್ತ ಮೇಲೆ? ಸತ್ತಮೇಲೆ ಏನಾಗುತ್ತದೆ?

ಚೆನ್ನ : ಅದನ್ನು ಕಂಡವರು ಬಂದು ಹೇಳುವುದಿಲ್ಲವಲ್ಲಾ ಪ್ರಭೂ. ದೇಹ ವಿನಾಶಿ, ಆತ್ಮ ಅವಿನಾಶಿ ಎನ್ನುತ್ತಾರೆ ಪ್ರಾಜ್ಞರು. ನಾನಂತೂ ಅಜ್ಞ, ನನಗೆ ತಿಳಿಯದು. ಜನರು ನೋವು ಸಂಕಟಗಳಿಂದ ನರಳುವುದನ್ನು ಕಂಡಿದ್ದೇನೆ. ಸಾಯುವುದನ್ನು ಕಂಡಿದ್ದೇನೆ. ಈ ಕಷ್ಟ ಪರಂಪರೆಗೆ ಬಡವ ಬಲ್ಲಿದನೆಂಬ ಭೇದವೂ ಇಲ್ಲ...

ಸಿದ್ಧಾರ್ಥ : (ದುಃಖದಿಂದ) ಸಾಕು... ಸಾಕು ಚೆನ್ನ, ಇನ್ನೇನೂ ಹೇಳಬೇಡ. ರಥ ನಡೆಸು, ಅರಮನೆಗೆ ಹೋಗೋಣ.

## ದೃಶ್ಯ 3

(ಹಿನ್ನೆಲೆಯಲ್ಲಿ ಡಂಗುರದ ದನಿ, ಮಹಾಜನಗಳೇ... ಕೇಳ್ರಪ್ಪೋ ಕೇಳಿರಿ. ರಾಜಕುಮಾರ ಸಿದ್ಧಾರ್ಥರಿಗೆ ಪುತ್ರೋತ್ಸವವಾಗಿದೆ. ಆ ಪ್ರಯುಕ್ತ ರಾಜ್ಯಾದ್ಯಂತ ಉತ್ಸವವನ್ನು ಆಚರಿಸತಕ್ಕದ್ದು. ಸರ್ವಜನರೂ ಸಿಹಿ ತಿಂದು ಮಗುವನ್ನು ಆಶೀರ್ವದಿಸಬೇಕೆಂದು ಮಹಾರಾಜರ ಆಣತಿಯಾಗಿದೆ. ಕೇಳ್ರಪ್ಪೋ ಕೇಳಿರಿ...)

(ಸಂದರ್ಭ : ಅಂತಃಪುರದಲ್ಲಿ ಬಾಣಂತಿ ಕೊಠಡಿ–ಮಗುವನ್ನು ಮಡಿಲಲ್ಲಿ ಮಲಗಿಸಿಕೊಂಡು ತಾಯ್ತನದಿಂದ ಬೀಗುತ್ತಿರುವ ಯಶೋಧರೆ. ಪಕ್ಕದಲ್ಲೇ ಉಪಚರಿಸುತ್ತಾ ನಿಂತಿರುವ ರಾಣಿ ಗೌತಮಿ ಮತ್ತು ಪರಿಚಾರಿಕೆಯರು, ನಿರ್ಭಾವುಕತೆಯಿಂದ ಮಗುವನ್ನು ನೋಡುತ್ತಾ ನಿಂತ – ಸಿದ್ಧಾರ್ಥ.)

ಗೌತಮಿ : ಮಗೂ ಸಿದ್ಧಾರ್ಥ, ಕಂದನನ್ನು ಎತ್ತಿಕೊಳ್ಳುವುದಿಲ್ಲವೇನು? ನೋಡು, ಎಷ್ಟು ಮುದ್ದುಮುದ್ದಾಗಿದ್ದಾನೆ! ಎಲ್ಲಾ ನಿನ್ನಂತೆಯೇ ಹೀಗೆ ಬಾ, ಎತ್ತಿಕೋ.

ಸಿದ್ಧಾರ್ಥ : ಚಿಕ್ಕಮ್ಮ, ಎಳೆ ಮಗುವನ್ನು ಎತ್ತಿಕೊಂಡು ನನಗೆಲ್ಲಿ ಅಭ್ಯಾಸವಿದೆ? (ನಗುತ್ತಾ) ಆಮೇಲೆ ಏನಾದರೂ ಹೆಚ್ಚು ಕಡಿಮೆಯಾದರೆ ಯಶೋದೆ ಬಿಟ್ಟಾಳೇನು ನನ್ನನ್ನು?

ಯಶೋದೆ : (ಮುನಿಸಿನಿಂದ) ಬಿಡಿ ಅತ್ತೇ, ಅವರಿಗೇಕೆ ಕಷ್ಟ? (ತಾನೇ ಮುದ್ದು ಮಾಡುತ್ತಾ ಓರೆನೋಟದಿಂದ ಗಂಡನನ್ನು ಗಮನಿಸುವಳು, ಅಷ್ಟರಲ್ಲಿ ಮಹಾರಾಜ ಶುದ್ಧೋದನನ ಆಗಮನವಾಗುವುದು)

ಶುದ್ಧೋದನ : (ಆನಂದದಿಂದ) ಆಹಾ! ಇಂದೇ ಮಹಾ ಸುದಿನ! ಕಪಿಲವಸ್ತುವಿನ ಭಾಗ್ಯದ ಬಾಗಿಲು ತೆರೆಯಿತು! ಸಿದ್ಧಾರ್ಥ ನನಗೆಷ್ಟು ಆನಂದವಾಗಿದೆ ಎಂಬುದನ್ನು ಮಾತಿನಲ್ಲಿ ವರ್ಣಿಸಲಾರೆ. (ನಗುತ್ತಾ) ನೀನು ಅಪ್ಪನಾದೆ! ಅಭಿನಂದನೆಗಳು! ಗೌತಮಿ, ನಾವಿಬ್ಬರೂ ಅಜ್ಜ-ಅಜ್ಜಿಯರಾದೆವು. ನೋಡು! ಯಶೋಧಾ...ಮಗಳೇ, ಆರೋಗ್ಯವಾಗಿರುವೆಯೇನಮ್ಮ?ಹೀಗೆ ಬಾ... ಅಲೆ...ಲೇ... (ಶಿಶುವನ್ನು ಮುದ್ದುಗರೆಯುತ್ತಾ) ಏನೋ ಕಳ್ಳಾ ನನ್ನ ಹೃದಯ ಕದ್ದು ನಗುತ್ತಿರುವೆಯೇನೋ...?

ಸಿದ್ಧಾರ್ಥ : ಅಪ್ಪಾ!

ಶುದ್ಧೋದನ : ಹೇಳು, ಇಡೀ ರಾಜ್ಯಕ್ಕೆ ಸಿಹಿ ಹಂಚುವ ಏರ್ಪಾಡು ಮಾಡಿದ್ದೇವೆ. ಎಲ್ಲರೂ ಆನಂದದಿಂದ ಕುಣಿದು ಕುಪ್ಪಳಿಸಬೇಕೆಂದು ಆಜ್ಞೆ ಹೊರಡಿಸಿದ್ದೇವೆ! ಸರಿಯಷ್ಟೇ?

ಸಿದ್ಧಾರ್ಥ : (ಅಸಮಾಧಾನದಿಂದ) ಯಾಕೆ ಅಂತ? ಆನಂದ ಅಂತರಂಗದಿಂದ ಹೊಮ್ಮಬೇಕು. ಆಜ್ಞೆ ಮಾಡುವುದರಿಂದ ಬರುವುದೇನು? ಜನರಿಗೆ ನಾನಾ ವಿಧವಾದ ಸಂಕಷ್ಟಗಳು ಇರುತ್ತವೆ. ಮಹಾರಾಜರಿಗೆ ಮೊಮ್ಮಗ ಹುಟ್ಟಿದಾಕ್ಷಣ, ಅವರು ಸಂತಸ ಹಂಚಿಕೊಳ್ಳಲು ಆಗುವುದೇನು?

ಶುದ್ಧೋದನ : (ಅಚ್ಚರಿಯಿಂದ) ಇದೆಂಥ ಮಾತು? ರಾಜನ ಸಂತೋಷದಲ್ಲಿ ಪ್ರಜೆಗಳು ಭಾಗಿಯಾಗಬಾರದೇನು ಹಾಗಾದರೆ?

ಸಿದ್ಧಾರ್ಥ : ಇಲ್ಲವೆನ್ನಲಿಲ್ಲ ನಾನು, ಆದರೆ ಅದಕ್ಕಿಂತ ಮುಖ್ಯವಾದುದು ಪ್ರಜೆಗಳ ದುಃಖದಲ್ಲಿ ರಾಜ ಭಾಗಿಯಾಗುವುದು ಎಂದೇ ನನಗನಿಸುತ್ತದೆ.

ಶುದ್ಧೋದನ : ಏನೋ ಅಪ್ಪ, ನಿನ್ನ ಮಾತಿನ ವರಸೆಯೇ ಈ ದಿನ ವಿಚಿತ್ರವಾಗಿದೆ. ನೋಡು! ಎಷ್ಟು ಸೊಗಸಾಗಿ ನಗುತ್ತಿದ್ದಾನೆ, ನನ್ನ ಮೊಮ್ಮಗ!

ಸಿದ್ಧಾರ್ಥ : ಅಪ್ಪಾಜಿ,ಹಾಗಂತ? ಈ ನಗು ಶಾಶ್ವತವೇ ಹೇಳಿ?

ಶುದ್ಧೋದನ : (ಕೋಪದಿಂದ) ನಿದ್ರೆ ಕೆಟ್ಟು, ನಿನ್ನ ತಲೆಯೂ ಕೆಟ್ಟಿದೆ ಎಂದು ತೋರುತ್ತದೆ. ಹೋಗು, ಮೊದಲು ವಿಶ್ರಮಿಸು, ಕಣ್ತುಂಬ ನಿದ್ರಿಸು

ಸಿದ್ಧಾರ್ಥ : (ನಗುತ್ತಾ) ಕ್ಷಮಿಸಿ ಅಪ್ಪಾಜಿ, (ಮಗುವಿನತ್ತ ನೋಡುತ್ತಾ) ನಿಮ್ಮ ಮಾತು ನಿಜ. ನಿಮ್ಮ ಮೊಮ್ಮಗನ ನಗು ನಯನ ಮನೋಹರವಾಗಿದೆಯಷ್ಟೇ ಅಲ್ಲ, ಹೃದಯವನ್ನೇ ಸೂರೆಗೊಳ್ಳುವಂತಿದೆ.

ಶುದ್ಧೋದನ : (ಗೆಲುವಿನ ನಗೆಯೊಂದಿಗೆ) ಹಾಗೆ ಬಾ ದಾರಿಗೆ!

## ದೃಶ್ಯ 4

(ಸಂದರ್ಭ : ಯಶೋಧರೆ ಮಗುವನ್ನು ಆಲಿಂಗಿಸಿಕೊಂಡು ಹಾಯಾಗಿ ನಿದ್ರಿಸುತ್ತಿರುವಳು. ಆದರೆ ಸಿದ್ಧಾರ್ಥನಿಗೆ ನಿದ್ರೆಯಿಲ್ಲ. ಅಶಾಂತ ಮನಸ್ಕನಾಗಿ ತಾಯಿ-ಮಗುವನ್ನು ತದೇಕ ದೃಷ್ಟಿಯಿಂದ ನೋಡುವನು.)

ಸಿದ್ಧಾರ್ಥ : (ಸ್ವಗತ) ಈ ಸುಖ ಶಾಶ್ವತವಲ್ಲ. ನನ್ನ ಯಶೋಧರ, ಈ ಮಗು ರಾಹುಲ, ಗೌತಮಿ ಚಿಕ್ಕಮ್ಮ, ಅಪ್ಪ ಮತ್ತು ಈ ಸಾಮ್ರಾಜ್ಯ... ಯಾವುದೂ ಶಾಶ್ವತವಲ್ಲ! (ತಳಮಳಗೊಂಡು ಅತ್ತಿತ್ತ ಅಡ್ಡಾಡುವನು) ಜನ ಎಷ್ಟು ನೋವು ಸಂಕಟಗಳಿಂದ ನರಳುತ್ತಿದ್ದಾರೆ! ಹಾಗಿರುವಾಗ ನಾನು, ನನ್ನ ಸುಖದ ಭ್ರಮೆಯಲ್ಲಿ ಮುಳುಗಿರಲೇ? ಹೇಗೆ ಸಾಧ್ಯ? ಕುಳಿತಲ್ಲಿ, ನಿಂತಲ್ಲಿ, ಜನರ ನೋವು ತುಂಬಿದ ಮುಖಗಳೇ ಕಂಡು ಬರುತ್ತಿರುವಾಗ? ಏನು ಕಾರಣ, ಈ ದುಃಖಕ್ಕೆ... ಈ ಅಪಾರ ದುಃಖಕ್ಕೆ ಏನು ಕಾರಣ? ಹೌದು ಜನರ ನೋವು ಸಂಕಟಗಳಿಗೆ ಕಾರಣ ಹುಡುಕಬೇಕು! ಪರಿಹಾರ ಕಾಣಬೇಕು!

ಹಿನ್ನೆಲೆ ಧ್ವನಿ : ಇದೇ ಸುಸಮಯ ಸಿದ್ಧಾರ್ಥ, ಎದ್ದೇಳು, ಮೋಹದ ಬಲೆ ಇನ್ನೊಮ್ಮೆ ಬಂಧಿಸುವ ಮೊದಲು ಎದ್ದುಬಿಡು! ಹೋಗು...ಹೊರಟು ಹೋಗು...ಸಮಷ್ಟಿ ಸುಖಕ್ಕಾಗಿ ವೈಯಕ್ತಿಕ ಸುಖವನ್ನು ತ್ಯಜಿಸು....! ತ್ಯಜಿಸಿ ಬಿಡು ಸಿದ್ಧಾರ್ಥ....

ಸಿದ್ಧಾರ್ಥ : (ಗೊಂದಲದಿಂದ) ಆದರೆ ನನಗೆ ಜನ್ಮ ನೀಡಿದ ತಂದೆಗೆ, ಮಮತೆ ತೋರಿದ ತಾಯಿಗೆ, ಪ್ರೇಮ ತೋರಿದ ಮಡದಿಗೆ, ಅಕ್ಕರೆಯ ಮಗುವಿಗೆ, ದ್ರೋಹ ಬಗೆದಂತಾಗುವುದಿಲ್ಲವೇ...

ಹಿನ್ನೆಲೆಧ್ವನಿ : ಅದು ಅನಿವಾರ್ಯ. ಲೋಕವನ್ನು ಬೆಳಗುವ ದೀಪದಡಿ ಕತ್ತಲು ಅನಿವಾರ್ಯ. ಆದರೆ ಕ್ರಮೇಣ ಅಲ್ಲಿಯೂ ಬೆಳಕಾಗುವುದು. ಬಿಟ್ಟುಬಿಡು ಸಿದ್ಧಾರ್ಥ, ಕ್ಷಣಿಕ ಸುಖದ ಮೋಹವನ್ನು. ಅದೋ ಅಲ್ಲಿದೆ ಶಾಶ್ವತ ಬೆಳಕು. ನಡೆ ಮುಂದೆ, ಮತ್ತೆ ಮುನ್ನಡೆಸು ಜನರನ್ನು...ಬೆಳಕಿನಡೆಗೆ... ಬೆಳಕಿನಡೆಗೆ.. ಬೆಳಕಿನಡೆಗೆ....

(ಸಿದ್ಧಾರ್ಥನು ದೃಢ ಹೆಜ್ಜೆಯನ್ನಿಟ್ಟು ಮೆಲ್ಲಗೆ ಮುನ್ನಡೆಯುತ್ತಿದ್ದಂತೆಯೇ ತೆರೆ ಬೀಳುವುದು.)

# 3. ನಿರೀಕ್ಷೆ

### ಚಟುವಟಿಕೆಗಳು

ಪುರಾಣ ಕತೆಗಳ ಕುರಿತು ಮಕ್ಕಳಲ್ಲಿ ಪ್ರಶ್ನಿಸುವುದು. ಅವರಿಗೆ ತಿಳಿದಿರುವ ಕತೆಗಳನ್ನು ಅವರಿಂದ ಹೇಳಿಸುವುದು. ಬಳಿಕ 'ರಾಮಾಯಣ' ಮಹಾಕಾವ್ಯದಲ್ಲಿನ ಯಾವುದಾದರೂ ಕೆಲವು ಸಂದರ್ಭಗಳನ್ನು ನೆನಪಿಸುವುದು. ಈ ರೀತಿಯಲ್ಲಿ 'ನಿರೀಕ್ಷೆ' ಎನ್ನುವ ಪಾಠದ ಮೂಲಕ ರಾಮ ಭಕ್ತೆ 'ಶಬರಿ'ಯ ಕಥೆಯನ್ನು ಸಂಕ್ಷಿಪ್ತವಾಗಿ ಅಧ್ಯಾಪಕರು ಹೇಳುತ್ತಾ ಪಾಠ ಪ್ರವೇಶ ಮಾಡಬಹುದು. ಓದುವಿಕೆ, ನವೀನ ಪದಗಳ ಅರ್ಥ ಕಂಡುಹುಡುಕುತ್ತಾ ಪಾಠವನ್ನು ಅರ್ಥೈಸಿಕೊಳ್ಳಲು ಸುಲಭ.

### ಉತ್ತರಿಸಿರಿ

ಪಾಠವನ್ನು ಓದಿ ಅರ್ಥಮಾಡಿಕೊಂಡ ಬಳಿಕ ಆಶಯ ವ್ಯತ್ಯಾಸವಾಗದಂತೆ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಲಿ.

### ಸಂದರ್ಭ ಬರೆಯಿರಿ

ಆಶಯ ಗ್ರಹಣಕ್ಕೆ ಪ್ರಾಧಾನ್ಯ ನೀಡುವ ಇಂತಹ ಚಟುವಟಿಕೆಗಳನ್ನು ಈಗಾಗಲೇ ಮಕ್ಕಳು ತಿಳಿದಿದ್ದಾರೆ. ಆದುದರಿಂದ ಗುಂಪಿನಲ್ಲಿ ಕುಳಿತು ಮಕ್ಕಳು ಈ ಚಟುವಟಿಕೆಯನ್ನು ಪೂರೈಸಲಿ. ಮಂಡನೆಯಾದ ಬಳಿಕ ಅಧ್ಯಾಪಕರು ಸರಿಪಡಿಸಿ ಬರೆಯಲು ಹೇಳಲಿ.

ಆಶಯ ಸ್ಪಷ್ಟತೆ, ವಾಕ್ಯರಚನೆಯ ಶೈಲಿಯ ಕಡೆ ಹೆಚ್ಚು ಗಮನ ನೀಡಲಿ.

- ಉದಾಹರಣೆಗೆ – 'ಮಗಳೇ ಏಳು, ನಿನಗೆ ಏನಾಗಬೇಕು?'

ಈ ಮಾತನ್ನು 'ನಿರೀಕ್ಷೆ'ಎನ್ನುವ ಪಾಠದಲ್ಲಿ ಮತಂಗ ಮುನಿಯು ತನಗೆ ಸಾಷ್ಟಾಂಗ ನಮಸ್ಕರಿಸಿದ ಬೇಡತಿಯೊಡನೆ ಕೇಳುತ್ತಾರೆ.

- 'ತಾಯೇ, ನೀನಾರು? ಯಾರನ್ನು ಕಾಯುತ್ತಿರುವೆ?

ಈ ಮಾತುಗಳನ್ನು 'ನಿರೀಕ್ಷೆ' ಪಾಠದಿಂದ ಆರಿಸಿಕೊಳ್ಳಲಾಗಿದೆ. ರಾಮನ ಆಗಮನವನ್ನೇ ಕಾಯುತ್ತಿದ್ದಳು ಶಬರಿ. ಕೈಗಳಲ್ಲಿ ಹೂ ಹಣ್ಣುಗಳನ್ನು ಹಿಡಿದು ಕಾಯುತ್ತಿರುವ ಅವಳೊಡನೆ ರಾಮನು ಈ ಮಾತುಗಳನ್ನು ಹೇಳಿದನು.

- ‘ಶಬರಿ, ನೀನಿನ್ನೂ ಹೊರಡುವ ಕಾಲ ಬಂದಿಲ್ಲ ಮಗಳೇ’

‘ನಿರೀಕ್ಷೆ’ಪಾಠದಲ್ಲಿ ಈ ಮಾತುಗಳನ್ನು ಮತಂಗ ಮುನಿಗಳು ಶಬರಿಯೊಡನೆ ಹೇಳುತ್ತಾರೆ. ಮತಂಗ ಮುನಿಗಳು ತಾವು ದೇವರ ಪಾದವನ್ನು ಸೇರುವ ಕಾಲ ಸಮೀಪಿಸಿದೆ ಎಂದು ಹೇಳುವಾಗ ಶಬರಿಯು ‘ನಾನೂ ನಿಮ್ಮೊಂದಿಗೆ ಬರುತ್ತೇನೆ’ ಎನ್ನುತ್ತಾಳೆ. ಆಗ ಮತಂಗ ಮುನಿಗಳು ಈ ಮಾತನ್ನು ಹೇಳಿದರು.

## ಸಂಭಾಷಣೆ ರಚಿಸಿರಿ

ಸಂಭಾಷಣೆ ಬರೆಯುವ ಚಟುವಟಿಕೆಯು ಪದ ಪ್ರಯೋಗ, ಆಶಯ ಸ್ಪಷ್ಟತೆ, ಲೇಖನ ಚಿಹ್ನೆಗಳ ಬಳಕೆಗೆ ಸಹಕಾರಿಯಾಗಿದೆ. ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಸಂಭಾಷಣೆ ಬರೆಯಲು ಹೇಳುವುದು. ಮಕ್ಕಳು ಮೊದಲು ಕತೆಯನ್ನು ಓದಿ ಯಾವೆಲ್ಲಾ ಪಾತ್ರಗಳು ಬರುತ್ತವೆ ಅಥವಾ ಬರಬೇಕು ಎಂಬುದನ್ನು ತಿಳಿಯಲಿ. ನಂತರ ಕಥೆಗನುಗುಣವಾಗಿ ಸಂಭಾಷಣೆ ಬರೆದು ಮಂಡಿಸಲಿ. ಅಧ್ಯಾಪಕರ ಮಾರ್ಗದರ್ಶನ ಇಲ್ಲಿ ಅಗತ್ಯ.

(ಮತಂಗ ಮುನಿಗಳು ಧ್ಯಾನ ಮುಗಿಸಿ ಕಣ್ತೆರೆಯುವ ಸಂದರ್ಭ. ಆಗ ಬೇಡತಿಯೊಬ್ಬಳು ಅವರಿಗೆ ಸಾಷ್ಟಾಂಗ ನಮಸ್ಕರಿಸುತ್ತಿದ್ದಾಳೆ.)

ಮತಂಗ ಮುನಿ : ಮಗಳೇ ಏಳು, ನೀನಾರು?

ಬೇಡತಿ : ನಾನು ಈ ಕಾಡಿನ ಬೇಡನ ಮಗಳು, ಪ್ರಾಣಿಗಳನ್ನು ಬೇಟೆಯಾಡಿ ತಿನ್ನುವುದು ನನಗೆ ಸರಿ ತೋರುವುದಿಲ್ಲ, ನನಗೆ ಈ ವೃತ್ತಿಯಲ್ಲಿ ವಿರಕ್ತಿ ಮೂಡಿದೆ.

ಮತಂಗ ಮುನಿ : ಹೌದೇ! ಅದಕ್ಕೆ ಈಗ ನಾನೇನು ಮಾಡಬೇಕು?

ಬೇಡತಿ : ನನಗೆ ದೇವರನ್ನು ಕುರಿತು ತಪಸ್ಸು ಮಾಡಲೂ ಯಜ್ಞ ಯಾಗಾದಿಗಳನ್ನು ಮಾಡಲೂ ಸಾಮರ್ಥ್ಯವಿಲ್ಲ.

ಮತಂಗ ಮುನಿ : ಹೌದು, ಹೇಳು, ನಿನಗಾಗಿ ಯಾವ ಯಜ್ಞ ಮಾಡಬೇಕು?

ಬೇಡತಿ : ಇಲ್ಲ ಸ್ವಾಮಿ, ತಾವು ಮಾಡುತ್ತಿರುವ ಸತ್ಕಾರ್ಯಗಳಲ್ಲಿ ಸಹಾಯ ಮಾಡಬೇಕೆಂದಿದೆ. ತಾವು ನನ್ನನ್ನು ನಿಮ್ಮ ಶಿಷ್ಯಳನ್ನಾಗಿ ಸ್ವೀಕರಿಸಿ.

ಮತಂಗಮುನಿ : ಆಯ್ತು, ನಿನ್ನ ಇಚ್ಛೆಯಂತೆಯೇ ಆಗಲಿ. (ಅಂದಿನಿಂದ ಅವಳು ಮುನಿಗಳ ಸೇವೆಯನ್ನು ಮಾಡುತ್ತಾ ಕಾಲ ಕಳೆದಳು)

## ವರ್ಣನೆ ಬರೆಯಿರಿ

ಮಕ್ಕಳಲ್ಲಿ ಗ್ರಹಣ ಸಾಮರ್ಥ್ಯ, ಬರವಣಿಗೆಯ ಶೈಲಿಯನ್ನು ಬೆಳೆಸುವ ಉತ್ತಮ ಚಟುವಟಿಕೆಯಾಗಿದೆ ವರ್ಣನೆ. ಇಲ್ಲಿ ಮಕ್ಕಳು ಒಂದು ವಿಷಯವನ್ನು ಸೂಕ್ತವಾದ ಇನ್ನೊಂದು ವಿಷಯಕ್ಕೆ ಹೋಲಿಸಬಹುದು, ತಮ್ಮ ಕಲ್ಪನಾ ಸಾಮರ್ಥ್ಯವನ್ನು ಪ್ರದರ್ಶಿಸಬಹುದು. ಒಟ್ಟಿನಲ್ಲಿ ಇದು ಸೃಜನಾತ್ಮಕ ಬರವಣಿಗೆಗೆ ಸಹಾಯಕವಾಗಿದೆ.

ವರ್ಣನೆಯನ್ನು ಸಾಧ್ಯವಾದಷ್ಟೂ ವೈಯಕ್ತಿಕವಾಗಿ ಬರೆದು ಮಂಡಿಸಿದ ಬಳಿಕ ಗುಂಪಿನಲ್ಲಿ ಕುಳಿತು ಪರಿಷ್ಕರಿಸುವುದು ಉತ್ತಮ.

### ಹಿಮಾಲಯ

ಆದಿ ಅಂತ್ಯವಿಲ್ಲವೆನ್ನುವಂತೆ ವಿಶಾಲವಾಗಿ ಹರಡಿರುವ ಹಿಮದಿಂದ ಆವೃತವಾಗಿರುವ ಸಾಲು ಸಾಲು ಪರ್ವತಗಳು. ದೇವ ಗಂಧರ್ವರಿಗೆ, ತಪೋನಿರತರಿಗೆ ಪ್ರಿಯವೆನಿಸಿರುವ ಕಣಿವೆ, ತಪ್ಪಲುಗಳು. ಬೆಳಗ್ಗಿನ ಹೊತ್ತು ಬೆಳ್ಳಿಕವಚ ಹೊದಿಸಿದಂತೆಯೂ ಸಂಜೆ ಚಿನ್ನವನ್ನು ಕರಗಿಸಿ ಸುರಿದಂತೆಯೂ ಕಾಣುವ ದೃಶ್ಯ ಮನೋಹರವಾದುದು. ರಮಣೀಯ ಪರ್ವತ ಶೃಂಗಗಳು, ಹಾಲಿನ ನೊರೆ ಉಕ್ಕಿದಂತೆ, ಸಕ್ಕರೆಯನ್ನು ತಂದು ರಾಶಿ ಸುರಿದಂತೆ ಎತ್ತೆತ್ತಲು ಹರಡಿರುವ ಹಿಮದ ರಾಶಿ. ಹಸಿರು ವನರಾಶಿಯ ಮಧ್ಯೆ ಸ್ವಚ್ಛಂದವಾಗಿ ವಿಹರಿಸುವ ವನ್ಯ ಮೃಗಗಳು. ತನಗ್ಯಾರು ಎದುರಿಲ್ಲವೆಂದು ಸದಾ ಬೀಸುವ ಕುಳಿರ್ಗಾಳಿ– ಇವೆಲ್ಲವುಗಳನ್ನು ನೋಡುವಾಗ ನಾವೆಲ್ಲಿದ್ದೇವೆ ಎನ್ನುವುದೇ ಮರೆತುಹೋಗುತ್ತದೆ.

### ಪಾತ್ರಚಿತ್ರಣ ಬರೆಯಿರಿ

ಕಥೆ ಒಳ್ಳೆಯದಿದೆ, ಕೆಟ್ಟದಿದೆ ಎಂದು ಹೇಳಬೇಕಾದರೆ ಅದರ ಆಸ್ವಾದನೆ ಆಗಬೇಕು. ಆಗ ಮಾತ್ರ ನಮಗೆ ಕತೆ, ಪಾತ್ರಗಳು ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎಂದು ತಿಳಿಯುತ್ತದೆ. ಪಾತ್ರಚಿತ್ರಣ ಬರೆಯುವ ಮೊದಲು ಕತೆಯಲ್ಲಿ ಬಂದಿರುವ ಪಾತ್ರಗಳು ಯಾವುದೆಲ್ಲಾ ಎಂದು ಗುರುತಿಸಬೇಕು. ಬಳಿಕ ತಮಗಿಷ್ಟವಾದ ಪಾತ್ರದ ಕುರಿತು ಟಿಪ್ಪಣಿ ಬರೆದು ಮಂಡಿಸಲಿ. ಅಧ್ಯಾಪಕರು ಸೂಕ್ತ ಸಲಹೆಗಳನ್ನು ನೀಡಿ ಬರವಣಿಗೆಯನ್ನು ಉತ್ತಮಪಡಿಸಲಿ.

**ಪಾತ್ರ ಚಿತ್ರಣ**

'ನಿರೀಕ್ಷೆ' ಕಥೆಯಲ್ಲಿ ಬರುವ ಕಥಾಪಾತ್ರಗಳು : ಮತಂಗ ಮುನಿ, ಬೇಡತಿ (ಶಬರಿ), ರಾಮ, ಲಕ್ಷ್ಮಣ.

ಇವುಗಳಲ್ಲಿ ನನಗೆ ಶಬರಿಯ ಪಾತ್ರ ಇಷ್ಟವಾಯಿತು. ಅವಳು ಒಬ್ಬ ಬೇಡತಿ. ಅವಳ ಕೆಲಸ ಪಕ್ಷಿ, ಪ್ರಾಣಿಗಳನ್ನು ಕೊಂದು ತಿನ್ನುವುದು. ಆದರೆ ಅವಳು ಅಂತಹ ಕೆಲಸಗಳನ್ನು ಬಿಟ್ಟು ಒಬ್ಬ ಋಷಿವರ್ಯನಿಗೆ ಸಹಾಯಕಳಾಗಿ ಸಾತ್ವಿಕ ಜೀವನವನ್ನು ನಡೆಸುತ್ತಾಳೆ. ಭಕ್ತಿ ಮಾರ್ಗದಲ್ಲಿ ನಡೆದು ತನ್ನ ಆರಾಧ್ಯ ದೇವನ ದರ್ಶನದಿಂದ ಜೀವನದಲ್ಲಿ ಸಾರ್ಥಕತೆಯನ್ನು ಅನುಭವಿಸುತ್ತಾಳೆ. ಭಕ್ತಿಯ ಪರಾಕಾಷ್ಠೆ ಅವಳಲ್ಲಿತ್ತು. ರಾಮನಾಮವೇ ಅವಳಿಗೆ ಸರ್ವಸ್ವವಾಗಿತ್ತು. ಭಕ್ತಿಯಿಂದ ಏನು ಬೇಕಾದರೂ ಸಾಧಿಸಬಹುದು ಎಂಬುದನ್ನು ಅವಳು ಜಗತ್ತಿಗೆ ತೋರಿಸಿಕೊಟ್ಟಿದ್ದಾಳೆ.

### ವಾಕ್ಯ ಬರೆಯಿರಿ

ಭಾಷಾ ಸತ್ಯಾಂಶಗಳ ತಿಳುವಳಿಕೆಗೆ ಇಂತಹ ಚಟುವಟಿಕೆಗಳು ಅಗತ್ಯ. ಅರ್ಥಪೂರ್ಣವಾದ ವಾಕ್ಯ ರಚನೆಯ ಸಾಮರ್ಥ್ಯವನ್ನು ಇಂತಹ ಚಟುವಟಿಕೆಗಳ ಮೂಲಕ ಈಡೇರಿಸಬಹುದು. ಪಾಠ ಪುಸ್ತಕದಲ್ಲಿರುವ ಮಾದರಿಯಂತೆ ಉಳಿದ ವಾಕ್ಯಗಳನ್ನು ಸರಿಪಡಿಸಿ ಬರೆಯಲಿ. ಇಲ್ಲಿ ಸರಳ ವಾಕ್ಯಗಳನ್ನು ನೀಡಲಾಗಿದೆ. ಸೂಕ್ತ ಬದಲಾವಣೆಗಳೊಂದಿಗೆ ಅವುಗಳನ್ನು ಅರ್ಥವತ್ತಾಗಿ ಒಂದೇ ವಾಕ್ಯವನ್ನಾಗಿ ಮಕ್ಕಳು ಬರೆಯಲಿ.

- ಶಬರಿಯು ಮುನಿಗಳನ್ನು ಕಂಡು ಸಾಷ್ಟಾಂಗ ನಮಸ್ಕರಿಸಿದಳು.
- ಮುಹಮ್ಮದ್ ಗಿಡವನ್ನು ನೆಟ್ಟು ನೀರನ್ನು ಎರೆದನು.
- ಕಾಗೆ ಮರದಲ್ಲಿ ಕುಳಿತು ಕಾ ಕಾ ಕಾ ಎಂದು ಕೂಗಿತು.

ಪೂರಕವಾಗಿ ಅಧ್ಯಾಪಕರು ಇನ್ನಷ್ಟು ವಾಕ್ಯಗಳನ್ನು ನೀಡಬಹುದು.

## 4. ಸದಾಚಾರ

### ಚಟುವಟಿಕೆಗಳು

ಮನೆಯಲ್ಲಿ ಮಕ್ಕಳ ಸ್ವಭಾವ ಹೇಗಿರುತ್ತದೆ ಎಂದು ತಿಳಿದು ಮಕ್ಕಳಲ್ಲಿ ಹಿರಿಯರಿಗೆ ಎದುರುತ್ತರ ಕೊಡುತ್ತೀರಾ? ಕಷ್ಟದಲ್ಲಿರುವವರಿಗೆ ಸಹಾಯ ಮಾಡುತ್ತೀರಾ? ಮುಂತಾದ ಪ್ರಶ್ನೆಗಳನ್ನು ಕೇಳುವುದು. ಮಕ್ಕಳು ವಿನಯವಂತರಾಗಿದ್ದು ಹಿರಿಯರ ಮಾತನ್ನು ಗೌರವಿಸುವ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸುವುದು. ಇಂತಹ ಆಶಯಗಳಿರುವ ಪದ್ಯ ಯಾ ಕೀರ್ತನೆಗಳು ನಿಮಗೆ ತಿಳಿದಿದೆಯೇ? ಎಂದು ಕೇಳುತ್ತಾ ಪಾಠ ಪ್ರವೇಶ ಮಾಡಬಹುದು.

### ಹಾಡಿರಿ

ಪುರಂದರದಾಸರ ಕೀರ್ತನೆಗಳ ಪರಿಚಯದ ಬಳಿಕ 'ಸದಾಚಾರ' ಪದ್ಯವನ್ನು ವೈಯಕ್ತಿಕವಾಗಿ ಅಥವಾ ಗುಂಪಿನಲ್ಲಿ ಹಾಡಲು ಹೇಳುವುದು. ರಾಗ, ತಾಳ ಉಚ್ಚಾರಸ್ಪಷ್ಟತೆಯೊಂದಿಗೆ ಚೆನ್ನಾಗಿ ಹಾಡಿದವರನ್ನು ಅಭಿನಂದಿಸುವುದು. ಬಳಿಕ ಅಧ್ಯಾಪಕರು ಹಾಡುವುದೋ ಇಲ್ಲವೇ ಧ್ವನಿ ಸುರುಳಿ ಕೇಳಿಸುವುದೋ ಮಾಡುವುದು.

### ಉತ್ತರಿಸಿರಿ

ಆಶಯಗ್ರಹಣದ ಪರೀಕ್ಷೆಗಾಗಿರುವ ಇಂತಹ ಚಟುವಟಿಕೆಗಳು ಈಗಾಗಲೇ ಮಕ್ಕಳಿಗೆ ತಿಳಿದಿದೆ. ಈ ಚಟುವಟಿಕೆಯನ್ನು ಅವರು ವೈಯಕ್ತಿಕವಾಗಿ ನಡೆಸಲಿ.

### ಚರ್ಚಿಸಿರಿ

ಬರವಣಿಗೆಯಂತೆಯೇ ಮಾತುಗಾರಿಕೆಯೂ ಒಂದು ಸೃಜನಾತ್ಮಕ ಗುಣ. ಮಕ್ಕಳಲ್ಲಿ ಮಾತುಗಾರಿಕೆಯ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶದಿಂದ 'ಚರ್ಚಿಸಿರಿ' ಚಟುವಟಿಕೆ ನೀಡಲಾಗಿದೆ. ಮನುಷ್ಯನಲ್ಲಿರಬೇಕಾದ ಉತ್ತಮ ಗುಣ ನಡತೆಗಳು ಯಾವುವು ಎಂಬುದನ್ನು ಗುರುತಿಸಲಿ. ಎರಡು ಗುಂಪುಗಳನ್ನಾಗಿ ಮಾಡಿ ಈ ವಿಷಯದ ಕುರಿತು ಮಾತನಾಡಲು ಹೇಳಬಹುದು. ಉತ್ತಮ ಗುಣ ನಡತೆಗಳಿಂದ ಆಗುವ ಪ್ರಯೋಜನ ಹಾಗೂ ಉತ್ತಮ ಸ್ವಭಾವ ಇಲ್ಲದಿದ್ದರೆ ಆಗಬಹುದಾದ ಅನಾಹುತಗಳ ಕುರಿತು ಮಕ್ಕಳು ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಅವಕಾಶ ನೀಡುವುದು.

### ಸಾಲು ಗುರುತಿಸಲಿ

ಪದ್ಯದ ಆಶಯಗ್ರಹಣಕ್ಕೆ ಪದ್ಯದ ಸಾಲುಗಳ ಅರ್ಥವನ್ನು ನೀಡಿ ಸಾಲುಗಳನ್ನು ಗುರುತಿಸಲು ಹೇಳಲಾಗಿದೆ. ಪದ್ಯವನ್ನು ಈಗಾಗಲೇ ಸಾಕಷ್ಟು ಬಾರಿ ಹಾಡಿರುವ ಮಕ್ಕಳು ಆಶಯವನ್ನು ತಿಳಿದಿರುತ್ತಾರೆ. ಜೊತೆಗೇ ಓದುವ ಸಾಮರ್ಥ್ಯವನ್ನು ಹೆಚ್ಚಿಸಲೂ ಇಂತಹ ಚಟುವಟಿಕೆಗಳು ಅಗತ್ಯ. ಪಾಠ ಪುಸ್ತಕದಲ್ಲಿರುವ ಸಾಲುಗಳ ಪದ್ಯ ರೂಪ ಹೀಗಿದೆ.

- ಹೆತ್ತ ತಾಯ್ತಂದೆಗಳ ಚಿತ್ತವ ನೋಯಿಸಿ ನಿತ್ಯ ದಾನವ ಮಾಡಿ ಫಲವೇನು.
- ಸ್ನಾನಕ್ಕೆ ಪಾನಕ್ಕೆ ಆಗುವ ತಿಳಿನೀರು ಕಾನನದೊಳಗಿದ್ದು ಫಲವೇನು.

### ಸ್ವಾರಸ್ಯ ಬರೆಯಿರಿ

ಪದ್ಯ ಯಾ ಗದ್ಯವನ್ನು ಓದಿ ಆಶಯಗ್ರಹಣದ ಬಳಿಕ ಅದರಲ್ಲಿ ಹೇಳಿರುವ ಸ್ವಾರಸ್ಯವನ್ನು ಗುರುತಿಸಿ ಬರೆಯಲಿ. ಬರವಣಿಗೆ ಗುಂಪಿನಲ್ಲಿ ಯಾ ವೈಯಕ್ತಿಕವಾಗಿ ಇರಲಿ. ಮಂಡಿಸಿದ ಬಳಿಕ ತಪ್ಪುಗಳನ್ನು ತಿದ್ದಿ ಸರಿಪಡಿಸಿ ವಿಷಯಗಳನ್ನು ಕ್ರೋಡೀಕರಿಸಿ ಬರೆಯಲಿ.

### ಸ್ವಾರಸ್ಯ ಹೀಗೂ ಇರಬಹುದು

ಸತ್ಯ ಸದಾಚಾರ ಇಲ್ಲದವನು ಜಪ
ಹತ್ತು ಸಾವಿರ ಮಾಡಿ ಫಲವೇನು

ಸಮಾಜದಲ್ಲಿ ಕೆಲವರು ಒಳ್ಳೆಯ ಆಚಾರ, ವಿಚಾರಗಳನ್ನು ಅನುಸರಿಸುವರು ಇರುತ್ತಾರೆ. ವ್ರತ, ನಿಮಯಗಳನ್ನು ಜಪ ತಪಗಳನ್ನು ಮಾಡುತ್ತಾ ಇತರರಿಗೆ ಸಹಾಯವನ್ನು ಮಾಡುತ್ತಿರುತ್ತಾರೆ. ಇನ್ನು ಕೆಲವರು ಭಕ್ತಿಯನ್ನು ಪ್ರದರ್ಶಿಸುತ್ತಾರೆ. ಅವರು

ಇತರರಿಗೆ ಯಾವ ಸಹಾಯವನ್ನೂ ಮಾಡುವುದಿಲ್ಲ. ಇಂತಹವರು ಭಕ್ತಿ ಪ್ರದರ್ಶಿಸಿ ಏನೂ ಪ್ರಯೋಜನವಿಲ್ಲ, ಎಂದು ಈ ಕೀರ್ತನೆಯಲ್ಲಿ ಹೇಳಲಾಗಿದೆ.

### ಲೇಖನ ಬರೆಯಿರಿ

ಒಳ್ಳೆಯ ಆಚಾರ ವಿಚಾರಗಳು ಯಾವುವು? ಸಮಾಜದಲ್ಲಿ ನಾವು ಹೇಗಿರಬೇಕು? ಏನು ಮಾಡಿದರೆ ನಮಗೆ ಒಳ್ಳೆಯದಾಗುತ್ತದೆ? ಎಂಬ ಲಘು ಪ್ರಶ್ನೆಗಳ ಮೂಲಕ ಈ ಚಟುವಟಿಕೆಯನ್ನು ಆರಂಭಿಸಬಹುದು. 'ಮಾನವನು ಬೆಳೆಸಿಕೊಳ್ಳಬಹುದಾದ ಉತ್ತಮ ಗುಣಗಳು' ಎಂಬ ವಿಷಯದಲ್ಲಿ ಮಕ್ಕಳು ವೈಯಕ್ತಿಕವಾಗಿ ಲೇಖನವನ್ನು ಬರೆದು ಮಂಡಿಸಲಿ. ಬಳಿಕ ಗುಂಪಿನಲ್ಲಿ ಕುಳಿತು ಕ್ರೋಢೀಕರಿಸಿ ಬರೆದು ಮಂಡಿಸಲಿ. ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡಲಿ. ಲೇಖನದಲ್ಲಿ ವಿಷಯದ ವಿಸ್ತಾರ, ಆಶಯ ಸ್ಪಷ್ಟತೆ, ಭಾಷಾ ಸತ್ವಾಂಶಗಳ ಬಳಕೆ ಇರುವಂತೆ ಗಮನಿಸುವುದು ಅಗತ್ಯ.

### ಲೇಖನ

## ಮಾನವರು ಬೆಳೆಸಿಕೊಳ್ಳಬೇಕಾದ ಉತ್ತಮ ಗುಣಗಳು

ಮಾನವ ಜನ್ಮ ದೊಡ್ಡದು, ಜನ್ಮಗಳಲ್ಲೆಲ್ಲಾ ಶ್ರೇಷ್ಠವಾದುದು ಮಾನವ ಜನ್ಮ. ಯಾಕೆಂದರೆ ಪ್ರಪಂಚದಲ್ಲಿರುವ ಅತೀ ಬುದ್ಧಿವಂತ ಜೀವಿ ಮಾನವ. ಮಾನವನಿಗೆ ಇತರ ಪ್ರಾಣಿಗಳಿಗಿಂತ ಭಿನ್ನವಾಗಿ ಯೋಚಿಸುವ ಸಾಮರ್ಥ್ಯ, ಪ್ರತಿಕ್ರಿಯಿಸುವ ಸಾಮರ್ಥ್ಯಗಳಿವೆ. ಯೋಚಿಸಿದುದನ್ನು ಕಾರ್ಯ ರೂಪಕ್ಕೆ ತರುವ ಶಕ್ತಿಯೂ ಅವನಲ್ಲಿದೆ. ಭಾವನಾತ್ಮಕ ಚಿಂತನೆಗಳಿಂದ ಮನುಷ್ಯ ಎಲ್ಲವನ್ನೂ ಹೊಂದಿಕೊಂಡು ಬದುಕಬೇಕು. ಸಮಾಜದ ಒಳಿತು ಕೆಡುಕುಗಳು ಮಾನವನನ್ನು ಅವಲಂಬಿಸಿದೆ. ಆದ್ದರಿಂದ ಮಾನವರು ಪರೋಪಕಾರ, ಗುರುಹಿರಿಯರನ್ನು ಗೌರವಿಸುವುದು, ಸತ್ಯ, ಸಹನೆ, ಶಾಂತಿಯಿಂದ ವ್ಯವಹರಿಸುವುದು ಮೊದಲಾದ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಬೇಕಾಗಿದೆ.

ಮನುಷ್ಯನು ಸಮಾಜ ಜೀವಿ, ಅವನು ಮಾಡುವ ಪ್ರತಿಯೊಂದು ಕೆಲಸಗಳು ತನ್ನ ಹಿತಕ್ಕೆ ಮಾತ್ರ ಆಗಿರಬಾರದು. ಆದಷ್ಟು ಇತರರಿಗೂ ಪ್ರಯೋಜನವಾಗುವಂತಹ ಕೆಲಸಗಳನ್ನು ಮಾಡಬೇಕು. ಅಸಹಾಯಕರಿಗೆ ಸಹಾಯ ಮಾಡುತ್ತಾ ಬದುಕುವ ಬದುಕು ಒಬ್ಬ ಮನುಷ್ಯನನ್ನು ಉನ್ನತಿಗೇರಿಸುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ಗುರುಹಿರಿಯರಿಗೆ ಉತ್ತಮ ಸ್ಥಾನವಿದೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ದಾಸವಾಣಿ ಗುರುವಿನ ಶ್ರೇಷ್ಠತೆಗೆ ಹಿಡಿದ ಕನ್ನಡಿಯಾಗಿದೆ. ಹಿಂದಿನವರು 'ಆಚಾರ್ಯ ದೇವೋಭವ' ಎಂದು ಹೇಳಿ ಗುರುಗಳಿಗೆ ಉನ್ನತ ಸ್ಥಾನವನ್ನು ನೀಡಿದ್ದಾರೆ. ಅದು ಇಂದಿನ ಮಕ್ಕಳಲ್ಲೂ ಮೂಡಬೇಕು. ಹೆತ್ತ ತಾಯ್ತಂದೆಗಳ ಮನಸ್ಸಿಗೆ ನೋವನ್ನುಂಟುಮಾಡುವುದು ಪಾಪದ ಕೆಲಸ. ಹಾಗೆ ಮಾಡಿದರೆ ಆ ಮಕ್ಕಳಿಗೆ ಯಾವತ್ತೂ ಒಳ್ಳೆಯದಾಗಲಿಕ್ಕಿಲ್ಲ. ಹಿರಿಯರು ಹೇಳುವ ಮಾತುಗಳು ತಮ್ಮ ಒಳ್ಳೆಯದಕ್ಕೆಂದು ತಿಳಿದು ಸಮಾಧಾನದಿಂದ ವರ್ತಿಸಬೇಕು.

'ಸತ್ಯವೇ ನಮ್ಮ ತಾಯಿತಂದೆ, ಸತ್ಯವೇ ನಮ್ಮ ಬಂಧು ಬಳಗ, ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎಂಬ ಕವಿ ವಾಣಿಯಂತೆ ನಾವು, ಸತ್ಯ, ನ್ಯಾಯ, ಧರ್ಮ, ಶಾಂತಿ, ಸಹನೆಗಳನ್ನು ಮೈಗೂಡಿಸಿಕೊಂಡು ಬದುಕಿದರೆ ನಮ್ಮ ಜೀವನವು ಪ್ರಕಾಶಮಾನವಾಗುತ್ತದೆ. ಏನೇ ಕಷ್ಟಬಂದರೂ ಇಂತಹ ತತ್ವಗಳನ್ನು ಬಿಡದೆ ನ್ಯಾಯ ಸಮ್ಮತ ಜೀವನವನ್ನು ಬದುಕಬೇಕು.ಈ ರೀತಿಯಲ್ಲಿ ಸಮಾಜದ ಅಂಕುಡೊಂಕುಗಳನ್ನು ಮನಗಂಡು ಅದನ್ನು ಸರಿಪಡಿಸುತ್ತಾ ಎಲ್ಲರೂ ಬಾಳಬೇಕು. ಒಗ್ಗಟ್ಟಿನಿಂದ ಶ್ರಮಿಸಬೇಕು. 'ಬೆಳೆಯ ಸಿರಿ ಮೊಳಕೆ'ಯಲ್ಲಿ ಎಂಬಂತೆ ಎಳೆಯರಾದ ನಾವು ಒಳ್ಳೆಯ ಮಾರ್ಗದಲ್ಲಿ ನಡೆಯೋಣ.

## ನಾ ಡೊಂಕಾದರೇನು

ನಾ ಡೊಂಕಾದರೇನು
ನಿನ್ನ ನಾಮ ಡೊಂಕೆ ವಿಠಲ ॥ಪ॥

ನದಿಯು ಡೊಂಕಾದರೇನು
ಉದಕ ಡೊಂಕೆ ವಿಠಲ ॥1॥

ಕಬ್ಬು ಡೊಂಕಾದರೇನು
ಸಿಹಿ ಡೊಂಕೆ ವಿಠಲ ॥2॥

ಪುಷ್ಪ ಡೊಂಕಾದರೇನು
ಪರಿಮಳ ಡೊಂಕೆ ವಿಠಲ ॥3॥

ಆಕಳು ಡೊಂಕಾದರೇನು
ಹಾಲು ಡೊಂಕೆ ವಿಠಲ ॥4॥

ಬಿಲ್ಲು ಡೊಂಕಾದರೇನು
ಬಾಣ ಡೊಂಕೆ ವಿಠಲ ॥5॥

ಅಜ್ಞನಾದರೇನು ಕಾಯೊ
ಸುಜ್ಞ ಪುರಂದರ ವಿಠಲ ॥6॥

**– ಪುರಂದರದಾಸರು**

## ಬೇವು ಬೆಲ್ಲದೊಳಿಡಲೇನು ಫಲ

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದೇನು ಫಲ ॥ಪ॥

ಕುಟಿಲವ ಬಿಡದಿಹ ಮನುಜರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ ॥1॥

ಕಪಟತನದಲಿ ಕಾಡುತ ಜನರನು
ಜಪವನು ಮಾಡಿದರೇನು ಫಲ
ಕುಪಿತ ತನುವನು ಬಿಡದೆ ನಿರಂತರ
ಜಪವನು ಮಾಡಿದರೇನು ಫಲ ॥2॥

ಮಾತಾಪಿತರನು ಬಳಲಿಸಿದಾತನು
ಯಾತ್ರೆಯ ಮಾಡಿದರೇನು ಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ ॥3॥

ಪತಿಗಳ ನಿಂದಿಪ ಸತಿಯರು ಬಹು ವಿಧ
ವ್ರತಗಳ ಮಾಡಿದರೇನು ಫಲ
ಅತಿಥಿಗಳೆಡೆಯಲಿ ಬೇಧವ ಮಾಡುತ
ಗತಿಯನು ಬಯಸಿದರೇನು ಫಲ ॥4॥

ಹೀನ ಗುಣಂಗಳು ಹಿಂಗದೆ ಗಂಗೆಯ
ಸ್ನಾನವ ಮಾಡಿದರೇನು ಫಲ
ಶ್ರೀನಿಧಿ ಪುರಂದರ ವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ ॥5॥

**– ಪುರಂದರದಾಸರು**

## ಈಸಬೇಕು ಇದ್ದು ಜೈಸಬೇಕು

ಈಸಬೇಕು ಇದ್ದು ಜೈಸಬೇಕು
ಹೇಸಿಗೆ ಸಂಸಾರದಲ್ಲಿ ಆಸೆ ಲೇಶ ಇಡದ ಹಾಗೆ

ತಾಮರಸ ಜಲದಂತೆ
ಪ್ರೇಮವಿಟ್ಟು ಭವದೊಳು
ಸ್ವಾಮಿ ರಾಮ ಎನುತ ಪಾಡಿ
ಕಾಮಿತ ಕೈಗೊಂಬರೆಲ್ಲ ॥೧॥

ಗೇರು ಹಣ್ಣಿನಲ್ಲಿ ಬೀಜ
ಸೇರಿದಂತೆ ಸಂಸಾರದಿ
ಮೀರಿ ಆಸೆ ಮಾಡದಂತೆ
ಧೀರ ಕೃಷ್ಣನ ಭಕುತರೆಲ್ಲ ॥೨॥

ಮಾಂಸದಾಸೆಗೆ ಮತ್ಸ್ಯ ಸಿಲುಕಿ
ಹಿಂಸೆ ಪಟ್ಟ ಪರಿಯಂತೆ
ಮೋಸ ಹೋಗದ ಹಾಗೆ ಜಗ
ದೀಶ ಪುರಂದರ ವಿಠಲನ ನೆನೆದು ॥೩॥

### ಮೌಲ್ಯನಿರ್ಣಯ ಚಟುವಟಿಕೆಗಳು

1. 'ತೋಳ ಮತ್ತು ಕೊಕ್ಕರೆ' ಪದ್ಯದಲ್ಲಿ ಕೊಕ್ಕರೆಯ ಗುಣ ಇಷ್ಟವಾಯಿತೇ? ಯಾಕೆ? ಕೊಕ್ಕರೆಯ ಪಾತ್ರಚಿತ್ರಣ ಬರೆಯಿರಿ.

2. ರಾಜೇಶನು ಶಾಲೆಯಿಂದ ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ ಗಾಯಗೊಂಡ ಹಕ್ಕಿಯೊಂದು ಮರದಡಿ ನೋವಿನಿಂದ ಚೀರಾಡುತ್ತಿತ್ತು. ಕೂಡಲೇ ರಾಜೇಶನು ಹಕ್ಕಿಯನ್ನು ಶುಶ್ರೂಷೆ ಮಾಡಿದನು.

   – ರಾಜೇಶನು ಮಾಡಿದ ಕೆಲಸವನ್ನು ಮೆಚ್ಚಿದ್ದೀರಲ್ಲವೇ? ನಾವು ಪಶು–ಪಕ್ಷಿಗಳನ್ನು ಯಾವ ರೀತಿಯಲ್ಲಿ ನೋಡಿಕೊಳ್ಳಬೇಕು? ನಮ್ಮಂತೆಯೇ ಅವುಗಳಿಗೂ ಈ ಜಗತ್ತಿನಲ್ಲಿ ಬದುಕುವ ಹಕ್ಕಿದೆಯಲ್ಲವೇ? ನಿಮ್ಮ ಅಭಿಪ್ರಾಯವನ್ನು ಟಿಪ್ಪಣಿಯಾಗಿ ಬರೆಯಿರಿ.

3. ಇಲ್ಲಿರುವ ಗದ್ಯಭಾಗವನ್ನು ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಪುನಃ ಬರೆಯಿರಿ.

   ತಾಯೇ ನಿನಾರು ಯಾರನ್ನು ಕಾಯುತ್ತಿರುವೆ ನಾನು ಶಬರಿ ಮತಂಗ ಮಹರ್ಷಿಗಳ ಶಿಷ್ಯೆ ವೀರ ಕ್ಷತ್ರಿಯರಂತೆ ಶೋಭಿಸುತ್ತಿರುವ ನೀವು ಯಾರು ನಾವು ಅಯೋಧ್ಯೆಯ ಅರಸನಾದ ದಶರಥನ ಪುತ್ರರು ನಾನು ರಾಮ ಇವನು ನನ್ನ ತಮ್ಮ ಲಕ್ಷ್ಮಣ ರಾಮ.... ನನ್ನ ರಾಮ.... ಎಂಬ ಧ್ವನಿಯು ಅವಳಿಗರಿವಿಲ್ಲದಂತೆ ಬಾಯಿಯಿಂದ ಹೊರಟು ರಾಮಾಗಮನದ ಸುದ್ದಿಯನ್ನು ಮತಂಗವನಕ್ಕೆ ಸಾರಿತು.

* * *

# 5. ಸ್ವಾಸ್ಥ್ಯ

'ಆರೋಗ್ಯ' ಎಂಬುದು ಪ್ರತಿಯೊಂದು ಜೀವಿಗೂ ಅತಿ ಅಗತ್ಯ ಆರೋಗ್ಯವಿಲ್ಲದಿದ್ದರೆ ಜೀವನವೇ ವ್ಯರ್ಥ. ಮನುಷ್ಯನಿಗೆ ಶಾರೀರಿಕ ಸೌಖ್ಯ ಮಾತ್ರವೇ ಆರೋಗ್ಯವಲ್ಲ. ಅವನ ಮನಸ್ಸೂ ಆರೋಗ್ಯವಂತವಾಗಿರಬೇಕು. ಶಾರೀರಿಕವಾಗಿಯೂ ಮಾನಸಿಕವಾಗಿಯೂ ಆರೋಗ್ಯವಾಗಿರುವ ದೇಹ ಮತ್ತು ಮನಸ್ಸು ಯಾವಾಗಲೂ ಒಳ್ಳೆಯ ವಿಚಾರಗಳನ್ನೇ ಚಿಂತಿಸುತ್ತವೆ. ಉತ್ತಮ ಕಾರ್ಯವೆಸಗುತ್ತದೆ. ನಮ್ಮ ನಡೆ–ನುಡಿ, ಆಹಾರ ಕ್ರಮ, ಇತರರ ಬಗ್ಗೆ ತೋರುವ ಪ್ರೀತಿ–ಗೌರವಗಳು ನಮ್ಮ ಆರೋಗ್ಯದ ಮೇಲೆ ಪ್ರಭಾವ ಬೀರುತ್ತವೆ.

ನಮ್ಮ ಆರೋಗ್ಯ ಕಾಪಾಡಲು ಪ್ರತಿಯೊಬ್ಬನೂ ಪ್ರಯತ್ನಿಸಬೇಕು. ದಿನನಿತ್ಯದ ಚಟುವಟಿಕೆಗಳು, ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ.

ಈ ಅಂಶಗಳನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡುವ ಸಲುವಾಗಿ 'ನಾಲಿಗೆಯ ಮಹಿಮೆ' ಎಂಬ ಲಲಿತ ಪ್ರಬಂಧವನ್ನು 'ಆರೋಗ್ಯ ಭಾಗ್ಯ' ಎಂಬ ಪದ್ಯವನ್ನು 'ತಾಯಿಯ ಋಣ' ಎಂಬ ಸಣ್ಣ ಕತೆಯನ್ನೂ 'ಸ್ವಾಸ್ಥ್ಯ' ಎಂಬೀ ಘಟಕದಲ್ಲಿ ನೀಡಲಾಗಿದೆ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಸೂಕ್ತ ಸೂಚಕಗಳನ್ನು ರೂಪಿಸಿ ಸ್ವಂತ ಹಾಗೂ ಇತರರ ರಚನೆಗಳ ಮೌಲ್ಯ ನಿರ್ಣಯಿಸುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಉತ್ತಮಗೊಳಿಸುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಪದಗಳು, ಪದಪ್ರಯೋಗಗಳು, ಗಾದೆಗಳು, ಶೈಲಿಗಳು ಮೊದಲದ ಭಾಷಾ ಘಟಕಗಳನ್ನು ಅಳವಡಿಸಿ ಸಂದರ್ಭಾನುಸಾರವಾಗಿ ಮಾತನಾಡುವುದು. ಸ್ವಂತ ರಚನೆಗಳಲ್ಲಿ ಅವುಗಳನ್ನು ಸಂದರ್ಭಾನುಸಾರವಾಗಿ ಉಪಯೋಗಿಸುವುದು.
- ಪಾಠಭಾಗದಲ್ಲಿರುವ ಪದಗಳನ್ನು ಅರ್ಥವ್ಯತ್ಯಾಸವಿಲ್ಲದೆ ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವ ಚಟುವಟಿಕೆಯಲ್ಲಿ ತೊಡಗುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 4 : ಸ್ವಾಸ್ಥ್ಯ** ಸಮಯ : 6+5 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ನಾಲಿಗೆಯ ಮಹಿಮೆ | • ಲಲಿತ ಪ್ರಬಂಧ ಸಾಹಿತ್ಯದ ಒಂದು ಪ್ರಕಾರ ಎಂಬುದನ್ನು ತಿಳಿಯುವುದು.<br>• ಲಲಿತ ಪ್ರಬಂಧಗಳನ್ನು ಓದಿ ಆಸ್ವಾದಿಸುವುದು.<br>• ಲಲಿತ ಪ್ರಬಂಧಗಳು ವಿನೋದಾತ್ಮಕ ವಾಗಿದ್ದರೂ ಚಿಂತನಾಶೀಲ ಬರಹ ಗಳಾಗಿವೆ ಎಂಬುದನ್ನು ತಿಳಿಯುವುದು.<br>• ಇತರ ಲಲಿತ ಪ್ರಬಂಧಗಳ ಬಗ್ಗೆ ತಿಳಿಯುವುದು. | • ಚರ್ಚಿಸುವುದು<br>• ಉತ್ತರಿಸುವುದು<br>• ಸಂಭಾಷಣೆ ಬರೆಯುವುದು<br>• ವಾಕ್ಯ ರಚನೆ<br>• ಲೇಖನ ಚಿಹ್ನೆಗಳು ವಿವರಣೆ<br>• ನಗೆ ಹನಿ ಸಂಗ್ರಹ | • ನಗೆಹನಿಗಳು<br>• ಸಿ.ಡಿ. | • ಪ್ರಶ್ನೋತ್ತರ<br>• ಸಂಭಾಷಣೆ<br>• ವಿವರಣೆ |
| 2. ಆರೋಗ್ಯ ಭಾಗ್ಯ | • ಕವಿತೆಗಳನ್ನು ಹಾಡಿ ಆಸ್ವಾದಿಸುವುದು.<br>• ಉತ್ತಮ ಆಹಾರ ಸೇವನೆಯು ಶಾರೀರಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡುತ್ತದೆ ಎಂದು ತಿಳಿಯುವುದು.<br>• ಆರೋಗ್ಯ ಚೆನ್ನಾಗಿದ್ದರೆ ಏನು ಬೇಕಾದರೂ ಸಾಧಿಸಬಹುದು ಎಂಬುದನ್ನು ತಿಳಿಯುವುದು. | • ಹಾಡುವುದು<br>• ಉತ್ತರಿಸುವುದು<br>• ಕರಪತ್ರ ತಯಾರಿ<br>• ಪದ ವಿಂಗಡಣೆ<br>• ಪ್ರಬಂಧ<br>• ಪದ್ಯ ಮುಂದುವರಿಕೆ<br>• ಘೋಷಣ ವಾಕ್ಯ<br>• ಪೂರ್ತಿಗೊಳಿಸಿರಿ | • ಆರೋಗ್ಯ ಸಂರಕ್ಷಣೆಯ ಕುರಿತಾಗಿರುವ ಲೇಖನಗಳು, ಹಾಡುಗಳು, ಕತೆಗಳು<br>• ಸಿ.ಡಿ. | • ಕರಪತ್ರ<br>• ಪ್ರಬಂಧ<br>• ಪದ್ಯ |

# ಯೂನಿಟ್ ಗ್ರಿಡ್

**ಯೂನಿಟ್ 4 : ಸ್ವಾಸ್ಥ್ಯ** ಸಮಯ : 7 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3. ತಾಯಿಯ ಋಣ | • ಮಾನಸಿಕ ಆರೋಗ್ಯವು ಶಾರೀರಿಕ ಆರೋಗ್ಯದಷ್ಟೇ ಮುಖ್ಯ ಎಂದು ತಿಳಿದುಕೊಳ್ಳುವುದು.<br>• ಪ್ರೀತಿ, ಅನುಕಂಪ, ಸಹಾಯ ಮಾಡುವ ಮನೋಭಾವಗಳು ತನ್ನನ್ನು ಉನ್ನತಿಗೇರಿಸುವುದುರೊಂದಿಗೆ ಇತರರ ಉನ್ನತಿಗೂ ಕಾರಣವಾಗುತ್ತದೆ ಎಂಬುದನ್ನು ತಿಳಿಯುವುದು.<br>• ಸಮಾಜದ ಸ್ವಾಸ್ಥ್ಯದಲ್ಲಿ ಆರೋಗ್ಯ ಸೇವಾ ಸಂಸ್ಥೆಗಳು ಪ್ರಧಾನ ಪಾತ್ರ ವಹಿಸುತ್ತವೆ ಎಂಬುದನ್ನು ತಿಳಿಯುವುದು. | • ಚರ್ಚಿಸುವುದು<br>• ಉತ್ತರಿಸುವುದು<br>• ದಿನಚರಿ<br>• ವಾಕ್ಯರಚನೆ<br>• ಪಾತ್ರ ಚಿತ್ರಣ<br>• ಶೀರ್ಷಿಕೆ ನೀಡುವುದು<br>• ಊಹಿಸಿ ಬರೆಯಿರಿ | • ಮಾನವೀಯತೆ, ಪರೋಪಕಾರಗಳ ಕುರಿತಾದ ಕತೆಗಳು, ಲೇಖನಗಳು<br>• ಸಿ.ಡಿ.<br>• ಆರೋಗ್ಯ ಸೇವೆ ಮಾಡುತ್ತಿರುವ ಸಂಘ ಸಂಧ್ಥೆಗಳ ಪರಿಚಯ. | • ದಿನಚರಿ<br>• ಪಾತ್ರಚಿತ್ರಣ |
| | | | | |

# 1. ನಾಲಿಗೆಯ ಮಹಿಮೆ

## ಚಟುವಟಿಕೆಗಳು

### ಚರ್ಚಿಸಿರಿ

ಶರೀರದ ಪ್ರತಿಯೊಂದು ಅಂಗದ ಪ್ರಾಮುಖ್ಯ ಏನು? ಅದು ಯಾಕೆ ಅಗತ್ಯ? ಎಂದು ಪ್ರಶ್ನಿಸುತ್ತಾ ಪ್ರತಿಯೊಂದು ಅಂಗದ ಕುರಿತು ಚರ್ಚಿಸುವುದು. 'ನಾಲಿಗೆ ಕರ್ಮಯೋಗಿ' ಯಾಕೆ ಎನ್ನುವುದನ್ನು ಪಾಠದ ಆಧಾರದಲ್ಲಿ ಚರ್ಚಿಸುವುದು.

### ಉತ್ತರಿಸಿರಿ

ನಾಲಿಗೆಯ ಮಹಿಮೆ ಪಾಠದ ಆಶಯಗ್ರಹಣಕ್ಕಾಗಿ ಪ್ರಶ್ನೆಗಳಿಗೆ ಉತ್ತರಿಸುವುದು. ಬಳಿಕ ಬರೆದು ಓದಲಿ. ತಪ್ಪಿದ್ದಲ್ಲಿ ಸರಿಪಡಿಸುವುದು.

### ಸಂಭಾಷಣೆ ರಚಿಸಿರಿ

'ನಾಲಿಗೆಯ ಮಹಿಮೆ' ಲಲಿತ ಪ್ರಬಂಧ ಓದಿದ ಮಕ್ಕಳೊಡನೆ ಇಲ್ಲಿ ಬರುವ ಪಾತ್ರಗಳು ಯಾವುವು? ಯಾವ ಪಾತ್ರ ನಿಮಗೆ ಇಷ್ಟವಾಯಿತು? ಎಂದು ಕೇಳುವುದು. ಬಳಿಕ ಆ ಪಾತ್ರಗಳು ತಮ್ಮೊಳಗೆ ಮಾತನಾಡಿಕೊಂಡರೆ ಹೇಗಿರಬಹುದು ಎಂದು ಚರ್ಚಿಸಿ ಒಂದೊಂದು ಪಾತ್ರದಬಗ್ಗೆ ಬಾಯ್ದೆರೆಯಾಗಿ ಹೇಳಲು ಹೇಳುವುದು. ಬಳಿಕ ಗುಂಪಿನಲ್ಲಿ ಕುಳಿತು ಸಂಭಾಷಣೆ ಬರೆದು ಮಂಡಿಸಲಿ. ತಪ್ಪನ್ನು ಸರಿಪಡಿಸಿ ಪುನಃ ಬರೆದು ಪಾತ್ರಗಳನ್ನು ಹಂಚಿ ಸೂಕ್ತ ಅಭಿನಯದೊಂದಿಗೆ ಸಂಭಾಷಣೆ ನಡೆಸಲಿ.

ಸಂಭಾಷಣೆಯಲ್ಲಿ ಅರ್ಥಗರ್ಭಿತವಾದ ಮಾತು, ಸರಳತೆ, ಸ್ಪಷ್ಟತೆ, ಉಚ್ಚಾರ ಶುದ್ಧಿ ಮುಂತಾದವುಗಳನ್ನು ಗಮನಿಸಬೇಕು.

(ಕಣ್ಣು, ಕಿವಿ, ಮೂಗು, ನಾಲಿಗೆ ಹಾಗೂ ಚರ್ಮ)

ಕಿವಿ : ಅಬ್ಬಾ! ಯಾರಿದ್ದರೂ ನಾನಿದ್ದ ಹಾಗೆ ಆಗುವುದಿಲ್ಲ. ಏನೇ ಕೆಲಸ ಮಾಡಲೂ ಮೊದಲು ನಾನು ಕೇಳಬೇಕು. ಕೇಳಲು ನಾನೇ ಬೇಕು. ಆದ್ದರಿಂದ ನಾನೇ ಶ್ರೇಷ್ಠ.

ಕಣ್ಣು : ಅಯ್ಯೋ ಪೆದ್ದು. ಅದ್ಯಾಕೆ ಹಾಗೆ ಹೇಳುತ್ತೀ? ನಾನು ನೋಡಿದ ಮೇಲೆ ತಾನೇ ನಿನಗೆ ಹೇಳುವುದು. ಆಗ ಮಾತ್ರ ಅಲ್ಲವೇ ನಿನಗೆ ಕೇಳುವುದು. ಅಂದ ಮೇಲೆ ನಾನೇ ಶ್ರೇಷ್ಠ

ಮೂಗು : ಹುಂ ಹೌದು. ನಾನು ಒಳ್ಳೆಯದ್ದು ಮತ್ತು ಕೆಟ್ಟದ್ದನ್ನು ವಾಸನೆಯಿಂದ ಕಂಡುಹಿಡಿದು ಅನುಭವಿಸಿದ ಮೇಲೆ ತಾನೇ ನಿಮ್ಮ ಕೆಲಸ.

ಚರ್ಮ : ಛೇ, ಛೇ, ನನ್ನನ್ನೇ ಮರೆತು ಮಾತನಾಡುತ್ತೀರಲ್ಲಾ ಯಾವುದೇ ಅನುಭವ ಆಗುವುದು ನನ್ನಿಂದ. ಆ ಬಳಿಕ ತಾನೇ ನಿಮ್ಮ ಕೆಲಸ. ಆದ್ದರಿಂದ ನಾನೇ ಮಿಗಿಲು.

ನಾಲಿಗೆ : ಯಾಕೆ ಎಲ್ಲರೂ ಹೀಗೆ ಕಿತ್ತಾಡುತ್ತೀರಿ? ಏನೇ ಇದ್ದರೂ ಇನ್ನೊಬ್ಬರಿಗೆ ತಲುಪಿಸಲು ನಾನು ಬೇಕಲ್ಲವೇ. ಆದರೂ ನೋಡಿ, ನಾವೆಲ್ಲರೂ ಒಗ್ಗಟ್ಟಾಗಿ ಇದ್ದರೆ ಮಾತ್ರ ಎಲ್ಲವೂ ಸಾಧ್ಯ. ಚರ್ಮದ ಮೂಲಕ ಆದ ಅನುಭವ, ಕಣ್ಣಿನಿಂದ ಕಂಡದ್ದು, ಕಿವಿಯಿಂದ ಕೇಳಿದ್ದು, ಮೂಗಿನಿಂದ ಮೂಸಿದ್ದು, ನಾಲಿಗೆಯ ಸಹಾಯದಿಂದ ಹೇಳಲು ಸಾಧ್ಯ ಇವುಗಳಲ್ಲಿ ಯಾವುದು ಇಲ್ಲದಿದ್ದರೂ ಬದುಕು ಕಷ್ಟವೇ. ನಾವು ಒಬ್ಬರಿಗೊಬ್ಬರು ಪೂರಕ ಎಂಬುದನ್ನು ಎಲ್ಲರೂ ತಿಳಿದುಕೊಳ್ಳಿ. ಎಲ್ಲರೂ ಸರಿಸಮಾನರು.

## ವಾಕ್ಯ ರಚಿಸಿರಿ

ಪದ ಪ್ರಯೋಗ, ಶೈಲಿಯನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ವಾಕ್ಯ ರಚನೆ ಚಟುವಟಿಕೆ ಉತ್ತಮವಾದುದು. ವಾಕ್ಯ ರಚನೆ ಸರಿ ಇದ್ದರೆ ಮಾತ್ರ ಸ್ಪಷ್ಟವಾಗಿ ಅರ್ಥವಾಗಲು ಸಾಧ್ಯ. ನುಡಿಗಟ್ಟುಗಳು, ಪದಗಳು ಇತ್ಯಾದಿಗಳನ್ನು ನೀಡುವುದರ ಮೂಲಕ ವಾಕ್ಯ ರಚನೆಯ ಚಟುವಟಿಕೆಯನ್ನು ಮಾಡಬಹುದು.

## ನುಡಿಗಟ್ಟುಗಳು

ಕೈಕೊಡು – ಯಾರನ್ನಾದರೂ ಮೊದಲು ನಂಬಿಸಿ ಮತ್ತೆ ಕೈಕೊಡುವುದು ಸರಿಯಲ್ಲ.

ವಿದ್ಯುತ್ ಕೈಕೊಟ್ಟ ಕಾರಣ ಸಮಾರಂಭ ತಡವಾಗಿ ಆರಂಭವಾಯಿತು.

- ಕೈಬಿಸಿ ಮಾಡು
- ಅಳಿಲು ಸೇವೆ
- ಉತ್ಸವ ಮೂರ್ತಿ
- ಉಭಯ ಸಂಕಟ
- ಎರಡು ನಾಲಗೆ
- ಡಂಗುರ ಹೊಡೆ
- ಒಗ್ಗರಣೆ ಹಾಕು
- ಕಣ್ಣೀರಲ್ಲಿ ಕೈ ತೊಳೆ
- ಕಣ್ಣೊರೆಸು
- ಕರುಳು ಕಿತ್ತು ಬರು

(ಹೆಚ್ಚಿನ ನುಡಿಗಟ್ಟುಗಳಿಗೆ ಕನ್ನಡ ರತ್ನಕೋಶ ಮತ್ತು ಕನ್ನಡ ನುಡಿಕಟ್ಟುಗಳು ಪುಸ್ತಕವನ್ನು ಓದುವುದು.)

## ಲೇಖನ ಚಿಹ್ನೆ ಬಳಸಿರಿ

ಒಂದು ಗದ್ಯಭಾಗ ಅರ್ಥಪೂರ್ಣವಾಗಬೇಕಾದರೆ ಅಲ್ಲಿ ಕೆಲವೊಂದು ಬರವಣಿಗೆಯ ಚಿಹ್ನೆಗಳಿರಬೇಕು. ಈ ಚಿಹ್ನೆಗಳು ವಾಕ್ಯಕ್ಕೆ ಸೂಕ್ತ ಅರ್ಥವನ್ನು ನೀಡುತ್ತವೆ. ಮಕ್ಕಳು ಹಿಂದಿನ ತರಗತಿಯಲ್ಲಿ ಲೇಖನ ಚಿಹ್ನೆಗಳನ್ನು ಕಲಿತಿರುತ್ತಾರೆ. ಅವುಗಳನ್ನು ನೆನಪಿಸಿ ನೀಡಿರುವ ಗದ್ಯಕ್ಕೆ ಸೂಕ್ತ ಲೇಖನ ಚಿಹ್ನೆ ಸೇರಿಸಿ ಬರೆಯಲು ಹೇಳುವುದು.

ಉದಾ : 'ಆತನಲ್ಲಿಗೆ ಹೋಗಿ ನಮ್ಮ ಅಹವಾಲನ್ನು ತಿಳಿಸೋಣ' ಎಂದು ಆನೆ ಹೇಳಿತು. ಆನೆಯ ಸಲಹೆಯನ್ನು ಎಲ್ಲಾ ಪ್ರಾಣಿಗಳು ಒಪ್ಪಿದವು. 'ಸ್ವಾಮೀ, ನೀವು ನನ್ನನ್ನು ಚೆನ್ನಾಗಿ ಬಲ್ಲಿರಿ' ಎಂದು ನಾಯಿ ಹೇಳಿತು. ನಾನು ಕೃತಜ್ಞತೆಯ ಪ್ರತೀಕ. 'ಮಾನವನು ನನ್ನನ್ನು ಎಷ್ಟೇ ಶಿಕ್ಷಿಸಲಿ, ಆದರೆ ಒಂದು ತುತ್ತು ಅನ್ನವನ್ನು ಒಮ್ಮೆ ಕೊಟ್ಟರೂ ಸಾಕು, ನಾನು ನನ್ನ ಜೀವ ಮಾನವಿಡೀ ಅವನ ಸೇವೆಯನ್ನು ಮಾಡುತ್ತೇನೆ. ಆದರೆ ಅವನು ಈ ಎಲ್ಲಾ ಸಹಾಯವನ್ನು ಮರೆತು ನನ್ನನ್ನು ಹೀನಾಯವಾಗಿ ಕಾಣುತ್ತಾನೆ. ಎಂತಹ ವಿಪರ್ಯಾಸ! ಇದು ಸರಿಯೇ? ನೀವೇ ಹೇಳಿ.'

## ವಿವರಣೆ ಬರೆಯಿರಿ

ಪ್ರತಿಯೊಂದು ಜೀವಿಗೂ ಪ್ರತಿಯೊಂದು ಅಂಗವೂ ಶ್ರೇಷ್ಠ. ಯಾವುದೇ ಒಂದು ಅಂಗವಿಲ್ಲದಿದ್ದರೂ ಅನುಭವಿಸುವ ತೊಂದರೆಗಳು ನಮ್ಮ ಸುತ್ತಮುತ್ತ ಕಾಣಿಸುತ್ತಿವೆ. ಹಾಗಿರುವಾಗ ಪ್ರತಿಯೊಂದು ಅಂಗಕ್ಕೂ ತನ್ನದೇ ಆದ ಪ್ರಾಧಾನ್ಯವಿದೆ ಎಂದು ತಿಳಿದುಕೊಳ್ಳುವುದು. ಬಳಿಕ ನಮ್ಮ ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮಗಳ ಪ್ರಾಧಾನ್ಯ ಮತ್ತು ಅವುಗಳಲ್ಲಿಲ್ಲದಿದ್ದರೆ ಆಗುವ (ಆಗಬಹುದಾದ) ತೊಂದರೆಗಳ ಕುರಿತು ವೈಯಕ್ತಿಕವಾಗಿ ಬರೆದು ಮಂಡಿಸಲಿ. ಚರ್ಚೆಯ ಬಳಿಕ ಪರಿಷ್ಕರಿಸಿ ಬರೆಯಲಿ.

## ನಗೆಹನಿ ಸಂಗ್ರಹಿಸಿರಿ

ನಗು ಮಾನವನ ಸಹಜ ಧರ್ಮ. ಯಾವ ಬೇಸರವನ್ನು ಕಳೆಯುವ ಸಾಮರ್ಥ್ಯ ನಗುವಿಗಿದೆ. ಆದುದರಿಂದ ಮಕ್ಕಳು ವಿವಿಧ ಮೂಲಗಳಿಂದ ನಗೆಹನಿಗಳನ್ನು ಸಂಗ್ರಹಿಸಲಿ. ಸಂಚಿಕೆ ತಯಾರಿಸಲಿ. ಸಂಚಿಕೆಯಲ್ಲಿ ಮುನ್ನುಡಿ, ಸಂಪಾದಕೀಯ, ಅನುಕ್ರಮಣಿಕೆ, ಶೀರ್ಷಿಕೆ ಇತ್ಯಾದಿಗಳು ಒಳಗೊಳ್ಳುವಂತೆ ಅಧ್ಯಾಪಕರು ಗಮನಿಸಲಿ.

## ಹಸುವಿಗೆ ಗುಳಿಗೆ ತಿನ್ನಿಸಿದ

ರೈತ : (ಪಶು ವೈದ್ಯರಲ್ಲಿಗೆ ಬಂದು) ವೈದ್ಯರೇ, ಸ್ವಾಮೀ, ನನ್ನ ಹಸು ಮೂರು ದಿನಗಳಿಂದ ಮಲಗಿಬಿಟ್ಟಿದೆ. ಆಹಾರ ತಿನ್ನುವುದಿಲ್ಲ. ಹಾಲೂ ಕೊಡುವುದಿಲ್ಲ. ಏನಾದರೂ ಔಷಧಿ ಕೊಡಿ.

ವೈದ್ಯರು : ಈ ಗುಳಿಗೆಗಳನ್ನು ತಿನ್ನಿಸು. ಎಲ್ಲಾ ಸರಿಯಾಗುತ್ತದೆ.

ರೈತ : ಸ್ವಾಮೀ, ದ್ರವ ಔಷಧಿ ಆದರೆ ಹಸುವಿಗೆ ಕುಡಿಸಬಹುದು. ಈ ಗುಳಿಗೆಗಳನ್ನು ತಿನ್ನಿಸುವುದು ಹೇಗೆ?

ವೈದ್ಯರು : ಅದಕ್ಕೆ ನೀನೇನೂ ಯೋಚನೆ ಮಾಡಬೇಡ. ಮೂರು ಗುಳಿಗೆಗಳನ್ನು ಹಸುವಿನ ಬಾಯಲ್ಲಿಟ್ಟು ಒಂದು ಊದುಗೊಳವೆಯಿಂದ ಊದಿ ಬಿಡು. ಅದು ಹಸುವಿನ ಹೊಟ್ಟೆಯೊಳಗೆ ಹೋಗುತ್ತದೆ.

ರೈತ : ಸರಿ ಸ್ವಮೀ.

(ಮರುದಿನ ಗಾಬರಿಯಿಂದ ಬಂದು)

ರೈತ : ಸ್ವಾಮೀ, ಗಂಡಾಂತರ ಆಗಿಹೋಯ್ತು. ನೀವು ಹೇಳಿದ ಹಾಗೇ ಗುಳಿಗೆ ತಿನ್ನಿಸಲು ಪ್ರಯತ್ನಿಸಿದೆ. ಗುಳಿಗೆ ನನ್ನ ಹೊಟ್ಟೆಯೊಳಗೆ ಬಂದು ಬಿಟ್ಟಿದೆ. ಈಗ ಏನು ಮಾಡೋದು? ನೀವೇ ಹೇಳಿ.

ವೈದ್ಯರು : (ಆತಂಕದಿಂದ) ಅಲ್ಲಪ್ಪಾ, ಅದು ಹೇಗೆ ಗುಳಿಗೆ ನಿನ್ನ ಹೊಟ್ಟೆ ಒಳಗೆ ಹೋಯ್ತು? ಹೇಳು ನೋಡೋಣ.

ರೈತ : ನೀವು ಹೇಳಿದ ಹಾಗೆ ಗುಳಿಗೆ ಹಸುವಿನ ಬಾಯಲ್ಲಿಟ್ಟು ಊದುಕೊಳವೆಯಿಂದ ಊದಿದೆ. ಆದರೆ ನನಗಿಂತ ಹಸುವೇ ಜೋರಾಗಿ ಊದಿಬಿಡ್ತು. ಆದ್ದರಿಂದ ಗುಳಿಗೆ ನನ್ನ ಹೊಟ್ಟೆಗೆ ಬಂದು ಬಿಡ್ತು.

**ಪೂರಕ ಓದಿಗೆ**

## ಬೆಳೆಸಿರಿ ಗಿಡ ಮರ

ಪಾವನ ಪರಿಸರ ಕೆಡದಂತಾಗಿಸೆ
ಬೆಳೆಸಿರಿ ಗಿಡ-ಮರ ನಾಡಲ್ಲಿ!
ಅಶುದ್ಧ ಹವೆಯನು ಶುದ್ಧೀಕರಿಸಲು
ಉಳಿಸಿರಿ ಗಿಡ-ಮರ ಕಾಡಲ್ಲಿ

ಊರಿನ ಓಣಿಯ ಕೇರಿಯ ಬೈಲಲಿ
ಹರಿಬಿಡದಿರಿ ಕೊಳೆ ಕಿಂಚಿತ್ತು
ಗ್ರಾಮದ ಮನೆ ಮಠ ಬಚ್ಚಲು ನೀರನು
ರಸ್ತೆಗೆ ಬಿಡದಿರಿ ಎಳ್ಳಷ್ಟು

ದೇಹದಿ ಜನಿಸುವ ಮಲಮೂತ್ರಗಳನು
ಹಾದಿಗೆ ಹಾಕದಿರೆಳ್ಳಷ್ಟು
ಕೆಟ್ಟ ಪದಾರ್ಥವ ರಸ್ತೆಗೆ ಚೆಲ್ಲದೆ
ಸ್ವಚ್ಛತೆ ಕಾಯಿರಿ ಮನಗೊಟ್ಟು

ನೊಣ ನೊರ್ಜಳಿಯಿರಿ ಸೊಳ್ಳೆಯಗಳೆಯಿರಿ
ಪಾವನ ಪರಿಸರ ರಕ್ಷಿಸಲು
ಯಂತ್ರಗಳುಗುಳುವ ಧೂಮ್ರತಿಧೂಮ್ರವ
ಅಡಗಿಸೆ ಬೆಳೆಸಿರಿ ಬನ ಬಳ್ಳಿ

ಓಣಿಯ ಕೇರಿಯ ಒಳ ಹೊರ ಅಂಗಳ
ಓರಣಗೊಳಿಸಿರಿ ದಯವಿಟ್ಟು
ದನಕರು ದೊಡ್ಡಿಯ ತಲೆಗೆಡಿಸುವ ಮಲ
ಬಳಿದೊಗೆಯಿರಿ ಬದಿ ಗುಳಿಗಿಷ್ಟು

ಬದಿಕಿನ ಬಾಳಿನ ಭಾಗ್ಯೋದಯಕೆ
ವನ ಮರ ಬೆಳೆಸಿರಿ ಸಾಕಷ್ಟು
ಜಗ-ಜನ ರಾಷ್ಟ್ರದ ನೆಮ್ಮದಿಗಾಗಿ
ತರುಲತೆ ಬೆಳೆಸಿರಿ ಮತ್ತಷ್ಟು

ಮಂಗಳ ಮಳೆ ಬೆಳೆ ಸುಸ್ವಾಗತಕೆ
ಗಿಡ ಮರ ಬೆಳೆಸಿರಿ ಸಾಕಷ್ಟು
ರಾಷ್ಟ್ರದ ಬೊಕ್ಕಸ ಯುಗ ಯುಗ ಭರಿಸುವ
ಕಾನನ ಬೆಳೆಸಿರಿ ಇನ್ನಷ್ಟು

(ಸಂಗ್ರಹ)

**ಲಲಿತ ಪ್ರಬಂಧ**

# ಹಲಸೇ ಓ ಹಲಸೇ

ಮಾವು ಮತ್ತು ಹಲಸು ಜೋಡಿಯಾಗಿ ಬೇಸಗೆಯನ್ನು ನಿರ್ವಹಿಸುತ್ತಿವೆ. ಇವು ಎರಡು ಇರುವವರೆಗೆ ಬರಗಾಲಕ್ಕೆ ಗುಡ್‌ಬೈ ಎಂಬುದು ಅತಿಶಯೋಕ್ತಿ ಅಲ್ಲ. ಮಾವು ತುಟ್ಟಿಯಾಗುತ್ತಿರುವ ಸಮಯದಲ್ಲಿ ಹಲಸು ಜನಪ್ರಿಯವಾಗುತ್ತಿದೆ. ಆದುದರಿಂದ ಹಲಸನ್ನು ಕಡೆಗಣಿಸಲು ಅಸಾಧ್ಯ.

ಬಡವ ಬಲ್ಲಿದರೆಂದು ಭೇದವೆಣಿಸದೆ ಎಲ್ಲರೂ ಹಲಸಿಗೆ ಶರಣು ಹೋಗುತ್ತಾರೆ. ಬಡವರ ಪಾಲಿಗೆ ಕೈಗೆಟಕುವ ಹಣ್ಣು ಹಲಸು. ಸಿರಿವಂತರಿಗೆ ಥ್ರಿಲ್ ಕೊಡುವ ಹಣ್ಣು ಹಲಸು. ಒಟ್ಟಿನಲ್ಲಿ ಸಮಾಜವಾದಿ ಸ್ತರದ್ದು ಹಲಸಾಗಿದೆ. ಎಲ್ಲರಿಗೂ ಬೇಕಾಗಿ, ಯಾರನ್ನು ತನ್ನ ಹಾಗೆ ಗಗನಕ್ಕೆ ಸೆಳೆಯದ ಭೂಮಿಯ ಹಣ್ಣು ಹಲಸಾಗಿದೆ. ಎತ್ತರದಲ್ಲಿ ಇದ್ದರೂ ಅದನ್ನು ಮರದ ಕೈಯಿಂದ ಬಿಡಿಸಿ ತಂದು ಮನೆಯ ಕತ್ತಲೆ ಮೂಲೆಯಲ್ಲಿ ಗೋಣಿ ಬಿಡಿಸಿ ಮಲಗಿಸುವುದು ಒಂದು ಅಧ್ಯಾಯ. ಅದನ್ನು ಹಣ್ಣಾಗಿ ಪರಿವರ್ತಿಸಲು ಯಾವ ಕ್ರಿಯೆಯು ಬೇಡ. ಅದು ತನ್ನಷ್ಟಕ್ಕೆ ಹಣ್ಣಾಗಿ ಬಿಡುತ್ತದೆ. ಅಷ್ಟು ಮಾತ್ರವಲ್ಲ ತಾನು ಹಣ್ಣಾಗಿದೆ ಎಂದು ಎಲ್ಲರನ್ನು ಎಚ್ಚರಿಸಿ ಬಿಡುತ್ತದೆ. ಮನೆ ಒಳಗಿನವರಲ್ಲದೆ, ಹೊರಗಿನ ನಾಯಿ ದನಗಳು ಸಹ ಈ ನಿಟ್ಟಿನಲ್ಲಿ ಆಸಕ್ತರಾಗುವಂತೆ ಪ್ರಚೋದಿಸುತ್ತದೆ. ಒಳಗಿನವರಿಗಿಂತಲೂ ಹೊರಗಿನಿಂದ ಅದನ್ನು ಬಿಡಿಸಿ ತಮಗೂ ಅದರ ಪಾಲನ್ನು ವಿತರಿಸುವಂತೆ ದನಗಳು ನಾಯಿಗಳು ತಮ್ಮ ಬೇಡಿಕೆಯನ್ನು ಸಲ್ಲಿಸುತ್ತವೆ.

ಅಂದು ಬೆಳಗಿನ ಆಹಾರ ಕಾರ್ಯಕ್ರಮವನ್ನು ಅತೀ ಬೆಳಗ್ಗೆ ಮುಗಿಸಲಾಗುತ್ತದೆ. ಎಲ್ಲರೂ ತಮ್ಮ ಎಂದಿನ ಕಾರ್ಯಕ್ರಮವನ್ನು ಕೊನೆ ನಿಮಿಷದ ಬದಲಾವಣೆಗೆ ಒಳಗಾಗಿಸದೆ ಸಿದ್ಧರಾಗಿರುತ್ತಾರೆ. ಅದೊಂದು ಬೃಹತ್ ಮೇಳ. ಹೆಂಗಸು, ಗಂಡಸು, ಮಕ್ಕಳು ಬೃಹತ್ ಕಾರ್ಯಾಚರಣೆಗೆ ಸಿದ್ಧರಾಗಿ ನಿಂತಿರುತ್ತಾರೆ.

ಒಬ್ಬ ಮಚ್ಚು ಹಿಡಿಯುತ್ತಾನೆ. ಅವನು ಶಕ್ತಿವಂತನಾಗಿರಬೇಕು. ಈ ದಷ್ಟಪುಷ್ಟ ಎರಡೂವರೆ ಮೂರರ ತನಕ ಉದ್ದ, ಒಂದೂವರೆ ಅಡಿಯಷ್ಟು ವ್ಯಾಸದ ಬಡ್ಡಪ್ಪನನ್ನು ಕೊಚ್ಚುವುದೆಂದರೆ ಸುಲಭದ ಕೆಲಸವೇ? ಅದನ್ನು ಚಿಕ್ಕಚಿಕ್ಕ ತುಂಡು ಮಾಡಬೇಡವೇ? ಸಣ್ಣ ಪಾತ್ರೆಯಲ್ಲಿ ಎಣ್ಣೆ ಹಿಡಿದುಕೊಂಡು ಈ ಬೃಹತ್ ಕಾರ್ಯವನ್ನು ನಿಭಾಯಿಸಲು ಕೋಣೆ ತುಂಬಾ ಜನ ಇರುತ್ತಾರೆ.

ಅಜ್ಜಿಯ ನೇತೃತ್ವದಲ್ಲಿ ಯಾರಾದರೂ ಹಿರಿಯ ಗಂಡಸರ ತೋಳ್ಬಲವನ್ನು ಬಳಸಿ ಇಬ್ಭಾಗ ಮಾಡುವ ಕ್ರಿಯೆ ನಡೆಯುತ್ತದೆ. ಬಳಿಕ ಸಾಮಾನ್ಯ 12 ಸೆ.ಮಿ. ಉದ್ದದ 6. ಸೆ.ಮಿ. ಅಗಲದ ಸಣ್ಣ ಸಣ್ಣ ಹೋಳುಗಳು. ಎಲ್ಲರ ಕೈಗೂ ಒಂದೊಂದು ಹೋಳು. ತೊಳೆ ಬಿಡಿಸಿ ರಾಶಿ ಹಾಕಬೇಕು. ತೆಂಗಿನೆಣ್ಣೆಯನ್ನು ಹಚ್ಚಿಕೊಂಡು ಎಲ್ಲರೂ ಕೆಲಸಕ್ಕೆ ತೊಡಗಿದರು.

ಕೆಲವರು ಕೈಗೆ ಕೆಲಸ ಕೊಟ್ಟರೆ ಮತ್ತೆ ಕೆಲವರು ಬಾಯಿಗೆ ಮಾತ್ರ! ಆಗ ಅಜ್ಜಿ, 'ಹೀಗಾದರೆ ಹಲಸಿನ ಹಪ್ಪಳವಾಗಲಿಕ್ಕಿಲ್ಲ. ಮುಳ್ಳಿನಿಂದಲೇ ಹಪ್ಪಳ ಮಾಡಬೇಕಾದೀತು! ಒಂದೇ ಸೊಳೆ ಅಜ್ಜಿ. ಪುಟ್ಟನ ಗೋಗರೆಯುವ ಧ್ವನಿಗೆ ಅಜ್ಜಿ, 'ಹ್ಹುಂ!. ಈಗ ಈ ಸೊಳೆತಿನ್ನು. ಮತ್ತೆ ನಾನೇ ಮದ್ದು ಹುಡುಕಬೇಕು' ಎಂದು ಗದರುತ್ತಾಳೆ.

ಮುಂದಿನ ಆಹಾರ ಹಲಸಿನದ್ದೇ. ಅದರ ಬೇಳೆಯಿಂದ ಹುಳಿ. ಸಣ್ಣ ಸೊಳೆಗಳಿಂದ ಪಲ್ಯ, ಹಪ್ಪಳ ಮಾಡಿದವರಿಗೆ ದಣಿದಾಗ, ಹಸಿದಾಗ, ಹಲಸಿನ ಹಣ್ಣಿನ ಸಮಾರಾಧನೆ ತಿನ್ನುವಾಗ ಮಾತೇ ಮಾತು. ಹಲಸಿನ ಕುರಿತಲ್ಲ. ಊರಿನ, ಪರವೂರಿನ, ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಚಾರಗಳ ಚರ್ಚೆಯೋ ಚರ್ಚೆ. ಚರ್ಚೆ ಮುಗಿದಾಗ ಮುಳ್ಳು ಬೀಜ ಬಾಕಿ.

ಹಿಂದೆ ಹಲಸು ಅಗ್ಗದ ಫಲ. ಹಳ್ಳಿಯವರಿಗೆ ಹಲಸು ಗುಜ್ಜೆಯಿಂದ ಹಿಡಿದು ಹಣ್ಣಾಗುವ ವರೆಗೆ ವಿವಿಧ ರುಚಿಕರವಾದ ಆಹಾರ ವಸ್ತುಗಳನ್ನು ತಯಾರಿಸಲಾಗುವ ಏಕಫಲ. ಉಪ್ಪಿನ ಸವಿಯೊಂದಿಗೆ ಮಳೆಗಾಲದ ಜೀವಂತ ತರಕಾರಿ ಜನರಿಗೆ

ಮಾತ್ರವಲ್ಲ, ಜಾನುವಾರುಗಳಿಗೆ ಹೊಟ್ಟೆ ತುಂಬ ಹಲಸು ಸವಿಯುವ ಕಾಲವಿದು.

ಆದರೆ ಹಲಸಿನಷ್ಟು ಸಾಗಾಣಿಕೆಯಲ್ಲಿ ತೊಂದರೆ ಕೊಡುವ ವಸ್ತು ಬೇರೊಂದಿಲ್ಲ. ಒಂದು ಜಾಗದಲ್ಲಿ ಇರಿಸಿದರೆ ಹಿಂದೆ ಮುಂದೆ ಓಡಾಡಿ ಇದ್ದವರ ಕಾಲ ಮೇಲುರುಳಿ ಅವರು ಬಾಯಲ್ಲಿ ಹೇಳುವ ಮುಕ್ತಕಗಳನ್ನು ಸದ್ದಿಲ್ಲದೆ ಕೇಳಬೇಕಾಗುತ್ತದೆ. ಹಣ್ಣು ಕೊಂಡು ಹೋಗುವುದಾದರೆ ಬಸ್ಸಿನಲ್ಲಿದ್ದವರೆಲ್ಲ 'ಯಾರದ್ದು ಹಲಸಿನ ಹಣ್ಣು? ಛೆ!' ಎಂದು ಮುಖ ಸಿಂಡರಿಸುತ್ತಾರೆ. ಉಪ್ಪಿನಲ್ಲಿ ಹಾಕಿದ ಸೊಳೆಯಾಗಿದ್ದರೆ, ನೀವು ಎಷ್ಟು ಭದ್ರವಾಗಿ ಕಟ್ಟಿಟ್ಟರೂ ಇಟ್ಟ ಜಾಗವನ್ನು ಒದ್ದೆಯಾಗಿಸಿ ತನ್ನ ಇರವನ್ನು ಸಾರುತ್ತದೆ.

ನೀವು ಹಲಸು, ಹಲಸು ಎಂದು ಈಗ ಅಗ್ಗ ಮಾಡಬೇಡಿ! ದೇಶ ವಿದೇಶಗಳಿಗೂ ಇದರ ಪರಿಮಳ ಹಬ್ಬಿದೆ. ಇಡಿಯಾಗಿಯೂ, ವಿವಿಧ ರೀತಿಯ ರುಚಿಕರ ಆಹಾರ ವಸ್ತುಗಳಾಗಿಯೂ ಎಲ್ಲರ ಅಚ್ಚುಮೆಚ್ಚಾಗಿರುವ ಹಲಸು, ನಿಮಗೂ ಇಷ್ಟವಲ್ಲವೇ?

# 2. ಆರೋಗ್ಯ ಭಾಗ್ಯ

ಆರೋಗ್ಯವಂತ ಶರೀರವಿರಬೇಕಿದ್ದರೆ ಪೌಷ್ಟಿಕ ಆಹಾರ ಸೇವನೆ ಅಗತ್ಯ. ಅಮಿತ ಆಹಾರ ಸೇವನೆಯೂ ಅನಾರೋಗ್ಯಕ್ಕೆ ಕಾರಣವಾಗುತ್ತದೆ.

## ಚಟುವಟಿಕೆಗಳು

### ಹಾಡಿರಿ

'ಆರೋಗ್ಯ ಭಾಗ್ಯ' ಪದ್ಯವನ್ನು ವೈಯಕ್ತಿಕವಾಗಿ ಅಥವಾ ಗುಂಪಿನಲ್ಲಿ ಹಾಡಲು ಹೇಳುವುದು. ಧ್ವನಿ ಸುರುಳಿಯಿಂದ ಹಾಡನ್ನು ಕೇಳಿಸುವುದು. ಪುನಃ ಗುಂಪಿನಲ್ಲಿ ಹಾಡಲು ಹೇಳುವುದು. ಒಂದು ಗುಂಪಿನವರು ಹಾಡುವಾಗ ಉಳಿದ ಗುಂಪಿನವರು ಮೌಲ್ಯಮಾಪನ ಮಾಡುವುದು. ಚೆನ್ನಾಗಿ ಹಾಡಿದ ಗುಂಪನ್ನು ಅಭಿನಂದಿಸುವುದು. ಹಾಡುವಾಗ ಭಾವಪೂರ್ಣತೆ, ಉಚ್ಚಾರ ಸ್ಪಷ್ಟತೆ, ರಾಗ, ಲಯಗಳನ್ನು ಗಮನಿಸಿ ಮೌಲ್ಯಮಾಪನ ನಡೆಸುವುದು.

### ಉತ್ತರಿಸಿರಿ

ಪದ್ಯದ ಆಶಯಗ್ರಹಣ ಮಾಡಿಕೊಂಡು ಪಾಠ ಪುಸ್ತಕದಲ್ಲಿ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಲಿ.

### ಕರಪತ್ರ ರಚಿಸಿರಿ

ಪರಿಸರ ಮಾಲಿನ್ಯ ಎಂದರೇನು? ಅದರಿಂದಾಗುವ ತೊಂದರೆಗಳು ಯಾವುವು? ಆರೋಗ್ಯದ ಮೇಲೆ ಅವುಗಳ ಪ್ರಭಾವವೇನು? ಇತ್ಯಾದಿ ವಿಷಯಗಳ ಕುರಿತು ಚರ್ಚಿಸಿ ಪರಿಸರ ಶುಚಿತ್ವದ ಪ್ರಾಧಾನ್ಯದ ಬಗ್ಗೆ ತಿಳಿಸಿಕೊಡುವುದು. ಬಳಿಕ ಪರಿಸರ ಶುಚಿತ್ವದ ಬಗ್ಗೆ ಜನಜಾಗೃತಿ ಮೂಡಿಸಲು ಅಗತ್ಯವಿರುವ ಕರಪತ್ರವನ್ನು ತಯಾರಿ ಕುರಿತು ಚರ್ಚಿಸುವುದು. ಕರಪತ್ರದಲ್ಲಿ ಶೀರ್ಷಿಕೆ, ಸ್ಥಳ, ತಾರೀಕು, ಸಂಬೋಧನೆ, ಸೂಕ್ತ ಮಾಹಿತಿ, ಮುಕ್ತಾಯ ಇತ್ಯಾದಿ ವಿಷಯಗಳಿರಬೇಕೆಂದು ಮಕ್ಕಳಿಗೆ ನೆನಪಿಸುವುದು. ಮಕ್ಕಳು ಗುಂಪಿನಲ್ಲಿ ಕುಳಿತು ಕರಪತ್ರ ರಚಿಸಿ ಮಂಡಿಸಲಿ.

## ಶುಚಿಯಾದ ಪರಿಸರ ಸುಖವಾದ ಜೀವನ

ಕಾಸರಗೋಡು

13–3–2015

ಮಾನ್ಯರೇ,

'ಆರೋಗ್ಯವೇ ಭಾಗ್ಯ' ಎಂಬ ಮಾತಿನಂತೆ ಅರೋಗ್ಯವೊಂದಿದ್ದರೆ ಏನು ಬೇಕಿದ್ದರೂ ಸಾಧಿಸಬಹುದು. ಮನಸ್ಸು, ಶರೀರ, ಆರೋಗ್ಯದಿಂದ ಇದ್ದರೆ ಅವರು ಯಾವಾಗಲೂ ಸುಖಿಗಳಾಗಿರುತ್ತಾರೆ. ಆದರೆ ಇಂದು ಶುಚಿತ್ವದ ಕೊರತೆಯು ಅನೇಕ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಶಾರೀರಿಕ, ಮಾನಸಿಕ ಆರ್ೋಗ್ಯ ಸಿಗಬೇಕೆಂದರೆ ನಾವು ಮಾತ್ರ ಶುಚಿಯಾಗಿದ್ದರೆ ಸಾಲದು. ನಮ್ಮ ಪರಿಸರವೂ ಶುಚಿಯಾಗಿರಬೇಕು. ಅಲ್ಲಲ್ಲಿ ಕಸಗಳು, ಮಲಿನ ನೀರು, ಅನಗತ್ಯ ಹೊಗೆ ಇತ್ಯಾದಿಗಳಿಂದ ನಮ್ಮ ಪರಿಸರ ಕಲುಷಿತವಾಗುತ್ತಿದೆ. ಇದರಿಂದ ಅನೇಕ ರೀತಿಯ ಮಾರಣಾಂತಿಕ ಕಾಯಿಲೆಗಳು ಬರುತ್ತವೆ. ಇದಕ್ಕೆಲ್ಲಾ ನಾವೇ ಕಾರಣ. ನಮ್ಮನ್ನು ನಾವು ಶುಚಿಯಾಗಿಟ್ಟುಕೊಳ್ಳುವಂತೆ ನಮ್ಮ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳಬೇಕು. ಇದಕ್ಕಾಗಿ ನಾವೆಲ್ಲರು ಒಂದುಗೂಡಿ ನಮ್ಮ ಪರಿಸರ ಶುಚಿತ್ವಕ್ಕಾಗಿ ಕಾರ್ಯವೆಸಗೋಣ. ರೋಗವನ್ನು ದೂರವಿರಿಸೋಣ. ಮಾಲಿನ್ಯಮುಕ್ತ ಪರಿಸರವನ್ನು ನಿರ್ಮಿಸೋಣ.

ಇತಿ

**ಪರಿಸರ ಸಂರಕ್ಷಣಾ ವೇದಿಕೆ**

ಕಾಸರಗೋಡು.

### ಪದ ವಿಂಗಡಿಸಿರಿ

ಎರಡು ಅಥವಾಹೆಚ್ಚು ಪದಗಳು ಒಟ್ಟು ಸೇರಿದಾಗ ಅವುಗಳನ್ನು ಓದುವುದು ಕಷ್ಟ. ಆದುದರಿಂದ ಓದುವಿಕೆಗೆ ಸಹಾಯವಾಗಲು ಅವುಗಳನ್ನು ವಿಂಗಡಿಸಬೇಕಾಗುತ್ತದೆ. ಹಾಗೆ ವಿಂಗಡಿಸುವಾಗ ಪದಗಳ ಅರ್ಥ ವ್ಯತ್ಯಾಸವಾಗುವಂತೆ ಇರಬಾರದು.

### ಘೋಷಣವಾಕ್ಯ ರಚಿಸಿರಿ

ಆರೋಗ್ಯದ ಅಗತ್ಯವನ್ನು ಅರಿತುಕೊಂಡ ಮಕ್ಕಳು ಜನ ಜಾಗೃತಿ ಮೂಡಿಸಲು ಘೋಷಣ ವಾಕ್ಯಗಳನ್ನು ರಚಿಸಿ ಶಾಲೆಯ ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಬಹುದು.

ಘೋಷಣ ವಾಕ್ಯಗಳು ಸರಳವಾಗಿದ್ದು, ಆಶಯ ಸ್ಪಷ್ಟವಾಗಿರಬೇಕು. ಪ್ರಾಸಬದ್ಧವಾಗಿ, ಆಕರ್ಷಕವಾಗಿರಬೇಕು.

- ಶಾರೀರಿಕ ಸ್ವಾಸ್ಥ್ಯ ಉಳಿಸುವುದು ಅಗತ್ಯ
- ನಿತ್ಯ ವ್ಯಾಯಾಮ ಶರೀರಕ್ಕೆ ಆರಾಮ

### ಕವನ ಮುಂದುವರಿಸಿರಿ

ಮಕ್ಕಳ ಸೃಜನಶೀಲತೆಗೆ ಈ ಚಟುವಟಿಕೆ ಉಪಯುಕ್ತವಾಗಿದೆ. ಕವನ ರಚಿಸುವಾಗ ಶೈಲಿ, ಆಶಯ ಸ್ಪಷ್ಟತೆ, ಪ್ರಾಸ, ಶೀರ್ಷಿಕೆ ಮುಂತಾದ ವಿಚಾರಗಳ ಕಡೆ ಗಮನ ಕೊಡುವುದು ಅಗತ್ಯ.

ಇಲ್ಲಿ ಪಾಠಪುಸ್ತಕದಲ್ಲಿ ನೀಡಿರುವ ಪದ್ಯದ ಮುಂದುವರಿಕೆಯಾಗಿ ನಾಲ್ಕು ಸಾಲುಗಳನ್ನು ನೀಡಲಾಗಿದೆ.

ಉದಾ:

**ಸುಂದರ ಪರಿಸರ**

ಮನೆಯನು ದಿನವೂ ಗುಡಿಸೋಣ
ಕಸವನು ಒಂದೆಡೆ ಹಾಕೋಣ
ದಿನವೂ ಸ್ವಚ್ಛತೆ ಕಾಪಾಡೋಣ
ಉತ್ತಮ ಗುಣವನು ಬೆಳೆಸೋಣ

### ಪೂರ್ತಿಗೊಳಿಸಿರಿ

ಆವರಣದಿಂದ ಸೂಕ್ತವಾದ ಪದವನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆದು ಅರ್ಥಪೂರ್ಣವಾದ ವಾಕ್ಯ ರಚಿಸಿರಿ.

- ಮಿತವಾದ ಆಹಾರವನ್ನು ಸೇವಿಸಬೇಕು.
- ಪರಿಸರದಲ್ಲಿ ಗಿಡಮರಗಳನ್ನು ಬೆಳೆಸಿ ಉಳಿಸಬೇಕು.
- ನಾವು ಸೇವಿಸುವ ಆಹಾರ ಪದಾರ್ಥಗಳು ಶುಚಿಯಾಗಿರಬೇಕು.
- ಜನಮನವು ನಲವಿಂದ ಕುಣಿದಾಡಬೇಕು.

### ಪ್ರಬಂಧ ರಚಿಸಿರಿ

'ಆರೋಗ್ಯ' ಯಾಕೆ ಬೇಕು? ಆರೋಗ್ಯವಾಗಿದ್ದರೆ ಲಭಿಸುವ ಪ್ರಯೋಜನಗಳು, ಅನಾರೋಗ್ಯದ ತೊಂದರೆಗಳು, ಅನಾರೋಗ್ಯಕ್ಕೆ ಕಾರಣಗಳು ಮುಂತಾದ ವಿಚಾರಗಳ ಕುರಿತು ಲಘು ಚರ್ಚೆ ನಡೆಸಿದ ಬಳಿಕ ಮಕ್ಕಳಲ್ಲಿ ಪ್ರಬಂಧ ರಚಿಸಲು ಹೇಳುವುದು.

ಪ್ರಬಂಧ ಬರೆಯುವಾಗ ಭಾಷಾಶೈಲಿ, ಮುನ್ನುಡಿ, ವಿಷಯ ವಿಸ್ತಾರ, ಸೂಕ್ತವಾದ ಆಶಯಗಳು ಉತ್ತಮ ಶೀರ್ಷಿಕೆ ಮುಂತಾದವುಗಳ ಕಡೆಗೆ ಗಮನ ಹರಿಸುವಂತೆ ಸೂಚಿಸುವುದು.

## ಆರೋಗ್ಯ

ಆರೋಗ್ಯದಿಂದಿದ್ದು ಸಂತೋಷವಾಗಿರುವುದಕ್ಕಿಂತ ಹೆಚ್ಚಿನ ಭಾಗ್ಯ ಮನುಷ್ಯನ ಜೀವನದಲ್ಲಿ ಇನ್ನೊಂದಿಲ್ಲ. ಆರೋಗ್ಯಕರ ಶರೀರದಲ್ಲಿ ಆರೋಗ್ಯಕರ ಮನಸ್ಸು ಇರುತ್ತದೆ ಎನ್ನುವುದು ವೈಜ್ಞಾನಿಕ ಸತ್ಯವೂ ಆಗಿದೆ.

ಉತ್ತಮ ಆರೋಗ್ಯ ಮಾನವ ಕುಲಕ್ಕೆ ಒದಗುವ ಅತ್ಯಮೂಲ್ಯ ಭಾಗ್ಯವಾಗಿದೆ. ಅದು ಸೂರ್ಯನಂತೆ ಪ್ರಕಾಶಮಾನವಾಗಿದ್ದು, 'ಬೇಸರ' ಎಂಬ ಕತ್ತಲನ್ನು ಓಡಿಸಿ ಸಂತೋಷವೆಂಬ 'ಬೆಳಕ'ನ್ನು ನೀಡುತ್ತದೆ. ಆರೋಗ್ಯವಂತ ವ್ಯಕ್ತಿಗೆ ಸಮಾಜದ ಉತ್ತಮ ಸ್ಥಾನಮಾನಗಳು ದೊರೆಯುತ್ತವೆ. ಶರೀರದಲ್ಲಿ 'ಆರೋಗ್ಯ' ವನ್ನು ಕಾಪಾಡಿಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯ. ಸಮತೂಕದ, ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ನಮ್ಮ ಆರೋಗ್ಯವನ್ನು ಹೆಚ್ಚಿಸುತ್ತದೆ.

ಕ್ರೀಡೆಗಳು ಮತ್ತು ಕ್ರಮಬದ್ಧ ವ್ಯಾಯಾಮ ನಮ್ಮ ಶರೀರದ ಆರೋಗ್ಯ ರಕ್ಷಣೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಕೇವಲ ಶರೀರದ ಆರೋಗ್ಯದ ಮೇಲೆ ಮಾತ್ರವಲ್ಲ, ಮನಸ್ಸಿನ ಆರೋಗ್ಯದ ಮೇಲೂ ಇವು ಪ್ರಭಾವ ಬೀರುತ್ತವೆ. ದೇಹಕ್ಕೆ ವಿಶ್ರಾಂತಿಯೂ ಮನಸ್ಸಿಗೆ ರಂಜನೆಯೂ ಬೇಕು.

ಇಂದು ನಮ್ಮ ಸಮಾಜದಲ್ಲಿ ಆರೋಗ್ಯವಂತ ವ್ಯಕ್ತಿಗಳಿಗಿಂತ ಅನಾರೋಗ್ಯದಿಂದ ಕೂಡಿರುವವರನ್ನೇ ಹೆಚ್ಚಾಗಿ ಕಾಣುತ್ತೇವೆ. ಅನಾರೋಗ್ಯವನ್ನು ನಾವೇ ಬರಮಾಡಿಕೊಳ್ಳುತ್ತಿದ್ದೇವೆಯೋ ಎಂದೂ ಭಾಸವಾಗುತ್ತದೆ. ಸಿದ್ಧ ಆಹಾರ, ಅನಾರೋಗ್ಯಕರ ಉಡುಗೆ ತೊಡುಗೆಗಳಿಗೆ ಮಾರು ಹೋಗಿ ಜನರು ಅವುಗಳನ್ನು ಅತಿಯಾಗಿ ಉಪಯೋಗಿಸುವುದೂ ಇದಕ್ಕೆ ಕಾರಣ. ಮಾದಕ ವಸ್ತು ಸೇವನೆ, ಮದ್ಯ, ಸಿಗರೇಟು ಸೇವನೆ ಇತ್ಯಾದಿಗಳೆಲ್ಲಾ ಕ್ಷಣಿಕ ಸುಖವನ್ನು ನೀಡುತ್ತವೆ. ಆದರೆ ಅವು ಮನುಷ್ಯನ ಆರೋಗ್ಯದ ಮೇಲೆ ಶಾಶ್ವತವಾಗಿ ಕೆಟ್ಟ ಪರಿಣಾಮವನ್ನು ಬೀರುತ್ತವೆ.

ಇದನ್ನು ತಿಳಿದಿದ್ದರೂ ಜನರು 'ಫ್ಯಾಷನ್' ಎಂಬ ಹೆಸರಿನಲ್ಲಿ ತಮ್ಮನ್ನು ತಾವೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇಂತಹ ಚಟಕ್ಕೆ ಬಲಿಯಾದವರ ಮನಸ್ಸು ಯಾವಾಗಲೂ ಕೆಟ್ಟದ್ದನ್ನೇ ಯೋಚಿಸುತ್ತಿರುತ್ತದೆ. ತಮಗೆ ಬೇಕಾದುದು ಸಿಗದಿರುವಾಗ ಅವರ ಮನಸ್ಸು ಕ್ರೂರ ಕೃತ್ಯಗಳನ್ನು ಮಾಡಲು ಬಯಸುತ್ತದೆ. ಇದರಿಂದ ಸಮಾಜವೇ ಅವನತಿಯತ್ತ ಸಾಗುವುದರಲ್ಲಿ ಸಂಶಯವಿಲ್ಲ. ಅದೇ ರೀತಿ ಪರಿಸರ ಮಾಲಿನ್ಯವೂ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರುತ್ತವೆ.

ಆರೋಗ್ಯವು ಯಶಸ್ಸಿಗೆ ದಾರಿ ಮಾಡಿಕೊಡುತ್ತದೆ. ಆರೋಗ್ಯವುಳ್ಳ ದೇಹದಲ್ಲಿ ಹೆಚ್ಚು ಚುರುಕಾದ ಮಿದುಳು ಕೋಶಗಳು ಇರುತ್ತವೆಯೆಂಬುದು ವಿಜ್ಞಾನಿಗಳ ಅಭಿಪ್ರಾಯ. ಒಬ್ಬ ಆರೋಗ್ಯಪೂರ್ಣ ವ್ಯಕ್ತಿ ಹೆಚ್ಚು ಚುರುಕಾಗಿಯೂ ಪ್ರತಿಭಾಶಾಲಿಯಾಗಿಯೂ ತೀಕ್ಷ್ಣಬುದ್ಧಿ ಉಳ್ಳವನೂ ಆಗಿದ್ದು ಸಂತೋಷದ ಯಶಸ್ವೀ ಜೀವನವನ್ನು ನಡೆಸುತ್ತಾನೆ. ಆದ್ದರಿಂದ ಅನಾರೋಗ್ಯಕ್ಕೆ ಆಹ್ವಾನ ನೀಡದೆ ಆರೋಗ್ಯವನ್ನು ಕಾಪಾಡಿಕೊಂಡು ಬದುಕಬೇಕಾದುದು ಪ್ರತಿಯೊಬ್ಬ ಮಾನವನ ಅಗತ್ಯವಾಗಿದೆ. 'ಆರೋಗ್ಯವೇ ಭಾಗ್ಯ' ಎನ್ನುವ ಮಾತಿನಂತೆ ಆ ಭಾಗ್ಯವನ್ನು ಉಳಿಸಬೇಕಾದುದು ನಮ್ಮೆಲ್ಲರ ಕರ್ತವ್ಯವೂ ಆಗಿದೆ.

### ಪೂರಕ ಓದಿಗೆ

## ಗಂಜಿಯ ಕತೆ

ಗಂಜಿ ಎನ್ನುವುದು ಸಂಸ್ಕೃತದ 'ಕಾಞ್ಜಿಕಾ' ದ ತದ್ಭವರೂಪ. ಕೆಲವು ಬಗೆಯ ಏಕದಳ ಧಾನ್ಯಗಳಾದ ಗೋಧಿ, ಅಕ್ಕಿ ಅಥವಾ ಇವುಗಳ ರವೆ ಮೊದಲಾದವುಗಳಲ್ಲಿ ಒಂದನ್ನು ಹಾಲಿನಲ್ಲಿ ಅಥವಾ ನೀರಿನಲ್ಲಿ ಬೇಯಿಸಿ ಮಾಡುವ ಆಹಾರ ಪದಾರ್ಥ ಗಂಜಿ. ಇದನ್ನು ಅಂಬಲಿ ಎಂದೂ ಹೇಳುತ್ತಾರೆ.

ಐತಿಹಾಸಿಕವಾಗಿ ವಿಶ್ವದಾದ್ಯಂತ ಗಂಜಿ ಮಾನವರ, ವಿಶೇಷವಾಗಿ ಕೆಲಸಗಾರರ ಮುಖ್ಯ ಆಹಾರವಾಗಿತ್ತು. ಭಾರತದಲ್ಲೂ ಸಹಸ್ರಾರು ವರ್ಷಗಳಿಂದ ಇದು ಮನೆ ಮನೆಗಳಲ್ಲಿ ತಯಾರಾಗುತ್ತಿತ್ತು. ನಮ್ಮ ರಾಜ್ಯದಲ್ಲೂ ಗಂಜಿಯೇ ಬಹು ಮಂದಿಯ ಮುಖ್ಯ ಆಹಾರ. ಅಮೇರಿಕದ ಮೊಯಾ ಮತ್ತು ಅಜಿಟೆಕ್ ಜನಾಂಗದವರಿಗೆ ಗಂಜಿ ಪ್ರಧಾನ ಆಹಾರವಾಗಿತ್ತು. ಇದರ ಸೇವನೆಯಿಂದ ಬಾಯಾರಿಕೆ ಕಡಿಮೆಯಾಗುತ್ತದೆ. ದೇಹಕ್ಕೆ ಪೋಷಕಾಂಶಗಳೂ ದೊರೆಯುತ್ತವೆ. ಅನ್ನದ ಗಂಜಿಯನ್ನು ಉಪ್ಪಿನಕಾಯಿ, ತುಪ್ಪ, ಮೊಸರು ಇಲ್ಲವೇ ಮಜ್ಜಿಗೆ ಹಾಕಿಕೊಂಡು ತಿಂದರೆ ಅದು ಆರೋಗ್ಯ ವರ್ಧಕವೆಂಬುದು ಗಂಜಿ ಪ್ರೇಮಿಗಳ ವಾದ. ಬೆಳಗ್ಗೆ ಗಂಜಿ ಊಟ ಮಾಡಿದ ಅನಂತರ ಹೊಲ ಅಥವಾ ತೋಟದ ಕೆಲಸಕ್ಕೆ ಹೋಗಿ ಮಧ್ಯಾಹ್ನದ ಊಟದ ವೇಳೆಗೆ ಮನೆಗೆ ವಾಪಾಸು ಹಿಂತಿರುಗುವುದು. ಈಗ ಕಾಲ ಬದಲಾಗಿದೆ. ಇಡ್ಲಿ, ದೋಸೆ, ಉಪ್ಪಿಟ್ಟು ಇತ್ಯಾದಿಗಳು ಬೆಳಗಿನ ಉಪಹಾರವಾಗಿ ಗಂಜಿಯ ಸ್ಥಾನವನ್ನು ಆಕ್ರಮಿಸಿವೆ.

### ಗಂಜಿಯ ಮಹತ್ವದ ಬಗ್ಗೆ ಸೈನಿಕನೊಬ್ಬನ ಕತೆ

ಸೈನಿಕನೊಬ್ಬ ರಜೆ ಪಡೆದು ಸ್ವಗ್ರಾಮಕ್ಕೆ ಹಿಂದಿರುಗುತ್ತಿದ್ದ ಅನೇಕ ದಿನಗಳ ಪ್ರಯಾಣದ ಅನಂತರ ಒಂದು ಸಂಜೆ ಗುಡಿಸಲೊಂದರ ಬಳಿ ತಲುಪಿದ. ಅಂದು ರಾತ್ರಿ ಅಲ್ಲೇ ತಂಗಿದ್ದು ಮೂರನೇ ದಿವಸ ಪ್ರಯಾಣವನ್ನು ಮುಂದುವರಿಸುವ ಯೋಚನೆ ಅವನದು. ಅಂದು ತಂದಿದ್ದ ಅಹಾರ ಪದಾರ್ಥಗಳು ಎಂದೋ ಮುಗಿದು ಹೋಗಿದ್ದುವು. ಆದರೆ ಅವನು ಈ ಹಿಂದೆ ರಾತ್ರಿ ತಂಗಿದ್ದಲ್ಲೆಲ್ಲ ಅವನಿಗೆ ಆಶ್ರಯಕೊಟ್ಟವರು ಆಹಾರ ಒದಗಿಸಿದ್ದರು. ಆದರೆ ಈ ಮನೆಯಲ್ಲಿ ರಾತ್ರಿ ತಿನ್ನಲು ಏನೂ ಸಿಗುವ ಲಕ್ಷಣ ತೋರಲಿಲ್ಲ. ಹಸಿದಿದ್ದ ಸೈನಿಕ ತನಗೆ ಹಸಿವೆಯಾಗುತ್ತಿದೆ ಎಂದೂ ತಿನ್ನಲು ಏನಾದರೂ ಬೇಕೆಂದು

ಬಾಯಿಬಿಟ್ಟು ಅಲ್ಲಿದ್ದ ಅಜ್ಜಿಯಲ್ಲಿ ಕೇಳಿದ. ಆದರೆ ಮನೆಯಲ್ಲಿದ್ದ ಅಜ್ಜಿ ತನ್ನ ಬಳಿ ಏನೂ ಇಲ್ಲವೆಂದು ಹೇಳಿದಳು. ಮುದುಕಿ ಸುಳ್ಳು ಹೇಳುತ್ತಿರುವಳೆಂದು ಸೈನಿಕನಿಗೆ ತಿಳಿದು ಹೋಯಿತು. ಅವನು ಒಂದು ಪಾತ್ರೆ ಮತ್ತು ಸ್ವಲ್ಪ ನೀರು ಕೊಟ್ಟರೆ, ತನ್ನ ಬಳಿ ಇರುವ ಮಾಯಾ ಶಿಲೆಯ ಸಹಾಯದಿಂದ ಗಂಜಿ ಕಾಯಿಸಿಕೊಳ್ಳುವುದಾಗಿ ಮುದುಕಿಗೆ ಹೇಳಿದ. ಮುದುಕಿಗೆ ಅವನ ಮಾತು ಕೇಳಿ ಆಶ್ಚರ್ಯವಾಯಿತು.

ಅವನಿಗೆ ಒಂದು ಪಾತ್ರೆಯನ್ನೂ ಒಂದು ಮಡಿಕೆಯಲ್ಲಿ ನೀರನ್ನೂ ಕೊಟ್ಟಳು ಅವಳು ಸೈನಿಕನು ಏನು ಮಾಡುವನೆಂಬುವುದನ್ನು ಅರಿಯಲು ಅಲ್ಲೇ ಕುಳಿತಳು. ಸೈನಿಕ ಅಂಗಳದ ಒಂದು ಮೂಲೆಯಲ್ಲಿ ಕೆಲವು ಕಲ್ಲುಗಳನ್ನು ಜೋಡಿಸಿ ಒಲೆಯನ್ನು ಮಾಡಿದ. ಸಮೀಪದ ಕಾಡಿನಿಂದ ತರಗೆಲೆ, ಒಣ ಕಡ್ಡಿಗಳನ್ನು ತಂದು ಬೆಂಕಿ ಹಚ್ಚಿದ . ಪಾತ್ರೆಯನ್ನು ಒಲೆಯ ಮೇಲಿಟ್ಟು ನೀರು ಸುರಿದ. ಅನಂತರ ಕೆಲ ದಿನಗಳ ಹಿಂದೆ ಒಂದು ನದೀ ತೀರದಲ್ಲಿ ಆರಿಸಿಕೊಂಡಿದ್ದ ಒಂದು ಸುಂದರವಾದ ಶಿಲೆಯನ್ನು ತನ್ನ ಚೀಲದಿಂದ ತೆಗೆದ. ಆ ಶಿಲೆಯನ್ನು ಮುದುಕಿಗೆ ತೋರಿಸಿ, ಒಬ್ಬ ಸಿದ್ಧರು ಇದನ್ನು ಕೊಟ್ಟರೆಂದು ತಿಳಿಸಿದ. ಗಂಜಿ ಶಿಲೆ, ಗಂಜಿ ಶಿಲೆ, ಒಳ್ಳೆಯ ಗಂಜಿಯನ್ನು ಕೊಡು ಎಂದು ಮೂರು ಬಾರಿ ಮಂತ್ರ ಪಠಿಸಿ ಆ ಶಿಲೆಯನ್ನು ಒಲೆಯ ಮೇಲಿನ ಪಾತ್ರೆಯೊಳಗೆ ಹಾಕಿದ. ಕೆಲ ಕ್ಷಣಗಳ ನಂತರ ಸ್ವಲ್ಪ ಉಪ್ಪು ಮತ್ತು ಸೌಟು ಬೇಕೆಂದ. ಮುದುಕಿ ಒಳಗೆ ಹೋಗಿ ಅವೆರಡನ್ನೂ ತಂದು ಕೊಟ್ಟಳು. ಉಪ್ಪನ್ನು ನೀರಿಗೆ ಹಾಕಿ ಕುದಿಸಿ ಮಂತ್ರ ಪಠನ ನಡೆಸಿದ ಯಾವುದಾದರೂ ಹಿಟ್ಟಿದ್ದರೆ ರುಚಿ ಹೆಚ್ಚು ಬರುವುದೆಂದು ಹೇಳಿದ. ಮುದುಕಿ ಅಕ್ಕಿ ಹಿಟ್ಟು ತಂದು ಕೊಟ್ಟಳು. ಗಂಜಿ ತಯಾರಾಗುತ್ತಿವೆ. ಹಾಲು ಅಥವಾ ಮಜ್ಜಿಗೆ ಇದ್ದರೆ ವಿಶೇಷ ರುಚಿ ಎಂದ. ಒಳಗಿನಿಂದ ಅದು ಬಂದಿತು. ಎಲ್ಲವನ್ನೂ ಚೆನ್ನಾಗಿ ಬೇಯಿಸಿ ತೆಗೆದ. ಅವನ ಗಂಜಿಯ ಪರಿಮಳ ಮುದುಕಿಗೆ ಬಾರದಿರಲಿಲ್ಲ. ಸೈನಿಕ ತನ್ನ ಶಿಲೆಯನ್ನು ತೆಗೆದುಕೊಂಡು ಚೆನ್ನಾಗಿ ತೊಳೆದು ತೆಗೆದಿಟ್ಟುಕೊಂಡ ಎರಡು ಊಟದ ಪಟ್ಟಿಗಳನ್ನು ತರಿಸಿ, ತಯಾರಿಸಿದ ಗಂಜಿಯನ್ನು ಹಂಚಿದ. ಮುದುಕಿ ಅಂತಹ ರುಚಿಯಾದ ಗಂಜಿಯನ್ನು ಸೇವಿಸಿಲ್ಲವೆಂದು ಕೊಂಡಳು. ಅವನು ಮಾಯಾ ಶಿಲೆಯಿಂದ ಗಂಜಿಯನ್ನು ಸೇವಿಸಿಲ್ಲವೆಂದುಕೊಂಡಳು. ಅವನು ಮಾಯಾ ಶಿಲೆಯಿಂದ ರುಚಿಕರವಾದ ಗಂಜಿಯನ್ನು ತಯಾರಿಸಿದುದು ಅವಳಲ್ಲಿ ಅಚ್ಚರಿ ಮೂಡಿಸಿತ್ತು. ಮಾರನೇಯ ದಿನ ಅಲ್ಲಿಂದ ಹೊರಡುವಾಗ ಅವನು ಅವಳಿಗೆ ಕೃತಜ್ಞತೆ ಸಲ್ಲಿಸಿ, ಆ ಕಲ್ಲನ್ನು ಅವಳಿಗೆ ಕೊಟ್ಟು ಅವಳು ಅ ದೈವೀ ಶಿಲೆಯನ್ನು ಪಡೆದು ಸಂತೋಷಪಟ್ಟಳು. ಹಿಂದಿನ ರಾತ್ರಿಯ ಗಂಜಿಯ ಸಾಮಾನೆಲ್ಲವನ್ನೂ ತಾನೇ ಕೊಟ್ಟದ್ದೆಂಬುದು ಅವಳಿಗೆ ಗೊತ್ತಾಗಲೇಇಲ್ಲ.

**– ಸಾಧಾರ**

# 3. ತಾಯಿಯ ಋಣ

ಮನುಷ್ಯರಲ್ಲಿ ಪ್ರೀತಿ, ವಾತ್ಸಲ್ಯ, ಮಮಕಾರಗಳು ಹೆಚ್ಚಾದಷ್ಟು ಸಂಬಂಧಗಳು ಗಟ್ಟಿಯಾಗುತ್ತವೆ. ಮಾನವೀಯ ಮೌಲ್ಯಗಳು ಹೆಚ್ಚುತ್ತವೆ. 'ಋಣ' ಎಂಬ ಪದಕ್ಕೆ ಕೇವಲ 'ಸಾಲ' ಎಂಬರ್ಥ ಮೇಲ್ನೋಟಕ್ಕೆ ಕಂಡರೂ ಮಾನವೀಯತೆಗೆ ಹೋಲಿಸುವಾಗ ತೀರಿಸಲಾಗದ ಸಾಲ, ಕೃತಜ್ಞತಾ ಭಾವ ಎಂಬುದು ತಿಳಿಯುತ್ತದೆ. ಅದರಲ್ಲೂ ತಾಯಿ ಮಮತೆ! ಅದನ್ನಂತೂ ಅನುಭವಿಸಿಯೇ ತೀರಬೇಕು. ಅದು ಎಷ್ಟು ಜನ್ಮ ಎತ್ತಿದರೂ ತೀರಿಸಲಾಗದ ಸಾಲವಾಗಿದೆ.

## ಚಟುವಟಿಕೆಗಳು

### ಚರ್ಚಿಸಿರಿ

ಹೆತ್ತ ತಾಯಿಯಲ್ಲದಿದ್ದರೂ, ಹೆತ್ತ ತಾಯಿಗಿಂತ ಹೆಚ್ಚು ಮಮತೆ ಪ್ರೀತಿ ತೋರಿದ ತುಳಸಿಯಮ್ಮನನ್ನು 'ಮಹಾತಾಯಿ' ಎಂದು ಶ್ಯಾಮ ಕುಲಕರ್ಣಿ ಹೇಳು ಕಾರಣವೇನು? ಎಂದು ಕತೆಯ ಆಧಾರದಲ್ಲಿ ಚರ್ಚಿಸುವುದು. ತಾಯಿಗಿಂತ ಹೆಚ್ಚಿನ ಪ್ರೀತಿ, ಮಮತೆ ತೋರಿ ಅನಾಥ ಮಕ್ಕಳನ್ನು ಸಲಹಿದ ಆ ಮಾತೃಹೃದಯದ ಬಗ್ಗೆ ತಿಳಿದುಕೊಳ್ಳುವುದರ ಮೂಲಕ ತಾಯಿಯ ಬಗ್ಗೆ ಗೌರವ, ಪೂಜ್ಯಭಾವವನ್ನು ತೋರುವ ಮನೋಭಾವವನ್ನು ಬೆಳೆಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ.

## ಉತ್ತರಿಸಿರಿ

ಮೊದಲ ಪಾಠಗಳಲ್ಲಿ ಮಾಡಿದಂತೆಯೇ ಆಶಯಗ್ರಹಣಕ್ಕಾಗಿ ನೀಡಿರುವ ಪ್ರಶ್ನೆಗಳಿಗೆ ಬಾಯ್ದೆರೆಯಾಗಿ ಉತ್ತರ ಹೇಳಿದ ಬಳಿಕ ಬರೆದು ಮಂಡಿಸಲಿ.

## ದಿನಚರಿ ಬರೆಯಿರಿ

ನೆನಪು ಮತ್ತು ಮರೆವು ಮಾನವ ಸಹಜ ಗುಣ. ಇವುಗಳಿಂದ ತೊಂದರೆಯೂ ಇದೆ, ಪ್ರಯೋಜನವೂ ಇದೆ. ಎಷ್ಟೋ ನೋವಿನ ಸಂಗತಿಗಳನ್ನು ದಿನವೂ ನೆನಪು ಮಾಡುತ್ತಾ ಇರುವುದಕ್ಕಿಂತ ಮರೆತು ಬಿಡುವುದೇ ಉತ್ತಮ. ಅಂತೆಯೇ ದಿನನಿತ್ಯದ ಅನುಭವಗಳು, ಮರೆಯಲಾಗದಂತಹ ಘಟನೆಗಳು ನಮಗೆ ಆನಂದವನ್ನು ನೀಡುತ್ತವೆ. ಬದುಕಿನ ಜಂಜಾಟದಲ್ಲಿ ಮುಳುಗಿರುವಾಗ ಮೊದಲು ಬರೆದಿಟ್ಟ ಆ ನೆನಪುಗಳು ನಮ್ಮ ಮನಸ್ಸನ್ನು ಹಗುರಗೊಳಿಸುತ್ತವೆ. ಹಾಗೆ ವ್ಯವಸ್ಥಿತವಾಗಿ ಬರೆದಿಡುವುದು 'ದಿನಚರಿ' ಎನಿಸುತ್ತದೆ. ದಿನಚರಿ ಬರೆಯುವುದು ಒಂದು ಒಳ್ಳೆಯ ಹವ್ಯಾಸ. ಅದನ್ನು ಮಕ್ಕಳಲ್ಲಿ ಬೆಳೆಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ.

## ದಿನಚರಿ ಹೇಗಿರಬೇಕು?

ದಿನಾಂಕ, ವಾರ ನಮೂದಿಸಿರಬೇಕು – ದಿನಚರಿ ಸಂಕ್ಷಿಪ್ತವಾಗಿರಬೇಕು. ಮುಖ್ಯ ಘಟನೆಗಳನ್ನು ಮಾತ್ರ ನಮೂದಿಸಿರಬೇಕು.

**ಡಾ. ಶ್ಯಾಮ ಕುಲಕರ್ಣಿಯವರ ದಿನಚರಿ**

14.03.2015

ಶನಿವಾರ

ಇವತ್ತು ನನ್ನ ಪಾಲಿನ ಸುದಿನ. ಯಾಕೆಂದರೆ ಹಲವು ಸಮಯಗಳಿಂದ ಬಯಸುತ್ತಿದ್ದ ಭಾಗ್ಯ ನನಗೊದಗಿ ಬಂತು. ನನಗೆ ಕೈತುತ್ತು ತಿನ್ನಿಸಿ ಇವತ್ತು ಈ ಸ್ಥಾನದಲ್ಲಿ ನಿಲ್ಲುವಂತೆ ಮಾಡಿದ ಮಹಾತಾಯಿಯ ಸೇವೆ ಮಾಡುವ ಭಾಗ್ಯ ದೊರಕಿತು. ವಾರಾನ್ನದ ಹುಡುಗನಾಗಿದ್ದ ನನಗೆ ತನ್ನ ಕೈಯ್ಯಲ್ಲಿರುವ ಬಳೆಗಳನ್ನು ನೀಡಿ ವಿದ್ಯೆ ಕಲಿಯುವಂತೆ ಹೇಳಿದ ಮಾತೆ, ಚಿಕ್ಕಂದಿನಲ್ಲಿ ಪ್ರೀತಿ ತೋರಿದ ರಂಗಣ್ಣ, ರಘು, ಹರಿ ಎಲ್ಲರನ್ನು ನೋಡುವ ಭಾಗ್ಯ ಇಂದು ನನಗೊದಗಿದೆ. ಈ ದಿನವನ್ನು ಎಂದೂ ಮರೆಯಲು ಸಾಧ್ಯವಿಲ್ಲ.

## ವಾಕ್ಯ ರಚಿಸಿರಿ

ಒಂದು ಪದದ ಅರ್ಥಕ್ಕೆ ವಿರುದ್ಧ ಅರ್ಥವನ್ನು ಕೊಡುವ ಪದಗಳನ್ನು ವಿರೋಧಾರ್ಥ ಪದಗಳೆನ್ನುವರು. ಪಾಠ ಪುಸ್ತಕದಲ್ಲಿ ನೀಡಿರುವ ಪದಗಳ ವಿರೋಧಾರ್ಥ ಪದಗಳನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿಯಲಿ. ಬಳಿಕ ಅವುಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಲಿ.

1. ಆರೋಗ್ಯ x ಅನಾರೋಗ್ಯ – ಅನಾರೋಗ್ಯದಿಂದ ಇರುವ ವ್ಯಕ್ತಿಯಲ್ಲಿ ಆರೋಗ್ಯವಂತ ಚಿಂತನೆಗಳು ಬರುವುದಿಲ್ಲ.
2. ಕಷ್ಟ x ಸುಖ – ಸುಖ ಬಂದಾಗ ಹಿಗ್ಗದೆ ಕಷ್ಟ ಬಂದಾಗ ಕುಗ್ಗದೆ ಬದುಕಬೇಕು.
3. ಸಮಾಧಾನ x ಅಸಮಾಧಾನ – ಎಷ್ಟೇ ಅಸಮಾಧಾನವಿದ್ದರೂ ನಾವು ಸಮಾಧಾನದಿಂದ ಮಾತನಾಡಬೇಕು.

4. ಅನುಕೂಲ x ಅನನಕೂಲ – ಬೇರೊಬ್ಬರ ಅನಾನುಕೂಲ ಪರಿಸ್ಥಿತಿಯಲ್ಲಿ ನಮ್ಮ ಅನುಕೂಲ ನೋಡಿಕೊಂಡು ಕಾರ್ಯವೆಸಗಬೇಕು.

5. ಪೂರ್ಣ x ಅಪೂರ್ಣ – ಯಾವುದೇ ಕೆಲಸವನ್ನು ಅಪೂರ್ಣ ಮಾಡದೆ ಪೂರ್ಣವಾಗಿ ಮಾಡುವುದೇ ಉತ್ತಮ ಕೆಲಸಗಾರನ ಲಕ್ಷಣ

6. ಸಾಧ್ಯ x ಅಸಾಧ್ಯ – ಅಸಾಧ್ಯವೆಂದು ಪ್ರಯತ್ನಿಸದೇ ಇದ್ದರೆ ಸುಲಭ ಕೆಲಸವೂ ಸಾಧ್ಯವಾಗದು.

7. ಮುಂದೆ x ಹಿಂದೆ – ಇತರರನ್ನು ಹಿಂದಿನಿಂದ ಹೀಯಾಳಿಸುವುದು, ಮುಂದಿನಿಂದ ಹೊಗಳುವುದು ಸರಿಯಲ್ಲ.

## ಪಾತ್ರಚಿತ್ರಣ ಬರೆಯಿರಿ

ಈ ಕತೆಯಲ್ಲಿ ಬಂದಿರುವ ಪಾತ್ರಗಳು ಯಾವುವು ಎಂದು ಹೇಳುತ್ತಾ ಅವುಗಳಲ್ಲಿ ಇಷ್ಟವಾದ ಪಾತ್ರದ ಬಗ್ಗೆ ಯಾಕೆ ಇಷ್ಟವಾಯಿತು ಎಂದು ಬರೆಯಲು ಹೇಳುವುದು. ಮಕ್ಕಳು ಗುಂಪಿನಲ್ಲಿ ಕುಳಿತು ಬರೆದು ಮಂಡಿಸಲಿ. ಬಳಿಕ ಚರ್ಚಿಸಿ ಉತ್ತಮ ಪಡಿಸಲು ಅಧ್ಯಾಪಕರು ಸಹಾಯ ಮಾಡಬೇಕು.

ಪಾತ್ರಗಳು : ತುಳಸಿಯಮ್ಮ, ರಂಗಣ್ಣ, ರಘು, ಹರಿ.

## ತುಳಸಿಯಮ್ಮನ ಪಾತ್ರಚಿತ್ರಣ

ಈ ಕತೆಯಲ್ಲಿ ಬರುವ ತುಳಸಿಯಮ್ಮನ ಪಾತ್ರ ನನಗೆ ಇಷ್ಟವಾಯಿತು. ಯಾಕೆಂದರೆ ಆ ತಾಯಿ ಯಾವ ಪ್ರತಿಫಲವನ್ನು ಬಯಸದೆ ತನ್ನಲ್ಲಿಗೆ ಬಂದ ಹುಡುಗನಿಗೆ ವಾರಾನ್ನ ನೀಡಿ ತನ್ನ ಮಕ್ಕಳಂತೆ ಪ್ರೀತಿಯಿಂದ ನೋಡಿಕೊಂಡಿದ್ದಾಳೆ. ಒದಿನಲ್ಲಿ ಚುರುಕಾಗಿದ್ದ ಆ ವಾರಾನ್ನದ ಹುಡುಗ ಉನ್ನತ ವಿದ್ಯಾಭ್ಯಾಸಕ್ಕೆ ಮುಂಬಯಿಗೆ ಹೋಗಬೇಕಿತ್ತು. ಹಣವಿಲ್ಲದೆ ಕೊರಗುತ್ತಿದ್ದ ಹುಡುಗನ ದುಃಖವನ್ನು ನೋಡಿದ ಆ ತಾಯಿ ದೇವರನ್ನು ಭಕ್ತಿಯಿಂದ ಪೂಜಿಸಲು ಹೇಳುತ್ತಾಳೆ ಮತ್ತು ದೇವರ ಪೆಟ್ಟಿಗೆಯ ಬಳಿ ಇರುವ ಡಬ್ಬಿಯಿಂದ ತನ್ನ ಎರಡು ಚಿನ್ನದ ಬಳೆಗಳನ್ನು ತೆಗೆದು ಆ ಹುಡುಗನ ಕೈಯ್ಯಲ್ಲಿಟ್ಟು ಇದನ್ನು ನಿನ್ನ ಮುಂದಿನ ವಿದ್ಯಾಭ್ಯಾಸಕ್ಕೆ ಬಳಸಿಕೋ ನೀನು ಮಗನಂತೆ ಎಂದು ಹೇಳುತ್ತಾಳೆ. ಇಲ್ಲಿ ಆಕೆ ತನ್ನ ಸ್ವಾರ್ಥವನ್ನು ಬಯಸದೆ ಆ ಹುಡಗನಿಗೆ ಒಳ್ಳೆಯದಾಗಲಿ ಎಂದು ತುಂಬು ಮನಸ್ಸಿನಿಂದ ಹಾರೈಸುತ್ತಾಳೆ. ಆ ಮಹಾತಾಯಿಯ ನಿಸ್ವಾರ್ಥ ಬುದ್ಧಿತುಂಬಾ ಇಷ್ಟವಾಯಿತು.

## ಶೀರ್ಷಿಕೆ ಕೊಡಿರಿ

ಪ್ರತಿಯೊಬ್ಬ ವ್ಯಕ್ತಿಗೂ ಒಂದೊಂದು ಹೆಸರಿರುವಂತೆ ಪ್ರತಿಯೊಂದು ಕತೆಗೂ ಒಂದು ಹೆಸರು ಬೇಕು. ಅದು ಅವರವರ ಅಭಿರುಚಿಗೆ, ಆಸಕ್ತಿಗೆ ಅನುಸಾರವಾಗಿರಬಹುದು. 'ತಾಯಿಯ ಋಣ' ಕತೆಯನ್ನು ಓದಿ ಸೂಕ್ತವಾದ ಇತರ ಶೀರ್ಷಿಕೆಗಳನ್ನು ಬರೆದು ಕಾರಣ ಹೇಳಲು ವಿದ್ಯಾರ್ಥಿಗಳಲ್ಲಿ ಹೇಳುವುದು.

ತಾಯಿ ಮಮತೆ : ವಾರಾನ್ನದ ಹುಡುಗನೂ ತನ್ನ ಮಗನಂತೆಯೇ ಎಂದು ತಿಳಿಯುತ್ತಾಳೆ ಆ ತಾಯಿ.

ಕೃತಜ್ಞತೆ : ತಾನು ಓದಿ ಡಾಕ್ಟರನಾಗಲು ಕಾರಣಳಾದ ತಾಯಿ ಅನಾರೋಗ್ಯದಿಂದ ಬಂದಾಗ ಅವಳ ಗುರುತು ಹಿಡಿದ ಅವಳು ಮಾಡಿದ ಉಪಕಾರವನ್ನು ಸ್ಮರಿಸುತ್ತಾನೆ ಶ್ಯಾಮ ಕುಲಕರ್ಣಿ.

## ಊಹಿಸಿ ಬರೆಯಿರಿ

ಊಹೆಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ. ಆದ್ದರಿಂದ ಕತೆಯನ್ನು ಓದಿ ಮಕ್ಕಳು ರಂಗಣ್ಣನ ಮನಸ್ಸಿನಲ್ಲಿ ಮೂಡಿದ ಯೋಚನೆಗಳನ್ನು ತಮ್ಮ ಕಲ್ಪನೆಗಳಿಗನುಗುಣವಾಗಿ ಬರೆದು ಮಂಡಿಸಲಿ.

**ಪೂರಕ ಓದಿಗೆ**

# ಸಂಪಣ್ಣನ ಒಳ್ಳೆಯತನ

ಒಂದು ಹಳ್ಳಿಯಲ್ಲಿ ಸಂಪಣ್ಣನೆಂಬ ಬಡ ರೈತನಿದ್ದ. ತುಂಬಾ ಒಳ್ಳೆಯವನು. ಕೈಯಲ್ಲಿ ಏನಾದರೂ ಇದ್ದರೆ ಕಷ್ಟದಲ್ಲಿರುವವರಿಗೆ ನೆರವಾಗುತ್ತಿದ್ದ. ತಿಂಡಿ ತಿನಸು ಸಿಕ್ಕಿದರೆ ನೆರೆಹೊರೆಯವರಿಗೆ ಹಂಚದೆ ತಾನು ತಿನ್ನುತ್ತಿರಲಿಲ್ಲ. ಅವನನ್ನು ಕಂಡರೆ ಊರವರಿಗೂ ಪ್ರೀತಿ ಇತ್ತು. ಅವರನ್ನು ತಮ್ಮ ಬಂಧುಗಳಲ್ಲಿ ಒಬ್ಬನೆಂದು ತಿಳಿದುಕೊಂಡಿದ್ದರು.

ಯಾವುದೋ ಒಂದು ಮಳೆಗಾಲದಲ್ಲಿ ಮಳೆ ಕೈ ಕೊಟ್ಟಿತು. ಸಂಪಣ್ಣ ಬಿತ್ತಿ ಬೆಳೆಸಿದ ಪೈರು ನೀರಿಲ್ಲದೆ ಬೆಂಗಾಡಾಯಿತು. ತನ್ನನ್ನು ಆಧರಿಸಿದ್ದ ಸಂಸಾರದ ಪೋಷಣೆಗೂ ಗತಿಯಿಲ್ಲದೆ ಅವನು ಒದ್ದಾಡಿದ. ಸುಗ್ಗಿ ಬೆಳೆಗೆ ಅನುಕೂಲವಾಗಿ ಮಳೆ ಬಂದರೂ ಬೆಳೆ ಬರುವ ತನಕ ಖರ್ಚು ವೆಚ್ಚಕ್ಕೆ ದಾರಿ ಇಲ್ಲದೆ ಹೋಯಿತು.

ನೆರೆಯಲ್ಲಿ ಒಬ್ಬ ಬಡ್ಡಿ ವ್ಯಾಪಾರಿ ಇದ್ದ. ಬರೇ ದುಷ್ಟ. ತನ್ನ ಲಾಭಕ್ಕಾಗಿ ಬೇರೆಯವರ ಕತ್ತು ಹಿಸುಕುವುದಕ್ಕೂ ಅವನು ಹಿಂದು ಮುಂದು ನೋಡುತ್ತಿರಲಿಲ್ಲ. ಹಳ್ಳಿಯಲ್ಲಿ ರೈತರೆಲ್ಲರಿಗೂ ಬೆಳೆ ಬಂದಿರಲಿಲ್ಲ. ಸಂಪಣ್ಣನಿಗೆ ನೆರವಾಗಲು ಯಾರೂ ಸಿದ್ಧರಿರಲಿಲ್ಲ. ವಿಧಿಯಿಲ್ಲದೆ ಸಂಪಣ್ಣ ವ್ಯಾಪಾರಿಯ ಬಳಿಗೆ ಹೋಗಿ ಸಾಲ ಯಾಚಿಸಿದ.

'ಹಣ ಕೊಡಬಹುದು. ಆದರೆ ಮೂರು ತಿಂಗಳಲ್ಲಿ ಅಸಲಿನಷ್ಟೇ ಬಡ್ಡಿಯಾಗುತ್ತದೆ' ಎಂದ ವ್ಯಾಪಾರಿ.

'ಆಗಲಿ ಬೆಳೆ ಚೆನ್ನಾಗಿ ಬರಬಹುದು. ನಿಮ್ಮ ಸಾಲವನ್ನು ಸಕಾಲಕ್ಕೆ ಮರಳಿಸುತ್ತೇನೆ' ಸಂಪಣ್ಣ ಕೇಳಿದ.

'ನಿನ್ನ ಬೆಳೆಯನ್ನು ನಂಬಿ ಹಣ ಕೊಡಲು ನಾನು ಮೂರ್ಖನಲ್ಲ. ಸಾಲ ಮರಳಿಸಲು ಒಂದು ದಿನ ಅವಧಿ ದಾಟಬಾರದು. ನಿನ್ನ ವಾಸದ ಮನೆಯನ್ನು ಒತ್ತೆಯಾಗಿ ಬರೆದು ಕೊಡು. ಇಂದಿನಿಂದ ತೊಂಭತ್ತನೆಯ ದಿನ ಸಾಲದ ಅಸಲು, ಬಡ್ಡಿ ಮರಳಿಸದಿದ್ದರೆ ಮನೆಯ ಒಡೆತನ ನನ್ನದಾಗುತ್ತದೆ' ಎಂದು ವ್ಯಾಪಾರಿ ಸ್ಪಷ್ಟಪಡಿಸಿದ.

ದೈವದ ಮೇಲೆ ಭಾರ ಹೇರಿ ಸಂಪಣ್ಣ ವ್ಯಾಪಾರಿಯ ಮಾತಿಗೆ ಒಪ್ಪಿ ಮನೆಯನ್ನು ಅಡವಿರಿಸಿ ದಾಖಲೆ ಪತ್ರಕ್ಕೆ ರುಜು ಹಾಕಿದ. ವ್ಯಾಪಾರಿ ಕೊಟ್ಟ ಸಾಲದ ಹಣವನ್ನು ಖರ್ಚು ವೆಚ್ಚಗಳಿಗೆ ಬಳಸಿಕೊಂಡ.

ಆ ಸಲ ಸಂಪಣ್ಣನಿಗೆ ಭೂಮಿ ಕೈ ಕೊಡಲಿಲ್ಲ. ಹೊಲ ಬಿತ್ತಿದ, ಬಲಿತ ಪೈರನ್ನು ಕೊಯ್ಲು ಮಾಡಿ ಮುತ್ತಿನಂತಹ ಕಾಳುಗಳನ್ನು ರಾಶಿ ಹಾಕಿದ. ವರ್ತಕರು ಬಂದು ಒಳ್ಳೆ ಬೆಲೆಗೆ ಅದನ್ನು ಖರೀದಿಸಿದರು. ವ್ಯಾಪಾರಿಯಿಂದ ಪಡೆದ ಎಲ್ಲ ಹಣವನ್ನು ಮರಳಿಸಲು ಬೇಕಾದಷ್ಟು ಹಣ ಸಿಕ್ಕಿದೆಯೆಂದು ಆತ ಸಂತೋಷಪಟ್ಟ.

ಸಂಪಣ್ಣನ ಪರಿಚಯದ ಹೆಂಗಸೊಬ್ಬಳು ಭೋರೆಂದು ಅಳುತ್ತಾ ಅದೇ ಹೊತ್ತಿಗೆ ಬಂದು ಅವನ ಕಾಲುಗಳನ್ನು ಹಿಡಿದುಕೊಂಡಳು. ಅಣ್ಣ ನನ್ನ ಮಾನ ಮತ್ತು ಪ್ರಾಣ ಹೋಗುವ ಸಂದರ್ಭ ಎದುರಾಗಿದೆ. ನೀವೇ ನನ್ನನ್ನು ಉಳಿಸಬೇಕು. ನೀನು ಇಲ್ಲ ಅಂದರೆ ಇಲ್ಲೇ ಜೀವ ಕಳೆದುಕೊಳ್ತೀನಿ ಎಂದು ದುಂಬಾಲು ಬಿದ್ದಳು.

ನನ್ನಿಂದ ಏನಾಗಬೇಕು ಹೇಳು? ನಿನ್ನ ಕಷ್ಟ ನಿವಾರಿಸಲು ಶಕ್ತಿಮೀರಿ ಪ್ರಯತ್ನಿಸುವೆ ಎಂದು ಸಂಪಣ್ಣ ಭರವಸೆ ನೀಡಿದ ಮೇಲೆ ಅವಳು ತನ್ನ ಸಂಕಷ್ಟವನ್ನು ವಿವರಿಸಿದಳು. ಅವಳ ಒಬ್ಬಳೇ ಮಗಳಿಗೆ ಇನ್ನು ಎರಡು ದಿನದಲ್ಲಿ ಮದುವೆ. ಅದಕ್ಕಾಗಿ ಸಂಗ್ರಹಿಸಿಟ್ಟ ಹಣವನ್ನು ಯಾರೋ ಲಪಟಾಯಿಸಿದ್ದರು. ತಕ್ಷಣ ಹಣಕ್ಕೆ ಅವಳೇನೂ ಮಾಡಲಾಗದೆ ಸಂಪಣ್ಣನ ಬಳಿಗೆ ಓಡಿ ಬಂದಿದ್ದಳು. ಅವಳ ಪರಿಸ್ಥಿತಿ ನೋಡಿ ಅವನಿಗೂ ಮರುಕವಾಯಿತು.

ಸಂಪಣ್ಣ ಹಿಂದೆ ಮುಂದೆ ನೋಡದೆ ತನ್ನಲ್ಲಿರುವ ಹಣವನ್ನು ಅವಳಿಗೆ ನೀಡಿದ. ಆದರೆ ವ್ಯಾಪಾರಿಯ ಹಣ ಮರಳಿಸಲು ಮರುದಿನಕ್ಕೆ ವಾಯಿದೆ. ನೇರ ವ್ಯಾಪಾರಿಯ ಮನೆಗೆ ಹೋಗಿ ನಡೆದ ವಿಷಯ ವಿವರಿಸಿ ಸಾಲವನ್ನು ವಾಪಾಸು ಕೊಡಲು ಒಂದಿಷ್ಟು ಕಾಲಾವಕಾಶ ಕೊಡಬೇಕೆಂದು ಪ್ರಾರ್ಥಿಸಿದ.

'ಕಾಲಾವಕಾಶವೇ? ಖಂಡಿತ ಸಾಧ್ಯವಿಲ್ಲ. ನಾಳೆ ಬೆಳಗ್ಗೆ ಬಂದು ಮನೆಯನ್ನು ಸ್ವಾಧೀನ ಮಾಡಿಕೊಳ್ಳುವೆ' ಎಂದು ವ್ಯಾಪಾರಿ ನಿರ್ದಾಕ್ಷಿಣ್ಯದಿಂದ ಹೇಳಿದ. ಸಂಪಣ್ಣ ಮನೆಗೆ ಬಂದ. ತಲೆಗೆ ಕೈ ಹೊತ್ತುಕೊಂಡು ಕುಳಿತ. ಈ ವೇಳೆಗೆ ವ್ಯಾಪಾರಿಯ ಮನೆಗೆ ಒಬ್ಬ ಬೈರಾಗಿ ಬಂದ 'ಅಣ್ಣಾ ಕಾಶಿಗೆ ಹೋಗುತ್ತಿದ್ದೇನೆ. ಹೊತ್ತು ಕತ್ತಲಾಗುತ್ತಿದೆ. ಈ ರಾತ್ರಿ ನನಗೆ ಒಂದಿಷ್ಟು ಊಟ,

ಮಲಗಲು ಜಾಗ ಕೊಡಬಹುದೆ?' ಎಂದು ಕೇಳಿದ.

'ಹೋಗು ಹೋಗು ನಾನು ಬಡ್ಡಿ ವ್ಯಾಪಾರಿ ಧರ್ಮಸತ್ರದ ಯಜಮಾನ ಅಲ್ಲ' ಎಂದು ಕಣ್ಣು ಕೆಕ್ಕರಿಸಿದ ವ್ಯಾಪಾರಿ.

ಬೈರಾಗಿ ಸಂಪಣ್ಣನ ಮನೆಗೆ ಬಂದ. ತನಗೆಷ್ಟು ಚಿಂತೆಯಿದ್ದರೂ ಸಂಪಣ್ಣ ತೋರಿಸಿಕೊಳ್ಳದೆ ಅವನನ್ನು ಆದರದಿಂದ ಸ್ವಾಗತಿಸಿದ. ಊಟ ಬಡಿಸಿದ ಮಲಗಲು ಚಾಪೆ ಕೊಟ್ಟು ಪ್ರೀತಿಯಿಂದ ಸತ್ಕರಿಸಿದ.

ಬೆಳಗಾದಾಗ ಬೈರಾಗಿ ಹೊರಟು ನಿಂತ ಸಂಪಣ್ಣನೊಂದಿಗೆ, ಏನೋ ಚಿಂತೆ ನಿನ್ನನ್ನು ಕಾಡುವಂತಿದೆ. ಸುಮ್ಮನಿದ್ದರೆ ಚಿಂತೆ ಎದುರಾದೀತು. ಹೋಗಿ ಗದ್ದೆ ಉಳು ಎಂದು ಅಂಗಳದಲ್ಲಿದ್ದ ನೇಗಿಲನ್ನು ತೋರಿಸಿ ಹೊರಟು ಹೋದ.

ಬೈರಾಗಿಯ ಮಾತಿನಲ್ಲಿ ಏನೋ ಗೂಢಾರ್ಥವಿರುವಂತೆ ಸಂಪಣ್ಣನಿಗೆ ಅನಿಸಿತು. ಅದೇ ನೇಗಿಲಿನಿನೊಂದಿಗೆ ಹೊಲಕ್ಕೆ ಹೋಗಿ ಎತ್ತು ಕಟ್ಟಿ ಉಳುಮೆಗೆ ಆರಂಭಿಸಿದ. ಆಗ ನೇಗಿಲಿನ ಮೊನೆಗೆ ಏನೋ ತಗಲಿ 'ಠಣಾರ್' ಎಂಬ ಶಬ್ದವಾಯಿತು. ಪರೀಕ್ಷಿಸಿದಾಗ ಬಂಗಾರದ ನಾಣ್ಯಗಳಿರುವ ಒಂದು ಬಿಂದಿಗೆ ಕಾಣಿಸಿತು. ಸಂಪಣ್ಣನಿಗೆ ಸಂತೋಷದಿಂದ ಮಾತೇ ಬರಲಿಲ್ಲ. ನಾಣ್ಯಗಳನ್ನು ಬಳಸಿಕೊಂಡು ವ್ಯಾಪಾರಿಯ ಸಾಲವನ್ನು ಮರಳಿಸಿದ.

ಸಂಪಣ್ಣನ ಮನೆ ತನ್ನದಾಗುತ್ತದೆ ಎಂದು ಹಿಗ್ಗುತ್ತಿದ್ದ ವ್ಯಾಪಾರಿ ಬೈರಾಗಿಯ ಕೃಪೆಯಿಂದ ಸಂಪಣ್ಣ ಧನಿಕನಾದನೆಂದು ತಿಳಿದಾಗ ತಾನು ತಪ್ಪು ಮಾಡಿದೆನೆಂದು ಪಶ್ಚಾತ್ತಾಪಪಟ್ಟ. ಬೈರಾಗಿಯನ್ನು ಹುಡುಕಿಕೊಂಡು ಹೋದ. ಅವನ ಕಾಲಿಗೆ ಬಿದ್ದು ಮನೆಗೆ ಕರೆತಂದ. ಬಗೆ ಬಗೆಯ ಭಕ್ಷ್ಯ, ಭೋಜ್ಯಗಳನ್ನು ಬಡಿಸಿ ಸತ್ಕರಿಸಿದ. ಊಟ ಮಾಡಿ ಬೈರಾಗಿ ಸುಮ್ಮನೆ ಹೊರಟಾಗ, 'ಸ್ವಾಮಿ ನನ್ನನ್ನು ಹರಸಿ ಹೋಗಿ' ಎಂದು ಪ್ರಾರ್ಥಿಸಿದ.

ಹೊಟ್ಟೆ ತುಂಬಿರುವವನಿಗೆ ಹರಸಲಿಕ್ಕೇನಿದೆ? ಎಂದು ಗೊಣಗುತ್ತ ಬೈರಾಗಿ ತಾನು ಊಟ ಮಾಡಿರುವ ತಟ್ಟೆಯಲ್ಲಿ ಉಳಿದ ಚೂರುಗಳನ್ನು ಆರಿಸಿ ವ್ಯಾಪಾರಿಯ ಕೈಗಿತ್ತು ಹೆಂಡತಿ ಮಕ್ಕಳೊಂದಿಗೆ ಹಂಚಿ ತಿನ್ನುವಂತೆ ಹೇಳಿ ಹೊರಟು ಹೋದ. ವ್ಯಾಪಾರಿಗೆ ಪರಮ ಸಂತೋಷವಾಯಿತು. ಎಲ್ಲರೊಂದಿಗೆ ಮಹಾ ಪ್ರಸಾದವೆಂಬಂತೆ ಅದನ್ನು ಸ್ವೀಕರಿಸಿ, ಬಹು ದೊಡ್ಡ ಪವಾಡವೇ ನಡೆಯುತ್ತದೆಂದು ಭಾವಿಸಿದ.

ಆದರೆ ಮರುಕ್ಷಣವೇ ವ್ಯಾಪಾರಿಯ ಹೆಂಡತಿ ಮಕ್ಕಳು, 'ಅಪ್ಪಾ , ನೀನು ಗಳಿಸಿದ ಈ ಸಂಪತ್ತು ಪ್ರಾಮಾಣಿಕವಾದುದಲ್ಲ. ಬಡವರ ರಕ್ತಹೀರಿ ಸಂಪಾದಿಸಿದ್ದು. ಇದೆಲ್ಲವನ್ನು ಬಡ ಬಗ್ಗರಿಗೆ ಕರೆಕರೆದು ದಾನ ಮಾಡು. ಇಲ್ಲವಾದರೆ ನಿನ್ನನ್ನು ಒದ್ದು ಹೊರಗೆ ಹಾಕುತ್ತೇವೆ' ಎಂದು ತಿರುಗಿಬಿದ್ದರು. ಅವರೆದುರು ಏನೂ ಮಾಡಲಾಗದೆ ವ್ಯಾಪಾರಿ ಸೋತುಹೋದ. ತಾನು ಸ್ವೀಕರಿಸಿದ್ದ ಬಡ್ಡಿಯನ್ನು ಊರವರಿಗೆಲ್ಲಾ ಮರಳಿಸಿದ.

ಬೈರಾಗಿ ನೀಡಿದ ಆಹಾರದಿಂದ ತಾನು ಗಳಿಸಿದ್ದೆಲ್ಲ ಕೈ ಬಿಟ್ಟಿತೆಂದು ತಿಳಿದರೂ ವ್ಯಾಪಾರಿ ದುಃಖಿಸಲಿಲ್ಲ. ಅವನ ಸ್ವಂತದ ಹಣ ಸ್ವಲ್ಪ ಉಳಿದಿತ್ತು. ಅದನ್ನೇ ಪ್ರಾಮಾಣಿಕತನದಿಂದ ಬೆಳೆಸಿ ವ್ಯಾಪಾರ ಮಾಡಿ ಅಭಿವೃದ್ಧಿ ಹೊಂದಿದ. ಲೋಭತನವನ್ನು ದೂರವಿರಿಸಿ, ಜನರ ಕಷ್ಟ ಕಾಲದಲ್ಲಿ ಒಳ್ಳೆಯ ಮನಸ್ಸಿನಿಂದ ನೆರವು ನೀಡಿದ. ಒಳ್ಳೆಯತನಕ್ಕೆ ಸೋಲಿಲ್ಲ ಎಂಬ ಸತ್ಯವನ್ನು ಆತ ಇದರಿಂದ ಅರಿತುಕೊಂಡ.

## ಮೌಲ್ಯನಿರ್ಣಯ ಚಟುವಟಿಕೆಗಳು

1. ಮಳೆಗಾಲದಲ್ಲಿ , ಸೊಳ್ಳೆಗಳಿಂದ ಹರಡುವ ರೋಗಳು ಬಾರದಂತೆ ತಡೆಗಟ್ಟಲು ಕೈಗೊಳ್ಳಬೇಕಾದ ಮುಂಜಾಗರೂಕತೆಗಳನ್ನು ಜನರಿಗೆ ತಿಳಿಸಿ ಜಾಗೃತಿಯನ್ನು ಮೂಡಿಸಬೇಕಾಗಿದೆ. ಅದಕ್ಕಾಗಿ ಒಂದು ಕರಪತ್ರವನ್ನು ತಯಾರಿಸಿರಿ.

2. ಅಡಿಗೆರೆ ಪದದ ವಿರೋಧಾರ್ಥ ಪದವನ್ನು ಉಪಯೋಗಿಸಿ ಬೇರೊಂದು ವಾಕ್ಯವನ್ನು ಬರೆಯಿರಿ.

   - ಸೂರ್ಯನು <u>ಹಗಲಿನಲ್ಲಿ</u> ಪ್ರಕಾಶಮಾನವಾಗಿ ಹೊಳೆಯುತ್ತಾನೆ.

- ನಾವು ಇತರರಿಗೆ ಅನ್ಯಾಯ ಮಾಡಬಾರದು
- ಶ್ರಮಪಟ್ಟರೆ ನಮಗೆ ಅಸಾಧ್ಯವಾದುದು ಯಾವುದು ಇಲ್ಲ
- ಅನ್ಯರನ್ನು ತೆಗಳಿದರೆ ನಾವು ಉತ್ತಮರೆನಿಸಿಕೊಳ್ಳುವೆವು
- ರಮೇಶನಿಗೆ ವೇದಿಕೆಯಲ್ಲಿ ಸನ್ಮಾನ ಸ್ವೀಕರಿಸುವ ಸೌಭಾಗ್ಯ ದೊರೆಯಿತು

3. 'ಆರೋಗ್ಯ ರಕ್ಷಣೆಯಲ್ಲಿ ಶರೀರ ಶುಚಿತ್ವವು ಪ್ರಧಾನ ಪಾತ್ರ ವಹಿಸುತ್ತದೆ' ಎಂಬ ವಿಷಯದ ಕುರಿತು ಪ್ರಬಂಧ ರಚಿಸಿರಿ.

4. ಮಿತವಾದ ಆಹಾರ ಸೇವನೆಯ ಮಾಡಿ
   ಹಿತವಾದ ಜೀವನವ ನಡೆಸುವರು ನೋಡಿ

   'ಆರೋಗ್ಯ ಭಾಗ್ಯ' ಪದ್ಯದಲ್ಲಿ ಬಂದ ಈ ಕವಿವಾಣಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ಟಿಪ್ಪಣಿ ಬರೆಯಿರಿ.

# 6. ಪರಿವರ್ತನೆ

ಬದಲಾವಣೆ ಪ್ರಕೃತಿಯ ಸಹಜಗುಣ. ಕಾಲಗಳಿಗನುಗುಣವಾಗಿ ಋತುಗಳು ಬದಲಾಗುತ್ತಿರುತ್ತವೆ. ಹಗಲು ರಾತ್ರಿಗಳಾಗುತ್ತವೆ. ಹಾಗೆಯೇ ಕೆಟ್ಟವರು ಒಳ್ಳೆಯವರಾಗುತ್ತಾರೆ. ಬದಲಾವಣೆ ಅನಿವಾರ್ಯವೂ ಹೌದು. ಇಂತಹ ಬದಲಾವಣೆಗಳು ಕೆಲವೊಮ್ಮೆ ಹೊಸದೊಂದು ವಿಷಯದ ಹುಟ್ಟಿಗೂ ಕಾರಣವಾಗಬಹುದು. ಚಿಂತನ ಸಾಮರ್ಥ್ಯವನ್ನು, ಸಂಶೋಧನ ಮನೋಭಾವವನ್ನು ಮಕ್ಕಳಲ್ಲಿ ಮೂಡಿಸುವ ಉದ್ದೇಶದಿಂದ 'ಪರಿವರ್ತನೆ' ಎಂಬ ಘಟಕವನ್ನು ನೀಡಲಾಗಿದೆ. ಇದರಲ್ಲಿ 'ಮೋಡಗಳೇ' ಎಂಬ ಪ್ರಕೃತಿ ವಿಸ್ಮಯಕ್ಕೆ ಸಂಬಂಧಿಸಿದ ಹಾಡು, ವೈಜ್ಞಾನಿಕ ಪ್ರಗತಿಯನ್ನು ಸಾರಿದ ವಿಜ್ಞಾನಿ, 'ಮೈಕಲ್ ಫ್ಯಾರಡೇ'ಯ ಕತೆ ಮತ್ತು 'ಅನಿಲನ ಕಾರು' ಎಂಬ ಕಾಲ್ಪನಿಕ ಕತೆಯೂ ಇವೆ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ-ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವಪೂರ್ಣವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ಪ್ರಕಾರಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಕೃತಿಯ ಕಥಾಪಾತ್ರಗಳು, ಸನ್ನಿವೇಶಗಳು, ಭಾಷಾಶೈಲಿ, ಮಂಡನೆಯ ರೀತಿ ಎಂಬಿತ್ಯಾದಿಗಳನ್ನು ಪರಿಗಣಿಸಿ ಓದಿದ ಕೃತಿಯ ಆಸ್ವಾದನಾ ಟಿಪ್ಪಣಿ ತಯಾರಿಸುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಉತ್ತಮಗೊಳಿಸುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಸೃಜನಾತ್ಮಕ ರಚನೆಗಳ ಭಾವವನ್ನು ಅರ್ಥೈಸಿಕೊಂಡು ನಾಟಕ, ಭಾವಾಭಿನಯ ಮತ್ತು ಮೂಕಾಭಿನಯಗಳ ಮೂಲಕ ಮಂಡಿಸುವುದು.
- ದೃಶ್ಯ-ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 6 : ಪರಿವರ್ತನೆ**

ಸಮಯ6+7ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಮೋಡಗಳೇ | • ಪ್ರಕೃತಿಯ ವೈಚಿತ್ರ್ಯಗಳು ಆಶಯಗಳಾಗಿ ಬರುವ ಕವಿತೆಗಳಿವೆ ಎಂಬುದನ್ನು ತಿಳಿಯುವುದು.<br>• ಸೃಜನಾತ್ಮಕ ರಚನೆಗಳನ್ನು ತಯಾರಿಸುವುದು.<br>• ಕವಿತೆಯನ್ನು ಓದಿ ಆಸ್ವಾದಿಸುವುದು. | • ಹಾಡುವುದು<br>• ಉತ್ತರಿಸುವುದು<br>• ಆಶಯ ಬರೆಯುವುದು<br>• ಪ್ರಾಸಪದ<br>• ಆಸ್ವಾದನ ಟಿಪ್ಪಣಿ<br>• ಕವಿತೆ ಮುಂದುವರಿಕೆ<br>• ಘಟನೆಯನ್ನು ಬರೆಯುವುದು | • ಬರಗಾಲಕ್ಕೆ ಸಂಬಂಧಿಸಿದ ಹಾಡುಗಳು, ಚಿತ್ರಗಳು, ಲೇಖನಗಳು<br>• CD | • ಆಸ್ವಾದನಾ ಟಿಪ್ಪಣಿ<br>• ಪದ್ಯ ರಚನೆ |
| 2. ಮೈಕಲ್ ಫ್ಯಾರಡೆ | • ಕನ್ನಡ ಸಾಹಿತ್ಯದಲ್ಲಿ ವೈಜ್ಞಾನಿಕ ಸಾಹಿತ್ಯಕ್ಕೂ ಪ್ರಾಧಾನ್ಯವಿದೆ ಎಂಬುದನ್ನು ತಿಳಿಯುವುದು.<br>• ವೈಜ್ಞಾನಿಕ ಸಾಹಿತ್ಯಗಳನ್ನು ಓದಿ ಆಸ್ವಾದಿಸುವುದು.<br>• ವಿಜ್ಞಾನಕ್ಕೆ ಸಂಬಂಧಿಸಿದ ಸೃಜನಶೀಲ ರಚನೆಗಳನ್ನು ರಚಿಸುವುದು.<br>• ವಿಜ್ಞಾನಿಗಳ ಜೀವನ ಚರಿತ್ರೆಯಿಂದ ವೈಜ್ಞಾನಿಕ ಸಂಶೋಧನೆಗಳ ಹಿಂದೆ ಕಠಿಣ ಶ್ರಮವಿದೆ ಎಂಬುದನ್ನು ತಿಳಿಯುವುದು. | • ಚರ್ಚಿಸುವುದು<br>• ಉತ್ತರ ಬರೆಯುವುದು<br>• ರಸಪ್ರಶ್ನೆ ಕಾರ್ಯಕ್ರಮ<br>• ಟಿಪ್ಪಣಿ ತಯಾರಿಸುವುದು<br>• ಲೇಖನ ತಯಾರಿಸುವುದು<br>• ನಾಮವಿಶೇಷಣಗಳನ್ನು ಗುರುತಿಸುವುದು. | • ವಿಜ್ಞಾನಿಗಳ ಜೀವನ ಚರಿತ್ರೆ<br>• ವೈಜ್ಞಾನಿಕ ಲೇಖನಗಳು<br>• CD | • ಪ್ರಶ್ನೋತ್ತರ<br>• ಟಿಪ್ಪಣಿ<br>• ಲೇಖನ |

# ಯೂನಿಟ್ ಗ್ರಿಡ್

**ಯೂನಿಟ್ 6 : ಪರಿವರ್ತನೆ** ಸಮಯ : 6 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3. ಅನಿಲನ ಕಾರು | • ವೈಜ್ಞಾನಿಕ ಮನೋಭಾವ ಮೂಡಿಸುವುದು<br>• ವೈಜ್ಞಾನಿಕ ಚಿಂತನೆಗಳು ಕತೆ, ಕವಿತೆಗಳಂತಹ ಸಾಹಿತ್ಯ ಪ್ರಕಾರಗಳಲ್ಲಿ ಪ್ರಕಟವಾಗಿವೆ ಎಂಬುದನ್ನು ತಿಳಿಯುವುದು.<br>• ವೈಜ್ಞಾನಿಕ ಕತೆಯನ್ನು ಓದಿ ಆಸ್ವಾದಿಸುವುದು<br>• ಸೃಜನ ಶೀಲ ರಚನೆಗಳನ್ನು ರಚಿಸುವುದು. | • ಚರ್ಚೆ<br>• ಪ್ರಶ್ನೆ ತಯಾರಿ<br>• ಸಂಭಾಷಣೆ<br>• ಅಭಿನಂದನ ಪತ್ರ<br>• ಭಾಷಾ ದೋಷಗಳನ್ನು ಗುರುತಿಸುವುದು<br>• ಆಲ್ಬಂ ತಯಾರಿ | • ವೈಜ್ಞಾನಿಕ ಕಥೆಗಳು<br>• ವೈಜ್ಞಾನಿಕ ಲೇಖನಗಳು<br>• ದೈನಿಕ, ಮಾಸಿಕ, ವಾರ ಪತ್ರಿಕೆಗಳು<br>• ಪ್ರಬಂಧಗಳು | • ಸಂಭಾಷಣೆ<br>• ಅಭಿನಂದನ ಪತ್ರ<br>• ಆಲ್ಬಂ |
| | | | | |

# 1. ಮೋಡಗಳೇ

## ಚಟುವಟಿಕೆಗಳು

ಮಾನವನ ಅದಮ್ಯ ಕುತೂಹಲವು ಅನೇಕ ಸಂಶೋಧನೆಗಳಿಗೆ ಕಾರಣವಾಯಿತು. ಅವನ ಕುತೂಹಲವು ಯಾವ ವಿಷಯವನ್ನೂ ಬಿಡಲಿಲ್ಲ. ಪ್ರತಿಯೊಂದು ವಸ್ತುವಿನಲ್ಲೂ, ವಿಷಯದಲ್ಲೂ ಅವನು ಹೊಸತನ್ನು ಹುಡುಕುತ್ತಲೇ ಇದ್ದಾನೆ.

## ಹಾಡಿರಿ

ಬೇಸಗೆ ಕಾಲದ ಬವಣೆಯನ್ನೂ ಮುಂಗಾರಿನ ಆರಂಭದ ಆನಂದವನ್ನೂ ಬಿಂಬಿಸುವ ವೀಡಿಯೋ ಒಂದನ್ನು ತೋರಿಸುವುದು. ನೋಡಿದ ದೃಶ್ಯಗಳ ಚರ್ಚೆ ನಡೆಸುತ್ತಾ ಪಾಠ ಪ್ರವೇಶ ಮಾಡುವುದು.

- ಬೇಸಗೆ ಕಾಲದಲ್ಲಿ ಜನರು ಅನುಭವಿಸುವ ಕಷ್ಟಗಳೇನು?
- ಮಳೆಗಾಲದ ಅನುಭವಗಳೇನು?
- ನಿಮಗೆ ಯಾವ ಕಾಲ ಹೆಚ್ಚು ಇಷ್ಟ?

ಮುಂತಾದ ಸರಳ ಪ್ರಶ್ನೆಗಳನ್ನು ಕೇಳುತ್ತಾ ಪಾಠ ಪುಸ್ತಕದಲ್ಲಿರುವ ಮೋಡಗಳೇ ಪದ್ಯವನ್ನು ಹಾಡಲು ಹೇಳುವುದು. ಬಳಿಕ ಮಕ್ಕಳನ್ನು ಗುಂಪು ಮಾಡಿ ಪುನಃ ಹಾಡಿಸುವುದು. ಹಾಡಿನ ಸ್ಪರ್ಧೆ ಏರ್ಪಡಿಸುವುದು. ಸ್ಪಷ್ಟ ಉಚ್ಚಾರದೊಂದಿಗೆ ರಾಗ, ತಾಳ, ಲಯ ಬದ್ಧವಾಗಿ ಹಾಡಿದ ಗುಂಪನ್ನು ಅಭಿನಂದಿಸುವುದು. ಬಳಿಕ ಪದ್ಯದ ಧ್ವನಿಸುರುಳಿ ಕೇಳಿಸುವುದು.

## ಉತ್ತರಿಸಿರಿ

ಪದ್ಯದ ಆಶಯ ಗ್ರಹಣಕ್ಕೆ ಪೂರಕವಾಗಿರುವ ಈ ಚಟುವಟಿಕೆಗಳನ್ನು ಈಗಾಗಲೇ ಮಕ್ಕಳು ತಿಳಿದಿದ್ದಾರೆ. ಪ್ರಶ್ನೆಗಳಿಗೆ ಉತ್ತರವನ್ನು ಬಾಯ್ದೆರೆಯಾಗಿ ಹೇಳಿದ ಬಳಿಕ ಬರೆದು ಮಂಡಿಸಲಿ.

## ಆಶಯ ಬರೆಯಿರಿ

ಇದು ಆಶಯ ಗ್ರಹಣಕ್ಕಾಗಿ ಇರುವ ಚಟುವಟಿಕೆಯಾಗಿದೆ. ಮಕ್ಕಳಿಗೆ ಪದ್ಯಭಾಗ ಎಷ್ಟು ಅರ್ಥವಾಗಿದೆ ಎಂದು ತಿಳಿಯಲು ಇದು ಸಹಾಯಕವಾಗಿದೆ. ಪದ್ಯಭಾಗವನ್ನು ಒಂದೆರಡು ಸಲ ಓದಿ ಅರ್ಥೈಸಿಕೊಂಡು ಆಶಯ ಬರೆಯಲಿ. ಆಶಯ ಸ್ಪಷ್ಟತೆ, ವಾಕ್ಯರಚನಾ ಕ್ರಮ, ಲೇಖನ ಚಿಹ್ನೆಗಳ ಬಳಕೆಗೆ ಪ್ರಾಧಾನ್ಯ ನೀಡಬೇಕು.

## ಆಶಯ

ಪದ್ಯದ ಈ ಸಾಲುಗಳಲ್ಲಿ ನೀರಿಗಾಗಿ ಕಾದಿರುವ ಹೆಣ್ಣು ಮಕ್ಕಳ ಕುರಿತು ಹೇಳಿದ್ದಾರೆ. ನೀರಿಗಾಗಿ ಬರಿ ಕೊಡವನ್ನು ಹಿಡಿದು ಕಾಯುತ್ತಿರುವ ಇವರು ಆಕಾಶದಲ್ಲಿ ಕಾಣುವ ಮೋಡಗಳನ್ನು ಭೂಮಿಗೆ ಸ್ವಾಗತಿಸುತ್ತಿದ್ದಾರೆ ಮತ್ತು ಮೋಡಗಳ ಜೊತೆಗಾರರಾದ ಗುಡುಗು, ಮಿಂಚುಗಳು ಭೂಮಿಗೆ ಇಳಿದು ಬರುವುದನ್ನು ನೋಡುತ್ತಾ ಕಾತರದಿಂದ ಮೋಡ ಬೇಗನೆ ನೀರಾಗಿ ಸುರಿಯಲಿ ಎಂದು ಹಾರೈಸುತ್ತಿದ್ದಾರೆ.

## ಪ್ರಾಸ ಪದ ಬರೆಯಿರಿ

ಪ್ರಾಸ ಪದದ ಬಗೆಗಿನ ವಿವರಣೆಯನ್ನು ಈಗಾಗಲೇ ತಿಳಿದಿರುವ ಮಕ್ಕಳಿಗೆ ಅದನ್ನು ಪುನಃ ನೆನಪಿಸುವುದು. ನಂತರ ಪದ್ಯದಲ್ಲಿ ಬಂದಿರುವ ಅಂತ್ಯಪ್ರಾಸ ಪದಗಳನ್ನು ಗುರುತಿಸಿ ಬರೆಯಲಿ.

### ಆಸ್ವಾದನ ಟಿಪ್ಪಣಿ ತಯಾರಿಸಿರಿ

ಪದ್ಯ ಅಥವಾ ಗದ್ಯದ ಆಸ್ವಾದನೆ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ತಿಳಿಯಲು ಈ ಚಟುವಟಿಕೆಯನ್ನು ನೀಡಲಾಗಿದೆ. ಮಕ್ಕಳು ತಮಗಿಷ್ಟವಾದ ಪದ್ಯಭಾಗವನ್ನು ಆಯ್ದು ಅದರ ಆಸ್ವಾದನ ಟಿಪ್ಪಣಿ ಬರೆಯಲಿ.

ಬನ್ನಿ ಮೋಡಗಳೇ ಬನ್ನಿ
ಮೈ ತುಂಬಿದ ಮದ್ದಾನೆ ತೆರದಿ ಬನ್ನಿ
ಕಾದಿಹ ಭೂಮಿಯನು ತಣಿಸಿ
ತಂಪಿನ ಮಳೆಯ ಸುರಿಸಿ
ಬಿತ್ತಿದ ಬೀಜವ ಮೊಳೆಸಿ
ಹಸಿರನು ಬೆಳೆಯ ಬನ್ನಿ

### ಆಸ್ವಾದನ ಟಿಪ್ಪಣಿ ಹೀಗೂ ಇರಬಹುದಲ್ಲವೇ?

ಪ್ರಭಾವತಿ ಎಸ್. ದೇಸಾಯಿ ಅವರು ಬರೆದ 'ಮೋಡಗಳೇ' ಎಂಬ ಕವನದ ಈ ಭಾಗವು ನನಗೆ ಬಹಳ ಇಷ್ಟವಾಯಿತು. ಭೂಮಿಯಲ್ಲಿ ಜೀವದ ನೆಲೆನಿಲ್ಲುವಿಕೆಗೆ ಅಗತ್ಯವಾದ ಮಳೆಯನ್ನು ಉಂಟು ಮಾಡುವ ಮಳೆಮೋಡಗಳನ್ನು ಕರೆಯುವ ಸನ್ನಿವೇಶವು ಈ ಭಾಗದಲ್ಲಿ ಬಹಳ ಸೊಗಸಾಗಿ ಮೂಡಿ ಬಂದಿದೆ. ಬಿಸಿಲಿನ ಬೇಗೆಯಿಂದ ಕಾದು ಹೋದ ಭೂಮಿಯನ್ನು ತಣಿಸಲು ಮೋಡಗಳೆಲ್ಲಾ ಮದ್ದಾನೆಗಳ ರೀತಿಯಲ್ಲಿ ಧಾವಿಸಿ ಬಂದು ತಂಪಾದ ಮಳೆಯನ್ನು ಸುರಿಸಬೇಕು, ಆ ಮೂಲಕ ಬರಡಾದ ಭೂಮಿಯಲ್ಲಿ ಬಿತ್ತಿದ ಬೀಜವು ಮೊಳೆತು ಅಲ್ಲಿ ಹಸಿರು ತುಂಬಿ ತುಳುಕಬೇಕು ಎಂಬ ಉತ್ತಮ ಆಶಯವು ಈ ಸಾಲುಗಳಲ್ಲಿದೆ.

### ಕವಿತೆ ಮುಂದುವರಿಸಿರಿ

ನೀಡಿದ ಕವಿತೆಯ ಸಾಲುಗಳನ್ನು ಮುಂದುವರಿಸಿ ಬರೆಯುವ ಚಟುವಟಿಕೆಯ ಮೂಲಕ ವಿದ್ಯಾರ್ಥಿಗಳಲ್ಲಿ ಕವಿತಾ ರಚನೆಯ ಸಾಮರ್ಥ್ಯವನ್ನು ಬೆಳೆಸಬಹುದು. ನೀಡಿದ ಸಾಲುಗಳ ಆಶಯವನ್ನು ತಿಳಿದು ಕವಿತೆಯನ್ನು ಮುಂದುವರಿಸಲಿ. ಶೀರ್ಷಿಕೆ ನೀಡಲು ನೆನಪಿಸುವಿರಿ ತಾನೆ?

### ಕವಿತೆಯ ಮುಂದುವರಿಕೆ ಹೀಗೂ ಇರಬಹುದು

**ಬಿಸಿಲಿನ ಬೇಗೆ**

ಸುಡುವುದು ನೆಲವು
ಒಣಗಿದೆ ಕೆರೆಯು
ಎಂಥಾ ಧಗೆಯು
ಭಣ ಭಣ ಬಿಸಿಲು

ಬಾಡಿದೆ ಗಿಡವು
ಮುದುಡಿದೆ ಹೂವು
ಎಂಥಾ ಧಗೆಯು
ಭಣ ಭಣ ಬಿಸಿಲು

ಕಾದಿದೆ ಹೊಲವು
ಒಣಗಿದೆ ಬೆಳೆಯು
ಎಂಥಾ ಧಗೆಯು
ಭಣ ಭಣ ಬಿಸಿಲು

### ಘಟನೆಯನ್ನು ಬರೆಯಿರಿ

ವೈವಿಧ್ಯಮಯ ಚಿಂತನೆ, ಸೃಜನಶೀಲತೆ, ಕಲ್ಪನಾ ಸಾಮರ್ಥ್ಯ ಮೊದಲಾದ ಸಾಮರ್ಥ್ಯಗಳನ್ನು ಬೆಳೆಸಲು ಈ ಚಟುವಟಿಕೆ ಉಪಯುಕ್ತವಾಗಿದೆ. ಈ ಚಟುವಟಿಕೆಯಲ್ಲಿ ನೀಡಿರುವ ಪದಗಳನ್ನು ಬಳಸಿ ಘಟನೆಯೊಂದನ್ನು ಬರೆಯಲಿ. ಭಾಷಾ ಶೈಲಿ. ಆಶಯಸ್ಪಷ್ಟತೆಗಳೊಂದಿಗೆ ಬರೆದ ಬರವಣಿಗೆಗೆ ಉತ್ತಮ ಶೀರ್ಷಿಕೆಯನ್ನು ನೀಡಲಿ.

### ಪೂರಕ ಓದಿಗೆ

## ಮೋಡಣ್ಣನಿಗೆ

ಗಡ ಗಡ ಗುಡುಗುವ
ಮೋಡಣ್ಣ
ಹನಿ ಹನಿ ಮಳೆಯನು ಸುರಿಸಣ್ಣ
ಕೆರೆ ಹೊಳೆ ಹಳ್ಳದಿ
ತುಂಬಿ ಜಲ
ತಣ್ಣಗೆ ನೆನೆಯಲಿ
ಮಣ್ಣು ನೆಲ
ಸರಬರ ತೊಳೆಯಲಿ
ಊರ ಕೊಳೆ
ಫಳ ಫಳ ಹೊಳೆಯಲಿ
ಮುಖದ ಕಳೆ
ಮೆಲ್ಲಗೆ ಅರಳಲಿ
ಹೂವುಗಳು
ಹೂವನು ಸುತ್ತಲಿ
ದುಂಬಿಗಳು
ಚಿಲಿಪಿಲಿ ಎನ್ನಲಿ
ಹಕ್ಕಿಗಳು
ಛಳಿಯಲಿ ನಡುಗಲಿ
ಬೆಕ್ಕುಗಳು
ಕಾಮನ ಬಿಲ್ಲಿನ
ತೆಕ್ಕೆಯೊಳು
ಕೂಡಲಿ ನಾನಾ
ದಿಕ್ಕುಗಳು
ಗಾಳಿಗೆ ಹರಡಲಿ
ಮನವೆಲ್ಲ
ತಿಳಿಯದೆ ಕಳೆಯಲಿ
ದಿನವೆಲ್ಲ
ಹೀಗೆಯೇ ಬರಲಿ
ನಾಳೆಗಳು
ಮೂಡಲಿ ಕವಿತೆಯ
ಸಾಲುಗಳು

**– ರಾಜಶೇಖರ ಕುಕ್ಕುಂದಾ**

## ಮಕ್ಕಳ ಆಟ

ಓಡಬೇಡ ನಿಲ್ಲು ಮೋಡ
ನಿಂತು ಮಳೆಯ ಸುರಿಯಿಸು
ಮಳೆಯ ಆಟ ಆಡಲೆಂದು
ನಾನು ಕಾಯುತಿರುವೆನು
ಮಾರಿ ಮಾರಿ ಬಿಸಿಲು ಬಡಿದು
ನಮ್ಮ ಮೈಯು ಬೆವೆತಿದೆ
ಮಳೆಯ ಹನಿಯು ಸುರಿಯಿತೆನಲು
ತಲೆಯು ತಂಪು ಆಗುವುದು
ಓಣಿಯಲ್ಲಿ ನೀರು ಹರಿಯೆ
ನಾನು ಒಡ್ಡು ಹಾಕುವೆ
ಪಕ್ಕದಲ್ಲಿ ಮಡುವ ಮಾಡಿ
ಅಲ್ಲಿ ನೀರು ಕಟ್ಟುವೆ
ಅತ್ತು ಕರೆದು ಕಾಡಿ ಬೇಡಿ
ಹಾಳೆ ದೋಣಿ ತರುವೆನು
ನೀರ ಮೇಲೆ ತೇಲ ಬಿಟ್ಟು
ನೋಡಿ ಖುಷಿಯ ಪಡುವೆನು
ದೋಣಿ ಆಟ ಮುಗಿದ ಮೇಲೆ
ಅದನು ಹರಿಯ ಬಿಡುವೆನು
ನೀರಗುಂಟ ತೇಲುತಿರಲು
ಬೆನ್ನು ಹತ್ತಿ ನಡೆವೆನು
ಓಡಬೇಡ ನಿಲ್ಲು ಮೋಡ
ನಿಂತು ಮಳೆಯ ಸುರಿಯಿಸು
ಬಿಸಿಲ ಧಗೆಯ ಕಾರುತಿರುವ
ಭೂಮಿ ತಂಪಗೊಳಿಯಿಸು!

**ರಮೇಶ ತಳವಾರ**

# 2. ಮೈಕಲ್ ಫ್ಯಾರಡೇ

## ಚಟುವಟಿಕೆಗಳು

ಮಾನವನ ಕುತೂಹಲಕ್ಕೆ ಕೊನೆಯಿಲ್ಲ. ಅದು ಅನಂತವಾದುದು. ಈ ಕುತೂಹಲಗಳ ಪರಿಣಾಮವೇ ಹೊಸ ಹೊಸ ಆವಿಷ್ಕಾರಗಳು. ವಿಜ್ಞಾನಿಗಳ ಕುರಿತಾದ ಪ್ರಶ್ನೆಗಳನ್ನು ಕೇಳುತ್ತಾ ಮಕ್ಕಳಲ್ಲಿ ಕುತೂಹಲವನ್ನು ಮೂಡಿಸುವುದು. ನಿರಂತರ ಪ್ರಯತ್ನ ಮತ್ತು ಛಲದಿಂದ ಏನೂ ಬೇಕಾದರೂ ಸಾಧಿಸಬಹುದು ಎಂಬುದನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡುವುದು. ಬಳಿಕ ಮೈಕಲ್ ಫ್ಯಾರಡೇ ಪಾಠವನ್ನು ಓದಿಸುವುದು. ಮಕ್ಕಳು ನವೀನ ಪದಗಳನ್ನು ಗುರುತಿಸಿ ಅರ್ಥಕೋಶದ ಸಹಾಯದಿಂದ ಅರ್ಥ ಕಂಡುಹಿಡಿದು ಬರೆಯಲಿ.

ಕುತೂಹಲ ಮತ್ತು ಛಲ ಸಾಧನೆಯ ತಳಹದಿ ಎಂಬುದನ್ನು ಈಗಾಗಲೇ ವಿದ್ಯಾರ್ಥಿಗಳು ತಿಳಿದಿದ್ದಾರೆ. ಕಲ್ಪನಾ ಚಾವ್ಲಾಳ ಬಗ್ಗೆ ತಿಳಿದಿರುವ ಮಕ್ಕಳಿಗೆ ಅವಳಿಗಿಂತ ಎಷ್ಟೋ ವರ್ಷಗಳ ಮೊದಲು 'ವಿದ್ಯುಚ್ಛಕ್ತಿ' ಯ ಬಳಕೆಯ ಬಗ್ಗೆ ಸಂಶೋಧನೆ ನಡೆಸಿದ ಮೈಕಲ್ ಫ್ಯಾರಡೇಯ ಸಾಧನೆಯನ್ನು ವಿವರಿಸುವುದು.

## ಚರ್ಚಿಸಿರಿ

'ಚರ್ಚೆ' ಎನ್ನುವುದು ಮಾತುಗಾರಿಕೆಯ ಕೌಶಲವನ್ನು ಬೆಳೆಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಯಾವುದೇ ವಿಷಯಕ್ಕೆ ಸಂಬಂಧಿಸಿ ಮಾಹಿತಿಗಳನ್ನು ಮುಕ್ತವಾಗಿ ಇನ್ನೊಬ್ಬರೆದುರು ಹಂಚುವ ಕಾರ್ಯಕ್ಕೆ ಮಾತು ಅಗತ್ಯ.

'ಮೀನನ್ನು ಹಿಡಿಯಲು ಪ್ರಯತ್ನಿಸಿದರೆ ಪಾಚಿಯನ್ನಾದರೂ ಎಳೆಯಬಹುದು' ಎಂಬ ಫ್ಯಾರಡೇಯ ನಂಬಿಕೆಯನ್ನು ಇಂದಿನ ನಮ್ಮ ಜೀವನಕ್ಕೆ ಹೋಲಿಸಿ ಚರ್ಚಿಸಲಿ.

ನಮ್ಮಿಂದ ಏನೂ ಸಾಧ್ಯವಿಲ್ಲ ಎಂದು ಕೈಕಟ್ಟಿ ಕುಳಿತುಕೊಳ್ಳುವುದಲ್ಲ. 'ಸಾಧ್ಯವಿರುವಷ್ಟು ಪ್ರಯತ್ನಿಸುತ್ತೇನೆ. ಪೂರ್ತಿ ಅಲ್ಲದಿದ್ದರೂ ಸ್ವಲ್ಪವಾದರೂ ನನಗೆ ದಕ್ಕೀತು' ಎಂಬ ಮನೋಭಾವವನ್ನು ಮಕ್ಕಳಲ್ಲಿ ಮೂಡಿಸಬೇಕು.

## ಉತ್ತರಿಸಿರಿ

ಹಿಂದಿನ ಪಾಠಗಳಲ್ಲಿ ನಡೆಸಿದಂತೆಯೇ ಈ ಚಟುವಟಿಕೆಯನ್ನು ಮಕ್ಕಳು ನಡೆಸಲಿ.

## ರಸಪ್ರಶ್ನೆ ಕಾರ್ಯಕ್ರಮ ನಡೆಸಿರಿ

ಮಕ್ಕಳಲ್ಲಿ ಸ್ಮರಣ ಶಕ್ತಿಯನ್ನು ಹೆಚ್ಚಿಸಲು ಮತ್ತು ಪರೀಕ್ಷಿಸಲು ಇಂತಹ ಚಟುವಟಿಕೆಗಳನ್ನು ಬಳಸಬಹುದು. ರಸಪ್ರಶ್ನೆ ಕಾರ್ಯಕ್ರಮ ನಡೆಸಲು ಬೇಕಾದ ಪೂರಕ ಪುಸ್ತಕಗಳನ್ನು ಅಧ್ಯಾಪಕರು ಒದಗಿಸುವುದು ಮತ್ತು ಕಾರ್ಯಕ್ರಮ ನಡೆಸಲು ಮಾರ್ಗದರ್ಶನ ನೀಡುವುದು.

## ಸಾಮಾನ್ಯ ಪ್ರಶ್ನೆಗಳು

- ಮೈಕಲ್ ಫ್ಯಾರಡೇ ಯಾವಾಗ ಜನಿಸಿದನು?

  ಉ : 1791 ಸೆಪ್ಟಂಬರ್ 22

- ಮೈಕಲ್ ಫ್ಯಾರಡೇ ಎಲ್ಲಿ ಜನಿಸಿದನು?

  ಉ : ಇಂಗ್ಲೇಂಡ್‌ನ 'ನ್ಯೂಯಿಂಗ್‌ಟನ್' ಎಂಬಲ್ಲಿ

- ಮೈಕಲ್ ಫ್ಯಾರಡೇಯ ತಂದೆಯ ಹೆಸರೇನು?

  ಉ : ಜೇಮ್ಸ್ ಫ್ಯಾರಡೇ
-
-
-

ಹೀಗೆ ಪಾಠದ ಆಧಾರದಲ್ಲಿಯೂ ಸರಳ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸುವುದು. ಇದು ಮಕ್ಕಳಲ್ಲಿ ಓದುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

### ಟಿಪ್ಪಣಿ ಬರೆಯಿರಿ

ಈ ಚಟುವಟಿಕೆಯನ್ನು ಈಗಾಗಲೇ ಮಕ್ಕಳು ತಿಳಿದಿದ್ದಾರೆ. ಅಧ್ಯಾಪಕರು ಪುನಃ ಟಿಪ್ಪಣಿ ತಯಾರಿಯನ್ನು ನೆನಪಿಸುವುದು.

**ಟಿಪ್ಪಣಿ**

ಫ್ಯಾರಡೇಯ ಮನಸ್ಸು ಮಗುವಿನಂತಿತ್ತು ಎನ್ನುವುದಕ್ಕೆ ಅವನ ಜೀವನ ರೀತಿಯೇ ಸಾಕ್ಷಿ. ಯಾವತ್ತೂ ಇತರರಿಗೆ ಕೇಡನ್ನು ಬಯಸಿದವನಲ್ಲ. ವೈಜ್ಞಾನಿಕ ವಿಷಯಗಳನ್ನು ಚರ್ಚಿಸುವಾಗ ತನಗೆ ಸರಿ ಎಂದು ತೋರಿದುದನ್ನು ಮುಚ್ಚುಮರೆ ಇಲ್ಲದೆ ತಿಳಿಸುತ್ತಿದ್ದನು. ಯಾವುದಾದರೂ ಪ್ರಯೋಗಗಳನ್ನು ಮಾಡುತ್ತಿರುವಾಗ ಫಲಿತಾಂಶ ಗೋಚರವಾದೊಡನೆ ಮಗುವಿನಂತೆ ಚೀರಿ ಕುಣಿದಾಡುತ್ತಿದ್ದನು. ವಿರಾಮ ಕಾಲದಲ್ಲಿ ಮಕ್ಕಳಂತೆ ಆಟವಾಡುತ್ತಿದ್ದನು.

### ಲೇಖನ ತಯಾರಿಸಿರಿ

ಈ ಚಟುವಟಿಕೆಯ ಕ್ರಮಗಳನ್ನು ಈಗಾಗಲೇ ಮಕ್ಕಳು ತಿಳಿದಿದ್ದಾರೆ. ಮಕ್ಕಳಿಗೆ ಅಧ್ಯಾಪಕರು ಪುನಃ ನೆನಪಿಸುವುದು. ಬರೆದು ಮಂಡಿಸಲು ಹೇಳುವುದು.

**ವಿದ್ಯುಚ್ಛಕ್ತಿಯ ಮಹಿಮೆ**

ಮನೆಯ ದೀಪಗಳನ್ನು ಬೆಳಗಿಸುವುದರಿಂದ ಹಿಡಿದು ಕಾರ್ಖಾನೆಗಳಲ್ಲಿ ದೊಡ್ಡ ದೊಡ್ಡ ಯಂತ್ರಗಳಿಂದ ಕೆಲಸ ಮಾಡಿಸುವಂತಹ ಒಂದು ಸಣ್ಣದಾದ, ತೆಳುವಾದ ತಾಮ್ರದ ತಂತಿಗಳಲ್ಲಿ ಹರಿಯುವ ಶಕ್ತಿಯೇ ವಿದ್ಯುಚ್ಛಕ್ತಿ. ಜನ ಜೀವನದಲ್ಲಿ ಹಾಸುಹೊಕ್ಕಾಗಿ ಬೆಸೆದು ಕೊಂಡಿರುವ, ಸೂರ್ಯನ ನಂತರ ನಮಗೆ ಬೆಳಕನ್ನು ನೀಡುವುದೇ ವಿದ್ಯುಚ್ಛಕ್ತಿ ಎಂದರೂ ಹೆಚ್ಚಾಗದು.

ವಿದ್ಯುತ್ ಅನೇಕ ರೀತಿಯಲ್ಲಿ ಸಂಗ್ರಹಿಸಲ್ಪಟ್ಟು ಎಲ್ಲೆಡ ಹರಡುತ್ತದೆ. ರಭಸದಿಂದ ಧುಮುಕುವ ನೀರಿನಿಂದ, ಕಲ್ಲಿದ್ದಲ್ಲಿನಲ್ಲಿ ಅಡಕವಾಗಿರುವ ಶಕ್ತಿಯಿಂದೆಲ್ಲಾ ವಿದ್ಯುತ್ ಉತ್ಪತ್ತಿಯಾಗುತ್ತದೆ. ಇಂದು ವಿದ್ಯುತ್ತಿನ ಉಪಯೋಗವು ವಿಶ್ವದಷ್ಟೇ ವಿಶಾಲವಾಗಿದೆ. ದಿನದ ಇಪ್ಪತ್ತನಾಲ್ಕು ಗಂಟೆಯೂ ಅದನ್ನು ಒಂದಲ್ಲ ಒಂದು ರೀತಿಯಲ್ಲಿ ನಾವು ಉಪಯೋಗಿಸುತ್ತೇವೆ. ವಿದ್ಯುಚ್ಛಕ್ತಿಯು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಿಯಬಲ್ಲುದು. ಇದರ ಚಲನೆಗೆ ತಂತಿಗಳುಬೇಕು. ಇದನ್ನು ಎಲ್ಲಾ ವಸ್ತುಗಳು ಚಲಿಸಲು ಬಿಡುವುದಿಲ್ಲ. ಇದನ್ನು ತಮ್ಮ ಮೂಲಕ ಹರಿಯಲು ಬಿಡುವ ವಸ್ತುಗಳಿಗೆ 'ವಿದ್ಯುದ್ವಾಹಕ' ಗಳೆಂದು ಹೆಸರು. ವಿದ್ಯುತ್ತಿಗೆ ಶಾಖ ಗುಣವಿದೆ. ಅದರ ಪರಿಣಾಮವೇ ಬೆಳಕಿನ ಶಕ್ತಿ.

ಇಂದು ವಿದ್ಯುತ್ ಎಷ್ಟು ಅಗತ್ಯ ಎಂಬುದು ಎಲ್ಲರೂ ತಿಳಿದ ವಿಚಾರ. ಎಲ್ಲಿ ನೋಡಿದರೂ, ಯಾವ ಕೆಲಸಕ್ಕೂ ವಿದ್ಯುತ್ ಬೇಕೇ ಬೇಕು. ವಿದ್ಯುತ್ತಿನಿಂದ ರಾಸಾಯನಿಕ ಬದಲಾವಣೆಗಳಾಗುತ್ತವೆ.

ವಿದ್ಯುತ್ತನ್ನು ನಮ್ಮ ಸೇವಕನಂತೆ ಉಪಯೋಗಿಸಿಕೊಳ್ಳಬಹುದು. ಒಂದು ಸಣ್ಣ ಸ್ವಿಚ್ಚನ್ನು ಒತ್ತಿದರೆ ಸಾಕು, ನಮಗೆ ಬೆಳಕು ಸಿಗುತ್ತದೆ. ಬಿಸಿನೀರು, ಆಹಾರ, ರುಬ್ಬಲು, ಗಾಳಿ ಬೀಸಲು, ನೀರೆತ್ತಲು, ಮನೋರಂಜನೆ ನೀಡಲು ಎಲ್ಲದಕ್ಕೂ ಇಂದು ವಿದ್ಯುತ್ ಬೇಕೇ ಬೇಕು. ಹಾಗೆಂದು ವಿದ್ಯುತ್ ನಿರುಪದ್ರವಿ ಅಲ್ಲ. ಎಷ್ಟು ಉಪಕಾರಿಯೋ ಅದಕ್ಕಿಂತ ಹೆಚ್ಚು ಅಪಾಯಕಾರಿ. ವಿದ್ಯುತ್ ಪ್ರಾಣಕ್ಕೆ ಅಪಾಯ ತರುತ್ತದೆ. ಜಾಗರೂಕತೆಯಿಂದ ಮಿತವಾಗಿ ವಿದ್ಯುತ್ತನ್ನು ಬಳಸಬೇಕು.

### ಭರ್ತಿ ಮಾಡಿರಿ

ವಾಕ್ಯ ರಚನಾ ಸಾಮರ್ಥ್ಯ ಹಾಗೂ ಪದ ಪ್ರಯೋಗವನ್ನು ತಿಳಿಯಲು ಇಂತಹ ಚಟುವಟಿಕೆಗಳು ಸೂಕ್ತ.

ಬಿಟ್ಟ ಸ್ಥಳಗಳಲ್ಲಿ ಆವರಣದಿಂದ ಸೂಕ್ತ ಪದವನ್ನು ಆಯ್ದು ಮಕ್ಕಳು ವಾಕ್ಯವನ್ನು ಪೂರ್ತಿಗೊಳಿಸಲಿ. ವಾಕ್ಯದಲ್ಲಿ ಬಂದಿರುವ ಕೆಲವು ಪದಗಳ ವಿರೋಧಾರ್ಥ ಪದಗಳನ್ನು ಆವರಣದಲ್ಲಿ ಕೊಡಲಾಗಿದೆ. ಅವುಗಳನ್ನು ಕಂಡುಹಿಡಿದು ಬರೆಯಲಿ.

### ನಾಮವಿಶೇಷಣ ಪದಗಳು

ನಾಮ ಪದಗಳ ಗುಣ, ಸ್ವಭಾವಗಳನ್ನು, ವಿಶೇಷತೆಗಳನ್ನು ತಿಳಿಸುವ ಪದಗಳನ್ನು 'ನಾಮ ವಿಶೇಷಣ' ಎನ್ನುವರು. ಇದನ್ನು ಅಧ್ಯಾಪಕರು ಮಕ್ಕಳಿಗೆ ಮನದಟ್ಟು ಮಾಡಿದ ಬಳಿಕ ಪಾಠಪುಸ್ತಕದಲ್ಲಿರುವ ವಾಕ್ಯಗಳಂತೆಯೇ ಇತರ ವಾಕ್ಯಗಳನ್ನು ಗುರುತಿಸಿ ಬರೆಯಲಿ.

ಉದಾಹರಣೆ :

- ಸಂಜೆಯ ನೇಸರನ ಕಿರಣಗಳು ಹೊನ್ನಿನ ಬಣ್ಣವನ್ನು ಎರಚುತ್ತಿದ್ದವು.

ಇಲ್ಲಿ ಬಣ್ಣ ಎನ್ನುವುದು ನಾಮಪದ. ಆದರೆ ಹೊನ್ನಿನ ಬಣ್ಣ ಎನ್ನುವಲ್ಲಿ ಹೊನ್ನು ಎಂಬುದು 'ಬಣ್ಣ' ಪದವನ್ನು ವಿಶೇಷಿಸುತ್ತದೆ.

### ಪೂರಕ ಓದಿಗೆ

## ಜಗದೀಶ ಚಂದ್ರ ಬೋಸ್

ಸಸ್ಯಗಳೂ ಜೀವಿಗಳು. ಅವುಗಳಿಗೆ ನಮ್ಮಂತೆಯೇ ಜೀವವಿದೆ. ಅವು ಮನುಷ್ಯರಂತೆಯೇ ಆಹಾರ ಸೇವಿಸುತ್ತವೆ. ರಾತ್ರಿ ಮಲಗಿ ಮುಂಜಾನೆ ಎಚ್ಚರಗೊಳ್ಳುತ್ತವೆ. ಹೊಡೆದರೆ ಅವುಗಳಿಗೂ ನೋವಾಗುತ್ತದೆ. ಹುಟ್ಟು ಸಾವು ಅವಕ್ಕೂ ಉಂಟು. ಇವೇ ಮುಂತಾದ ವಿಷಯಗಳನ್ನು ಜಗತ್ತಿಗೆ ಮೊದಲು ತೋರಿಸಿಕೊಟ್ಟ ಮಹಾ ವಿಜ್ಞಾನಿ ಜಗದೀಶ ಚಂದ್ರ ಬೋಸ್.

ಈಗ ಬಾಂಗ್ಲಾದೇಶಕ್ಕೆ ಸೇರಿರುವ ಢಾಕಾ ಜಿಲ್ಲೆಯ ಫರೀದ್ ಪುರದಲ್ಲಿ ಜಗದೀಶ ಚಂದ್ರ ಬೋಸರು 1858ನೆಯ ಇಸವಿ ನವೆಂಬರ್ 30ರಂದು ಜನಿಸಿದರು. ತಂದೆ ಭಗವಾನ್ ಚಂದ್ರಬೋಸ್ ಸರ್ಕಾರದಲ್ಲಿ ದೊಡ್ಡ ಅಧಿಕಾರಿಗಳಾಗಿದ್ದರು. ಉಜ್ವಲ ದೇಶಾಭಿಮಾನಿಗಳಾಗಿದ್ದ ಅವರು ಭಾರತದ ಏಳಿಗೆ ಬಹು ಮುಖ್ಯವೆಂದು ತಿಳಿದಿದ್ದರು. ಅವರ ಮಾರ್ಗದರ್ಶನದಲ್ಲಿ ಬೆಳೆದ ಜಗದೀಶರಿಗೆ ಹೊಸ ಹೊಸ ವಿಷಯಗಳನ್ನು ತಿಳಿಯುವ ಕುತೂಹಲ ಬಾಲ್ಯದಿಂದಲೇ ಇತ್ತು. ಎಲ್ಲರನ್ನೂ ಸಮಭಾವದಿಂದ ಕಾಣಬೇಕೆಂದು ಹೇಳುತ್ತಿದ್ದ ಭಗವಾನ್‌ಚಂದ್ರರು ಮಗನನ್ನು ಒಂದು ಸಾಮಾನ್ಯ ಪಾಠ ಶಾಲೆಗೆ ಸೇರಿಸಿದ್ದರು. ಇದರಿಂದ ಜಗದೀಶರಿಗೆ ಮೀನುಗಾರ, ಕಮ್ಮಾರ, ಕೂಲಿಗಾರರ ಮಕ್ಕಳೊಡನೆ ಬೆರೆಯುವ ಸದವಕಾಶ ಸಿಕ್ಕಿತ್ತು. ಎಷ್ಟೋ ವಿಷಯಗಳನ್ನು ಸ್ವಾಭಾವಿಕವಾಗಿಯೇ ಕಲಿತರು. ಅವರ ತಾಯಿಯೂ ಧಾರ್ಮಿಕಳೂ, ವಾತ್ಸಲ್ಯಮಯಿಯೂ ಆಗಿದ್ದುದರಿಂದ ಬಾಲ್ಯದಲ್ಲೇ

ಜಗದೀಶಚಂದ್ರರಿಗೆ ಮಹಾ ಕಾವ್ಯ ಕಥೆಗಳ ಪರಿಚಯವಾಯಿತು. ಇವೆಲ್ಲದರ ಫಲವಾಗಿ ಜೀವನದಲ್ಲಿ ಒಂದು ಶಿಸ್ತನ್ನು ಕಾಪಾಡಿಕೊಂಡು ಬಂದರು. ವಿಜ್ಞಾನಿಗಳಿಗಿರಬೇಕಾದ ತಾಳ್ಮೆ, ನಿಷ್ಠೆ ಮತ್ತು ಸಾಹಸ ಪ್ರವೃತ್ತಿಗಳು ಅವರಲ್ಲಿ ಮೂಡಿ ಬಂದವು.

ಆರಂಭದ ವಿದ್ಯಾಭ್ಯಾಸದ ತರುವಾಯ ಅವರು ಕಲ್ಕತ್ತೆಯ ಸೆಂಟ್ ಝೇವಿಯರ್ ಪ್ರೌಢಶಾಲೆಯಲ್ಲಿ ಕಲಿತರು. ಅದೇ ಸಂಸ್ಥೆಯ ಕಾಲೇಜನ್ನು ಸೇರಿ ತಮ್ಮ ಹತ್ತೊಂಬತ್ತನೆಯ ವಯಸ್ಸಿನ ವೇಳೆಗೆ ಪದವೀಧರರಾದರು. ಇಂಗ್ಲೇಂಡಿಗೆ ಹೋಗಿ ಐ.ಸಿ.ಎಸ್. ಪದವಿಗಳಿಸಬೇಕೆಂಬ ಬಯಕೆ ಹೊಂದಿದ್ದರು.  ಆದರೆ ತಂದೆ ಇದಕ್ಕೊಪ್ಪಲ್ಲಿಲ್ಲ. ಮಗ ಆಡಳಿತ ಮಾಡಬಾರದು ಪಂಡಿತನಾಗಿ ಶಿಕ್ಷಕನಾಗಬೇಕು ಎಂದು ಆಸೆ ಹೊತ್ತಿದ್ದರು.

1880 ರಲ್ಲಿ ಜಗದೀಶಚಂದ್ರರು ಲಂಡನ್ನಿಗೆ ಹೋಗಿ ಅಲ್ಲಿ ಪ್ರಕೃತಿ ವಿಜ್ಞಾನ ಹಾಗೂ ವೈದ್ಯಶಾಸ್ತ್ರಗಳನ್ನು  ಕಲಿತರು. ಆಗ ಅವರಿಗೆ ಬಹುವಾಗಿ ಮೆಚ್ಚುಗೆಯಾದದ್ದು ಸಸ್ಯಶಾಸ್ತ್ರ ಹಾಗೂ ಪ್ರಾಣಿಶಾಸ್ತ್ರ, ಲಾರ್ಡ್ ರೇಲೇ ಎಂಬವರು ಅವರಿಗೆ ಮಾರ್ಗದರ್ಶಕರಾಗಿದ್ದರು. ಲಂಡನ್ ವಿಶ್ವವಿದ್ಯಾನಿಲಯದ ಬಿ.ಎಸ್.ಸಿ. ಪದವಿ ಗಳಿಸಿ ಭಾರತಕ್ಕೆ ಮರಳಿದ ಜಗದೀಶಚಂದ್ರರಿಗೆ ಸಿಕ್ಕಿದ  ಕೆಲಸ ಅಲ್ಪ ವೇತನದ್ದಾದರೂ ಅವರು ಲವಲವಿಕೆಯಿಂದ ದುಡಿದರು. ಕಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜು ಅವರ ಅಧ್ಯಯನ ಶೀಲತೆಗೆ ಸ್ವಾಗತ ನೀಡಿತು. ಬಂಗಾಳ ಸರ್ಕಾರವೂ ಅವರಿಗೆ ಧನ ಸಹಾಯವನ್ನು ಮಾಡಿ ಅವರು ಪ್ರಯೋಗಗಳನ್ನು ನಡೆಸಲು ಅವಕಾಶ ಕಲ್ಪಿಸಿತು.

ಜಗದೀಶರು ಮೊದಲಿಗೆ ವಿದ್ಯುತ್ತಿಗೆ ಸಂಬಂಧಿಸಿದ ಸಂಶೋಧನೆಗಳಲ್ಲಿ ತೊಡಗಿದರೂ ಅವರಿಗೆ ಹೆಸರು ತಂದುಕೊಟ್ಟದ್ದು ಅವರು ನಡೆಸಿದ ಸಸ್ಯಗಳ ಮೇಲಿನ ಸಂಶೋಧನೆಗಳು. ಗಿಡಮರಗಳಲ್ಲಿ ಚಲನವಿದೆ, ಅವುಗಳಿಗೂ ಜೀವವಿದೆ ಎಂಬುದನ್ನು ತಾವೇ ನಡೆಸಿದ  ಪ್ರಯೋಗಗಳಿಂದ ಖಚಿತ  ಮಾಡಿಕೊಂಡು ಆ ಬಗ್ಗೆ ಲೇಖನಗಳನ್ನು  ಬರೆದರು. ವಿಷವು ಹೊಕ್ಕಾಗ ಸಸ್ಯಗಳು ನರಳುತ್ತವೆ ಇಲ್ಲವೆ ಸಾಯುತ್ತವೆ ಎಂಬುದನ್ನು ಬೋಸರು ಒಂದು ಗಿಡಕ್ಕೆ ಚುಚ್ಚುಮದ್ದು ಕೊಡುವುದರ ಮೂಲಕ ತೋರಿಸಿಕೊಟ್ಟರು. ಸಸ್ಯಗಳಲ್ಲಿ ಜರುಗುವ ಪ್ರತಿಕ್ರಿಯೆಗಳನ್ನು ತೋರಿಸಲು ಬೋಸರೇ ಸೂಕ್ಷ್ಮಯಂತ್ರಗಳನ್ನು ತಯಾರಿಸುತ್ತಿದ್ದರು. ಬೋಸರ ಪ್ರಯೋಗಗಳಿಂದ ಇಡೀ ಜಗತ್ತಿಗೆ ಹೊಸ ವಿಷಯವೊಂದು ತಿಳಿಯಿತು. ಅವರಿಗೆ ಹಲವಾರು ಕಡೆಗಳಿಂದ ಉಪನ್ಯಾಸ ನೀಡಲು ಕರೆ ಬಂದಿತು. 1915ರಲ್ಲಿ ಲಂಡನ್ನಿನ ರಾಯಲ್ ಸೊಸೈಟಿಯಲ್ಲಿ ಹಾಗೂ ಮುಂದೆ ಪ್ಯಾರಿಸ್‌ನಲ್ಲಿ ನಡೆದ ವಿಜ್ಞಾನಿಗಳ ಸಮ್ಮೇಳನದಲ್ಲಿ 'ಸಸ್ಯಗಳಲ್ಲಿ ಸಂವೇದನೆ' ಎಂಬ ವಿಷಯದ ಕುರಿತು ಮಾತನಾಡಿದರು. ಅಗ ಅವರು ತಮ್ಮೊಡನೆ ತಾನು ತಯಾರಿಸಿದ ಸೂಕ್ಷ್ಮ ಯಂತ್ರಗಳನ್ನು ತೆಗೆದುಕೊಂಡು ಹೋಗಿ ಪ್ರಯೋಗಗಳನ್ನು ಮಾಡಿ ತೋರಿಸಿದರು. ಭಾರತದಿಂದ ತಾನು ಹೋಗಿದ್ದೇನೆ ಎಂಬುದು ಅವರಿಗೆ ಹೆಮ್ಮೆಯ ವಿಷಯವಾಗಿತ್ತು. ಜಗದೀಶ ಚಂದ್ರರಿಗೆ ರಾಯಲ್ ಸೊಸೈಟಿ ಫೆಲೋಶಿಪ್ ನೀಡಿ ಗೌರವಿಸಿತು.

ಜಗದೀಶಚಂದ್ರ ಬೋಸರು ಭಾರತದಲ್ಲಿ ಪ್ರಯೋಗ ಶಾಲೆಗಳಿಲ್ಲದಿದ್ದುದನ್ನು ಗಮನಿಸಿ ತಾವೇ ಒಂದು ಸಂಸ್ಥೆಯನ್ನು ಕಲ್ಕತ್ತೆಯಲ್ಲಿ  ಸ್ಥಾಪಿಸಿದರು. 1912ರಲ್ಲಿ ಆರಂಭಗೊಂಡ 'ಬೋಸ್ ಸಂಶೋಧನಾ ಸಂಸ್ಥೆ' ಇಂದೂ ಕೆಲಸ ಮಾಡುತ್ತಿದೆ. ಬೋಸರು ವಿಜ್ಞಾನಿಯಷ್ಟೇ ಆಗಿರದೆ ಸಾಹಿತ್ಯ ಪ್ರಿಯರೂ ಆಗಿದ್ದರು. ವಿಶ್ವಕವಿ ರವೀಂದ್ರನಾಥ ಠಾಗೋರರ ಸ್ನೇಹ ಅವರಿಗೆ ಲಭಿಸಿತ್ತು. ತಮಗೆ ಸತ್ಯ ಎಂದು ಕಂಡು ಬಂದುದನ್ನು ಬೋಸರು ಲೇಖನಗಳ ಮೂಲಕ ಬರೆದು ತಿಳಿಸುತ್ತಿದ್ದರು. 'ಚೇತನ–ಅಚೇತನಗಳಲ್ಲಿ ಪ್ರತಿಕ್ರಿಯೆ', 'ಸಸ್ಯ ಪ್ರತಿಕ್ರಿಯೆ', 'ಸಸ್ಯಗಳ ಚಲನ–ವಲನದ ಯಾಂತ್ರಿಕ ವ್ಯವಸ್ಥೆ' ಇವು ಅವರ ಗ್ರಂಥಗಳು.

ಉತ್ತಮ ಸಂಶೋಧಕರಾದ ಬೋಸರಿಗೆ 1928 ರಲ್ಲಿ 70 ವರ್ಷ ತುಂಬಿದಾಗ, ಕಲ್ಕತ್ತೆಯ ನಾಗರಿಕರು ಅವರನ್ನು ಗೌರವಿಸಿ ಸನ್ಮಾನಿಸಿದರು.  ಆಗ ಅವರು ಆಡಿದ ಮಾತುಗಳು ನೆನಪಿನಲ್ಲಿಡಬೇಕಾದವು.

'ಜಗತ್ತಿನ ಎಲ್ಲಾ ರಾಷ್ಟ್ರಗಳೂ ಪರಸ್ಪರ ಅವಿಶ್ವಾಸದಿಂದ ಬಳಲುತ್ತಿವೆ, ಮಾನವ ಕುಲಕ್ಕೆ ಇದು ಒಳ್ಳೆಯದಲ್ಲ. ಎಲ್ಲ ಪ್ರಾಣಿಗಳಲ್ಲಿರುವ ಪ್ರಾಣವು ಒಂದೇ ಎಂದು ನಾವು ನಂಬುವೆವು. ಅದರಂತೆ ಮಾನವ ಕುಲವೆಲ್ಲ ಒಂದೇ ಎಂಬುದನ್ನು ನಂಬಬೇಕು. ಕೂಡಿ ಬಾಳಲು ಕಲಿಯಬೇಕು.'

ಬೋಸರು ಇಂಗ್ಲೇಂಡಿನಲ್ಲಿದ್ದಾಗ ಒಂದು ಪ್ರಕರಣ ಜರುಗಿತು. ಸಸ್ಯಗಳನ್ನು ಚಿವುಟಿದಾಗ ಅವು ಬಳಲುತ್ತವೆ. ವಿಷ ಹೊಕ್ಕಾಗ ಅವು ನರಳುತ್ತವೆ ಇಲ್ಲವೆ ಸಾಯುತ್ತವೆ ಎಂದು ಬೋಸರು ಒಂದು ಸಭೆಯಲ್ಲಿ ಪ್ರತಿಪಾದಿಸುತ್ತಿದ್ದರು. ಪ್ರಯೋಗವೊಂದರ ಮೂಲಕ ಇದನ್ನು ಸ್ಪಷ್ಟಪಡಿಸಲು ನೆರೆದಿದ್ದ ವಿಜ್ಞಾನಿಗಳ ಎದುರಿಗೆ ಒಂದು ಗಿಡಕ್ಕೆ ಚುಚ್ಚುಮದ್ದು ಮೂಲಕ ವಿಜ್ಞಾನಿಯೊಬ್ಬರು ತಂದ ವಿಷ ಪ್ರಯೋಗ ಮಾಡಿದರು. ಸ್ವಲ್ಪ ಕಾಲದಲ್ಲೇ ಸಾಯಬೇಕಿದ್ದ ಗಿಡಕ್ಕೆ ಏನೂ ಆಗಲಿಲ್ಲ. ಬೋಸರ ಮುಖ ಬಾಡಿತು. ಗಿಡಕ್ಕೆ ಅಪಾಯವುಂಟು ಮಾಡದಿದ್ದ ಮದ್ದು ನನಗೂ ಏನು ಮಾಡಲಾರದು ಎಂದು ಬೋಸರು ಅದೇ ವಿಷದ ಮದ್ದನ್ನು ತಮಗೇ ಚುಚ್ಚಿಕೊಳ್ಳಲು ಸಿದ್ಧರಾದರು! ಕೂಡಲೇ ಅಲ್ಲಿದ್ದವರಲ್ಲಿ ಒಬ್ಬರು ಎದ್ದು ನಿಂತು ತಾನು ವಿಷಕ್ಕೆ ಬದಲಾಗಿ ಬಣ್ಣದ ನೀರನ್ನು ಕೊಳವೆಯಲ್ಲಿ ತುಂಬಿಸಿದ್ದುದಾಗಿ ಒಪ್ಪಿಕೊಂಡರು. ಸತ್ಯವನ್ನು ಪ್ರಮಾಣಿಸುವ ಸಲುವಾಗಿ ತಮ್ಮ ಜೀವವನ್ನೇ ಪಣವಾಗಿಟ್ಟರು .

ವಿಜ್ಞಾನದ ಆಕಾಶದಲ್ಲಿ ತಾರೆಯಂತೆ ಮಿನುಗಿದ ಬೋಸರು 1937ರ ನವೆಂಬರ್ 23 ರಂದು ನಮ್ಮನ್ನು ಅಗಲಿದರು. ಅವರ ಧೈರ್ಯ, ಸಾಹಸ, ದೇಶಪ್ರೇಮ ನಮಗೆಲ್ಲ ಆದರ್ಶ.

# 3. ಅನಿಲನ ಕಾರು

## ಚಟುವಟಿಕೆಗಳು

ನೀವೆಂದಾದರೂ ಕನಸು ಕಂಡಿದ್ದೀರಾ? ಕಲ್ಪನಾ ಲೋಕದಲ್ಲಿ ವಿಹರಿಸಿದ್ದೀರಾ? ನಿಜ ಜೀವನದಲ್ಲಿ ಮಾಡಲು ಸಾಧ್ಯವಾಗದುದನ್ನು ಕಲ್ಪನೆಯ ಮೂಲಕ ಸಾಕಾರಗೊಳಿಸಿದ್ದೀರಾ? ಮುಂತಾದ ಲಘು ಪ್ರಶ್ನೆಗಳ ಮೂಲಕ ಪಾಠವನ್ನು ಓದಿಸುವುದು.

ಪಾಠವನ್ನು ಓದಿದ ಬಳಿಕ ಆಶಯಗ್ರಹಣ ಮಾಡಿಕೊಳ್ಳುವುದು. ಯಾವ ವಿಷಯವನ್ನಾದರೂ ಸರಿಯಾಗಿ ತಿಳಿಯದೆ ಅರ್ಧ ಮಾಡಿಟ್ಟು ಏನು ಮಾಡಬೇಕೆಂದು ತೋಚದೆ ಮಕ್ಕಳು ಪರದಾಡಿರಬಹುದಾದ ಸನ್ನಿವೇಶಗಳನ್ನು ನೆನಪು ಮಾಡಿ ಚರ್ಚಿಸುವುದು. ಇದರಿಂದ ಮಕ್ಕಳು ತೊಂದರೆಗೆ ಸಿಲುಕಿರಬಹುದಾದ ಘಟನೆಗಳನ್ನು ನೆನಪು ಮಾಡುವುದು. ಬಳಿಕ ಪಾಠದಲ್ಲಿ ಅನಿಲನ ಗೆಳೆಯರು ತೊಂದರೆಗೆ ಸಿಲುಕಿಕೊಂಡ ಸನ್ನಿವೇಶದ ಬಗ್ಗೆ ಚರ್ಚಿಸುವುದು.

## ಪ್ರಶ್ನೆ ತಯಾರಿಸಿರಿ

ಆಶಯ ಗ್ರಹಣಕ್ಕೆ ಸಂಬಂಧಿಸಿದ ಮತ್ತು ಶೈಲಿಗೆ ಸಂಬಂಧಿಸಿದ ಚಟುವಟಿಕೆ ಇದಾಗಿದೆ. ಪಾಠದ ಆಶಯಗಳು ಉತ್ತರವಾಗಿ ಸಿಗುವಂತೆ ಮಕ್ಕಳು ಸಾಧ್ಯವಿರುವಷ್ಟು ಪ್ರಶ್ನೆಗಳನ್ನು ತಯಾರಿಸಲಿ. ಪ್ರಶ್ನೆ ತಯಾರಿಸುವಾಗ 'ಯಾರು? ಹೇಗೆ? ಯಾಕೆ? ಎಲ್ಲಿ?' ಮುಂತಾದ ಪ್ರಶ್ನೆಗಳನ್ನು ಕೇಳಲಿ. ಪ್ರಶ್ನಾರ್ಥಕ ಚಿಹ್ನೆಯ ಬಳಕೆಯನ್ನು ಅಧ್ಯಾಪಕರು ನೆನಪಿಸುವುದು. ಪ್ರಶ್ನೆಗಳು ಸರಳವಾಗಿದ್ದು ಉತ್ತರ ದೊರೆಯುವಂತೆ ಇರಬೇಕು.

## ಪ್ರಶ್ನೆಗಳು ಹೀಗೂ ಇರಬಹುದು

- ಅನಿಲನ ಹುಟ್ಟುಹಬ್ಬಕ್ಕೆ ಅವನ ಮಾವ ಉಡುಗೊರೆಯಾಗಿ ನೀಡಿದ ಕಾರಿನ ವಿಶೇಷತೆಗಳೇನು?
- ಅನಿಲನು ತನ್ನ ಗೆಳೆಯರೊಡನೆ ಕಾರಿನ ಕುರಿತು ಏನು ಹೇಳಿದನು?
- ಅನಿಲ ಮನೆಯಲ್ಲಿ ಇಲ್ಲದಿರುವಾಗ ಅವನ ಗೆಳೆಯರು ಏನು ಮಾಡಿದರು?

- ತೊಂದರೆಗೆ ಸಿಲುಕಿದ ಗೆಳೆಯರು ಹೇಗೆ ಪಾರಾದರು?
- ಅನಿಲನ ಗೆಳೆಯರು ಪಶ್ಚಾತ್ತಾಪ ಪಡಲು ಕಾರಣವೇನು?

### ಸಂಭಾಷಣೆ ತಯಾರಿಸಿರಿ

ಸೃಜನಾತ್ಮಕತೆಗೆ ಪೂರಕವಾದ ಈ ಚಟುವಟಿಕೆಯನ್ನು ಕತೆಯನ್ನು ಓದಿದ ಬಳಿಕ ವಿದ್ಯಾರ್ಥಿಗಳು ವೈಯಕ್ತಿಕವಾಗಿ ಮಾಡಲಿ.

### ಸಂಭಾಷಣೆ

(ಅನಿಲನು ಮಾವ ನೀಡಿದ ಅದ್ಭುತ ಕಾರಿನ ಬಗ್ಗೆ ತನ್ನ ಗೆಳೆಯರಿಗೆ ತಿಳಿಸುತ್ತಾನೆ)

ಅನಿಲ : (ತನ್ನ ಕಾರು ತೋರಿಸುತ್ತಾ) ಗೌತಮ್, ನಂದನ್, ರೋಹಿತ್ ಎಲ್ಲಾ ಇಲ್ಲಿ ಬನ್ನಿ, ನೋಡಿ ಇದು ನನ್ನ ಮಾವ ನನಗೆ ಕೊಟ್ಟ ಉಡುಗೊರೆ. ಹೇಗಿದೆ?

ನಂದನ್ : ಚೆನ್ನಾಗಿದೆ.

ಗೌತಮ್ : ಏನೋ ವಿಶೇಷ? ಎಲ್ಲಾ ಆಟದ ಕಾರುಗಳಂತೆಯೇ ಇದೆ.

ರೋಹಿತ್ : ಇಂತಹ ಕಾರು ನನ್ನ ತಂಗಿ ಹತ್ರಾನೂ ಇದೆ.

ಅನಿಲ : (ನಗುತ್ತ) ಇದು ಅಂತಹ ಕಾರಲ್ಲ. ವಿಶೇಷವಾದ ಕಾರು. ಬನ್ನಿ, ಎಲ್ಲರೂ ಇದರಲ್ಲಿ ಕುಳಿತು ಪಾರ್ಕಿಗೆ ಹೋಗೋಣ.

ನಂದನ್ : ಏಯ್ ಹೋಗೋ. ಏನು ತಮಾಷೆ ಮಾಡ್ತಿದ್ದೀಯಾ?

ಅನಿಲ : ಇಲ್ಲಪ್ಪ.

ರೋಹಿತ್ : ಮತ್ತೆ ಅದರಲ್ಲಿ ಹೇಗೆ ಕುಳಿತುಕೊಳ್ಳುವುದು? ಅದರಲ್ಲಿ ಕುಳಿತುಕೊಳ್ಳ ಬೇಕಾದರೆ ನಾವೆಲ್ಲ 'ಪಿಗ್ಮಿ'ಗಳಾಗಬೇಕು.

ಅನಿಲ : ಏನೂ ಬೇಡ. (ಮಾಂತ್ರಿಕ ಪದಗಳನ್ನು ಹೇಳುವನು ಕಾರು ದೊಡ್ಡದಾಯಿತು) ಹತ್ತಿ. ಕುಳಿತುಕೊಳ್ಳಿ.

ಗೌತಮ್<br>ನಂದನ್ : ಅರೆ! ಏನಾಶ್ಚರ್ಯ!, ಇದು ನಂಬಲಾಗುತ್ತಿಲ್ಲ.<br>ರೋಹಿತ್

### ಅಭಿನಂದನ ಪತ್ರ ತಯಾರಿಸಿರಿ

ಯಾವ ವಿಷಯದಲ್ಲಾಗಲೀ ಹೆಚ್ಚಿನ ಸಾಧನೆಯನ್ನು ಮಾಡಿದವರನ್ನು ಮತ್ತಷ್ಟು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಅಭಿನಂದಿಸಬೇಕಾದುದು ಎಲ್ಲರ ಕರ್ತವ್ಯ. ಮಕ್ಕಳಾಗಲೀ, ದೊಡ್ಡವರಾಗಲೀ ಅವರ ಸಾಧನೆಯನ್ನು ಒಪ್ಪಿಕೊಳ್ಳಲೇಬೇಕು.

ಅಭಿನಂದನ ಪತ್ರದಲ್ಲಿ ಸ್ಥಳ, ತಾರೀಕು, ಸಂಬೋಧನೆಗಳು ಅಗತ್ಯ.

2014ನೇ ವರ್ಷದಲ್ಲಿ ಭೌತಶಾಸ್ತ್ರ ವಿಭಾಗದಲ್ಲಿ ಜಪಾನ್‌ನ 'ಹಿರೋಶಿ ಅಮಾನೊ' ಅವರಿಗೆ ನೊಬೆಲ್ ಪ್ರಶಸ್ತಿ ಲಭಿಸಿದೆ. ಅವರನ್ನು ಅಭಿನಂದಿಸಿ ಬರೆದ ಅಭಿನಂದನ ಪತ್ರ.

## ಅಭಿನಂದನ ಪತ್ರ ಹೀಗೂ ಇರಬಹುದು

ಕಾಸರಗೋಡು

13.3.2015

ಗೌರವಾನ್ವಿತ ಹಿರೋಶಿ ಅಮಾನೊ,

ವಂದನೆಗಳು. ಅತ್ಯುತ್ತಮವಾದ ಬೆಳಕಿನ ವ್ಯವಸ್ಥೆ ಆಧುನಿಕ ಜಗತ್ತಿಗೆ ಅತ್ಯಗತ್ಯ. ವಿದ್ಯುತ್ ಚೈತನ್ಯದ ಅಭಾವ ಇಂದು ಜಗತ್ತಿನ ಉದ್ದಗಲ ಕಂಡು ಬರುವ ಸಮಸ್ಯೆಯಾಗಿದೆ. ಇದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಪ್ರಯತ್ನಿಸಿ ಯಶಸ್ವಿಗಳಿಸಿದ್ದೀರಿ. ತಮ್ಮ ನಿರಂತರ ಸಂಶೋಧನೆಯ ಫಲವಾಗಿ ಶುದ್ಧವಾದ ಬಿಳಿ ಬೆಳಕನ್ನು ಹೊರ ಸೂಸುವ ಎಲ್.ಇ.ಡಿ. ಬಲ್ಬು ಜಗತ್ತಿನ ಮಡಿಲಿಗೆ ಬಿದ್ದಿದೆ. ಇದು ಅತ್ಯಂತ ಕಡಿಮೆ ಪ್ರಮಾಣದ ವಿದ್ಯುತ್ತನ್ನು ಬಳಸಿಕೊಂಡು ಅತಿ ಹೆಚ್ಚು ಬೆಳಕನ್ನು ನೀಡುವ ಕಾರಣ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಉಪಯುಕ್ತವೆನಿಸಿದೆ.

ತಮ್ಮ ಈ ಸಂಶೋಧನೆಗೆ ಜಗತ್ತಿನ ಅತ್ಯುನ್ನತ ಪ್ರಶಸ್ತಿಗಳಲ್ಲೊಂದಾದ ನೊಬೆಲ್ ಪ್ರಶಸ್ತಿ ಲಭಿಸಿದೆ. ಅದಕ್ಕಾಗಿ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಮುಂದೆಯೂ ನಿಮ್ಮಿಂದ ಇದಕ್ಕಿಂತ ಹೆಚ್ಚಿನ ಕೊಡುಗೆಗಳು ಜಗತ್ತಿಗೆ ಲಭಿಸಲಿ ಎಂದು ಹಾರೈಸುತ್ತೇವೆ.

ಇತಿ

**ವಿದ್ಯಾರ್ಥಿಗಳು**

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು.

## ಸರಿಪಡಿಸಿ ಬರೆಯಿರಿ

ಭಾಷೆ ಅಭಿವ್ಯಕ್ತಿ ಮಾಧ್ಯಮ. ಅದು ಇನ್ನೊಬ್ಬರಿಗೆ ತಲುಪಬೇಕಾದರೆ ಭಾಷೆಯ ಪ್ರಯೋಗ ಸರಿಯಾಗಿರಬೇಕು. ಇಲ್ಲವಾದರೆ ಅರ್ಥ ಅನರ್ಥಕ್ಕೆ ಎಡೆಯಾದೀತು. ಇದನ್ನು ಮಕ್ಕಳಿಗೆ ಮನದಟ್ಟು ಮಾಡಿದ ಬಳಿಕ ಪಠ್ಯದಲ್ಲಿ ಕೊಟ್ಟಿರುವ ಗದ್ಯಭಾಗವನ್ನು ಸರಿಪಡಿಸಿ ಬರೆಯಲು ಹೇಳುವುದು.

ಒಬ್ಬ ಕಡು ಬಡವ ಒಂದು ತೋಪಿನಲ್ಲಿ ಹಾದು ಹೋಗುತ್ತಿದ್ದನು. ಅವನಿಗೆ ಬಹಳ ಹಸಿವಾಗಿತ್ತು. ಮೂರು ದಿನಗಳಿಂದ ಊಟವನ್ನೇ ಕಂಡಿರಲಿಲ್ಲ. ಅಲ್ಲೊಂದು ಮಾವಿನ ಹಣ್ಣಿನ ತೋಪು. ಮಾವಿನ ಹಣ್ಣಿನ ಕಾಲವಾದುದರಿಂದ ಮಾವಿನ ಮರಗಳೆಲ್ಲ ಹಣ್ಣುಗಳಿಂದ ತುಂಬಿದ್ದುವು. ಆ ಹಣ್ಣುಗಳು ಅವನ ಮನವನ್ನು ಸೆಳೆದವು. ಅವನು ಒಂದು ಕಲ್ಲನ್ನು ಎತ್ತಿ ಆ ಮರಗಳ ಕಡೆಗೆ ಎಸೆದನು. ಕೆಲವು ಮಾವಿನ ಹಣ್ಣುಗಳು ನೆಲಕ್ಕೆ ಉದುರಿ ಬಿದ್ದುವು. ಅವನ ಮುಖವು ಸಂತೋಷದಿಂದ ಅರಳಿತು. ತನ್ನ ಎರಡೂ ಕೈಗಳಿಂದಲೂ ಆ ಹಣ್ಣುಗಳನ್ನು ಎತ್ತಿಕೊಂಡು ನೀರೂರಿದ್ದ ಬಾಯಿಗೆ ತುರುಕಿದನು.

## ಆಲ್ಬಂ ತಯಾರಿಸಿರಿ

ಮಕ್ಕಳು ಕಾರುಗಳ, ವಾಹನಗಳ ಚಿತ್ರಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಆಲ್ಬಂ ತಯಾರಿಸಲಿ.

**ಪೂರಕ ಓದಿಗೆ**

# ಬೆಳಕಿನ ಹುಡುಗ

ಸತೀಶ್ ಮಾವ ವರ್ಷಕ್ಕೊಂದು ಸಲ ಅಮೇರಿಕಾದಿಂದ ಬರುತ್ತಾರೆ. ಅಗ ಕಿಟ್ಟಿಗೆ ಸಂಭ್ರಮವೋ ಸಂಭ್ರಮ. ಮಾವ ತರುವ ಉಡುಗೊರೆಗಳಿಂದ ಅವನ ಪೆಟ್ಟಿಗೆ ತುಂಬಿ ಹೋಗುತ್ತದೆ. ಬಟ್ಟೆಗಳು, ಪುಸ್ತಕಗಳು, ವೀಡಿಯೋ ಗೇಮ್ಸ್ ಇನ್ನೂ ಏನೋನೋ! ಇವೆಲ್ಲಕ್ಕಿಂತಲೂ ಖುಷಿ ಕೊಡುವುದು ಮಾವನ ಸ್ವಾರಸ್ಯವಾದ ಮಾತು! ವಿಜ್ಞಾನದ ಅದ್ಭುತಗಳನ್ನು ಅವರು ಎಷ್ಟು ಚೆನ್ನಾಗಿ ಹೇಳುತ್ತಾರೆ. ಮಾತಿನ ಮಧ್ಯೆ ಸ್ಲೈಡುಗಳು, ವೀಡಿಯೋ ಸುರುಳಿಗಳು ಬಿಚ್ಚಿಕೊಳ್ಳುತ್ತವೆ. ಹೊಸದಾದ ಅದ್ಭುತ ಪ್ರಪಂಚ ಕಿಟ್ಟ ಮತ್ತು ಅವನ ಗೆಳೆಯರ ಮುಂದೆ ತೆರೆದುಕೊಳ್ಳುತ್ತದೆ. ಮಕ್ಕಳ ನೂರು ನೂರು ಪ್ರಶ್ನೆಗಳಿಗೆ  ಮಾವ ಸ್ವಾರಸ್ಯವಾಗಿ  ಉತ್ತರಿಸುತ್ತಾರೆ. ಎಳೆಯ ಹುಡುಗರು ಮಾವನಂತೆ ಮುಂದೆ ವಿಜ್ಞಾನಿಯಾಗುವ ಕನಸನ್ನು ಕಾಣುತ್ತಾರೆ.

ಆ ದಿನ ಅಮಾವಾಸ್ಯೆ. ನೀಲಿಯ ಆಕಾಶದ ತುಂಬಾ ಬೆಳ್ಳಿಯ ನಕ್ಷತ್ರಗಳು! ಪ್ರಕೃತಿ ಎಷ್ಟು ಅದ್ಭುತ! ತಾರಸಿಯ ಮೇಲೆ ಮಕ್ಕಳ ಮೇಳ. ಮಾವ ಅಂತರಿಕ್ಷದ ಸ್ವಾರಸ್ಯಗಳನ್ನು ವಿವರವಾಗಿ ತಿಳಿಸುತ್ತಿದ್ದರೆ– ಮಕ್ಕಳು ಬೆರಗಾಗಿ ಕೇಳುತ್ತಾರೆ. ಕಿಟ್ಟಿ ಕೇಳಿದ, 'ಮಾವ, ಮತ್ತೆ ಅಂತರಿಕ್ಷದಲ್ಲಿ  ಕೋಟ್ಯಂತರ ನಕ್ಷತ್ರಗಳು ಇರುತ್ವಲ್ಲ. ಅವುಗಳಿಗೂ ಭೂಮಿ ಥರ ಪ್ಲಾನೆಟ್ಸ್ ಇರಬಹುದಲ್ಲಾ? ಅಲ್ಲೂ, ಮನುಷ್ಯನಂಥ ಭಾರಿ ವಂಡರಫುಲ್  ಲೈಫ್ ಇರಬಹುದಲ್ಲಾ?  ಹಾಗಾದ್ರೆ ಅವರನ್ನ ನಾವು ಕಂಡು ಹಿಡಿಯೋದು ಹೇಗೆ?'

ಆಗ ಮಾವ ಎಷ್ಟೋ ಹೊಸ ವಿಷಯಗಳನ್ನು ಹೇಳಿದರು. ವೀಡಿಯೊ ಸುರಳಿ ಬಿಚ್ಚಿ ಟೆಲಿವಿಷನ್ ಪರದೆಯ ಮೆಲೆ ತೋರಿಸಿದರು. ಮಾವ ಸ್ಟಾನ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ  ಅಂತರಿಕ್ಷ ವಿಜ್ಞಾನಿ. ಅಮೆರಿಕಾದ ನಾಸಾ ಮತ್ತೆ ಸ್ಟಾನ್‌ಫರ್ಡ್ ವಿಜ್ಞಾನಿಗಳು ಒಂದು ಅದ್ಭುತ ಯೋಜನೆ ಹಾಕಿದ್ದಾರೆ. ಅದರ ಹೆಸರು 'ಪ್ರೊಜೆಕ್ಟ್ ಸೈಕ್ಲೋಪ್ಸ್'. ಇಲ್ಲಿ ಹತ್ತು ಸಾವಿರ ಭಾರಿಯಾದ ಬಾಣಲೆ ಆಕಾರದ ರೇಡಿಯೋ ಟೆಲಿಸ್ಕೋಪುಗಳನ್ನು ಜೋಡಿಸಿದ್ದಾರೆ. ಈ  ಟೆಲಿಸ್ಕೋಪ್ ಜಾಲ ದೂರ ದೂರದ ತಾರೆಗಳಿಂದ ಬರುವ ರೇಡಿಯೋ ಸಂಕೇತಗಳನ್ನು ಗ್ರಹಿಸುತ್ತದೆ. ಈ ಸಂಕೇತ ಎಲ್ಲಿಂದ  ಬರುತ್ತವೆ. ಯಾರು ಕಳುಹಿಸುತ್ತಾ ಇದ್ದಾರೆ ಎನ್ನೋದನ್ನ ಪತ್ತೆ ಮಾಡುತ್ತದೆ. ಅಲ್ಲೂ ಮನುಷ್ಯನ ಥರ ಜೀವಿ ಇದ್ದರೆ ಗೊತ್ತಾಗುತ್ತೆ. ಅಬ್ಬಾ  ಎಷ್ಟು ಅದ್ಭುತ ಅಲ್ವಾ?

ಆದರೆ ನಕ್ಷತ್ರಗಳು ಎಷ್ಟು ದೂರ ಇವೆ! ಅಲ್ಲಿಗೆ ಹೋಗೋದು ಹೇಗೆ? ಸಾಧ್ಯ ಇದ್ದರೆ ಎಷ್ಟು ಚೆನ್ನ! ಕಿಟ್ಟಿಗೆ ಇದೇ ಯೋಚನೆ. ರಾತ್ರಿ ಮಲಗಿದ. ಇದ್ದಕ್ಕಿದ್ದಂತೆ ಯಾರೋ ಕೂಗಿದಂತಾಯಿತು. ನೋಡಿದರೆ ಅವನ ಗೆಳೆಯರೆಲ್ಲಾ ಬಂದು ಬಿಟ್ಟಿದ್ದಾರೆ. ಅಂತರಿಕ್ಷದಲ್ಲಿ ಟ್ರಕ್ಕಿಂಗ್ ಮಾಡಲು ಸಿದ್ಧರಾಗಿಬಿಟ್ಟಿದ್ದಾರೆ. ಕಿಟ್ಟಿಗೆ ರೋಮಾಂಚನವಾಯಿತು.

ಅರೆ! ಇದೇನು ನೋಡನೋಡುತ್ತಿದ್ದಂತೆ ಅವನ ಶರೀರ ಪೂರ್ತಿ ಬದಲಾಗಿಬಿಟ್ಟಿದೆ!  ಆವ ಬೆಳಕಿನ ಹುಡುಗ ಆಗಿಬಿಟ್ಟಿದ್ದಾನೆ! ಅವನ ಕಣ್ಣು,ಮೂಗು, ಹಲ್ಲು ಎಲ್ಲವೂ ಬೆಳಕಿನಿಂದ ಕೂಡಿವೆ. ಅವನ ಗೆಳೆಯರೂ ಬೆಳಕಿನ  ಹುಡುಗರಾಗಿಬಿಟ್ಟಿದ್ದಾರೆ! ಎಲ್ಲರೂ ವೇಗವಾಗಿ  ದೂರದ ನಕ್ಷತ್ರಗಳ  ಕಡೆಗೆ ಓಡಾಡುತ್ತಿದ್ದಾರೆ. ಅವರ ವೇಗ ಬೆಳಕಿನ ವೇಗ ಸೆಕೆಂಡಿಗೆ ಮೂರು ಲಕ್ಷ ಕಿಲೋಮೀಟರು!

ಅರೆ! ಇದೇನು ಅಂತರಿಕ್ಷದ ಆಶ್ಚರ್ಯಗಳು. ಎಲ್ಲೆಲ್ಲೂ ಕತ್ತಲೆ. ದೂರದಲ್ಲಿ ಮಿನುಗು ತಾರೆಗಳು. ಭೂಮಿಯ ಮೇಲಿದ್ದರೆ ಆಕಾಶ ನೀಲಿ. ಇಲ್ಲಿ  ಆಕಾಶ ಕಪ್ಪು ಹೌದು, ಭೂಮಿಗೆ ವಾತಾವರಣ ಇದೆ. ಅದಕ್ಕೆ ಆಕಾಶ ನೀಲಿ. ಹೊರಗೆ ಬಂದರೆ ಕಪ್ಪು.

ಬೆಳಕಿನ ಹುಡುಗರು ಹತ್ತಿರದ ನಕ್ಷತ್ರ ಸೆಂಟಾರಸ್ ಬಳಿ ಬಂದರು. ಇಲ್ಲಿಗೆ ಬರಲು ಸುಮಾರು ನಾಲ್ಕೂವರೆ ವರ್ಷ ಬೇಕಾಗಿದೆ! ಅಬ್ಬಾ ಇನ್ನು ಬೇರೆ ತಾರೆಗಳಿಗೆ ಹೋಗುವುದು ಹೇಗೆ? ಹುಡುಗರು ಸ್ವಲ್ಪ ಅಲ್ಲಿಯೇ ನಿಂತರು. ತಮ್ಮ ಟೆಲಿಸ್ಕೋಪುಗಳಿಂದ ನೋಡಿದರು. ಇದೇನು? ಈ ವಿಶ್ವಕ್ಕೆ ಕೊನೆಯೇ ಇಲ್ಲವಲ್ಲ! ಇದು ಬೆಳೆಯುತ್ತಲೇ ಇದೆ. ದೂರದಲ್ಲಿ

ಹೊಗೆಯಂತೆ ಹರಡಿರುವ ಅನಿಲಗಳು. ಅಲ್ಲಿ ಹೊಸ ಹೊಸ ತಾರೆಗಳು ಹುಟ್ಟುತ್ತಿವೆ. ಹಳೆಯ ನಕ್ಷತ್ರಗಳು ತಂಪಾಗಿ, ಕಪ್ಪಾಗಿ ಕೃಷ್ಣರಂಧ್ರಗಳಾಗುತ್ತಿವೆ. ಎಲ್ಲಿಂದಲೋ ಬಂದ ಧೂಮಕೇತುಗಳು ಇನ್ನೆಲ್ಲಿಗೋ ಹೋಗುತ್ತಿವೆ! ಹುಡುಗರಿಗೆ ಭಯ, ಆಶ್ಚರ್ಯ! ಅವರಿಗೆ ಆಯಾಸ, ತಲೆನೋವು, ವಾಕರಿಕೆ, ಯಾರೋ ಅವರನ್ನು ಹಿಡಿದು ಎಳೆಯುತ್ತಿದ್ದಾರೆ. ಅವರು ತಂದಿರುವ ಕಂಪ್ಯೂಟರು ಕೆಂಪು ದೀಪಗಳನ್ನು ಉರಿಸುತ್ತಾ ಅಪಾಯದ 'ಬೀಪ್ ಬೀಪ್' ಸಂಕೇತ ಕೊಡುತ್ತಿದೆ. ನೋಡಿದರೆ ಹುಡುಗರೆಲ್ಲಾ ಸೈಗ್ನಸ್ X-1 ಕಪ್ಪು ರಂಧ್ರದ ಬಳಿ ಬಂದು ಬಿಟ್ಟಿದ್ದಾರೆ. ಇದು ಇನ್ನು ಇವರನ್ನು ನುಂಗಿ ಹಾಕುತ್ತದೆ. ಏನಪ್ಪಾ ಮಾಡುವುದು?

ಕಿಟ್ಟ ತಕ್ಷಣವೇ ಇಸ್ರೋ ಕೇಂದ್ರದ ಸೂಚನೆಯನ್ನು ಕೇಳಿದ. ಅಲ್ಲಿಂದ ಈಗ ಸೂಚನೆ ಬಂದಿದೆ. ನೀವು ಹುಡುಗರೆಲ್ಲ 'ಕೈ ಕೈ ಹಿಡಿದುಕೊಳ್ಳಿ. ಒಗ್ಗಟ್ಟಿನಲ್ಲಿ ಬಲವಿದೆ. ತಕ್ಷಣವೇ ಪೂರ್ತಿ ಹಿಂದಕ್ಕೆ ತಿರುಗಿ ಓಡಿ ಬನ್ನಿ'. ಹುಡುಗರು ತಕ್ಷಣವೇ ಒಂದಾದರು. ಕೈ ಕೈ ಹಿಡಿದು ಹಿಂದಕ್ಕೆ ಓಡಿದರು. ಅಪಾಯದಿಂದ ಪಾರಾಗಿ ಭೂಮಿಯ ಮೇಲೆ ಇಳಿದರು.

ಆದರೆ ಇದೇನು ಆಶ್ಚರ್ಯ, ಭೂಮಿಯ ಮೇಲೆ ಎಷ್ಟೊಂದು ಬದಲಾವಣೆ ಆಗಿ ಬಿಟ್ಟಿದೆ! ಎಲ್ಲೆಲ್ಲೂ ಹೊಸ ಜನ! ಹೊಸ ಭಾಷೆ. ಹೊಸ ಸಂಸ್ಕೃತಿ ಬೆಳೆದಂತೆ ಕಾಣುತ್ತಿದೆ. ಎಲ್ಲೆಲ್ಲೂ ಹೊಸ ರಸ್ತೆಗಳು, ಆಕಾಶ ಮುಟ್ಟುವ ಕಟ್ಟಡಗಳು! ನಾಗರಿಕತೆಯೇ ಬದಲಾಗಿಬಿಟ್ಟಿದೆ. ಭೂಮಿಯ ಮೇಲೆ ಸಾವಿರ ವರ್ಷಗಳು ಕಳೆದುಹೋಗಿವೆ! ತಾವು ಮಾತ್ರ ತಮ್ಮ ಕಿರಿಯರಿಗಿಂತ ಚಿಕ್ಕವರಾಗಿ ಬಿಟ್ಟಿದ್ದಾರೆ. ಕಾಲಮಾನದಲ್ಲಿ ಹಿಂದಕ್ಕೆ ಬಂದು ಬಿಟ್ಟಿದ್ದಾರೆ. ಓ! ಇದು ನೆಗೆಟೀವ್ ಟೈ! ಐನ್‌ಸ್ಟೈನ್ ವಿಷಯ ಎಂದು ಮಾತನಾಡಿಕೊಂಡರು ಹುಡುಗರು. ಕಿಟ್ಟಿ ತಮ್ಮ ಮನೆಯವರನ್ನು ಕಾಣದೆ ಕಂಗಾಲಾಗಿಬಿಟ್ಟ.

'ಅಮ್ಮಾ, ಅಪ್ಪಾ, ಮಾಮ' ಎಂದು ಜೋರಾಗಿ ಅಳುತ್ತಾ ಕೂಗಿಕೊಂಡ.

ಯಾರೋ ಅವನನ್ನು ತಟ್ಟಿದಂತಾಯಿತು.

ಗಾಬರಿಯಿಂದ ಕಣ್ಣುಬಿಟ್ಟ ಕಿಟ್ಟಿ. ಎದುರಿಗೆ ಅಮ್ಮ ನಿಂತಿದ್ದಾಳೆ. ತಕ್ಷಣ ನಾಚಿಕೆಯಿಂದ ಪುನಃ ಮುಸುಕಿನಲ್ಲಿ ಸೇರಿಹೋದ ಬೆಳಕಿನ ಹುಡುಗ.

**(ಸಂಗ್ರಹ)**

## ಮೌಲ್ಯನಿರ್ಣಯ ಚಟುವಟಿಕೆಗಳು

1. ಕಾಸರಗೋಡು ಸರಕಾರಿ ಯು.ಪಿ. ಶಾಲೆಯ ವಿದ್ಯಾರ್ಥಿಯಾದ ಗುರುರಾಜನು ತಿರುವನಂತಪುರದಲ್ಲಿ ನಡೆದ ರಾಜ್ಯ ಮಟ್ಟದ ವಿಜ್ಞಾನ ಮೇಳದಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಗಳಿಸಿದನು. ಆತನ ಸಾಧನೆಯನ್ನು ಗೌರವಿಸಿ ಅಭಿನಂದನ ಪತ್ರವನ್ನು ಬರೆಯಿರಿ.
2. ಇಲ್ಲಿ ನೀಡಲಾದ ಪದಸೂರ್ಯದ ಆಧಾರದಲ್ಲಿ 'ನಮ್ಮ ಬದುಕಿನಲ್ಲಿ ವಿಜ್ಞಾನದ ಕೊಡುಗೆ' ಎಂಬ ವಿಷಯಯದ ಕುರಿತು ಲೇಖನ ತಯಾರಿಸಿರಿ.



3. ಗದ್ಯದಲ್ಲಿರುವ ಭಾಷಾ ದೋಷಗಳನ್ನು ಸರಿಪಡಿಸಿ ಪುನಃ ಬರೆಯಿರಿ.

ವಿದೇಶ ಪ್ರವಾಸಗಳನ್ನು ಮುಗಿಸಿ ಲಂಡನಿಗೆ ಹಿಂತಿರುಗಿ ಮೇಳೆ ಪ್ಯಾರಡೆಯ ರಾಯಲ್ ಸಂಸ್ಥೆಯಲ್ಲಿ ಅನೇಕ ಪ್ರಯೋಗಗಳನ್ನು ಕೈಗೊಂಡಳು. ಅವನ ಸಾಮರ್ಥ್ಯವನ್ನು ಕಂಡು ಢೇವಿಯು ತಾನು ಮಾಡಬೇಕಾಗಿದ್ದ ಸಂಶೋಧನೆಗಳನ್ನೆಲ್ಲ ಅವನೇ ನಡೆಸದಂತೆ ಅನುಮತಿಯಿತ್ತನು. ಮುಂದೆ ಫ್ಯಾರಡೆಯು ಸಾರಾ ಬರ್ನಾಲ್ಡ್ ಎಂಬ ಯುವತಿಯನ್ನು ಮದುವೆಯಾಗುವನು. ಆಕೆಯು ಆತನಿಗೆ ಠಕ್ಕ ಸತಿಯಾಗಿದ್ದರು. ಪತಿಯ ಸಂಶೋಧನೆಗೆ ತಾನೂ ಹೆಗಲು ಕೊಡುತ್ತಿತ್ತು.

# 1. ವಸುಧೆಯ ವೈಭವ

## ಪೀಠಿಕೆ

ಮಾನವನ ಜೀವನವು ಪ್ರಕೃತಿಯೊಂದಿಗೆ ಹಾಸು ಹೊಕ್ಕಾಗಿದೆ. ಪ್ರಕೃತಿಯನ್ನು ಸಂರಕ್ಷಿಸಬೇಕಾದುದು ಪ್ರತಿಯೊಬ್ಬನ ಕರ್ತವ್ಯ. ಇಂದಿನ ಜೀವನವೂ ಪೀಳಿಗೆಯ ಮುಂದುವರಿಕೆಯೂ ಪ್ರಕೃತಿ ಸಂರಕ್ಷಣೆಯಿಂದ ಮಾತ್ರ ಸಾಧ್ಯ. ಪ್ರಕೃತಿಯ ಸಹಜ ಸೌಂದರ್ಯವನ್ನು ಆಸ್ವಾದಿಸುವ ಮತ್ತು ನಿಸರ್ಗವನ್ನು ಸಂರಕ್ಷಿಸುವ ಮನೋಭಾವವನ್ನು ಬೆಳೆಸುವುದು ಈ ಘಟಕದ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಪೂರಕವಾಗುವಂತೆ 'ಮರು ಹುಟ್ಟು' ಎಂಬ ಕಥೆಯನ್ನೂ 'ಪ್ರವಾಸಿಗರ ಸ್ವರ್ಗ – ವಯನಾಡು' ಎಂಬ ಸ್ಥಳ ಪರಿಚಯವನ್ನೂ 'ನೇಸರು' ಮತ್ತು 'ನೀನಾರಿಗಾದೆಯೋ ಎಲೆ ಮಾನವ' ಎಂಬ ಕವನಗಳನ್ನೂ ಈ ಘಟಕದಲ್ಲಿ ಅಳವಡಿಸಲಾಗಿದೆ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ನೀಡಿದ ಸಂದರ್ಭಕ್ಕೆ ಸೂಕ್ತವಾದ ವ್ಯವಹಾರ ರೂಪಗಳನ್ನು ಕಂಡುಕೊಂಡು ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಕೃತಿಯ ಕಥಾಪಾತ್ರಗಳು, ಸನ್ನಿವೇಶಗಳು, ಭಾಷಾಶೈಲಿ, ಮಂಡನೆಯ ರೀತಿ ಎಂಬಿತ್ಯಾದಿಗಳನ್ನು ಪರಿಗಣಿಸಿ ಓದಿದ ಕೃತಿಯ ಆಸ್ವಾದನಾ ಟಿಪ್ಪಣಿ ತಯಾರಿಸುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಪದಶುದ್ಧಿ, ವಾಕ್ಯಶುದ್ಧಿ, ಲೇಖನಚಿಹ್ನೆ ಮೊದಲಾದ ಬರವಣಿಗೆಗೆ ಅಗತ್ಯವಾದ ಅಂಶಗಳನ್ನೊಳಗೊಂಡು ಮಾಡಿದ ರಚನೆಗಳ ಮೌಲ್ಯನಿರ್ಣಯ ಮಾಡುವುದರೊಂದಿಗೆ ಉತ್ತಮಗೊಳಿಸುವುದು.

- ಪಾಠಭಾಗದಲ್ಲಿರುವ ಪದಗಳನ್ನು ಅರ್ಥವ್ಯತ್ಯಾಸವಿಲ್ಲದೆ ವಿಂಗಡಿಸಿ ಬರೆಯುವುದು ಮತ್ತು ಸೇರಿಸಿ ಬರೆಯುವ ಚಟುವಟಿಕೆಯಲ್ಲಿ ತೊಡಗುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸುವುದು ಮತ್ತು ವಾಚಿಕವಾಗಿ ಮಂಡಿಸುವುದು.
- ದೃಶ್ಯ–ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 1 : ವಸುಧೆಯ ವೈಭವ** ಸಮಯ : 6+5 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಮರುಹುಟ್ಟು | • ಪೌರಾಣಿಕ ಕಥೆಗಳನ್ನು ವಿವಿಧ ಮೂಲಗಳಿಂದ ತಿಳಿದುಕೊಳ್ಳುವುದು.<br>• ಭಾಷಾ ಶೈಲಿಯನ್ನು ತಿಳಿದುಕೊಳ್ಳುವುದು.<br>• ಬೇರೆ ಬೇರೆ ವ್ಯವಹಾರ ರೂಪಗಳನ್ನು ತಿಳಿದುಕೊಳ್ಳುವುದು. | • ಓದುವುದು<br>• ಚರ್ಚಿಸುವುದು<br>• ಉತ್ತರಿಸುವುದು<br>• ಸಂದರ್ಭ ತಿಳಿಯುವುದು.<br>• ಪಾತ್ರ ಚಿತ್ರಣ<br>• ಊಹಿಸಿ ಬರೆಯುವುದು.<br>• ವರ್ಣನೆ<br>• ಪದ ವಿಂಗಡಿಸುವುದು<br>• ಸಂಯುಕ್ತ ವಾಕ್ಯಗಳನ್ನು ಸರಳ ವಾಕ್ಯಗಳಾಗಿ ಬರೆಯುವುದು.<br>• ವಾಕ್ಯರಚನೆ | • ಪುರಾಣ ಕಥಾ ಪುಸ್ತಕಗಳು<br>• ಸಿ.ಡಿ.ಗಳು<br>• ಯಕ್ಷಗಾನದ ಸಿ.ಡಿಗಳ ಪ್ರದರ್ಶನ | • ಪಾತ್ರಚಿತ್ರಣ<br>• ವರ್ಣನೆ |
| 2. ನೇಸರು | • ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುವುದು.<br>• ಪ್ರಕೃತಿ ವರ್ಣನೆಯ ಕವಿತೆಗಳು ಧಾರಾಳವಾಗಿ ಇವೆ ಎಂಬುದನ್ನು ತಿಳಿಯುವುದು.<br>• ಭಾಷಾ ಸತ್ಯಾಂಶಗಳನ್ನು ತಿಳಿಯುವುದು. | • ಕವಿತೆಯನ್ನು ರಾಗವಾಗಿ ಹಾಡುವುದು<br>• ಉತ್ತರಿಸುವುದು.<br>• ಕಾರಣ ಕೊಡುವುದು.<br>• ಸ್ವಾರಸ್ಯ ಬರೆಯುವುದು.<br>• ಆಶಯ ಬರೆಯುವುದು<br>• ಕವಿತಾ ರಚನೆ<br>• ಗ್ರಾಮ್ಯ ಪದಗಳ ಶಿಷ್ಟರೂಪ ಬರೆಯುವುದು.<br>• ಟಿಪ್ಪಣಿ ಬರೆಯುವುದು.<br>• ಸಂಗ್ರಹ | • ಪ್ರಕೃತಿ ಸೌಂದರ್ಯವಿರುವ ಕವಿತೆಗಳಿರುವ ಪುಸ್ತಕಗಳು.<br>• ಪ್ರಕೃತಿ ವರ್ಣನೆಯಿರುವ ಸಿ.ಡಿ.ಗಳು | • ಸ್ವಾರಸ್ಯ ಬರೆಯುವುದು.<br>• ಆಶಯ ಬರೆಯುವುದು<br>• ಟಿಪ್ಪಣಿ |

# ಯೂನಿಟ್ ಗ್ರಿಡ್

**ಯೂನಿಟ್ 1 : ವಸುಧೆಯ ವೈಭವ** ಸಮಯ :7+6 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3. ಪ್ರವಾಸಿಗರ ಸ್ವರ್ಗ – ವಯನಾಡು | • ವಯನಾಡಿನ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ತಿಳಿದುಕೊಳ್ಳುವುದು.<br>• ಪ್ರವಾಸಾನುಭವಗಳನ್ನು ತಿಳಿದುಕೊಳ್ಳುವುದು.<br>• ಜಲಪಾತಗಳು, ಸರೋವರ, ಬೆಟ್ಟಗಳು, ಪಶ್ಚಿಮಘಟ್ಟದ ಬಗ್ಗೆ ತಿಳಿದುಕೊಳ್ಳುವುದು. | • ಪ್ರಶ್ನೆ ತಯಾರಿ<br>• ಪದಬಂಧ ಪೂರ್ತಿಗೊಳಿಸುವುದು.<br>• ವಾಕ್ಯರಚನೆ<br>• ಮನವಿ ಪತ್ರ ಬರೆಯುವುದು.<br>• ಘೋಷಣ ವಾಕ್ಯ<br>• ಸ್ಥಳ ಪರಿಚಯ | • ವಯನಾಡಿನ ಪ್ರೇಕ್ಷಣೀಯ ಸ್ಥಳಗಳ ಸಿ.ಡಿ.<br>• ಇತರ ಸ್ಥಳ ಪರಿಚಯವಿರುವ ಪುಸ್ತಕಗಳು<br>• ವಾರ ಪತ್ರಿಕೆಗಳು | • ಪ್ರಶ್ನೆ ತಯಾರಿ<br>• ಮನವಿ ಪತ್ರ<br>• ಘೋಷಣಾ ವಾಕ್ಯ |
| 4. ನೀನಾರಿಗಾದೆಯೋ ಎಲೆ ಮಾನವ | • ಪರೋಪಕಾರವೇ ಪರಮಧರ್ಮವೆಂದು ತಿಳಿಯುವುದು.<br>• ಸಾಂಪ್ರದಾಯಿಕ ಕೃಷಿಯಬಗ್ಗೆ ತಿಳಿಯುವುದು.<br>• ಹೈನುಗಾರಿಕೆಯ ಬಗ್ಗೆ ತಿಳಿಯುವುದು.<br>• ಕಸುಬುಗಳ ಬಗ್ಗೆ ತಿಳಿಯುವುದು | • ಹಾಡುವುದು<br>• ಉತ್ತರಿಸುವುದು<br>• ಸಾಲುಗಳನ್ನು ಗುರುತಿಸುವುದು<br>• ಆಶಯ ಬರೆಯುವುದು.<br>• ಪ್ರಾಸ ಪದಗಳನ್ನು ಗುರುತಿಸುವುದು.<br>• ಅಭಿಪ್ರಾಯ ಟಿಪ್ಪಣಿ<br>• ಪದಸೂರ್ಯ ರಚನೆ | • ಡಿ.ವಿ.ಡಿ.<br>• ಚಿತ್ರಗಳು<br>• ಪದಸೂರ್ಯ<br>• ಪದಕೋಶ | • ಆಶಯ<br>• ಪ್ರಬಂಧ<br>• ಅಭಿಪ್ರಾಯ ಟಿಪ್ಪಣಿ |

# 1. ಮರುಹುಟ್ಟು

ಪುರಾಣದ ಕಥೆಗಳನ್ನು ವಿದ್ಯಾರ್ಥಿಗಳು ಕೇಳಿ ಅಥವಾ ಓದಿ ತಿಳಿದಿರಬಹುದು. ಕೆಲವು ವಿದ್ಯಾರ್ಥಿಗಳಿಂದ ಅಂಥ ಕಥೆಗಳನ್ನು ಹೇಳಿಸುವುದು. ಬಳಿಕ ‘ ಸತ್ಯವ್ರತ’ ರಾಜನ ಕಥೆಯನ್ನು ತಿಳಿಯೋಣ ಎನ್ನುತ್ತಾ ಪಾಠ ಪ್ರವೇಶ ಮಾಡುವುದು. ಅಧ್ಯಾಪಕರು ಸೂಕ್ತ ಸ್ವರಭಾರಗಳೊಂದಿಗೆ ಪಾಠವನ್ನು ಓದುವುದು. ವಿದ್ಯಾರ್ಥಿಗಳನ್ನು ಗುಂಪು ಮಾಡಿ ಪಾಠದಲ್ಲಿ ಬಂದಿರುವ ಕಠಿಣ ಪದಗಳನ್ನು ಗುರುತಿಸಲು ಹೇಳುವುದು. ಪ್ರಶ್ನೋತ್ತರಗಳ ಮೂಲಕ ಪಾಠದ ಆಶಯ ತಿಳಿಯುವಂತೆ ಮಾಡುವುದು.

## ಗಟ್ಟಿಯಾಗಿ ಓದಿರಿ

ಓದುವಿಕೆಯ ವಿವಿಧ ತಂತ್ರಗಳನ್ನು ಉಪಯೋಗಿಸಿ ವಿದ್ಯಾರ್ಥಿಗಳಿಂದ ಓದಿಸುವುದು.

ಉದಾ :
- ಒಂದೊಂದು ಪಾರಾವನ್ನು ಪ್ರತಿಯೊಬ್ಬನಿಂದಲೂ ಓದಿಸುವುದು.
- ಇಷ್ಟವಾದ ಭಾಗವನ್ನು ಓದಿಸುವುದು.
- ಸರಣಿ ಓದು (ಇತ್ಯಾದಿ)
- ತಪ್ಪಿಲ್ಲದೆ ಓದಿದವರನ್ನು ವಿದ್ಯಾರ್ಥಿಗಳೇ ಗುರುತಿಸಲಿ, ಅಭಿನಂದಿಸಲಿ

## ಚರ್ಚಿಸಿರಿ

ಪೂರಕ ಪ್ರಶ್ನೆಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳಿಂದ ಉತ್ತರ ಹೇಳಿಸುವುದು.

- ಸಕಲ ಜೀವಿಗಳ ಪ್ರಭೇದವನ್ನು ಸಂಗ್ರಹಿಸಲು ಮೀನು, ಸತ್ಯವ್ರತನಲ್ಲಿ ಯಾಕೆ ಹೇಳಿರಬಹುದು?
- ಸತ್ಯವ್ರತನು, ಸಕಲ ಜೀವಿಗಳ ಪ್ರಭೇದವನ್ನು ಸಂಗ್ರಹಿಸಿದ ಕಾರಣ ದೊರೆತ ಪ್ರಯೋಜನಗಳೇನು?
- ಸಕಲ ಜೀವಿಗಳ ಪ್ರಭೇದವನ್ನು ಸಂಗ್ರಹಿಸದಿರುತ್ತಿದ್ದರೆ ಪ್ರಕೃತಿ ಹೇಗಿರುತ್ತಿತ್ತು?

## ಉತ್ತರಿಸಿರಿ

ಮಕ್ಕಳಿಗೆ ಪಾಠದ ಆಶಯ ಗ್ರಹಣವಾಗಿದೆ ಎಂಬುದನ್ನು ದೃಢಪಡಿಸಿಕೊಳ್ಳುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಮಕ್ಕಳಿಂದ ಪ್ರಶ್ನೆಗಳಿಗೆ ಬಾಯ್ದೆರೆಯಾಗಿ ಉತ್ತರ ಹೇಳಿಸುವುದು. ಬಳಿಕ ಆ ಉತ್ತರಗಳನ್ನು ಬರೆಯಲು ಹೇಳುವುದು.

## ಸಂದರ್ಭ ತಿಳಿಸಿರಿ

ಈ ಚಟುವಟಿಕೆಯನ್ನು ಆಶಯ ಗ್ರಹಣವಾಗಿದೆಯೇ ಎಂದು ತಿಳಿಯಲು ನೀಡಲಾಗಿದೆ. ಒಂದು ವಾಕ್ಯವನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಬಳಿಕ ಈ ಮಾತನ್ನು ಯಾರು ಹೇಳಿದರು? ಯಾವಾಗ ಹೇಳಿದರು? ಯಾರಲ್ಲಿ ಹೇಳಿದರು? ಇತ್ಯಾದಿ ಪ್ರಶ್ನೆಗಳನ್ನು ಕೇಳುವುದು. ಅವರು ಬಾಯ್ದೆರೆಯಾಗಿ ಹೇಳಿದ ಬಳಿಕ ಬರೆಯಲು ಹೇಳುವುದು. ಇದೇ ರೀತಿ ಬೇರೆ ವಾಕ್ಯಗಳನ್ನು ಬರೆಯುವುದು.

## ಪಾತ್ರ ಚಿತ್ರಣ ಬರೆಯಿರಿ

ಈ ಪಾಠದಲ್ಲಿ ಬಂದಿರುವ ಕಥಾಪಾತ್ರಗಳನ್ನು ಗುರುತಿಸಲು ಹೇಳುವುದು. ಆ ಪಾತ್ರಗಳನ್ನು ಕರಿಹಲಗೆಯಲ್ಲಿ ಬರೆಯುವುದು.

ಪ್ರತಿಯೊಂದು ಪಾತ್ರದ ಗುಣ ಸ್ವಭಾವದ ಬಗ್ಗೆ ಚರ್ಚಿಸುವುದು. ಅನಂತರ, ಅವರಿಷ್ಟಪಟ್ಟ ಕಥಾಪಾತ್ರದ ಬಗ್ಗೆ ಬರೆಯಲು ಹೇಳುವುದು. ಅವರು ಬರೆದು ಬಳಿಕ ಅಧ್ಯಾಪಕರು ತಾವು ಬರೆದುದನ್ನು ಮಂಡಿಸುವುದು. ಅವುಗಳನ್ನು ಪರಸ್ಪರ ಹೋಲಿಸಿ ಕ್ರೋಡೀಕರಿಸಿ ಪುನಃ ಬರೆಯಲಿ.

ಕಥಾಪಾತ್ರಗಳು : ಸತ್ಯವ್ರತ, ಮೀನು

### ಪಾತ್ರ ಚಿತ್ರಣ ಹೀಗೂ ಇರಬಹುದಲ್ಲವೇ?

ಸತ್ಯವ್ರತ : ಸತ್ಯವ್ರತ ರಾಜನು ಬಹಳ ಹಿಂದೆ ಭರತ ಭೂಮಿಯ ದಕ್ಷಿಣ ಭಾಗದ ರಾಜ್ಯವನ್ನು ಆಳುತ್ತಿದ್ದನು. ಅವನು ತನ್ನ ಪ್ರಜೆಗಳನ್ನು ಸ್ವಂತ ಮಕ್ಕಳಂತೆ ನೋಡಿಕೊಂಡಿದ್ದನು. ರಾಜನಾಗಿದ್ದರೂ ವ್ರತ ನಿಷ್ಠನಾಗಿ ಹಣ್ಣು ಹಂಪಲುಗಳನ್ನು ಸೇವಿಸಿ ಜೀವಿಸುತ್ತಿದ್ದನು. ಪುಟ್ಟ ಮೀನು ತನ್ನನ್ನು ರಕ್ಷಿಸಲು ಹೇಳಿದಾಗ ತಾತ್ಸಾರ ತೋರದೆ ಕನಿಕರದಿಂದ ಅದನ್ನು ರಕ್ಷಿಸಿದನು. ಆ ಮೀನು ದೊಡ್ಡದಾದಂತೆ, ಅದರ ಸೂಚನೆಗನುಸಾರವಾಗಿ ರಾಜನು ನಡೆದನು. ತಾನು ರಾಜನೆಂಬ ಅಹಂಕಾರ ಅವನಲ್ಲಿರಲಿಲ್ಲ. ಮೀನು ಹೇಳಿದಂತೆ ಎಲ್ಲ ಸಿದ್ಧತೆಗಳನ್ನು ಮಾಡಿ, ಎಲ್ಲ ಜೀವಜಾಲಗಳ ಪ್ರಭೇದಗಳನ್ನು ಸಂಗ್ರಹಿಸಿ ಎಲ್ಲ ಜೀವ ಸಂಕುಲಗಳ ಸೃಷ್ಟಿಗೆ ಕಾರಣನಾದನು. ಸತ್ಯವ್ರತನು ಉತ್ತಮ ಗುಣವುಳ್ಳ ರಾಜನಾಗಿದ್ದನು.

ಹೀಗೆಯೇ ಮೀನಿನ ಕುರಿತೂ ಬರೆಯಲು ಹೇಳುವುದು.

### ಊಹಿಸಿ ಬರೆಯಿರಿ

ಮಕ್ಕಳಲ್ಲಿ ಚಿಂತನಾ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ನೀಡಲಾಗಿದೆ.

"ಪ್ರಳಯ ಕಾಲದಲ್ಲಿ ರಾಜನಲ್ಲಿ ಮೂಡಿದ ಭಾವನೆಗಳೇನು?" ಎಂದು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ತ್ಸುನಾಮಿಯ ದೃಶ್ಯಗಳನ್ನು ತೋರಿಸುವುದು. ಅನಂತರ ಬರೆಯಲು ಹೇಳುವುದು.

### ವರ್ಣನೆ ತಯಾರಿಸಿರಿ

ವರ್ಣನಾತ್ಮಕ ಬರವಣಿಗೆಯನ್ನು ಹೇಗೆ ಬರೆಯಬೇಕು ಎಂಬುದರ ತರಬೇತು ನೀಡುವುದು ಈ ಚಟುವಟಿಕೆಯ ಉದ್ದೇಶ. ಯಾವುದೇ ವಿಚಾರವನ್ನು ಆಸ್ವಾದಿಸಬೇಕಿದ್ದರೆ ಅದು ಕಣ್ಣಿಗೆ ಕಟ್ಟುವಂತೆ ಇರಬೇಕು. ಮಳೆಗಾಲದ ವರ್ಣನೆ ಬರೆಯುವ ಮೊದಲು ಮಳೆಗಾಲದ ಅನುಭವಗಳ ಕುರಿತು ಪ್ರಶ್ನಿಸುವುದು.

- ಮಳೆ ಎಂದರೆ ನಿಮಗಿಷ್ಟವೇ?
- ತುಂತುರು ಮಳೆ, ಹದಮಳೆ, ಜಡಿಮಳೆ ಯಾವುದು ನಿಮಗಿಷ್ಟ?
- ಮಳೆ ಬರುವಾಗ ನೀವೇನು ಮಾಡುತ್ತೀರಿ?
- ಕೇವಲ ಮಳೆ ಮಾತ್ರ ಬರುತ್ತದೆಯೋ? ಅದರ ಜೊತೆಗೆ ಬೇರೆ ಏನೆಲ್ಲಾ ಇರುತ್ತವೆ?
- ಮಳೆ ಬರುವ ಮೊದಲು ಮತ್ತು ಮಳೆ ನಿಂತ ನಂತರ ವಾತಾವರಣ ಹೇಗಿರುತ್ತದೆ?

ಇಂತಹ ಲಘುಪ್ರಶ್ನೆಗಳ ಮೂಲಕ ಮಕ್ಕಳನ್ನು ವಿಷಯದ ಕಡೆಗೆ ಸೆಳೆಯುವುದು. ಗುಂಪಿನಲ್ಲಿ ಬರೆದು ಮಂಡಿಸಲಿ. ಮಂಡಿಸುವ ಸಂದರ್ಭದಲ್ಲಿ ಪದಗಳ ಪ್ರಯೋಗ ಆಕರ್ಷಕವಾಗಿದೆಯೇ? ವಾಕ್ಯ ರಚನಾಕ್ರಮ ಸರಿಯಾಗಿದೆಯೇ? ಆಲಂಕಾರಿಕ ಭಾಷಾ ಪ್ರಯೋಗವಿದೆಯೇ? ವಿಷಯದ ಸಮಗ್ರತೆ ಇದೆಯೇ? ಶೀರ್ಷಿಕೆ ನೀಡಲಾಗಿದೆಯೇ? ಮುಂತಾದ ಸೂಚಕಗಳನ್ನು ಬಳಸಬಹುದು.

## ವರ್ಣನೆ ಹೀಗೂ ಇರಬಹುದಲ್ಲವೇ?

### ವರ್ಷ ವೈಭವ

ಇದ್ದಕ್ಕಿದ್ದಂತೆ ನೀಲಾಕಾಶದಲ್ಲಿ ಕಾರ್ಮೋಡಗಳ ಆಗಮನವಾಯಿತು ನಸುಕತ್ತಲು ಸುತ್ತಲೂ ಆವರಿಸಿತು. 'ಧೋ' ಎಂಬ ಶಬ್ದ ದೂರದಲ್ಲೆಲ್ಲೋ ಮಳೆ ಬರುತ್ತಿದೆ ಎಂಬುದನ್ನು ಸೂಚಿಸುತ್ತಿತ್ತು. ಹತ್ತಿರ ಹತ್ತಿರ ನಮ್ಮ ಸಮೀಪಕ್ಕೆ ಬಂತು. ತುಂತುರು ಹನಿಯಾಗಿದ್ದುದು ಈಗ ಜೋರಾಗಿ ಸುರಿಯಲಾರಂಭಿಸಿತು. ದಪ್ಪವಾದ ನೀಳ ಗಾಜಿನ ಕಡ್ಡಿಗಳು ಒತ್ತೊತ್ತಾಗಿ ಆಕಾಶದಿಂದ ಭೂಮಿಗೆ ಬೀಳುತ್ತಿವೆಯೋ ಎಂಬಂತೆ ತೋರುತ್ತಿತ್ತು. ಮಧ್ಯೆ ಮಧ್ಯೆ ನಾನೂ ಜೊತೆಗಿದ್ದೇನೆ ಎಂದು ತಿಳಿಸುವಂತೆ ಮಿಂಚುವ ಮಿಂಚುಗಳು. ಮೇಘಗಳ ಆರ್ಭಟ. ಮನೆಯಲ್ಲೋ.......! ಸೂರಿನಿಂದ ಕೊಡದಲ್ಲಿ ಸುರಿದಂತೆ ಸುರಿಯುವ ನೀರು. ಕೆಲವೇ ಕ್ಷಣಗಳಲ್ಲಿ ಹೊರಗೆ ಕಣ್ಣು ಹಾಯಿಸಿದಲ್ಲೆಲ್ಲಾ ಕೆಂಬಣ್ಣದ ಜಲಪ್ರವಾಹ! ಬೀಸುವ ಗಾಳಿ, ಸುರಿಯುವ ಮಳೆಯನ್ನು 'ಕೋಮಲಾಂಗಿಯಂತೆ ಬಾಗಿ ಬಳುಕುವಂತೆ ಮಾಡುತ್ತಿತ್ತು. ಭಯ ಹುಟ್ಟಿಸುವಂತಿದ್ದರೂ ಮಳೆ ಮೋಹಕವೂ ಹೌದು ಅದೆಷ್ಟು ವಿಚಿತ್ರವಾದುದು ಪ್ರಕೃತಿ! ಆದರಲ್ಲೂ ಈ ವರ್ಷ ವೈಭವವನ್ನು ನೋಡಲು ಕಣ್ಣೆರಡು ಸಾಲದು.

## ಪದ ವಿಂಗಡಿಸಿರಿ

ಹಿಂದಿನ ತರಗತಿಯಲ್ಲೇ ಪದವಿಂಗಡಣೆ ಚಟುವಟಿಕೆಯ ಪರಿಚಯ ಮಕ್ಕಳಿಗಾಗಿದೆ. ಪದ ವಿಂಗಡಿಸುವಾಗ ಅಲ್ಲಿರುವ ಪದಗಳೆಲ್ಲ ಅರ್ಥಪೂರ್ಣವಾಗಿರುವಂತೆ ಗಮನಿಸಬೇಕು ಎಂಬುದನ್ನು ಮಕ್ಕಳಿಗೆ ನೆನಪಿಸುವುದು.

ಹರಿದಾಡಿದಂತಾಯಿತು – ಹರಿದು + ಆಡಿದಂತೆ + ಆಯಿತು

ಬಿಡಬೇಕೆನ್ನುವಷ್ಟರಲ್ಲಿ – ಬಿಡಬೇಕು +ಎನ್ನುವ + ಅಷ್ಟರಲ್ಲಿ

ಆಶ್ಚರ್ಯವಾಯಿತು – ಆಶ್ಚರ್ಯ + ಆಯಿತು

ನಿನಗೇನಾಗಬೇಕೆಂಬುದನ್ನು – ನಿನಗೆ + ಏನು + ಆಗಬೇಕು + ಎಂಬುದನ್ನು

ಸಾಕಾಗುತ್ತಿಲ್ಲ – ಸಾಕು + ಆಗುತ್ತ + ಇಲ್ಲ

ವರ್ಷಗಳುರುಳಿದುವು – ವರ್ಷಗಳು +ಉರುಳಿದುವು

ದೊಡ್ಡದಾಗಿತ್ತು – ದೊಡ್ಡದು +ಆಗಿತ್ತು

ಉಕ್ಕೇರ ತೊಡಗಿತು – ಉಕ್ಕಿ + ಏರತೊಡಗಿತು

## ಸಂಯುಕ್ತ ವಾಕ್ಯಗಳನ್ನು ಸರಳವಾಕ್ಯಗಳಾಗಿ ಬರೆಯಿರಿ.

ಸರಳ ಹಾಗೂ ಸಂಯುಕ್ತ ವಾಕ್ಯಗಳಲ್ಲಿನ ವ್ಯತ್ಯಾಸವು ಮಕ್ಕಳಿಗೆ ತಿಳಿದಿರಬೇಕು. ಒಂದು ಸರಳ ವಾಕ್ಯದಲ್ಲಿ ಒಂದು ಪೂರ್ಣ ಕ್ರಿಯಾ ಪದವಿರುತ್ತದೆ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಸರಳ ವಾಕ್ಯಗಳು ಸೇರಿಕೊಂಡಿರುವ ವಾಕ್ಯವು ಸಂಯುಕ್ತ ವಾಕ್ಯ ಎನಿಸುತ್ತದೆ.

- ಒಂದು ದಿನ ರಾಜನು ಮುಂಜಾವಿನಲ್ಲಿ ಅರ್ಘ್ಯ ಬಿಡುತ್ತಿದ್ದನು. ಆಗ ದೊಡ್ಡದಾದ ಮೀನೊಂದು ರಾಜನ ಬಳಿಗೆ ಬಂದಿತು.
- ರಾಜನು ಮೀನಿನ ಮಾತುಗಳನ್ನು ಒಪ್ಪಿಕೊಂಡನು. ಅದು ಹೇಳಿದ ರೀತಿಯಲ್ಲಿಯೇ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡನು.
- ರಾಜನು ಸಂಗ್ರಹಿಸಿದ್ದೆಲ್ಲವನ್ನು ನಾವೆಯಲ್ಲಿ ತುಂಬಿಸಿದನು. ಅದರಲ್ಲಿ ಕುಳಿತುಕೊಂಡನು.

**ವಾಕ್ಯ ರಚಿಸಿರಿ**

ಪದಗಳ ಅರ್ಥವನ್ನು ಮಕ್ಕಳು ಕಂಡುಕೊಳ್ಳಲಿ. ಆ ಪದಪ್ರಯೋಗವಾದ ವಾಕ್ಯದ ಅರ್ಥವನ್ನು ಅವರು ತಿಳಿದುಕೊಳ್ಳಲಿ. ಬಳಿಕ ಮಕ್ಕಳಲ್ಲಿ ಬೇರೆ ವಾಕ್ಯ ರಚನೆ ಮಾಡಲು ಹೇಳುವುದು. ಮಕ್ಕಳು ರಚಿಸಿದ ವಾಕ್ಯಗಳನ್ನು ಕರಿಹಲಗೆಯಲ್ಲಿ ಬರೆದು ತಪ್ಪಿದ್ದಲ್ಲಿ ಸರಿಪಡಿಸಿ ಬರೆಯುವುದು.

- ಆಟವಾಡಲು ಬಿಡಬೇಕೆಂಬ ನಮ್ಮ ಕೋರಿಕೆಯನ್ನು ಅಧ್ಯಾಪಕರು ಈಡೇರಿಸಿದರು.
- ಚಾಡಿ ಮಾತುಗಳು ನಮ್ಮ ಮನಸ್ಸನ್ನು ಅಲ್ಲೋಲಕಲ್ಲೋಲಗೊಳಿಸುತ್ತವೆ.
- ರೈತನು ಮುಂದಿನ ಕೃಷಿಗಾಗಿ ಬೀಜಗಳನ್ನು ಸುರಕ್ಷಿತವಾಗಿ ತೆಗೆದಿಡುತ್ತಾನೆ.
- ಮಕ್ಕಳು ಪ್ರವಾಸ ಹೋಗಲು ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡರು.
- ಮಕ್ಕಳು ಶಾಲೆಗೆ ಶುಭ್ರವಾದ ಉಡುಪನ್ನು ಧರಿಸಿ ಬರಬೇಕು.

**ಪೂರಕ ಓದಿಗೆ**

## ಪ್ರಳಯ

ಇದೊಂದು ಹಳೆಯ ನಂಬಿಕೆ. ಜಲ ಪ್ರಳಯ ಆಗುತ್ತಿರುವಾಗ ಜನ, ಜಾನುವಾರು ಮತ್ತಿತರ ಜೀವರಾಶಿ ಪ್ರಾಣಭಯದಿಂದ ತತ್ತರಿಸುತ್ತಿದ್ದರೆ, ಜಲಪಕ್ಷಿಗಳು ಮಾತ್ರ ಸಂತೋಷದಿಂದ ಕೇಕೆ ಹಾಕುತ್ತವಂತೆ! ಜಲ ಪ್ರಳಯವೊಂದೇ ಈ ಜಗತ್ತನ್ನು ಸಂಪೂರ್ಣ ನಾಶ ಮಾಡುವ ಶಕ್ತಿ ಹೊಂದಿದೆ ಎಂಬ ನಂಬಿಕೆ ನಮಗೆ ಬಂದು ಬಿಟ್ಟಿದೆ. ಬಹುಶಃ ಇದಕ್ಕೆ ಈ ಜಗತ್ತಿನಲ್ಲಿ ಮುಕ್ಕಾಲು ಭಾಗ ನೀರು ಮತ್ತು ಕಾಲು ಭಾಗ ಭೂಮಿ ಇರುವುದೇ ಕಾರಣ ಇರಬಹುದು. ಈ ಮುಕ್ಕಾಲು ಭಾಗ ನೀರು ಒಂದು ದಿನ ಸಿಟ್ಟಿಗೆದ್ದು ತನ್ನ ಅಲೆಗಳನ್ನು ಆಳೆತ್ತರ ಎತ್ತರಿಸಿದರೆ ಈ ಭೂಮಿ ಉಳಿಯಲು ಹೇಗೆ ಸಾಧ್ಯ?

ಟಿ.ಎಸ್. ಇಲಿಯಟ್ ತನ್ನ ಒಂದು ಕವನದಲ್ಲಿ ಹೀಗೆ ಹೇಳುತ್ತಾನೆ. 'ಈ ಜಗತ್ತು ಢಂ ಅಂತ ಒಂದೇ ಏಟಿಗೆ ನಾಶವಾಗುವುದಿಲ್ಲ. ಅದು ನಿಧಾನವಾಗಿ ನಾಶವಾಗುತ್ತಾ ಹೋಗುತ್ತದೆ' ಎಂದು. ಇಂದು ಎಲ್ಲಾ ಕಡೆ ಜರಗುತ್ತಿರುವ ನೈಸರ್ಗಿಕ ವಿಕೋಪಗಳಾದ ಅತಿವೃಷ್ಟಿ. ಅನಾವೃಷ್ಟಿಗಳನ್ನು ನೋಡುತ್ತಿದ್ದರೆ ಪ್ರಳಯ ಎನ್ನುವುದು ನಮ್ಮ ಜೀವನದ ಒಂದು ಅವಿಭಾಜ್ಯ ಅಂಗವೇ ಆಗಿಬಿಟ್ಟಿದೆ. ಪ್ರಳಯದೊಂದಿಗೇ ಮನುಷ್ಯ ಬದುಕಬೇಕಾಗಿದೆ. ಯಾಕೆಂದರೆ ಮನುಷ್ಯನೂ ನಿಸರ್ಗದ ಒಂದು ಭಾಗ. ಅವನನ್ನು ಬಿಟ್ಟು ನಿಸರ್ಗ ಇಲ್ಲ. ನಿಸರ್ಗವನ್ನು ಬಿಟ್ಟು ಅವನಿಲ್ಲ.

ಈ ಪ್ರಳಯದ ಕಲ್ಪನೆ ಇಂದು ನಿನ್ನೆಯದಲ್ಲ. ಮನುಷ್ಯ ಹುಟ್ಟಿನಿಂದಲೇ ವಿನಾಶದ ಕಲ್ಪನೆಯೂ ಶುರುವಾಗಿದೆ. ಒಂದು ದಿನ ಈ ಜಗತ್ತು ಸಂಪೂರ್ಣ ನಾಶವಾಗಬೇಕು ಮತ್ತು ಹೊಸತೊಂದು ಜಗತ್ತು ಮತ್ತೊಮ್ಮೆ ಹುಟ್ಟಿ ಬರಬೇಕು ಎಂಬುದು ಪ್ರಳಯದ ಆಶಯ ಇದ್ದಂತೆ ಕಾಣುತ್ತದೆ. ಆದರೆ ಪುರಾಣಗಳಲ್ಲಿ ಘಟಿಸಿರಬಹುದಾದ ಪ್ರಳಯಗಳಲ್ಲೂ ಈ ಸಂಪೂರ್ಣ ನಾಶ ಎನ್ನುವುದು ಆಗಿಲ್ಲ ಎಂಬುದನ್ನು ಗಮನಿಸಬೇಕು. ಮನುಷ್ಯ ತಪ್ಪು ಮಾಡಿದ್ದಾನೆ. ಅವನನ್ನು ಶಿಕ್ಷಿಸಬೇಕು ಎಂದು ನಿರ್ಧರಿಸಿದ ದೇವರೇ ತನಗಿಷ್ಟವಾದ ಮನುಷ್ಯನೊಬ್ಬನನ್ನು ಕರೆದು 'ನಾನು ಜಲಪ್ರಳಯ ಸೃಷ್ಟಿಸುತ್ತೇನೆ. ನೀನು ಸುರಕ್ಷಿತ ಜಾಗದಲ್ಲಿ ರಕ್ಷಣೆ ಪಡೆದುಕೋ' ಎಂದು ಹೇಳಿದ ಉದಾಹರಣೆಗಳಿವೆ.

ಈ ರೀತಿಯ ಜಲ ಪ್ರಳಯದ ಪುರಾಣ ಕತೆಗಳು ಜಗತ್ತಿನಾದ್ಯಂತ ಬಹಳಷ್ಟು ದೇಶಗಳಲ್ಲಿ ಸಿಗುತ್ತವೆ. ಅವುಗಳಲ್ಲಿ ಪ್ರಸಿದ್ಧವಾದ ಒಂದೆರಡು ಕತೆಗಳು ಹೀಗಿವೆ.

ನೋವಾಸ್ ಆರ್ಕ್ ಎಂಬುದು ಬೈಬಲ್ ಮತ್ತು ಕುರಾನ್‌ಗಳಲ್ಲಿ ನಮೂದಾಗಿರುವ ಬಹಳ ಪ್ರಸಿದ್ಧ ಜಲ ಪ್ರಳಯದ ಕತೆ. ದೇವರು ಮನುಷ್ಯರನ್ನು ಸೃಷ್ಟಿಸಿದ್ದಾನೆ. ಹಾಗೆ ಸೃಷ್ಟಿಗೊಂಡ ಮನುಷ್ಯರು ಕೆಟ್ಟದ್ದನ್ನು ಮಾಡುತ್ತಾ ತಮ್ಮ ಪಾಪದ ಕೊಡ ತುಂಬಿಸಿಕೊಳ್ಳುತ್ತಿದ್ದಾರೆ. ಅಂಥವರನ್ನು ಕಂಡು ದೇವರಿಗೆ ಕೋಪ ಬಂದಿದೆ. 'ಈ ಮನುಷ್ಯರನ್ನೂ ಅವರ ಸಂಪತ್ತನ್ನೂ ಅವರ ಪ್ರಾಣಿಗಳನ್ನೂ ಅಳಿಸಿ ಹಾಕಿ ಬಿಡುತ್ತೇನೆ. ಹೊಸದೊಂದು ಜಗತ್ತನ್ನು ಮತ್ತೆ ಸೃಷ್ಟಿಸುತ್ತೇನೆ' ಎಂಬ ನಿರ್ಧಾರ ಮಾಡುತ್ತಾನೆ.

ಆದರೆ ಇಡೀ ಜಗತ್ತನ್ನು ನಾಶ ಮಾಡಿದರೆ ಅದನ್ನು ಪುನರ್ ಸೃಷ್ಟಿಸುವುದು ಹೇಗೆ? ದೇವರು ಒಮ್ಮೆ ಮಾತ್ರ ಜಗತ್ತನ್ನು ಸೃಷ್ಟಿಸಬಲ್ಲ. ಅದಕ್ಕೆಂದೇ ಆತ ತನಗೆ ಇಷ್ಟವಾದ ವ್ಯಕ್ತಿ ನೋವಾನನ್ನು ಕರೆದು ಹೇಳುತ್ತಾನೆ. ನಾನು ಜಲ ಪ್ರಳಯ ಸೃಷ್ಟಿಸಿ ಇಡೀ ಜಗತ್ತನ್ನೇ ನಾಶಪಡಿಸಲು ಹೊರಟಿದ್ದೇನೆ. ನೀನು ನಿನ್ನ ಕುಟುಂಬ, ನಿನ್ನ ಪ್ರೀತಿಪಾತ್ರ ಪ್ರಾಣಿಗಳನ್ನು ರಕ್ಷಿಸಿಕೊಳ್ಳಲು ಒಂದು ಹಡಗನ್ನು ನಿರ್ಮಿಸಿಕೋ. ಆ ಹಡಗನ್ನು ಎತ್ತರದ ಜಾಗದಲ್ಲಿ ನಿಲ್ಲಿಸಿಕೋ ಎಂದನಂತೆ. ಅದರಂತೆ ನೋವಾ ಹಡಗಿನಲ್ಲಿ ತನ್ನ ಕುಟುಂಬ, ಪ್ರಾಣಿ ಪಕ್ಷಿಗಳನ್ನು ಕಟ್ಟಿಕೊಂಡು ಸುರಕ್ಷಿತ ಜಾಗ ತಲುಪುತ್ತಾನೆ. ಆಗ ಇಡೀ ಆಕಾಶವೇ ತೂಬು ತೆರೆದಂತೆ ಭೋರೆಂದು ನಲವತ್ತು ದಿನ ಸತತವಾಗಿ ಮಳೆ ಬೀಳುತ್ತದೆ. ನೂರೈವತ್ತು ದಿನಗಳ ಕಾಲ ಮಳೆಯ ನೀರು ಎಲ್ಲೆಡೆ ಹರಡಿ ನಿಲ್ಲುತ್ತದೆ. ದೊಡ್ಡ ದೊಡ್ಡ ಪರ್ವತಗಳು ಮುಳುಗಿ ಹೋಗುತ್ತವೆ. ನೋವಾನ ಹಡಗು ಒಂದು ಎತ್ತರದ ಪರ್ವತದ ಮೇಲೆ ಸುರಕ್ಷಿತವಾಗಿ ನಿಲ್ಲುತ್ತದೆ. ಇಡೀ ಜಗತ್ತು ಪ್ರಳಯದಲ್ಲಿ ನಿರ್ನಾಮವಾಗಿ ಬಿಟ್ಟಿರುತ್ತದೆ. ಮಳೆ ನಿಂತ ಮೇಲೆ ನೂರೈವತ್ತು ದಿನಗಳ ಕಾಲ ನೀರು ಇಳಿಯುತ್ತಾ ಹೋಗುತ್ತದೆ. ನೀರು ಪೂರಾ ಇಳಿದ ಮೇಲೆ, ನೋವಾ ತನ್ನ ಹಡಗಿನ ಬಾಗಿಲು ತೆರೆಯುತ್ತಾನೆ. ಬಾಗಿಲು ತೆರೆದು ತಾನು ಸಾಕಿಕೊಂಡಿದ್ದ ಪಕ್ಷಿಗಳನ್ನು ನೀರು ಪೂರಾ ಇಳಿದಿದೆಯೋ ಹೇಗೆ ಎಂದು ನೋಡಿಕೊಂಡು ಬರಲು ಕಳಿಸುತ್ತಾನೆ. ನೀರು ಮಾಮೂಲಿ ಸ್ಥಿತಿಗೆ ಬಂದದ್ದು ತಿಳಿದು ನೋವಾ ಅವನ ಕುಟುಂಬ ಮತ್ತು ಪ್ರಾಣಿ ಪಕ್ಷಿಗಳು ಹೊರಗೆ ಬರುತ್ತವೆ. ತಮ್ಮ ಪ್ರಾಣ ಉಳಿಸಿದ್ದಕ್ಕಾಗಿ ನೋವಾ ದೇವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತಾನೆ. ಅದರಿಂದ ಸುಪ್ರೀತನಾದ ದೇವರು ಮೋಡಗಳ ಮೇಲೆ ಕಾಮನ ಬಿಲ್ಲೊಂದನ್ನು ಸೃಷ್ಟಿಸುತ್ತಾನೆ ಇನ್ನೆಂದೂ ತಾನು ಜಲ ಪ್ರಳಯ ಸೃಷ್ಟಿಸಿ ಜಗತ್ತನ್ನು ನಾಶ ಮಾಡುವುದಿಲ್ಲ ಎಂಬ ನಿರ್ಧಾರದ ಪ್ರತೀಕ ಆ ಕಾಮನಬಿಲ್ಲು ಎಂಬುದು ಇಂದಿಗೂ ಇರುವ ನಂಬಿಕೆ. ಅನಂತರ ನೋವಾನ ಕುಟುಂಬ ಮತ್ತೆ ಮನುಕುಲವನ್ನು ಸೃಷ್ಟಿಸಿತು ಎಂಬಲ್ಲಿಗೆ ಪ್ರಳಯದ ನಂತರದ ಸೃಷ್ಟಿಯ ಕತೆ ಆರಂಭವಾಗುತ್ತದೆ.

ಪ್ರಳಯ ಮತ್ತು ಸೃಷ್ಟಿ ಎರಡೂ ತೀವ್ರ ವಿರುದ್ಧದ ನಮ್ಮ ನಂಬಿಕೆಗಳು. ಈ ನಂಬಿಕೆಗಳು ಹುಟ್ಟುವುದಕ್ಕೆ ಇರುವ ಕಾರಣ ಕುತೂಹಲಕಾರಿಯಾಗಿವೆ. ದೇವರು ಮನುಷ್ಯನನ್ನು ಸೃಷ್ಟಿಸಿದ ಎಂಬುದು ಪುರಾಣದ ನಂಬಿಕೆ. ಹಾಗಾಗಿ ದೇವರ ಸೃಷ್ಟಿಯಾದ ಮನುಷ್ಯ ದೇವರಿಗೆ ಯಾವುದೇ ವಿಷಯದಲ್ಲಿ ಸೆಡ್ಡು ಹೊಡೆದು ನಿಲ್ಲುವುದು, ನಾನು ದೇವರ ಹಾಗೆಯೇ ಆಗಬೇಕು ಎಂದು ಹೊರಡುವುದು ದೇವರಿಗೆ ಇಷ್ಟವಾಗುವುದಿಲ್ಲ. ಮನುಷ್ಯರ ಅಂಥ ಪ್ರಯತ್ನಗಳನ್ನು ನಾಶ ಮಾಡಲೆಂದೇ ಈ ಪ್ರಳಯ ಸೃಷ್ಟಿಯಾಗುವುದು.

ಬ್ಯಾಬಿಲೋನಿಯಾದ ಮಹಾಕಾವ್ಯ ಗಿಲ್ಗಮಿಷ್ ನಲ್ಲೂ ಜಲ ಪ್ರಳಯದ ಪ್ರಸ್ತಾಪ ಇದೆ. ಇದರ ನಾಯಕನಾದ ಗಿಲ್ಗಮಿಷ್ ತನ್ನ ಸ್ನೇಹಿತ ಎಂಕಿಡೊ ವಿನ ಮರಣದಿಂದ ಕಂಗಾಲಾಗುತ್ತಾನೆ. ಹೇಗಾದರೂ ಮಾಡಿ ಸಾವನ್ನು ಗೆಲ್ಲಬೇಕು ಎಂದು ನಿರ್ಧರಿಸುತ್ತಾನೆ. ಉತ್ತನಾಂಶಿಷ್ಟ ಎಂಬುವವನು ಮಹಾ ಜಲ ಪ್ರಳಯದಲ್ಲಿ ಬದುಕಿಬಂದವನೆಂದು ತಿಳಿದು ಅವನ ಹತ್ತಿರ ಹೋಗುತ್ತಾನೆ. ಈ ಉತ್ತನಾಂಶಿಷ್ಟ ಕೂಡಾ ಸಾವನ್ನು ಗೆಲ್ಲಬೇಕೆಂದುಕೊಂಡವನು.ಇದನ್ನು ತಿಳಿದ ದೇವರುಗಳು ಜಲಪ್ರಳಯ ಸೃಷ್ಟಿಸಿ ಅವನನ್ನು ನಿರ್ನಾಮ ಮಾಡಬೇಕೆಂದು ಯೋಚಿಸುತ್ತಾರೆ. ಇದನ್ನು ತಿಳಿದ ಉತ್ತನಾಂಶಿಷ್ಟ ತನ್ನ ಗೆಳೆಯನೊಬ್ಬನನ್ನು ಎಚ್ಚರಿಸಿ ಒಂದು ಹಡಗನ್ನು ನಿರ್ಮಿಸಿಕೊಂಡು ಅದರಲ್ಲಿ ಸುರಕ್ಷಿತವಾಗಿ ಪಾರಾಗೋಣ ಎಂದು ತಿಳಿಸುತ್ತಾನೆ. ಹಾಗೆಯೇ ಉತ್ತನಾಂಶಿಷ್ಟ ತನ್ನ ಕುಟುಂಬ, ಸ್ನೇಹಿತರು, ಪ್ರಾಣಿಗಳನ್ನು ರಕ್ಷಿಸಿಕೊಳ್ಳುತ್ತಾನೆ. ಕಡೆಗೆ ದೇವರುಗಳು ತಮ್ಮ ಕಾರ್ಯದಿಂದ ಪಶ್ಚಾತ್ತಾಪಗೊಂಡು ಉತ್ತನಾಂಶಿಷ್ಟಗೆ ಅಮರತ್ವವನ್ನು ದಯಪಾಲಿಸುತ್ತಾರೆ.

ಹಿಂದೂ ಪುರಾಣಗಳಲ್ಲಿ ಕೂಡಾ ಜಲ ಪ್ರಳಯದ ಒಂದು ಉಲ್ಲೇಖ ಇದೆ. ಮತ್ಸ್ಯ ಪುರಾಣ ಮತ್ತು ಶತಪಥ ಬ್ರಾಹ್ಮಣ ದಲ್ಲಿ ಇದರ ಪ್ರಸ್ತಾಪ ಬರುತ್ತದೆ. ಇದು ಪುರಾತನ ದ್ರಾವಿಡ ರಾಜ್ಯದಲ್ಲಿ ರಾಜನಾಗಿದ್ದ ಸತ್ಯವ್ರತನ ಕಥೆ. ಇದನ್ನು ಈಗಾಗಲೇ ತಿಳಿದೆವಲ್ಲವೇ?

ಪುರಾಣದ ಜಲ ಪ್ರಳಯಗಳು ನಮಗೊಂದು ರೀತಿಯ ತಿಳುವಳಿಕೆಯ ರೂಪಕಗಳಾಗಬೇಕು. ಜಲ ಪ್ರಳಯ ವಾಗುತ್ತದೆಂದು ನಮಗೆ ಯಾರೂ ಭವಿಷ್ಯ ಹೇಳಬೇಕಾಗಿಲ್ಲ. ಪ್ರಕೃತಿಯ ವೈಪರೀತ್ಯಗಳೇ ನಮಗೆ ಆಗಾಗ ಎಚ್ಚರಿಕೆ ಗಂಟೆಗಳಾಗಿ ನಿಸರ್ಗದ ಪ್ರಳಯ ರೂಪದ ಶಕ್ತಿಯ ಪರಿಚಯ ಮಾಡಿಕೊಡುತ್ತಲೇ ಬಂದಿದೆ. ನೀರಿನ ಮೂಲಗಳು ಆಗಾಗ ತಮ್ಮ ಪಾತ್ರ ಬದಲಿಸುತ್ತವೆ. ವಿನಾಶದ ದೊಡ್ಡ ಶಕ್ತಿ ನೀರಿಗಿರುವಂತೆ ಪ್ರಕೃತಿಯ ಬೇರೆ ವೈಪರೀತ್ಯಗಳಿಗಿದ್ದಂತೆ ಕಾಣುವುದಿಲ್ಲ. ಭೂಕಂಪ, ಬೆಂಕಿ ಅನಾಹುತ, ಸಾಂಕ್ರಾಮಿಕ ರೋಗಗಳು ಉಂಟು ಮಾಡುತ್ತಿರುವ ಪ್ರಾಣಿ, ಸಂಪತ್ತು ಹಾನಿಗಿಂತ ಜಲಪ್ರಳಯ ಸೃಷ್ಟಿಸುವ ಹಾನಿ ಅತ್ಯಂತ ದೊಡ್ಡದು.

ನಾವು ಸುನಾಮಿ ಎಂಬ ಪದವನ್ನು ಕೇಳಿರಲಿಲ್ಲ. ಅದರ ಪ್ರತಾಪವನ್ನೂ ಕಂಡಿರಲಿಲ್ಲ. ಸಮುದ್ರದಲ್ಲಿ ಹಿಂದೆಂದಿಗಿಂತ ಇಂದು ವಾಯುಭಾರದ ಒತ್ತಡ ಹೆಚ್ಚುತ್ತಿದೆ. ನದಿಗಳು ತಮ್ಮ ಪಾತ್ರವನ್ನು ಅಚಾನಕ್ಕಾಗಿ ಬದಲಿಸುತ್ತಿವೆ. ಇದರಿಂದ ಜನ ಕಂಗಾಲಾಗುತ್ತಿದ್ದಾರೆ. ಸಾಯುತ್ತಿದ್ದಾರೆ ಮನೆ, ಮಠ, ಆಸ್ತಿ ಕಳೆದುಕೊಳ್ಳುತ್ತಿದ್ದಾರೆ. ಎಲ್ಲೆಲ್ಲೂ ರೋದನ, ನೋವು. ಇದನ್ನು ನೋಡಿ ಜಲಪಕ್ಷಿಗಳು ಕೇಕೆ ಹಾಕುತ್ತಿವೆ. ನೀರಿನ ಪ್ರವಾಹ ಇಳಿದ ಮೇಲೆ ಸತ್ತ ಜನ, ಜಾನುವಾರುಗಳ ಹೆಣ ನೋಡಿ ರಣಹದ್ದುಗಳು ಕೇಕೆ ಹಾಕುತ್ತವೆ.

ಈ ಎರಡೂ ಕೇಕೆಗಳನ್ನು ನಿಲ್ಲಿಸಬೇಕಾದರೆ ಪ್ರಕೃತಿಯನ್ನು ಸರಿಯಾಗಿ ನೋಡಿಕೊಳ್ಳಬೇಕಿದೆ. ಅದಕ್ಕೆ ಕೊಡಬೇಕಾದ ಗೌರವ ಕೊಡಬೇಕಿದೆ. ಪುರಾಣದ ದೇವರುಗಳು ಇಂದಿನ ಪ್ರಕೃತಿಯ ವೈಪರೀತ್ಯಗಳಾಗಿ ನಮ್ಮನ್ನು ಕಾಡುತ್ತಿವೆಯೇನೋ ಎನಿಸುತ್ತಿದೆ. ಪ್ರಳಯಕ್ಕೆ ಭವಿಷ್ಯದ ಕಡೆ ನೋಡಬೇಕಾಗಿಲ್ಲ. ಈಗಾಗಲೇ ಅದು ಪ್ರಾರಂಭವಾಗಿದೆ.

**– ಸಾಧಾರ**

# 2. ನೇಸರು

- ಬೆಳಗು ಮತ್ತು ಬೈಗಿನಲ್ಲಿ ಸುಂದರ, ಮಧ್ಯಾಹ್ನದಲ್ಲಿ ಭಯಂಕರ ಆಗಿರುವ ನಾನು ಯಾರು?
- ಲೋಕಕ್ಕೆಲ್ಲ ಕಣ್ಣಾದ ನೀನು ಹನುಮಂತನಿಗೇಕೆ ಹಣ್ಣಾದೆ?

ಮುಂತಾದ ಒಗಟುಗಳನ್ನು ಹೇಳುತ್ತಾ ಉತ್ತರಿಸಲು ಹೇಳುವುದು. ನಂತರ ಚೈತನ್ಯದ ಮೂಲವಾಗಿರುವ ಎಲ್ಲಾ ಜೀವಜಾಲಗಳ ಚಟುವಟಿಕೆಗಳ ಕೇಂದ್ರವಾಗಿರುವ 'ಸೂರ್ಯ'ನ ಕುರಿತು ಹಲವಾರು ಕವನಗಳಿವೆ ಎನ್ನುತ್ತಾ (ಮೂಡುವನು ರವಿ, ಬೆಳ್ಳಿ ಮೂಡುವ ಕಾಲ ಇತ್ಯಾದಿ) ಶ್ರೀಯುತ ದೊಡ್ಡರಂಗೇಗೌಡರು ಬರೆದ 'ನೇಸರು' ಎಂಬ ಕವನವನ್ನು ಹಾಡುವುದು. ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡಿ ಪದ್ಯಕ್ಕೆ ತಮಗಿಷ್ಟವಾದ ರಾಗ ಸಂಯೋಜನೆಮಾಡಲುಹೇಳುವುದು. ಹಾಡುವ ಮೊದಲು ಹಾಡುವಿಕೆಯ ಮೌಲ್ಯಮಾಪನ ನಡೆಸಲು ಅಗತ್ಯವಾದ ಸೂಚಕಗಳನ್ನು ಕರಿಹಲಗೆಯಲ್ಲಿ/ ಚಾರ್ಟಿನಲ್ಲಿ ಬರೆಯುವುದು.

ಹಾಡುವಾಗ, ಗುಂಪಿನ ಎಲ್ಲರ ಪಾಲ್ಗೊಳ್ಳುವಿಕೆ, ರಾಗ, ತಾಳ, ಲಯಬದ್ಧತೆ, ಉಚ್ಚಾರ ಸ್ಪಷ್ಟತೆ, ಭಾವ ಪೂರ್ಣತೆ ಮುಂತಾದ ಸೂಚಕಗಳನ್ನು ಗಮನಿಸುವುದು. ಬಳಿಕ ಅಧ್ಯಾಪಕರು ಹಾಡುವುದು ಅಥವಾ ಧ್ವನಿಸುರುಳಿಯನ್ನು ಕೇಳಿಸುವುದು. ವಿದ್ಯಾರ್ಥಿಗಳು ಹಾಡುವಾಗ ಉಳಿದವರು ಮೌಲ್ಯಮಾಪನ ಮಾಡಿದ ರೀತಿಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ಅಂಕ ನೀಡಿ ಅಭಿನಂದಿಸುವುದು.

## ಚಟುವಟಿಕೆಗಳು

### ಹಾಡಿರಿ

ಪೂರ್ಣ ಪದ್ಯವನ್ನು ಕಂಠಪಾಠ ಮಾಡಿ ಹಾಡಲು ಹೇಳಬಹುದು.

### ಉತ್ತರಿಸಿರಿ

ಪದ್ಯದ ಆಶಯಗ್ರಹಣ ಪ್ರಶ್ನೆಗಳನ್ನು ಕೇಳಿ ಅದಕ್ಕೆ ಉತ್ತರ ಪಡೆಯುವುದರ ಮೂಲಕ ಈ ಚಟುವಟಿಕೆಯನ್ನು ಮುಂದುವರಿಸುವುದು. ಬಳಿಕ ಉತ್ತರ ಬರೆಯಲು ಹೇಳುವುದು. ತಪ್ಪಿದ್ದಲ್ಲಿ ಅಧ್ಯಾಪಕರು ಸರಿಪಡಿಸುವುದು.

### ಕಾರಣ ಕೊಡಿರಿ

ವಿದ್ಯಾರ್ಥಿಗಳಲ್ಲಿ ವೈಯಕ್ತಿಕವಾಗಿ ಅಥವಾ ಗುಂಪಿನಲ್ಲಿ ಇಷ್ಟವಾದ ಸಾಲುಗಳನ್ನು ಗುರುತಿಸಲು ಹೇಳುವುದು. ಪ್ರತೀ ಗುಂಪಿನವರಿಂದ ಸಾಲುಗಳನ್ನು ಹಾಡಿಸುವುದು. ಬಳಿಕ ಆ ಸಾಲುಗಳು ಇಷ್ಟವಾಗಲು ಕಾರಣವೇನೆಂಬುದನ್ನು ಪ್ರಶ್ನಿಸುವುದು ಮತ್ತು ಬರೆದು ಮಂಡಿಸಲು ಹೇಳುವುದು.

ಉದಾ : ‘ಗಾಳಿ ನೀರು ಎಲ್ಲ ಕೊಟ್ಟು ಜಗವ ನಡೆಸ್ಯಾನೆ
ಆ ಸಿರಿಯ ಹಂಚಿಕೊಂಡರೆ ಬಾಳು ಸವಿಜೇನೆ.

ಗಾಳಿ, ನೀರು, ಪ್ರಕಾಶ – ಎಲ್ಲವನ್ನೂ ಸೂರ್ಯನು ನಮಗೆ ನೀಡುತ್ತಾನೆ. ನಮ್ಮ ಭೂಮಿಯಲ್ಲಿರುವ ಸಕಲ ಸಂಪತ್ತಿಗೂ ಸೂರ್ಯ ಕಾರಣನಾಗಿದ್ದಾನೆ. ಆದರೆ ಆ ಸಂಪತ್ತನ್ನು ನಾವು ಸಮಾನವಾಗಿ ಹಂಚಬೇಕು. ಆಗಲೇ ನಮ್ಮ ಜೀವನ ಸವಿಯಾಗುತ್ತದೆ ಎಂಬ ಆಶಯ ಈ ಸಾಲುಗಳಲ್ಲಿದೆ. ಆದುದರಿಂದ ನನಗೆ ಈ ಸಾಲುಗಳು ಇಷ್ಟವಾದುವು.

### ಸ್ವಾರಸ್ಯ ಬರೆಯಿರಿ

ಪದ್ಯದ ಸಣ್ಣ ಸಾಲುಗಳಲ್ಲಿ ವಿಶಾಲವಾದ ಅರ್ಥವನ್ನೂ ಭಾವನೆಗಳನ್ನೂ ಕಾಣಬಹುದು. ಭಾವನೆಗಳನ್ನೂ ವಿಚಾರಗಳನ್ನೂ ಗದ್ಯ ಯಾ ಪದ್ಯ ಸಾಲುಗಳಲ್ಲಿ ಗುರುತಿಸಲು ಈ ಚಟುವಟಿಕೆ ಸಹಕಾರಿಯಾಗಿದೆ. ಸ್ವಾರಸ್ಯದ ಕುರಿತಾದ ಬರಹ ಒಂದೇ ರೀತಿ ಇರಬೇಕೆಂದಿಲ್ಲ. ಅದು ವಿಭಿನ್ನವಾಗಿರಬಹುದು. ಪಾಠಪುಸ್ತಕದಲ್ಲಿ ಕೊಟ್ಟಿರುವ ಪದ್ಯದ ಸಾಲುಗಳ ಸ್ವಾರಸ್ಯವನ್ನು ಗುಂಪುಗಳಲ್ಲಿ ಕುಳಿತು ಬರೆದು ಮಂಡಿಸಲು ಹೇಳುವುದು. ಅಧ್ಯಾಪಕರು ಬರೆದುದನ್ನು ಪ್ರದರ್ಶಿಸಿದ ಬಳಿಕ ಆಶಯಗಳನ್ನು ಕ್ರೋಡೀಕರಿಸಿ ಮಕ್ಕಳು ಪುನಃ ಬರೆಯಲಿ. ಆಗ ಸಾಲಿನ ಪೂರ್ಣ ಆಶಯ, ಅಂತರಾರ್ಥಗಳನ್ನು ಒಳಗೊಂಡಿದೆಯೇ? ಸಾಲಿನಲ್ಲಿರುವ ಭಾಷಾ ಸೌಂದರ್ಯ, ಕವಿಯ ಭಾವನೆಗಳನ್ನು ಸೂಚಿಸಲಾಗಿದೆಯೇ? ಮುಂತಾದ ಸೂಚಕಗಳನ್ನು ಗಮನಿಸಬೇಕು. ಸ್ವಾರಸ್ಯ ಹೀಗೂ ಇರಬಹುದು.

ಸಾಮಾನ್ಯವಾಗಿ ಗಾಳಿ ಬೀಸುವಾಗ ಮರಗಳು ಅಲ್ಲಾಡುತ್ತವೆ. ಇದನ್ನು ಪದ್ಯದಲ್ಲಿ ಮಾವು, ಬೇವು, ತಾಳೆ, ತೆಂಗು ಮುಂತಾದ ಮರಗಳು ಆನಂದದಿಂದ ಜೋಗುಳ ಹಾಡುತ್ತವೆ ಎಂದು ಸೊಗಸಾಗಿ ಹೇಳಲಾಗಿದೆ.

ಸೂರ್ಯನು ಯಾವುದೇ ಭೇದ ಭಾವವಿಲ್ಲದೆ ಎಲ್ಲರಿಗೂ ಒಂದೇ ರೀತಿ ಉಷ್ಣ ಹಾಗೂ ಬೆಳಕನ್ನು ನೀಡುತ್ತಾನೆ. ತನ್ನಲ್ಲಿರುವ ಪ್ರಕಾಶವನ್ನು ಬಚ್ಚಿಡದೆ ಪ್ರತಿಯೊಬ್ಬನಿಗೂ ಸಮಾನವಾಗಿ ನೀಡುತ್ತಾನೆ. ಪ್ರಕೃತಿಯಲ್ಲಿರುವ ಗಾಳಿ, ನೀರು, ಸೂರ್ಯಪ್ರಕಾಶ ಇವೆಲ್ಲವನ್ನೂ ಮಾನವರಾದ ನಾವು ಹಂಚಿ ಅನುಭವಿಸಬೇಕು. ಆಗ ಬಾಳು ಜೇನಾಗುವುದು ಎಂದು ಕವಿ ಈ ಸಾಲುಗಳಲ್ಲಿ ಹೇಳಿದುದು ಸ್ವಾರಸ್ಯಕರವಾಗಿದೆ.

### ಆಶಯ ಬರೆಯಿರಿ

ಪದ್ಯದ ಪೂರ್ಣವಾದ ಆಶಯವನ್ನು ತಿಳಿಯಲು, ಬಾಯ್ದೆರೆಯಾಗಿ ಹೇಳಲು ಸಹಾಯ ಮಾಡುವುದೇ ಈ ಚಟುವಟಿಕೆಯ ಉದ್ದೇಶವಾಗಿದೆ. ಆಶಯ ಬರೆಯುವ ಮೊದಲು,

- ಪದ್ಯವನ್ನು ಹಾಡಿಸಬೇಕು.
- ಪ್ರತಿ ಪಾರಾವನ್ನು ಪ್ರತಿ ಗುಂಪಿಗೂ ನೀಡಿ ಅದರ ಆಶಯವನ್ನು ಬಾಯ್ದೆರೆಯಾಗಿ ಹೇಳಿಸುವುದು, ಬರೆಸುವುದು.
- ಪ್ರತಿ ಗುಂಪಿನವರು ತಾವು ಬರೆದುದನ್ನು ಉತ್ತಮಪಡಿಸಿ ಕ್ರೋಡೀಕರಿಸಿ ಬರೆದುಕೊಳ್ಳಲಿ. ಹೀಗೆ ಪೂರ್ಣ ಪದ್ಯದ ಆಶಯ ಬರೆಯುವುದು.

## ನೇಸರು ಪದ್ಯದ ಆಶಯ

ಸೂರ್ಯೋದಯವಾಗುವಾಗ ಭೂಮಿಯಲ್ಲಿರುವ ಪ್ರತಿಯೊಂದು ಕಣ ಕಣವೂ ಎಚ್ಚರಗೊಳ್ಳುತ್ತದೆ. ಪ್ರಕೃತಿ ಸುಂದರವಾಗಿ ಕಂಗೊಳಿಸುತ್ತದೆ. ಈ ಪದ್ಯದಲ್ಲಿ ಈ ವಿಚಾರವನ್ನು ಬಹಳ ಮನೋಹರವಾಗಿ ಚಿತ್ರಿಸಲಾಗಿದೆ.

ರಥವನ್ನೇರಿ ಬಂದ ಸೂರ್ಯನು ಆಕಾಶದಲ್ಲಿ ನಗುತ್ತಿದ್ದಾನೆ. ಅವನ ನಗುವನ್ನು ನೋಡಿ ಮರಗಿಡಗಳು ಸಂತೋಷದಿಂದ ತೂಗುತ್ತವೆ. ಹಕ್ಕಿಗಳು ಉತ್ಸಾಹದಿಂದ ಹಾಡುತ್ತಿವೆ. ಇಂತಹ ಚೆಲುವನ್ನು ನೋಡಿ ನಾವೂ ಆನಂದಪಡೋಣ.

ಬೇಲಿಯಲ್ಲಿ ಅರಳಿರುವ ಬಣ್ಣ ಬಣ್ಣದ ಹೂಗಳು, ಅವುಗಳಲ್ಲಿ ಕುಳಿತಿರುವ ಬಣ್ಣ ಬಣ್ಣದ ಚಿಟ್ಟೆಗಳು, ಅತ್ತಿತ್ತ ಓಲಾಡುತ್ತಿರುವ ಬಾಳೆಗಿಡಗಳು ಇವೆಲ್ಲವೂ ಮುಂಜಾನೆಯ ಸೌಂದರ್ಯವನ್ನು ಹೆಚ್ಚಿಸಿವೆ. ಕುಳಿತರೂ ನಿಂತರೂ, ನಮ್ಮನ್ನು ಸೆಳೆಯುವ ಬಾಳೆ ತೋಟಗಳು ನಮ್ಮ ಮನಸ್ಸಿಗೆ ಮುದ ನೀಡುತ್ತವೆ.

ಗಾಳಿ ಬೀಸುವಾಗ ಹೊಂಗೆಯ ಟೊಂಗೆಗಳು ತೂಗುತ್ತಾ, ಬಾಗುತ್ತಾ ಕಂಗೊಳಿಸುತ್ತಿವೆ. ನೆಲದಲ್ಲಿ, ನಡೆದಾಡುವಲ್ಲೆಲ್ಲಾ ಹಸಿರು ಹಾಸಿಕೊಂಡಿವೆ. ಆ ಹಾದಿಯಲ್ಲಿ ಅಕ್ಕಪಕ್ಕ ಬಳ್ಳಿಗಳು ಬೆಳೆದಿವೆ. ಸಾಲು ಸಾಲಾಗಿರುವ ಗುಡ್ಡ ಬೆಟ್ಟಗಳು ಮೌನವಾಗಿ ನಗುತ್ತಿವೆ. ಅವುಗಳ ಮೌನಗೀತೆ ಎಲ್ಲರ ಮನಸ್ಸನ್ನು ಸೆಳೆಯುತ್ತಿವೆ. ಮಾವು, ಬೇವು, ತಾಳೆ, ತೆಂಗು ಇತ್ಯಾದಿ ಮರಗಳು ಸಂತೋಷದಿಂದ ಲಾಲಿ ಹಾಡುವಂತಿವೆ. ಸೂರ್ಯನು ಯಾವುದೇ ಮುಚ್ಚುಮರೆಯಿಲ್ಲದೆ ನಿರಂತರವಾಗಿ ಏಕ ಪ್ರಕಾರವಾಗಿ ಎಲ್ಲರಿಗೂ ಬೆಳಕನ್ನು ನೀಡುತ್ತಾನೆ. ಗಾಳಿ, ನೀರು ಎಲ್ಲವನ್ನೂ ಕೊಟ್ಟು ಜಗತ್ತನ್ನು ನಡೆಸುವಾತನು ಸೂರ್ಯ ನಮಗೆ ಸಿಕ್ಕಿದ ಸಂಪತ್ತನ್ನು ನಾವೆಲ್ಲರೂ ಸಮಾನವಾಗಿ ಹಂಚಿಕೊಂಡಾಗ ನಮ್ಮ ಬಾಳು ಜೇನಿನಂತೆ ಮಧುರವಾಗುತ್ತದೆ. ನಾವೆಲ್ಲರೂ ಪ್ರೀತಿಯಿಂದ, ಸ್ನೇಹದಿಂದ ನಗು ನಗುತ್ತಾ ಈ ಸುಖದ ಸಿಹಿಯನ್ನು ಸವಿಯೋಣ.

## ಕವಿತೆ ರಚಿಸಿರಿ

ಮಕ್ಕಳಲ್ಲಿ ಸೃಜನ ಶೀಲತೆಯನ್ನು ಬೆಳೆಸುವುದು ಈ ಚಟುವಟಿಕೆಯ ಉದ್ದೇಶ. ಹಿಂದಿನ ತರಗತಿಗಳಲ್ಲಿ ಇಂತಹ ಚಟುವಟಿಕೆಗಳನ್ನು ಮಾಡಿ ಮಕ್ಕಳಿಗೆ ಅನುಭವವಿದೆ. ಅವರಲ್ಲಿರುವ ಪ್ರತಿಭೆಯನ್ನು ಮುಂದುವರಿಸಿಕೊಂಡು ಹೋಗಬೇಕಾದುದು ಅಗತ್ಯ.

ಕವಿತೆಯನ್ನು ಹೀಗೂ ಮುಂದುವರಿಸಬಹುದು.

### ನಲಿವು

ರಾತ್ರಿ ಕಳೆಯಿತು
ಬೆಳಕು ಹರಿಯಿತು
ಹಕ್ಕಿ ಗೂಡನು ತೊರೆಯಿತು
ಮೂಡು ಬಾನೊಳು
ಕೆಂಪು ಸುರಿಯಿತು
ರವಿಯ ಉದಯವು ಆಯಿತು
ಭೂಮಿ ದೇವಿಯು
ಜಡವ ತೊರೆದಳು
ಜೀವ ಸಂಕುಲ ನಲಿದುವು

**ಸೂಚಕ :** ಶೈಲಿ, ಲಯಬದ್ಧತೆ, ಪ್ರಾಸ, ಶೀರ್ಷಿಕೆ – ಇತ್ಯಾದಿ

## ಶಿಷ್ಟರೂಪ ಬರೆಯಿರಿ

ಯಾವುದೇ ಭಾಷೆಯ ಆಡುಮಾತಿನಲ್ಲಿ ವೈವಿಧ್ಯಗಳಿರುತ್ತವೆ. ಲಿಖಿತರೂಪ ಮತ್ತು ಆಡು ಮಾತಿನ ಶೈಲಿಯಲ್ಲಿ ವ್ಯತ್ಯಾಸಗಳಿರುತ್ತವೆ. ಗ್ರಾಮ್ಯ ಭಾಷೆಯನ್ನು ಶಿಷ್ಟರೂಪಕ್ಕೆ ಬದಲಾಯಿಸುವುದರ ಮೂಲಕ ಇವೆರಡರೊಳಗಿನ ವ್ಯತ್ಯಾಸವನ್ನು ತಿಳಿಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ.

ಮನೆಯಲ್ಲಿ ಮಾತನಾಡುವ ಎಲ್ಲ ಪದಗಳು ಬರವಣಿಗೆಯಲ್ಲಿ ಹಾಗೆಯೇ ಇರುತ್ತವೆಯೇ ಎಂದು ಕೇಳುತ್ತಾ ಅವುಗಳ ವ್ಯತ್ಯಾಸಕ್ಕೆ ಕಾರಣ ತಿಳಿಸುವುದು. ಪದ್ಯದಲ್ಲಿರುವ ಗ್ರಾಮ್ಯ ಪದಗಳತ್ತ ಗಮನ ಸೆಳೆಯುವುದು

## ಗ್ರಾಮ್ಯ ರೂಪಗಳು ಮತ್ತು ಶಿಷ್ಟ ರೂಪಗಳು

| | | |
|---|---|---|
| ಬೀರ್ಯಾವೆ | – | ಬೀರುತ್ತಿವೆ |
| ಮಾಡ್ದೇನೆ | – | ಮಾಡದೇನೆ |
| ಅರಳ್ಯಾವೆ | – | ಅರಳಿವೆ |
| ಕುಂತಾವೆ | – | ಕುಳಿತಿವೆ |
| ಕುಂತರೆ | – | ಕುಳಿತರೆ |
| ಬಳುಕ್ಯಾವೆ | – | ಬಳುಕುತ್ತವೆ |
| ತಂದಾವೆ | – | ತಂದಿವೆ |
| ಬೀಸ್ಯಾವೆ | – | ಬೀಸಿವೆ |
| ಮ್ಯಾಗೆ | – | ಮೇಲೆ |
| ತೆರೆದಾವೆ | – | ತೆರೆದಿವೆ |
| ತಳೆದಾವೆ | – | ತಳೆದಿವೆ |
| ಸೆಳೆದಾವೆ | – | ಸೆಳೆದಿವೆ |
| ಹಾಡ್ಯಾವೆ | – | ಹಾಡಿವೆ |
| ನೀಡ್ಯಾನೆ | – | ನೀಡಿದ್ದಾನೆ |
| ನಡೆಸ್ಯಾನೆ | – | ನಡೆಸಿದ್ದಾನೆ |
| ನಗ್ತಾ | – | ನಗುತ್ತಾ |

## ಟಿಪ್ಪಣಿ ಬರೆಯಿರಿ

ಒಂದು ವಿಷಯದ ಕುರಿತಾಗಿರುವ ವಸ್ತುನಿಷ್ಟವಾದ, ಚುಟುಕಾದ ಬರಹವೇ ಟಿಪ್ಪಣಿ. ಮಗುವಿನಲ್ಲಿ ಟಿಪ್ಪಣಿ ಬರವಣಿಗೆಯ ಸಾಮರ್ಥ್ಯವನ್ನು ಬೆಳೆಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಟಿಪ್ಪಣಿ ಹೀಗೂ ಇರಬಹುದು.

ಸೂರ್ಯನನ್ನು ಜಗತ್ತಿನ ಚೈತನ್ಯದ ಮೂಲ ಎನ್ನುವರು. ಸಕಲ ಜೀವಜಾಲಗಳು ತಮ್ಮ ದೈನಂದಿನ ಚಟುವಟಿಕೆಗಳನ್ನು ನಡೆಸಲು ಅಗತ್ಯವಾದ ಚೈತನ್ಯವು ಸೂರ್ಯನಿಂದ ಲಭಿಸುತ್ತದೆ. ಇದು ವೈಜ್ಞಾನಿಕವಾಗಿಯೂ ಪ್ರತಿಪಾದಿಸಲ್ಪಟ್ಟಿದೆ. ಜಗತ್ತಿನ ಆಹಾರದ ಮೂಲವು ಸಸ್ಯಗಳಾಗಿವೆ. ಸಸ್ಯಗಳಿಗೆ ಆಹಾರ ತಯಾರಿಸಲು ಸೂರ್ಯಪ್ರಕಾಶ ಬೇಕೇ ಬೇಕು. ಹಾಗೆ ತಯಾರಾದ ಆಹಾರವು ಸಕಲ ಜೀವಸಂಕುಲಗಳ ಆಹಾರವಾಗುತ್ತದೆ. ಅಂತೆಯೇ ಹಗಲು – ರಾತ್ರಿ, ಋತು ಭೇದಗಳು, ಹವಾಮಾನ ನಿಯಂತ್ರಣ ಎಲ್ಲವೂ ಸೂರ್ಯನ ಅಧೀನದಲ್ಲಿದೆ. ಹೀಗಿರುವಾಗ ಸೂರ್ಯನಿಲ್ಲದ ಜಗತ್ತನ್ನು ಊಹಿಸಲು ಸಾಧ್ಯವೇ?

**ಸಂಗ್ರಹಿಸಿರಿ**

ಪ್ರಕೃತಿ ಗೀತೆಗಳನ್ನು ಸಂಗ್ರಹಿಸುವುದು, ಹಾಡಿ ಆಸ್ವಾದಿಸುವುದು ಈ ಚಟುವಟಿಕೆಯ ಉದ್ದೇಶ. ಈ ಮೂಲಕ ಬೇರೆ ಬೇರೆ ಕವಿಗಳ, ಶೈಲಿಗಳ ಪರಿಚಯ ಸಾಧ್ಯ. ಪ್ರಕೃತಿ ಗೀತೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಲಿ.

## ಮೋಡಗಳೆ?

ಓಡುವಿರೆಲ್ಲಿಗೆ ಮೋಡಗಳೇ?
ನಿಲ್ಲುವಿರಾ ಒಂದರೆಗಳಿಗೆ
ಕಡಲಿನ ಮನೆಯಲಿ ಬಿಸಿಲಿನ ತಾಪವ
ತಾಳದೆ ಎದ್ದೆದ್ದೋಡುವಿರಾ?

ಗಗನದ ನೀಲಿಯ ಪರದೆಯ ಮೇಲೆ
ಓಡುವ ಸುಂದರ ಮೋಡಗಳೆ
ಆನೆಯ, ಕುದುರೆಯ, ಒಂಟೆಯ ಹೋಲುತ
ಎಲ್ಲಿಗೆ ಮುತ್ತಿಗೆ ಹಾಕುವಿರಿ?

ಗಿರಿಗಳ ಕವಿದು ಮಳೆಯನು ಸುರಿಸಿ
ಹೊಳೆಯೊಲು ಹರಿಯಲು ಹಾರುವಿರಾ
ನೆಲ ನದಿಕೆರೆಗಳ ನಗಿಸೀ ನಲಿಸೀ
ನಾಗಾ ಲೋಟದಿ ಓಡುವಿರಾ

ಉದಯಾಚಲವನು ಬಳಸುವ ಆಟಕೆ
ಭರದಿಂದಲ್ಲಿಗೆ ಓಡುವಿರಾ?
ಕಾಮನ ಬಿಲ್ಲಿನ ಸೇತುವೆ ಕೆಳಗೆ
ಗಂಗಾನದಿಯೊಲು ನುಗ್ಗುವಿರಾ?

ಹುಣ್ಣಿಮೆ ಚಂದ್ರಗೆ ಕಂಬಳಿ ಹೊದಿಸುವ
ಆಟಕೆ ನೀವೆದ್ದೋಡುವಿರಾ?
ಹೊಳೆಯುವ ಸೂರ್ಯನ ಕಣ್ ಕಣ್ ಬಿಡಿಸುವ
ಕಣ್ಣು ಮುಚ್ಚಾಲೆಗೆ ಓಡುವಿರಾ?

**ಡಾ. ಬಿ.ಕೆ. ತಿಮ್ಮಪ್ಪ**

## ಸುಂದರ ದಿನ

ಸುಂದರ ದಿನ ಸುಂದರ ಇನ
ಸುಂದರ ವನ ನೋಡು ಬಾ
ಎಳೆ ಬಿಸಿಲೊಳು ತಿಳಿಗೊಳದೊಳು
ಜಲದಲೆಗಳು ನಲಿನಲಿಯಲು
ನೋಡು ಬಾ, ಕೂಡು ಬಾ
ಬೇಗ ಬಾ ಬಾ ಬಾ
ಜೊತೆ ಇಲ್ಲದೆ ನನ್ನೊಲಿದಿದೆ
ಕಂಪಿಸುತಿದೆ ಕೂಡು ಬಾ
ಹೊಸ ಹಸುರೆಡೆ ತಿಳಿಗೊಳದೆಡೆ
ನಾನಿನ್ನೆಡೆ ನೀ ನನ್ನೆಡೆ
ಹಾಡು ಬಾ ಕೂಡು ಬಾ
ಬೇಗ ಬಾ ಬಾ ಬಾ

**ಕುವೆಂಪು**

# 3. ಪ್ರವಾಸಿಗರ ಸ್ವರ್ಗ ವಯನಾಡು

ಪಾಠ ಪ್ರವೇಶದ ಸಂದರ್ಭದಲ್ಲಿ ಮೈಸೂರು ಅರಮನೆ, ವೃಂದಾವನ, ಶ್ರೀ ರಂಗಪಟ್ಟಣ ಮುಂತಾದ ಪ್ರವಾಸೀ ತಾಣಗಳ ಪರಿಚಯ ನೀಡುವ ಅಡಕ ಮುದ್ರಿಕೆಯನ್ನು ಪ್ರದರ್ಶಿಸಬಹುದು. ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳಂತೆಯೇ ಕೇರಳದಲ್ಲೂ ಪ್ರೇಕ್ಷಣೀಯ ಸ್ಥಳಗಳಿವೆ. ಪ್ರಾಕೃತಿಕವಾಗಿ ಚಾರಿತ್ರಿಕವಾಗಿ, ಪೌರಾಣಿಕವಾಗಿ ಪ್ರಾಧಾನ್ಯವಿರುವ ಹಲವು ಪ್ರೇಕ್ಷಣೀಯ ಸ್ಥಳಗಳನ್ನೊಳಗೊಂಡ ವಯನಾಡು ಈ ಸಾಲಿಗೆ  ಸೇರುತ್ತದೆ ಎಂಬುದನ್ನು ತಿಳಿಸುವುದು. ವಯನಾಡಿನ ಕೆಲವು ಪ್ರವಾಸೀ ತಾಣಗಳ ಪರಿಚಯವನ್ನು ಇಲ್ಲಿ ಕೊಡಲಾಗಿದೆ.

ವಯನಾಡಿನ ಸುಂದರ ದೃಶ್ಯಗಳ ವೀಡಿಯೋ ಪ್ರದರ್ಶನದ ಬಳಿಕ ಅದರ ಕುರಿತು ವಿದ್ಯಾರ್ಥಿಗಳಿಗೆ ಸ್ಥಳಗಳನ್ನು ಗುರುತಿಸುವ ಚಟುವಟಿಕೆಯನ್ನು ನೀಡಬಹುದು.

## ಚಟುವಟಿಕೆಗಳು

### ಪ್ರಶ್ನೆ ತಯಾರಿಸಿರಿ

ಪ್ರಶ್ನೋತ್ತರಗಳ ಮೂಲಕ ಆಶಯ ಗ್ರಹಣ ಸಾಧ್ಯ. ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬರೆಯುವಂತೆಯೇ, ಆಶಯಗಳು ಉತ್ತರವಾಗಿರಲು ಯಾವ ರೀತಿಯ ಪ್ರಶ್ನೆಗಳನ್ನು ಕೇಳಬೇಕು? ಪ್ರಶ್ನೆಗಳು ಹೇಗಿರಬೇಕು ಎಂಬುದನ್ನು ಈ ಚಟುವಟಿಕೆಯ ಮೂಲಕ ವಿದ್ಯಾರ್ಥಿಗಳು ತಿಳಿದುಕೊಳ್ಳಲು ಸಾಧ್ಯ. ಪ್ರಶ್ನೆಗಳು 'ಎಲ್ಲಿ, ಯಾರು?, ಯಾವಾಗ?, ಯಾಕೆ? ಹೇಗೆ?' ಇತ್ಯಾದಿ ಅಂಶಗಳನ್ನು ಒಳಗೊಂಡಿರಬೇಕು ಎಂಬುದನ್ನು ಅಧ್ಯಾಪಕರು ತಿಳಿಸಬೇಕು.

ಗುಂಪುಗಳಲ್ಲಿ ಪ್ರಶ್ನೆ ತಯಾರಿಸಲು ಹೇಳುವುದು. ಒಂದು ಗುಂಪು ತಯಾರಿಸಿದ ಪ್ರಶ್ನೆಗಳಿಗೆ ಉಳಿದ ಗುಂಪಿನವರು ಸ್ಪಷ್ಟವಾದ ಉತ್ತರ ನೀಡಲು ಸಾಧ್ಯವಾಯಿತೇ? ಎಂಬುದನ್ನು ಪರಿಶೀಲಿಸಿ ಉತ್ತಮವಾಗಿ ಪ್ರಶ್ನೆ ತಯಾರಿಸಿದ ಗುಂಪನ್ನು ಅಭಿನಂದಿಸಬಹುದು. ಮಕ್ಕಳೇ ಸ್ವಯಂ ಮೌಲ್ಯಮಾಪನ ಮಾಡಬೇಕು. ಇದರಿಂದ ಮಕ್ಕಳಲ್ಲಿ ಪ್ರಶ್ನೆಗಳನ್ನು ತಯಾರಿಸುವ ಸಾಮರ್ಥ್ಯವನ್ನು ಬೆಳೆಸಬಹುದು.

ಉದಾ : ಎಲ್ಲಿಂದ ಪೂರ್ವಕ್ಕೆ ಸಂಚರಿಸಿದರೆ ವಯನಾಡನ್ನು ತಲುಪಬಹುದು? ಎಂದು ಮಕ್ಕಳು ಪ್ರಶ್ನೆ ಕೇಳಿದರೆ ಅದನ್ನು ಅಧ್ಯಾಪಕರು ಸರಿಪಡಿಸಿ ಬರೆಯಲು ಹೇಳಬಹುದು.

- ವಯನಾಡನ್ನು ಹೇಗೆ ತಲುಪಬಹುದು?
- ವಯನಾಡು ಯಾವ ರಾಜ್ಯದಲ್ಲಿದೆ? ಇತ್ಯಾದಿ

### ವಾಕ್ಯ ರಚಿಸಿರಿ

ನೀಡಿರುವ ಪದಗಳನ್ನು ಬಳಸಿ ಅರ್ಥಪೂರ್ಣವಾದ ವಾಕ್ಯಗಳನ್ನು ರಚಿಸುವ ಸಾಮರ್ಥ್ಯವನ್ನು ಬೆಳೆಸಲು ಈ ಚಟುವಟಿಕೆಯನ್ನು ಕೊಡಲಾಗಿದೆ. ಅಗತ್ಯವಿದ್ದಲ್ಲಿ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ವಾಕ್ಯ ರಚಿಸುವಂತೆ ಅಧ್ಯಾಪಕರು ಗಮನಿಸಬೇಕು.

ಉದಾ : ನಾಗರತ್ನ ಪರ್ವತವನ್ನು ಏರಿದಳು. (ಇಲ್ಲಿ 'ಅನ್ನು' ಎನ್ನುವ ವಿಭಕ್ತಿ ಪ್ರತ್ಯಯ ಬಂದಿದೆ)

ಗೋಪಾಲ ಪ್ರವಾಸಕ್ಕೆ ಹೋದನು. ('ಕ್ಕೆ' ಎನ್ನುವ ವಿಭಕ್ತಿ ಪ್ರತ್ಯಯ) ಸಫಿಯ ನದಿಯನ್ನು ದಾಟಿದಳು

ಹೀಗೆ ವಿದ್ಯಾರ್ಥಿಗಳು ಸಾಧ್ಯವಿರುವಷ್ಟು ವಾಕ್ಯಗಳನ್ನು ರಚಿಸಲಿ.

### ಮನವಿಪತ್ರ ರಚಿಸಿರಿ

ನಮ್ಮ ದೈನಂದಿನ ವ್ಯವಹಾರಗಳಲ್ಲಿ ಮನವಿ ಪತ್ರಕ್ಕೆ ಬಹಳ ಪ್ರಾಧಾನ್ಯ ಇದೆ. ನಿತ್ಯ ಜೀವನದಲ್ಲಿ ಅನೇಕ ಬಾರಿ ಬಳಸಬೇಕಾಗಿ ಬರುವ ಈ ಭಾಷಾ ವ್ಯವಹಾರ ರೂಪವನ್ನು ಮಕ್ಕಳು ತಿಳಿದುಕೊಳ್ಳಬೇಕಾದುದು ಅಗತ್ಯ. ಈ ಉದ್ದೇಶವನ್ನು ಈಡೇರಿಸಲು 'ಮನವಿ ಪತ್ರ ರಚಿಸಿರಿ' ಎಂಬ ಚಟುವಟಿಕೆಯನ್ನು ನೀಡಲಾಗಿದೆ. ವಿಳಾಸ ಬರೆಯುವ ಕ್ರಮ, ಸಂಬೋಧನೆ, ಲೇಖನ ಚಿಹ್ನೆ – ಮುಂತಾದ ಮುಖ್ಯಾಂಶಗಳು ಇರುವಂತೆ ಗಮನಿಸಬೇಕಾದುದು ಅಗತ್ಯ.

ಇವರಿಂದ

ರಾಜಾರಾಂ ರಾವ್
ಮುಖ್ಯೋಪಾಧ್ಯಾಯರು,
ಸರಕಾರೀ ಹಿರಿಯ ಪ್ರಾಥಮಿಕ ಶಾಲೆ,
ಅಡೂರು

ಇವರಿಗೆ

ಮಾನ್ಯ ಅರಣ್ಯಾಧಿಕಾರಿಗಳು,
ಬೇಗೂರು ವನ್ಯಮೃಗ ಸಂರಕ್ಷಣಾ ಕೇಂದ್ರ,
ಬೇಗೂರು ವಯನಾಡು ಜಿಲ್ಲೆ.

ಸ್ವಾಮೀ,

ವಿಷಯ : ಬೇಗೂರು ವನ್ಯ ಮೃಗ ಸಂರಕ್ಷಣಾ ಕೇಂದ್ರದ ಭೇಟಿಗಾಗಿ ಅನುಮತಿ ಕೋರಿಕೆ.

......

ನಮ್ಮ ಶಾಲೆಯಿಂದ ಸುಮಾರು 25 ಮಂದಿ ವಿದ್ಯಾರ್ಥಿಗಳು ಹಾಗೂ ಮೂವರು ಅಧ್ಯಾಪಕರನ್ನು ಒಳಗೊಂಡ ತಂಡವು ದಿನಾಂಕ 25.3.2015 ರಂದು ಬೇಗೂರು ವನ್ಯಮೃಗ ಸಂರಕ್ಷಣಾ ಕೇಂದ್ರವನ್ನು ಸಂದರ್ಶಿಸುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ತಾವು ನಮ್ಮ ಈ ಕೋರಿಕೆಯನ್ನು ಮನ್ನಿಸಿ ದಯವಿಟ್ಟು ನಮಗೆ ಅನುಮತಿ ನೀಡಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ.

ಇತಿ
ತಮ್ಮ ವಿಶ್ವಾಸಿ,
ಸಹಿ
ಮುಖ್ಯೋಪಾಧ್ಯಾಯರು
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಡೂರು

ಸ್ಥಳ : ಅಡೂರು
ದಿನಾಂಕ : 02.03.2015

**ಘೋಷಣ ವಾಕ್ಯ ರಚಿಸಿರಿ**

ಕೆಲವು ವಿಚಾರಗಳನ್ನು ಸಂಕ್ಷಿಪ್ತವಾಗಿಯೂ, ಆಕರ್ಷಕವಾಗಿಯೂ, ಓದುಗರ ಆಸಕ್ತಿ ಕೆರಳಿಸುವಂತೆ ಬರೆಯಬಹುದು. ಈ ಉದ್ದೇಶವನ್ನು ಈಡೇರಿಸಲು ಘೋಷಣ ವಾಕ್ಯ ಬರೆಯುವ ಚಟುವಟಿಕೆಯನ್ನು ನೀಡಲಾಗಿದೆ. ಸೃಜನ ಶೀಲತೆಗೆ ಇಲ್ಲಿ ಹೆಚ್ಚಿನ ಅವಕಾಶವಿದೆ.

ಘೋಷಣ ವಾಕ್ಯಗಳು ಸಂಕ್ಷಿಪ್ತವಾಗಿರಬೇಕು. ಅಲ್ಲಿನ ಆಶಯ ಸ್ಪಷ್ಟವಾಗಿರಬೇಕು. ಪ್ರಾಸ ಬದ್ಧವಾಗಿದ್ದರೆ ಹೆಚ್ಚು ಆಕರ್ಷಕವಾಗಿರುತ್ತದೆ. ಘೋಷಣ ವಾಕ್ಯದಲ್ಲಿ ಕನಿಷ್ಠ ಎರಡು ಸಾಲುಗಳಿರಬೇಕು ಮುಂತಾದ ವಿಚಾರಗಳನ್ನು ಅಧ್ಯಾಪಕರು ಮಕ್ಕಳ ಗಮನಕ್ಕೆ ತರಬೇಕು.

**ಅರಣ್ಯವನ್ನು ಉಳಿಸಿ**
**ವನ್ಯಮೃಗಗಳನ್ನು ರಕ್ಷಿಸಿ**

**ಅರಣ್ಯವು ಪ್ರಾಣಿಗಳ ಮನೆ**
**ನಮಗ್ಯಾಕೆ ಅದು ಸುಮ್ಮನೆ**

ತ್ಯಜಿಸಿ ಬಿಡಿ ನಿಮ್ಮ ಕತ್ತಿ ಕೊಡಲಿಗಳನ್ನು
ಬದುಕಲು ಬಿಡಿ ವನ್ಯ ಮೃಗಪಕ್ಷಿಗಳನ್ನು

ಅರಣ್ಯ ಸಂಪತ್ತಿನ ನಾಶ
ವನ್ಯಮೃಗಗಳಿಗದುವೇ ಪಾಶ

ಅರಣ್ಯವು ಬೆಳೆಯಲಿ
ಪ್ರಾಣಿಸಂಕುಲ ಉಳಿಯಲಿ

### ಸ್ಥಳ ಪರಿಚಯ ಬರೆಯಿರಿ

ಮಕ್ಕಳು ತಾವು ಸಂದರ್ಶಿಸಿದ ಸ್ಥಳದ ಕುರಿತು ಸ್ಥಳಪರಿಚಯ ಲೇಖನ ಬರೆಯುವಾಗ ಉತ್ತಮ ಪದ ಪ್ರಯೋಗ, ವಾಕ್ಯಗಳ ಕ್ರಮಬದ್ಧ ಜೋಡಣೆ, ವಸ್ತುನಿಷ್ಠತೆ, ಶೈಲಿ ಮುಂತಾದವುಗಳ ಕಡೆಗೆ ಹೆಚ್ಚು ಗಮನ ನೀಡುವಂತೆ ಮಾಡಬೇಕು.

### ಪದಬಂಧ ಪೂರ್ತಿಗೊಳಿಸಿರಿ

ಇದು ಮಕ್ಕಳಲ್ಲಿ ಚಿಂತನಾ ಶಕ್ತಿ ಬೆಳೆಸುವುದರೊಂದಿಗೆ ಮೋಜನ್ನುಂಟುಮಾಡುವ ಚಟುವಟಿಕೆಯಾಗಿದೆ. ಅಧ್ಯಾಪಕರು ಸೂಚನೆಗಳನ್ನು ನೀಡುವಾಗ ಆರಂಭದ ಹಂತದಲ್ಲಿ ಹೆಚ್ಚಿನ ವಿಶದೀಕರಣ ಕೊಡಬಹುದು.

## 'ಸಿರುವಾಣಿ' ಯಾತ್ರೆ

ಏಷ್ಯಾದ ಅತಿ ದೊಡ್ಡ ಶುದ್ಧಜಲ ಸರೋವರ ಇರುವ ಸ್ಥಳ – ಸಿರುವಾಣಿ. ಪಾಲಕ್ಕಾಡ್‌ನಿಂದ (ಪಾಲ್ಘಾಟ್) ಸುಮಾರು 40 ಕಿ.ಮೀ. ದೂರದಲ್ಲಿರುವ ಸಿರುವಾಣಿ ದಟ್ಟ ಅರಣ್ಯ ಪ್ರದೇಶವಾಗಿದೆ. ಕಾಡು ಎಂದರೆ ನಿಜವಾಗಿಯೂ ಏನು ಎಂಬುದನ್ನು ತಿಳಿದುಕೊಳ್ಳಬೇಕಾದರೆ 'ಸಿರುವಾಣಿ' ಗೆ ಬನ್ನಿ. ಹಗಲಿನಲ್ಲೇ ಜೀರುಂಡೆಗಳ ಮೊರೆತ ಕೇಳುವ ಈ ತಾಣದಲ್ಲಿ ಕಿರುಜಲಪಾತ, ಸರೋವರ ಮುಂತಾದವೂ ಇವೆ. ಕೇರಳದಲ್ಲೇ ಇರುವ ಈ ಶುದ್ಧಜಲ ಸರೋವರದ ಒಂದು ಹನಿ ನೀರನ್ನೂ ಅಲ್ಲಿನ ಜನ ಉಪಯೋಗಿಸುವುದಿಲ್ಲ ಎಂದರೆ ನಿಮಗೆ ಖಂಡಿತಾ ಅಚ್ಚರಿಯಾದೀತು.

ಏಷ್ಯಾದ ಅತಿ ದೊಡ್ಡ ಶುದ್ಧ ಜಲ ಸರೋವರ ಇರುವ ಸ್ಥಳವಾಗಿದೆ ಸಿರುವಾಣಿ. ಪಕ್ಕದಲ್ಲೇ ಇರುವ ಕೊಯಂಬತ್ತೂರು ಜಿಲ್ಲೆಯ ಜನರ ಬಾಯಾರಿಕೆ ನೀಗಿಸುವ ಸರೋವರ ಇಲ್ಲಿನದು. ಮಳೆಗಾಲದಲ್ಲಿ ಇಲ್ಲಿನ ಸರೋವರ ತುಂಬಿ ತುಳುಕಿದರೂ ಅದು ಹರಿದು ತಮಿಳುನಾಡಿನ ಭವಾನಿ ನದಿಯನ್ನು ಸೇರುತ್ತದೆ.

ಬ್ರಿಟಿಷ್ ಆಡಳಿತದಲ್ಲಿ ಈ ಪ್ರದೇಶದಲ್ಲಿ ಶುದ್ಧ ಜಲ ಸರೋವರದ ಕುಡಿಯುವ ನೀರಿನ ಪದ್ಧತಿ ಶುರುವಾಗಿತ್ತು. ಈ ಸರೋವರದ ಹೆಚ್ಚಿನ ಭಾಗಗಳೂ ಕೇರಳ ಅರಣ್ಯ ಇಲಾಖೆಯ ಅಧೀನದಲ್ಲಿ ಬರುತ್ತದೆ. ಸಿರುವಾಣಿಯು ಪಾಲಕ್ಕಾಡ್‌ನಿಂದ ಸುಮಾರು 40 ಕಿ.ಮೀ. ದೂರದಲ್ಲಿದೆ. ಕೇರಳಮೇಡ್ ಎಂಬಲ್ಲಿ ಕೇರಳ ಹಾಗೂ ತಮಿಳುನಾಡುಗಳ ಗಡಿ ಬರುತ್ತದೆ. ಇಲ್ಲಿಂದ ಕೊಯಂಬತ್ತೂರ್ ಸುಮಾರು 30 ಕಿ.ಮೀ ದೂರದಲ್ಲಿದೆ. ಈ ದಾರಿಯಾಗಿ ತಮಿಳುನಾಡಿನಿಂದ ಯಾತ್ರೆಗಳು ಇಲ್ಲಿಗೆ ಬರುತ್ತಿರುತ್ತಾರೆ. ಶಿಂಗಪ್ಪಾರ ದಾರಿಯಾಗಿ ಕೇರಳದ ಯಾತ್ರಿಗಳೂ ಬರುತ್ತಾರೆ. ಕಾಡಿನ ದೃಶ್ಯಗಳೂ, ವನ್ಯಮೃಗಗಳ ಸಂಚಾರವನ್ನೂ ಇಲ್ಲಿನ ವಿಶಾಲವಾದ ಸರೋವರದ ಸಮೀಪದಲ್ಲಿ ಕಾಣಬಹುದು. ನಗರದ ಜಂಜಾಟಗಳಿಂದ ಬೇಸತ್ತ ಜನರಿಗೆ ಮನಃಶಾಂತಿ ಸಿಗುವ ಪ್ರಶಾಂತ ತಾಣವಿದು. ಮನ್ನಾರ್ ಕಾಡ್ ಫಾರೆಸ್ಟ್ ವಿಭಾಗದ 'ಅಗಳಿ' ರೇಂಜಿನಲ್ಲಿ ಬರುತ್ತದೆ ಈ ಸರೋವರ ಪ್ರದೇಶ. ಶಿಂಗಪ್ಪಾರ ಚೆಕ್‌ಪೋಸ್ಟ್ ವರೆಗೆ ಮಾತ್ರ ಖಾಸಗಿ ವಾಹನಗಳಿಗೆ ಪ್ರವೇಶ. ಅಲ್ಲಿಂದ ಮುಂದೆ ಅರಣ್ಯ ಇಲಾಖೆಯ ವಾಹನಗಳು ಪ್ರವಾಸಿಗರನ್ನು ಕೊಂಡೊಯ್ಯುತ್ತವೆ. ಗೈಡ್‌ಗಳು ಬೇಕಿದ್ದರೂ ಲಭ್ಯ. ಪರಿಸರ ಮಾಲಿನ್ಯ ಆಗದಿರುವಂತೆ ಮಾಡಲು ಕೇರಳ ಸರಕಾರದ ಪ್ರವಾಸೋದ್ಯಮ ಇಲಾಖೆ ಈ ವ್ಯವಸ್ಥೆ ಏರ್ಪಡಿಸಿದೆ.

ಸಿರುವಾಣಿ ಪ್ರದೇಶದಲ್ಲಿ ವಸತಿ ವ್ಯವಸ್ಥೆ ಇಲ್ಲದೇ ಇರುವುದು ಬಹುದೊಡ್ಡ ಕೊರತೆಯಾಗಿದೆ. ಬ್ರಿಟಿಷರ ಕಾಲದಲ್ಲಿ ಕಟ್ಟಿಸಿದಂತಹ ಬಂಗಲೆಯೊಂದಿದ್ದರೂ ಅರಣ್ಯ ಇಲಾಖೆಯು ವಸತಿಗಾಗಿ ಪೂರ್ವಾನುಮತಿಯಿಲ್ಲದೆ ಯಾರಿಗೂ ಇದನ್ನು

ಕೊಡುವುದಿಲ್ಲ. ಕೇರಳ ರಾಜ್ಯದ ಹಲವಾರು ಗಣ್ಯರು ತಮ್ಮ ರಜಾದಿನಗಳಲ್ಲಿ ಈ ಪಟ್ಟಿಯಾರ್ ಬಂಗಲೆಯನ್ನು ವಸತಿಗಾಗಿ ಆರಿಸಿಕೊಂಡು ಸಿರುವಾಣಿ ಪ್ರದೇಶದಲ್ಲಿ ಪ್ರವಾಸಕ್ಕಾಗಿ ಬರುತ್ತಾರೆ. ನೀರಾವರಿ ಇಲಾಖೆಯವರು ಕಟ್ಟಿಸಿದ್ದ ಒಂದು ಡಾರ್ಮಿಟರಿಯನ್ನು ಈಗ ಮುಚ್ಚಲಾಗಿದೆ. ಇದಕ್ಕೆ ಅರಣ್ಯ ಇಲಾಖೆಯ ಒಪ್ಪಿಗೆ ಇಲ್ಲದಿರುವುದೇ ಕಾರಣ.

ಡಾರ್ಮಿಟರಿ ಇದ್ದಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿ ಕಾಡಿನ ಸಹಜ ಸೌಂದರ್ಯ ಹಾಗೂ ಪರಿಸರ ನಾಶವಾಗುವ ಭೀತಿಯಿಂದ ಅದನ್ನು ನಿಷೇಧಿಸಲಾಗಿದೆ ಎನ್ನುತ್ತಾರೆ ಅರಣ್ಯ ಇಲಾಖೆಯ ಅಧಿಕಾರಿಗಳು ಮನುಷ್ಯರ ವಸತಿ ಹೆಚ್ಚಾಗಿ ಇಲ್ಲದಿರುವ ಕಾರಣ ಇಲ್ಲಿ ಆನೆ, ಹುಲಿ ಚಿರತೆ ಮುಂತಾದ ಹಲವು ಬಗೆಯ ವನ್ಯ ಮೃಗಗಳನ್ನು ಕಾಣಬಹುದು. ಅರಣ್ಯ ಇಲಾಖೆ ಹಾಗೂ ನೀರಾವರಿ ಇಲಾಖೆಯ ಸಿಬ್ಬಂದಿಗಳಲ್ಲದೆ ಇಲ್ಲಿ ವಾಸಿಸುವ ಜನರೆಂದರೆ 'ಮುಡುವರ್' ಎಂಬ ಆದಿವಾಸಿ ಸಮುದಾಯದವರು. ಈ ಸಮುದಾಯದ ಸುಮಾರು 20 ಕುಟುಂಬಗಳು ಇಲ್ಲಿವೆ. ಕಾಳು ಮೆಣಸು, ಹಿಪ್ಪಲಿ ಮುಂತಾದುವನ್ನು ಕೃಷಿಮಾಡಿ ಜೀವನ ಸಾಗಿಸುವ ಈ ಜನರು ಜೇನು ಕೃಷಿಯಲ್ಲೂ ಪಳಗಿದವರು. ಹಸಿರುವಾಣಿಯ ಎತ್ತರದ ಗುಡ್ಡೆಗಳಲ್ಲಿ ತಮಿಳುನಾಡು ಸರಕಾರ ನಿರ್ಮಿಸಿದ ನಿರೀಕ್ಷಣಾ ಗೋಪುರಗಳಿಂದ ನೋಡಿದಾಗ ಸುತ್ತಲಿನ ಅರಣ್ಯ, ಸರೋವರ ಹಾಗೂ ಕೊಯಮತ್ತೂರು ನಗರದ ನೋಟಗಳನ್ನು ಕಾಣಬಹುದು.

ಹೋಗುವುದು ಹೇಗೆ? ಕೇರಳ ತಮಿಳುನಾಡುಗಳ ಗಡಿಯಲ್ಲಿನ ಪಾಲಕ್ಕಾಡ್ ಜಿಲ್ಲೆಯಲ್ಲಿದೆ ಸಿರುವಾಣಿ. ಪಾಲಕ್ಕಾಡ್ – ಮಣ್ಣಾರ್ ಕಾಡ್ ಮಾರ್ಗದಲ್ಲಿ ಇಡಕುರುಶ್ಶಿಯಿಂದ ಪಾಲಕ್ಕಯಂ ಶಿಂಗಪ್ಪಾರ ದಾರಿಯಲ್ಲಿ ಸಾಗಿದರೆ ಸಿರುವಾಣಿ ತಲುಪಬಹುದು. ಹತ್ತಿರದ ಪಟ್ಟಣವೆಂದರೆ ಕೊಯಮತ್ತೂರು. ರೈಲ್ವೇ, ಬಸ್ ಹಾಗೂ ವಿಮಾನಗಳ ಮೂಲಕ ಕೊಯಮತ್ತೂರು ತಲುಪಿದರೆ ಅಲ್ಲಿಂದ ಸಿರುವಾಣಿಯನ್ನು ತಲುಪಬಹುದು. (ಇದು ದಟ್ಟವಾದ ಅರಣ್ಯ ಪ್ರದೇಶವಾದ ಕಾರಣ ಮೊಬೈಲ್ ನೆಟ್‌ವರ್ಕ್ ಸಿಗದು. ನೆಟ್‌ವರ್ಕ್ ಸಿಗದಿದ್ದರೂ ಮನಃಶಾಂತಿ ಸಿಗುವುದು ಖಂಡಿತ.)

## 4. ನೀನಾರಿಗಾದೆಯೋ ಎಲೆ ಮಾನವ

ವಿದ್ಯಾರ್ಥಿಗಳೊಡನೆ ಸಾಕು ಪ್ರಾಣಿಗಳ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾ ಲಘು ಚರ್ಚೆ ನಡೆಸುವುದು.

- ನಾವು ಸಾಕುವ ಪ್ರಾಣಿ, ಪಕ್ಷಿಗಳು ಯಾವುವು?
- ನಾವು ಇವುಗಳನ್ನು ಸಾಕುವ ಉದ್ದೇಶವೇನು?
- ಇವುಗಳಿಂದ ನಮಗೆ ಏನೆಲ್ಲಾ ಪ್ರಯೋಜನಗಳಿವೆ?

ಹೀಗೆ ಜಾನುವಾರುಗಳಿಂದ ನಮಗಿರುವ ಪ್ರಯೋಜನಗಳ ಬಗ್ಗೆ ಚರ್ಚಿಸುವುದು. ವಿದ್ಯಾರ್ಥಿಗಳಿಂದ ಹಾಡಿಸುವುದು. ನೀನಾರಿಗಾದೆಯೋ ಪದ್ಯದ ಧ್ವನಿಸುರುಳಿ ಕೇಳಿಸುವುದು. ಬಳಿಕ ಮಕ್ಕಳು ಪದ್ಯದಲ್ಲಿ ಬಂದಿರುವ ನವೀನ ಪದಗಳನ್ನು ಗುರುತಿಸಿ ಬರೆಯಲಿ.

### ಉತ್ತರಿಸಿರಿ

ಇಂತಹ ಚಟುವಟಿಕೆಯನ್ನು ಹಿಂದಿನ ತರಗತಿಗಳಲ್ಲಿ ಮಾಡಿದಂತೆ ಮಾಡಬಹುದು. ಪ್ರಶ್ನೆಗಳಿಗೆ ಮಕ್ಕಳಿಂದ ಉತ್ತರ ಹೇಳಿಸಿ ಆನಂತರ ಬರೆಯುವುದು.

### ಸಾಲುಗಳನ್ನು ಗುರುತಿಸಿರಿ

ಕೆಲವು ಸಾಲುಗಳ ಆಶಯವನ್ನು ಕರಿಹಲಗೆಯಲ್ಲಿ ಬರೆಯುವುದು ಪದ್ಯದಲ್ಲಿ ಆ ಸಾಲುಗಳನ್ನು ಗುರುತಿಸಲು ಹೇಳುವುದು. ಹೆಚ್ಚು ಹೆಚ್ಚು ಆಶಯಗಳನ್ನು ಅಧ್ಯಾಪಕರು ಮಕ್ಕಳಿಂದ ಹೇಳಿಸಿ ಬರೆಯುವುದರಿಂದ ಅವರಿಗೆ ಈ ಚಟುವಟಿಕೆಯನ್ನು ಸುಲಭವಾಗಿ ಮಾಡಲು ಸಾಧ್ಯವಾಗುತ್ತದೆ.

### ಆಶಯ ಬರೆಯಿರಿ

ಕವನದ ಆಶಯವನ್ನು ಬರೆಯುವಂತಹ ಚಟುವಟಿಕೆಯನ್ನು ವಿದ್ಯಾರ್ಥಿಗಳು ಈ ಹಿಂದೆಯೇ ಮಾಡಿದ್ದಾರೆ. ಈ ಕವನದ ಆಶಯವನ್ನು ವೈಯಕ್ತಿಕವಾಗಿ ಅಥವಾ ಗುಂಪಿನಲ್ಲಿ ಬರೆದು ಮಂಡಿಸಲಿ. ಚರ್ಚೆಯ ಮೂಲಕ ಉತ್ತಮಪಡಿಸಿ ಬರೆದು ಮಂಡಿಸಲಿ. ಒಂದು ಗುಂಪಿನವರು ಮಂಡಿಸುವಾಗ ಇತರ ಗುಂಪಿನವರು ಮೌಲ್ಯನಿರ್ಣಯ ಸೂಚಕಗಳನ್ನು ಕಂಡುಕೊಂಡು ಮೌಲ್ಯಮಾಪನ ನಡೆಸಲಿ.

### ಮೌಲ್ಯಮಾಪನ ಸೂಚಕಗಳು

- ಕವಿತೆಯ ಆಶಯವನ್ನು ಸಮಗ್ರವಾಗಿ ಬರೆಯಲಾಗಿದೆ.
- ಆಶಯವನ್ನು ಅನುಕ್ರಮವಾಗಿ ಬರೆಯಲಾಗಿದೆ.
- ಭಾಷಾ ನಿಯಮಗಳಿಗನುಸಾರವಾಗಿ ಸೂಕ್ತ ಶೈಲಿಯಲ್ಲಿ ಬರೆಯಲಾಗಿದೆ – ಇತ್ಯಾದಿ

ಅಧ್ಯಾಪಕರ ಸಹಾಯದಿಂದ ಲೇಖನವನ್ನು ಇನ್ನಷ್ಟು ಉತ್ತಮಪಡಿಸಲಿ.

### ಪದ್ಯದ ಆಶಯ

ಹಸುವು ಹಲವು ರೀತಿಯಲ್ಲಿ ಮನುಜನಿಗೆ ಮತ್ತು ಪ್ರಕೃತಿಗೆ ಸಹಕಾರಿಯಾಗಿದೆ. ಅದರ ಸೆಗಣಿಯನ್ನು ಒಣಗಿಸಿದರೆ ಉರಿಸುವ ಬೆರಣಿಯಾಗುತ್ತದೆ. ಅದನ್ನು ಉರಿಸಿದಾಗ ದೊರಕುವ ಬೂದಿಯು ಶ್ರೇಷ್ಠವಾದ ವಿಭೂತಿಯಾಗುತ್ತದೆ. ಹಾಗೆಯೇ ಉಪಯೋಗಿಸಿದರೆ ಉತ್ತಮ ಗೊಬ್ಬರವಾಗುತ್ತದೆ.

ಹಸುವಿನ ಹಾಲು ಉತ್ತಮ ಆಹಾರ. ಅದಕ್ಕೆ ಹೆಪ್ಪು ಹಾಕಿದರೆ ಮೊಸರಾಗುತ್ತದೆ. ಅದನ್ನು ಕಡೆದರೆ ಬೆಣ್ಣೆಯೂ, ಬೆಣ್ಣೆಯಿಂದ ತುಪ್ಪವೂ ದೊರಕುತ್ತವೆ.

ಹಸುವೊಂದು ಅಲ್ಲಿ ಇಲ್ಲಿ ಅಲೆದು ಹುಲ್ಲು, ಕಸಗಳನ್ನು ಮೇದು ಅಮೃತಸಮಾನವಾದ ಹಾಲನ್ನು ನಮಗೆ ನೀಡುತ್ತದೆ. ಆದರೆ ಕೃತಘ್ನನಾದ ಮಾನವ ಸೊಗಸಾದ ಹಾಲನ್ನು ಸೇವಿಸಿ ತನ್ನ ಕೆಲಸಕ್ಕಾಗಿ ಹಸುವನ್ನು ಹಿಂಸಿಸಿ ಬಳಸಿಕೊಳ್ಳುತ್ತಾನೆ.

ಹಸುವಿನ ಚರ್ಮವನ್ನು ಉಪಯೋಗಿಸಿ ನೀರನ್ನು ದಾಟುವ ತೆಪ್ಪವನ್ನೂ, ಭೇರಿ ವಾದ್ಯವನ್ನೂ ತಯಾರಿಸಹುದು. ಮಾತ್ರವಲ್ಲ, ಮಾನವನ ಕಾಲನ್ನು ರಕ್ಷಿಸುವ ಚಪ್ಪಲಿಯನ್ನು ಮಾಡಬಹುದು. ಹಸುವಿನ ಚರ್ಮದಿಂದ ಮಾಡಿದ ವಾದ್ಯವನ್ನು ಆಯವರಿತು ಹೊಡೆದರೆ ಸುಮಧುರ ನಾದವು ಹೊಮ್ಮಿ ಇತರರನ್ನು ಸಂತಸಪಡಿಸುತ್ತದೆ. ಎತ್ತನ್ನು ಭೂಮಿ ಉಳಲು, ಭಾರ ಹೊರಲು ಉಪಯೋಗಿಸುತ್ತಾರೆ. ಧಾನ್ಯದ ತೆನೆಯಿಂದ ಕಾಳುಗಳನ್ನು ಬೇರ್ಪಡಿಸಲೂ ಇವುಗಳ ಸಹಾಯಬೇಕು. ಈ ಮುಗ್ಧ ಜೀವಿಗಳ ಸಹಾಯದಿಂದ ನೆಲವು ಹಸಿರಿನಿಂದ ನಗುವ, ನಳನಳಿಸುವ ನಂದನವನವಾಗುತ್ತದೆ.

ತಾನು ಇಷ್ಟೆಲ್ಲಾ ಸಹಾಯಗಳನ್ನು ಮಾಡುತ್ತಿರುವಾಗ ಬುದ್ಧಿವಂತನಾದ ಮನುಜನು ಯಾರಿಗಾದರೂ ಏನನ್ನಾದರೂ ಒಳಿತನ್ನು ಮಾಡಿದ್ದಾನೆಯೇ? ಎಂದು ಹಸುವು ಪ್ರಶ್ನಿಸುತ್ತದೆ.

## ಪ್ರಬಂಧ ರಚಿಸಿರಿ

ಭಾಷಾ ಕಲಿಕೆಯಲ್ಲಿ ಪ್ರಬಂಧ ರಚನೆಗೆ ಪ್ರಧಾನ ಪಾತ್ರವಿದೆ. ಮಕ್ಕಳಿಗೆ ಸರಳ ಪ್ರಬಂಧವನ್ನು ಬರೆಯಲು ತರಬೇತಿ ನೀಡುವ ಅಗತ್ಯವಿದೆ. ಪ್ರಬಂಧ ರಚನೆಗೆ ಪೂರಕವಾದ ಮಾಹಿತಿಗಳನ್ನು ವಾಚನಾಲಯಗಳಿಂದ ಪತ್ರಿಕೆ, ದೃಶ್ಯ – ಶ್ರಾವ್ಯ ಮಾಧ್ಯಮಗಳಿಂದ ಸಂಗ್ರಹಿಸಲು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿ ಕೊಡಬೇಕು. ಮಾಹಿತಿಗಳನ್ನು ಕಲೆಹಾಕಿ ವ್ಯವಸ್ಥಿತವಾದ ಪ್ರಬಂಧ ರಚನೆ ಮಾಡುವ ಕೌಶಲವು ಮಕ್ಕಳಲ್ಲಿ ಬೆಳೆಯಬೇಕು.

**ಪ್ರಬಂಧದಲ್ಲಿ ಒಳಗೊಂಡಿರಬೇಕಾದ ಅಂಶಗಳು :**

- ಸೂಕ್ತ ಶೀರ್ಷಿಕೆ ಇರಬೇಕು.
- ಪೀಠಿಕೆ, ವಿಷಯ ವಿಸ್ತಾರ, ಉಪಸಂಹಾರಗಳಿರಬೇಕು.
- ವಿಷಯದ ಸಮರ್ಥನೆ ಇರಬೇಕು.
- ಉಪ ಆಶಯಗಳನ್ನು ಪಾರಾಗಳಾಗಿ ಬರೆದಿರಬೇಕು.
- ಆಶಯ ಪೂರ್ಣವಾಗಿರಬೇಕು.
- ಸೃಜನ ಶೀಲತೆಗೆ ಹೆಚ್ಚು ಅವಕಾಶ ನೀಡಬೇಕು.
- ಗಾದೆ, ನುಡಿಗಟ್ಟುಗಳನ್ನು ಸೂಕ್ತವಾಗಿ ಬಳಸಬಹುದು.

## ಸಾಕುಪ್ರಾಣಿಗಳು ಮತ್ತು ಮಾನವ

ಮಾನವ ಮತ್ತು ಪ್ರಾಣಿಗಳೊಳಗಿನ ಸಂಬಂಧ ಅನಾದಿಕಾಲದಿಂದಲೇ ಇತ್ತು. ಮಹಾಭಾರತ ಕತೆಯಲ್ಲಿ ನಾಯಿಯೊಂದು ಪಾಂಡವರ ಒಡನಾಡಿಯಾಗಿತ್ತೆಂಬ ವಿಚಾರ ನಮಗೆಲ್ಲಾ ತಿಳಿದಿದೆ. ಮುಂದೆ ನಾಗರಿಕತೆ ಹೆಚ್ಚಿದಂತೆ ಮನುಷ್ಯನು ಕೃಷಿ, ವ್ಯವಸಾಯ, ಯುದ್ಧ, ವ್ಯಾಪಾರ, ಆಹಾರ, ಸಂಚಾರ ಮೊದಲಾದ ಅಗತ್ಯಗಳಿಗೆ ಪ್ರಾಣಿಗಳನ್ನು ಸಾಕಲು ಪ್ರಾರಂಭಿಸಿದನು.

ತನ್ನ ಸ್ವಭಾವಕ್ಕೆ ವಿರುದ್ಧವಾದ ಮತ್ತು ಹೊಂದಿಕೊಳ್ಳದ ಜೀವನ ರೀತಿ ಮತ್ತು ಸ್ವಭಾವವನ್ನು ಹೊಂದಿದ್ದ ಪ್ರಾಣಿಗಳನ್ನು ಪಳಗಿಸುವುದು ಆರಂಭದಲ್ಲಿ ಮಾನವನಿಗೊಂದು ಸವಾಲಾಗಿತ್ತು. ಆದರೆ ಕಾಲಕ್ರಮೇಣ ನಾಯಿ,ದನ, ಆಡು, ಬೆಕ್ಕು, ಎಮ್ಮೆ, ಎತ್ತು ಕತ್ತೆ, ಕೋಣ, ಕುದುರೆ, ಹಂದಿ ಮುಂತಾದ ಪ್ರಾಣಿಗಳನ್ನು ತನ್ನ ಕೈಕೆಳಗೆ ತಾನು ಸೂಚಿಸಿದಂತೆ ನಡೆಯುವ ಜೀವಿಗಳನ್ನಾಗಿ ಮಾರ್ಪಾಡು ಮಾಡಲು ಮಾನವನಿಗೆ ಸಾಧ್ಯವಾಯಿತು. ಬೃಹತ್ ಗಾತ್ರದ ಕಾಡುಪ್ರಾಣಿ ಆನೆಯೂ ಇದಕ್ಕೆ ಹೊರತಲ್ಲ.

ಲಭ್ಯ ಮಾಹಿತಿಗಳ ಪ್ರಕಾರ ಕ್ರಿ.ಪೂ. 5000 ಮತ್ತು 6000 ವರ್ಷಗಳ ನಡುವೆ 'ಅಲ್ಪಕಾ' ಎಂಬ ಸಸ್ಯಾಹಾರಿ ಸಸ್ತನಿಯನ್ನು 'ಆಂಡೆಸ್' ಎಂಬ ಸ್ಥಳದಲ್ಲಿ ಪಳಗಿಸಿದ್ದರಂತೆ. ಇದರಿಂದ ತುಪ್ಪಳ ದೊರೆಯುತ್ತಿತ್ತು. ಅನಂತರ ಆಗ್ನೇಯ ಏಷ್ಯಾದಲ್ಲಿ 'ಬಾಂಟಂಗ್' ಎಂಬ ಸಸ್ತನಿಯನ್ನು ಮಾಂಸ, ಹಾಲು ಹಾಗೂ ದುಡಿತಕ್ಕೆ ಉಪಯೋಗಿಸುತ್ತಿದ್ದರೆಂಬ ಮಾಹಿತಿಯಿದೆ.

ಪ್ರಸ್ತುತ ಸಾಕುಪ್ರಾಣಿಗಳು ಜಾನುವಾರುಗಳೆಂದು ಕರೆಯಲ್ಪಡುತ್ತವೆ. ಹಸು ಭಾರತೀಯರ ಜೀವನದಲ್ಲಿ ಹಾಸುಹೊಕ್ಕಾಗಿರುವ ಒಂದು ಸಾಕುಪ್ರಾಣಿಯಾಗಿದೆ. ಹಸುವನ್ನು ಪ್ರಧಾನವಾಗಿ ಹಾಲಿಗಾಗಿ ಸಾಕುತ್ತಾರೆ. ಅದರ ಸೆಗಣಿ ಉತ್ತಮ ಗೊಬ್ಬರವಾಗಿದೆ. ಎತ್ತುಗಳನ್ನು ಬೇಸಾಯಕ್ಕೆ ಬಳಸುತ್ತಾರೆ. ವಸ್ತುಗಳ ಸಾಗಾಟ, ಗದ್ದೆಯನ್ನು ಉಳುವುದು, ಗಾಣವನ್ನು ತಿರುಗಿಸುವುದು ಮುಂತಾದ ಕೆಲಸಗಳಲ್ಲಿ ಇವುಗಳದ್ದು ಎತ್ತಿದ ಕೈ. ಇವುಗಳನ್ನು ಪಳಗಿಸುವಾಗ ಕೆಲವೊಮ್ಮೆ ಹಿಂಸೆ ನೀಡುವ ಸಂದರ್ಭಗಳೂ ಇರುತ್ತವೆ.

ರಾಜ ಮಹಾರಾಜರ ಕಾಲದಲ್ಲಿ ಪ್ರಧಾನವಾಗಿ ಕುದುರೆ, ಆನೆ, ಕತ್ತೆ, ಒಂಟೆಗಳನ್ನು ಪಳಗಿಸುತ್ತಿದ್ದುದು ತಿಳಿದುಬರುತ್ತದೆ. ಭಾರ ಹೊರುವುದು, ಯುದ್ಧ ಮೊದಲಾದವುಗಳಿಗೆ ಇವುಗಳ ಬಳಕೆಯಾಗುತ್ತಿತ್ತು. ರಾಜರಿಗೆ ಪಟ್ಟದಾನೆ, ಪಟ್ಟದ ಕುದುರೆ ಮೊದಲಾದ ವ್ಯವಸ್ಥೆಗಳಿದ್ದುವು. ಈ ಸಂದರ್ಭದಲ್ಲಿ ಮಾನವನ ಅತ್ಯುತ್ತಮ ಒಡನಾಡಿಯಾಗಿರುವ ನಾಯಿಯ ಬಗ್ಗೆ ಹೇಳದಿದ್ದರೆ

ತಪ್ಪಾಗುವುದು. ನಾಯಿ ನಾವು ಅತ್ಯಂತ ಹೆಚ್ಚು ವಿಶ್ವಾಸವಿರಿಸಬಹುದಾದ ಸಾಕುಪ್ರಾಣಿಯಾಗಿದೆ. ಇಂದು ದೇಶ ವಿದೇಶಗಳಲ್ಲಾಗಲೀ ಪೇಟೆಗಳಲ್ಲಾಗಲೀ, ಹಳ್ಳಿಗಳಲ್ಲಾಗಲೀ ಯಾವುದಾದರೂ ಒಂದು ತಳಿಯ ಶ್ವಾನವನ್ನು ತಮ್ಮ ಮನೆಯಲ್ಲಿ ಸಾಕದವರು ತುಂಬಾ ವಿರಳ ಎಂದು ಹೇಳಬಹುದು. ಮನೆ ಕಾಯುವಲ್ಲಿ, ಕಳ್ಳರನ್ನು ಪತ್ತೆ ಹಚ್ಚುವಲ್ಲಿ ಇದರ ಜಾಣ್ಮೆ ಅಸಾಮಾನ್ಯವಾದುದು. ನಾಯಿ ಮನೆ ಹೊರಗಿನ ಬಂಟನಾದರೆ ಬೆಕ್ಕು ಮನೆಯೊಳಗಿನ ಬಂಟನಾಗಿದೆ. ಇದಿಲ್ಲದ ಮನೆಗಳೇ ವಿರಳ.

ಹೀಗೆ ಸಾಕು ಪ್ರಾಣಿಗಳ ಬಗ್ಗೆ ಬರೆಯ ಹೊರಟರೆ ಮಹಾಪ್ರಬಂಧವಾಗಬಹುದು. ಏನೇ ಇರಲಿ, ಪ್ರಾಚೀನ ಕಾಲದಲ್ಲೇ ನಮ್ಮ ಜೀವನ ಸಂಗಾತಿಗಳಾಗಿದ್ದ ಇವುಗಳನ್ನು ಜರೆಯಬಾರದು, ಮರೆಯಬಾರದು, ಅವು ಮನುಕುಲಕ್ಕೆ ಮಾಡಿದ ಉಪಕಾರವನ್ನು ಇಂತಿಷ್ಟೇ ಎಂದು ಲೆಕ್ಕ ಹಾಕಲು ಸಾಧ್ಯವಿಲ್ಲ. ಅಂದೂ – ಇಂದೂ – ಎಂದೆಂದೂ ಈ ಜೀವಿಗಳ ಸಹಾಯವಿಲ್ಲದೆ ನಮಗೆ ಜೀವನದಲ್ಲಿ ಮುಂದುವರಿಯಲು ಸಾಧ್ಯವಿಲ್ಲವೆಂಬುದು ನಿತ್ಯ ಸತ್ಯ.

## ಅಭಿಪ್ರಾಯ ಟಿಪ್ಪಣಿ ಬರೆಯಿರಿ

ವಿಚಾರವೊಂದರ ಬಗ್ಗೆ ಅಭಿಪ್ರಾಯವನ್ನು ಪ್ರಕಟಿಸುವುದು ಎಲ್ಲರ ಸಹಜ ಸ್ವಭಾವ. ಆದರೆ ಪರಿಣಾಮಕಾರಿಯಾಗಿ ಅಭಿಪ್ರಾಯ ಮಂಡಿಸುವ ಸಾಮರ್ಥ್ಯ ಮಕ್ಕಳಿಗೆ ಬರಬೇಕು. ಅದಕ್ಕಾಗಿ ಈ ಚಟುವಟಿಕೆಯನ್ನು ಬಳಸಿಕೊಳ್ಳಬಹುದು.

- ಕಳಪೆಯಾಗಿಹ ನೆಲವ ನಗುವ ತೋಪನು ಮಾಳ್ಪೆ' –
- ಹಸು ಹೇಳಿದ ಈ ಮಾತನ್ನು ನೀವು ಒಪ್ಪುವಿರಾ? ಯಾಕೆ?
- ಹಸು ಹೇಳಿದ ಈ ಮಾತಿನ ಆಶಯವೇನು?

ಎಂಬ ಪ್ರಶ್ನೆಗಳ ಮೂಲಕ ಚರ್ಚೆಯನ್ನು ನಡೆಸಬೇಕು. ಚರ್ಚೆಯ ಆಧಾರದಲ್ಲಿ ವಿದ್ಯಾರ್ಥಿಗಳು ಟಿಪ್ಪಣಿಯನ್ನು ತಯಾರಿಸಲಿ.

## ಹೀಗೊಂದು ಅಭಿಪ್ರಾಯ ಟಿಪ್ಪಣಿ

'ಕಳಪೆಯಾಗಿಹ ನೆಲವ ನಗುವ ತೋಪನು ಮಾಳ್ಪೆ!' – ಇದು ಹಸುವೊಂದು ತನ್ನ ಶ್ರೇಷ್ಠತೆಯೇನೆಂಬುದನ್ನು ತಿಳಿಸಲು ಮಾನವನಿಗೆ ಹೇಳುವ ಮಾತಾಗಿದೆ.

ಹಸುವಿನ ಈ ಮಾತು ಪೂರ್ಣ ಸತ್ಯಾಂಶಗಳಿಂದ ಕೂಡಿದೆ. ಬಂಜರು ಭೂಮಿಯನ್ನು ಹಸುವಿನ ಸಹಾಯದಿಂದ ಹಸನು ಮಾಡಬಹುದು. ಸಸ್ಯಗಳಿಗೆ ಪೋಷಕಾಂಶಯುಕ್ತವಾದ ಅದರ ಸೆಗಣಿಯನ್ನು ಗೊಬ್ಬರವಾಗಿ ಬಳಸಬಹುದು. ಆ ಮೂಲಕ ಹಡಿಲು ಭೂಮಿಯಲ್ಲಿ ನಳನಳಿಸುವ ಹಸಿರು ಬೆಳೆದು ಅದು ನಗುವಂತೆ ಮಾಡಬಹುದು. ಈ ಎಲ್ಲಾ ಕಾರಣಗಳಿಂದ ಹಸು ಒಂದು ಉಪಯುಕ್ತ ಜೀವಿಯಾಗಿದೆ.

## ಪದಸೂರ್ಯ ರಚಿಸಿರಿ

ಪರ್ಯಾಯ ಪದಗಳ ಬಗ್ಗೆ ವಿದ್ಯಾರ್ಥಿಗಳು ಈ ಮೊದಲೇ ತಿಳಿದಿರುತ್ತಾರೆ. ಅನುಭವದ ಆಧಾರದಲ್ಲಿ ಮಕ್ಕಳು ಪದಸೂರ್ಯವನ್ನು ಪೂರ್ತಿಗೊಳಿಸಲಿ. ಮನೆಕೆಲಸವಾಗಿ ಈ ಚಟುವಟಿಕೆಯನ್ನು ನೀಡಬಹುದು. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ಮಾಡುವುದು.



**ಪೂರಕ ಓದಿಗೆ**

## ನನ್ನ ದೇಹದ ಬೂದಿ

ನನ್ನ ದೇಹದ ಬೂದಿ ಗಾಳಿಯಲಿ ತೂರಿ ಬಿಡಿ
ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ
ಬೂದಿ – ಗೊಬ್ಬರದಿಂದ ತೆನೆಯೊಂದು ನೆಗೆದು ಬರೆ
ಧನ್ಯವಾಯಿತು ಹುಟ್ಟು ಸಾವಿನಲ್ಲಿ.
ನನ್ನ ದೇಹದ ಬೂದಿ – ಹೊಳೆಯಲ್ಲಿ ಹರಿಯಬಿಡಿ
ತೇಲಿ ಬೀಳಲಿ ಮೀನ ಬಾಯಿಯಲ್ಲಿ
ಮುಷ್ಠಿ ಬೂದಿಯ ತಿಂದು ಪುಷ್ಟವಾಗಲು ಮೀನು
ಧನ್ಯವಾಯಿತು ಹುಟ್ಟು ಸಾವಿನಲ್ಲಿ

ನನ್ನ ದೇಹದ ಬೂದಿ – ಕೊಳದಲ್ಲಿ ಬೀರಿ ಬಿಡಿ
ತಾವರೆಯು ದಿನದಿನವು ಅರಳುವಲ್ಲಿ
ಬೂದಿ ಕೆಸರನು ಕೂಡಿ ಹೊಸ ಪಂಕಜವು ಮೂಡೆ
ಧನ್ಯವಾಯಿತು ಹುಟ್ಟು ಸಾವಿನಲ್ಲಿ

ಸತ್ತ ಮೇಲಾದರೂ ದೇಹ ಸೇವೆಗೆ ನಿಲಲಿ
ಇಂದಿನೀ ನರಜನ್ಮ ಸೇವೆಯೆಂದು
ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ ದೇಹ
ನಿಜ ಸೇವೆ ಗೈಯಲಿಕೆ ಬರಲಿ ಮುಂದು

**ದಿನಕರ ದೇಸಾಯಿ**

### ಮೌಲ್ಯನಿರ್ಣಯ ಚಟುವಟಿಕೆಗಳು

1. ನೀವು ಕಂಡ ಸುಂದರವಾದ ಹೂದೋಟವನ್ನು ವರ್ಣಿಸಿ ಬರೆಯಿರಿ.
2. 'ಚೆಲುವು ಎಲ್ಲಿ?' ಎಂಬ ಪದ್ಯವನ್ನು ಓದಿ ನೀಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

## ಚೆಲುವು ಎಲ್ಲಿ?

ನಿತ್ಯ ಬೆಳಗು ಬೈಗಿನಲ್ಲಿ
ಬಾನು ಬುವಿಯನಪ್ಪುವಲ್ಲಿ
ಅರುಣರಾಗವೊಪ್ಪುವಲ್ಲಿ
ಚೆಲುವು ತುಂಬಿ ನಿಂತಿದೆ

ಹಗಲು ಹೊನ್ನ ಬೆಳಕಿನಲ್ಲಿ
ಇರುಳ ಹಾಲು ಜೊನ್ನದಲ್ಲಿ
ಮಿಂದ ಜಗದ ಹಾಸದಲ್ಲಿ
ಚೆಲುವು ತುಂಬಿ ನಿಂತಿದೆ

ಸುತ್ತ ಕವಿದ ಕತ್ತಲಲ್ಲಿ
ನಭದ ಮೇಲು ಜೊಂಪದಲ್ಲಿ
ಸಾಲು ಸೊಡರು ಮಿನುಗುವಲ್ಲಿ
ಚೆಲುವು ತುಂಬಿ ನಿಂತಿದೆ

(ಬುವಿ – ಭೂಮಿ; ಜೊನ್ನ – ಬೆಳದಿಂಗಳು; ನಭ – ಆಕಾಶ
ಸೊಡರು – ಸಣ್ಣದೀಪ; ಜೊಂಪ – ಮಂಟಪ,
ಅರುಣರಾಗ – ಸೂರ್ಯೋದಯದ ಮೊದಲು ಆಕಾಶದಲ್ಲಿ ಕಾಣುವ ಕೆಂಬಣ್ಣ.)

- 'ಬುವಿಯನಪ್ಪುವಲ್ಲಿ' ಎಂಬ ಪದವನ್ನು ವಿಂಗಡಿಸಿ ಬರೆಯಿರಿ.
- 'ಚೆಲುವು ಎಲ್ಲಿ?' ಕವಿತೆಯ ಎರಡನೇ ಪಾರಾದ ಸ್ವಾರಸ್ಯ ಬರೆಯಿರಿ.

3. ನಿಮ್ಮ ಶಾಲೆಯ ಸುತ್ತುಮುತ್ತು ನೆರಳಿನ ಮರಗಳನ್ನು ಬೆಳೆಸಲು ವಿವಿಧ ಜಾತಿಯ ಗಿಡಗಳನ್ನು ವಿತರಿಸಬೇಕೆಂದು ಕೇಳಿಕೊಳ್ಳುತ್ತಾ ಜಿಲ್ಲಾ ಅರಣ್ಯ ಇಲಾಖೆಯ ಅಧಿಕೃತರಿಗೆ ಮನವಿ ಪತ್ರವನ್ನು ಬರೆಯಿರಿ.

4. ವಿಚಾರಗೋಷ್ಠಿಯಲ್ಲಿ ಮಂಡಿಸಲು 'ಪ್ರಕೃತಿಯ ರಕ್ಷಣೆ ಹೇಗೆ?' ಎಂಬ ವಿಷಯದಲ್ಲಿ ಒಂದು ಪ್ರಬಂಧವನ್ನು ಸಿದ್ಧಪಡಿಸಿರಿ.

* * *

# 2. ಒಂದಾಗಿ ಬಾಳೋಣ

ವಿದ್ಯಾರ್ಥಿಗಳಲ್ಲಿ ಕೇವಲ ಓದುವ ಮತ್ತು ಬರೆಯುವ ಸಾಮರ್ಥ್ಯವನ್ನು ಬೆಳೆಸುವುದೊಂದೇ ಶಿಕ್ಷಣದ ಉದ್ದೇಶವಲ್ಲ. ಉತ್ತಮ ನಡತೆ, ಆತ್ಮವಿಶ್ವಾಸ, ಮಾತೃಭೂಮಿಯ ಮೇಲೆ ಭಕ್ತಿ, ಪರಸ್ಪರ ಪ್ರೀತಿ, ಗೌರವ, ಸಹಕಾರ ಮನೋಭಾವ ಮುಂತಾದ ಉತ್ತಮ ಗುಣ ಅವರಲ್ಲಿ ಮೂಡಿಸುವುದೂ ಶಿಕ್ಷಣದ ಉದ್ದೇಶವಾಗಿದೆ. ಸುಸಂಸ್ಕೃತ ಪ್ರಜೆಗಳಾಗಿ ಬಾಳಲು ಇಂತಹ ಗುಣಗಳನ್ನು ಪ್ರತಿಯೊಬ್ಬನೂ ಮೈಗೂಡಿಸಿಕೊಳ್ಳಬೇಕು. ಈ ಮೂಲಕ ನಮ್ಮ ದೇಶದ ಕೀರ್ತಿಯು ಎಲ್ಲೆಡೆ ಹರಡುವಂತಾಗಬೇಕು. ಸಮಾಜದಲ್ಲಿರುವ ಭೇದ ಭಾವಗಳು ತೊಲಗಬೇಕು. ಇಂತಹ ಉಪ ಆಶಯಗಳನ್ನು 'ಒಂದಾಗಿ ಬಾಳೋಣ' ಎಂಬ ಘಟಕವು ಒಳಗೊಂಡಿದೆ.

ನಮ್ಮ ದೇಶವನ್ನು ಪರಕೀಯರ ಕೈಯಿಂದ ಮುಕ್ತ ಗೊಳಿಸಲು ಅನೇಕ ಹೋರಾಟಗಳು ನಡೆದಿವೆ. ಅಸಾಧಾರಣ ದೇಶಭಕ್ತಿ, ಗೌರವಗಳನ್ನು ಮೈಗೂಡಿಸಿಕೊಂಡ ಮಹಾನ್ ವ್ಯಕ್ತಿಗಳಲ್ಲಿ 'ಝಾನ್ಸಿರಾಣಿ ಲಕ್ಷ್ಮೀ ಬಾಯಿ' ಯೂ ಒಬ್ಬಳು. ಮಕ್ಕಳಿಗೆ 'ದೇಶಭಕ್ತಿ' ಯನ್ನು ಮನದಟ್ಟು ಮಾಡಲು ಅವಳ ಕುರಿತಾದ 'ಕೆಚ್ಚಿನ ಕಿಡಿ' ಎಂಬ ಕತೆಯನ್ನು ಈ ಘಟಕದಲ್ಲಿ ಅ ನೀಡಲಾಗಿದೆ. 'ವಿವಿಧತೆಯಲ್ಲಿ ಏಕತೆ' ಯನ್ನು ಸಾರುವ ಸಂದೇಶವನ್ನು ಒಳಗೊಂಡಿರುವ 'ಐದು ಬೆರಳು ಕೂಡಿ' ಪದ್ಯವನ್ನೂ, 'ಒಗ್ಗಟ್ಟಿನಲ್ಲಿ ಬಲವಿದೆ', 'ನಾವೆಲ್ಲರೂ ಸಮಾನರು' ಎಂಬ ಭಾವನೆಯನ್ನು ಮೂಡಿಸಲು 'ಸಮಬಾಳು' ಎಂಬ ಲೇಖನವನ್ನೂ ನೀಡಲಾಗಿದೆ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ-ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.
- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಸೂಕ್ತ ಸೂಚಕಗಳನ್ನು ರೂಪಿಸಿ ಸ್ವಂತ ಹಾಗೂ ಇತರರ ರಚನೆಗಳ ಮೌಲ್ಯನಿರ್ಣಯಿಸುವುದು.

- ಕಥೆ, ಕವಿತೆಗಳಲ್ಲಿ ಕಥಾಪಾತ್ರಗಳ ಮಾನಸಿಕ ಸ್ಥಿತಿ, ಅವುಗಳಿಗಿರುವ ಸ್ಥಾನ ಇತ್ಯಾದಿಗಳನ್ನು ಗುರುತಿಸಿ ಬಾಯ್ದೆರೆಯಾಗಿ ಮತ್ತು ಲಿಖಿತವಾಗಿ ಪಾತ್ರಚಿತ್ರಣ ಮಾಡುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸುವುದು ಮತ್ತು ವಾಚಿಕವಾಗಿ ಮಂಡಿಸುವುದು.
- ದೃಶ್ಯ-ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

## ಯೂನಿಟ್ ಗ್ರಿಡ್

**ಯೂನಿಟ್ 2 : ಒಂದಾಗಿ ಬಾಳೋಣ** ಸಮಯ : 7+5 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಕೆಚ್ಚಿನ ಕಿಡಿ | • ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರದ ಬಗ್ಗೆ ತಿಳಿಯುವುದು.<br>• ಐತಿಹಾಸಿಕ ಕತೆಗಳಲ್ಲಿ ಆಸಕ್ತಿ ಮೂಡಿಸುವುದು.<br>• ದೇಶ ಪ್ರೇಮವನ್ನು ಮೂಡಿಸುವುದು.<br>• ಸೃಜನಾತ್ಮಕ ರಚನೆಗಳನ್ನು ರಚಿಸುವುದು.<br>• ಪರಸ್ಪರ ಸಹಾಯ, ಸಹಕಾರ ಮನೋಭಾವಗಳನ್ನು ಬೆಳೆಸುವುದು. | • ಚರ್ಚಿಸುವುದು<br>• ಉತ್ತರಿಸುವುದು<br>• ಸಂದರ್ಭ ತಿಳಿಯುವುದು.<br>• ಅಭಿಪ್ರಾಯ ಬರೆಯುವುದು.<br>• ವ್ಯಕ್ತಿ ಪರಿಚಯ<br>• ಘೋಷಣಾ ವಾಕ್ಯ ಬರೆಯುವುದು.<br>• ವಿಂಗಡಿಸಿ ಬರೆಯುವುದು.<br>• ವಾಕ್ಯ ರಚಿಸುವುದು<br>• ವಾಕ್ಯ ಬದಲಾಯಿಸಿ ಬರೆಯುವುದು.<br>• ಪದವಿಹಾರ | • ಐತಿಹಾಸಿಕ ಕಥೆಗಳು<br>• ಚಿತ್ರಗಳು<br>• ಪದಬಂಧ<br>• ದೇಶಭಕ್ತಿ ಗೀತೆಗಳು | • ಅಭಿಪ್ರಾಯ ಟಿಪ್ಪಣಿ<br>• ವ್ಯಕ್ತಿ ಪರಿಚಯ<br>• ಘೋಷಣಾ ವಾಕ್ಯ |
| 2. ಐದು ಬೆರಳು ಕೂಡಿ | • ರಾಷ್ಟ್ರೀಯ ಭಾವೈಕ್ಯವನ್ನು ಮೂಡಿಸುವುದು.<br>• ದೇಶ ಪ್ರೇಮವನ್ನು ಮೂಡಿಸುವುದು.<br>• ವಿವಿಧತೆಯಲ್ಲಿ ಏಕತೆ ಎಂಬ ಭಾವ ಮೂಡಿಸುವುದು.<br>• ಭಾಷಾ ಸತ್ಯಾಂಶಗಳನ್ನು ಕರಗತಮಾಡುವುದು. | • ಹಾಡುವುದು<br>• ಉತ್ತರಿಸುವುದು<br>• ಆಶಯ ಬರೆಯುವುದು.<br>• ಕವನ ಬರೆಯುವುದು<br>• ಹೋಲಿಕೆಯ ಟಿಪ್ಪಣಿ<br>• ಪರ್ಯಾಯ ಪದಗಳನ್ನು ಗುರುತಿಸುವುದು.<br>• ದೇಶ ಭಕ್ತಿ ಗೀತೆಗಳ ಸಂಗ್ರಹ | • ಹಾಡಿನ ಸಿ.ಡಿ.<br>• ಚಿತ್ರಗಳು<br>• ದೇಶಭಕ್ತಿ ಗೀತೆಗಳು, ಕತೆಗಳು | • ಆಶಯ<br>• ಕವನ |

# ಯೂನಿಟ್ ಗ್ರಿಡ್

**ಯೂನಿಟ್ 2 : ಒಂದಾಗಿ ಬಾಳೋಣ** ಸಮಯ : 7 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3. ಸಮಬಾಳು | • ಭಾರತದಲ್ಲಿ ಎಲ್ಲಾ ಧರ್ಮಗಳು ಸಮಾನವೆಂದು ತಿಳಿದುಕೊಳ್ಳುವುದು.<br>• ಸಂವಿಧಾನದ ಹಕ್ಕಿನ ಬಗ್ಗೆ ತಿಳಿಯುವುದು.<br>• ಪ್ರಜಾಪ್ರಭುತ್ವದ ಬಗ್ಗೆ ತಿಳಿಯುವುದು. | • ಚರ್ಚಿಸುವುದು<br>• ಉತ್ತರಿಸುವುದು<br>• ಪ್ರಬಂಧ ತಯಾರಿಸುವುದು.<br>• ಕರಪತ್ರ ರಚಿಸುವುದು.<br>• ಪತ್ರಿಕಾ ವಾರ್ತೆ ಬರೆಯುವುದು<br>• ವಿರೋದಾರ್ಥ ಪದಗಳನ್ನು ಗುರುತಿಸುವುದು. | • ಪ್ರಬಂದಗಳು<br>• ಮಾದರಿ ಕರಪತ್ರ<br>• ಘೋಷಣವಾಕ್ಯ | • ಕರಪತ್ರ<br>• ಪ್ರಬಂಧ<br>• ಪತ್ರಿಕಾ ವಾರ್ತೆ |
| | | | | |

# 1. ಕೆಚ್ಚಿನ ಕಿಡಿ

## ಚಟುವಟಿಕೆಗಳು

ಐದನೇ ತರಗತಿಯಲ್ಲಿ ಓದಿರುವ 'ವೀರ ವನಿತೆ ಓಬವ್ವ' ಎಂಬ ದೇಶಪ್ರೇಮವನ್ನು ಬಿಂಬಿಸುವ ಹಾಡನ್ನು ವಿದ್ಯಾರ್ಥಿಗಳಿಗೆ ನೆನಪಿಸುವುದು. ಇದೇ ರೀತಿ ದೇಶರಕ್ಷಣೆಗಾಗಿ ಹೋರಾಡಿದ ವೀರರ ಮತ್ತು ವೀರ ಮಹಿಳೆಯರ ಬಗ್ಗೆ ಪ್ರಶ್ನಿಸುತ್ತಾ ಲಘು ಚರ್ಚೆ ನಡೆಸುವುದು. ಅನಂತರ ವೀರ ವನಿತೆ 'ಝಾನ್ಸಿ ರಾಣಿ' ಯ ಕತೆಯನ್ನು ತಿಳಿಯೋಣ ಎನ್ನುತ್ತಾ ಪಾಠ ಪ್ರವೇಶ ಮಾಡುವುದು.

## ಚರ್ಚಿಸಿರಿ

ಮಕ್ಕಳಲ್ಲಿ ನಿರ್ದಿಷ್ಟವಾದ ವಿಷಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಎಗ್ಗಿಲ್ಲದೆ ಪ್ರಕಟಪಡಿಸುವ ಸಾಮರ್ಥ್ಯವನ್ನು ಬೆಳೆಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಕೊಟ್ಟಿರುವ ವಿಷಯದ ಬಗ್ಗೆ ವಿದ್ಯಾರ್ಥಿಗಳು ತಂತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಿ. ಅನಂತರ ಅಧ್ಯಾಪಕರು ಆ ಅಭಿಪ್ರಾಯಗಳನ್ನು ಕ್ರೋಡೀಕರಿಸಲಿ.

## ಕ್ರೋಡೀಕರಣ ಹೀಗೂ ಇರಬಹುದಲ್ಲವೇ!

ಅಗಾಧವಾದ ದೇಶಪ್ರೇಮವು ಝಾನ್ಸಿರಾಣಿಯಲ್ಲಿ ಹೊರಹೊಮ್ಮುತ್ತಿದ್ದ ಪ್ರಕಾಶವಾಗಿತ್ತು. ಆದರೆ ಝಾನ್ಸಿ ಯುದ್ಧದಲ್ಲಿ ಆಕೆ ಮರಣ ಹೊಂದಿದಾಗ ಆ ಪ್ರಕಾಶವು ನಂದಿ ಹೋಯಿತು. ಗಂಗಾದಾಸರು ಹೇಳಿದಂತೆ 'ದೇಶಪ್ರೇಮವೆಂಬುದು ನಾಶವಾಗುವ ಪ್ರಕಾಶವಲ್ಲ. ಬೂದಿ ಮುಚ್ಚಿದ ಕೆಂಡ ಗಾಳಿಗೆ ಹೇಗೆ ಪ್ರಜ್ವಲಿಸುತ್ತದೋ ಹಾಗೆಯೇ ದೇಶಪ್ರೇಮವೆಂಬ ಪ್ರಭೆಯು ಎಂದಿಗೂ ನಂದುವುದಿಲ್ಲ. ಅದು ಅಮರವಾಗಿದ್ದು ಸಂದರ್ಭ ಸಿಕ್ಕಾಗಲೆಲ್ಲಾ ಇತರರ ಮೂಲಕ ಪ್ರಜ್ವಲಿಸುತ್ತದೆ.

## ಉತ್ತರಿಸಿರಿ

ಮಕ್ಕಳಿಗೆ ಪಾಠಭಾಗದ ಆಶಯಗ್ರಹಣ ಎಷ್ಟರ ಮಟ್ಟಿಗೆ ನಡೆದಿದೆ ಎಂಬುದನ್ನು ತಿಳಿಯಲು ಈ ಚಟುವಟಿಕೆ ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಮೊದಲು ಪ್ರಶ್ನೆಗಳಿಗೆ ಉತ್ತರವನ್ನು ಬಾಯ್ದೆರೆಯಾಗಿ ಹೇಳಲಿ. ಗುಂಪುಗಳಲ್ಲಿ ಕುಳಿತು ಉತ್ತಮಪಡಿಸಿ ಬರೆದು ಮಂಡಿಸಲಿ. ಅಧ್ಯಾಪಕರ ಸಹಾಯದೊಂದಿಗೆ ಉತ್ತರವನ್ನು ಮತ್ತಷ್ಟು ಉತ್ತಮಪಡಿಸಲಿ.

## ಸಂದರ್ಭ ತಿಳಿಸಿರಿ

ಈ ಚಟುವಟಿಕೆಯ ಮೂಲಕ ಪಾಠಭಾಗವು ಮಗುವಿಗೆ ಎಷ್ಟರಮಟ್ಟಿಗೆ ಅರ್ಥವಾಗಿದೆ ಎಂದು ತಿಳಿಯಬಹುದು. ಈ ಸಂದರ್ಭದಲ್ಲಿ ಪಾಠದಲ್ಲಿ ಬಂದಿರುವ ಕೆಲವು ಮಾತುಗಳನ್ನು

ಯಾರು ಹೇಳಿದರು?

ಯಾರಿಗೆ ಹೇಳಿದರು?

ಯಾಕೆ ಹೇಳಿದರು?

ಯಾವ ಸಂದರ್ಭದಲ್ಲಿ ಹೇಳಿದರು?

ಎಂಬ ಪ್ರಶ್ನೆಗಳನ್ನು ಕೇಳುವುದರ ಮೂಲಕ ಈ ಚಟುವಟಿಕೆಯನ್ನು ಪೂರ್ತಿಗೊಳಿಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಬಹುದು.

### ಊಹಿಸಿ ಬರೆಯಿರಿ

ಯಾವುದೇ ಒಂದು ವಿಚಾರದ ಬಗ್ಗೆ ಆಲೋಚಿಸುವ, ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುವ ಚಿಂತನ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ. ಈ ಸಂದರ್ಭದಲ್ಲಿ 'ದತ್ತು ಸ್ವೀಕಾರ' ಪದ್ಧತಿಯ ಬಗ್ಗೆ ಲಘು ಮಾಹಿತಿಯನ್ನು ನೀಡುವುದು ಉತ್ತಮ.

(ಮೈಸೂರು ಸಂಸ್ಥಾನದ 27ನೇ ಉತ್ತರಾಧಿಕಾರಿಯಾಗಿ ನೇಮಕಗೊಂಡ ಯದುವೀರ ಮಹಾರಾಜರ 'ದತ್ತು ಸ್ವೀಕಾರ'ದ ವೀಡಿಯೋಗಳನ್ನು ತೋರಿಸಬಹುದು)

| |
|---|
| ಹಿಂದಿನ ಕಾಲದಲ್ಲಿ ರಾಜರು ತಮ್ಮ ಮಕ್ಕಳನ್ನೇ ರಾಜ್ಯದ ಮುಂದಿನ ಉತ್ತರಾಧಿಕಾರಿಗಳನ್ನಾಗಿ ಮಾಡುತ್ತಿದ್ದರು. ರಾಜನಿಗೆ ಮಕ್ಕಳಿಲ್ಲದಿದ್ದರೆ ಅವರು ತಮ್ಮ ಸಮೀಪದ ಬಂಧುಗಳಲ್ಲಿ ಯಾರನ್ನಾದರೂ ಶಾಸ್ತ್ರೋಕ್ತವಾಗಿ ತಮ್ಮ ಮಗನನ್ನಾಗಿ ಸ್ವೀಕರಿಸಿ ಅವರಿಗೆ ಉತ್ತರಾಧಿಕಾರವನ್ನು ನೀಡುವಂತಹ ಪದ್ಧತಿ ಇತ್ತು. ಇದನ್ನು 'ದತ್ತು ಸ್ವೀಕಾರ' ಎನ್ನುವರು. ಬ್ರಿಟಿಷರು ರಾಜ್ಯಗಳನ್ನು ಕಬಳಿಸಬೇಕೆಂಬ ದುರುದ್ದೇಶದಿಂದ ಈ 'ದತ್ತು ಸ್ವೀಕಾರ' ಪದ್ಧತಿಯನ್ನು ವಿರೋಧಿಸಿದ್ದರು. ಇದೇ ಮುಂದೆ ಹಲವು ಯುದ್ಧಗಳಿಗೆ ಕಾರಣವಾಯಿತು. |

ಈ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ನೀಡಿದ ಬಳಿಕ 'ಒಂದು ವೇಳೆ ಬ್ರಿಟಿಷರು ದತ್ತು ಸ್ವೀಕಾರ ಪದ್ಧತಿಯನ್ನು ಒಪ್ಪುತ್ತಿದ್ದರೆ ಏನಾಗುತ್ತಿತ್ತು?' ಎಂದು ಊಹಿಸಿ ಬರೆಯಲು ಹೇಳುವುದು.

- ಪರಸ್ಪರ ಯುದ್ಧ ನಡೆಯುತ್ತಿರಲಿಲ್ಲ.
- ರಾಜ್ಯಗಳು ಬ್ರಿಟಿಷರ ಪಾಲಾಗುತ್ತಿರಲಿಲ್ಲ.

### ಘೋಷಣೆ ಬರೆಯಿರಿ

ಝಾನ್ಸಿರಾಣಿಯ ದೇಶಪ್ರೇಮದಿಂದ ಪ್ರೇರಿತವಾಗಿ ವಿದ್ಯಾರ್ಥಿಗಳು ಘೋಷಣೆಗಳನ್ನು ಕೂಗಿರಬಹುದು. ಗುಂಪುಗಳಲ್ಲಿ ಘೋಷಣವಾಕ್ಯಗಳನ್ನು ಬರೆಯಲು ಹೇಳುವುದು. ಪ್ರತಿ ಗುಂಪಿನವರೂ ಬರೆದು ಮಂಡಿಸಲಿ. ಮೌಲ್ಯಮಾಪನಕ್ಕಿರುವ ಸೂಚಕಗಳು.

- ಸಂಕ್ಷಿಪ್ತತೆ
- ಆಶಯಸ್ಪಷ್ಟತೆ
- ಪ್ರಾಸಬದ್ಧವಾಗಿರುವುದು.
- ಆಕರ್ಷಕವಾಗಿರುವುದು.

ಉದಾಹರಣೆಗೆ,

- ಹಿರಿಯರಿರಲಿ ಕಿರಿಯರಿರಲಿ
  ದೇಶಪ್ರೇಮ ನಮ್ಮಲಿರಲಿ
- ವೇಷ ಬೇರೆ ಭಾಷೆ ಬೇರೆ ಆದರೂ
  ನಾವು ಭಾರತೀಯರು

- ಹೋರಾಡುವ ಹುಚ್ಚು ಬೇಡ
  ಒಟ್ಟಾಗುವ ಕೆಚ್ಚು ಬೇಕು.

## ವಾಕ್ಯ ರಚಿಸಿರಿ

ವಾಕ್ಯ ರಚನೆಯ ಕ್ರಮವನ್ನು ತಿಳಿದುಕೊಳ್ಳುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ಸಮಾನಾರ್ಥ ಪದಗಳನ್ನು ಅರ್ಥಕೋಶದಿಂದ ಕಂಡುಹಿಡಿದು ಬರೆಯಲಿ. ಬಳಿಕ ಅದನ್ನು ಬಳಸಿ ಬೇರೆ ವಾಕ್ಯಗಳನ್ನು ರಚಿಸಲಿ.

ಮರಣ – ಮೃತ್ಯು, ಸಾವು

ಮುಖ – ವದನ, ಮೊಗ, ಆನನ

ಗೆಲುವು – ಜಯ

ಯುದ್ಧ – ಸಮರ

- ಸಾವು ಯಾರಲ್ಲೂ ಹೇಳಿಕೇಳಿ ಬರುವುದಿಲ್ಲ.
- ಪ್ರೀತಿಯ ಮಾತುಗಳು ಎಲ್ಲರ ಮೊಗದಲ್ಲೂ ನಗುವನ್ನು ತರುತ್ತದೆ.
- ಇಂದು ಸೋತವನಿಗೆ ನಾಳೆ ಜಯ ಸಿಗಬಾರದೆಂದಿಲ್ಲ.
- ಸಮರಾಂಗಣದಲ್ಲಿ ಸತ್ತು ಬಿದ್ದಿದ್ದ ಸೈನಿಕರನ್ನು ನೋಡಿ ಅಶೋಕ ಚಕ್ರವರ್ತಿಯ ಮನಃ ಪರಿವರ್ತನೆಯಾಯಿತು.

## ವ್ಯಕ್ತಿ ಪರಿಚಯ ಬರೆಯಿರಿ

ಮಕ್ಕಳು ಪಾಠ ಪುಸ್ತಕದಲ್ಲಿ ನೀಡಿರುವ ಸುಭಾಸ್ ಚಂದ್ರ ಬೋಸ್ ಅವರ ಮಾಹಿತಿಗಳನ್ನು ಓದಲಿ. ಮಕ್ಕಳಿಗೆ ಅಸ್ಪಷ್ಟವೆನಿಸಿದ ವಿಷಯಗಳನ್ನು ಚರ್ಚೆಯ ಮೂಲಕ ಸ್ಪಷ್ಟಪಡಿಸುವುದು ಉದಾ : ಭಾರತೀಯ ರಾಷ್ಟ್ರೀಯ ಸೇನೆ, ಇಂಡಿಯನ್ ನೇಶನಲ್ ಕಾಂಗ್ರೆಸ್. ಬಳಿಕ ಮಕ್ಕಳು ವೈಯಕ್ತಿಕವಾಗಿ ವ್ಯಕ್ತಿ ಪರಿಚಯ ಬರೆಯಲಿ. ಕೆಲವರಿಂದ ಮಂಡನೆಯಾಗಲಿ. ಅವರು ಮಂಡಿಸಿದ ವ್ಯಕ್ತಿ ಪರಿಚಯದ ಬಗ್ಗೆ ಚರ್ಚೆ ನಡೆಸುವುದು.

**ಚರ್ಚಾ ಸೂಚಕಗಳು :**

- ನೀಡಿದ ಎಲ್ಲ ಮಾಹಿತಿಗಳನ್ನು ವ್ಯಕ್ತಿ ಪರಿಚಯ ಒಳಗೊಂಡಿದೆಯೇ?
- ಮಾಹಿತಿಗಳನ್ನು ಕ್ರಮೀಕರಿಸಿ ಬರೆಯಲಾಗಿದೆಯೇ?
- ತನ್ನದೇ ಆದ ಶೈಲಿಯನ್ನು ಬಳಸಲಾಗಿದೆಯೇ?
- ಮಂಡನೆ ಹೇಗಿತ್ತು?
- 

ಚರ್ಚೆಯ ಆಧಾರದಲ್ಲಿ ವ್ಯಕ್ತಿಪರಿಚಯ ಹೇಗಿರಬೇಕು ಎಂಬುದನ್ನು ಅಧ್ಯಾಪಕರು ಕ್ರೋಡೀಕರಿಸಿ ಕರಿಹಲಗೆಯಲ್ಲಿ ಬರೆಯುವುದು.

**ವ್ಯಕ್ತಿ ಪರಿಚಯ ಹೇಗಿರಬೇಕು?**

- ವ್ಯಕ್ತಿಯ ಕುರಿತಾದ ಕೊಟ್ಟಿರುವ ಎಲ್ಲಾ ಮಾಹಿತಿಗಳನ್ನು ಒಳಗೊಂಡಿರಬೇಕು.
- ಆ ವ್ಯಕ್ತಿಯ ಜೀವನ ಘಟನೆಗಳನ್ನು ಕ್ರಮಾನುಗತವಾಗಿ ಬರೆದಿರಬೇಕು.
- ಅಕ್ಷರ, ಪದ, ವಾಕ್ಯ, ನುಡಿಗಟ್ಟು ಇವೇ ಮೊದಲಾದ ಭಾಷಾ ಪ್ರಯೋಗಗಳು ಯೋಗ್ಯ ರೀತಿಯಲ್ಲಿರಬೇಕು.
- ವ್ಯಕ್ತಿ ಪರಿಚಯವು ವಸ್ತುನಿಷ್ಠವಾಗಿರಬೇಕು.

ವ್ಯಕ್ತಿಪರಿಚಯದ ಸೂಚಕಗಳ ಆಧಾರದಲ್ಲಿ ತಮ್ಮ ಬರವಣಿಗೆಯನ್ನು ಉತ್ತಮಪಡಿಸಲಿ. ಬಳಿಕ ಗುಂಪುಗಳಲ್ಲಿ ಕುಳಿತು ಮಂಡಿಸಲಿ. ಸೂಚಕಗಳ ಆಧಾರದಲ್ಲಿ ಉತ್ತಮವಾದ ಬರವಣಿಗೆಯನ್ನು ಆಯ್ಕೆ ಮಾಡಲಿ. ಬಳಿಕ ಪ್ರತಿಗುಂಪಿನಿಂದ ಉತ್ತಮವಾದುದನ್ನು ಮಂಡಿಸಲಿ. ಇವುಗಳಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಿ ಅಭಿನಂದಿಸುವುದು.

ಕೊನೆಗೆ ಅಧ್ಯಾಪಕರು ತಮ್ಮ ಬರವಣಿಗೆಯನ್ನು ಓದುವುದು. ಬಳಿಕ ಮಕ್ಕಳು ತಮ್ಮ ಸೃಷ್ಟಿಯನ್ನು ಅಗತ್ಯವಿದ್ದಲ್ಲಿ ಉತ್ತಮಪಡಿಸಲಿ.

**ಮೌಲ್ಯನಿರ್ಣಯ ಸೂಚಕಗಳು :**

- ಶೀರ್ಷಿಕೆ
- ಆಶಯ ಸ್ಪಷ್ಟತೆ
- ಭಾಷಾ ಶೈಲಿ
- ಘಟನೆಗಳ ಕ್ರಮೀಕರಣ
- ಲೇಖನ ಚಿಹ್ನೆಗಳ ಬಳಕೆ

## ಸುಭಾಸ್‌ಚಂದ್ರ ಬೋಸ್

ಭಾರತದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಸುಭಾಸ್ ಚಂದ್ರ ಬೋಸ್ ಅವರೂ ಒಬ್ಬರು. ಒರಿಸ್ಸಾದ 'ಕಟಕ್' ಎಂಬಲ್ಲಿ ಜಾನಕೀನಾಥ ಬೋಸ್ ಮತ್ತು ಪ್ರಭಾವತಿ ದಂಪತಿಗಳ ಮಗನಾಗಿ 23.01.1897 ರಂದು ಜನಿಸಿದರು. ತತ್ವಶಾಸ್ತ್ರದಲ್ಲಿ ಬಿ.ಎ. ಪದವಿಯನ್ನು ಪಡೆದ ಬಳಿಕ ಐ.ಸಿ.ಎಸ್. ಪರೀಕ್ಷೆ ಬರೆದು ನಾಲ್ಕನೇ ಸ್ಥಾನವನ್ನು ತನ್ನದಾಗಿಸಿಕೊಂಡರು. ವಿದೇಶೀಯರ ವಿರುದ್ಧ ಹೋರಾಡಲು 'ಭಾರತೀಯ ರಾಷ್ಟ್ರೀಯ ಸೇನೆ'ಯನ್ನು ಕಟ್ಟಿದರು. 'ಇಂಡಿಯನ್ ನೇಶನಲ್ ಕಾಂಗ್ರೆಸ್'ನ ಅಧ್ಯಕ್ಷರಾಗಿ ಎರಡು ಬಾರಿ ನೇಮಕಗೊಂಡರು. ಮಾತ್ರವಲ್ಲ 'ಅಜಾದ್ ಹಿಂದ್ ಫೌಜ್' ಸಂಸ್ಥೆಯ ಮುಖಂಡರೂ ಆಗಿದ್ದರು. ಸ್ವಾಮಿ ವಿವೇಕಾನಂದರ ತತ್ವ, ಆದರ್ಶಗಳಿಂದ ಪ್ರೇರಿತರಾಗಿದ್ದರು. "ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ದೊರಕಿಸಿ ಕೊಡುತ್ತೇನೆ" ಎಂದು ಸಾರಿದರು. ಕ್ರಾಂತಿ ಪಥದಲ್ಲಿ ನಡೆದ ಇವರು 18.08.1945 ರಂದು ಮರಣ ಹೊಂದಿದರು.

## ವಿಂಗಡಿಸಿ ಬರೆಯಿರಿ

ಎರಡು ಅಥವಾ ಹೆಚ್ಚು ಪದಗಳು ಸೇರಿಕೊಂಡಿರುವ ರೂಪಗಳನ್ನು ಅರ್ಥವ್ಯತ್ಯಾಸವಾಗದಂತೆ ಮಕ್ಕಳು ವಿಂಗಡಿಸಿ ಬರೆಯಲಿ.

ಪ್ರಮುಖಳು + ಎನಿಸಿದ

ಮಗಳನ್ನು + ಉದ್ದೇಶಿಸಿ

ಆಕಾಶ +ಇದೆ

ವ್ಯಾಪಾರಕ್ಕೆ + ಎಂದು

ಬಾಲಕನು +ಒಬ್ಬನು

ಬೇಕು +ಎಂದು

ಕಣ್ಮರೆ + ಆದಳು

ಕತ್ತಲು +ಆಯಿತು

ಸೈನಿಕನು +ಒಬ್ಬನು

## ವಾಕ್ಯ ಬದಲಾಯಿಸಿ ಬರೆಯಿರಿ

ಭೂತ, ವರ್ತಮಾನ, ಭವಿಷ್ಯತ್ ಕಾಲಗಳಿಗನುಗುಣವಾಗಿ ವಾಕ್ಯವನ್ನು ಬದಲಾಯಿಸಿ ಬರೆಯುವುದು.

ಉದಾ : ಗಿರೀಶನು ಹೂದೋಟಕ್ಕೆ ಹೋದನು

ಗಿರೀಶನು ಹೂದೋಟಕ್ಕೆ ಹೋಗುತ್ತಾನೆ

ಗಿರೀಶನು ಹೂದೋಟಕ್ಕೆ ಹೋಗುವನು.

ರೈಲು ತಡವಾಗಿ ಬಂತು

ರೈಲು ತಡವಾಗಿ ಬರುತ್ತದೆ

ರೈಲು ತಡವಾಗಿ ಬರುವುದು.

## ಪದವಿಹಾರ

ಇದೊಂದು ಭಾಷಾ ಆಟವಾಗಿದೆ. ಕೊಟ್ಟಿರುವ ಅಕ್ಷರಗಳನ್ನು ಜೋಡಿಸಿ ಮಕ್ಕಳು ಅರ್ಥವತ್ತಾದ ಪದಗಳನ್ನು ರಚಿಸಲಿ. ವೃತ್ತಗಳಲ್ಲಿರುವ ಅಕ್ಷರಗಳನ್ನು ಜೋಡಿಸಿ ಅರ್ಥವತ್ತಾದ ಇನ್ನೊಂದು ಪದವನ್ನು ಬರೆಯಲಿ.

ವಿ ಭ್ಯಾ ಸ ದ್ಯಾ – ವಿದ್ಯಾಭ್ಯಾಸ

ನೆ ಪ ಪಾ ಲ ರಿ – ಪರಿಪಾಲನೆ

ಮಾ ಸ ಚ ಲೋ ನೆ – ಸಮಾಲೋಚನೆ

ತ ಧ್ಧ ಪ ರಿ ಸಂ – ಸಂಪಧ್ಧರಿತ

ರಾ ರಂ ನ ಪು ಭ – ಪುನರಾರಂಭ

ಕ ನ ಥ ನ ಕ ವ – ಕಥನ ಕವನ

ರಂ ಳಾ ಗ ಗು ಪಾ ತ – ಪಾರಂಗತಳಾಗು

ಸ್ಮ ಅ ರ ಯ ವಿ ಣೀ – ಅವಿಸ್ಮರಣೀಯ

ಸ ಕ ಲ ವಿ ದ್ಯಾ ಪಾ ರಂ ಗ ತ

**ಸಂಗ್ರಹಿಸಿರಿ**

ತಮ್ಮ ನಾಡಿನ ರಕ್ಷಣೆಗಾಗಿ ಹೋರಾಡಿದ ವೀರವನಿತೆಯರ ಕುರಿತಾದ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು. ಅವುಗಳನ್ನು ಓದಿ ಟಿಪ್ಪಣಿ ಬರೆಯಲಿ. ಟಿಪ್ಪಣಿಗಳ ಒಂದು ಸಂಚಿಕೆ ತಯಾರಿಸಲಿ.

ಸಂಚಿಕೆ ಹೇಗಿರಬೇಕು?

- ಆಕರ್ಷಕ ಮುಖಪುಟ
- ಮುನ್ನುಡಿ
- ಸಂಪಾದಕೀಯ, ಸಂಪಾದಕ ಮಂಡಳಿ
- ಅನುಕ್ರಮಣಿಕೆ

**ಪೂರಕ ಓದಿಗೆ**

## ಕಿತ್ತೂರು ಚೆನ್ನಮ್ಮ

ಕನ್ನಡ ನಾಡಿನ ವೀರ ಮಹಿಳೆಯರಲ್ಲಿ ಕಿತ್ತೂರಿನ ರಾಣಿಯು ಒಬ್ಬಳು. ಈಕೆ ಕಿತ್ತೂರಿನ ದೇಸಾಯಿಗಳಲ್ಲಿ ಪ್ರಸಿದ್ಧನಾದ ಮಲ್ಲಸರ್ಜನ ಕಿರಿಯ ಹೆಂಡತಿ. ತನ್ನ ಪುಟ್ಟ ರಾಜ್ಯದ ಸ್ವಾತಂತ್ರ್ಯ ರಕ್ಷಣೆಗಾಗಿ ಬ್ರಿಟಿಷರ ದೊಡ್ಡ ಸೈನ್ಯದ ವಿರುದ್ಧ ಸೆಟೆದು ನಿಂತು ನಡೆಸಿದ ಹೋರಾಟ, ಅಲ್ಲಿ ತೋರಿಸಿದ ಧೈರ್ಯ, ಸಾಹಸ, ಕೆಚ್ಚುಗಳು ಚೆನ್ನಮ್ಮನನ್ನು ಅಜರಾಮರವಾದ ಕೀರ್ತಿ ಶಿಖರಕ್ಕೇರಿಸಿವೆ. ಚೆನ್ನಮ್ಮನಿಂದ ಕಿತ್ತೂರು ಪ್ರಸಿದ್ಧವಾಗಿದೆ. ಕಿತ್ತೂರಿನ ಇತಿಹಾಸವು ಕ್ರಿ.ಶ.೧೫೮೫ ರಿಂದಲೇ ಆರಂಭವಾಗುತ್ತದೆ. ಮೂಲತಃ ಮಲೆನಾಡಿನ ಗೌಡ ಮನೆತನದಿಂದ ಬಂದ ಮಲ್ಲ ಹೆಸರಿನ ಸೋದರರಿಬ್ಬರು ವಿಜಾಪುರದ ಅದಿಲಶಾಹಿ ಸೈನ್ಯದಲ್ಲಿ ಸೇರಿಕೊಂಡಿದ್ದರು. ಈ ಸೋದರರಲ್ಲಿ ಹಿರಿಯ ಮಲ್ಲನಿಗೆ "ಶಮಶೇರ ಜಂಗಬಹಾದ್ದೂರ" ಎನ್ನುವ ಬಿರುದನ್ನು ಹಾಗೂ ಹುಬ್ಬಳ್ಳಿ ವಿಭಾಗದ ಸರದೇಶಮುಖಿಯನ್ನು ನೀಡಲಾಗಿತ್ತು. ವಿಜಾಪುರದ ಪತನದ ನಂತರ ಕಿತ್ತೂರು ದೇಸಾಯಿಗಳು ತಮ್ಮ ರಕ್ಷಣೆಗಾಗಿ ಅನೇಕ ಕಾಳಗಗಳನ್ನು ಎದುರಿಸಬೇಕಾಯಿತು. ಬ್ರಿಟಿಷರು ಭಾರತದಲ್ಲಿ ಕಾಲೂರುವ ಸಮಯದಲ್ಲಿ ಇಲ್ಲಿಯ ರಾಜಕೀಯ ಪರಿಸ್ಥಿತಿ ಬಹಳ ವಿಲಕ್ಷಣವಾಗಿತ್ತು. ಉತ್ತರ ಹಿಂದುಸ್ಥಾನದಲ್ಲಿ ಮೊಗಲ ಬಾದಶಾಹಿ ದುರ್ಬಲವಾಗಿತ್ತು. ದಕ್ಷಿಣದಲ್ಲಿ ಸ್ವರಾಜ್ಯದ ವಿಸ್ತರಣೆಗಾಗಿ ಹೋರಾಡುತ್ತಿದ್ದ ಪೇಶವಾಯಿ, ಆಕ್ರಮಣಕಾರಿ ಧೋರಣೆಯ ಹೈದರಾಬಾದಿನ ನಿಜಾಮಶಾಹಿ ಹಾಗು ಮೈಸೂರಿನ ಹೈದರಾಲಿ ಇವರೆಲ್ಲರ ನಡುವೆ ತಮ್ಮ ಉಳಿವಿಗಾಗಿ ಹೋರಾಡುತ್ತಿದ್ದ ಚಿಕ್ಕ ಪುಟ್ಟ ಪಾಳೆಗಾರರು. ಇಂತಹ ರಾಜಕೀಯ ಪರಿಸ್ಥಿತಿ ಧೂರ್ತ, ಕ್ರೂರ ಧೋರಣೆಯ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ಸುವರ್ಣಾವಕಾಶವನ್ನು ಒದಗಿಸಿತ್ತು. ಇಂತಹ ಸಮಯದಲ್ಲಿ ಮಲ್ಲಸರ್ಜನ ದೊರೆಯನ್ನು ಟಿಪ್ಪುಸುಲ್ತಾನನು ಸೆರೆ ಹಿಡಿದು ಕಪಾಲದುರ್ಗದಲ್ಲಿ ಸೆರೆಯಿಟ್ಟಿದ್ದನು. ಉಪಾಯದಿಂದ ತಪ್ಪಿಸಿಕೊಂಡ ದೊರೆ ೧೮೦೩ ರಲ್ಲಿ ವೆಲ್ಲೆಸ್ಲಿಗೆ ನೆರವು ನೀಡಿ ಕಿತ್ತೂರನ್ನು ಭದ್ರಗೊಳಿಸಿದ್ದನು. ೧೮೧೬ ರಲ್ಲಿ ಬಿಡುಗಡೆ ಹೊಂದಿ ಮರಳುವಾಗ ದಾರಿಯಲ್ಲಿಯೆ ಮಲ್ಲಸರ್ಜನನ್ನು ಸೆರೆ ಹಿಡಿದು ೩ ವರ್ಷ ಕಾಲ ಪುಣೆಯಲ್ಲಿಟ್ಟರು. ೧೮೧೬ ರಲ್ಲಿ ಬಿಡುಗದೆ ಹೊಂದಿ ಮರಳುವಾಗ ದಾರಿಯಲ್ಲಿಯೆ ಮಲ್ಲಸರ್ಜನು ಕೊನೆಯುಸಿರನ್ನೆಳೆದ. ಅವನ ಮಗ ಶಿವಲಿಂಗ ರುದ್ರಸರ್ಜನು ಮರಾಠಾ ಹಾಗು ಟಿಪ್ಪು ಸುಲ್ತಾನ ಇವರ ಕಿರಿ ಕಿರಿ ತಪ್ಪಿಸಲು ಬ್ರಿಟಿಷರ ಜೊತೆಗೆ ಸ್ನೇಹದಿಂದಿದ್ದ. ಆದರೆ ಅದೆಂತಹ ಸ್ನೇಹ! ಪ್ರತಿ ವರ್ಷ ರೂ ೧,೭೦,೦೦೦ ಕಾಣಿಕೆ ಕೊಡುವ ಕರಾರಿನ ಮೇಲೆ ಬ್ರಿಟಿಷರು ಈ ದೊರೆಗೆ ಸನದು ನೀಡಿದರು. ಶಿವಲಿಂಗರುದ್ರ ಸರ್ಜನು ೧೧ ಸೆಪ್ಟಂಬರ ೧೮೨೪ ರಂದು ವಾರಸುದಾರರಿಲ್ಲದೆ ತೀರಿಕೊಂಡನು. ಈ ಎಳೆವಯಸ್ಸಿನ ದೊರೆಯ ಹೆಂಡತಿ ವೀರಮ್ಮನಿಗೆ ಆಗ ೧೧ ವರ್ಷ ವಯಸ್ಸು! ಮರಣದ ಪೂರ್ವದಲ್ಲಿ ಶಿವಲಿಂಗರುದ್ರಸರ್ಜ ಮಾಸ್ತಮರಡಿ ಗೌಡರ ಪುತ್ರ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡನು. ಈ ದತ್ತಕವನ್ನು ಧಾರವಾಡದ ಕಲೆಕ್ಟರ ಥ್ಯಾಕರೆ ತಿರಸ್ಕರಿಸುತ್ತಾನೆ! ೧೩ ಸೆಪ್ಟಂಬರ ೧೮೨೪ ರಂದು ಥ್ಯಾಕರೆ ಸ್ವತಃ ಕಿತ್ತೂರಿಗೆ ಬಂದು ಕಂಪನಿ ಸರ್ಕಾರದಿಂದ ಮುಂದಿನ ಆದೇಶ ಬರುವವರೆಗೂ ತಾತ್ಕಾಲಿಕವಾಗಿ ಮಲ್ಲಪ್ಪಶೆಟ್ಟಿ

ಹಾಗು ಹಾವೇರಿ ವೆಂಕಟರಾವ ಇವರನ್ನು ಸಂಸ್ಥಾನದ ವ್ಯವಹಾರ ನಿರ್ವಹಿಸಲು ನೇಮಕ ಮಾಡುತ್ತಾನೆ ಹಾಗು ಕಿತ್ತೂರಿನ ಭಂಡಾರಕ್ಕೆ ಬೀಗ ಮುದ್ರೆ ಹಾಕುತ್ತಾನೆ. ಆದರೆ ಇದನ್ನು ಕೆಚ್ಚೆದೆಯಿಂದ ಎದುರಿಸಿದವಳು ಮೃತ ಶಿವಲಿಂಗರುದ್ರಸರ್ಜನ ಮಲತಾಯಿ ಚೆನ್ನಮ್ಮ! ಚೆನ್ನಮ್ಮ ಹುಟ್ಟಿದ್ದು ೧೭೭೮ ರಲ್ಲಿ. ಬೆಳಗಾವಿಯಿಂದ ಉತ್ತರಕ್ಕೆ ಸುಮಾರು ೬ ಕಿ.ಮೀ. ದೂರದಲ್ಲಿರುವ ಕಾಕತಿ ಅವಳ ಹುಟ್ಟೂರು.  ತಂದೆ ಕಾಕತಿಯ ದೇಸಾಯಿ ಧೂಳಪ್ಪಗೌಡರು. ಚೆನ್ನಮ್ಮ ಎಳೆ ವಯಸ್ಸಿನಲ್ಲಿಯೇ ಕುದುರೆ ಸವಾರಿ ಹಾಗು ಬಿಲ್ಲುವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದಳು. ಈ ಕಠಿಣ ಪರಿಸ್ಥಿತಿಯಲ್ಲಿ ಎದೆಗುಂದದೆ ಅವಳು ರಾಜನಿಷ್ಠರಾದ ಗುರುಸಿದ್ದಪ್ಪ, ಹಿಮ್ಮತಸಿಂಗ, ನರಸಿಂಗರಾವ, ಗುರುಪುತ್ರ ಮತ್ತು ಇತರ ಬೆಂಬಲಿಗರ ನೆರವಿನಿಂದ ತನ್ನ ದತ್ತಕ ಮೊಮ್ಮಗನಿಗೆ ಪಟ್ಟಗಟ್ಟಿದಳು. ಕಿತ್ತೂರಿನ ಮೇಲೆ ಬ್ರಿಟಿಷರು ಮಾಡಬಹುದಾದ ಆಕ್ರಮಣವನ್ನು ತಪ್ಪಿಸಲು ಚೆನ್ನಮ್ಮ ಥ್ಯಾಕರೆಗೆ, ಮನ್ರೋನಿಗೆ ಹಾಗು ಚಾಪ್ಲಿನ್ನನಿಗೂ ಸಹ ಸಂಧಾನಕ್ಕಾಗಿ ಪತ್ರ ಬರೆದಿದ್ದಾಳೆ. ಆದರೆ ಬ್ರಿಟಿಷರು ಕಿತ್ತೂರಿನ ಒಡೆತನವನ್ನೇ ಅಪೇಕ್ಷಿಸಿದಾಗ ಚೆನ್ನಮ್ಮ ಮುಂದಾಲೋಚನೆಯಿಂದ ಕೊಲ್ಲಾಪುರ ಮೊದಲಾದ ನೆರೆಯ ಸಂಸ್ಥಾನಗಳ ಸಹಾಯ ಕೋರಿ ಪತ್ರವ್ಯವಹಾರ ಸಹ ಮಾಡಿದ್ದಾಳೆ. ೨೧ ಅಕ್ಟೋಬರ ೧೮೨೪ ರಂದು ಥ್ಯಾಕರೆ ಕಿತ್ತೂರಿಗೆ ಬಂದನು. ಮೂರನೆಯ ದಿನ  ಅಂದರೆ ಅಕ್ಟೋಬರ ೨೩ ರಂದು ಕೋಟೆಯ ಮೇಲೆ ತೋಪು ಹಾರಿಸಲು ತನ್ನ ಸೈನ್ಯಕ್ಕೆ ಅಪ್ಪಣೆ ಕೊಟ್ಟ. ಥಟ್ಟನೆ ತೆಗೆದ ಕೋಟೆಯ ಬಾಗಿಲಿನಿಂದ ಸಾವಿರಾರು ಜನ ಕಿತ್ತೂರು ವೀರರು ಸರದಾರ ಗುರುಸಿದ್ಧಪ್ಪನವರ ಮುಂದಾಳ್ತನದಲ್ಲಿ ಥ್ಯಾಕರೆಯ ಸೈನ್ಯದ ಮೇಲೆ ಮುಗಿಬಿದ್ದರು. ಚೆನ್ನಮ್ಮ ರಾಣಿಯ ಅಂಗರಕ್ಷಕ ಅಮಟೂರು ಬಾಳಪ್ಪನ  ಗುಂಡಿಗೆ ಥ್ಯಾಕರೆ ಬಲಿಯಾದ. ಸ್ಟೀವನ್ಸನ್ ಹಾಗು ಈಲಿಯಟ್ ಸೆರೆಯಾಳಾದರು. ದೇಶದ್ರೋಹಿಗಳಾದ ಕನ್ನೂರು ವೀರಪ್ಪ, ಸರದಾರ ಮಲ್ಲಪ್ಪ ಅವರೂ ಬಲಿಯಾದರು. ಚೆನ್ನಮ್ಮನಿಗೆ ಹಾಗು ಬ್ರಿಟಿಷರಿಗೆ ಮತ್ತೆ ಪತ್ರವ್ಯವಹಾರ ನಡೆಯುತ್ತದೆ. ೧೮೨೪ ಡಿಸೆಂಬರ್ ೨ ರಂದು ಸ್ಟೀವನ್ಸನ್ ಹಾಗು ಈಲಿಯಟ್ ಇವರ ಬಿಡುಗಡೆಯಾಗುತ್ತದೆ. ಆದರೆ ಮಾತಿಗೆ ತಪ್ಪಿದ ಬ್ರಿಟಿಷರು ಡಿಸೆಂಬರ್ ೩ ರಂದು ಅಪಾರ ಸೈನ್ಯದೊಂದಿಗೆ ಮುತ್ತಿಗೆ ಹಾಕಿ ಕೋಟೆಯನ್ನು ಒಡೆಯಲು ಪ್ರಾರಂಭಿಸುತ್ತಾರೆ. ಡಿಸಂಬರ ೪ ರಂದು ಸರದಾರ ಗುರುಸಿದ್ಧಪ್ಪ ಸೆರೆಯಾಳುಗುತ್ತಾನೆ. ಡಿಸೆಂಬರ್ ೫ ರಂದು ಚೆನ್ನಮ್ಮ ಹಾಗು ವೀರಮ್ಮರನ್ನು ಬೈಲಹೊಂಗಲಕ್ಕೆ ಒಯ್ಯಲಾಗುತ್ತದೆ. ಅಲ್ಲಿ ೪ ವರ್ಷಗಳವರೆಗೆ  ಸೆರೆಯಾಳಾಗಿ ಉಳಿದ ಚೆನ್ನಮ್ಮ ೧೮೨೫ ಫೆಬ್ರವರಿ ೨ರಂದು ನಿಧನಹೊಂದುತ್ತಾಳೆ. ಮುಂದೆ ಮೇ ೨೦ರಂದು ಜಾನಕಿಬಾಯಿ ನಿಧನಳಾಗುತ್ತಾಳೆ. ಆದರೆ ದೇಶ ನಿಷ್ಠರ ಹೋರಾಟ ನಿಂತಿರುವುದಿಲ್ಲ. ಕಾಳಗದಲ್ಲಿ ಸೆರೆ ಸಿಕ್ಕು ಆ ಮೇಲೆ ಬಿಡುಗಡೆಯಾದ ಸಂಗೊಳ್ಳಿ ರಾಯಣ್ಣ ೧೮೨೯ ರಲ್ಲಿ ಹೋರಾಟ ಮುಂದವರೆಸುತ್ತಾನೆ. ಇವನ ಹೋರಾಟಕ್ಕೆ ನೆರವು ನೀಡುತ್ತಿರುವ ಸಂಶಯದ ಮೇಲೆ ವೀರಮ್ಮನನ್ನು ಬ್ರಿಟಿಷರು ಮೊದಲು ಕುಸುಗಲ್ಲಿಗೆ, ಆ ಬಳಿಕ ಬೇರೊಂದು ಸ್ಥಳಕ್ಕೆ ಒಯ್ಯುತ್ತಾರೆ. ಇತ್ತ ರಾಯಣ್ಣನ ಹೋರಾಟ ಮುಂದುವರೆದಿರುತ್ತದೆ. ವಿಶ್ವಾಸ ದ್ರೋಹಿಗಳು ಇವನ ಸಂಗಡಿಗರಂತೆ ನಟಿಸುತ್ತ ೧೮೩೦ ಫೆಬ್ರವರಿಯಲ್ಲಿ ಇವನನ್ನು ಬ್ರಿಟಿಷರಿಗೆ ಹಿಡಿದುಕೊಡುತ್ತಾರೆ. ಕಂಪೆನಿ ಸರಕಾರ ಈ ಕಾರ್ಯಕ್ಕಾಗಿ ಲಿಂಗನಗೌಡ ಮತ್ತು ವೆಂಕನಗೌಡರಿಗೆ ೩೦೦ ರೂಪಾಯಿ ಬಹುಮಾನ ಕೊಡುತ್ತದೆ.

ಶಿವಲಿಂಗಪ್ಪ ಹಾಗು ಇತರ ೪೦೦ ಜನರು ಬ್ರಿಟಿಷರಿಗೆ ಸ್ವಯಂ ಸೆರೆಯಾಗುತ್ತಾರೆ. ಜುಲೈ ೧೮೩೦ ರಂದು ವೀರಮ್ಮ ಸೆರೆಮನೆಯಲ್ಲಿ ಮರಣಹೊಂದುತ್ತಾಳೆ. ವಿಷ ತೆಗೆದುಕೊಂಡು ಮರಣ ಹೊಂದಿದಳೆಂದೂ, ಇಂಗ್ಲಿಷರೆ ವಿಷ ಹಾಕಿ ಕೊಂದರೆಂದೂ ಪ್ರತೀತಿಯಿದೆ. ೧೮೩೧ ಜನವರಿ ೨೬ ರಂದು ಸಂಗೊಳ್ಳಿ ರಾಯಣ್ಣನನ್ನು  ನಂದಗಡದಲ್ಲಿ ಗಲ್ಲಿಗೇರಿಸಲಾಗುತ್ತದೆ.

## 2. ಐದು ಬೆರಳು ಕೂಡಿ

ವಿದ್ಯಾರ್ಥಿಗಳು ತಿಳಿದಿರುವ ದೇಶಭಕ್ತಿಗೀತೆಗಳನ್ನು ಹಾಡಿಸುವುದು. ಗೀತೆಗಳನ್ನು ಕೇಳಿಸುವುದರ ಮೂಲಕ ಪಾಠಪ್ರವೇಶ ಮಾಡುವುದು. ಬಳಿಕ ಗುಂಪಿನಲ್ಲಿ 'ಐದು ಬೆರಳು ಕೂಡಿ' ಪದ್ಯಕ್ಕೆ ರಾಗ, ತಾಳ, ಲಯವನ್ನು ಕಂಡುಕೊಳ್ಳುವುದು ಬಳಿಕ ಹಾಡಿನ ಸ್ಪರ್ಧೆ ಏರ್ಪಡಿಸುವುದು. ಗುಂಪುಗಳ ಗಾಯನವನ್ನು ಇತರ ಗುಂಪುಗಳು ಸೂಚಕಗಳ ಆಧಾರದಲ್ಲಿ ಮೌಲ್ಯನಿರ್ಣಯ ನಡೆಸಿ ಉತ್ತಮವಾಗಿ ಹಾಡಿದ ತಂಡವನ್ನು ಅಭಿನಂದಿಸಲಿ.

**ಸೂಚಕಗಳು :**

ಉಚ್ಚಾರ ಸ್ಪಷ್ಟತೆ

ಭಾವ ಪೂರ್ಣತೆ

ರಾಗ, ತಾಳ, ಲಯ ಬದ್ಧತೆ

ತಂಡದ ಎಲ್ಲರ ಪಾಲ್ಗೊಳ್ಳುವಿಕೆ

## ಚರ್ಚಿಸಿರಿ

'ಐದು ಬೆರಳು ಕೂಡಿ ಒಂದು ಮುಷ್ಟಿಯು' ಎಂದು ಕವಿ ಹೇಳಿದುದರ ಔಚಿತ್ಯವನ್ನು ಕುರಿತು ಈ ಸಂದರ್ಭದಲ್ಲಿ ಚರ್ಚಿಸುವುದು.

**ಚರ್ಚಾಸೂಚಕಗಳು :**

- ನಮಗೆ ಬೆರಳುಗಳು ಯಾಕೆ ಬೇಕು?
- ಯಾವುದಾದರೂ ಒಂದು ಬೆರಳು ಇಲ್ಲದಿದ್ದರೆ ಏನು ತೊಂದರೆ?
- ಒಂದು ಬೆರಳು ಮಾತ್ರ ಇದ್ದರೆ ಎಲ್ಲಾ ಕೆಲಸಗಳನ್ನು ವೇಗವಾಗಿಯೂ ಸುಸೂತ್ರವಾಗಿಯೂ ಮಾಡಬಹುದೇ?
- ಇದೇ ರೀತಿ ಒಂದು ದೇಶದ ಎಲ್ಲಾ ಜನರು ಒಗ್ಗಟ್ಟಿನಿಂದ ದುಡಿಯದಿದ್ದರೆ ಏನಾಗಬಹುದು?
- ನಾವೆಲ್ಲರೂ ಯಾಕೆ ಒಗ್ಗಟ್ಟಿನಿಂದ ದುಡಿಯಬೇಕು?
- ಇಲ್ಲಿ ಕವಿ 'ಐದು ಬೆರಳು ಕೂಡಿ ಒಂದು ಮುಷ್ಟಿಯು' ಎಂಬ ಮಾತನ್ನು ಯಾವ ದೃಷ್ಟಿಯಿಂದ ಹೇಳಿದ್ದಾರೆ?

## ಉತ್ತರಿಸಿರಿ

ಪದ್ಯವನ್ನು ಹಾಡಿದ ಬಳಿಕ ಆಶಯಗ್ರಹಣ ಪ್ರಶ್ನೆಗಳನ್ನು ಕೇಳುವುದು. ಪಠ್ಯಪುಸ್ತಕದಲ್ಲಿರುವ ಪ್ರಶ್ನೆಗಳಿಗೆ ಉತ್ತರ ಬರೆಸುವುದು.

- ಈ ಪದ್ಯದಲ್ಲಿ ಯಾವುದರ ಕುರಿತು ಹೇಳಲಾಗಿದೆ?
- ಭಾರತದ ಮಾತೆಗೆ ಗೆಲುವು ಯಾವಾಗ?
- ಪ್ರತಿಯೊಬ್ಬ ಭಾರತೀಯನಲ್ಲಿ ಪ್ರೀತಿ ಹೇಗೆ ಮೈಗೂಡಬೇಕು?

## ಪ್ರಾಸಪದ ಗುರುತಿಸಿರಿ

### ಪ್ರಾಸ – ಪ್ರಾಸಾಕ್ಷರ – ಪ್ರಾಸಪದ

ಪದ್ಯದ ಪಾದಗಳ (ಸಾಲುಗಳ) ನಿಶ್ಚಿತ ಸ್ಥಾನಗಳಲ್ಲಿ ಒಂದು ಅಥವಾ ಅನೇಕ ವರ್ಣಗಳು (ಅಕ್ಷರಗಳು) ಪುನರಾವರ್ತನೆಗೊಳ್ಳುವುದನ್ನು ಪ್ರಾಸ ಎನ್ನುತ್ತಾರೆ. ಪ್ರಾಸವಾಗಿ ಬರುವ ಅಕ್ಷರವೇ ಪ್ರಾಸಾಕ್ಷರ ಪ್ರಾಸಾಕ್ಷರವನ್ನು ಒಳಗೊಂಡಿರುವ ಪದವನ್ನು ಸಾಧಾರಣವಾಗಿ ಪ್ರಾಸಪದ ಎನ್ನಲಾಗುತ್ತದೆ.

ಪ್ರಾಸಗಳಲ್ಲಿ ಪ್ರಧಾನವಾಗಿ ಎರಡು ಬಗೆಗಳಿವೆ.

1. ಆದಿಪ್ರಾಸ
2. ಅಂತ್ಯಪ್ರಾಸ

**ಆದಿಪ್ರಾಸ :** ಪದ್ಯವೊಂದರ ಪಾದಗಳ (ಚರಣಗಳ) ಮೊದಲ ಎರಡು ಸ್ವರಗಳ ನಡುವೆ ಒಂದೇ ವ್ಯಂಜನವು ಪುರಾವರ್ತನೆಗೊಳ್ಳುವುದನ್ನು ಆದಿಪ್ರಾಸ ಎನ್ನುವರು.

ಉದಾ: ಅಡವಿಯೊಳಗೆ ಬೇಟೆಯನ್ನು
ಹುಡುಕಿ ಹುಡುಕಿಯೊಂದು ತೋಳ
ಕಡೆಗೆ ನೋಡಿ ಹಿಡಿದುದೊಂದು ಹುಲ್ಲೆ ಮರಿಯನು

ಮೇಲಿನ ಪದ್ಯ ಸಾಲುಗಳಲ್ಲಿ ಅಡವಿ, ಹುಡುಕಿ, ಕಡೆಗೆ – ಈ ಪದಗಳಲ್ಲಿ ವ್ಯಂಜನವು ಮೊದಲ ಎರಡು ಸ್ವರಗಳ ನಡುವೆ ಬರುತ್ತದೆ. (ಹ್+ಉ+ಡ್+ಉ), (ಕ್+ಅ+ಡ್+ಎ). ಆದುದರಿಂದ 'ಈ' ಅಕ್ಷರಗಳು ಡ, ಡು, ಡೆ, ಡೇ... ಪ್ರಾಸಾಕ್ಷರಗಳಾಗಿವೆ.

**ಅಂತ್ಯಪ್ರಾಸ :** ಪದ್ಯದ ಸಾಲುಗಳ ಕೊನೆಯ ಅಕ್ಷರವು ಪುನಾರಾವರ್ತನೆಗೊಳ್ಳುವುದೇ 'ಅಂತ್ಯಪ್ರಾಸ'.

ಉದಾ: ಐದು ಬೆರಳು ಕೂಡಿ ಒಂದು ಮುಷ್ಟಿಯು
ಹಲವು ಮಂದಿ ಸೇರಿ ಈ ಸಮಷ್ಟಿಯು

ಈ ಉದಾಹರಣೆಯಲ್ಲಿ 'ಯ' ಕಾರವು ಪ್ರಾಸಾಕ್ಷರ ಅಂತ್ಯಪ್ರಾಸದಲ್ಲಿ ಪ್ರಾಸಾಕ್ಷರವು ಒಂದೇ ಸ್ವರವನ್ನು ಹೊಂದಿರುತ್ತದೆ.

### ಆಶಯ ಬರೆಯಿರಿ

ಪದ್ಯದ ಪೂರ್ಣ ಆಶಯವನ್ನು ತಿಳಿಯಲು, ಬಾಯ್ದೆರೆಯಾಗಿ ಹೇಳಲು ಈ ಚಟುವಟಿಕೆ ಸಹಕಾರಿಯಾಗಿದೆ.

### ಐದು ಬೆರಳು ಕೂಡಿ

ಭಾವೈಕ್ಯ ಮತ್ತು ಸಾಮರಸ್ಯದ ಅಗತ್ಯವನ್ನು ಈ ಪದ್ಯದಲ್ಲಿ ಸೊಗಸಾಗಿ ನಿರೂಪಿಸಲಾಗಿದೆ. ಕೈ ಮುಷ್ಟಿಯು ಪೂರ್ತಿಯಾಗಲು ಐದು ಬೆರಳುಗಳು ಸೇರಲೇಬೇಕು. ಅಂತೆಯೇ ಒಟ್ಟು ಸಮಾಜವು ಒಂದು ಎನ್ನಿಸಬೇಕಾದರೆ ಎಲ್ಲರೂ ಸಮರಸವಾಗಿ ಒಂದುಗೂಡಬೇಕು. ಸಮಾಜದ ವ್ಯಕ್ತಿಗಳು ಬೇರೆ ಬೇರೆಯಾಗಿ ಬದುಕುವುದಾದರೂ ಎಲ್ಲರೂ ಒಂದೇ ಮಾತೆಯ ಮಕ್ಕಳೆಂಬ ಭಾವನೆ ಎಲ್ಲರಲ್ಲೂ ಮೂಡಬೇಕು. ಒಬ್ಬರೇ ಹಾಡುವುದಕ್ಕಿಂತಲೂ ಸಮೂಹದಲ್ಲಿ ಹಾಡಿದಾಗಲೇ ನಾಡಗೀತೆ ಹೆಚ್ಚು ಅರ್ಥಪೂರ್ಣವಾಗುತ್ತದೆ. ತಾಯಿ ಭಾರತಿಗೆ ಸಂತಸವಾಗುತ್ತದೆ. ನಾಡಗೀತೆಯ ಧ್ವನಿ ದಿಕ್ಕು ದಿಕ್ಕುಗಳಲ್ಲಿ ಕೇಳಿಸಬೇಕು. ಭಾವೈಕ್ಯದ ಸುಪ್ರಭಾತವು ಮೂಡಿಬರಬೇಕು. ದೇಶದ ಹಲವೆಡೆಗಳಲ್ಲಿ ಅಶಾಂತಿ ತಾಂಡವವಾಡುತ್ತಿದೆ. ಹಿಮಾಲಯದ ಶಿಖರದಲ್ಲಿ, ಕಾಶ್ಮೀರದ ತಪ್ಪಲುಗಳಲ್ಲಿ , ಅಸ್ಸಾಮಿನ ಅರಣ್ಯಗಳಲ್ಲಿ ಪಂಜಾಬಿನ ನದೀ ತೀರಗಳಲ್ಲಿ ಎಲ್ಲೆಲ್ಲೂ ಅಶಾಂತಿಯ ಬೆಂಕಿ ಉರಿಯುತ್ತಿದೆ. ಅದು ಆರಿ ತಣ್ಣಗಾಗಬೇಕು. ಬಂಜರು ಭೂಮಿಯಲ್ಲಿ ಹಚ್ಚಹಸಿರು ತುಂಬಿ ಹರಡಬೇಕು. ಅಕ್ಕ ಗಂಗೆ ಮತ್ತು ತಂಗಿ ಕಾವೇರಿ ಒಂದಾಗಿ ಬೆಸೆಯಬೇಕು. ಆ ಮೂಲಕ ನೀರಿನ ಸಮಸ್ಯೆ ಬಗೆ ಹರಿಯಬೇಕು.

ಲಡಾಕ, ನೇಫ ಮೊದಲಾದ ಭಾರತದ ಗಡಿ ಪ್ರದೇಶಗಳಲ್ಲಿ, ಪ್ರಾರ್ಥನಾ ಮಂದಿರ, ಗುಡಿಗೋಪುರಗಳಲ್ಲಿ, ಭತ್ತ, ಗೋಧಿ ಬೆಳೆಯುವ ಬಯಲು ಪ್ರದೇಶಗಳಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳು ತುಂಬಿ ತುಳುಕಬೇಕು. ಈ ಪ್ರದೇಶಗಳಲ್ಲಿ ಬದುಕುವ ಹಿಂದು ಮುಸಲ್ಮಾನರಲ್ಲಿ ಸಮರಸದ ಬಾಳ್ವೆ ನಡೆಯಬೇಕು. ಪ್ರತಿಯೊಬ್ಬರ ಕಣ್ಣಲ್ಲೂ ಪ್ರೀತಿ ಪ್ರೇಮಗಳು ಹೊರಹೊಮ್ಮಬೇಕು. ಪಶ್ಚಾತ್ತಾಪದ ಕಣ್ಣೀರು ಹೃದಯಗಳನ್ನು ತೊಳೆದು ನಿರ್ಮಲಗೊಳಿಸಬೇಕು. ಸರ್ವರೂ ಜಾತಿ ಮತ ಭೇದಭಾವವಿಲ್ಲದೆ ಐದು ಬೆರಳುಗಳು ಸಹಮತದಿಂದ ಕೂಡಿ ಒಂದಾಗುವಂತೆ ಒಂದುಗೂಡಿ ನಾಡಗೀತೆ ಮೊಳಗಬೇಕು.

## ಗುಂಪು ಮಾಡಿರಿ

ಒಂದು ಪದಕ್ಕೆ ಅದೇ ಅರ್ಥವನ್ನು ಕೊಡುವ ಇತರ ಪದಗಳು ಇರುತ್ತವೆ. ಅವುಗಳನ್ನು ಪರ್ಯಾಯ ಪದಗಳು ಎಂದು ಹೇಳುತ್ತಾರೆ.

ತಖ್ತೆಯಲ್ಲಿ ನೀಡಿರುವ ಪದಗಳ ಅರ್ಥಗಳನ್ನು ಅರ್ಥಕೋಶದ ಸಹಾಯದಿಂದ ತಿಳಿದುಕೊಂಡು ಪರ್ಯಾಯ ಪದಗಳನ್ನು ಗುಂಪು ಮಾಡಿ ವಿದ್ಯಾರ್ಥಿಗಳು ಬರೆಯಲಿ.

ಪಂಕಜ – ಅಂಬುಜ, ಜಲಜ, ತಾವರೆ, ನಳಿನಿ, ಸರೋಜ, ನೀರಜ, ಸರಸಿಜ

ಅಶ್ವ – ಹಯ, ವಾಜಿ, ಕುದುರೆ, ತುರಗ

ಆನೆ – ಗಜ, ಕರಿ, ಸಲಗ

ಆಕಳು – ಹಸು, .............. (ಪದಗಳನ್ನು ಸೇರಿಸಿಕೊಳ್ಳಲು ಮಕ್ಕಳಿಗೆ ಸೂಚಿಸುವುದು)

## ಹೋಲಿಕೆಯ ಟಿಪ್ಪಣಿ

ಪಾಠಪುಸ್ತಕದಲ್ಲಿ 'ನನ್ನ ದೇಶ' ಎಂಬ ಕವಿತೆಯನ್ನು ಕೊಡಲಾಗಿದೆ. ಮಕ್ಕಳು ಓದಿ ರಾಗವಾಗಿ ಹಾಡಲಿ. ಬಳಿಕ ಆಶಯಗ್ರಹಣ ಪ್ರಶ್ನೆಗಳನ್ನು ಕೇಳುವುದರ ಮೂಲಕ ಕವಿತೆಯ ಆಶಯವು ತಿಳಿಯುವಂತೆ ಮಾಡುವುದು.

- ಕವಿ ನಮ್ಮ ದೇಶವನ್ನು ದೇವ ಭೂಮಿ ಎಂದು ಹೇಳಲು ಕಾರಣವೇನು?
- ನಮ್ಮ ದೇಶದಲ್ಲಿ ಯಾವೆಲ್ಲ ನದಿಗಳು ಹರಿಯುತ್ತವೆ?
- ನಮ್ಮ ದೇಶ ಯಾಕಾಗಿ ಪುಣ್ಯಭೂಮಿ ಆಗಿದೆ?
- ಕವಿ ಕವಿತೆಯ ಮೂಲಕ ನೀಡುವ ಸಂದೇಶವೇನು?

ಬಳಿಕ ಮಕ್ಕಳು ಗುಂಪುಗಳಾಗಿ ಕುಳಿತು ಈ ಕವಿತೆಯನ್ನು 'ಐದು ಬೆರಳು ಕೂಡಿ' ಪದ್ಯದೊಂದಿಗೆ ಹೋಲಿಸಿ ಚರ್ಚಿಸಲಿ. ಆಮೇಲೆ ಮಕ್ಕಳು ವೈಯಕ್ತಿಕವಾಗಿ ಆ ಎರಡು ಕವಿತೆಗಳ ಹೋಲಿಕೆಯ ಟಿಪ್ಪಣಿ ತಯಾರಿಸಲಿ. ಬಳಿಕ ಕೆಲವರಿಂದ ಮಂಡನೆ, ಚರ್ಚೆ.

### ಮೌಲ್ಯನಿರ್ಣಯ ಸೂಚಕಗಳು

- ಎರಡು ಕವಿತೆಗಳ ಆಶಯದ ಸಾಮ್ಯ ವ್ಯತ್ಯಾಸಗಳನ್ನು ಕಂಡುಹಿಡಿದು ಬರೆಯಲಾಗಿದೆ.
- ಕವಿತೆಗಳ ರಚನಾ ಶೈಲಿಯನ್ನು ಹೋಲಿಸಿ ಬರೆಯಲಾಗಿದೆ. (ಸಾಲುಗಳು, ಪ್ರಾಸಗಳು, ವರ್ಣನೆಗಳು)
- ಟಿಪ್ಪಣಿಯಲ್ಲಿ ಆಶಯಗಳನ್ನು ಕ್ರಮೀಕರಿಸಿ ಬರೆಯಲಾಗಿದೆ.
- ತನ್ನದೇ ಆದ ಶೈಲಿಯಲ್ಲಿ ಬರೆಯಲಾಗಿದೆ.
- ಅಕ್ಷರ, ಪದ, ವಾಕ್ಯ ಇವೇ ಮೊದಲಾದ ಭಾಷಾ ಘಟಕಗಳನ್ನು ಸೂಕ್ತವಾಗಿ ಬಳಸಲಾಗಿದೆ.

ಮಕ್ಕಳು ಗುಂಪಿನಲ್ಲಿ ಕುಳಿತು ತಮ್ಮ ಟಿಪ್ಪಣಿಗಳನ್ನು ಮಂಡಿಸಲಿ. ಸೂಚಕಗಳಿಗನುಸಾರವಾಗಿ ಉತ್ತಮವಾದ ಟಿಪ್ಪಣಿಯನ್ನು ಆಯ್ಕೆ ಮಾಡಲಿ. ಅಗತ್ಯವಿದ್ದರೆ ಅಧ್ಯಾಪಕರು ತಯಾರಿಸಿದ ಟಿಪ್ಪಣಿಯನ್ನು ಚಾರ್ಟಿನಲ್ಲಿ ತೂಗಿ ಹಾಕುವುದು.

**ಸಾಮ್ಯ :**

- 'ಐದು ಬೆರಳು' ಮತ್ತು 'ನನ್ನ ದೇಶ' – ಎರಡು ಪದ್ಯಗಳು ದೇಶಭಕ್ತಿ ಗೀತೆಗಳಾಗಿವೆ.
- ಎರಡೂ ಪದ್ಯಗಳನ್ನು ರಾಗವಾಗಿ ಹಾಡಬಹುದು.

- ಎರಡು ಪದ್ಯಗಳಲ್ಲೂ ಅಂತ್ಯಪ್ರಾಸವಿದೆ.
- ಭಾರತದಲ್ಲಿ ಹರಿಯುವ ಪವಿತ್ರ, ನದಿಗಳ ಬಗ್ಗೆ ಎರಡೂ ಪದ್ಯಗಳಲ್ಲಿ ಹೇಳಲಾಗಿದೆ.
- ದ್ವೇಷವನ್ನು ಮರೆತು ಒಗ್ಗಟ್ಟಿನಿಂದ ಬಾಳಬೇಕೆಂಬ ಸಂದೇಶವು ಎರಡೂ ಕವಿತೆಗಳಲ್ಲಿದೆ.
- ಪರಸ್ಪರ ಪ್ರೀತಿಯೊಂದೇ ದ್ವೇಷವನ್ನು ಮರೆಸುವ ಸಾಧನ ಎಂದು ಎರಡೂ ಪದ್ಯಗಳಲ್ಲಿ ಬಿಂಬಿಸಲಾಗಿದೆ.

**ವ್ಯತ್ಯಾಸ :**

- 'ನನ್ನ ದೇಶ' ಹಾಡಿನಲ್ಲಿ ಭಾರತದ ಶ್ರೇಷ್ಠತೆಯ ಬಗ್ಗೆ ಉಲ್ಲೇಖವಿದ್ದರೆ 'ಐದು ಬೆರಳು ಕೂಡಿ' ಪದ್ಯದಲ್ಲಿ ಒಗ್ಗಟ್ಟಿಗೆ ಹೆಚ್ಚು ಒತ್ತು ನೀಡಿದ್ದಾರೆ.

**ಟಿಪ್ಪಣಿ**

ಇಲ್ಲಿ ನೀಡಲಾದ 'ಐದು ಬೆರಳು ಕೂಡಿ' ಮತ್ತು 'ನನ್ನ ದೇಶ' ಎಂಬ ಎರಡೂ ಪದ್ಯಗಳು ದೇಶಭಕ್ತಿಯನ್ನು ಪ್ರತಿಬಿಂಬಿಸುತ್ತವೆ. ಎರಡೂ ಪದ್ಯಗಳಲ್ಲಿ ಅಂತ್ಯಪ್ರಾಸಗಳಿದ್ದು ರಾಗವಾಗಿ ಹಾಡಲು ಯೋಗ್ಯವಾಗಿವೆ. ದೇಶದ ಪವಿತ್ರ ನದಿಗಳ ಕುರಿತು ಉಲ್ಲೇಖಿಸಲಾಗಿದೆ. ಪ್ರೀತಿಯು ದ್ವೇಷವನ್ನು ಮರೆಸಿ ಸ್ನೇಹವನ್ನು ಮೂಡಿಸಬೇಕು ಎನ್ನುತ್ತವೆ. ನಾವೆಲ್ಲರೂ ಒಗ್ಗಟ್ಟಿನಿಂದ ಬಾಳಬೇಕೆನ್ನುವ ಸಂದೇಶವನ್ನು ನೀಡುತ್ತವೆ.

'ನನ್ನ ದೇಶ' ಪದ್ಯದಲ್ಲಿ ಭಾರತ ದೇಶದ ಶ್ರೇಷ್ಠತೆಯ ಬಗ್ಗೆ ಹೆಚ್ಚು ಉಲ್ಲೇಖವಿದ್ದರೆ 'ಐದು ಬೆರಳು ಕೂಡಿ' ಪದ್ಯದಲ್ಲಿ ಒಗ್ಗಟ್ಟಿನಲ್ಲಿ ಬಾಳಬೇಕೆಂಬ ವಿಷಯಕ್ಕೆ ಪ್ರಾಧಾನ್ಯ ನೀಡಲಾಗಿದೆ.

## ಮುಂದುವರಿಸಿ ಬರೆಯಿರಿ

ವಿದ್ಯಾರ್ಥಿಗಳ ಸೃಜನಶೀಲತೆಗೆ ಅವಕಾಶ ಮಾಡಿಕೊಡಲು ಈ ಚಟುವಟಿಕೆಯನ್ನು ಬಳಸಬಹುದು. ಪದ್ಯ ಮುಂದುವರಿಸಿ ಬರೆಯುವುದು. ಉಚಿತವಾದ ಶೀರ್ಷಿಕೆ ನೀಡಲು ಮರೆಯಬಾರದು.

ದೇಶದ ಗೌರವ ಉಳಿಸೋಣ
ದೇಶ ಸೇವೆಗೆ ತೊಡಗೋಣ
ಭಾರತ ಮಾತೆಯ ಏಳ್ಗೆಗೆ ಮೀಸಲು
ನಮ್ಮಯ ಕಾಯವು ಎನ್ನೋಣ
ಭೇದವ ಮರೆತು ಸ್ನೇಹದಿ ಬೆರೆತು
ಮಾತೆಯ ಸೇವೆಯ ಮಾಡೋಣ

ಮಕ್ಕಳು ತಮ್ಮ ಸೃಷ್ಟಿಗಳನ್ನು ಬಳಸಿ ಸಂಚಿಕೆ ತಯಾರಿಸಲಿ.

## ಸಂಗ್ರಹಿಸಿರಿ

ದೇಶಭಕ್ತಿಗೀತೆಗಳನ್ನು ಸಂಗ್ರಹಿಸಿ ಹಾಡಲಿ. ವಿವಿಧ ಕವಿಗಳು ಬರೆದ ಹಾಡುಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಲಿ.

## ನಾವು ಒಂದು

ಭಾರತ ಮಾತೆಯ
ಕೊರಳಿಗೆ ನಾವು
ಸುಂದರ ಹೂವು ಆಗೋಣ

ತೋಟದಿ ಬೆಳೆದ
ಹೊಸ ಹೊಸ ಬಗೆಯ
ಹೂಗಳ ಪರಿಮಳ ಬೀರೋಣ

ಬನ್ನಿರಿ ಮಕ್ಕಳೆ
ತನ್ನಿರಿ ನಿಮ್ಮಯ
ಸುಂದರ ಶಕ್ತಿಯ ನೀತಿಯನು

ಎಲ್ಲರು ಸೇರುತ
ಮಾಲೆಯ ಹೆಣೆಯುತ
ಸುಂದರ ಹಾರವ ಮಾಡೋಣ

ಕೇಸರಿ ಬಣ್ಣದ
ಕನಕಾಂಬರವಿದು
ತ್ಯಾಗದ ಜೀವಕೆ ಆಧಾರ

ಅಚ್ಚ ಮಲ್ಲಿಗೆ
ಹೊಚ್ಚ ಹೊಸತಿದು
ಸತ್ಯದ ದಾರಿಗೆ ನಿರ್ಧಾರ

ಹಸುರಿನ ಮರಗಳು
ಪಚ್ಚೆಯ ತೆನೆಗಳು
ಸುಖ ಸಮೃದ್ಧಿಗೆ ಪುಳಕಿತವು

ಕೇಸರಿ ಹಸಿರು
ನಡುವಿದೆ ಬಿಳುಪು
ನಮ್ಮಯ ಧ್ವಜದ ಸಂಕೇತ

ಸುಂದರ ಮಾಲೆಯ
ಅಂದದಿ ಕಟ್ಟುತ
ಮಾತೆಯ ಕೊರಳಿಗೆ ಹಾಕೋಣ

ಭಾರತ ದೇಶದ
ಮಕ್ಕಳು ನಾವು
ಒಂದೇ ಎನ್ನುತ ಹಾಡೋಣ

**(ಸಂಗ್ರಹ)**

## ವೇಷ ಬೇರೆ ಭಾಷೆ ಬೇರೆ ದೇಶ ಒಂದೇ ಭಾರತ

ವೇಷ ಬೇರೆ ಭಾಷೆ ಬೇರೆ ದೇಶ ಒಂದೇ ಭಾರತ
ಒಂದೇ ತಾಯ ಮಕ್ಕಳೆಂದು ಘೋಷಿಸೋಣ ಸಂತತ

ತೀರ್ಥ ನದಿಯ ಕ್ಷೇತ್ರವಿದೋ ಭವ್ಯ ನಾಡು ಭಾರತ
ಋಷಿಗಳುಸಿರ ಹರಕೆ ಹೊತ್ತ ದಿವ್ಯ ನಾಡು ಭಾರತ
ಕಡಲುಗಳನೆ ಉಡುಗೆಯುಟ್ಟು
ಘಟ್ಟದೊಳು ಬಳೆಯ ತೊಟ್ಟು
ನದಿ ನದಗಳ ಹಾರವಿಟ್ಟು
ಸೇತುವಿಂದ ಸಿಂಧುವರೆಗೂ ಬೆಳೆದು ನಿಂತ ಭಾರತ
ಭಂಗಗೊಳದ ವಂಗ ನಾಡ ಕೂಡಿ ಮೆರೆದ ಭಾರತ
ಇದೇ ನಮ್ಮ ಭಾರತ ಪುಣ್ಯ ಭೂಮಿ ಭಾರತ

ಭರತ ಖಂಡದಿಂದಲೇನೆ ನಿನಗೆ ಮೋಕ್ಷ ಪ್ರಾಪ್ತಿ
ತಪ್ಪಿ ನುಡಿದೆ ಎಂದರಹುದು ನಿನಗೆ ತಕ್ಕ ಶಾಸ್ತಿ
ಯಾವ ದೇಶದಲ್ಲೇ ದುಡಿ ಯಾವ ಮಣ್ಣಿನಲ್ಲೇ ಮಡಿ
ನಿಂತ ನೆಲವು ಹಿಡಿದ ಹುಡಿ ಭರತ ಭೂಮಿ ಎಂದು ತಿಳಿ

ಮಣ್ಣ ಮೋಹ ಬಿಟ್ಟರಿಲ್ಲೋ ನಿನಗೆ ಬೇರೆ ಸದ್ಗತಿ
ಬರಿಯ ಮಾತಿನಲ್ಲೇ ಮುಗಿವುದಲ್ಲೋ ನಿನ್ನ ಸಂಸ್ಕೃತಿ
ಮಾನವತೆಯ ಶುಚಿ ಮತಿ ಸನಾತನದ ಸತ್ಕೃತಿ

# 3. ಸಮಬಾಳು

**ಚಟುವಟಿಕೆಗಳು**

ಭಾರತದ ವೈವಿಧ್ಯವನ್ನು ಸೂಚಿಸುವ ವೀಡಿಯೋವನ್ನು ಪ್ರದರ್ಶಿಸುವುದು. (ವೇಷ, ಭಾಷೆ, ಸಂಸ್ಕೃತಿ, ಧರ್ಮ ಇತ್ಯಾದಿ ವಿವರಗಳಿರುವ)

- ಎಲ್ಲರೂ ಒಂದೇ ರೀತಿಯ ವೇಷಭೂಷಣ ತೊಟ್ಟಿರುವರೇ?
- ಅವರ ಭಾಷೆಯಲ್ಲಿ ಸಾಮ್ಯ ಇದೆಯೇ?
- ನೀವು ನೋಡಿದ ವೀಡಿಯೋದಲ್ಲಿ ಇರುವವರು ಒಂದೇ ಧರ್ಮಕ್ಕೆ ಸೇರಿದವರೇ?

ಮುಂತಾದ ಪ್ರಶ್ನೆಗಳನ್ನು ಕೇಳುವ ಮೂಲಕ ಭಾರತದಲ್ಲಿ ವೈವಿಧ್ಯ ಇದ್ದರೂ ಎಲ್ಲರೂ ಪ್ರೀತಿ, ವಿಶ್ವಾಸದಿಂದ ಜೀವಿಸುತ್ತಿದ್ದಾರೆ, ಜೀವಿಸಬೇಕು ಎಂಬ ವಿಷಯದ ಕಡೆಗೆ ಚರ್ಚೆ ಸಾಗಬೇಕು. ಇಂತಹ ವಿಚಾರಗಳನ್ನು ತಿಳಿಸುವ ಸಮಬಾಳು ಎಂಬ ಗದ್ಯವನ್ನು ಓದಲು ಹೇಳುವುದು. ಅಧ್ಯಾಪಕರು, ವಿದ್ಯಾರ್ಥಿಗಳಿಂದ ಓದಿಸಲು ಯಾವುದೇ ತಂತ್ರವನ್ನು ಬಳಸಬಹುದು.

### ಅಭಿಪ್ರಾಯ ಬರೆಯಿರಿ

ಮಕ್ಕಳನ್ನು ಗುಂಪು ಮಾಡಿ 'ಎಲ್ಲರಿಗೂ ಸಮಬಾಳು ಎಲ್ಲರಿಗೂ ಸಮಪಾಲು' ಎಂಬ ವಿಷಯದ ಕುರಿತು ಗದ್ಯದ ಆಧಾರದಲ್ಲಿ ಪರಸ್ಪರ ಚರ್ಚಿಸಲು ಹೇಳುವುದು. ಚರ್ಚೆಯ ಆಧಾರದಲ್ಲಿ ಅಭಿಪ್ರಾಯಗಳನ್ನು ಬರೆದು ಮಂಡಿಸಲಿ.

### ಉತ್ತರಿಸಿರಿ

ಪಾಠಪುಸ್ತಕದಲ್ಲಿರುವ ಪ್ರಶ್ನೆಗಳಿಗೆ ಗದ್ಯಭಾಗವನ್ನು ಓದಿ ಆಶಯಗ್ರಹಣ ಮಾಡಿ ಉತ್ತರಿಸಲಿ. ಮೊದಲು ಬಾಯ್ದೆರೆಯಾಗಿ ಉತ್ತರವನ್ನು ಹೇಳಲಿ. ಅಗತ್ಯವೆನಿಸಿದಲ್ಲಿ ಅಧ್ಯಾಪಕರು ಸರಿಪಡಿಸುವುದು. ಅನಂತರ ಉತ್ತರವನ್ನು ಬರೆಯಲಿ.

### ಕರಪತ್ರ ತಯಾರಿಸಿರಿ

ಕರಪತ್ರ ಬರೆಯುವ ವಿಧಾನವನ್ನು ಹಿಂದಿನ ತರಗತಿಯಲ್ಲಿ ಮಕ್ಕಳು ತಿಳಿದಿರುತ್ತಾರೆ. ಕರಪತ್ರದಲ್ಲಿರಬೇಕಾದ ವಿಷಯಗಳನ್ನು ಅಧ್ಯಾಪಕರು ಪುನಃ ನೆನಪಿಸುವುದು.

(ಸ್ಥಳ, ತಾರೀಕು, ಸಂಬೋಧನೆ, ಮುಕ್ತಾಯ)

ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ರಾಷ್ಟ್ರೀಯ ಭಾವೈಕ್ಯವನ್ನು ಪ್ರತಿಬಿಂಬಿಸುವಂತಹ ಕರಪತ್ರವನ್ನು ತಯಾರಿಸಲು ಹೇಳುವುದು. ಮಕ್ಕಳು ತಯಾರಿಸಿ ಮಂಡಿಸಲಿ. ಉಳಿದ ಗುಂಪಿನವರು ಸೂಚಕಗಳ ಆಧಾರದಲ್ಲಿ ಮೌಲ್ಯಮಾಪನ ಮಾಡಲಿ.

**ಸೂಚಕಗಳು :**

- ದೇಶದ ಏಕತೆ, ಸಮಗ್ರತೆಗೆ ಸಂಬಂಧಿಸಿದ ವಿಚಾರಗಳನ್ನು ಬರೆಯಲಾಗಿದೆ.
- ವಿಚಾರಗಳು ಮನಸ್ಸನ್ನು ಆಕರ್ಷಿಸುವ ರೀತಿಯಲ್ಲಿ ಬರೆಯಲ್ಪಟ್ಟಿವೆ.
- ಕರಪತ್ರದ ಚೌಕಟ್ಟನ್ನು ಪಾಲಿಸಲಾಗಿದೆ.
- ಅಕ್ಷರ, ಪದ, ವಾಕ್ಯಗಳು ಇವೇ ಮೊದಲಾದ ಭಾಷಾ ಘಟಕಗಳನ್ನು ಯೋಗ್ಯ ರೀತಿಯಲ್ಲಿ ಬಳಸಲಾಗಿದೆ.

### ಕರಪತ್ರ

## ಒಗ್ಗಟ್ಟೇ ಬಲ ಒಡಕೇ ವಿನಾಶ

ನೂಜಿಬೆಟ್ಟು

ಮಾನ್ಯರೇ, 25.2.2015

ಭಾರತವು ಭವ್ಯ ಪರಂಪರೆ ಇರುವ ದೇಶವಾಗಿದೆ. ನಮ್ಮ ಹಿರಿಯರು ವಿವಿಧತೆಯಲ್ಲಿ ಏಕತೆಯನ್ನು ಸಾರುತ್ತಾ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದಕ್ಕಾಗಿ ಶ್ರಮಿಸಿದ್ದಾರೆ. ಆದರೆ ಇಂದು ವಿವಿಧ ಕಾರಣಗಳಿಂದ ಅಲ್ಲಲ್ಲಿ ಒಗ್ಗಟ್ಟಿಗೆ ಧಕ್ಕೆ ತರುವಂತಹ ಕೃತ್ಯಗಳು ನಡೆಯುತ್ತಿರುವುದು ವಿಷಾದನೀಯ. ಕೊಲೆ, ಸುಲಿಗೆ, ಅನಾಚಾರ, ಮತೀಯ ಗಲಭೆ ಇತ್ಯಾದಿಗಳು ಭಾರತದ ಭವ್ಯತೆಗೆ ಹಾನಿಯುಂಟುಮಾಡುತ್ತಿವೆ. ಇದು ಹೀಗೆಯೇ ಮುಂದುವರಿದಲ್ಲಿ ನಮ್ಮ ದೇಶವು ಅಶಾಂತಿಯ

ಗೂಡಾಗಬಹುದು. ಆದ್ದರಿಂದ ನಾವೆಲ್ಲ ಎಚ್ಚತ್ತು ಸಹೋದರ ಭಾವನೆಯಿಂದ ಬಾಳಬೇಕಾದ ಅನಿವಾರ್ಯತೆ ಇದೆ. ಇಂತಹ ಕೃತ್ಯಗಳನ್ನು ನಿಲ್ಲಿಸುವಲ್ಲಿ ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ನಾವೆಲ್ಲ ಹಮ್ಮಿಕೊಳ್ಳಬೇಕಾಗಿದೆ. ಆ ಮೂಲಕ ಭವ್ಯ ಭಾರತದ ಕನಸು ನನಸಾಗಲು ನಾವೆಲ್ಲ ಒಗ್ಗಟ್ಟಿನಿಂದ ಶ್ರಮಿಸೋಣ.

ಇತಿ,

ಸಂಚಾಲಕರು
**ಸಮಾಜ ವಿಜ್ಞಾನ ಸಂಘ**
ಸರಕಾರಿ ಪ್ರೌಢ ಶಾಲೆ,
ನೂಜಿಬೆಟ್ಟು

## ವಾಕ್ಯ ರಚಿಸಿರಿ

ಅಡಿಗೆರೆ ಎಳೆದ ಪದಗಳ ವಿರೋಧಾರ್ಥವನ್ನು ಸೂಚಿಸುವ ಪದಗಳನ್ನು ಗುರುತಿಸಿ ಬರೆಯಲಿ. ಬಳಿಕ ಆ ಪದಗಳನ್ನು ಬಳಸಿ ಅರ್ಥಪೂರ್ಣವಾದ ಬೇರೆ ವಾಕ್ಯಗಳನ್ನು ರಚಿಸಲಿ.

ಅಸಮಾನತೆ × ಸಮಾನತೆ

ಬಿಕ್ಕಟ್ಟು × ಒಗ್ಗಟ್ಟು

ಅಧರ್ಮ × ಧರ್ಮ

ದುರಾಚಾರ × ಸದಾಚಾರ

ಅಗೌರವ × ಗೌರವ

## ಪತ್ರಿಕಾ ವಾರ್ತೆ ತಯಾರಿಸಿರಿ

ಕಾರ್ಯಕ್ರಮವೊಂದರ ವಾರ್ತೆಯನ್ನು ಸೂಕ್ತ ರೀತಿಯಲ್ಲಿ ರಚಿಸುವ ಸಾಮರ್ಥ್ಯವು ಮಕ್ಕಳಿಗೆ ಸಿಗಬೇಕು. ಆ ಉದ್ದೇಶದ ಈಡೇರಿಕೆಯನ್ನು ಈ ಚಟುವಟಿಕೆಯ ಮೂಲಕ ನೆರವೇರಿಸಬಹುದು. ಗಾಂಧಿಜಯಂತಿಯಂದು ಯಾವೆಲ್ಲ ಕಾರ್ಯಕ್ರಮಗಳು ಜರಗುತ್ತವೆ ಎಂಬುದನ್ನು ಚರ್ಚಿಸಲಿ. ಅನಂತರ ಗುಂಪಿನಲ್ಲಿ ವಾರ್ತೆಯನ್ನು ಸಿದ್ಧಪಡಿಸಿ ಮಂಡಿಸುವುದು. ಸೂಚಕಗಳ ಆಧಾರದಲ್ಲಿ ಸ್ವಮೌಲ್ಯಮಾಪನ ಮಾಡಿ ಪರಿಷ್ಕರಿಸಲಿ.

- ವಾರ್ತೆಯು ಸೂಕ್ತವಾದ ಆಕರ್ಷಕವಾದ ಶೀರ್ಷಿಕೆಯನ್ನು ಒಳಗೊಂಡಿರಬೇಕು.
- ವಾರ್ತೆಯಲ್ಲಿ ಎಲ್ಲಾ ವಿಚಾರಗಳಿದ್ದು ಸಂಕ್ಷಿಪ್ತವಾಗಿರಬೇಕು.
- ವಾರ್ತೆಯು ವಸ್ತುನಿಷ್ಠವೂ ಸ್ಪಷ್ಟವೂ ಆಗಿರಬೇಕು.
- ಅಕ್ಷರ, ಪದ, ವಾಕ್ಯ ಇತ್ಯಾದಿ ಭಾಷಾಘಟಕಗಳನ್ನು ತನ್ನದಾದ ಶೈಲಿಯಲ್ಲಿ ಸೂಕ್ತ ರೀತಿಯಲ್ಲಿ ಬಳಸಬೇಕು.

## ಪತ್ರಿಕಾ ವಾರ್ತೆ

### ರಂಜಿಸಲಿದೆ ಗಾಂಧಿಜಯಂತಿ

ಕುಂಬಳೆ : ಸೆಪ್ಟಂಬರ್26. ಇಲ್ಲಿಗೆ ಸಮೀಪದ ಕಂಚಿನಡ್ಕ ಎ.ಯು.ಪಿ. ಶಾಲೆಯಲ್ಲಿ ಅಕ್ಟೋಬರ್ 2ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಗಾಂಧಿಜಯಂತಿಯ ಆಚರಣೆ ನಡೆಯಲಿರುವುದು. ಬೆಳಗ್ಗೆ 10 ಗಂಟೆಗೆ ನಡೆಯುವ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಳೀಯ ಆರೋಗ್ಯಕೇಂದ್ರದ ವೈದ್ಯಾಧಿಕಾರಿ ಡಾ. ಗುರುಗೋಕುಲ ವಹಿಸುವರು. ಉಪಜಿಲ್ಲಾ ಶಿಕ್ಷಣಾಧಿಕಾರಿ ಶ್ರೀಯುತ ಅಹಮ್ಮದ್, ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷರು, ಮಾತೃಸಂಘದ ಅಧ್ಯಕ್ಷೆ ಮುಂತಾದವರು ಉಪಸ್ಥಿತರಿರುವರು. ಮಕ್ಕಳಿಂದ ವಿವಿಧ ವಿನೋದಾವಳಿಗಳು ಜರಗಲಿರುವುವು.

**ಪ್ರಬಂಧ ತಯಾರಿಸಿರಿ**

ಪ್ರಬಂಧ ರಚನೆಯಲ್ಲಿ ಗಮನಿಸಬೇಕಾದ ಅಂಶಗಳನ್ನು 1ನೇ ಘಟಕದಲ್ಲಿ ನೀಡಲಾಗಿದೆ. ಓದಿರುವಿರಲ್ಲವೇ? ಮಕ್ಕಳಿಗೆ ಆ ಅಂಶಗಳನ್ನು ಪುನಃ ನೆನಪಿಸುವುದು.

ಇಲ್ಲಿ ರಾಷ್ಟ್ರೀಯ ಭಾವೈಕ್ಯ ಎಂಬ ವಿಷಯದ ಕುರಿತು ಪ್ರಬಂಧ ರಚಿಸಬೇಕಾಗಿದೆ. ಮಕ್ಕಳಿಗೆ ವಿಷಯ ಸಂಗ್ರಹಕ್ಕಾಗಿ ಅಧ್ಯಾಪಕರು ಸಹಾಯ ಮಾಡುವುದು. ದೈನಿಕಗಳು, ಮಾಸಿಕಗಳು, ಆಕರಗ್ರಂಥಗಳು, ಓದುವ ಮೂಲೆ, ದೃಶ್ಯ-ಶ್ರಾವ್ಯ ಮಾಧ್ಯಮಗಳು ಮುಂತಾದವುಗಳಿಂದ ಪೂರಕ ವಿಷಯಗಳನ್ನು ಸಂಗ್ರಹಿಸುವುದು. (ಗುಂಪುಗಳಲ್ಲಿ)

ರಾಷ್ಟ್ರೀಯ ಭಾವೈಕ್ಯದಲ್ಲಿ ಒಳಗೊಳ್ಳಬೇಕಾದ ವಿಷಯಗಳ ಪದಸೂರ್ಯವನ್ನು ಪಾಠಪುಸ್ತಕದಲ್ಲಿ ನೀಡಲಾಗಿದೆ ತಾನೇ? ಅವುಗಳನ್ನು ಉಪಯೋಗಿಸಿಕೊಂಡು ಮಕ್ಕಳು ಚರ್ಚಿಸಿ ವಿಷಯವನ್ನು ಸಂಗ್ರಹಿಸಲಿ. ಸಂಗ್ರಹಿಸಿದ ಮಾಹಿತಿಗಳನ್ನು ವ್ಯವಸ್ಥಿತವಾಗಿ ಕ್ರಮೀಕರಿಸಿ ಪ್ರಬಂಧ ರಚಿಸಿ ಮಂಡಿಸಲಿ. ಮೌಲ್ಯನಿರ್ಣಯದ ನಂತರ ಅಗತ್ಯವಿದ್ದಲ್ಲಿ ಸರಿಪಡಿಸಿ ಬರೆಯುವುದು.

**ಸೂಚಕಗಳು :**

- ರಾಷ್ಟ್ರೀಯ ಭಾವೈಕ್ಯವನ್ನು ಸಾರುವ ವಿಚಾರಗಳನ್ನು ಉದಾಹರಣೆಯೊಂದಿಗೆ ಸಮರ್ಥಿಸಿ ಬರೆಯಲಾಗಿದೆ.
- ರಾಷ್ಟ್ರೀಯ ಭಾವೈಕ್ಯಕ್ಕೆ ಸಂಬಂಧಿಸಿದ (ಪದಸೂರ್ಯದಲ್ಲಿ ನೀಡಲಾದ) ಸಮಗ್ರ ವಿಚಾರಗಳನ್ನು ಬರೆಯಲಾಗಿದೆ.
- ವಿಚಾರಗಳಲ್ಲಿ ಸತ್ಯಾಂಶಗಳನ್ನೊಳಗೊಂಡಿದ್ದು ವಸ್ತುನಿಷ್ಠವಾಗಿವೆ.
- ಪದ, ವಾಕ್ಯ, ನುಡಿಗಟ್ಟು ಲೇಖನ ಚಿಹ್ನೆ ಇವೇ ಮೊದಲಾದ ಭಾಷಾ ಘಟಕಗಳನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಂಡು ವಿಷಯಗಳನ್ನು ಬರೆಯಲಾಗಿದೆ.
- ವಿಚಾರಗಳನ್ನು ಅನುಕ್ರಮವಾಗಿ ಬರೆಯಲಾಗಿದೆ.
- ಪ್ರಬಂಧಕ್ಕೆ ಸೂಕ್ತವಾದ ಶೀರ್ಷಿಕೆ ನೀಡಲಾಗಿದೆ.
- ಆರಂಭ ವಿಷಯ ವಿಸ್ತಾರ, ಮುಕ್ತಾಯ ಎಂಬೀ ಹಂತಗಳನ್ನು ಪಾಲಿಸಲಾಗಿದೆ.
- ವಿಚಾರಗಳನ್ನು ಖಂಡಗಳಾಗಿ ವಿಭಾಗಿಸಿ ಬರೆಯಲಾಗಿದೆ.

**ಪ್ರಬಂಧ**

## ಭಾವೈಕ್ಯ

ಭಾರತ ದೇಶವು ವಿಭಿನ್ನ ಭಾಷೆ, ವೇಷ, ಧಾರ್ಮಿಕ ಮನೋಭಾವನೆಗಳಿರುವ ಜನರಿಂದ ಕೂಡಿದ್ದರೂ ಜನರಲ್ಲಿ ಹಿಂದೆಯೇ ಸೌಹಾರ್ದತೆ ಇತ್ತು. ಸಹಿಷ್ಣುತೆ ಭಾರತೀಯ ಸಂಸ್ಕೃತಿಯ ಮೂಲತತ್ವವಾಗಿತ್ತು ಎನ್ನಬಹುದು. ಎಲ್ಲರೂ ಸುಖವಾಗಿರಬೇಕು. ಒಗ್ಗಟ್ಟಿನಿಂದ ಬಾಳಬೇಕು ಎಂಬುದು ಪರಂಪರೆಯಿಂದಲೇ ಬಂದಿರುವ ಭಾವನೆಯಾಗಿದೆ.

ಇಂತಹ ಸಾಂಸ್ಕೃತಿಕವಾದ ಕಲ್ಪನೆಗಳಿದ್ದರೂ, ರಾಜಕೀಯವಾಗಿ ಅಂತಹ ಒಗ್ಗಟ್ಟು ಜನರಲ್ಲಿ ಇರಲಿಲ್ಲ. ಅನೇಕ ರಾಜ ಮಹಾರಾಜರು ರಾಜ್ಯವನ್ನು ಆಳುತ್ತಿರುವಾಗ ಅವರಲ್ಲಿದ್ದ ಸ್ವಾರ್ಥ, ವೈಮನಸ್ಸು ಮುಂತಾದವನ್ನು ಬ್ರಿಟಿಷರು ಉಪಯೋಗಿಸಿಕೊಂಡರು. ಹೀಗಾಗಿ ನಮ್ಮ ಭಾರತ ದೇಶವು ಬ್ರಿಟಿಷರ ಪಾಲಾಯಿತು.

ಅನೇಕ ಮಹಾನುಭಾವರ ಅವಿರತ ಹೋರಾಟದ ಪರಿಣಾಮವಾಗಿ ನಮ್ಮ ತಾಯ್ನಾಡು ಮತ್ತೆ ಸ್ವತಂತ್ರವಾಯಿತು. ಅನೇಕ ರಾಜ್ಯಗಳ ಆಡಳಿತ ವ್ಯವಸ್ಥೆಗಳು ಒಂದೇ ಕಡೆ ಕೇಂದ್ರೀಕೃತವಾಗಿ ಎಲ್ಲಾ ರಾಜ್ಯಗಳನ್ನು ಒಂದಾಗಿಸಿ ಭಾರತವು ಪ್ರಜಾಪ್ರಭುತ್ವ ರಾಷ್ಟ್ರವಾಯಿತು. ಪ್ರತೀ ರಾಜ್ಯದಲ್ಲೂ ತನ್ನದೇ ಆದ ಸರಕಾರವನ್ನು ರಚಿಸಿಕೊಳ್ಳಲು ಅವಕಾಶ ಕಲ್ಪಿಸಿ ಅವುಗಳ ಆಗುಹೋಗುಗಳನ್ನು

ವಿಚಾರಿಸುವ ಜವಾಬ್ದಾರಿಯನ್ನು ಇಂದು ಕೇಂದ್ರ ಸರಕಾರ ವಹಿಸಿಕೊಂಡಿದೆ.

ವಿಶಾಲವಾದ ಈ ದೇಶದಲ್ಲಿ ಅನೇಕ ಧಾರ್ಮಿಕ, ಭಾಷಿಕ ಪಂಗಡಗಳೂ, ಜಾತಿ ಪಂಗಡಗಳೂ ಇವೆ. ಆದರೆ ಎಲ್ಲರೂ ಭರತಮಾತೆಯ ಮಕ್ಕಳು. ನಾವೆಲ್ಲರೂ ಭಾರತೀಯರು. ಈ ಭಾವನೆ ಮೂಡಬೇಕಾದರೆ ನಾವೆಲ್ಲರೂ ಒಗ್ಗಟ್ಟಾಗಿರಬೇಕು. ಒಂದು ತೋಟದಲ್ಲಿ ಅನೇಕ ಬಗೆಯ ಗಿಡಗಳು, ಮರಗಳು, ಬಳ್ಳಿಗಳು ಅವುಗಳಲ್ಲಿ ಅರಳಿದ ವಿವಿಧ ರೀತಿಯ ಬಣ್ಣ ಬಣ್ಣದ ಹೂಗಳು ಸುವಾಸನೆಯನ್ನು ಬೀರಿ ಇಡೀ ತೋಟವನ್ನು ಸುವಾಸನಾಯುತವಾಗಿ ಮಾಡುತ್ತವೆ. ಇದು ಪ್ರಕೃತಿಯ ಸಮತಾವಾದದ ಲಕ್ಷಣ. ಅದೇ ರೀತಿ ಮಾನವನೂ ಈ ತತ್ವವನ್ನು ತಿಳಿದು ಅನುಸರಿಸಬೇಕು.

ಈಗಿರುವ ಜನಸಾಮಾನ್ಯರಲ್ಲಿ ಇರಬೇಕಾದ ಒಗ್ಗಟ್ಟು, ಸಹಕಾರ–ಸೌಹಾರ್ದ, ಸ್ನೇಹ ಹಿಂದೆ ಎಲ್ಲರಲ್ಲಿ ಹಾಸುಹೊಕ್ಕಾಗಿದ್ದುವು. ಆದರೆ ಇಂದು ಇಂತಹ ಭಾವನೆಗಳಿಗೆ ಪೆಟ್ಟು ಬಿದ್ದು ಬಿರುಕು ತಲೆದೋರಿದೆ. ದೇಶದಲ್ಲಿ ಒಳಗೊಳಗೇ ಭೇದಭಾವನೆ, ಅಂತಃಕಲಹ ಮೂಡಿಬರುತ್ತಿದೆ. ನೆರೆರಾಷ್ಟ್ರಗಳೂ ಭಾರತದ ಭಾವೈಕ್ಯಕ್ಕೆ ಅಡ್ಡಿಯಾಗುತ್ತಿವೆ. ಜೊತೆಗೆ ಜಾತೀಯತೆಯ ಹೆಸರಿನಲ್ಲಿ ಜನರ ಮಧ್ಯೆ ಬಿರುಕು ಉಂಟುಮಾಡಲಾಗುತ್ತಿದೆ. ಸಂವಿಧಾನದಲ್ಲಿ ಜಾತ್ಯತೀತ ರಾಷ್ಟ್ರವೆಂದು ಹೇಳಿದ್ದರೂ ಅದನ್ನು ನಿರ್ಮಿಸಲು 'ಎಲ್ಲರೂ ಪ್ರಯತ್ನಿಸಬೇಕು. ಒಂದು ಕಡೆ ಎಲ್ಲರಿಗೂ ಸಮಾನಾವಕಾಶ ಕಲ್ಪಿಸುತ್ತೇವೆ, ಜಾತೀಯತೆಯನ್ನು ತೊಲಗಿಸುತ್ತವೆ' ಎಂದು ಹೇಳುತ್ತಾ ಇನ್ನೊಂದು ಕಡೆ ಜಾತೀಯತೆಗೆ ಪ್ರೋತ್ಸಾಹ ನೀಡಲಾಗುತ್ತದೆ. ಇದು ಜನರಲ್ಲಿ ಹೊಂದಿಕೊಂಡು ಬಾಳುತ್ತಿದ್ದ ರೀತಿಗೆ ಆತಂಕವನ್ನು ಒಡ್ಡಿದೆ. ರಾಜಕೀಯವಾಗಿ, ಸ್ವಾರ್ಥ ಸಾಧನೆಗಾಗಿ ಇಂತಹ ಭೇದಗಳನ್ನು ಉಪಯೋಗಿಸಲಾಗುತ್ತಿದೆ. ಇದನ್ನೆಲ್ಲಾ ಬದಿಗೊತ್ತಿ 'ಎಲ್ಲರೂ ಸಮಾನರು' ಎಂಬ ಭಾವ ಎಲ್ಲರಲ್ಲೂ ಮೂಡಬೇಕು.

ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡುವುದರ ಜೊತೆಗೆ ಆರ್ಥಿಕ ಸಮಾನತೆ, ಸಾಮಾಜಿಕ ಸಮಾನತೆ ಎಲ್ಲರಿಗೂ ಒಂದೇ ನ್ಯಾಯ, ಎಲ್ಲಾ ಪ್ರಜೆಗಳಿಗೂ ಅವಕಾಶಗಳು ಸಮಾನವಾಗಿ ದೊರಕುವಂತೆ ಮಾಡಬೇಕು. ದೊರಕಿಸಿಕೊಡಬೇಕು. ಆಗ ಮಾತ್ರ ಭಾರತದ ಐಕ್ಯವನ್ನು ನಾವು ಬಲಗೊಳಿಸಬಹುದು.

## ಸಂಸ್ಕೃತಿ ಮತ್ತು ಭಾವೈಕ್ಯತೆ

ಸಂಸ್ಕೃತಿ ಎಂದರೆ ಇದೇ. ಹೀಗೆ, ಎಂದು ವರ್ಣಿಸುವುದಕ್ಕಾಗದು. ಅದು ಜನರ ಜೀವನ ವಿಧಾನ. ಜನರ ನಡೆ, ನುಡಿ, ಆಚಾರ, ವಿಚಾರಗಳೇ ಸಂಸ್ಕೃತಿಯನ್ನು ರೂಪಿಸುತ್ತವೆ. ಪಶುಜೀವನವನ್ನು ಸಂಸ್ಕೃತಿ ಎನ್ನುವುದಿಲ್ಲ. ಮಾನವ ಜೀವನ ಮಾತ್ರ ಸಂಸ್ಕೃತಿಯ ಚೌಕಟ್ಟಿನಲ್ಲಿ ಶೋಭಿಸುತ್ತದೆ. ಏಕೆಂದರೆ, ಮಾನವನಲ್ಲಿ ಇತರ ಪ್ರಾಣಿಗಳಿಗಿಂತ ಶ್ರೇಷ್ಠವಾದ ಗುಣವಿದೆ. ಮಾನವ ಸಂಘಜೀವಿ. ಆತ ತನ್ನ ಅಲೆಮಾರಿತನವನ್ನು ಬಿಟ್ಟು ಸಂಘಜೀವಿಯಾಗಿ ಒಂದೆಡೆ ನೆಲೆ ನಿಂತು ಜೀವಿಸಲಾರಂಭಿಸಿದಂದಿನಿಂದಲೇ ಸಂಸ್ಕೃತಿಯ ಜನನ. ಗುಂಪು ಜೀವನದಲ್ಲಿ ಪ್ರತಿಯೊಬ್ಬರ ಆಚಾರ ವಿಚಾರಗಳು ಎಲ್ಲರೊಡನೆ ಹೊಂದುವಂತಿರಬೇಕು. ಎಲ್ಲರೂ ಎಲ್ಲರಿಗಾಗಿ ಬದುಕಿದಾಗ ಮಾತ್ರ ಗುಂಪುಜೀವನ ಸಾರ್ಥಕವಾಗಬಹುದು. ನಮ್ಮ ಪೂರ್ವಜರ ಜೀವನವನ್ನು ಹೀಗೆ ಅವಲೋಕಿಸಿದಾಗ ನಮಗೆ ಕಾಣುವುದು ಇದೇ. ಏಕತೆಯಿಂದಲೇ ಸಂಸ್ಕೃತಿ ಪೋಷಿತವಾಗಿದೆ. ಸಂಸ್ಕೃತಿಯೂ ಏಕತೆಯನ್ನು ಪೋಷಿಸಿದೆ. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಸಂಸ್ಕೃತಿ ನಿಂತ ನೀರಲ್ಲ, ಹರಿವ ಹೊಳೆ. ನಮ್ಮ ಭಾರತೀಯ ಸಂಸ್ಕೃತಿ ಸನಾತನವಾದುದು. ಪ್ರಸಿದ್ಧವಾದುದು. ಅದು ಕೂಡಾ ಕಾಲದಿಂದ ಕಾಲಕ್ಕೆ ಹಳೆ ಪೊರೆಗಳನ್ನು ಕಳಚಿ ಹೊಸ ಕವಚವನ್ನು ಧರಿಸುತ್ತಾ ಬಂದಿದೆ. ಆದರೆ ಮೊದಲಿನಿಂದಲೂ ಭಾರತೀಯ ಸಂಸ್ಕೃತಿಯ ಪ್ರಧಾನ ಲಕ್ಷಣ ಆಧ್ಯಾತ್ಮವೇ. ಮಾನವನಲ್ಲಿರುವ ಸುಪ್ತಚೇತನವನ್ನು ಜಾಗೃತಗೊಳಿಸಬಹುದಾದ ವಿದ್ಯೆ ಇದು. ಭಾರತದಲ್ಲಿ ಅವತರಿಸಿದ ಎಲ್ಲಾ ಮಹಾಪುರುಷರೂ ಬೋಧಿಸಿದ್ದು, ಸ್ವಾಮಿ ವಿವೇಕಾನಂದರು ಯುರೋಪ್, ಅಮೇರಿಕಾ ಇತ್ಯಾದಿಗಳೆಡೆಯಲ್ಲೂ ಪ್ರಚಾರ ಮಾಡಿದ್ದು. ಈ ಸಮನ್ವಯ ಧರ್ಮವನ್ನೇ, ದ್ವೈತಾದ್ವೈತ ವಿಶಿಷ್ಟಾದ್ವೈತಾದಿ ಸರ್ವ ಸಿದ್ಧಾಂತಗ್ರಾಹಿಯಾದ ಸಮನ್ವಯ ಧರ್ಮದ ಪೂರ್ಣ ದೃಷ್ಟಿಯನ್ನೇ. ಈ ದೃಷ್ಟಿ ವಿದೇಶೀ ಸಂಸ್ಕೃತಿಯ ಕಣ್ಣನ್ನೂ ತೆರೆಸಲಿಲ್ವೇ! ನಮ್ಮ ಸಂಸ್ಕೃತಿ ಎಂದು ಉಬ್ಬಿ ಹೊಗಳುವುದಲ್ಲ ಆದರೆ 'ಸಂಘೇ ಶಕ್ತಿ ಕಲಾ ಯುಗೇ' ಎಂದು ಉದ್ಗರಿಸಿದ್ದು ನಮ್ಮದೇ ಸಂಸ್ಕೃತಿ. ನಮ್ಮ ಪುರಾಣಗಳು, ದೇವರು, ಅವತಾರ, ಕಥೆಗಳು ಸುಳ್ಳೇ ಇರಬಹುದು. ಬರಿಯ ಕಾಲ್ಪನಿಕವಿರಬಹುದು. ಆದರೆ, ತಮ್ಮೊಳಗೆ ಒಂದಲ್ಲ ಒಂದು ಸತ್ಯವನ್ನಿಟ್ಟುಕೊಂಡೇ ಅವು ಹುಟ್ಟಿರುವವೆಂಬುದು ಮಾತ್ರ ಸುಳ್ಳಲ್ಲ. ನಮ್ಮ ಪುರಾಣದ ಕತೆಗಳನ್ನೊಂದೊಂದಾಗಿ ಅವಲೋಕಿಸಿ ನೋಡಿ. ಏಕತೆಯ ಮಹಿಮೆ ಕೊಂಡಾಡಲ್ಪಟ್ಟಿಲ್ಲವೇ?

ದೇಶಪ್ರೇಮ ರಾರಾ ಜಿಸಿಲ್ಲವೇ? ಮಾತಾಪಿತೃಭಕ್ತಿ. ಭ್ರಾತೃಪ್ರೇಮ, ಸ್ವಾಮಿನಿಷ್ಠೆ ಇತ್ಯಾದಿಗಳ ಕಳೆಯೇರಿಲ್ಲವೇ?

ಆಧುನಿಕ ಕಾಲದಲ್ಲೂ, ಭಾರತಕ್ಕೆ ಪರಕೀಯರ ಆಕ್ರಮಣವಾದಾಗ ಜನರೆಲ್ಲ ಒಂದಾಗಿ ಅವರನ್ನು ಹಿಮ್ಮೆಟ್ಟಿಸಿದರು. ಶರಣೆಂದು ಪ್ರಾರ್ಥಿಸಿ ಬಂದವರನ್ನು ಹಿಡಿದೆತ್ತಿದರು. ಶರಣೆನ್ನುತ ಬಂದವರನ್ನು ಕೈ ಬಿಡುವವರಲ್ಲ – ಎಂದು ಕವಿವಾಣಿ ಉಲಿಯುವಂತೆ ಮಾಡಿದ್ದು – ನಮ್ಮದೇ ಸಂಸ್ಕೃತಿ. ಅದೇ ಏಕತೆಯ ಪೋಷಕ. ನಮ್ಮ ಇತಿಹಾಸದ ಅವಲೋಕನೆಯಿಂದ ನಮಗೆ ಇನ್ನೊಂದು ಸತ್ಯವೂ ತಿಳಿಯುತ್ತದೆ. ಯಾವಾಗ ಸಂಸ್ಕೃತಿಯ ಅವಹೇಳನವಾಗಿತ್ತೋ. ಆಗಲೇ ಏಕತೆಯ ತಂತೂ ಕಡಿದುಹೋಗಿತ್ತು.

ಸಂಸ್ಕೃತಿ ಮತ್ತು ನಾಗರಿಕತೆ ಒಂದಕ್ಕೊಂದು ಸಂಬಂಧಿ. ಸಂಸ್ಕೃತಿ ಅಂತರ್ಮುಖಿಯಾದರೆ, ನಾಗರಿಕತೆ ಬಹಿರ್ಮುಖಿ. ಸಂಸ್ಕೃತಿಯಂತೆ ನಾಗರಿಕತೆ, ನಾಗರಿಕತೆಯಂತೆ ಸಂಸ್ಕೃತಿ. ಇದು ಅರ್ಥವಾಗಬೇಕಾದರೆ, ಪುನಃ ಇತಿಹಾಸದತ್ತ ಕಣ್ಣು ಹಾಯಿಸಬೇಕು. ೧೮೫೭ರ ಪ್ರಥಮ ಸ್ವಾತಂತ್ರ ಸ್ವಾತಂತ್ರ್ಯ ಸಂಗ್ರಾಮವನ್ನೇ ಗಮನಿಸಿದರೂ ಸಾಕು – ಪರಕೀಯರ ಎಂದರೆ ನಮ್ಮ ಸಂಸ್ಕೃತಿಗೆ ಒಗ್ಗದ ಆಕ್ರಮಣವನ್ನು ನಮ್ಮ ಸಂಸ್ಕೃತಿ ಒಪ್ಪದಾಯಿತು. ನಾಗರಿಕರೆಲ್ಲರೂ ತಿರುಗಿಬಿದ್ದರು. ಅಂದು ಸಂಸ್ಕೃತಿಯ ನೆರಳಲ್ಲಿ ಏಕತೆ ಚಿಗುರಿತು. ಫಲವನ್ನೂ ಕೊಟ್ಟಿತು. ನಾವಿಂದು ಅನುಭವಿಸುತ್ತಿರುವ ಆ ಫಲವೇ ನಮ್ಮ ಸ್ವಾತಂತ್ರ್ಯ ಪ್ರಜಾಪ್ರಭುತ್ವ. ಜನರ ಮನದಲ್ಲಿ ಏಕತೆ – ಭಾವೈಕ್ಯತೆ ಮೂಡಬೇಕಾದರೆ, ಪರಸ್ಪರ ತಿಳುವಳಿಕೆ, ಹೊಂದಾಣಿಕೆ ಅತ್ಯಗತ್ಯ. ಈ ಹೊಂದಾಣಿಕೆ ಎಂಬುದು ಬಲು ಕಷ್ಟ. ಪಾಶ್ಚಾತ್ಯ ಸಂಸ್ಕೃತಿ ನಮಗೆ ಹೇಳುವುದು ಇದನ್ನೇ. ಪರಸ್ಪರ ವಿಕರ್ಷಿಸಲ್ಪಡುತ್ತಿರುವ ಜನರ ಹೃದಯಗಳನ್ನು ಬಾಂಧವ್ಯ ತಂತಿಯಿಂದ ಮತ್ತೆಂದೂ ಬೇರ್ಪಡದಂತೆ ಕಟ್ಟಬೇಕಾದರೆ, ತಂತಿಯೂ ಗಟ್ಟಿಯಿರಬೇಕು. ಕಟ್ಟುವವನೂ ಚಾಣಾಕ್ಷನಿದ್ದು, ಸಮರ್ಥನಿರಬೇಕು. ಭಾರತೀಯ ಸಂಸ್ಕೃತಿ ಅನಾದಿಕಾಲದಿಂದ ಈ ಸಾಮರ್ಥ್ಯವನ್ನು ಹೊಂದಿದೆ.

ಹಾಗೆಂದು ನಮ್ಮಸಂಸ್ಕೃತಿಯಲ್ಲಿ ಹುರುಳಿಲ್ಲದ ಜೊಳ್ಳುಗಳಿಲ್ಲವೇ? ಇಲ್ಲವೆಂದೇನಿಲ್ಲ. ಆದರೆ ಅದೇ ಮುಖ್ಯವಲ್ಲ. ಮುಖ್ಯವಾಗಿ, ಇತ್ತೀಚೆಗೆ ಪ್ರಗತಿಪರ ಸಮಾಜದ ಕೆಂಗಣ್ಣಿಗೆ ಗುರಿಯಾಗುತ್ತಿರುವುದು ಪುರಾತನವಾದ ವರ್ಣವ್ಯವಸ್ಥೆ. ಜಾತಿಪದ್ಧತಿ ಆದರೆ ಅವು ಆಯಾಕಾಲದಲ್ಲಿ ಜನರ ಏಕತೆಯನ್ನು ವೃದ್ಧಿಸಿದ್ದವು. ಜೀವನವನ್ನು ಸುಗಮಗೊಳಿಸಿದ್ದವು ಎಂಬುದನ್ನು ಮರೆಯುವಂತಿಲ್ಲ. ಕಾಲಕ್ರಮೇಣ ಕೆಲವೊಂದು ರೂಪಾಂತರ ಹೊಂದಿ ಕೆಲವೊಂದು ಸಂದರ್ಭಗಳಲ್ಲಿ ಅಸಹನೀಯ ಎನಿಸಿರಬಹುದು. ಆ ಅಸಹನೆಯನ್ನು ತಗ್ಗಿಸಲು ಬೇಕಾದ ಕೆಲವೊಂದು ಅಗತ್ಯ ಸುಧಾರಣೆ ಸಂಸ್ಕೃತಿಗೂ ಅಗತ್ಯವಿದೆ. ಆದರೆ ಹಾಗೆಂದು ಇಡಿಯ ಸಂಸ್ಕೃತಿಯನ್ನೇ ಬುಡಮೇಲು ಮಾಡಹೊರಟರೆ, ಅಪಾಯ ಕಟ್ಟಿಟ್ಟ ಬುತ್ತಿ.

ಆಯಾ ಜನಾಂಗಕ್ಕೆ ತನ್ನದೇ ಆದ ಒಂದು ಉದ್ದೇಶವಿರುತ್ತದೆ. ಸಂಸ್ಕಾರವಿರುತ್ತದೆ. ನಮ್ಮ ಭಾರತದಲ್ಲಿ ಏಕತೆಯಿತ್ತು ಎಂದು ಒಪ್ಪಿಕೊಂಡಾಗಿದೆ. ಆದರೆ, ಭಾರತೀಯರಿಗೆ ಎಂದಿಗೂ ಸಂಪತ್ತೇ ತಮ್ಮ ಜೀವನದ ಉದ್ದೇಶವಾಗಿರಲಿಲ್ಲ. ಸಂಪದ್ಭರಿತವಾಗಿದ್ದಾಗಲೂ ಮದ ಬಂದಿರಲಿಲ್ಲ. ದುರ್ಬಲ ರಾಷ್ಟ್ರಗಳನ್ನು ಪೀಡಿಸುತ್ತಿರಲಿಲ್ಲ. ಸಂಪತ್ತಿಗಾಗಿ, ಗೆಲುವಿಗಾಗಿ ಬೇರೆ ರಾಷ್ಟ್ರದ ಮೇಲೆ ದಂಡೆತ್ತಿ ಹೋಗಿರುವುದು ನಮಗೆ ಕಾಣಿಸುವುದಿಲ್ಲ. ಅಂಧಕಾರಕ್ಕೆ ಅಂಟಿಕೊಳ್ಳಲಿಲ್ಲ. ಕೀರ್ತಿ ಬಯಸಲಿಲ್ಲ. ಇಂದುಪರಕೀಯರ ಆಕ್ರಮಣವನ್ನು ಗುರುತಿಸಲಾರದಷ್ಟು ನಮ್ಮ ಸಂಸ್ಕೃತಿಗೆ ಜಡತೆಯ ಕಿಲುಬು ಹಿಡಿದಿದೆ. ಕತ್ತಿ, ಕೋವಿ ಹಿಡಿದು ಬರದಿದ್ದರೇನಾಯಿತು? ಸೌಮ್ಯ ವೇಷದಲ್ಲಿ ಬರುವವರಿಂದ ನಮ್ಮ ಸಂಸ್ಕೃತಿಯನ್ನು ರಕ್ಷಿಸುವವರಿಲ್ಲ. ಸಂಸ್ಕೃತಿ ಎಂದರೇ ಮೂಗು ಮುರಿಯುವ ಮನೆಹಾಳ ಮಕ್ಕಳೇ ಭಾರತಾಂಬೆಯ ಶತ್ರುಗಳಾಗುತ್ತಿದ್ದಾರೆ. ವಿದೇಶ ಎಂದರೆ ನಮಗೇನೋ ವ್ಯಾಮೋಹ. ಪರಿಣಾಮ – ನಮ್ಮ ರಾಷ್ಟ್ರೀಯತೆಯ ಬುಡವೇ ಅಲ್ಲಾಡುತ್ತಿದೆ. ನಮ್ಮೊಳಗಿನ ಶತ್ರುಗಳನ್ನು ನಾವು ಗುರುತಿಸಲಾರದಾಗಿದ್ದೇವೆ. ಭ್ರಷ್ಟಾಚಾರ, ಅನ್ಯಾಯ, ಅನಾಚಾರ, ಭಯೋತ್ಪಾದನೆಗಳು ವಿಕಟಾಟ್ಟ ಹಾಸಗೈಯುತ್ತಿವೆ. ಇವೆಲ್ಲವುಗಳಿಂದ ಮುಕ್ತಿ ಪಡೆಯಲು ಇರುವ ಏಕೈಕ ಮಾರ್ಗ ಸಂಸ್ಕೃತಿಯ ರಕ್ಷಣೆ. ಇಂದು ಸಾಮ್ರಾಜ್ಯ ತತ್ವ. ನಿರಂಕುಶ ಪ್ರಭುತ್ವ ಮತ್ತು ಪ್ರಜಾಪ್ರಭುತ್ವಗಳ ನಡುವೆ ಸ್ಪರ್ಧೆ ನಡೆಯುತ್ತಿದೆ. ಶ್ರೀಮಂತ ಮತ್ತು ಬಡವರ ನಡುವಿನ ಅಂತರ ಅಸಹಜ ಪರಿಣಾಮವನ್ನುಂಟು ಮಾಡುತ್ತಿದೆ. ರಾಷ್ಟ್ರಗಳ ಪರಸ್ಪರ ಸಂಬಂಧವೂ ಹಳಸುತ್ತಿದೆ. ಅನ್ಯಾಯ, ಮೋಸ, ವ್ಯಕ್ತಿಜೀವನದಲ್ಲಿನ ಧರ್ಮ ಮತ್ತು ಸ್ವಾತಂತ್ರ್ಯಗಳ ಲೋಪಗಳು ಮಿತಿ ಮೀರುತ್ತಿವೆ. ಇವೆಲ್ಲವುಗಳಿಂದ ಪರಿಹಾರ ಸಿಗಬೇಕಾದರೆ ಒಂದೇ ಒಂದು ಉಪಾಯ – ಸಂಸ್ಕೃತಿಯ ರಕ್ಷಣೆ.

ವ್ಯಕ್ತಿಗಳ ನಡುವೆ ಭಾವೈಕ್ಯತೆ ಇರಬೇಕಾದರೆ, ಸಮಾಜ ಸುವ್ಯವಸ್ಥಿತವಾಗಿರಬೇಕು. ಅದು ಅಲ್ಲಿನ ಆಡಳಿತವನ್ನವಲಂಬಿಸಿದೆ. ನಮ್ಮ ಇಂದಿನ ರಾಜಕೀಯ ವ್ಯವಸ್ಥೆ. ಅತಂತ್ರ ಆಡಳಿತ ಎಂಥಾ ವ್ಯಕ್ತಿಯನ್ನೂ ರೊಚ್ಚಿಗೆಬ್ಬಿಸಬಹುದು. ಏಕತೆಯನ್ನು

ನುಚ್ಚುನೂರಾಗಿಸಬಹುದು. ವ್ಯಕ್ತಿ ಸ್ವಾತಂತ್ರ್ಯ ಇಂದು ಸಮಾಜ ಜೀವನಕ್ಕೆ ಧಕ್ಕೆಯುಂಟು ಮಾಡುವ ಹಂತಕ್ಕೇರಿದೆ. ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾಜದ ಬಗೆಗಿನ ಸಮನ್ವಯ. ರಾಷ್ಟ್ರೀಯತೆ ಮತ್ತು ವಿಶ್ವದೃಷ್ಟಿಗಳ ಮಿಳಿತ ನಮಗೆ ಆದರ್ಶವಾಗಬೇಕು. ಹೀಗಿದ್ದರೆ ಸಂಸ್ಕೃತಿಯ ರಕ್ಷಣೆಯೂ ಆಗುತ್ತದೆ. ಅದರ ನೆರಳಿನಂತಿರುವ ಏಕತೆಯ ಪೋಷಣೆಯೂ ಆಗುತ್ತದೆ. ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ. ಅದರಲ್ಲಿನ ಏಕತೆಯ ಮಧುರ ಅನುಭವವಾಗಬೇಕಾದರೆ, ಒಂದು ಕಥೆಯನ್ನು ಕೇಳಿ. ಒಂದು ಶಾಲೆ, ಅದರ ಪಕ್ಕದಲ್ಲೇ. ಎರಡು ಮೂರು ಕುಟುಂಬಗಳು ಕಲ್ಲಿನ ಕೆಲಸದಲ್ಲಿ ನಿರತವಾಗಿದ್ದವು. ಆ ಕುಟುಂಬಗಳಲ್ಲಿ ಸಣ್ಣ ಪುಟ್ಟ ಮಕ್ಕಳೂ ಇದ್ದರು. ಒಂದು ದಿನ ಶಾಲೆಯಲ್ಲಿ ಒಬ್ಬ ಹುಡುಗ ತನ್ನ ಹುಟ್ಟುಹಬ್ಬದ ಸಲುವಾಗಿ, ತರಗತಿಗೆಲ್ಲ ಲಾಡು ಹಂಚಿದ. ಪಾಠ ಮಾಡುತ್ತಿದ್ದ ಅಧ್ಯಾಪಕರು ಅತ್ತಿತ್ತ ನೋಡುವಾಗ, ಅಲ್ಲಿಯೇ ಮಣ್ಣಲ್ಲಿ ಹೊರಳಾಡುತ್ತಾ ಅಳುತ್ತಿದ್ದ ಕಲ್ಲು ಒಡೆಯುವ ಕುಟುಂಬದ ಮಗುವನ್ನು ಕಂಡರು. ಲಾಡನ್ನು ಆ ಮಗುವಿಗೆ ನೀಡಿದರು. ಆ ಮಗು ಅಳುತ್ತಿದ್ದರೂ ತನಗೆ ಸಿಕ್ಕಿದ ಲಾಡನ್ನು ತನ್ನಮ್ಮನಿಗೆ ಹೋಗಿ ನೀಡಿತು. ಆ ಅಮ್ಮನೇನು ಮಾಡಿದಳು ಬಲ್ಲಿರಾ? ಸುತ್ತ ಆಡುತ್ತಿದ್ದ ಎಲ್ಲಾ ಮಕ್ಕಳನ್ನೂ ಕರೆದು, ಆ ಪುಟ್ಟ ಲಾಡನ್ನು ಹಂಚಿದಳು. ಇದೇ ಅಲ್ಲವೇ ಭಾರತೀಯ ಸಂಸ್ಕೃತಿ? ಒಬ್ಬನೇ ಉಣ್ಣುವುದರಲ್ಲಿ ಸವಿಯಿಲ್ಲ. ಸೊಗವಿಲ್ಲ – ಎನ್ನುವ ಸಂಸ್ಕೃತಿಯ ಹಿರಿಮೆ ವರ್ಣಿಸಲಸದಳವೇ. ಸಂಸ್ಕೃತಿಯ ಅರ್ಥವನ್ನು ತಪ್ಪಾಗಿ ಗ್ರಹಿಸುವುದು ವ್ಯಕ್ತಿಯ, ಸಮಾಜದ, ರಾಷ್ಟ್ರದ ಉಳಿವಿಗೆ, ಅಭಿವೃದ್ಧಿಗೆ ಮಾರಕ. ಸಂಸ್ಕೃತಿ ಜೀವನಮಾರ್ಗ, ತತ್ತ್ವ ಸಾಧನೆಯಲ್ಲ. ಬರಿಯ ತತ್ತ್ವ ಸಾಧನೆಯಾದರೆ ಸಂಸ್ಕೃತಿ ಬರಡಾಗುತ್ತದೆ, ಕೊರಡಾಗುತ್ತದೆ. ಅರ್ಥಹೀನವಾಗುತ್ತದೆ. ತತ್ತ್ವ ಒಂದಲ್ಲ ಒಂದು ದಿನ ಅರ್ಥ ಕಳಕೊಂಡರೆ ಬರಡು ಜೊಳ್ಳು ಜರಿದು ಬೀಳುತ್ತದೆ. ಸರ್ವಧರ್ಮ ಸಹಿಷ್ಣುತೆಯು ನಮ್ಮ ಸಂಸ್ಕೃತಿಯ ವೈಶಿಷ್ಟ್ಯ. ಇದರಿಂದಲೇ ನಮ್ಮಲ್ಲಿನ ಏಕತೆಯೂ ದೃಢವಾಗಿತ್ತು. ಆದರೆ ಬರಿಯ ಸಹಿಷ್ಣುತೆ ಇದ್ದರೆ, ಅದು ಔದಾಸೀನ್ಯದಲ್ಲಿ ಪರ್ಯಾವಸಾನಗೊಳ್ಳಬಹುದು. ಸಹನೆಯೊಂದಿಗೆ ಸಹಕಾರವೂ ಅತ್ಯಗತ್ಯ. ಆಗಲೇ ಏಕತೆಯೂ ಬಲಗೊಳ್ಳುತ್ತದೆ. ಇಂದು ಸಮಾಜವನ್ನು ಆವರಿಸಿರುವ ವಿಷಕಿಲ್ಬಿಷಗಳನ್ನು ಶುದ್ಧಿಗೊಳಿಸಲು ನಾವು ಮರೆಯುತ್ತಿರುವ ಅಧ್ಯಾತ್ಮವಿದ್ಯೆಯನ್ನು ನೆನಪಿನ ಪರದೆಗೆ ಎಳೆದು ತರಬೇಕಿದೆ.

ಏಕತೆ ಎಂದರೆ ನಾವೆಲ್ಲ ಒಂದೆಂಬ ಭಾವ. ತಾನು, ತನ್ನದು ಎಂಬ ನರಕದಿಂದ ಮೇಲೆದ್ದು. ಎಲ್ಲರೂ ತನ್ನವರು ವಿಶಾಲ ಸ್ವರ್ಗದತ್ತ ಸಾಗುವುದೇ ಏಕತೆ. ಇದೇ ನಮ್ಮ ಸಂಸ್ಕೃತಿ ಪ್ರಸ್ತುತ ನಮ್ಮ ಮುಂದಿರುವ ಸಮಸ್ಯೆಗಳಿಗೂ, ಮುಖ್ಯವಾಗಿ ಏಕತೆಯ ಕೊರತೆಗೆ ಪರಿಹಾರ ಸಂಸ್ಕೃತಿಯ ರಕ್ಷಣೆ. ರಾಷ್ಟ್ರೀಯತೆ, ವಿಶ್ವದೃಷ್ಟಿಗಳ ಸಮನ್ವಯವೂ ಸಂಸ್ಕೃತಿಯ ರಕ್ಷಣೆಯಿಂದ ಸಾಧ್ಯ. ಅಯಂ ನಿಜಃ ಪರೋವೇತಿ ಗಣನಾ ಲಘು ಚೇತಸಾಂ ಉದಾಚರಿತಾನಾಂತು ವಸುಧೈವ ಕುಟುಂಬಕಂ – ತಾನು ಶ್ರೇಷ್ಠ. ಪರರು ನಿಕೃಷ್ಟರು ಎಂದು ಚಿಂತಿಸುವವರು ಸಂಕುಚಿತ ಮನಸ್ಸುಳ್ಳವರು. ಅದು ನಮ್ಮ ಸಂಸ್ಕೃತಿಯಲ್ಲ. ವಿಶ್ವವೆಲ್ಲಾ ಒಂದೇ ಎಂಬ ಉದಾರ ಭಾವವೇ ಏಕತೆ. ಅದೇ ನಮ್ಮ ಭವ್ಯ ಸಂಸ್ಕೃತಿ.

## ಮೌಲ್ಯನಿರ್ಣಯ ಚಟುವಟಿಕೆಗಳು

1. ಗಾಂಧಿಜಯಂತಿಯಂದು 'ಮತಸೌಹಾರ್ದ' ಎಂಬ ವಿಚಾರವಾಗಿ ಜನರಲ್ಲಿ ತಿಳುವಳಿಕೆ ಮೂಡಿಸುವ ಸಲುವಾಗಿ ಕರಪತ್ರವನ್ನು ಮುದ್ರಿಸಬೇಕಾಗಿದೆ. ಈ ಕರಪತ್ರದ ಮಾದರಿಯನ್ನು ಬರೆಯಿರಿ.

2. ನಿಮ್ಮ ಶಾಲೆಯಲ್ಲಿ ನವೆಂಬರ್ 14ರಂದು 'ಮಕ್ಕಳ ದಿನಾಚರಣೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಕುರಿತಾಗಿ ಪತ್ರಿಕಾ ವಾರ್ತೆಯನ್ನು ಸಿದ್ಧಪಡಿಸಿರಿ.

3. ನಮ್ಮಯ ಭಾರತ ದೇಶ
   ಇಲ್ಲಿದೆ ತರತರ ವೇಷ
   ದೇಶದ ಹೆಸರನ್ನು ಹೇಳುವುದೆಂದರೆ
   ನಮಗದು ಹೊಸ ಆವೇಶ

ನಮ್ಮೊಳು ಬಗೆ ಬಗೆ ಜಾತಿ
ಆದರು ತುಂಬಿದೆ ಪ್ರೀತಿ
ಐಕ್ಯದ ಜೀವನ ನಡೆಸುತ ನಾವು
ಸಾರುವೆವು ಹೊಸ ನೀತಿ

ಹರಿಯುವ ನದಿಗಳ ನೀರು
ನಲಿಯುವ ಮನಗಳು ನೂರು
ಕಲೆಗಳ ತವರಿದು ಹೇಗಿದೆ ನೋಡಿ
ಆಚಾರವು ನೂರಾರು

- ಈ ಪದ್ಯದಲ್ಲಿರುವ 'ಐಕ್ಯ' ಎಂಬ ಪದದ ಅರ್ಥ ಯಾವುದು?
  (ಒಗ್ಗಟ್ಟು, ದೇಶ, ಉತ್ಸಾಹ)
- ಈ ಪದ್ಯಕ್ಕೆ ಸೂಕ್ತವಾದ ಶೀರ್ಷಿಕೆ ನೀಡಿರಿ.
- ಈ ಪದ್ಯದ ಆಶಯವನ್ನು ಬರೆಯಿರಿ.

4. ಬಿ.ಆರ್. ಅಂಬೇಡ್ಕರ್ ರ ಜೀವನದ ಪ್ರಧಾನ ಘಟನೆಗಳನ್ನು ನೀಡಲಾಗಿದೆ. ಇವುಗಳ ಆಧಾರದಲ್ಲಿ ಅವರ ವ್ಯಕ್ತಿಪರಿಚಯ ಬರೆಯಿರಿ.

| | | |
|---|---|---|
| ಹೆಸರು | : | ಡಾ। ಬಿ.ಆರ್. ಅಂಬೇಡ್ಕರ್ |
| ಜನನ | : | 1891, ಏಪ್ರಿಲ್ 14 |
| ಸ್ಥಳ | : | ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಅಂಬವಾಡಿ |
| ತಂದೆ | : | ರಾಮಜಿ ಸಕ್‌ಪಾಲ್ |
| ತಾಯಿ | : | ಭೀಮಾಮಯಿ |
| ವಿದ್ಯಾಭ್ಯಾಸ | : | ಎಂ.ಎ. ಪದವಿಯನಂತರ ಡಾಕ್ಟರೇಟ್ ಪದವಿ |
| ಸಾಧನೆ | : | ಅಸ್ಪೃಶ್ಯತೆಯ ವಿರುದ್ಧ ಹೋರಾಟ, ಸ್ವಾತಂತ್ರ್ಯ ಹೋರಾಟಗಾರ ಭಾರತದ ಸಂವಿಧಾನ ಶಿಲ್ಪಿ, ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿ .................. |
| ನಿಧನ | : | 1956 ಡಿಸೆಂಬರ್ 6. |

# 3. ಸುತ್ತಮುತ್ತ

ನಮ್ಮ ಸುತ್ತಮುತ್ತ ವಿವಿಧ ಗುಣಸ್ವಭಾವದ ವ್ಯಕ್ತಿಗಳಿದ್ದಾರೆ. ಕೆಲವರು ಎಲ್ಲರಿಂದಲೂ ಹೊಗಳಲ್ಪಡುತ್ತಾರೆ. ಇನ್ನು ಕೆಲವರನ್ನು ಜನರು ಹೊಗಳುವುದೂ ಇಲ್ಲ ತೆಗಳುವುದೂ ಇಲ್ಲ. ಕೆಲವರು 'ಛೀ' ಎಂದು ತೆಗಳಲ್ಪಡುವವರೂ ಇದ್ದಾರೆ. ನಾವು ಎಲ್ಲರೂ ಹೊಗಳುವಂತಹ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಬೇಕು. ಸತ್ಕಾರ್ಯಗಳನ್ನು ಮಾಡಿ ಸಮಾಜದಲ್ಲಿ ಸುಖಶಾಂತಿ ನೆಲಸುವಂತೆ ಮಾಡಬೇಕು. ಇತರರಲ್ಲಿರುವ ಅಂಕುಡೊಂಕುಗಳನ್ನು ತಿದ್ದುವುದರ ಮೊದಲು ನಮ್ಮಲ್ಲಿರುವ ದೋಷಗಳನ್ನು ಪರಿಹರಿಸಿಕೊಳ್ಳಬೇಕು. ಎಲ್ಲರಿಗೂ ಮಾದರಿಯಾಗಿ ಜೀವಿಸಬೇಕು. ನಮ್ಮ ಜೀವನದ ಗುರಿಯೆಡೆಗೆ ಸಾಗುವಾಗ ಇತರರಿಗೆ ತೊಂದರೆ ಕೊಡಬಾರದು. ಸುತ್ತುಮುತ್ತಲಿನ ಜನರಿಗೆ ಪ್ರಯೋಜನವಾಗುವಂತೆ ಇದ್ದರೆ ಜೀವನ ಸಾರ್ಥಕವಾಗುವುದು. ಸ್ವಾವಲಂಬನೆಯ ಬದುಕು ನಮ್ಮದಾಗಬೇಕು. ಇದಕ್ಕಾಗಿ ಈ ಘಟಕದಲ್ಲಿ 'ಮರವಿದ್ದು ಫಲವೇನು', 'ಆತ್ಮವಿಶ್ವಾಸದ ಗೆಲುವು' ಮತ್ತು 'ಕೊಡದಪ್ಪ ಬಿಡದಪ್ಪ' ಎಂಬ ಮೂರು ಪಾಠಗಳ ಮೂಲಕ ಮಕ್ಕಳಲ್ಲಿ ಉತ್ತಮ ಗುಣಸ್ವಭಾವಗಳನ್ನು ಬೆಳೆಸಿ ಉತ್ತಮ ನಾಗರಿಕರನ್ನಾಗಿ ಮಾಡಲು ಉದ್ದೇಶಿಸಲಾಗಿದೆ. ಜೀವನದ ಸಾರ್ಥಕತೆಯು ಮೊದಲನೆಯ ಪದ್ಯದಲ್ಲಿ ಬಿಂಬಿತವಾಗಿದ್ದರೆ, ಎರಡನೇ ಪಾಠವು ಆತ್ಮವಿಶ್ವಾಸವನ್ನು ಮೂಡಿಸಿಕೊಂಡು ಸ್ವಾವಲಂಬನೆಯ ಬದುಕು ಸಾಗಿಸಲು ಪ್ರೇರಣೆ ನೀಡುತ್ತದೆ. "ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ" ಎಂಬಂತೆ ಲೋಭವು ಒಳ್ಳೆಯದಲ್ಲ. ಮಿಕ್ಕಿದ್ದನ್ನು ಪರರಿಗೆ ನೀಡುವ ಸ್ವಭಾವವನ್ನು ಬೆಳೆಸುವುದು ಮೂರನೆಯ ಪಾಠದ ಉದ್ದೇಶವಾಗಿದೆ.

## ಕಲಿಕಾ ಸಾಧನೆಗಳು

- ಆಲಿಸಿ ಓದಿ ತಿಳಿದ ವಿಚಾರಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ಸ್ವಂತ ಅಭಿಪ್ರಾಯಗಳನ್ನು ವಾಚಿಕವಾಗಿ ಮತ್ತು ಲಿಖಿತವಾಗಿ ಪ್ರಕಟಿಸುವುದು.
- ಗದ್ಯ–ಪದ್ಯಗಳನ್ನು ಆಶಯ ಸ್ಪಷ್ಟತೆಯೊಂದಿಗೆ ನಿರರ್ಗಳವಾಗಿ ಮತ್ತು ಸ್ಫುಟತೆಯೊಂದಿಗೆ ಓದುವುದು ಮತ್ತು ಪ್ರಧಾನ ಆಶಯಗಳನ್ನು ಬಾಯ್ದೆರೆಯಾಗಿ ಮಂಡಿಸುವುದು.
- ಪದಗಳು, ಪದ ಪ್ರಯೋಗಗಳು, ಗಾದೆಗಳು, ಶೈಲಿಗಳು ಮೊದಲಾದ ಭಾಷಾ ಘಟಕಗಳನ್ನು ಅಳವಡಿಸಿ ಸಂದರ್ಭಾನುಸಾರವಾಗಿ ಮಾತನಾಡುವುದು. ಸ್ವಂತ ರಚನೆಗಳಲ್ಲಿ ಅವುಗಳನ್ನು ಸಂದರ್ಭಾನುಸಾರವಾಗಿ ಉಪಯೋಗಿಸುವುದು.
- ಜನಪದಗೀತೆ, ಕವಿತೆಗಳ ರಾಗ, ತಾಳ, ಭಾವ ಎಂಬಿವುಗಳನ್ನು ಆಸ್ವಾದಿಸುವುದು, ತಾಳದೊಂದಿಗೆ ಭಾವನಾತ್ಮಕವಾಗಿ ಹಾಡಿ ಮಂಡಿಸುವುದು. ಕಂಠಪಾಠ ಮಾಡುವುದು.
- ಸ್ವಂತ ಅಭಿರುಚಿಗೆ ತಕ್ಕಂತೆ ಕಥೆ, ಕವಿತೆ, ನಾಟಕ, ಪ್ರವಾಸಕಥನ ಮೊದಲಾದ ವಿಭಿನ್ನ ವಿಭಾಗಗಳಲ್ಲಿ ಒಳಗೊಂಡ ಪುಸ್ತಕಗಳನ್ನು ಗುರುತಿಸಿ ಓದುವುದು ಮತ್ತು ಓದಿ ತಿಳಿದ ವಿಚಾರಗಳನ್ನು ವಿವಿಧ ರೀತಿಯಲ್ಲಿ ಪ್ರಕಟಪಡಿಸುವುದು.
- ಪರಿಚಿತವಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಕಥೆ, ಕವಿತೆ ಮೊದಲಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ವಿಭಿನ್ನ ರೀತಿಯ ವ್ಯವಹಾರ ರೂಪಗಳನ್ನು ತಯಾರಿಸುವುದು. ಅವುಗಳನ್ನು ಸಂಚಿಕೆ, ಭಿತ್ತಿಪತ್ರಿಕೆ, ಹಸ್ತಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸುವುದು.

- ಸೃಜನಾತ್ಮಕ ರಚನೆಗಳನ್ನು ಓದಿ, ಅವುಗಳ ಪ್ರಧಾನ ಆಶಯ ಕೆಡದಂತೆ ಸಂಕ್ಷಿಪ್ತವಾಗಿ ಬರೆಯುವುದು.
- ಕಥೆ, ಕವಿತೆಗಳಲ್ಲಿ ಕಥಾಪಾತ್ರಗಳ ಮಾನಸಿಕ ಸ್ಥಿತಿ, ಅವುಗಳಿಗಿರುವ ಸ್ಥಾನ ಇತ್ಯಾದಿಗಳನ್ನು ಗುರುತಿಸಿ ಬಾಯ್ದೆರೆಯಾಗಿ ಮತ್ತು ಲಿಖಿತವಾಗಿ ಪಾತ್ರಚಿತ್ರಣ ಮಾಡುವುದು.
- ವಿವಿಧ ಕವಿತೆಗಳನ್ನು ಕಂಠಪಾಠ ಮಾಡಿ ಸೂಕ್ತವಾದ ರಾಗ, ತಾಳಗಳೊಂದಿಗೆ ಭಾವಪೂರ್ಣವಾಗಿ ಹಾಡುವುದು.
- ಸ್ವಂತ ಆಶಯಗಳನ್ನು ಶಿಷ್ಟಭಾಷೆಯಲ್ಲಿ ತಪ್ಪಿಲ್ಲದೆ ಬರೆಯುವುದು.
- ಸೃಜನಾತ್ಮಕ ರಚನೆಗಳ ಭಾವವನ್ನು ಅರ್ಥೈಸಿಕೊಂಡು ನಾಟಕ, ಭಾವಾಭಿನಯ ಮತ್ತು ಮೂಕಾಭಿನಯಗಳ ಮೂಲಕ ಮಂಡಿಸುವುದು.
- ಓದಿದ ವಿಚಾರಗಳನ್ನು ವಿಶ್ಲೇಷಿಸಿ ತನ್ನ ಅಭಿಪ್ರಾಯಗಳನ್ನು ಭಾಷಣ, ಪ್ರಬಂಧ ಮತ್ತು ಚರ್ಚೆಗಳ ಮೂಲಕ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸುವುದು ಮತ್ತು ವಾಚಿಕವಾಗಿ ಮಂಡಿಸುವುದು.
- ದೃಶ್ಯ–ಶ್ರಾವ್ಯ ಮಾಧ್ಯಮಗಳ ಮೂಲಕ ಗಳಿಸಿದ ವಿಚಾರಗಳನ್ನು ತನ್ನ ರಚನೆಯಲ್ಲಿ ಬಳಸುವುದು.

# ಯೂನಿಟ್ ಗ್ರಿಡ್

**ಯೂನಿಟ್ 3 : ಸುತ್ತಮುತ್ತ** ಸಮಯ : 5+6 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 1. ಮರವಿದ್ದು ಫಲವೇನು? | • ಮಾನವೀಯ ಗುಣವನ್ನು ತಿಳಿದು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವುದು.<br>• ವಚನ ಸಾಹಿತ್ಯದ ಕುರಿತು ತಿಳಿಯುವುದು | • ಹಾಡುವುದು<br>• ಸಾಲನ್ನು ಗುರುತಿಸುವುದು<br>• ಹೊಂದಿಸಿ ಬರೆಯುವುದು<br>• ಸಾರಾಂಶ ಬರೆಯುವುದು<br>• ಸ್ವಾರಸ್ಯ ಬರೆಯುವುದು.<br>• ವಚನಗಳನ್ನು ಸಂಗ್ರಹಿಸುವುದು | • ವಚನಗಾರರ ಪರಿಚಯ ಪುಸ್ತಕ<br>• ಅಕ್ಕಮಹಾದೇವಿಯ ವಚನಗಳು | • ಸಾರಾಂಶ<br>• ಸ್ವಾರಸ್ಯ ಬರವಣಿಗೆ |
| 2. ಆತ್ಮವಿಶ್ವಾಸದ ಗೆಲುವು | • ವಿಕಲಚೇತನರು ನಮ್ಮ ಸಮಾಜದ ಭಾಗವೇ ಆಗಿರುತ್ತಾರೆ ಎಂದು ತಿಳಿಯುವುದು.<br>• ವಿಕಲಚೇತನರನ್ನು ಕಡೆಗಣಿಸದೆ ಪ್ರೋತ್ಸಾಹಿಸುವುದು.<br>• ವಿಕಲಚೇತನರ ಸಾಧನೆಗಳನ್ನು ತಿಳಿದು ಪ್ರಚೋದನೆ ಪಡೆಯುವುದು. | • ಚರ್ಚಿಸುವುದು<br>• ಉತ್ತರಿಸುವುದು<br>• ಪತ್ರಿಕಾ ವರದಿ ತಯಾರಿಸುವುದು.<br>• ಅಭಿಪ್ರಾಯ ಟಿಪ್ಪಣಿ ಬರೆಯುವುದು.<br>• ಘೋಷಣ ವಾಕ್ಯ ತಯಾರಿಸುವುದು.<br>• ವಾಕ್ಯ ರಚಿಸುವುದು | • ವಿಕಲಚೇತನರ ಸಾಧನೆಗಳ ಕುರಿತಾದ ಪುಸ್ತಕ / ಲೇಖನ<br>• ಅಡಕ ಮುದ್ರಿಕೆಗಳು | • ಅಭಿಪ್ರಾಯ ಟಿಪ್ಪಣಿ<br>• ವಾಕ್ಯರಚನೆ |

# ಯೂನಿಟ್ ಗ್ರಿಡ್

**ಯೂನಿಟ್ 3 : ಸುತ್ತಮುತ್ತ** ಸಮಯ : 6 ಪಿರಿಯಡ್‌ಗಳು

| ಪಾಠದ ಹೆಸರು | ಆಶಯ/ ಉದ್ದೇಶಗಳು | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯನಿರ್ಣಯ |
|---|---|---|---|---|
| 3. ಕೊಡದಪ್ಪ ಬಿಡದಪ್ಪ | • ಹಾಸ್ಯಸಾಹಿತ್ಯದ ಕುರಿತು ತಿಳಿದುಕೊಳ್ಳುವುದು<br>• ಜನಪದ ಕಥೆಗಳ ಬಗ್ಗೆ ಅರಿವು ಮೂಡಿಸುವುದು.<br>• ಜನಪದ ಸಾಹಿತ್ಯದಲ್ಲಿರುವ ಭಾಷಾ ಶೈಲಿಯನ್ನು ತಿಳಿಯುವುದು.<br>• ಪರಸ್ಪರ ಹಂಚಿ ತಿನ್ನುವುದರಲ್ಲಿ ಸುಖವಿದೆ ಎಂದು ಅರಿತುಕೊಳ್ಳುವುದು. | • ಓದುವುದು<br>• ಚರ್ಚಿಸುವುದು<br>• ಉತ್ತರಿಸುವುದು<br>• ಸಂಭಾಷಣೆ ಬರೆಯುವುದು.<br>• ಸಂದರ್ಭ ಬರೆಯುವುದು.<br>• ಊಹಿಸಿ ಬರೆಯುವುದು<br>• ವಾಕ್ಯರಚನೆ<br>• ಲೇಖನ ಚಿಹ್ನೆಗಳನ್ನು ಬಳಸುವುದು | • ಹಾಸ್ಯ ಕಥೆಗಳು<br>• ಜನಪದ ಕತೆಗಳು | • ಸಂಭಾಷಣೆ<br>• ವಾಕ್ಯರಚನೆ<br>• ಲೇಖನ ಚಿಹ್ನೆಗಳ ಬಳಕೆ |
| | | | | |

# 1. ಮರವಿದ್ದು ಫಲವೇನು?

ಘಟಕದ ಪ್ರಾರಂಭದಲ್ಲಿರುವ ಚಿತ್ರವನ್ನು ಮಕ್ಕಳು ವೀಕ್ಷಿಸಲಿ. ಬಳಿಕ ತಮ್ಮ ಅಭಿಪ್ರಾಯಗಳನ್ನು ಮಂಡಿಸಲಿ.

- ಚಿತ್ರದಲ್ಲಿ ಏನೆಲ್ಲ ಇವೆ?
- ಇರುವೆ ಏನನ್ನು ಹೊತ್ತುಕೊಂಡಿದೆ?
- ಇರುವೆ ಯಾರಿಗಾಗಿ ಈ ಕೆಲಸ ಮಾಡುತ್ತಿದೆ?
- ತನಗಿಂತ ಹೆಚ್ಚಿನ ಭಾರವನ್ನು ಹೊರುವ ಇರುವೆ ಯಾವ ನೀತಿಯನ್ನು ತಿಳಿಸುತ್ತದೆ?

**ಕ್ರೋಡೀಕರಣ**

ಇರುವೆಯು ತನ್ನ ಸಮಾಜಕ್ಕಾಗಿ ಹೆಚ್ಚಿನ ಹೊರೆಯನ್ನು ಹೊರುತ್ತಿದೆ. ಅಂತೆಯೆ ನಾವು ಸಮಾಜಕ್ಕಾಗಿ ಶ್ರಮ, ಸಮಯ, ವೈಯಕ್ತಿಕ ಸುಖಗಳನ್ನು ತ್ಯಾಗ ಮಾಡಬೇಕು. ಎಲ್ಲರೂ ಹಾಗೆ ಮಾಡಿದರೆ ಉತ್ತಮ ಸಮಾಜ ನಿರ್ಮಾಣವಾಗುವುದು. ನಾವೆಲ್ಲರೂ ಇರುವೆಯ ಈ ಗುಣವನ್ನು ಅನುಸರಿಸಬೇಕು.

## ಓದುವುದು

'ಮರವಿದ್ದು ಫಲವೇನು' – ಅಕ್ಕಮಹಾದೇವಿಯವರ ವಚನಗಳನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ.

ಬಳಿಕ ಪದ್ಯಕ್ಕೆ ಸಂಬಂಧಿಸಿ ಒಂದೆರಡು ಆಶಯಗ್ರಹಣ ಪ್ರಶ್ನೆಗಳನ್ನು ಕೇಳುವುದು.

- 'ಬೆಳ್ಳಗಿದ್ದದ್ದೆಲ್ಲ ಹಾಲಲ್ಲ' – ಈ ಗಾದೆಮಾತನ್ನು ತಿಳಿಸುವ ಸಾಲು ಯಾವುದು?
- ಗಗನದ ವಿಸ್ತಾರವನ್ನು ಬಲ್ಲವರು ಯಾರು?
- ಶರಣರ ಭಕ್ತಿಯ ಅರಿವು ಇರುವುದು ಯಾರಿಗೆ?

ಬಳಿಕ ಮಕ್ಕಳು ಗುಂಪುಗಳಾಗಿ ಕುಳಿತು ವಚನವನ್ನು ಓದಲಿ. ನವೀನ ಪದಗಳ ಅರ್ಥವನ್ನು ಅರ್ಥಕೋಶದಿಂದ ತಿಳಿಯಲಿ. ಸಂದರ್ಭಕ್ಕನುಸಾರವಾಗಿ ಅಧ್ಯಾಪಕರು ಸಹಾಯ ಮಾಡುವುದು. (ಪದವಿಂಗಡಣೆ, ಪದದ ಅರ್ಥ ಇತ್ಯಾದಿ)

ಉದಾ : 'ತುಂಬಿ ಬಲ್ಲುದಲ್ಲದೆ' ಇಲ್ಲಿ ಪದವಿಂಗಡಿಸದೆ ಆಶಯ ಗ್ರಹಿಸಲು ಮಕ್ಕಳಿಗೆ ಕಷ್ಟವಾಗಬಹುದು.

ತುಂಬಿ + ಬಲ್ಲುದು + ಅಲ್ಲದೆ – ಇಲ್ಲಿ ತುಂಬಿ ಎಂಬ ಪದವು ನಾಮಪದವಾಗಿ ಬರುತ್ತದೆ. ಇದು ಒಂದು ಬಗೆಯ ಕೀಟ. ಹೂಗಳಲ್ಲಿ ಕುಳಿತುಕೊಳ್ಳುತ್ತದೆ ಇತ್ಯಾದಿ ವಿಚಾರಗಳನ್ನು ಮಕ್ಕಳಿಗೆ ತಿಳಿಸಬೇಕು.

ಬಳಿಕ ವಚನಗಳಿಗೆ ರಾಗಹಾಕಿ ಮಂಡಿಸಲಿ. ಆಮೇಲೆ ಅಧ್ಯಾಪಕರು ವಿವಿಧ ವಚನಗಳ ಧ್ವನಿಮುದ್ರಿಕೆಯನ್ನು ಕೇಳಿಸುವುದು.

## ಸಾಲು ಗುರುತಿಸಿರಿ

ಇದು ಆಶಯಗ್ರಹಣಕ್ಕಿರುವ ಚಟುವಟಿಕೆಯಾಗಿದೆ. ವಿದ್ಯಾರ್ಥಿಗಳು ಇದನ್ನು ವೈಯಕ್ತಿಕವಾಗಿ ಕಂಡುಹಿಡಿದು ಮಂಡಿಸಲಿ.

## ಹೊಂದಿಸಿ ಬರೆಯಿರಿ

ವಿದ್ಯಾರ್ಥಿಗಳು ವಚನಗಳನ್ನು ಪುನಃ ಪುನಃ ಓದಲು ಈ ಚಟುವಟಿಕೆ ಸಹಾಯಮಾಡುತ್ತದೆ. ಇದನ್ನು ಮಕ್ಕಳು ವೈಯಕ್ತಿಕವಾಗಿ ಬರೆದು ಮಂಡಿಸಲಿ. ಇದನ್ನು ಮನೆಕೆಲಸವಾಗಿಯೂ ಕೊಡಬಹುದು.

### ಸಾರಾಂಶ ಬರೆಯಿರಿ

ಮಕ್ಕಳು ವೈಯಕ್ತಿಕವಾಗಿ ವಚನದ ಸಾರಾಂಶ ಬರೆಯಲಿ. ಇಬ್ಬರೋ ಮೂವರೋ ಮಂಡಿಸಿದ ಬಳಿಕ ಗುಂಪುಗಳಾಗಿ ಕುಳಿತು ಸಾರಾಂಶವನ್ನು ಉತ್ತಮಪಡಿಸಲಿ. ಬಳಿಕ ಉಳಿದವರು ಮಂಡಿಸಲಿ.

### ಸಾರಾಂಶ ಹೀಗೂ ಆಗಬಹುದಲ್ಲವೇ?

ನೆರಳು ಕೊಡದ ಮರ, ದಾನಮಾಡದ ಸಂಪತ್ತು, ಹಾಲಿಲ್ಲದ ಹಸು, ಗುಣವಿಲ್ಲದ ರೂಪ, ಕೆಲಸಮಾಡಲು ಮನಸ್ಸಿಲ್ಲದವನಿಗೆ ಹರಿತವಾದ ಕತ್ತಿ ಇವೆಲ್ಲ ಇದ್ದು ಏನೂ ಪ್ರಯೋಜನವಿಲ್ಲ. ಹಾಗೆಯೇ ಜ್ಞಾನವಿಲ್ಲದ ಮಾನವನು ಇದ್ದೂ ಪ್ರಯೋಜನವಿಲ್ಲ.

ಆಗಸದ ಆಳವನ್ನು ಚಂದ್ರನಲ್ಲದೆ, ಹದ್ದು ತಿಳಿಯಲಾರದು. ನದಿಯ ಆಳವನ್ನು ತಾವರೆಯಲ್ಲದೆ ನದಿಯ ದಡದಲ್ಲಿರುವ ಹುಲ್ಲು ತಿಳಿಯದು, ಹೂವಿನ ಸುಗಂಧವನ್ನು ತುಂಬಿಯಲ್ಲದೆ ಕೊಳಚೆಯಲ್ಲಿರುವ ನೊಣ ತಿಳಿಯದು. ಹಾಗೆಯೇ ಶಿವಭಕ್ತರ ಕುರಿತು ಶಿವನಿಗಲ್ಲದೆ ಕೋಣನ ಮೇಲೆ ಕುಳಿತು ರಕ್ತಹೀರುವ ಸೊಳ್ಳೆಗೆ ತಿಳಿಯದು.

### ಸ್ವಾರಸ್ಯ ಬರೆಯಿರಿ

ಮಕ್ಕಳು ಸ್ವಾರಸ್ಯ ಬರೆಯುವ ಮೊದಲು ಸಾಮಾನ್ಯ ಚರ್ಚೆ ನಡೆಸಿದರೆ ಒಳ್ಳೆಯದು.

**ಈ ಸಂದರ್ಭದಲ್ಲಿ ಕೇಳಬಹುದಾದ ಪ್ರಶ್ನೆಗಳು :**

- ಶರಣರು ಎಂದರೆ ಯಾರು?
- ವಚನದಲ್ಲಿ 'ನೀವು' ಎಂದರೆ ಯಾರು?
- ಕೋಣನ ಮೈಮೇಲೆ ಸೊಳ್ಳೆ ಕುಳಿತುಕೊಳ್ಳುವುದು ಯಾಕೆ?
- ಅದಕ್ಕೆ ಕೋಣನ ಪೂರ್ಣ ಶರೀರವನ್ನು ತಿಳಿಯಲು ಸಾಧ್ಯವೇ?
- ಹಾಗೆಯೇ ಭಕ್ತರ ಬಗ್ಗೆ ಸಂಪೂರ್ಣ ತಿಳುವಳಿಕೆ ಇರುವವರು ಯಾರು?
- ಈ ಸಾಲಿನಲ್ಲಿ ಯಾವುದಕ್ಕೆ ಮಹತ್ವ ನೀಡಲಾಗಿದೆ?

ಬಳಿಕ ಮಕ್ಕಳು ಸ್ವಾರಸ್ಯವನ್ನು ವೈಯಕ್ತಿಕವಾಗಿ ಬರೆಯಲಿ.

ಕೆಲವರಿಂದ ಮಂಡನೆ, ಸ್ವಾರಸ್ಯ ಬರವಣಿಗೆಯ ಕುರಿತು ಚರ್ಚೆ.

ಸ್ವಾರಸ್ಯ ಬರವಣಿಗೆಯಲ್ಲಿ ಏನಿರಬೇಕು?

- ಸಾಲಿನ ಆಶಯವಿರಬೇಕು.
- ಆ ಸಾಲಿನ ಅಂತರಾರ್ಥವಿರಬೇಕು.
- ಕವಿಯ ಭಾವನೆ ವ್ಯಕ್ತವಾದ ರೀತಿ ಇರಬೇಕು.
- ಅದರಲ್ಲಿರುವ ಭಾಷಾ ಸೌಂದರ್ಯವನ್ನು ವ್ಯಕ್ತಪಡಿಸಿರಬೇಕು.

ಮೇಲಿನ ಸೂಚಕಗಳ ಆಧಾರದಲ್ಲಿ ಸ್ವಾರಸ್ಯವನ್ನು ಉತ್ತಮಪಡಿಸಿ ಮಂಡಿಸಲಿ. ಮಕ್ಕಳು ಬರೆದ ಸ್ವಾರಸ್ಯ ಬರಹವನ್ನು ಸೂಚಕಗಳ ಆಧಾರದಲ್ಲಿ ಮೌಲ್ಯನಿರ್ಣಯ ನಡೆಸಲಿ. ಕೊನೆಗೆ ಅಧ್ಯಾಪಕರು ಸ್ವಾರಸ್ಯಬರಹವನ್ನು ಮಂಡಿಸುವುದು.

**ಸ್ವಾರಸ್ಯ**

ಈ ಸಾಲನ್ನು ಅಕ್ಕಮಹಾದೇವಿಯವರ ವಚನಗಳಿಂದ ಆರಿಸಲಾಗಿದೆ. ಸೊಳ್ಳೆಗಳು ತಮ್ಮ ಆಹಾರಕ್ಕಾಗಿ ಕೋಣನ ಮೇಲೆ ಕುಳಿತುಕೊಳ್ಳುತ್ತವೆ. ಆದರೆ ಅವುಗಳಿಗೆ ಕೋಣನ ಮಹತ್ವ, ಆಕಾರ, ಗುಣ ಇತ್ಯಾದಿ ತಿಳಿದಿರುವುದಿಲ್ಲ. ಅದೇ ರೀತಿ ದೇವರಿಗೆ ತನ್ನ ಭಕ್ತರ ಮನದ ಕುರಿತು ತಿಳಿದಿರುವಷ್ಟು ಜನಸಾಮಾನ್ಯರಿಗೆ ಶಿವಭಕ್ತರ ಮತ್ತು ಅವರ ಭಕ್ತಿಯ ಬಗ್ಗೆ ಏನೂ ತಿಳಿಯದು. ಇಲ್ಲಿ ಭಕ್ತರ ಬಗ್ಗೆ ಉದಾಸೀನ ತೋರುವವರನ್ನು ಸೊಳ್ಳೆಗಳಿಗೆ ಹೋಲಿಸಲಾಗಿದೆ. ಸೊಳ್ಳೆಗೆ ತಾನು ಕುಳಿತ ಸ್ಥಳದ ಹೊರತು ಕೋಣನ ಪೂರ್ಣ ಆಕಾರವಾಗಲಿ, ಮಹತ್ವವಾಗಲಿ ತಿಳಿಯದು. ಅದೇ ರೀತಿ ಭಕ್ತನಲ್ಲದವನಿಗೆ ಭಕ್ತಿಯ ಮಹತ್ವ ತಿಳಿಯಲಾರದು. ವಚನಗಾರ್ತಿ ಭಕ್ತರಲ್ಲದವರನ್ನು ಬಹಳ ಕಟುವಾಗಿ ಟೀಕಿಸಿದ್ದಾರೆ. ಸಮರ್ಥನೆಗಾಗಿ ಕೆಲವು ದೃಷ್ಟಾಂತಗಳನ್ನು ಹೇಳುತ್ತಾರೆ. ಉದಾ : ಆಗಸದ ಆಳವನ್ನು ಚಂದಿರನಲ್ಲದೆ ಸಾಮಾನ್ಯ ಹದ್ದಿಗೆ ತಿಳಿಯಲು ಸಾಧ್ಯವೇ? ಎಂದು ಪ್ರಶ್ನಿಸುತ್ತಾರೆ. ಶಿವಶರಣರನ್ನು ಅವಮಾನಿಸುವವರನ್ನು ಹದ್ದು, ನೊಣ, ಹುಲ್ಲುಗಳಿಗೆ ಹೋಲಿಸುತ್ತಾರೆ.

# 2. ಆತ್ಮವಿಶ್ವಾಸದ ಗೆಲುವು

ಅಲಗಿದ್ದು ಫಲವೇನು ಮನವಿಲ್ಲದನ್ನಕ? ಈ ಸಾಲಿನ ಸ್ವಾರಸ್ಯವನ್ನು ನೆನಪಿಸುವುದರ ಮೂಲಕ ಪಾಠಪ್ರವೇಶ ಮಾಡಬಹುದು.

ಮನಸ್ಸಿಲ್ಲದಿದ್ದರೆ ಹರಿತವಾದ ಕತ್ತಿಯಿದ್ದರೂ ಕಡಿಯಲು ಸಾಧ್ಯವಿಲ್ಲ. ಅದೇರೀತಿ ಮನಸ್ಸಿದ್ದರೆ ಕಡಿಯಲು ಕತ್ತಿಯೇ ಬೇಕೆಂಬುದಿಲ್ಲ. ಅಲ್ಲವೇ? 'ಮನಸ್ಸಿದ್ದರೆ ಮಾರ್ಗವಿದೆ' ಎಂಬ ನುಡಿಗಟ್ಟಿನ ಮೂಲಕ ಚರ್ಚೆಯನ್ನು ಮುಂದುವರಿಸುವುದು. ಬಳಿಕ ಅಡಕ ಮುದ್ರಿಕೆಯ ಮೂಲಕ ಯಾರಾದರೊಬ್ಬರ ವಿಕಲಚೇತನರ ಸಾಧನೆಯನ್ನು ತೋರಿಸುವುದು.

## ಓದುವಿಕೆ

ಅಡಕ ಮುದ್ರಿಕೆಯ ವೀಕ್ಷಣೆಯ ಆಧಾರದಲ್ಲಿ ಸಣ್ಣ ಚರ್ಚೆ ನಡೆಸಿ ಪಾಠವನ್ನು ವೈಯಕ್ತಿಕವಾಗಿ ಓದಲು ಮಕ್ಕಳಲ್ಲಿ ಹೇಳುವುದು. ಬಳಿಕ ಕೆಲವರಲ್ಲಿ ಆಶಯಗ್ರಹಣ ಪ್ರಶ್ನೆಗಳನ್ನು ಕೇಳುವುದು.

- ನಾಗನರೇಶನಿಗೆ ಆತ್ಮವಿಶ್ವಾಸ ತುಂಬಿದವರು ಯಾರು?
- ಚಲಿಸುವ ಲಾರಿಯಲ್ಲಿದ್ದ ನಾಗನರೇಶನು ರಸ್ತೆಗೆ ಬೀಳಲು ಕಾರಣವೇನು?
- ಜಿಲ್ಲಾಸ್ಪತ್ರೆಯ ವೈದ್ಯರು ನರೇಶನನ್ನು ಪರೀಕ್ಷಿಸಿ ಏನೆಂದರು?
- ನರೇಶನ ವಿದ್ಯಾಭ್ಯಾಸ ಮುಂದುವರಿಯಲು ಅವನ ತಂದೆ ಮಾಡಿದ ಉಪಾಯವೇನು?
- ನಾಗನರೇಶನಿಗೆ ದೊರಕಿದ ಬಹುದೊಡ್ಡ ಸೌಭಾಗ್ಯವೇನು?

ಬಳಿಕ ಮಕ್ಕಳು ಗುಂಪುಗಳಾಗಿ ಕುಳಿತು ಪಾಠಭಾಗವನ್ನು ಓದಲಿ.

ಕೊನೆಗೆ ಅಧ್ಯಾಪಕರು ಪಾಠವನ್ನು ಓದಿ ಮಂಡಿಸುವುದು.

## ಗಟ್ಟಿ ಓದುವಿಕೆ

ಮೌನವಾಗಿ ಓದಿ ಆಶಯ ಗ್ರಹಿಸುವಂತೆ ವಿಚಾರಗಳನ್ನು ಗಟ್ಟಿಯಾಗಿ ಓದಿ ಗ್ರಹಿಸಿ ಮಂಡಿಸುವುದೂ ಒಂದು ಕಲೆ. ಇದನ್ನು ಮಕ್ಕಳಲ್ಲಿ ಬೆಳೆಸಬೇಕು. ಇದಕ್ಕಾಗಿ ಮಕ್ಕಳು ಪಾಠವನ್ನು ಸ್ವರಭಾರಯುತವಾಗಿಯೂ ಭಾವಯುತವಾಗಿಯೂ ಓದುವಂತೆ ಆಸಕ್ತಿದಾಯಕ ಚಟುವಟಿಕೆಗಳನ್ನು ನೀಡಬೇಕು.

**ಚಟುವಟಿಕೆಗಳು ಯಾವುದೆಲ್ಲ?**

- ಖೋ ಖೋ ಓದು
- ಇಷ್ಟವಿರುವ ಭಾಗವನ್ನು ಓದುವುದು.
- ಹೇಳಿದ ಆಶಯವಿರುವ ಭಾಗವನ್ನು ಓದುವುದು.
- 

**ಚರ್ಚಿಸಿರಿ**

ಮಕ್ಕಳು ಚರ್ಚೆಯಲ್ಲಿ ಭಾಗವಹಿಸಲು ಈ ಕೆಳಗಿನ ಚರ್ಚಾ ಸೂಚಕಗಳನ್ನು ಬಳಸಬಹುದು.

- ನೀವು ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿದ್ದೀರಾ?
- ನೀವು ಅಲ್ಲಿ ಭೇಟಿ ನೀಡಿದುದು ಯಾಕೆ?
- ಅಲ್ಲಿ ಏನೇನು ನೋಡಿದ್ದೀರಿ?
- ಅಲ್ಲಿರುವ ವೈದ್ಯರ ಬಗ್ಗೆ ನಿಮ್ಮ ಅಭಿಪ್ರಾಯವೇನು?
- ದಾದಿಯರು ಪ್ರೀತಿಯಿಂದ ಆರೈಕೆ ಮಾಡುತ್ತಾರೆಯೇ?
- ಅಲ್ಲಿ ಉಚಿತವಾಗಿ ಔಷಧಗಳನ್ನು ನೀಡುತ್ತಾರೆಯೇ?
- ಅಲ್ಲಿರುವ ಸೌಲಭ್ಯಗಳು ಯಾವುವು?
- ಎಲ್ಲರೂ ಸರಕಾರೀ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುತ್ತಾರೆಯೋ? ಯಾಕೆ?

ಇತ್ಯಾದಿ ಪ್ರಶ್ನೆಗಳ ಮೂಲಕ ಸರಕಾರೀ ಆಸ್ಪತ್ರೆಯ ಸೇವೆಗಳ ಧನಾತ್ಮಕ ವಿಚಾರಗಳು ಮಂಡನೆಯಾಗುವಂತೆ ಅಧ್ಯಾಪಕರು ನೋಡಿಕೊಳ್ಳುವುದು.

**ಉತ್ತರಿಸಿರಿ**

ಮಕ್ಕಳು ವೈಯಕ್ತಿಕವಾಗಿ ಉತ್ತರ ಬರೆದು ಮಂಡಿಸಲಿ. ಮಂಡನೆಯ ಕೊನೆಗೆ ಸರಿಯುತ್ತರದ ಬಗ್ಗೆ ಚರ್ಚಿಸಲಿ.

**ಲೇಖನ ತಯಾರಿಸಿರಿ**

ಲೇಖನ ತಯಾರಿಸುವುದರ ಕುರಿತು ಚರ್ಚಿಸುವುದು. ಲೇಖನದಲ್ಲಿ ಏನೆಲ್ಲ ಒಳಗೊಂಡಿರಬೇಕು?

- ಶೀರ್ಷಿಕೆ
- ಪ್ರಾರಂಭ
- ಪಾರಾಗಳ ಮೂಲಕ ವಿಷಯ ವಿಸ್ತಾರ
- ಮುಕ್ತಾಯ

ಮಕ್ಕಳನ್ನು ಗುಂಪುಗಳಾಗಿ ಕುಳಿತುಕೊಳ್ಳಿಸುವುದು.

ಪ್ರತಿಗುಂಪಿಗೂ ಯಾವುದಾದರೊಂದು ಲೇಖನದ ಪ್ರತಿಯನ್ನು ನೀಡುವುದು. ಮಕ್ಕಳು ಅದನ್ನು ಓದಿ ಅದರ ಚೌಕಟ್ಟನ್ನು ತಿಳಿಯಲಿ. ಬಳಿಕ ನಾಗನರೇಶನ ಸಾಧನೆಗಳ ಕುರಿತಾದ ಲೇಖನವನ್ನು ತಯಾರಿಸುವುದರ ಬಗ್ಗೆ ಗುಂಪಿನಲ್ಲಿ ಚರ್ಚಿಸಲಿ.

- ಸೂಕ್ತವಾದ ಶೀರ್ಷಿಕೆ ಯಾವುದು?
- ನಾಗನರೇಶನ ಸಾಧನೆಗಳು ಯಾವುವು?
- ಸಾಧನೆಗಳನ್ನು ವಿವರವಾಗಿ ಬರೆಯುವುದು ಹೇಗೆ?

ಗುಂಪು ಚರ್ಚೆಯ ಬಳಿಕ ವೈಯಕ್ತಿಕವಾಗಿ ಲೇಖನ ತಯಾರಿಸಲಿ. ಕೆಲವರಿಂದ ಮಂಡನೆಯಾಗಲಿ. ಮಂಡನೆಯ ಆಧಾರದಲ್ಲಿ ಚರ್ಚೆ ನಡೆಸುವುದು.

- ಲೇಖನವು ಚೌಕಟ್ಟಿನಂತೆ ಇದೆಯೋ?
- ನಾಗನರೇಶನ ಸಾಧನೆಗಳನ್ನೆಲ್ಲ ವಿವರವಾಗಿ ಬರೆಯಲಾಗಿದೆಯೋ?
- ಆಶಯಗಳನ್ನು ಸ್ಪಷ್ಟವಾಗಿಯೂ ಕ್ರಮೀಕರಿಸಿಯೂ ಬರೆಯಲಾಗಿದೆಯೋ?

ಅಕ್ಷರ, ಪದ, ವಾಕ್ಯ, ನುಡಿಗಟ್ಟು ಇವೇ ಮೊದಲಾದ ಭಾಷಾ ಘಟಕಗಳನ್ನು ಬಳಸಿಕೊಂಡು ತನ್ನದೇ ಆದ ಶೈಲಿಯಲ್ಲಿ ಬರೆಯಲಾಗಿದೆಯೋ?

ಎಲ್ಲರೂ ಈ ಮೇಲಿನ ಸೂಚಕಗಳ ಆಧಾರದಲ್ಲಿ ತಂತಮ್ಮ ರಚನೆಗಳನ್ನು ಮೌಲ್ಯನಿರ್ಣಯ ಮಾಡಲಿ. ಬಳಿಕ ಗುಂಪಿನಲ್ಲಿ ಕುಳಿತು ಉತ್ತಮಪಡಿಸಿ ಮಂಡಿಸಲಿ. ಉತ್ತಮವಾದ ವರದಿಯನ್ನು ಸೂಚಕಗಳ ಆಧಾರದಲ್ಲಿ ಆಯ್ಕೆ ಮಾಡಲಿ.

## ಅಭಿಪ್ರಾಯ ಟಿಪ್ಪಣಿ

'ದೇವ್ರಿದ್ದಾನೆ ಬಿಡಪ್ಪಾ' ಇದನ್ನು ಕರಿಹಲಗೆಯಲ್ಲಿ ಬರೆಯುವುದು.

## ಚರ್ಚೆ

ಈ ಪಾಠದಲ್ಲಿ ಈ ಮಾತನ್ನು ಯಾರು ಹೇಳಿದರು?

ಯಾವ ಸಂದರ್ಭಗಳಲ್ಲಿ ಇದನ್ನು ಹೇಳುತ್ತಿದ್ದರು?

ನಿಮ್ಮ ಮನೆಯಲ್ಲಿ ನಿಮ್ಮ ಹಿರಿಯರು ಈ ರೀತಿ ಹೇಳುತ್ತಾರೆಯೋ?

ಅವರು ಹಾಗೆ ಹೇಳಲು ಕಾರಣವೇನು?

ದೇವರು ಕಷ್ಟಗಳನ್ನು ದೂರಮಾಡುತ್ತಾನೆಯೇ?

ಚರ್ಚೆಯ ಆಧಾರದಲ್ಲಿ ಮಕ್ಕಳು ಟಿಪ್ಪಣಿ ತಯಾರಿಸಿ ಮಂಡಿಸಲಿ.

**ಅಭಿಪ್ರಾಯ ಟಿಪ್ಪಣಿ ಹೇಗಿರಬೇಕು?**

- ತನ್ನ ಅಭಿಪ್ರಾಯಗಳನ್ನು ಚುಟುಕಾಗಿಯೂ ವಸ್ತುನಿಷ್ಠವಾಗಿಯೂ ಬರೆದಿರಬೇಕು.
- ಆಶಯವು ಕ್ರಮಬದ್ಧವಾಗಿದ್ದು ಸಮರ್ಥಿಸಲ್ಪಟ್ಟಿರಬೇಕು.
- ಭಾಷಾ ಶುದ್ಧಿಯಿಂದ ಕೂಡಿರಬೇಕು. (ಅಕ್ಷರ, ಪದ, ಲೇಖನ ಚಿಹ್ನೆಗಳು ಇವೇ ಮೊದಲಾದ ಭಾಷಾ ಪ್ರಯೋಗಗಳನ್ನೊಳಗೊಂಡದ್ದಾಗಿರಬೇಕು)

ಮಕ್ಕಳ ಮಂಡನೆಯ ಬಳಿಕ ಅಧ್ಯಾಪಕರು ತಾವು ರಚಿಸಿದ ಟಿಪ್ಪಣಿಯನ್ನು ಮಂಡಿಸುವುದು.

## ಅಭಿಪ್ರಾಯ ಟಿಪ್ಪಣಿ

ನಮ್ಮಲ್ಲಿ ಹೆಚ್ಚಿನವರು ದೇವರನ್ನು ನಂಬುವವರು. ಈ ಲೋಕ ಹಾಗೂ ಸಕಲ ಜೀವರಾಶಿಗಳನ್ನು ದೇವರು ರಕ್ಷಿಸುತ್ತಾರೆ; ಎಲ್ಲ ಘಟನೆಗಳಿಗೂ ಅವನೇ ಕಾರಣಕರ್ತ ಎನ್ನುವುದು ನಮ್ಮ ಹಿರಿಯರ ಅನಿಸಿಕೆ. ಹಾಗಾಗಿ ಯಾವುದೇ ಕಷ್ಟಬಂದರೂ ಅದರ ನಿವಾರಣೆಗಾಗಿ ದೇವರನ್ನು ಬೇಡಿಕೊಳ್ಳುತ್ತಾರೆ. ಇದರಿಂದ ಯಾವುದೇ ಕಷ್ಟ ಬಂದರೂ ಅದನ್ನು ಎದುರಿಸುವ ಧೈರ್ಯ ಮೂಡುತ್ತದೆ. ಆತ್ಮಧೈರ್ಯ ಬೆಳೆಯುತ್ತದೆ. ನಾಗನರೇಶನ ತಂದೆ ಆಗಾಗ ಹೇಳುತ್ತಿದ್ದ 'ದೇವ್ರಿದ್ದಾನೆ ಬಿಡಪ್ಪಾ' ಎಂಬ ಮಾತುಗಳು ಅವನಿಗೆ ಉಂಟಾದ ದೊಡ್ಡ ಆಘಾತವನ್ನು ಎದುರಿಸಿ ಬದುಕಲು ಸಹಾಯಮಾಡಿತು. ತನಗೆ ಕಾಲಿಲ್ಲ ಎನ್ನುವುದನ್ನು ಮರೆತು, "ದೇವ್ರಿದ್ದಾನೆ ಬಿಡಪ್ಪಾ" ಎನ್ನುವ ಮಾತುಗಳನ್ನು ನೆನಪಿಸುತ್ತಾ ನಾಗನರೇಶನು ಉನ್ನತ ಮಟ್ಟಕ್ಕೇರಿ, ಈ ಮಾತನ್ನು ಸತ್ಯಗೊಳಿಸಿದ್ದಾನೆ.

## ಸಂದರ್ಶನ ಪ್ರಶ್ನಾವಳಿ ತಯಾರಿಸಿರಿ

ಆರಂಭದಲ್ಲಿ ವಿಕಲ ಚೇತನರ ಕುರಿತು ಮಕ್ಕಳೊಡನೆ ಸಾಮಾನ್ಯ ಚರ್ಚೆ

ನಿಮ್ಮ ಊರಿನಲ್ಲಿಯೂ ವಿಕಲಚೇತನರು ಇದ್ದಾರೆಯೇ?

ಅವರು ಹೇಗೆ ಕೆಲಸಗಳನ್ನು ಮಾಡುತ್ತಾರೆ?

ನಾಗನರೇಶನಂತೆ ಸ್ವಾವಲಂಬಿಯಾಗಿ ಬದುಕುತ್ತಿದ್ದಾರೆಯೇ?

ಅವರ ಬದುಕಿಗೆ ಪ್ರೇರಣೆ ಏನಾಗಿರಬಹುದು?

ಅವರ ಬಗ್ಗೆ ವಿವರವಾಗಿ ತಿಳಿಯಲು ಸಂದರ್ಶನ ನಡೆಸಬೇಡವೇ?

ಚರ್ಚೆಯ ಬಳಿಕ ಮಕ್ಕಳು ವೈಯಕ್ತಿಕವಾಗಿ ಸಂದರ್ಶನ ಪ್ರಶ್ನಾವಳಿ ತಯಾರಿಸಲಿ. ಕೆಲವರು ಮಂಡಿಸಿದ ಬಳಿಕ ಪ್ರಶ್ನಾವಳಿಯು ಹೇಗಿರಬೇಕೆಂಬುದರ ಕುರಿತು ಚರ್ಚೆ ನಡೆಸುವುದು.

ಚರ್ಚೆಯನ್ನು ಕ್ರೋಡೀಕರಿಸಿ ಕರಿಹಲಗೆಯಲ್ಲಿ ಬರೆಯುವುದು.

### ಸಂದರ್ಶನ ಪ್ರಶ್ನಾವಳಿ

ಪೂರ್ಣ ಮಾಹಿತಿಗಳನ್ನು ಸಂಗ್ರಹಿಸುವಂತಹ ಪ್ರಶ್ನೆಗಳಾಗಿರಬೇಕು.

ಸರಳವೂ ಸ್ಪಷ್ಟವೂ ಆಗಿರಬೇಕು.

- ಪ್ರಶ್ನೆಗಳು ವಿಷಯಕ್ಕೆ ಹೊಂದಿಕೆಯಾಗಿರಬೇಕು.
- ಪ್ರಶ್ನೆಗಳು ಕ್ರಮಾನುಗತವಾಗಿರಬೇಕು.
- ವಿಕಲಚೇತನರನ್ನು ಪ್ರೇರೇಪಿಸುವಂತಹ ಪ್ರಶ್ನೆಗಳಾಗಿರಬೇಕು.
- ಅಕ್ಷರ, ಪದ, ವಾಕ್ಯರಚನೆ, ಲೇಖನ ಚಿಹ್ನೆ ಮೊದಲಾದ ಭಾಷಾ ಘಟಕಗಳನ್ನು ಯೋಗ್ಯರೀತಿಯಲ್ಲಿ ಬಳಸಿರಬೇಕು.

ಮಕ್ಕಳು ಗುಂಪುಗಳಾಗಿ ಕುಳಿತು ಸೂಚಕಗಳ ಆಧಾರದಲ್ಲಿ ಪ್ರಶ್ನಾವಳಿಯನ್ನು ಉತ್ತಮಪಡಿಸಿ ಮಂಡಿಸಲಿ. ಅಧ್ಯಾಪಕರು ಪ್ರತಿಯೊಂದು ಗುಂಪು ಮಂಡಿಸಿದ ಪ್ರಶ್ನಾವಳಿಯನ್ನು ಕ್ರೋಡೀಕರಿಸಿ ಕರಿಹಲಗೆಯಲ್ಲಿ ಬರೆಯುವುದು.

**ಘೋಷಣ ವಾಕ್ಯ ತಯಾರಿಸಿರಿ**

ಮೊದಲು 'ಘೋಷಣ ವಾಕ್ಯ' ಎಂಬ ಭಾಷಾ ವ್ಯವಹಾರದ ಕುರಿತು ಸಾಮಾನ್ಯ ಚರ್ಚೆ ನಡೆಸುವುದು ಉತ್ತಮ. ಘೋಷಣ ವಾಕ್ಯಗಳು ಹೆಚ್ಚಾಗಿ (ಘೋಷಯಾತ್ರೆಗಳ) ಮೆರವಣಿಗೆಯ ಸಂದರ್ಭಗಳಲ್ಲಿ ಗಟ್ಟಿಯಾಗಿ ಹೇಳಿಕೊಂಡು ಹೋಗುವ ವಾಕ್ಯಗಳಾಗಿವೆ. ಇವುಗಳು ಪ್ರಾಸಯುಕ್ತವಾಗಿದ್ದು ಲಯದಿಂದ ಕೂಡಿದ್ದರೆ ಉತ್ತಮವೆನಿಸುತ್ತದೆ. ಇಂತಹ ವಾಕ್ಯಗಳನ್ನು ಫಲಕಗಳಲ್ಲಿ ಬರೆದು ಪ್ರದರ್ಶಿಸಿದರೆ ಪ್ರಕಟಣ ಪತ್ರ (ಪ್ಲಕಾರ್ಡ್) ಗಳಾಗುತ್ತದೆ.

**ಕೆಲವು ಘೋಷಣ ವಾಕ್ಯಗಳು**

- **ವಿಕಲಚೇತನರ ಗಮನಿಸಿ<br>ವಿಶೇಷ ಸಾಧನೆಗೆ ಅಭಿನಂದಿಸಿ**
- **ಕೊರತೆಯನ್ನು ಕಾಣದಿರಿ<br>ಪ್ರತಿಭೆಯನ್ನು ಗುರುತಿಸಿರಿ**
- **ವಿಕಲತೆ ಒಂದು ವಿಷಯವೇ ಅಲ್ಲ<br>ಆತ್ಮಧೈರ್ಯವೇ ಸಾಧನೆಗೆಲ್ಲ**

**ವಾಕ್ಯ ರಚಿಸಿರಿ**

ಪದಗಳನ್ನು ವಿವಿಧ ಸಂದರ್ಭಗಳಲ್ಲಿ ಯೋಗ್ಯ ರೀತಿಯಲ್ಲಿ ಬಳಸುವ ಸಾಮರ್ಥ್ಯವನ್ನು ಬೆಳೆಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಇದನ್ನು ಮನೆಕೆಲಸವಾಗಿಯೂ ಕೊಡಬಹುದು. ಯಾವುದಾದರೂ ಘಟನೆಗಳನ್ನು ಹೇಳುವ ಸಂದರ್ಭದಲ್ಲಿ ಈ ಪದಗಳನ್ನು ಬಳಸಿ ವಾಕ್ಯಗಳನ್ನು ಬರೆಯುವುದರ ಮೂಲಕ ಅಧ್ಯಾಪಕರು ಈ ಚಟುವಟಿಕೆಯನ್ನು ಮಾಡಿಸುವುದು ಉತ್ತಮ.

**ಹೀಗೂ ಬರೆಯಬಹುದಲ್ಲವೇ?**

ಸುರೇಶನಿಗೆ ಸಮರ್ಥ ಓಟಗಾರನಾಗಬೇಕೆಂಬ ಹಂಬಲ. ಇದಕ್ಕಾಗಿ ಪ್ರತಿದಿನವೂ ಬೆಳಿಗ್ಗೆ ಸುಮಾರು ಐದುಕಿಲೋ ಮೀಟರ್‌ಗಳಷ್ಟು ಓಡುತ್ತಿದ್ದನು. ತಂಗಾಳಿಯು ನಿಧಾನವಾಗಿ ಬೀಸುತ್ತಾ ಮರಗಳಲ್ಲಿ ಬಿರಿದ ಹೂಗಳ ಸುವಾಸನೆಯನ್ನು ಹೊತ್ತು ತರುತ್ತಿತ್ತು. ಹಕ್ಕಿಗಳ ಚಿಲಿಪಿಲಿ ಇಂಚರವು ಓಟಕ್ಕೆ ಪ್ರೇರಣೆಯನ್ನು ನೀಡುತ್ತಿತ್ತು. ಈ ಓಟದ ಅಭ್ಯಾಸದಿಂದಾಗಿ ಸುರೇಶನು ಮುಂದಿನ ಎಲ್ಲ ಓಟದ ಸ್ಪರ್ಧೆಗಳಲ್ಲಿ ವಿಫಲನಾಗದೆ ಒಲಿಂಪಿಕ್ಸ್ ಕ್ರೀಡಾಸ್ಪರ್ಧೆಗೆ ಭಾಗವಹಿಸಲು ಆಯ್ಕೆಯಾದನು.

# 3. ಕೊಡದಪ್ಪ ಬಿಡದಪ್ಪ

## ಚಟುವಟಿಕೆಗಳು

### ಪದಸೂರ್ಯ ಪೂರ್ತಿಗೊಳಿಸಿರಿ

ಮಕ್ಕಳು ಕೆಳಗಿನ ಪದಸೂರ್ಯವನ್ನು ಪೂರ್ತಿಗೊಳಿಸಲಿ. ಕೆಳಗೆ ನೀಡಲಾದ ಪದಸೂರ್ಯವನ್ನು ಕರಿಹಲಗೆ/ಚಾರ್ಟ್‌ನಲ್ಲಿ ಬರೆದು ತೂಗು ಹಾಕುವುದು. ಪ್ರತಿಯೊಬ್ಬ ಮಗು, 'ಸಮಾಜ'ಕ್ಕೆ ಸಂಬಂಧಿಸಿದ ಪದಗಳನ್ನು ಬರೆಯಲಿ.



ಪದಸೂರ್ಯ ಬರೆದ ಬಳಿಕ ಸಾಮಾನ್ಯ ಚರ್ಚೆ ನಡೆಸುವುದು. ಚರ್ಚೆಯಲ್ಲಿ ಒಳಗೊಳ್ಳಬೇಕಾದ ವಿಚಾರಗಳು –

- ವಿವಿಧ ಗುಣಸ್ವಭಾವದ ವ್ಯಕ್ತಿಗಳು
- ವಿವಿಧ ಆರ್ಥಿಕ ಸ್ಥಿತಿಯ ವ್ಯಕ್ತಿಗಳು

ಚರ್ಚೆಯ ಮೂಲಕ ಪಾಠಪ್ರವೇಶ ಮಾಡುವುದು.

## ಓದುವಿಕೆ

ಮಕ್ಕಳು ವೈಯಕ್ತಿಕವಾಗಿ 'ಕೊಡದಪ್ಪ ಬಿಡದಪ್ಪ' ಪಾಠವನ್ನು ಓದಲಿ. ಬಳಿಕ ಗುಂಪುಗಳಾಗಿ ಮಾಡಿ ಪಾಠವನ್ನು ಮತ್ತೊಮ್ಮೆ ಓದಿ ಮನನ ಮಾಡಿಕೊಳ್ಳಲಿ. ಇದೇ ಸಂದರ್ಭದಲ್ಲಿ ಪಾಠವನ್ನು ಭಾಗ ಮಾಡಿ ಗುಂಪುಗಳಿಗೆ ಹಂಚುವುದು. ತಮಗೆ ಲಭಿಸಿದ ಪಾಠಭಾಗದಿಂದ ಮಕ್ಕಳು ಪ್ರಶ್ನೆಗಳನ್ನು ತಯಾರಿಸಲಿ. ಬಳಿಕ ಗುಂಪುಗಳೊಳಗೆ ಪ್ರಶ್ನೋತ್ತರ ಸ್ಪರ್ಧೆಯನ್ನು ನಡೆಸುವುದು. ಸ್ಪರ್ಧೆಯು ಆರೋಗ್ಯಕರವಾಗಿಯೂ ಸ್ಪರ್ಧಾತ್ಮಕವಾಗಿಯೂ ಇರುವಂತೆ ಸೂಕ್ತ ನಿಯಮಗಳನ್ನು ಅಳವಡಿಸುವಿರಲ್ಲವೇ?

- ಕೇಳಿದ ಪ್ರಶ್ನೆಯನ್ನೇ ಕೇಳಬಾರದು.
- ಒಂದು ಗುಂಪಿನಿಂದ ಒಬ್ಬನಿಗೆ ಒಂದು ಪ್ರಶ್ನೆ ಕೇಳಲು ಮಾತ್ರವೇ ಅವಕಾಶ.
- ಸೂಕ್ತವಾದ ಪ್ರಶ್ನೆಯಲ್ಲದಿದ್ದರೆ ಅಂಕ ಇಲ್ಲ.
- ಸೂಕ್ತವಾದ ಪ್ರಶ್ನೆಯಾದರೆ ಪ್ರಶ್ನೆ ಕೇಳಿದ ಗುಂಪಿಗೂ ಸಮರ್ಪಕ ಉತ್ತರ ಹೇಳಿದ ಗುಂಪಿಗೂ ಒಂದೊಂದು ಅಂಕ.
-
-

## ಉತ್ತರಿಸಿರಿ

ಕೊಟ್ಟಿರುವ ಪ್ರಶ್ನೆಗಳಿಗೆ ಎಲ್ಲ ಮಕ್ಕಳೂ ಉತ್ತರ ಬರೆದು ಮಂಡಿಸಲಿ.

ಸರಿ – ತಪ್ಪು ಯಾವುದೆಂದು ಅವರೇ ತೀರ್ಮಾನಿಸಲಿ.

## ಸಂಭಾಷಣೆ ರಚಿಸಿರಿ

ಇದನ್ನು ಮನೆಗೆಲಸವಾಗಿಯೂ ಕೊಡಬಹುದು. 'ಕೊಡದಪ್ಪ ಮತ್ತು ಬಿಡದಪ್ಪ' ಇವರು ಮೊದಲು ಭೇಟಿಯಾದಾಗ ನಡೆಸಿದ ಸಂಭಾಷಣೆ ಪಾಠದಲ್ಲಿದೆ. ಅದನ್ನು ಹುಡುಕಿ ಸಂಭಾಷಣಾ ರೂಪದಲ್ಲಿ ಬರೆಯಲಿ.

## ಸಂದರ್ಭ ಬರೆಯಿರಿ

"ಲೇ, ನಾನು ನೋವು ಮಾಡದೇ ನಿನಗೆ ಹೊಡೆದದ್ದು ಚೆನ್ನಾಗಿರಲಿಲ್ಲವೇ?"

ಈ ವಾಕ್ಯವನ್ನು ಕರಿಹಲಗೆಯಲ್ಲಿ ಬರೆಯುವುದು.

- ಈ ಮಾತನ್ನು ಹೇಳಿದವರು ಯಾರು?
- ಯಾರೊಡನೆ ಹೇಳಿದರು?
- ಯಾವ ಸಂದರ್ಭದಲ್ಲಿ ಹೇಳಿದರು?
- ಯಾಕೆ ಹೇಳಿದರು?

ಇತ್ಯಾದಿ ವಿಚಾರಗಳನ್ನು ಚರ್ಚಿಸುವುದು. ಚರ್ಚೆಯ ಬಳಿಕ ಅಧ್ಯಾಪಕರು ಕ್ರೋಡೀಕರಿಸಿ ಹೇಳುವುದು.

ಮಕ್ಕಳು ಚರ್ಚೆಯ ಆಧಾರದಲ್ಲಿ ಸಂದರ್ಭವನ್ನು ಬರೆಯಲಿ.

**ಸೂಚಕಗಳು**

- ಈ ಮಾತನ್ನು ಯಾರು, ಯಾರಿಗೆ, ಯಾವಾಗ ಹೇಳಿದರೆಂಬುದನ್ನು ವಿಶದೀಕರಿಸಿರುವುದು.
- ಮಾತನಾಡುವ ಪಾತ್ರಗಳೊಳಗಿನ ಕಾರ್ಯಕಾರಣ ಸಂಬಂಧವನ್ನು ವಿಶದೀಕರಿಸುವುದು.
- ಅಕ್ಷರ, ಪದ, ವಾಕ್ಯ ಪ್ರಯೋಗವೇ ಮೊದಲಾದ ಭಾಷಾ ಘಟಕಗಳನ್ನು ಸೂಕ್ತವಾಗಿ ಬಳಸಿರುವುದು.
- ಆಶಯವು ಕ್ರಮೀಕೃತವಾಗಿದ್ದು, ತನ್ನದೇ ಶೈಲಿಯಲ್ಲಿ ಬರೆದಿರುವುದು.

ಸೂಚಕಗಳ ಆಧಾರದಲ್ಲಿ ಅಧ್ಯಾಪಕರು ಮೌಲ್ಯನಿರ್ಣಯ ನಡೆಸುವುದು.

### ಊಹಿಸಿ ಬರೆಯಿರಿ

ಮಕ್ಕಳು ವೈಯಕ್ತಿಕವಾಗಿ ತಮ್ಮ ಊಹೆಗಳನ್ನು ಬರೆಯಲಿ. ಬಳಿಕ ಗುಂಪಿನಲ್ಲಿ ಕುಳಿತು ಮಂಡಿಸಲಿ. ಉತ್ತಮವಾದ ಬರವಣಿಗೆಯನ್ನು ಆಯ್ಕೆಮಾಡಲಿ. ಬಳಿಕ ಆಯ್ಕೆ ಮಾಡಲು ಕಾರಣವಾದ ಅಂಶಗಳನ್ನು ಹೇಳಲಿ. ಅವುಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಬಳಿಕ ಹೇಳಿದ ಎಲ್ಲಾ ವಿಚಾರಗಳನ್ನು ಕ್ರೋಡೀಕರಿಸಿ ಮೌಲ್ಯನಿರ್ಣಯ ಸೂಚಕಗಳಾಗಿ ಬದಲಾಯಿಸುವುದು.

### ಊಹೆಯ ಟಿಪ್ಪಣಿ

**ಚೆಕ್‌ಲಿಸ್ಟ್ (ಪರಿಶೋಧನಾ ಪಟ್ಟಿ)**

| | ಉತ್ತಮ | ಸರಾಸರಿ | ತೀರಾ ಇಲ್ಲ |
|---|---|---|---|
| • ಕತೆಯ ಆಶಯಕ್ಕೆ ಅನುಗುಣವಾಗಿ ಊಹೆಯನ್ನು ಮುಂದುವರಿಸಿ ಬರೆಯಲಾಗಿದೆ. | ☐ | ☐ | ☐ |
| • ಊಹೆಯನ್ನು ತನ್ನದೇ ಶೈಲಿಯಲ್ಲಿ ಬರೆದಿದ್ದು, ಆಕರ್ಷಕವಾಗಿದೆ. | ☐ | ☐ | ☐ |
| • ಭಾಷಾ ಘಟಕಗಳಾದ ಅಕ್ಷರ, ಪದ, ವಾಕ್ಯಗಳನ್ನು ಸೂಕ್ತರೀತಿಯಲ್ಲಿ ಬಳಸಲಾಗಿದೆ. | ☐ | ☐ | ☐ |
| • ಆಶಯಗಳನ್ನು ಕ್ರಮೀಕರಿಸಿ ಬರೆಯಲಾಗಿದೆ. | ☐ | ☐ | ☐ |

ಚೆಕ್ ಲಿಸ್ಟ್‌ಗೆ ಅನುಗುಣವಾಗಿ ಮಕ್ಕಳು ಬರವಣಿಗೆಯನ್ನು ಪರಸ್ಪರ ಮೌಲ್ಯನಿರ್ಣಯ ಮಾಡಲಿ.

### ವಾಕ್ಯಗಳನ್ನು ರಚಿಸಿರಿ

ಒಂದು ವಸ್ತುವಿನ ಅಥವಾ ವ್ಯಕ್ತಿಯ ಗುಣವನ್ನು ತಿಳಿಸುವ ಪದಗಳನ್ನು 'ನಾಮ ವಿಶೇಷಣ' ಎನ್ನುವರು. ಇಲ್ಲಿ ಅಧ್ಯಾಪಕರು ನಾಮವಿಶೇಷಣಕ್ಕೆ ಇನ್ನೂ ಕೆಲವು ಉದಾಹರಣೆಗಳನ್ನು ನೀಡುವುದು.

- <u>ಜಿಪುಣನಾದ</u> ಬಿಡದಪ್ಪನು ಬಾಗಿಲು ಮುಚ್ಚಿ ಚಿಲಕ ಜಡಿದ.
- <u>ಸೋಮಾರಿ</u> ದಾಮುವು ಕೆಲಸ ಮಾಡುತ್ತಲೇ ಇರಲಿಲ್ಲ.

- ಅಂಧ ರಾಜ ದೃತರಾಷ್ಟ್ರನ ಪತ್ನಿಯು ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದಳು.
- ಪುಟ್ಟ ಹಕ್ಕಿಯು ಇಂಪಾಗಿ ಹಾಡುತ್ತಿತ್ತು.

ಇಲ್ಲಿ ಅಡಿಗೆರೆ ಎಳೆದ ಪದಗಳೆಲ್ಲ ನಾಮವಿಶೇಷಣಗಳು ನಾಮವಿಶೇಷಣಗಳನ್ನು ಪಾಠದಿಂದ ಗುರುತಿಸಲಿ. ಈ ಮೊದಲು ಮಾಡಿದ ಗುಂಪಿಗೆ, ಆಯಾ ಪಾಠಭಾಗದಿಂದ ಗುರುತಿಸಲು ಹೇಳಬಹುದು. ಬಳಿಕ ಎಲ್ಲ ಗುಂಪಿನವರು ಸಂಗ್ರಹಿಸಿದ ನಾಮವಿಶೇಷಣಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಇವುಗಳನ್ನು ಬಳಸಿ ವಾಕ್ಯ ರಚಿಸಲು ಹೇಳುವುದು.

### ಲೇಖನ ಚಿಹ್ನೆಗಳನ್ನು ಬಳಸಿರಿ

ಪಠ್ಯಪುಸ್ತಕದಲ್ಲಿ ನೀಡಿದ ಪಾಠಭಾಗವನ್ನು ಓದಿ ಲೇಖನಚಿಹ್ನೆ ಬಳಸಿ ಬರೆಯಲಿ. ಬಳಿಕ ಬೇರೊಂದು ಗದ್ಯಭಾಗವನ್ನು ನೀಡಿ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಬರೆಯಯಲು ಹೇಳುವುದು.

### ಪೂರಕ ಓದಿಗೆ

## ಫಲಿಸಿದ ತಂತ್ರ

ಒಂದು ಹಳ್ಳಿಯಲ್ಲಿ ಹಲವು ಮಂದಿ ರೈತರಿದ್ದರು. ವೀರಯ್ಯನು ಅವರಲ್ಲೊಬ್ಬ. ಅವನೇನೂ ಓದು ಬರಹ ಕಲಿತವನಲ್ಲ. ಆದರೂ ಕಷ್ಟ ಎದುರಾದರೆ ಬುದ್ಧಿವಂತಿಕೆಯಿಂದ ಪಾರಾಗುತ್ತಿದ್ದ. ಬೇರೆ ರೈತರಿಗೆ ಕಷ್ಟ ಬಂದಾಗಲೂ ಅವನ ಜಾಣತನ ಅವರ ನೆನಪಿಗೆ ಬರುತ್ತಿತ್ತು. ಇದರಿಂದಾಗಿ ರೈತರೆಲ್ಲರಿಗೂ ವೀರಯ್ಯ ಎಂದರೆ ಅಚ್ಚುಮೆಚ್ಚು. ಅವನೇ ಅವರಿಗೆ ನಾಯಕ.

ಹೀಗಿರಲು ಒಂದು ಸಲ ಕೀಟದ ಹಾವಳಿಯಿಂದ ಎಲ್ಲರ ಬೆಳೆ ಹಾಳಾಯಿತು. ಬೆಳೆ ಹಾಳಾದರೂ ಅಧಿಕಾರಿಗಳು ಕಂದಾಯಕ್ಕಾಗಿ ನಿರ್ದಯೆಯಿಂದ ಪೀಡಿಸುತ್ತಿದ್ದರು. ರೈತರೆಲ್ಲ ಕೈಯಲ್ಲಿ ಕಾಸಿಲ್ಲದೆ ಮುಂದಿನ ಜೀವನಕ್ಕೆ ದಾರಿಗಾಣದೆ ಒದ್ದಾಡುತ್ತಿದ್ದರೂ ಕಾನೂನಿನ ಕಣ್ಣಿಗೆ ಅದು ಅರಿವಾಗಲೇ ಇಲ್ಲ. ಎಲ್ಲರ ಜೊತೆಗೆ ವೀರಯ್ಯನೂ ಹೆಣಗಾಡಿದ. “ಅಧಿಕಾರಿಗಳೇ, ನಮ್ಮ ಪರಿಸ್ಥಿತಿ ಅರ್ಥ ಮಾಡಿಕೊಳ್ಳಿ. ಮುಂದಿನ ವರ್ಷ ಈಸಲದ ಬಾಕಿ ಸೇರಿಸಿ ಕಂದಾಯ ಕೊಡ್ತೀವಿ; ತೊಂದರೆ ಕೊಡಬೇಡಿ” ಎಂದು ಬೇಡಿಕೊಂಡ.

“ಕಂದಾಯ ಕೊಡಲಾಗದವರು ಜಾಗ ಬಿಟ್ಟು ಹೋಗಿ” ಎಂದರು ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಆಗ ವೀರಯ್ಯ, “ಇವರಲ್ಲೇನು ಮಾತು, ರಾಜಧಾನಿಗೆ ಹೋಗಿ ದೊರೆಯ ಬಳಿ ನಮ್ಮ ಪರಿಸ್ಥಿತಿ ನಿವೇದಿಸೋಣ. ಹೇಗಿದ್ದರೂ ದೊರೆಗಳು ದಯಾಳು” ಎಂದ.

ಎಲ್ಲ ರೈತರೂ ಒಂದಾಗಿ ರಾಜಧಾನಿಗೆ ಪ್ರಯಾಣ ಹೊರಟರು. ಆಗ ಅವರಲ್ಲೊಬ್ಬ, “ಕಾಲು ನಡಿಗೆಯ ದಾರಿ ರಾಜಧಾನಿಗೆ ಬಲು ದೂರವಿದೆ. ದಿನವಿಡೀ ನಡೆದರೂ ಅಲ್ಲಿಗೆ ತಲುಪಲಾರೆವು. ಬುತ್ತಿ, ಕಟ್ಟಿಕೊಳ್ಳಬಹುದೆಂದರೆ ಯಾರ ಮನೆಯಲ್ಲೂ ಹಿಡಿಕಾಳು ಕೂಡ ಇಲ್ಲ. ಹಸಿವನ್ನು ಹೇಗೆ ತಾಳಿಕೊಳ್ಳುವುದು? ಎಂದು ಕೇಳಿದ.

“ನಮ್ಮಲ್ಲಿ ಇಲ್ಲವಾದರೇನಂತೆ? ಊರಿಗೇ ಬರಗಾಲ ಬಂದಿಲ್ಲವಲ್ಲ! ಯಾರಾದರೂ ಪುಣ್ಯಾತ್ಮ ಊಟ ಹಾಕುತ್ತಾನೆ” ಎಂದು ಎಲ್ಲರನ್ನೂ ಹುರಿದುಂಬಿಸಿದ ವೀರಯ್ಯ.

ರಾಜಧಾನಿಯ ಹಾದಿ ಹಿಡಿದು ಕಡುಬಿಸಿಲಿಗೆ ಏರುತಗ್ಗಿನ ಹಾದಿಯಲ್ಲಿ ಹಳ್ಳ, ಕೊರಕಲುಗಳಲ್ಲಿ ನಡೆಯುತ್ತಾ ರೈತರು ಬಲು ದೂರ ಹೋದರು. ಕತ್ತಲಾಗುತ್ತ ಬಂತು. ರೈತರಿಗೆ ಹಸಿವು, ಬಳಲಿಕೆಯಿಂದ ಒಂದು ಹೆಜ್ಜೆಯೂ ಮುಂದಿಡಲಾಗಲಿಲ್ಲ. ಒಬ್ಬ ದಾರಿಹೋಕನೊಂದಿಗೆ, “ಅಣ್ಣಾ ಬಲುದೂರದಿಂದ ಬರುತ್ತಿದ್ದೇವೆ. ನಮಗೆ ರಾತ್ರಿ ಇರಲು ಯಾರಾದರೂ ಆಶ್ರಯ ಕೊಡುವವರಿದ್ದಾರೆಯೇ?” ಎಂದು ಕೇಳಿದ.

ದಾರಿಹೋಕ ನಕ್ಕು,“ಇಲ್ಲಿ ಇರುವುದು ಒಬ್ಬ ಲಕ್ಷಾಧೀಶನ ಮನೆ. ಬರೇ ಜಿಪುಣ. ಮಲಗಲು ಜಾಗ ಕೊಟ್ಟಾನು. ಕುಡಿಯಲು, ತಿನ್ನಲು ಏನೂ ಕೊಡಲಾರ. ಅದೋ ಅಲ್ಲಿ ಕಾಣುವ ಮಾಳಿಗೆ ಮನೆ ಅವನದೇ” ಎಂದು ಕೈ ತೋರಿಸಿದ.

ಮಾಳಿಗೆ ಮನೆಗೆ ಹೋಗಿ ಆಶ್ರಯ ಬೇಡಿದ ರೈತರಿಗೆ ಲಕ್ಷ್ಮಾಧೀಶ ಮಲಗಲು ಜಾಗ ಕೊಟ್ಟ. ಆದರೆ ಅನ್ನ – ಆಹಾರ ಕೊಡಲು ಖಂಡತುಂಡವಾಗಿ ನಿರಾಕರಿಸಿದ. "ಪರವಾಗಿಲ್ಲ. ನಿಮ್ಮ ಔದಾರ್ಯಕ್ಕೆ ನಾವು ಋಣಿಗಳು. ಮಲಗಲು ಸ್ಥಳ ಕೊಟ್ಟಿದ್ದೀರಲ್ಲ. ಅದೇ ಬಹಳ ದೊಡ್ಡದು" ಎಂದು ಹೊಗಳಿದ ವೀರಯ್ಯ. ರೈತರು ನೆಲದಲ್ಲಿ ಮಲಗಿದರು. ಚಳಿ, ಸೊಳ್ಳೆಗಳ ಕಾಟ, ಹಸಿವಿನ ಬಾಧೆ, ಒಬ್ಬನಿಗೂ ನಿದ್ದೆ ಹತ್ತಲಿಲ್ಲ. ಮನೆಯೊಳಗಿಂದ ವಿವಿಧ ಭಕ್ಷ್ಯಗಳ ಸುವಾಸನೆ ಮೂಗಿಗೆ ಬಡಿದು ಹಸಿವನ್ನು ಕೆರಳಿಸುತ್ತಿತ್ತು. ಮನೆ ಮಂದಿಯೊಂದಿಗೆ ಲಕ್ಷ್ಮಾಧೀಶ ಉಣ್ಣುತ್ತಿದ್ದ.

ಆಗ ವೀರಯ್ಯ ಮೆಲ್ಲನೆ ಎದ್ದ. ಮನೆಯ ಅಂಗಳದಲ್ಲಿ ಜೀರಿಗೆ ಮೆಣಸನ್ನು ಒಣಗಲು ಹರಡಿದ್ದರು. ಹಿಡಿ ತುಂಬ ಮೆಣಸು ತೆಗೆದುಕೊಂಡು ಹೊರಗೆ ಹೋಗಿ ದನದ ಕೊಟ್ಟಿಗೆಗೆ ಹೋದ.

ಸ್ವಲ್ಪ ಹೊತ್ತಿನಲ್ಲಿ ಲಕ್ಷ್ಮಾಧೀಶನಿಗೆ ಕೊಟ್ಟಿಗೆಯಿಂದ ದಡದಡ ಸದ್ದು, ದನಗಳ ಆರ್ತನಾದ ಕೇಳಿಸಿತು. ದೀಪ ಉರಿಸಿಕೊಂಡು ಹೋಗಿ ನೋಡಿದರೆ ಹಾಲು ಹಿಂಡುವ ಹತ್ತಾರು ದನಗಳು ತುದಿಗಾಲಲ್ಲಿ ನಿಂತು ಗಡಗಡ ನಡುಗುತ್ತಾ ಒದ್ದಾಡುತ್ತಿದ್ದುವು. ಇದೇನಾಯಿತು ಎಂದು ಗಾಬರಿಯಾಗಿ ಲಕ್ಷ್ಮಾಧೀಶ ವೈದ್ಯನಿಗೆ ಕರೆ ಕಳುಹಿಸಿದರೆ, "ರಾತ್ರಿ ಹೊತ್ತಿನಲ್ಲಿ ಗಿಡ ಮೂಲಿಕೆಗಳು ಸಿಗುವುದಿಲ್ಲ. ನಾಳೆ ಬೆಳಗ್ಗೆ ಬರುತ್ತೇನೆ" ಎಂದು ಹೇಳಿದ ವೈದ್ಯ.

ದನಗಳ ಒದ್ದಾಟ ಕ್ಷಣಕ್ಷಣಕ್ಕೂ ಹೆಚ್ಚಾಗುತ್ತಿತ್ತು. ಲಕ್ಷ್ಮಾಧೀಶ ಚಿಂತೆಯಿಂದ ಗೋಳಿಡತೊಡಗಿದ. ಅಷ್ಟು ಹೊತ್ತಿಗೆ ವೀರಯ್ಯ ಮೆಲ್ಲನೆ ಎದ್ದು ಕಣ್ಣು ಹೊಸಕುತ್ತಾ ಹಟ್ಟಿಗೆ ಬಂದ.

"ಏನು ಯಜಮಾನರೇ, ದನಗಳು ಹೀಗೇಕೆ ಒದ್ದಾಡುತ್ತಿವೆ?" ಎಂದು ಕೇಳಿದ.

"ಏನೆಂದು ನನಗೂ ತಿಳಿಯುತ್ತಿಲ್ಲ. ಸಂಜೆ ತನಕ ಆರೋಗ್ಯವಾಗಿದ್ದವು. ಹೀಗೆ ಒದ್ದಾಡಿದರೆ ಇವು ಬೆಳಗಿನವರೆಗೆ ಬದುಕುವ ಲಕ್ಷಣ ಕಾಣಿಸುತ್ತಿಲ್ಲ" ಎಂದನು ಲಕ್ಷ್ಮಾಧೀಶ.

ವೀರಯ್ಯ ದನಗಳನ್ನೊಮ್ಮೆ ಪರೀಕ್ಷಿಸಿದ. "ಸ್ವಾಮಿ, ಇದು ದೆವ್ವದ ಬಾಧೆ. ಇದಕ್ಕೆ ಬೇಕಾದ್ದು ಮಂತ್ರವಾದ. ಒಂದು ಮುದ್ದೆ ಬೆಣ್ಣೆ ತರಿಸಿ ಕೊಡಿ. ನನಗೂ ಒಂದಿಷ್ಟು ಮಂತ್ರ ವಿದ್ಯೆ ಗೊತ್ತಿದೆ. ನನಗೆ ಇವೇನಾದರೂ ಬಗ್ಗುತ್ತದೋ ಏನೋ ನೋಡೋಣ" ಎಂದು ಹೇಳಿದ.

ಲಕ್ಷ್ಮಾಧೀಶ ಬೆಣ್ಣೆ ಮುದ್ದೆ ತರಿಸಿಕೊಟ್ಟ. ವೀರಯ್ಯ ಅದನ್ನು ಕೈಯಲ್ಲಿ ಹಿಡಿದು ಮಂತ್ರ, ಜಪಮಾಡಿ ಒದ್ದಾಡುತ್ತಿದ್ದ ಎಲ್ಲ ದನಗಳ ಕೆಚ್ಚಲು, ಮೂಗು, ಕಣ್ಣುಗಳಿಗೆ ಲೇಪಿಸಿ ಸವರಿದ. ಅರೆಕ್ಷಣದಲ್ಲಿ ದನಗಳು ಶಾಂತವಾದವು. ಹಾಯಾಗಿ ಮೇವು ತಿಂದು ಮಲಗಿದವು.

ಇದನ್ನು ಕಂಡು ಲಕ್ಷ್ಮಾಧೀಶ ಆಶ್ಚರ್ಯಪಟ್ಟ. "ದೇವರ ಹಾಗೆ ಬಂದಿರಿ. ನಿಮ್ಮನ್ನು ನಾನು ಅನಾದರಣೆ ಮಾಡಿದ್ದಕ್ಕೆ ಮನ್ನಿಸಿ" ಎಂದು ಕೇಳಿಕೊಂಡ. ಎಲ್ಲ ರೈತರಿಗೂ ಸುಗ್ರಾಸ ಭೋಜನ ಬಡಿಸಿದ. ಮರುದಿನ ಎಲ್ಲರಿಗೂ ಒಂದೊಂದು ಜೊತೆ ಪಂಚೆ, ಒಂದಿಷ್ಟು ರೊಕ್ಕ ಕೊಟ್ಟು, ರಾಜಧಾನಿಯಿಂದ ಮರಳುವಾಗಲೂ ಅಲ್ಲಿಗೇ ಬರುವಂತೆ ಪ್ರಾರ್ಥಿಸಿ ಬೀಳ್ಕೊಟ್ಟ.

ರೈತರಿಗೆಲ್ಲಾ ಅಚ್ಚರಿಯಾಯಿತು. ವೀರಯ್ಯ ಬುದ್ಧಿವಂತ ಎಂಬುದು ಅವರಿಗೆ ಗೊತ್ತಿತ್ತು. ಆದರೆ ದೆವ್ವ ಓಡಿಸುವ ಮಂತ್ರವಾದಿ ಎಂಬುದು ತಿಳಿದಿರಲಿಲ್ಲ. ಅವರ ಕುತೂಹಲ ಕಂಡು ವೀರಯ್ಯ ನಕ್ಕು ಬಿಟ್ಟ. "ಮಂತ್ರ ತಂತ್ರ ನನಗಾದರೂ ಎಲ್ಲಿ ಗೊತ್ತು? ಒಂದು ಹಿಡಿ ಜೀರಿಗೆ ಮೆಣಸು ಅರೆದು ನಾನೇ ದನಗಳ ಕೆಚ್ಚಲು, ಮೂಗು, ಕಣ್ಣಿಗೆ ಸವರಿದೆ. ಉರಿ ತಾಳಲಾಗದೆ ಒದ್ದಾಡುತ್ತಿದ್ದವು. ಅದೇ ಜಾಗಕ್ಕೆ ಬೆಣ್ಣೆ ಸವರಿದಾಗ ಉರಿ ಶಾಂತವಾಗಿ ಸುಮ್ಮನಾದವು. ಏನು ಮಾಡಲಿ, ಹೀಗೆ ಮಾಡದಿದ್ದರೆ ಹಸಿವಿನಿಂದ ಏನೂ ಮಾಡಲಾಗದೆ ನಾವೆಲ್ಲರೂ ಸಾಯಬೇಕಿತ್ತು" ಎಂದು ಗುಟ್ಟನ್ನು ರಟ್ಟು ಮಾಡಿದ.

**– ಪ. ರಾಮಕೃಷ್ಣ ಶಾಸ್ತ್ರಿ**

## ಮೌಲ್ಯನಿರ್ಣಯ ಚಟುವಟಿಕೆಗಳು

1. ನಿಮ್ಮ ಊರಿನಲ್ಲಿರುವ ಓರ್ವ ಸಮಾಜ ಸೇವಕನನ್ನು ಸಂದರ್ಶಿಸಿ ಅವರ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಬೇಕಾಗಿದೆ. ಅದಕ್ಕಾಗಿ ಸಂದರ್ಶನ ಪ್ರಶ್ನಾವಳಿಯನ್ನು ಸಿದ್ಧಪಡಿಸಿರಿ.

2. ವಿಕಲಚೇತನರಿಗಾಗಿ ಮೀಸಲಾಗಿರಿಸಿದ ಸವಲತ್ತುಗಳು ಅವರಿಗೆ ಸರಿಯಾಗಿ ದೊರೆಯುತ್ತದೆಯೇ? ನಿಮ್ಮ ಅಭಿಪ್ರಾಯವೇನು? ಟಿಪ್ಪಣಿ ಬರೆಯಿರಿ.

3. ಇಲ್ಲಿ ನೀಡಲಾದ ಸರ್ವಜ್ಞನ ವಚನಗಳನ್ನು ಓದಿ ಸಾರಾಂಶ ಬರೆಯಿರಿ.

ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ
ಕೊಟ್ಟದ್ದು ಕೆಟ್ಟಿತೆನಬೇಡ। ಮುಂದಕ್ಕೆ
ಕಟ್ಟಿಹುದು ಬುತ್ತಿ ಸರ್ವಜ್ಞ॥

ಅನ್ನದಾನಗಳಿಂದ ಮುನ್ನ ದಾನಗಳಿಲ್ಲ
ಅನ್ನಕ್ಕೆ ಮಿಗಿಲು ಇನ್ನಿಲ್ಲ। ಜಗದೊಳಗೆ
ಅನ್ನವೇ ಪ್ರಾಣ ಸರ್ವಜ್ಞ॥

ಆಗ ಬಾ ಈಗ ಬಾ ಹೋಗಿ ಬಾ ಎನ್ನದೆಲೆ
ಆಗಲೇ ಕರೆದು ಕೊಡುವವನ। ಧನವು
ಹೊನ್ನಾಗದೇ ಬಿಡದು ಸರ್ವಜ್ಞ॥

4. ಇಲ್ಲಿ ನೀಡಲಾದ ಕತೆಯನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ.

## ನಿದ್ದೆ ಗುಳಿಗೆ

ಗುಂಡ ಡಾಕ್ಟರ ಬಳಿಗೆ ಹೋಗಿದ್ದ. ನಿದ್ದೆಗೆಟ್ಟು ಅವನ ಕಣ್ಣುಗಳು ಗುಳಿ ಬಿದ್ದಿದ್ದವು. ನಿತ್ರಾಣದಿಂದ ನೆಟ್ಟಗೆ ನಡೆಯಲು ಕೂಡ ಸಾಧ್ಯವಾಗುತ್ತಿರಲಿಲ್ಲ.

"ಏನಾಗಿದೆ ನಿನಗೆ?" ಡಾಕ್ಟರು ತಪಾಸಣೆ ಮಾಡುತ್ತ ಕೇಳಿದರು.

"ಏನು ಹೇಳಲಿ? ಒಂದು ತಿಂಗಳಿನಿಂದ ನಿದ್ದೆಗೆಟ್ಟಿದ್ದೇನೆ. ನನ್ನ ಮನೆಯ ಸುತ್ತ ಕೆಲವು ನಾಯಿಗಳಿವೆ. ಅವು ಹಗಲು ರಾತ್ರಿ ಎನ್ನದೆ ಬೊಗಳುತ್ತ ಇರುತ್ತವೆ. ನನಗೆ ಒಂದು ಕ್ಷಣ ಕೂಡ ಕಣ್ಣುಮುಚ್ಚಲು ಸಾಧ್ಯವಾಗುತ್ತಿಲ್ಲ" ಎಂದ ಗುಂಡ.

ಡಾಕ್ಟರು ನಿದ್ದೆಗುಳಿಗೆಗಳನ್ನು ತೆಗೆದು ಗುಂಡನಿಗೆ ಕೊಟ್ಟರು. "ರಾತ್ರಿಯ ವೇಳೆ ಇವನ್ನು ಉಪಯೋಗಿಸು. ನಿನ್ನ ಸಮಸ್ಯೆ ತೀರುತ್ತದೆ" ಎಂದರು.

ಗುಂಡ ಅರ್ಧ ಮನಸ್ಸಿನಲ್ಲೇ ಅದನ್ನು ತೆಗೆದುಕೊಂಡ. "ಸರಿ ಡಾಕ್ಟರೆ, ನಿದ್ದೆಗಾಗಿ ಏನು ಬೇಕಾದರೂ ಮಾಡುತ್ತೇನೆ. ಈ ಗುಳಿಗೆಯಿಂದ ಏನಾಗುತ್ತದೆ ನೋಡೋಣ" ಎಂದು ಹೊರಟು ಹೋದ.

ನಾಲ್ಕು ದಿನಗಳ ಬಳಿಕ ಗುಂಡ ಡಾಕ್ಟರ ಬಳಿಗೆ ಮರಳಿ ಬಂದ. ಅವನ ಅವಸ್ಥೆ ಇನ್ನಷ್ಟು ಕೆಟ್ಟಿತ್ತು. "ಡಾಕ್ಟರೇ, ನಿಮ್ಮ ಉಪಾಯ ಸರಿಯಾಗಿಲ್ಲ. ನಾನು ಹಿಂದಿಗಿಂತ ಹೆಚ್ಚು ಕಷ್ಟದಲ್ಲಿದ್ದೇನೆ" ಎಂದು ದೂರಿಕೊಂಡ.

"ನನಗೆ ಅರ್ಥವಾಗುತ್ತಿಲ್ಲ. ನಿನಗೆ ಭಾರೀ ಶಕ್ತಿಯ ಗುಳಿಗೆಗಳನ್ನು ಕೊಟ್ಟಿದ್ದೆ" ಡಾಕ್ಟರು ಆಶ್ಚರ್ಯದಿಂದ ಹೇಳಿದರು.

"ಗುಳಿಗೆಗೇನೋ ಭಾರೀ ಶಕ್ತಿ ಇರಬಹುದು. ಆದರೆ ಅದನ್ನು ಕೊಡಬೇಕಲ್ಲ? ರಾತ್ರಿಯಿಡೀ ನಾಯಿಗಳ ಹಿಂದೆ ಓಡಿದೆ. ಅದನ್ನು ಕಷ್ಟದಲ್ಲಿ ಹಿಡಿದೆ. ಆದರೆ ಅವುಗಳ ಬಾಯಿಗೆ ಗುಳಿಗೆ ಹಾಕಿ ನುಂಗಿಸುವುದು ಹೇಗೆಂದೇ ನನಗೆ ಅರ್ಥ ಆಗುವುದಿಲ್ಲ" ಎಂದ ಗುಂಡ.

(ಅ) ಕಥೆಯಲ್ಲಿ ಬರುವ ಪಾತ್ರಗಳು ಯಾವುವು?

(ಆ) ಗುಂಡನು ಡಾಕ್ಟರರ ಬಳಿಗೆ ಯಾಕೆ ಹೋದನು?

(ಇ) ಈ ಕಥೆಯನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.